# ದಕ್ಷಿಣ ಕ[illegible] ಗ[illegible]ರ ಜಾನಪದ ಅಧ್ಯಯನ

ಪಿ[illegible] ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ

ಪ. [illegible] ರಮೇಶ್

ಮಾರ್ಗದರ್ಶಕರು

ಪ್ರೊ. ಹಿ. ಚಿ. ಬೋರಲಿಂಗಯ್ಯ

[illegible] ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ [illegible]

೧೯೯[illegible]

26

# ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ

ಪಿಎಚ್. ಡಿ. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ



ಸಂಶೋಧಕರು

ಸ. ಚಿ. ರಮೇಶ್

ಮಾರ್ಗದರ್ಶಕರು

ಪ್ರೊ. ಹಿ. ಚಿ. ಬೋರಲಿಂಗಯ್ಯ

ಜಾನಪದ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಹಂಪಿ ೫೮೩ ೨೨೧

೧೯೯೬

# ಅರ್ಹತಾ ಪತ್ರ

ಶ್ರೀ ಸ.ಚಿ.ರಮೇಶ್ ಇವರು "ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಮತ್ತು ಉದ್ದೇಶಗಳಿಗಾಗಿ ಇವರು ಒಪ್ಪಿಸಿಲ್ಲ.

ವಿದ್ಯಾರಣ್ಯ
31.8.1996.

ಹಿ.ಚಿ.ಬೋರಲಿಂಗಯ್ಯ
ಮಾರ್ಗದರ್ಶಕರು.
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು.
ಬುಡಕಟ್ಟು ಅಧ್ಯಯನ ವಿಭಾಗ.
ಕನ್ನಡ ವಿಶ್ವವಿದ್ಯಾಲಯ, ಹಂಪಿ-583 211.

## ಪ್ರಮಾಣ ಪತ್ರ

"ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಪ್ರೊ||ಹಿ.ಚಿ.ಬೋರಲಿಂಗಯ್ಯ ಇವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಲಾಗಿದೆ. ಈ ಮಹಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಯಾವುದೇ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

(ಸ.ಚಿ.ರಮೇಶ್),
ಅಧ್ಯಾಪಕರು ಜಾನಪದ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ
31.8.1996

26

# ಕೃತಜ್ಞತೆಗಳು

ಸೇವಾ ಅವಧಿಯಲ್ಲಿ ಪಿಎಚ್.ಡಿ.ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿದ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಚಂದ್ರಶೇಖರ ಕಂಬಾರ ಅವರಿಗೆ;

ನಾನೆಂದೂ ಮರೆಯಲಾಗದ ನನ್ನ ಗುರು ಡಾ.ಜೀಶಂಪ ಅವರಿಗೆ;

ಪಿಎಚ್.ಡಿ. ಅಧ್ಯಯನಕ್ಕೆ ಪ್ರೋತ್ಸಾಹಿಸಿ, ಈ ಮಹಾ ಪ್ರಬಂಧದ ರಚನೆಯ ಮಾರ್ಗದರ್ಶಕರಾಗಿ, ಉಪಯುಕ್ತ ಸಲಹೆ ನೀಡಿ ಸಹಕರಿಸಿದ ಪ್ರೊ.ಹಿ.ಚಿ.ಬೋರಲಿಂಗಯ್ಯ ಅವರಿಗೆ;

ಮಹಾಪ್ರಬಂಧವನ್ನು ಸಮಗ್ರವಾಗಿ ಓದಿ, ತಪ್ಪುಗಳನ್ನು ತಿದ್ದಿ ಸರಿಪಡಿಸಿದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ;

ಅಧ್ಯಯನ ಅವಧಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಡಾ. ಕರಿಗೌಡ ಬೀಚನಹಳ್ಳಿ, ಡಾ.ಎಚ್.ಎಸ್.ರಾಘವೇಂದ್ರರಾವ್ ಮತ್ತು ಪ್ರೊ.ಚಿ.ಶ್ರೀನಿವಾಸರಾಜು ಅವರಿಗೆ;

ಪ್ರಬಂಧದ ರಚನೆಯ ಎಲ್ಲಾ ಹಂತದಲ್ಲಿಯೂ ವಿಷಯದ ಬಗೆಗೆ ಚರ್ಚಿಸಿ, ಸೂಕ್ತ ಸಲಹೆಕೊಟ್ಟು ಸಹಕರಿಸಿದ ಡಾ.ಅಂಬಳಿಕೆ ಹಿರಿಯಣ್ಣ ಅವರಿಗೆ;

ಪ್ರಬಂಧ ರಚನೆಯ ಸಂದರ್ಭದಲ್ಲಿ ನನ್ನೊಂದಿಗೆ ಸಹಕರಿಸಿದ ಡಾ.ಮಂಜುನಾಥ ಬೇವಿನಕಟ್ಟೆ ಅವರಿಗೆ;

ಪ್ರಬಂಧ ರಚನೆಯ ಅನೇಕ ಕಡೆ ನನ್ನೊಂದಿಗೆ ಸಹಕರಿಸಿದ ಡಾ.ಡಿ.ಪಾಂಡುರಂಗ ಬಾಬು ಅವರಿಗೆ;

ಪ್ರಬಂಧದಲ್ಲಿ ಬರುವ ಭಾವ ಚಿತ್ರಗಳಿಗೆ ತಲೆಬರಹಗಳನ್ನು ಅಂದವಾಗಿ ಬರೆದು ಕೊಟ್ಟ ಶ್ರೀ.ಸುಜ್ಞಾನ ಮೂರ್ತಿ ಅವರಿಗೆ;

ಕರಡು ಪ್ರತಿಯನ್ನು ತಿದ್ದಿ ಸರಿಪಡಿಸಿದ ಎಸ್.ಎಸ್.ಅಂಗಡಿ ಅವರಿಗೆ;

ಮಹಾಪ್ರಬಂಧದ ಸಿದ್ಧತೆಯಲ್ಲಿ ನೆರವಾದ ಶ್ರೀ.ಹನುಮಪ್ಪ ಮಗಡಾರ್ ಮತ್ತು ಶ್ರೀ. ನಾಗರಾಜ ಬಡಿಗೇರ ಅವರುಗಳಿಗೆ;

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಉಪಯುಕ್ತ ಮಾಹಿತಿಯನ್ನು ನೀಡಿ ಸಹಕರಿಸಿದ ಎಲ್ಲಾ ನಿರೂಪಕರಿಗೆ;

ಈ ಅಧ್ಯಯನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಅಧ್ಯಾಪಕರುಗಳಿಗೆ;

ಅಧ್ಯಯನ ಸಂದರ್ಭದಲ್ಲಿ ಸಹಕರಿಸಿದ ನನ್ನ ಎಲ್ಲಾ ಗೆಳೆಯರಿಗೆ ಮತ್ತು ವಿಶ್ವವಿದ್ಯಾಲಯದ ಸಹದ್ಯೋಗಿಗಳಿಗೆ;

ಬಹಳ ಕಡಿಮೆ ಅವಧಿಯಲ್ಲಿ ಅಂದವಾಗಿ ಕಂಪ್ಯೂಟರೀಕರಿಸಿ ಕೊಡಲು ಸಹಕರಿಸಿದ ಗೆಳೆಯ ಶ್ರೀ.ಟಿ.ಎಲ್.ಯೋಗಾನಂದ ಅವರಿಗೆ;

ಅಂದವಾಗಿ ಕಂಪ್ಯೂಟರೀಕರಿಸಿದ ಕುಮಾರಿ ಮೀನಾ ಅವರಿಗೆ;

ನನ್ನ ಹೃದಯ ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ವಿದ್ಯಾರಣ್ಯ
31.8.1996

ಸ.ಚಿ.ರಮೇಶ,
ಅಧ್ಯಾಪಕ.ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ.
ಹಂಪಿ-583 211.

# ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ

# ಅಧ್ಯಾಯ - ೧

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಾನಪದ ಇಂದು ಅಧ್ಯಯನ ಶಿಸ್ತಾಗಿ ಬೆಳೆಯುತ್ತಿರುವಂತೆಲ್ಲಾ ಅನ್ಯಜ್ಞಾನ ಶಿಸ್ತುಗಳ ಜೊತೆಗೆ ತನ್ನನ್ನು ಗುರುತಿಸಿಕೊಳ್ಳತೊಡಗಿದೆ. ಇಂದು ಚರಿತ್ರೆ, ಮಾನವಶಾಸ್ತ್ರ, ಮನೋವಿಜ್ಞಾನ, ಸಾಹಿತ್ಯ ಸಮಾಜಶಾಸ್ತ್ರಗಳ ಸಿದ್ಧಾಂತಗಳಿಗೆ ಆಧಾರವನ್ನಾಗಿ ಜಾನಪದವನ್ನು ಬಳಸಲಾಗುತ್ತಿದೆ. ಚರಿತ್ರೆಯಲ್ಲಿ ದಾಖಲಾಗದ ಎಷ್ಟೋ ಸಂಗತಿಗಳು ಜಾನಪದದ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿವೆ. ಅಲ್ಲದೆ, ಭಾರತೀಯ ಸಮಾಜವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕೆಂದು ಬಯಸುವವರಿಗೆ ದೊರೆಯುವ ಒಂದು ದೊಡ್ಡ ಆಕರ ಜಾನಪದವೇ. ಗ್ರಾಮೀಣ ಜನಪದರ ಜಾನಪದವನ್ನು ಮೌಢ್ಯ ಕಂದಾಚಾರವೆಂದು ಕರೆದು ನಿರ್ಲಕ್ಷಿಸುವ ಧೋರಣೆ ಬಹಳ ಕಾಲದ ವರೆಗೆ ಇತ್ತು. ಜಾನಪದದ ಪ್ರತಿ ಅಂಶ ರೂಪುಗೊಳ್ಳಲು ಅದಕ್ಕೆ ತಳಹದಿಯಾಗಿ ಅದರ ಉಗಮದಲ್ಲಿ ಒಂದು ಭೌತಿಕಾವಶ್ಯಕತೆಯಿತ್ತು ಎಂಬ ನಿಲುವು ಪ್ರಚಲಿತಗೊಂಡಂತೆಲ್ಲಾ ಜಾನಪದ ಅಧ್ಯಯನಕ್ಕೆ ತುಂಬಾ ಮಹತ್ವವೊದಗಿದೆ.

ಜಾನಪದ ಅಧ್ಯಯನವನ್ನು ಒಂದು ಸೀಮಿತ ಚೌಕಟ್ಟಿಗೆ ಒಳಪಡಿಸಿದಾಗ, ಅದರಿಂದ ಬರುವ ಫಲಿತಾಂಶ ವಿಶಿಷ್ಟವಾಗಿರುತ್ತದೆ. ಒಂದು ಜನಾಂಗ, ಒಂದು ಊರು, ಒಂದು-ಓಣಿ ಹೀಗೆ ಒಂದೊಂದು ಘಟಕಗಳನ್ನಾಗಿ ವಿಭಾಗಿಸಿ ಅಧ್ಯಯನಕ್ಕೊಳಪಡಿಸಿದಾಗ ಜಾನಪದದ ಅನನ್ಯತೆಯನ್ನು ಗುರುತಿಸಲು ತುಂಬಾ ಅನುಕೂಲವಾಗುತ್ತದೆ. ಜೊತೆಗೆ ಆಯಾ ಘಟಕಗಳ ಸೂಕ್ಷ್ಮಾತಿಸೂಕ್ಷ್ಮ ಅಂಶಗಳ ಪರಿಶೀಲನೆಗೂ ಅವಕಾಶವಿರುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧದಲ್ಲಿ ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದವನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಇದು ವರೆಗೂ ನಡೆದಿರುವ ಇಂತಹ ಅಧ್ಯಯನಗಳು ಜನಾಂಗವು ನೆಲೆಸಿರುವ ಪ್ರದೇಶದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನ ಅನನ್ಯತೆ ಗುರುತಿಸಿದೆಯೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಸಮಾನ ಗುಣ ಸ್ವಭಾವಗಳುಳ್ಳ ಅನೇಕ ಸಮಾಜಗಳು ಕೂಡಿ ಬಾಳುವೆ ನಡೆಸುವ ನಮ್ಮ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದೊಂದು ಸಮಾಜವೂ ತನಗೇ ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿವೆ. ಈ ಸಮಾಜಗಳ ನಡುವೆ ಪರಸ್ಪರ ಸಂಪರ್ಕವಿದ್ದರೂ ತಮ್ಮ ಮೂಲಸಂಸ್ಕೃತಿಯ ಅಸ್ತಿತ್ವಕ್ಕೆ ಅಡ್ಡಿಯಾಗದಂತೆ ಕಾರ್ಯನಿರ್ವಹಿಸುವಂತಹ ಸಮಾಜಗಳೂ ಇಲ್ಲದಿಲ್ಲ.

ತಮಗೇ ವಿಶಿಷ್ಟವಾದ ಭಾಷೆ, ಜೀವನಕ್ರಮ ಮತ್ತು ಸಾಹಿತ್ಯವನ್ನು ಹೊಂದಿರುವ ಉಪ್ಪಾರರ ಜೀವನ ಮತ್ತು ಸಂಸ್ಕೃತಿ ವಿಶಿಷ್ಟವಾದುದಾಗಿದೆ. ಇವರು ಕರ್ನಾಟಕದಾದ್ಯಂತ ನೆಲೆಸಿರುತ್ತಾರೆ. ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಮೈಸೂರು, ಶಿವಮೊಗ್ಗ ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ

ಹೆಚ್ಚಾಗಿ ವಾಸಿಸುತ್ತಿದ್ದಾರೆ. ಆದರೆ, ಸದ್ಯದ ಅಧ್ಯಯನದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಸಿರುವ ಉಪ್ಪಾರರ ಜನಾಂಗವನ್ನು ಹೆಚ್ಚು ಅಳವಡಿಸಿಕೊಳ್ಳಲಾಗಿದೆ.

ಇಂದಿನ ಕೈಗಾರಿಕೀಕರಣ, ನಗರೀಕರಣಗಳ ಪ್ರಭಾವದಿಂದಾಗಿ ಉಪ್ಪಾರರ ಮೂಲ ಸಂಸ್ಕೃತಿ ಮುಕ್ಕಾಗಿ ಕಣ್ಮರೆಯಾಗುವ ಚಿಹ್ನೆಗಳು ಕಂಡುಬರುತ್ತಿವೆ. ಹಾಗೆ ಆಗುವ ಮೊದಲು ಉಪ್ಪಾರರ ಜಾನಪದವನ್ನು ಕುರಿತು ಸಂಶೋಧನೆ ನಡೆಸುವುದು ತೀರ ಅಗತ್ಯವಾದ ಕೆಲಸವಾಗಿದೆ. ಈ ದೃಷ್ಟಿಯಿಂದ ನಾನು ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನವನ್ನು ಕೈಗೊಂಡಿದ್ದೇನೆ.

ಉಪ್ಪಾರರ ಜಾನಪದ ಅಧ್ಯಯನದಲ್ಲಿ ಉಪ್ಪಾರರ ಹುಟ್ಟು, ಬೆಳವಣಿಗೆ, ಪ್ರಸರಣ ಕ್ಷೇತ್ರ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಜಾನಪದ ಇತರ ಅಂಶಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಒಂದು ಜನಾಂಗದ ಜಾನಪದ ಅಧ್ಯಯನಕ್ಕೆ ಕೇವಲ ಮೌಖಿಕ ಪರಂಪರೆಯಿಂದ ಬಂದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸುವುದು ಒಂದು ಕ್ರಮ. ಹಾಗೆಯೇ, ಮೌಖಿಕ ಪರಂಪರೆಯಿಂದ ಬಂದ ಮಾಹಿತಿಗಳ ಜೊತೆಗೆ ಲಿಖಿತ ಆಕರಗಳಾದ ಪುರಾಣ, ಶಾಸನ, ಚರಿತ್ರೆ, ಕೈಫಿಯತ್ತು ಮುಂತಾದವುಗಳಲ್ಲಿಯ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತೊಂದು ಕ್ರಮ. ಈ ಕಾರಣಕ್ಕಾಗಿಯೇ ನಾನು ಈ ಅಧ್ಯಯನದಲ್ಲಿ ಉಪ್ಪಾರ ಜನಾಂಗದ ಮೌಖಿಕ ಪರಂಪರೆಯ ಜೊತೆಗೆ ಲಿಖಿತ ಆಕರಗಳಲ್ಲಿರುವ ಮಾಹಿತಿಗಳನ್ನೂ ಸಹ ಸಂಗ್ರಹಿಸಲಾಗಿದೆ. ಉಪ್ಪಾರರ ಜನಾಂಗದ ಜಾನಪದದಲ್ಲಿ ಆ ಜನಾಂಗ ರೂಪುಗೊಂಡು ಅದರ ವಿವಿಧ ಸ್ಥಿತ್ಯಂತರಗಳನ್ನು ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಜನಾಂಗದ ಜಾನಪದವನ್ನು ಕುರಿತ ಅಧ್ಯಯನಗಳು ಹೆಚ್ಚಾಗಿ ಬಂದಿಲ್ಲದ ಈ ಸಂದರ್ಭದಲ್ಲಿ ನನ್ನ ಈ ಬರೆವಣಿಗೆ ಕೂಡ ಒಂದು ನಮ್ರ ಪ್ರಯತ್ನ. ಜನಾಂಗದ ಜಾನಪದ ಅಧ್ಯಯನಕ್ಕೆ ತಳಪಾಯ ಹಾಕುವುದೇ ಇಲ್ಲಿಯ ಮೊದಲ ಉದ್ದೇಶ. ಜನಾಂಗದ ಜಾನಪದದ ಒಂದು ಮುಖವನ್ನು ಕುರಿತು ಅಧ್ಯಯನ ಮಾಡಿದರೆ ಒಂದು ಮಹಾ ಪ್ರಬಂಧವನ್ನು ರಚಿಸಬಹುದು. ಆದರೆ, ಮೂಲಭೂತ ತಿಳುವಳಿಕೆ ಇಲ್ಲದೇ ಒಂದೇ ಮುಖಕ್ಕೆ ಗಮನಕೊಟ್ಟಾಗ ಅದು ಭಾಗಿಕವಾದ ಅಧ್ಯಯನವಾಗುತ್ತದೆ. ಆದುದರಿಂದಲೇ ವಿವರಣಾತ್ಮಕವಾಗಿ ಅದಷ್ಟುಕಡೆ ವಿಶ್ಲೇಷಣಾತ್ಮಕವಾಗಿ ಜನಾಂಗದ ಜಾನಪದದ ಬಗೆಗೆ ಬರೆಯಲಾಗಿದೆ.

# ಅಧ್ಯಾಯ - ೨

## ಉಪ್ಪಾರ ಜನಾಂಗದ ಪರಿಚಯ

೨:೧. ಭೌಗೋಳಿಕ ಪರಿಸರ

೨:೨. 'ಉಪ್ಪಾರ' ಶಬ್ದದ ಪ್ರಾಚೀನತೆ ಮತ್ತು ಅರ್ಥ

೨:೩. 'ಉಪ್ಪಾರ' ಶಬ್ದದ ನಿಷ್ಪತ್ತಿ

೨:೪. ಪೌರಾಣಿಕ ಹಿನ್ನೆಲೆ

೨:೫. ಪೂರ್ವ ಪರಿಚಯ

೨:೬. ಕೆಲವು ಮುಖ್ಯ ಪ್ರಾಚೀನ ಸಾಹಿತ್ಯಕೃತಿಗಳಲ್ಲಿ ಉಪ್ಪಾರರ ಉಲ್ಲೇಖಗಳು

೨:೭. ಶಾಸನಗಳಲ್ಲಿ ಉಪ್ಪಾರರ ಉಲ್ಲೇಖಗಳು

೨:೮. ಕೈಫಿಯತ್ತುಗಳಲ್ಲಿ ಉಪ್ಪಾರರ ಉಲ್ಲೇಖಗಳು

## ಉಪ್ಪಾರರ ಮೂಲ ಮತ್ತು ಪರಿಚಯ

ಉಪ್ಪಾರ, ಉಪ್ಪಲಿಗ, ಸಗರ ವಂಶದವರು, ಭಗೀರಥ ವಂಶದವರು, ಮೇಲುಸಕ್ಕರೆಯವರು ಮತ್ತು ಕೆರೆ ಬಂದಿಯವರು ಎಂದು ಕರೆಸಿಕೊಳ್ಳುವ ಜನ ಕರ್ನಾಟಕ ರಾಜ್ಯದಲ್ಲೆಡೆ ಕಂಡುಬರುತ್ತಾರೆ. ರಾಜ್ಯದ ಇತರ ಜಿಲ್ಲೆಗಳಲ್ಲಿ ಇವರು ಹರಡಿರುವ ಪ್ರಮಾಣಗಳನ್ನು ಗಮನಿಸಿದರೆ ಮೈಸೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿದ್ದು ಉಳಿದಂತೆ ಕಡಿಮೆ ಪ್ರಮಾಣದಲ್ಲಿದ್ದಾರೆ. ಇವರು ಗೌರವ ಸೂಚಕವಾಗಿ ಅಪ್ಪ, ಅಯ್ಯ ಮತ್ತು ಅಣ್ಣ ಎಂದು ಹೆಸರಿನೊಡನೆ ಸೇರಿಸಿಕೊಳ್ಳುತ್ತಿದ್ದು ಜೊತೆಗೆ ಶೆಟ್ಟಿ ಮತ್ತು ಗೌಡ ಎಂದೂ ಸೇರಿಸಿಕೊಳ್ಳುತ್ತಾರೆ. ಉಪ್ಪಿನ ತಯಾರಿಕೆಯಲ್ಲಿ ತೊಡಗಿರುವವರು 'ಬೋಯಿ ' ಎಂದು ಸೇರಿಸಿಕೊಳ್ಳುತ್ತಾರೆ. ಅಮ್ಮ ಮತ್ತು ಅಕ್ಕ ಎನ್ನುವುದು ಮಹಿಳೆಯರ ಹೆಸರಿನೊಡನೆ ಸೇರುವ ಪದ.

ಉಪ್ಪು ಎನ್ನುವ ಪದದಿಂದ ಅದನ್ನು ತಯಾರಿಸುವ ಈ ಜನರಿಗೆ ಉಪ್ಪಾರ, ಉಪ್ಪಲಿಗ ಎಂಬ ಹೆಸರು ಬಂದಿದೆ. ಉಪ್ಪನ್ನು ಉತ್ತಮವಾದ ಸಕ್ಕರೆ ಎಂದು ಭಾವಿಸಿರುವುದರಿಂದ, ಅದನ್ನು ತಯಾರಿಸುವವರಿಗೆ ಮೇಲು ಸಕ್ಕರೆಯವರು ಎಂದೂ ಕರೆಯುತ್ತಾರೆ. ಪೌರಾಣಿಕ ವ್ಯಕ್ತಿಯಾದ ಸಗರನ ಅರುವತ್ತು ಸಾವಿರ ಮಕ್ಕಳು ಯಜ್ಞಾಶ್ವವನ್ನು ಹುಡುಕಲು ಭೂಮಿಯನ್ನು ಅಗೆದಾಗ ಉಂಟಾದ ಸಾಗರವೇ ಉಪ್ಪಿನ ಮೂಲವಾದ್ದರಿಂದ ಇವರನ್ನು ಸಗರವಂಶದವರೆಂದು ಎಂದು ಕರೆಯುತ್ತಾರೆ. ಆಕಾಶದಿಂದ ದೇವ ಗಂಗೆಯನ್ನು ತಪಸ್ಸಿನಿಂದ ಭೂಮಿಗೆ ತಂದದ್ದರಿಂದ ಇವರನ್ನು ಭಗೀರಥ ವಂಶದರೆಂದು ಎಂದು ಕರೆಯಲಾಗಿದೆ. ಕೆರೆಕಟ್ಟೆಗಳನ್ನು ದುರಸ್ಥಿ ಮಾಡುವ ಕೆಲಸವನ್ನು ಮಾಡುತ್ತಿದ್ದರಿಂಧ ಕೆರೆಬಂದಿಯರೆಂದು ಕರೆಯುವುದಲ್ಲದೆ, ಕಲ್ಲುವಡ್ಡ, ಮಣ್ಣುವಡ್ಡ ಮತ್ತು ಉಪ್ಪುವಡ್ಡರೆಂಬ ಹೆಸರುಗಳೂ ಉಂಟು.

ಈ ಜನಾಂಗ ಇತರರಿಗಿಂತ ಉಡುಗೆ, ತೊಡುಗೆ ಮತ್ತು ಆಹಾರ ಪಾನೀಯಗಳಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸವೇನು ಹೊಂದಿಲ್ಲ. ಸಾಮಾಜಿಕವಾಗಿ ಇವರ ಸ್ಥಾನಮಾನ ಭಿನ್ನವಾಗಿಲ್ಲ. ಬ್ರಾಹ್ಮಣೇತರ ಜನಾಂಗಗಳಲ್ಲಿ ಇವರೂ ಇದ್ದಾರೆ. ಆದರೆ, ಧಾರ್ಮಿಕ ಆಚರಣೆಗಳಲ್ಲಿ ಉಳಿದವರಿಗಿಂತ ಭಿನ್ನರಾಗಿರುವ. ಇವರು ತಮ್ಮ ಸುತ್ತ ಮುತ್ತಲಿನ ಬಹು ಸಂಖ್ಯಾಕರ ಆಚರಣೆಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದಾರೆ. ಇವರು ವಾಸಿಸುವ ಪ್ರದೇಶಗಳಿಗನುಗುಣವಾಗಿ ಭಾಷೆಯು ಭಿನ್ನವಾಗಿದೆ. ಕೋಲಾರ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ತೆಲುಗನ್ನು ಮಾತನಾಡುತ್ತಾರೆ. ಉಳಿದಂತೆ ಕನ್ನಡವೇ ಇವರ ಮಾತೃಭಾಷೆ. ಉಪ್ಪಲಿಗರ್ ಎಂದು ಕರೆಯುವ ತಮಿಳುನಾಡಿನಿಂದ ಬಂದವರು ತಮಿಳನ್ನು ಮಾತನಾಡುತ್ತಾರೆ. ಆದರೆ, ಈ ಭಾಷಾ ಭಿನ್ನತೆಗಳು ಸಹಭೋಜನವನ್ನಾಗಲಿ, ಅಂತರವಿವಾಹ ಸಂಬಂಧವನ್ನಾಗಲಿ ನಿಷೇಧಿಸಿಲ್ಲ.

ಇತರ ಸಂಸ್ಕೃತಿಗಳಲ್ಲಿರುವಂತೆ ಇವರಲ್ಲಿಯೂ ತಮ್ಮ ಮೂಲದ ಬಗ್ಗೆ ಹೇಳುವ ಅನೇಕ ಕಥೆಗಳಿವೆ. ಇವುಗಳ ಪ್ರಕಾರ "ಶಿವನ ಬೆವರ ಹನಿಯಿಂದ ಸೃಷ್ಟಿಯಾಗಿ ಪಾರ್ವತಿಗೆ ಉಪ್ಪನ್ನು ತಯಾರಿಸಿಕೊಟ್ಟು ನಂತರ ಕಾಲದಲ್ಲಿ ಇವರನ್ನು ಶಿವನು ಭೂಮಿಗೆ ಕಳುಹಿಸಿದನಂತೆ. ಅಂದಿನಿಂದ ಇವರು ಉಪ್ಪಾರರಾದರು. ಸಗರನ ಅರುವತ್ತು ಸಾವಿರ ಮಕ್ಕಳ ಸುಟ್ಟಬೂದಿ ಗಂಗೆಯಿಂದ ಸಮುದ್ರಕ್ಕೆ ಸೇರಿದಾಗ ಉಪ್ಪಾತಂತೆ". ಅಂದಿನಿಂದ ಸಗರವಂಶದವರು ಉಪ್ಪನ್ನು ತಯಾರಿಸುವ ಕಾರ್ಯವನ್ನು ಕಾಶಿಯ ಪರಿಸರದಲ್ಲಿ ಆರಂಭಿಸಿದರು. ರತ್ನಗಿರಿ ಮತ್ತು ಧರ್ಮಾವರಂ ಮೂಲಕ ದಕ್ಷಿಣಭಾರತದ ಕಡೆಗೆ ಇವರು ಬಂದರು. ತಮ್ಮೊಡನೆ ತಮ್ಮ ಕುಲದೈವವಾದ ಚೆನ್ನಕೇಶವನ ವಿಗ್ರಹವನ್ನು ಹೊತ್ತು ತಂದು ಚಿತ್ರದುರ್ಗದ ಜಿಲ್ಲೆಯ 'ಕರ್ಲಹಟ್ಟಿ'ಯಲ್ಲಿ ದೇವಸ್ಥಾನವನ್ನು ನಿರ್ಮಿಸಿದರು.

ಪೂರ್ವದಲ್ಲಿ ಉಪ್ಪಾರರು ಒಂದೇ ಕುಲದವರಾಗಿದ್ದು, ನಂತರ ಪ್ರದೇಶ ಮತ್ತು ವೃತ್ತಿಗಳ ಭಿನ್ನತೆಯಿಂದ ಉಪಜಾತಿಗಳಾಗಿ ವಿಂಗಡಿಸಲ್ಪಟ್ಟರು. ಇವರಲ್ಲಿ ಕೆಲವರು ತಮ್ಮ ಮೂಲ ಹೆಸರು ಮತ್ತು ಶೈಲಿಯನ್ನು ಅನುಸರಿಸಿ ತಮ್ಮನ್ನು ತಾವು ಬಣಜಿಗರೆಂದು ಕರೆದುಕೊಂಡು ಸಾಮಾಜಿಕವಾಗಿ ಮೇಲೆ ಬಂದರು.

ಪ್ರಾದೇಶಿಕ ವ್ಯತ್ಯಾಸಗಳಿಂದ ಕ್ರಿಯಾಚರಣೆಗಳಲ್ಲಿ ಭಿನ್ನತೆ ಇದ್ದರೂ ಕರ್ನಾಟಕದಾದ್ಯಂತ ವಾಸಿಸುವ ಉಪ್ಪಾರ ವೃತ್ತಿಸಮುದಾಯದವರನ್ನು ತಮ್ಮವರೆಂದು ಒಪ್ಪಿಕೊಂಡು ಸಂಬಂಧ ಬೆಳಸುತ್ತಿದ್ದಾರೆ. ಇದು ಗಮನಾರ್ಹವಾದ ಅಂಶವಾಗಿದೆ. ನೆರೆಯ ರಾಜ್ಯಗಳಲ್ಲಿ ವಾಸಿಸುವವ ಉಪ್ಪಾರರೊಂದಿಗೂ ವಿವಾಹ ಸಂಬಂಧವನ್ನು ಬೆಳೆಸಿ ತಮ್ಮ ವ್ಯಾಪ್ತಿಯನ್ನು ಇವರು ಹೆಚ್ಚಿಸಿಕೊಂಡಿದ್ದಾರೆ. ಭಾರತದಾದ್ಯಂತ ಬದುಕುವ ಎಲ್ಲರನ್ನೂ ಪ್ರೀತಿಸುವ ಈ ಜನಾಂಗದ ಮನಸ್ಸನ್ನು ನಿಜವಾಗಿಯೂ ನಾನು ಮೆಚ್ಚತಕ್ಕದ್ದೇ.

**೨.೧. ಭೌಗೋಳಿಕ ಪರಿಸರ**

ಕರ್ನಾಟಕದಾದ್ಯಂತ ಎಲ್ಲಾ ಭಾಗಗಳಲ್ಲೂ ಇವರು ವಾಸಿಸುತ್ತಾರೆ. ಇವರು ಸುಮಾರು ಮೂವತ್ತೈದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿಂದ ಕೂಡಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಸುಮಾರು ಹದಿನೈದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿಂದ ಕೂಡಿದ್ದಾರೆ. ಕರ್ನಾಟಕದ ಕೆಲವು ಗಡಿಭಾಗದ ಉಪ್ಪಾರರು ತೆಲುಗು ಮಾತನಾಡುವವರು. ಆದ್ದರಿಂದ ಇವರಿಗೆ ತೆಲುಗು ಉಪ್ಪಾರರೆಂದು ಕರೆಯುತ್ತಾರೆ. ಇವರ ಸಂಖ್ಯೆ ಬಹಳ ಕಡಿಮೆ. ಇವರು ಆಂಧ್ರದಿಂದ ಬಂದವರು. ಈ ಆಂಧ್ರದ ಉಪ್ಪಾರರಿಗೂ ಇಲ್ಲಿಯ ಉಪ್ಪಾರರಿಗೂ ವೈವಾಹಿಕ ಸಂಬಂಧಉಂಟು. ಕರ್ನಾಟಕದ ಉಪ್ಪಾರರ ಮಾತೃಭಾಷೆ ಕನ್ನಡವಾಗಿದೆ, ಹೊರಗಿನಿಂದ ಬಂದ ಉಪ್ಪಾರರು ತೆಲುಗು ಮತ್ತು ತಮಿಳನ್ನು ಮಾತನಾಡುತ್ತಾರೆ. ಇಲ್ಲಿಯ ಬಹುಸಂಖ್ಯಾಕ ಜನಾಂಗಗಳಾದ ಬ್ರಾಹ್ಮಣ , ಒಕ್ಕಲಿಗ ಮತ್ತು ವೀರಶೈವ ವರ್ಗದವರ ಪ್ರಭಾವ ಇವರ ಮೇಲಾಗಿದೆ.

## ೨.೨ "ಉಪ್ಪಾರ" ಶಬ್ದದ ಪ್ರಾಚೀನತೆ ಮತ್ತು ಅರ್ಥ

ಜಾತಿ ಸೂಚಕವಾದ "ಉಪ್ಪಾರ" ಪದವು ಮೊದಲು ವೃತ್ತಿಸೂಚಕವಾಗಿತ್ತು. ಪ್ರಾಚೀನ ಶಾಸನಗಳಲ್ಲಿ ಉಪ್ಪಾರಗೌಡ, ಉಪ್ಪಲಿಗ ಶೆಟ್ಟಿ ಎನ್ನುವ ಉಲ್ಲೇಖಗಳಿವೆ. ಇವುಗಳನ್ನು ಗಮನಿಸಿದರೆ ರಾಜಮಹಾರಾಜರ ಕಾಲದಲ್ಲಿ ಇವರಿಗೆ ಒಳ್ಳೆಯ ಸ್ಥಾನಮಾನಗಳು ಇದ್ದವೆಂದು ತಿಳಿದು ಬರುತ್ತದೆ. 'ಗೌಡ ' ಮತ್ತು 'ಶೆಟ್ಟಿ ' ಎನ್ನುವುದು ಪದವಿಯನ್ನು ಸೂಚಿಸುವ ಪದಗಳು. ಒಂದು ಊರಿನ ಅಥವಾ ಒಂದು ಪ್ರದೇಶದ ಮುಖಂಡನಿಗೆ ನಾಯಕ ಅಥವಾ ಗೌಡ ಎಂದು ಕರೆಯುತ್ತಾರೆ, ಮತ್ತೊಂದು ಪದ ವ್ಯಾಪಾರವನ್ನು ಸೂಚಿಸುತ್ತದೆ. ಈ ಕಾರಣದಿಂದ ಇವರ ಹೆಸರುಗಳ ಮುಂದೆ ಬರುವ ಪದಗಳಿಗೂ ಶಾಸನಗಳಲ್ಲಿ ಬರುವ ಪದಗಳಿಗೂ ಸಂಬಂಧ ಇದೆಯೆಂದು ಊಹಿಸಬಹುದು. ಹೊನ್ನೂರು ಕೆಂಕೆರೆಕಟ್ಟೆಯಲ್ಲಿ ಹೂತು ಹೋಗಿದ್ದ ಕಲ್ಲು ಹೊಯ್ಸಳರ ವೀರನರಸಿಂಹನ ಕಾಲದ್ದು (೧೨೮೩). ಹರದರಹಳ್ಳಿ ತಾಮ್ರ ಶಾಸನ ಇದೂ ಹೊಯ್ಸಳರ ಕಾಲದ್ದೇ (೧೨೪೬). ಇವರೆಡರಲ್ಲೂ ಮೇಲಿನ ಪದಗಳ ಉಲ್ಲೇಖಗಳಿವೆ. ಉಪ್ಪನ್ನು ತಯಾರಿಸಿದ ವೃತ್ತಿ ಮಾಡಿದವರೆಲ್ಲಾ "ಉಪ್ಪಾರ" ರೆಂದು ಕರೆಯಿಸಿಕೊಂಡರೆಂದು ಶಾಸನಗಳಿಂದ ಖಚಿತವಾಗಿ ತಿಳಿದು ಬರುತ್ತದೆ.

ಕಿಟಲ್ ಕೋಶದಲ್ಲಿ "ಉಪ್ಪಾರ" ಎಂಬ ಪದಕ್ಕೆ A men of the salt maker caste ಎಂತಲೂ (Using salt-soil for his profession) ಉಪ್ಪಲಿಗ ಎಂದರೆ A man who belongs to a division of the salt maker caste the members of which are also fishermen ಎಂದು, 'ಉಪ್ಪಾರ' ಎಂದರೆ A man bricklayer a stone mason a shasterer ಎಂಬ ಅರ್ಥಗಳಿವೆ. (ಕಿಟಲ್ ೩೧೮೯೪:೨೩೭, ೨೩೮).

ಕನ್ನಡ ನಿಘಂಟಿನಲ್ಲಿ 'ಉಪ್ಪರ ' ಉಪ್ಪಾರರ ಮೇಲೆ ಹಾಕುತ್ತಿದ್ದ ಉಪ್ಪಿನ ಸುಂಕು ಅಥವಾ ತೆರಿಗೆ ಎಂತಲೂ , ಎತ್ತರವಾದ ಪ್ರದೇಶಕ್ಕೆ ಉಪ್ಪರ ಎಂದು ಅರ್ಥವಿದ್ದು ಮಹಡಿ, ಸೌಧ ಎನ್ನುವ ಅರ್ಥವೂ ಇವೆ. ಉಪ್ಪು ತಯಾರಿಸುವವನು, ಆ ಜಾತಿಗೆ ಸೇರಿದವನು ಎನ್ನುವ ಅರ್ಥವನ್ನು ಕೊಡುತ್ತದೆ. ಇವರಿಗೆ ಉಪ್ಪಲಿಗ, ಉಪಲಿಕ, ಉಪಲಿಗ, ಉಪ್ಪಲಿಕ, ಉಪ್ಪಲೀಕ, ಉಪ್ಪಿಲಿಕ ಎಂತಲೂ ಕರೆಯುತ್ತಾರೆ.

ಕಸ್ತೂರಿ ಕೋಶದಲ್ಲಿ 'ಉಪ್ಪಾರ ' ಎಂದರೆ ಗೋಡೆ ಕಟ್ಟುವವನು, ಗಾರೆ ಎಂದು 'ಉಪ್ಪಲಿಕ' ಎಂಬುದಕ್ಕೆ ಉಪ್ಪಾರ, ಮೀನುಗಾರ, ಉಪ್ಪುತಯಾರಿಸುವವ ಎನ್ನುವ ಅರ್ಥಗಳಿವೆ. (ಕವಲಿ ೧೯೫೭:೧೨೦) ಗುರುನಾಥ ಜೋಶಿಯವರ ಶಬ್ದಕೋಶದಲ್ಲಿ 'ಉಪ್ಪಾರ' ಎಂದರೆ ಮನೆಕಟ್ಟುವವ, ಗೋಡೆ ಕಟ್ಟುವವ, ಉಪ್ಪುಗಾರ ಎಂಬ ಅರ್ಥಗಳಿವೆ. (ಜೋಶಿ ೧೯೭೧:೯೫) ಸಿರಿಗನ್ನಡ ಅರ್ಥಕೋಶದಲ್ಲಿ 'ಉಪ್ಪಾರ' ಎಂದರೆ ಗಾರೆ ಮಾಡುವವನು, ಗೋಡೆ ಹಾಕುವವನು ಎನ್ನುವ ಅರ್ಥಗಳಿವೆ. (ಕಾರಂತ ೧೯೯೦:೬೩). 'ಉಪ್ಪಾರ' ಎಂಬುದಕ್ಕೆ ಉಪ್ಪು ತಯಾರಿಸುವವನು, ಆ ಜಾತಿಗೆ ಸೇರಿದವನು. (ನರಸಿಂಹಾಚಾರ್ ೧೯೭೦-೯೫) ಕನ್ನಡ ರತ್ನಕೋಶದಲ್ಲಿ 'ಉಪ್ಪಾರ' ಎಂದರೆ ಉಪ್ಪು ತಯಾರಿಸುವವನು, ಮಣ್ಣು ಅಥವಾ ಗಾರೆ ಕಲಿಸುವವ ಎನ್ನುವ

ಅರ್ಥವಿದೆ. (ಹಾಮಾನಾ ೧೯೭೭:೩೧). ಕನ್ನಡ ಮತ್ತು ಇಂಗ್ಲೀಷ್ ನಿಘಂಟಿನಲ್ಲಿ 'ಉಪ್ಪಲಿಗ' ಎಂದರೆ ಉಪ್ಪು ತಯಾರಿಸುವವ ಎಂಬುದಾಗಿದೆ. (ಜಿ.ವೆಂಕಟಸುಬ್ಬಯ್ಯ ೧೯೮೫:೧೧೦). ಜಾನಪದ ವಿಶ್ವಕೋಶದಲ್ಲಿ ಉಪ್ಪಾರರ ಮೂಲಕ ಕಸುಬು ಕೆರೆ, ಬಾವಿ, ಕಾಲುವೆ ಸಡುವುದು ಇದರ ಜೊತೆಗೆ ಇಟ್ಟಿಗೆ ಮಾಡುವುದು, ಕೋಟೆ ಕಟ್ಟುವವರು ಎಂಬುದಾಗಿದೆ. (ಚಂದ್ರಶೇಖರ ಕಂಬಾರ ೧೯೮೫:೨೧೫). "'ಉಪ್ಪು' ಎಂದರೆ ಸಾಮಿಪ್ಯ "ವೀರ" ಎಂದರೆ 'ಶೂರತ್ವ' ಎಂದು ಅರ್ಥವಾಗುತ್ತದೆ. 'ಉಪವೀರ' ಎಂದರೆ ತನ್ನನ್ನಾಗಲಿ, ತನ್ನವರನ್ನಾಗಲೀ, ರಕ್ಷಿಸುವುದಾಗಿದೆ" (ಎಚ್ಚೆತ್ತ ಉಪ್ಪಾರ 1994-I).

'ಉಪ್ಪಾರನ ಮಗನಾದರೆ' ಉಪ್ಪಿಲ್ಲದೆ ಉಂಡಾನೇ ಎನ್ನುವ ಜನಪ್ರಿಯ ನುಡಿಗಟ್ಟಿನಲ್ಲಿ ಇವರ ಸಂಪ್ರಾದಾಯಕ ಕಸುಬು ಉಪ್ಪು ತಯಾರಿಸುವಿಕೆ ಎನ್ನುವುದನ್ನು ಪರ್ಯಾಯವಾಗಿ ತಿಳಿಸುತ್ತದೆ. ಶಾಸನಗಳಲ್ಲಿ ಉಪ್ಪಾರಿಕೆ ಎನ್ನುವುದು ದಾನ ಕೊಡುವಾಗ ಸಾಕ್ಷಿಯಾಗಿ ಈ ಜನಾಂಗದ ಒಬ್ಬ ಮುಖಂಡನಿರುತ್ತಿದ್ದ ಎನ್ನುವ ಉಲ್ಲೇಖಗಳಿವೆ. ಇವರ ಹೆಸರುಗಳ ಮುಂದೆ ಶೆಟ್ಟಿ, ಗೌಡ, ಅಪ್ಪ, ಅಯ್ಯ ಮತ್ತು ಅಣ್ಣ ಎಂದಿರುವುದು ಹಿಂದೆ ಇವರಿಗಿದ್ದ ಸ್ಥಾನಮಾನಗಳನ್ನು ಸೂಚಿಸುತ್ತವೆ. ಅದ್ದರಿಂದ ಇವರು ಗ್ರಾಮದ ಹಿತರಕ್ಷಣೆ ಮಾಡುವ ಕಾರ್ಯದಲ್ಲಿ ಇತರ ಅಧಿಕಾರಿಗಳ ಜೊತೆ ದುಡಿದಿರಬೇಕೆಂದು ತಿಳಿದುಬರುತ್ತದೆ.

ಉಪ್ಪಾರಿಕೆಯು ಆನುವಂಶೀಯವಾಗಿ ಬಂದಿದ್ದರಿಂದಲೇ ಇದೊಂದು ಜಾತಿಯಾಯಿತು ಎಂದು ಊಹಿಸಬಹುದು. ಹೊಯ್ಸಳ ಕಾಲದ ಶಾಸನಗಳಲ್ಲಿ ಉಪ್ಪಾರ ಶೆಟ್ಟಿ, ಉಪ್ಪಾರ ಗೌಡಪದಗಳು ಉಲ್ಲೇಖಗಳಿವೆ. ಅಂದರೆ, ಆ ಕಾಲಕ್ಕಾಗಲಿ ಊರಿನ ಮುಖಂಡರು ಇವರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಶಿವನಿಂದಲೇ ಸೃಷ್ಟಿಯಾದರೆಂದು ಪುರಾಣಗಳು ತಿಳಿಸುತ್ತವೆ. ಅಂದಿನಿಂದ ಭೂಮಿಯ ಮೇಲೆ ಬದುಕುತ್ತಾ ಮಾನವನಿಗೆ ಅತಿ ಆವಶ್ಯಕವಾದ ಉಪ್ಪನ್ನು ಒದಗಿಸುತ್ತಾ ಬಂದ ಜನ ಸಮುದಾಯದ ವೃತ್ತಿಯು ಕ್ರಮೇಣ ಹದಿಮೂರನೆಯ ಶತಮಾನದ ಕೊನೆಯಲ್ಲಿ ಜಾತಿಯಾಗಿ ಜಾತಿವಾಚಕ ಅರ್ಥವನ್ನು ಪಡೆದುಕೊಂಡಿತು.

**೨.೩. "ಉಪ್ಪಾರ" ಪದದನಿಷ್ಪತ್ತಿ**

೧. ದ್ರಾವಿಡ ಮೂಲವಾದ 'ಉಪ್ಪರ' ಪದವು ಎತ್ತರ, ಸೌಧ, ಕುರು, ಮಾಡು ಎನ್ನುವ ಅರ್ಥವನ್ನು ಬಿಂಬಿಸುತ್ತದೆ.

೨. ಉಪ್ಪರ ಎಂದರೆ ಉಪ್ಪಾರರ ಮೇಲಿನ ಸುಂಕ, ತೆರಿಗೆ ಎನ್ನುವ ಅರ್ಥವಿದ್ದುದ್ದರಿಂದ ಉಪ್ಪಿನ ವೃತ್ತಿ ಮಾಡಿದ ಜನ ಸಮೂಹಕ್ಕೆ ಕರೆದ ಹೆಸರಾಗಿದ್ದು ಉಪ್ಪಾರ ಎಂಬ ಪದ ಬಂದಿರಬೇಕು.

೩. Uppara and Uppaliga both mean manufacutrers of salt, Uppu being the word for salt: (Anantha Krishna Iyer L.K. 1935 :640).

೪. ಉಪ್ಪರಿಗೆ ಯಿಂದ ಉಪ್ಪಾರ ಬಂದಿದೆ. ಉಪ್ಪರ ಎಂದರೆ ಮನೆಯ ಎತ್ತರವಾದ ಸ್ಥಳ. ಇವರು ಉಪ್ಪರಿಗೆ ಮನೆಯನ್ನು ನಿರ್ಮಿಸುತ್ತಿದ್ದರು. ಉಪ್ಪರದಿಂದ ಉಪ್ಪಾರ ಎಂಬುದು ಬಂದಿದೆ. (ರಮೇಶ್ ಸ.ಚಿ.೧೯೯೪:೯).

೫. ಉಪ್ಪು + ಆರ್ = ಉಪ್ಪಾರ ಆಗಿದೆ. ನೀರಿಗೂ ಉಪ್ಪಿಗೂ ಸಂಬಂಧವಿದೆ. 'ಆರ್ ' ಎನ್ನುವುದು ಜಲವಾಚಕ ಶಬ್ದ (ರಘುಪತಿ ಭಟ್ಟ ೧೯೭೯:೪೩). ಕಮ್ಮಾರ, ಕಂಬಾರ ಆದಂತೆ ಉಪ್ಪಾರ ಆಗಿದೆ.

೬. ಉಪವೀರ ಶಬ್ದವೇ ಅಪಭ್ರಂಶ ಹೊಂದಿ ಉಪ್ಪಾರ ಆಗಿದೆ. (ರಾಮಚಂದ್ರಪ್ಪ ಹೊಸದುರ್ಗ).

೭. ಮಣ್ಣಿನಿಂದ ಉಪ್ಪನ್ನು ತಯಾರಿಸುತ್ತಿದ್ದ ವೃತ್ತಿಯವರಿಗೆ "ಉಪ್ಪಾರ" ರೆಂದೂ ಕರೆಯಲಾಗಿದೆ. (ಚಿಕ್ಕಮಗಳೂರು ಗೆಜೆಟಿಯರ್ ೧೯೮೧:೮೪).

೮. ದಕ್ಷಿಣ ಭಾರತದಲ್ಲಿ ಉಪ್ಪಿನ ತಯಾರಿಕೆಯನ್ನೇ ಕಸುಬಾಗಿಸಿಕೊಂಡ ಜನರ ವರ್ಗದವರಿಗೆ ಉಪ್ಪಲಿಯನ್, ಉಪ್ಪಾರ, ಉಪ್ಪಿಲಿಗ ಎಂದು ಕರೆಯಲಾಗಿದೆ. (ಥರ್ಸ್ಟನ್ ೧೯೦೯)

೯. ಅನುವಂಶೀಯವಾಗಿ ಶಿವನಿಂದ ಬಂದ ಜನವರ್ಗ ಉಪ್ಪನ್ನು ತಯಾರಿಸುತ್ತಿದ್ದರಿಂದ ಈ ಜನ ವರ್ಗಕ್ಕೆ ಉಪ್ಪಾರ ಎಂದು ಹೆಸರುಬಂದಿದೆ. ಈ ಕಾರಣದಿಂದ ಉಪ್ಪಿನಿಂದಲೇ ಉಪ್ಪಾರ ಪದನಿಷ್ಪನ್ನವಾಗಿರಬೇಕು.

೧೦. ಪುರಾಣದ ಉಲ್ಲೇಖದಂತೆ A mythical individiual, named sagara, to whom is ascribed the digging of the Bay of Bengal. His story is narrated in the Vishnu Purana (Thurston K. Rangachari 1987-230). ಸಗರ ವಂಶಸ್ಥರಾದ ಇವರು ಕ್ಷತ್ರಿಯರು ಪರಶುರಾಮನಿಂದ ತಪ್ಪಿಸಿಕೊಳ್ಳಲು ವೇಷ ಮರೆಸಿಕೊಂಡು ಕಾಡಿನಲ್ಲಿ ತಿರುಗಿದ ಉಪವೀರರೇ ಮುಂದೆ ಉಪ್ಪಾರರಾದರು.

೧೧. Uppiliyan, Uppara, Uppara or Uppeliga are different names for a class of people, who followed the same professional occupation the manufacture of salt(Uppu) in various parts of Southern India (ಅದೇ 1987-228).

### ೨: ೪. ಪೌರಾಣಿಕ ಹಿನ್ನೆಲೆ

ಇತರ ಸಂಸ್ಕೃತಿಗಳಂತೆ ಇವರಲ್ಲಿಯೂ ತಮ್ಮ ಮೂಲದ ಬಗ್ಗೆ ಅದ್ಭುತವಾದ ಕಥೆಗಳುಂಟು.* ಆ ಕಥೆಗಳ ಪ್ರಕಾರ ಶಿವನ ಬೆವರಿನಿಂದ ಒಬ್ಬನನ್ನು ಸೃಷ್ಟಿಸಿ ಉಪ್ಪನ್ನು ತಯಾರಿಸುವವನ್ನು ಭೂಮಿಗೆ ಕಳುಹಿಸಿದನಂತೆ, ಆತ ತಯಾರಿಸಿದ ಉಪ್ಪು ರುಚಿಕರವಾಗಿದ್ದರಿಂದಲೂ ಮತ್ತು ಅದನ್ನು ವಾಸನೆ

ನೋಡಿದ್ದರಿಂದ ಮೂಗಿನಿಂದ ಬರುವ ದ್ರವ ಮತ್ತು ಬೆವರು ಎರಡೂ ಉಪ್ಪಾಗಿದೆಯಂತೆ. ಉಪ್ಪಿನ ಅಗತ್ಯವನ್ನು ತಿಳಿದು ಶಿವನು ಅವನಿಗೆ ಕಾಣಿಕೆ ಕೊಟ್ಟು ಅದೇ ವೃತ್ತಿಯಲ್ಲಿ ಮುಂದುವರೆಯುವಂತೆ ಆದೇಶಿಸಿದನಂತೆ. ಅವನಿಂದ ಬಂದವರೇ ಉಪ್ಪಾರರು ಎಂದು ಈ ಕಥೆ ತಿಳಿಸುತ್ತದೆ.

ಮತ್ತೊಂದು ಕಥೆಯ ಪ್ರಕಾರ "ಸಗರನ ಅರುವತ್ತು ಸಾವಿರ ಮಕ್ಕಳು ಯಜ್ಞವನ್ನು ಪೂರ್ಣಗೊಳಿಸಿದರು ಯಜ್ಞಾಶ್ವವನ್ನು ಭೂಮಂಡವನ್ನೆಲ್ಲಾ ಶೋಧಿಸಿ ಎಲ್ಲೂ ಕಾಣದಾದಾಗ ಪಾತಾಳಕ್ಕೆ ಹೋಗಲು ಭೂಮಿಯನ್ನು ಅಗೆದರು. ಪಾತಾಳದಲ್ಲಿ ಕಪಿಲ ಋಷಿಯ ಆಶ್ರಮದ ಪ್ರದೇಶದಲ್ಲಿ ಅಶ್ವವಿರುವುದನ್ನು ಕಂಡರು ಈತನೇ ಅಪಹರಿಸಿದ ವ್ಯಕ್ತಿಯೆಂದು ಅವನ ಮೇಲೆ ದಾಳಿ ಮಾಡಲು; ಕೋಪದಿಂದ ಮುನಿ ಅವರನ್ನೆಲ್ಲಾ ಸುಟ್ಟು ಬೂದಿ ಮಾಡಿದನು. ಇವರ ಕಾಲಾನಂತರದಲ್ಲಿ ಭಗೀರಥನು ಋಷಿಯ ಮನ ಒಲಿಸಿ ತನ್ನ ಪೂರ್ವಿಕರ ಆತ್ಮಗಳಿಗೆ ಮುಕ್ತಿ ದೊರಕಿಸಲು ದೇವಗಂಗೆಯನ್ನು ಅವರ ಬೂದಿಯ ಮೇಲೆ ಹರಿಯುವಂತೆ ಮಾಡಿದನು. ಗಂಗೆಯ ಜೊತೆ ಭಸ್ಮವು ಸಾಗರವನ್ನು ಸೇರಿ ಸಾಗರವೆಲ್ಲಾ ಉಪ್ಪಾಯಿತು. ಅಂದಿನಿಂದ ಸಗರ ವಂಶದವರು ಉಪ್ಪನ್ನು ತಯಾರಿಸುವ ಕೆಲಸವನ್ನು ಕಾಶಿ ಪ್ರದೇಶದಲ್ಲಿ ಆರಂಭಿಸಿದರಂತೆ. ಈ ವಂಶದಿಂದ ಬಂದವರಿಗೆ ಸಗರ ವಂಶಸ್ಥರು ಎಂದು ಕರೆಯುತ್ತಾರೆ. ಇಂದಿಗೂ ಕೂಡ ಇವರು ಉತ್ತರ ಭಾರತದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ".......the Sixty Thousand Sons of the Emperor Sagar, who unjustly accused a Rishi named Kapila of stealing their fathers sacrificial horse, and were reduced to ashes by the power of his curse. The slender basis on which both these stories rest seems to be the salt found both in the sweat of the body and in the water of the sea". (Anantha Krishna Iyer L.K. 1935-641). ಇದೇ ರೀತಿ ವಿಷ್ಣು ಪುರಾಣದಲ್ಲೂ ಬರುತ್ತದೆ. "The Caste further traces its descrent from a mythical individual, named Sagara, to whom is ascribed the digging or the Bay of Bengal (Edgar Thurston K. Rangachari. 1987-230).

ಈ ಮೇಲ್ಕಂಡ ಕಾರಣಗಳಿಂದ ಉಪ್ಪಾರರು ಸಗರ ವಂಶದವರೆಂದೂ ಭಗೀರಥ ವಂಶದವರೆಂದೂ ಸಗರನೇ ತಮ್ಮ ಮೂಲ ಪುರಷನೆಂದು ಹೇಳಿಕೊಳ್ಳುತ್ತಾರೆ. ಇವರ ಬೆಡಗುಗಳಲ್ಲಿ ಈ 'ಸಗರ ಮತ್ತು ಭಗೀರಥ' ಹಾಗೂ ಪುರಾಣದಲ್ಲಿ ಬರುವ ಚಕ್ರವರ್ತಿ ಸಗರ ಮತ್ತು ಭಗೀರಥ ಚಕ್ರವರ್ತಿಗಳಿಗೆ ಸಂಬಂಧವಿದ್ದರೂ ಇರಬಹುದು ಎಂದು ಊಹಿಸಬಹುದು. ಒಂದು ಕಾಲದಲ್ಲಿ ಚಕ್ರವರ್ತಿ ಮನೆತನ ಇನ್ನೊಂದು ಕಾಲದಲ್ಲಿ ಗತಿಹೀನರಾಗಿರುವುದು ನಮಗೆ ಚರಿತ್ರೆಯಿಂದ ತಿಳಿದು ಬರುವ ಸಂಗತಿ. ಇದು ನಿಜವಾದರೆ ಉಪ್ಪಾರರ ಮೂಲಪುರುಷ ಸಗರನಿದ್ದರೂ ಇರಬಹುದು.

## ೨. ೫. ಉಪ್ಪಾರರ ಪೂರ್ವ ಪರಿಚಯ

ಉಪ್ಪಾರರು ಉತ್ತರ ಭಾರತದ ಕಾಶಿ ಮೂಲನಿವಾಸಿಗಳೆಂದು ಹೇಳುತ್ತಾರೆ. ಇವರನ್ನು ಮೇಲು ಸಕ್ಕರೆಯವರು, ಮಣ್ಣು ಉಪ್ಪಾರರು, ಕಲ್ಲು ಉಪ್ಪಾರರು ಎಂದು ಗುರುತಿಸಲಾಗುತ್ತಿದೆ. 'ಮೇಲು ಸಕ್ಕರೆ' ಸಕ್ಕರೆಗೂ ಹೆಚ್ಚಾದದ್ದು ಎಂಬ ಅರ್ಥವಿದೆ. ಆರು ರಸಗಳಲ್ಲಿ ಶ್ರೇಷ್ಠವಾದುದೇ ಉಪ್ಪು ಎಂದು ಹೇಳುತ್ತಾರೆ. ಆದುದರಿಂದ ಉಪ್ಪು ತಯಾರಿಸುವವನಿಗೆ 'ಮೇಲುಸಕ್ಕರೆ' ಯವರು ಎಂದು ಕರೆಯಲಾಗಿದೆ. ಮಣ್ಣಿನಿಂದ ಗಾರೆ ಮಾಡುವುದು, ಮಣ್ಣಿನಿಂದ ಉಪ್ಪು ತಯಾರಿಸುವುದರಿಂದ ಮಣ್ಣು ಉಪ್ಪಾರರಾದರು. ಕಲ್ಲು ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರಿಂದ ಕಲ್ಲು ಉಪ್ಪಾರರಾದರು. ಹೀಗೆ ಉಪ್ಪು ತಯಾರಿಸುತ್ತಿದ್ದ ಉಪ್ಪಾರರು ಕರ್ನಾಟಕಕ್ಕೆ ಹೊರಗಿನಿಂದ ಬಂದವರೊ ಅಥವಾ ಅವರು ಇಲ್ಲಿಯ ಮೂಲ ನಿವಾಸಿಗಳೇ ಎಂದು ನಿರ್ಣಯಿಸಲು ಸಾಕಷ್ಟು ಆಧಾರಗಳಿಲ್ಲ. ಬಾದಾಮಿಯ ಚಾಲುಕ್ಯರು ಉಪ್ಪಾರ ಮೂಲದವರೆಂದು ವಿದ್ವಾಂಸರು ಸಾಧಾರವಾಗಿ ತರ್ಕಿಸಿದ್ದಾರೆ. ಕಾಲಾನಂತರದಲ್ಲಿ ಕರ್ನಾಟಕದಾದ್ಯಂತ ಹರಡಿಕೊಂಡು ತಮ್ಮ ಮೂಲ ಕಸುಬನ್ನು ಮಾಡುತ್ತಾ ಬಂದರು. ಬ್ರಿಟಿಷ್ ಸರಕಾರವು ಭಾರತದಲ್ಲಿ ೧೮೮೦ ರಲ್ಲಿ * ಉಪ್ಪಿನ ಉತ್ಪಾದನೆಯನ್ನು ನಿಷೇಧಿಸಿದ್ದರಿಂದ ಉಪ್ಪಾರರು ತಮ್ಮ ಮೂಲ ಕಸುಬನ್ನೇ ಅನಿವಾರ್ಯವಾಗಿ ಬಿಡಬೇಕಾಯಿತು. "In British India, the manufacture of earth-salt was absoultely prohibited in 1880; and here it is all but extinct".(The Mysore Tribes and Castes:655)ತಮ್ಮ ಮೂಲ ವೃತ್ತಿಯಿಂದ ಹಲವಾರು ಕೃಷಿಯನ್ನು ಅವಲಂಭಿಸಿದರು. ಮತ್ತೆ ಕೆಲವರು ಕಲ್ಲು ಕಡಿಯುವ, ಮರಗೆಲಸ, ಗಾರೆ, ಮತ್ತು ಇಟ್ಟಿಗೆ ಮಾಡುವ ಕೆಲಸದಲ್ಲಿ ತೊಡಗಿದರು. ಇಷ್ಟಿದ್ದರೂ ಹೆಚ್ಚು ಜನರು ಕೃಷಿಯನ್ನೆ ಪ್ರಧಾನ ಕಸುಬನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ.

ಉಪ್ಪಾರರ ಜನಾಂಗದ ಲಾಂಛನ 'ಅಂಗೈ' ಎಂದು ವಚನಕಾರರು ಹೇಳುತ್ತಾರೆ. ಅಂಗೈ › ಚಲುಕ › ಚಾಲುಕ್ಯ ಆಗಿದೆ. ಈ ಕಾರಣದಿಂದ ಉಪ್ಪಾರರು ಬಾದಾಮಿಯನ್ನಾಳಿದ ಚಾಲುಕ್ಯರೆಂದು ಹೇಳಿಕೊಳ್ಳುತ್ತಾರೆ. ಇಂದು ಆರ್.ಎಸ್. ಪಂಚಮುಖಿಯವರ ಅಭಿಪ್ರಾಯವಾಗಿದೆ.

ದಕ್ಷಿಣಕರ್ನಾಟಕದಲ್ಲಿ ಸುಮಾರು ಹದಿನೈದು ಲಕ್ಷಕ್ಕೂ ಹೆಚ್ಚು ಉಪ್ಪಾರರಿದ್ದಾರೆ. ಉಪ್ಪಾರ ಹಳ್ಳಿ ಎಂದು ಕರೆಯುವ ಅನೇಕ ಹಳ್ಳಿಗಳಿವೆ. ಮೈಸೂರು, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಜನ ಸಂಖ್ಯೆ ಇದ್ದು ಉಳಿದ ಜಿಲ್ಲೆಗಳಲ್ಲಿ ಕಡಿಮೆ ಇದ್ದಾರೆ. ಈ ಪ್ರದೇಶಗಳ ಮಣ್ಣು ಫಲವತ್ತಾಗಿರುವುದರಿಂದ ಇವರು ವ್ಯವಸಾಯ, ಪಶುಪಾಲನೆಯಲ್ಲಿ ತೊಡಗಿದ್ದರ ಜೊತೆಗೆ ಮನೆ ಕಟ್ಟುವಿಕೆ , ಬಡಿಗೆ ಕೆಲಸ, ಗಾರೆ ಕೆಲಸ , ಕಲ್ಲು ಕಡಿಯುವಿಕೆ, ಸುಣ್ಣ ಮಾಡುವುದು ಇನ್ನು ಮುಂತಾದ ಕೆಲಸದಲ್ಲಿ ತೊಡಗಿದ್ದಾರೆ. ಜಲಾಶಯ ಹಾಗೂ ಅನೇಕ ಕೆರೆಗಳಿಂದ ಕೃಷಿಗೆ ನೀರು ಬಳಸುತ್ತಾರೆ. ಇವರ ಪ್ರಧಾನ ಕಸುಬು ಕೃಷಿ ಆಗಿದ್ದರಿಂದ,

ಇವರು ಕಬ್ಬು, ಭತ್ತ, ತೆಂಗು, ರಾಗಿ, ಜೋಳ ಬೆಳೆಯುತ್ತಾರೆ. ಬ್ರಿಟಿಷರು ಉಪ್ಪಿನ ತಯಾರಿಕೆಯನ್ನು ನಿಷೇಧಿಸಿದ್ದರಿಂದ ಇವರು ತಮ್ಮ ಮೂಲ ವೃತ್ತಿಯನ್ನು ಕೈಬಿಡಬೇಕಾಯಿತು. ಒಂದು ವೃತ್ತಿಯಿಂದ ಇನ್ನೊಂದು ವೃತ್ತಿಗೆ ತಮ್ಮನ್ನು ಬದಲಾಯಿಸಿಕೊಳ್ಳುವಾಗ ತುಂಬಾ ತೊಂದರೆ ಎದುರಿಸಬೇಕಾಯಿತು. ಈ ಕಾರಣದಿಂದಾಗಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಹಿಂದುಳಿದವರಾದರು. ಭಾರತ ಸ್ವಾತಂತ್ರ್ಯ ಬಂದು ಇಲ್ಲಿಯ ವರೆಗೂ ಉಪ್ಪಾರರ ಜೀವನ ಕ್ರಮದಲ್ಲಿ ಗಂಭೀರ ಬದಲಾವಣೆಗಳೇನೂ ಆಗಿಲ್ಲ.

### ೨.೬. ಕೆಲವು ಮುಖ್ಯ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಉಪ್ಪಾರರ ಉಲ್ಲೇಖಗಳು

ಜನಾಂಗದ ಪ್ರಾಚೀನತೆಯನ್ನು ತಿಳಿಯುವಲ್ಲಿ ಶಾಸನ, ಐತಿಹ್ಯ ಪುರಾಣಗಳು ಎಷ್ಟು ಮುಖ್ಯವೊ ಅಷ್ಟೇ ಪ್ರಾಚೀನ ಗ್ರಂಥಗಳು ಮುಖ್ಯ ಪಾತ್ರ ವಹಿಸುತ್ತವೆ. ಕವಿಯು ತನ್ನ ಕಾವ್ಯರಚನೆಯಲ್ಲಿ ಆತನ ಸುತ್ತಲಿನ ಬದುಕನ್ನು ಬಿಟ್ಟು ಬೇರೆ ಏನನ್ನು ಬರೆಯಲು ಸಾಧ್ಯವಿಲ್ಲ. ಆತ ಆಯುದ್ಧೊಂಡ ಕಥಾವಸ್ತುಗಳು ಪ್ರಾಚೀನವಾಗಿದ್ದರೂ, ಅವುಗಳಲ್ಲಿ ಬರುವ ಪ್ರದೇಶ, ವ್ಯಕ್ತಿಗಳು ಅವನ ಸಮಕಾಲೀನವೇ ಆಗಿರುತ್ತವೆ. ಈ ಕಾರಣದಿಂದ ಕವಿಯೊಬ್ಬನ ರಚನೆಯೂ ಜನಾಂಗ ಪ್ರಾಚೀನತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ. ಉದಾಹರಣೆಗೆ ಕಾವ್ಯದಲ್ಲಿ ಬರುವ ಕಾಡು, ಸರೋವರ, ನದಿ, ಗುಡ್ಡಬೆಟ್ಟ ಇತ್ಯಾದಿಗಳ ವರ್ಣನೆಗಳು ಕವಿಯು ನಿತ್ಯ ನೋಡುವ ಪರಿಸರವೇ ಆಗಿರುತ್ತದೆ. ಇದು ನಿಜವಾದರೆ ಅಲ್ಲಿ ಬರುವ ಜನಾಂಗಗಳು ಅವರ ಕೆಲಸಕಾರ್ಯಗಳು ನಿಜವಾಗಿರಬೇಕಲ್ಲವೆ? ಇದರ ಸಾಧ್ಯತೆಗಳ ಪುಷ್ಟೀಕರಣಕ್ಕಾಗಿ ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿ (ಕ್ರಿ.ಶ ೧೪೨೮) ಯಲ್ಲಿ ಗುಡಿ ಗೋಪುರಗಳನ್ನು ಕಟ್ಟುವ ಮತ್ತು ದುರಸ್ಥಿ ಮಾಡುವ ಕೆಲಸಗಳ ಬಗೆಗೆ ವಿವರಣೆಗಳು ದೊರಕುತ್ತವೆ."

"ಅರಸನೊಂದಿನ ಚಿತ್ರಮಂಟಪ
ಕಿರಿದೆನಲು ಮುರಿದಿದಂ ಪಿರಿದಾಗಿ
ಕಟ್ಟಿಸುವನೆಂದೆನುತ ವರಮಂತ್ರಿ ಕಳಿಸಿದಂ
ಉಪ್ಪಲೀಕರನಂದು ಹಾರೆ ಸಲಿಕೆಗಳ ಸಹಿತ(ಸಂಧಿ ೩೨ ಪದ್ಯ ೪೯)

ಲಕ್ಕಣ್ಣ ದಂಡೇಶನು ವಿಜಯನಗರದ ಅರಸರ ಆಸ್ಥಾನ ಕವಿ. ಈ ಕಾಲಘಟ್ಟದಲ್ಲಿ ಗುಡಿ ಗೋಪುರಗಳನ್ನು ಉಪ್ಪಾರರೇ ಕಟ್ಟುತ್ತಿರುವುದನ್ನು ಮತ್ತು ಈ ಕೆಲಸಗಳಲ್ಲಿ ಬಹಳ ಪರಿಣತೆಯನ್ನು ಉಪ್ಪಾರರೇ ಪಡೆದುಕೊಂಡಿದ್ದರಿಂದಲೇ ರಾಜನು ಮುರಿದ ಮಂಟಪವನ್ನು ಮತ್ತೆ ದೊಡ್ಡದಾಗಿ ಕಟ್ಟಲು ಉಪ್ಪಾರರನ್ನೇ ಕರೆಯಿಸಿ ಮಂತ್ರಿಗೆ ಆದೇಶವನ್ನು ನೀಡಿದನು. ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದ ಲೇಖನದಲ್ಲಿ ಉಪ್ಪಾರರು ಕೋಟೆ ಕೊತ್ತಲಗಳನ್ನು ಕಟ್ಟುವ ನಿಪುಣರಾಗಿದ್ದರೆಂದು ಉಲ್ಲೇಖಗಳಿವೆ.* ಅದರಂತೆ ಮಂತ್ರಿ

ಉಪ್ಪಲೀಕರನ್ನು ಕೆಲಸದ ಸಾಮಗ್ರಿಗಳ ಜೊತೆಗೆ ಕರೆಯಿಸಿಕೊಳ್ಳುತ್ತಾನೆ. ಗುಡಿ, ಕಾಲುವೆ, ಕೋಟೆ ಮತ್ತು ಕೊಳಗಳ ಉದ್ಯಾನವನಗಳು ಇತ್ಯಾದಿಗಳನ್ನು ಮಾಡುವ ನಿಪುಣರಾಗಿದ್ದರೆಂದು ತಿಳಿದು ಬರುತ್ತದೆ. ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದಲ್ಲಿ ನೀರಿಗಾಗಿ ಬಹುದೊಡ್ಡ ಕೆರೆಯನ್ನು ನಿರ್ಮಿಸಲು ಪೋರ್ತುಗೀಜ್ ಉಪ್ಪಾರರನ್ನು ಕರೆಯಿಸಿ ಕೆರೆಯ ನಿರ್ಮಾಣ ಮಾಡಿದ ಉಲ್ಲೇಖ ರಾಬರ್ಟ ಸಿವಿಲ್‌ನ 'ದಿ ಪರ್ಗಟನ ಎಮ್‌ಪರರ್‌ದಲ್ಲಿ ಸಿಗುತ್ತದೆ'. ರಾಜ ತನ್ನ ಕಾಲದಲ್ಲಿ ನೀರಿಗಾಗಿ ಎರಡು ಬಲು ಎತ್ತರವಿರುವ ದಡಗಳ ಮಧೆ ಇರುವ ಕೆರೆಯನ್ನು ನಿರ್ಮಿಸಿದು. ಆದರೆ, ಈ ನಾಡಿನಲ್ಲಿ ಅದನ್ನು ಮಾಡುವ ಸಾಧನವಾಗಲಿ ಮಾಡುವವನಾಗಲಿ ಇರದಿದ್ದರಿಂದ ಕೆಲವು ಪೋರ್ತಗೀಜ್ ಉಪ್ಪಾರರನ್ನು ಕಳಿಸುವಂತೆ ಮಾಡಲಾದ ಪತಿಯನ್ನು ಕೋರಿ ಗೋವಕ್ಕೆ ಹೇಳಿಕಳಿಸಿದ" ( ಸದಾನಂದ ಕನವಳ್ಳಿ : 1992: 387) ಉಪ್ಪಾರರ ಶೈವ ಸಂಪ್ರದಾಯದ ವಿವರಗಳು ಈ ಕೆಳಗಿನ ಪದ್ಯಗಳಿಂದ ತಿಳಿದುಕೊಳ್ಳಬಹುದು. "ರೂಪನಾಕ್ಷಣಂ ಹಾರವಿಸತಿಪುಸಿದ ಮಡಿದುಪ್ಪಲೀಕರಂ ವೀರಶೈವಾಗಮವ ಮೆರೆದು (ಲ.ಶಿ.ಚಿಂ. ೩೨ -೫೯) "ಪಿರಿದೆನಿಸುತುಪುಲಿಕ ಕಾಯಕವ ಮಾಡುತಿಹ ಶರಣ" "ರಾಜಿಸುವನಣ್ಣಾ ಭಕ್ತನುಪುಲಿಗ ಕಾಯಕದೊಳೊಸೆದು (ಗುರುಚಾ -೧೦-೩೩) "ಹರಭಕ್ತ ಪದಸೇವ ತತ್ವದೊಳಗುಪುಲಿಕ ಕಾಯಕವ ಮಾಡುತಿರಲು"(ಗುರಾಚಾ. ೧೦-೩೪)

ನಾರಣಪ್ಪನ ಕುಮಾರವ್ಯಾಸ ಭಾರತದಲ್ಲಿ ಉಲ್ಲೇಖನಗಳನ್ನು ಗಮನಿಸಬಹುದು.

ಪಡಿತಳವ ಬೀಸಿದರೆ ಕಾಲಿಕಿಡಿ ನಡುವ ತಾಗಿದರೆ ಮಂಡಲವುಡಿದು ಬಿದ್ದುದು ನಿಲುಕಿನುಪುರ ಶಿರವ ಮನ್ನಿಸದು" (ಕುವ್ಯಾ ಬೀ. ೪ -೩೭)

ರಥಸಾವಿರದಲಾ ಪಾಂಚಾಲ ಬಲ ಉಪ್ಪರ ಗುಡಿಯ

ಸಿಂಧದ ಸಘಾಡದ ಚೈದಿರಿಭಟನ್ (ಕುವ್ಯಾಕ ೨-೨೩)

ಆರತಿಯನೆತ್ತಿದರು ಬಳಿಕುಪ್ಪಾರತಿಯ ಹಾಯ್ಕಿದರು (ಕುವ್ಯಾ ಆ ೨೯-೨೭)

ನಾರಿಯರು ಬಳಿಕೆಸವ ಮಣಿಮಯದಾರತಿಯ ನಲಿದೆತ್ತಿ ಬಳಿಕುಪ್ಪಾರತಿಯನು ಸೂಸಿದರು (ಜೀವಂಚ ೮-೨೪)

ಈ ಮೇಲಿನವುಗಳಿಂದ ಪ್ರಾಚೀನ ಕಾಲದಲ್ಲಿ ಈ ಜನಾಂಗವು ಅನೇಕ ಜನಹಿತ ಕಾರ್ಯಗಳಲ್ಲಿ ತೊಡಗಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ. ಅರಸರು ಗುರುತಿಸುವಂತಹ ಕಲೆಗಳಲ್ಲಿ ನಿಪುಣತೆಯನ್ನು ಪಡೆದಿದ್ದರು ಮತ್ತು ಆ ಜನಾಂಗದ ಗುಡಿಗಳ ಮುಂದೆ ಎನ್ನುವ ದಾಖಲೆಗಳಿಗಾಗಿ 'ಉಪ್ಪಾರರ ಗುಡಿ' ಬಳಕೆಯಾಗುವುದು ಕಂಡುಬರುತ್ತದೆ. ಹೀಗೆ ದಾಖಲೆಗಾಗಿ ಹೇಳುವ ಗುಡಿ ಎಂದರೆ ಅದು ವಿಶೇಷವಾಗಿಯೇ ಇರುತ್ತದೆ. ಹೀಗೆ ಗುರುತಿಸುವ ಮತ್ತು ವಿಶೇಷವಾಗಿರುವ ಗುಡಿಗಳು ಆ ಕಾಲದಲ್ಲೇ ಪ್ರಸಿದ್ಧಿಯಾಗಿದ್ದವು. ಇಂತಹ ಗುಡಿಗಳಲ್ಲಿ ರಾಜನಿಗೆ ಮಾಡುವ ಒಂದು ಬಗೆಯ ಆರತಿಗೆ 'ಉಪ್ಪಾರತಿ' ಎಂದು ಕರೆಯಲಾಗುತ್ತದೆ.

ಗುಡಿಗಳ ಪೂಜಾರಿಗಳು ಉಪ್ಪಾರ ಜನಾಂಗದವರಾಗಿದ್ದರಿಂದಲೇ ಅವರು ಮಾಡುವ ಆರತಿಗೆ ಈ ಹೆಸರು ಬಂದಿರಬಹುದೆಂದು ತೋರುತ್ತದೆ. ಪದ್ಮಣಾಂಕನ 'ಪದ್ಮರಾಜ ಪುರಾಣ' ಪ್ರಕಾರ ಈ ಆರತಿಯನ್ನು ಸುಂದರ ಹೆಂಗಸರುಗಳು ಮಾಡುತ್ತಿದ್ದರು ಎನ್ನುವ ದಾಖಲೆ ಸಿಗುತ್ತದೆ. "ಕೋಮಲೆಯರು...... ಉಪ್ಪಾರತಿಯನೆತ್ತಿ" (ಪದ್ಮರಾ ೩-೪೭). ಗುಡಿಗಳ ಉಲ್ಲೇಖ ಭೀಮಕವಿ 'ಬಸವಪುರಾಣ'ದಲ್ಲಿ ನೋಡಬಹುದು. "ಉಪ್ಪರದ ಗುಡಿಗಳ್ " "ದೃಷ್ಟಿಯಾಯ್ತೆಲೆಲೆ ಉಪ್ಪಾರತಿಯನೆತ್ತೆಂಬ" (ಬಸರ ೭-೧೩೨). ಎನ್ನುವ ಪ್ರಯೋಗಗಳು ಬರುತ್ತವೆ. ಇದಲ್ಲದೆ ಹರಿಹರ, ಸಗರಬೊಮ್ಮಣ್ಣ, ಮಹಾಬಲ ಕವಿ, ಬಸವಲಿಂಗ ಕವಿಗಳು ಪ್ರಯೋಗಿಸುತ್ತಾರೆ. ಅವುಗಳಲ್ಲಿ ಈ ಕೆಳಗಿನಂತೆ ಪಟ್ಟಿ ಮಾಡಬಹುದು.

"ಸೆಳೆವ ಸಿಂಧದ ಕಟ್ಟಿದುಪುರ ಗುಡಿಗಳಲ್ಲಿ
ಹೊಳೆವ ರೆಕ್ಕೆಯದ ನೆರೆದಣುಕುಗಳವಲ್ಲಲ್ಲಿ"(ಇಹರ.ದೇ ೩೭-೧೪)

"ತನುವಿನ ಮಹಾಮನೆಯಲ್ಲಿ ಮಾಡುವ ಮಾಟ
ಘನಕ್ಕೆ ಘನವೆಂದು ಎದ್ದಿತ್ತು ಉಪುರ ಗುಡಿ
ಲೀಲೋಲ್ಲಾಸವೆಂಬ ಕಳೆ ನಟ್ಟಿತ್ತು(ಸಗಟೊ.೪೭)

ಬಿರುದರ ಚಿನ್ನ ಚಮ್ಮಟಿದೆ ಗಂಡರ ದಾವಣಿ ವೀರಘಂಟೆ
ಯುವಪುರಗುಡಿ ಬಿಲ್ಲ ಜೀವಣಿಕೆ (ಮಹಾನೇ ೧೧-೧೨೬)

"ಶರಣಾವಳಿಯ ಜಯರವ ಪೊಕ್ಕಾಲುಪುರ ಗುಡಿಯನೆತ್ತಿ
ಭಕ್ತರ್ ನಲಿಯೆ || (ಕೊಟ್ಟುಬ ೧೬-೩೧)

ಈ ಕಾವ್ಯಗಳಲ್ಲಿ ಬರುವ ಗುಡಿಗಳ ಉಲ್ಲೇಖಗಳನ್ನು ಗಮನಿಸದರೆ ಅವು ಉಪ್ಪಾರರ ದೇವರ ಗುಡಿಗಳೇ ಎಂದು ತಿಳಿಸಿದರೂ, ಅವು ಉಪ್ಪಾರರ ಜನಾಂಗದ ಗುಡಿಗಳೇ ಎನ್ನುವ ಸಂದೇಹವನ್ನು ಹುಟ್ಟಿಸುತ್ತವೆ. "ಉಪ್ಪಾರ" ಎಂದರೆ ಎತ್ತರದ ಎನ್ನುವ ಅರ್ಥವಿದೆ. ಇದೇ ಅರ್ಥವನ್ನು ೧೯೦೦ ರಲ್ಲಿ ರಚಿತವಾದ ಭಾರತ ನಿಘಂಟು"ಉಪ್ಪರ ಮನೆ ಮೇಲೆಂಬುದರ್ಥಂ"(ಭಾರನಿ) ಎಂದು ತಿಳಿಸುತ್ತದೆ. ಎತ್ತರದ ಮನೆಗಳಿಗೂ ಉಪ್ಪರದ ಮನೆಗೂ ಸಂಬಂದವಿದೆ. ಅಂದು ಉಪ್ಪಾರರು ಮನೆ ಕಟ್ಟುವ, ಆದರಲ್ಲೂ ಉಪ್ಪರಿಗೆ ಮನೆ ಕಟ್ಟುವ ಕೆಲಸದಲ್ಲಿ ನಿಪುಣರಾಗಿದ್ದರು. ಈ ಕಾರಣದಿಂದ ಅವರು ನಿರ್ಮಿಸಿದ ಮನೆಗಳಿಗೆ ಉಪುರ ಮನೆಗಳೆಂದೂ, ಮನೆಗಳು ಎತ್ತರದ ಸ್ಥಳದಲ್ಲಿದ್ದ ಮನೆಗಳನ್ನು ಉಪ್ಪರದ ಮನೆಗಳೆಂದು ಗುರುತಿಸಿರಬೇಕು. ಹೀಗೆ ಎತ್ತರದಲ್ಲಿ ನಿರ್ಮಾಣವಾದ ಚಪ್ಪರಗಳು ಉಪ್ಪರದ ಚಪ್ಪರಗಳೆಂದು ಕರೆಯುತ್ತಿದ್ದರು. ಬೊಮ್ಮರಸನ ಕೃತಿಯ 'ಸೌಂದರ ಪುರಾಣ' "ಮಂದಿರದ ಮುಂದಣುಪುರದ ಚಪ್ಪರದೊಳಗೆ ಸಿಂದನಾನಂದದಿಂದಾ"(ಸೌಂದಪು ೪-೨೬) ಎಂಬ ಉಲ್ಲೇಖವಿದೆ.

ಕನ್ನಡ ಭಾಗವತದಲ್ಲಿ, "ಉಪ್ಪರದ ಚಿಂತೆಯಲ್ಲಿ ನಿಜಾಶ್ರಮವ", ಅದೃಶ್ಯಕವಿಯ ಪ್ರೌಢರಾಯನ ಕಾವ್ಯದಲ್ಲಿ "ಸತ್ತ ಉಪ್ಪಾರುರೆಲ್ಲರ ತೋರೆ" ಗುಬ್ಬಿಯ ಮಲ್ಲಣಾರ್ಯನ "ವೀರಶೈವಾಮೃತ ಪುರಾಣ"ದಲ್ಲಿ "ಪೊಡವಿಯೊಳಗುಪುಲಿಗ ದಾಸನಾಗಿರ್ಪವನ ಮುಡುಹಿನೊಳಗಣ ಮುದ್ರೆ ಬಯಲಾದುದು", ವಚನಶಾಸ್ತ್ರದಲ್ಲಿ "ಶಿಖಿ ಬ್ರಾಹ್ಮಣ.... ಅಂಗೈ ಉಪ್ಪಾರ, ನಖ ನಾಯಿದ, ಒಡಲು ದೊಂಬ", ಚಂದ್ರಮನ 'ಗೋಮಟೇಶ್ವರ ಚರಿತ್ರೆ'ಯಲ್ಲಿ ಸೊಬಗನಾಂತೊಪ್ಪುವ ಬಂಡಿಯನಾಗ ಉಪ್ಪರವಾಗಿ ಮಾಡಿದನು, ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಉಪ್ಪರದ ಬಿರಿಬಿಸಲ ಬೀದಿಯೊಳು ತಗೆದನವನನಿಬರಂ ನಿಷ್ಕರುಣನು", ಹರಿಹರನ 'ಇಹಃ ಪಗೆಯಾಂಡರ ರಗಳೆ'ಯಲ್ಲಿ "ಇಲ್ಲೆನ್ನ ದೀಪ ಬಿರು[illegible]ುಪುರಂ ಗಟ್ಟಿ ಅಲ್ಲಿ ತನ್ನರಮನೆಯ ಮುಂದೆ ಮುಗಿಲಂ ಮುಟ್ಟಿ ಇರ್ಪುದಾತನ ಮನಮನೇನೆಂದು [illegible]ಣ್ಣಿಪೆಂ" ಇವಲ್ಲದೆ ಇನ್ನೂ ಮುಂತಾದ ಕಾವ್ಯಗಳಲ್ಲಿ ಉಪ್ಪಾರರ ಉಲ್ಲೇಖಗಳು ಸಾಕಷ್ಟು ಬಂದಿವೆ.

ವಿರೂಪಾಕ್ಷ ಪಂಡಿತನ 'ಚನ್ನಬಸವ ಪುರಾಣ'ದಲ್ಲಿ ಶಿವಶರಣನಾದ ಉಪ್ಪಲಿಗರ ಅಣ್ಣಪ್ಪನು ಮೊದಲು ವಿಷ್ಣುಭಕ್ತನಾಗಿದ್ದನು, ಅನಂತರದಲ್ಲಿ ಶಿವನ ಮಹಿಮೆಯಿಂದ ಶಿವನ ಆರಾಧಕನಾಗಿ ಬಟ್ಟಬೇಸಗೆಯಲ್ಲಿ ಮಳೆಯನ್ನು ಬರಿಸಿ ಪಾಳುಬಿದ್ದ ಕೆರೆಗಳನ್ನು ತುಂಬಿಸಿದನು. ಆ ಕೆರೆಗಳು ಶ್ರೇಷ್ಠವಾಗಿದ್ದವು. ಒಮ್ಮೆ ಸುಗ್ಗಲೂರಿನಲ್ಲಿದ್ದ ಕಾಚಾನಾಯಕನೆಂಬ ವಿಷ್ಣು ಭಕ್ತನು ಬೇಟೆಯಾಡಲೆಂದು ಮೊಲವನ್ನು ಬೆನ್ನಟ್ಟಿದನು. ಓಡುತ್ತಾ, ಓಡುತ್ತಾ ಅದು ಕೆರೆಯನ್ನು ಹಾರಿಕೊಳ್ಳುತ್ತದೆ. ಅದರ ಹಿಂದೆ ಇವನೂ ಹಾರುತ್ತಾನೆ. ನೀರಿನಲ್ಲಿ ಮುಳುಗಿ ಅದನ್ನು ಹಿಡಿಯಲು ಶ್ರೇಷ್ಠವಾದ ಶಿವಲಿಂಗವೇ ಸಿಗುತ್ತದೆ. ಅದನ್ನು ಧರಿಸಿ ಮಹಾಲಿಂಗದೇವಯ್ಯನೆಂದು ಹೆಸರಿಟ್ಟುಕೊಂಡು ಶಿವನ ಆರಾಧಕನಾಗುತ್ತಾನೆ.

ಹರಿಭಕ್ತನುಪ್ಪಲಿಕರಣ್ಣಪ್ಪನಿಗೆ ಶಿವಂ
ಹರಭಕ್ತನಾಗೆಂದೊಡಾಗಲಾ ಮುದ್ರೆಗಳ
ವಿರದೆ ಪಾದಕ್ಕಿಳಿಯ ಪರವಾದಿಗಳ ಕಂಡು ವಾದಮಂ ಮಾಡಲಾಗ
ಹರನೊಲವಿನಿಂ ಹಾಳುಗೆರೆಗಳು ಬೇಸಗೆಯೊ
ಳಿರದೆ ಮಳೆಯಂ ಬರಿಸಿ ತುಂಬಿಸಿ ಬಳಿಕ್ಕಲಾ
ಪರವಾದಿಗಳನ್ನೆಲ್ಲರಂ ಗೆಲ್ದು ಮರೆವನಣ್ಣಾ ಭಕ್ತನೊಲವಿಂದೆ (೩೪)

(ಚಂದ್ರಶೇಖರ್ ೧೯೭೯-೪೪೭)

ಉಪ್ಪಾರನಾದ ಅಣ್ಣಪ್ಪನು ತುಂಬಿಸಿದ ಕೆರೆಯ ನೀರಮುಂದೆ ಹರಿಭಕ್ತರನ್ನು ಹರಭಕ್ತರನ್ನಾಗಿ ಮಾಡುವ ಪವಾಡದ ಶಕ್ತಿಯನ್ನು ಪಡೆಯುತ್ತದೆ.

ವರಸುಗ್ಗಲೂರಲ್ಲಿ ಕಾಚನಾಯಕನೆನಿಪ
ಹರಿದಾಸನಿರುತೆ ಬೇಂಟೆಗೆ ಪೋಗಿ ಮೊಲದ ಕಂ
ಡಿರದೆ ಬೆಂಬತ್ತಲದು ಕೆರೆಯೊಳಗೆ ಬೀಳೆ ತಾನುಂ ಕೊಡೆ ಬಿದ್ದು ಹಿಡಿಯೆ
ಪರಮಶಿವಲಿಂಗವಾಗಿರೆ ಕಂಡು ತಾನದಂ
ಧರಿಸಿ ಮಹಲಿಂಗ ದೇವಯ್ಯನೆಂದಾಗ ತಾಂ
ಕರೆಸಿಕೊಳುತ ನಿಷ್ಠೆಯಿಂದಿರದೆ ಬಳಿಕಲಾ ಲಿಂಗದೊಳಗೊಂಡವೆರೆದನು
(೭೫) (ಅದೇ.೧೯೭೯:೪೪೮)

"ವಚನ ಸಂಪುಟ"ದಲ್ಲಿ
ಉಪ್ಪಾರಗುಡಿ ನಂದಿವಾಹನ ಸದ್ಯೋಜಾತನ ಬಾಗಿಲ ಮುಂದೆ
ಸಾರುತ್ತೈದಾವೆ, ನೋಡಾ, ಶ್ರುತಿಗಳೂ ನಾಲ್ಕು ವೇದವೂ ಹುಸಿಯದೆ
'ಭರ್ಗೋ ದೇವಸ್ಯ ಧೀಮಹಿ' ಎಂಬುದಾಗಿ
ಕೂಡಲಸಂಗನಲ್ಲಿದಿಲ್ಲೆಂದುದು ವೇದ"(ಕಲಬುರ್ಗಿ ಎಂ.ಎಂ.೧೯೯೩:೧೩೨)

ಇದಲ್ಲದೆ, ಉಪ್ಪಿನ ನೀರು ಮತ್ತು ಉಪ್ಪು ಉದಕಗಳ ಉಲ್ಲೇಖಗಳು ಉಪ್ಪಿನ ಶ್ರೇಷ್ಠತೆಯನ್ನು ಹೇಳುತ್ತವೆ.

ಉಪ್ಪಿನ ನೀರು ಹೆಪ್ಪ ಬಲಿದು ಘಟ್ಟಿಯಾದಂತೆ,
ಮತ್ತೆ ಅಪ್ಪುವ ಬೆರಸಿ ತನ್ನಂಗ ತಪ್ಪದಂತೆ,
ಸಕಲ ಶಾಕಂಗಳಲ್ಲಿ ತನ್ನಯ ಇರವ ತೋರಿ ಕುರುಹಿಂಗೆ ಬಾರದಂತೆ
ವಸ್ತು ಅಂಗದಲ್ಲಿ ತನ್ಮಯನಾಗಿ ಬೇಧಿಸಿ ಉಭಯ ನಾಮವಳಿದು,
ಸದಾಶಿವ ಮೂರ್ತಿ ಲಿಂಗದಲ್ಲಿ ಕೂಟಸ್ಥವಾರಿರಬೇಕು. (೧೬೫)
(ಕಲಬುರ್ಗಿ ಎಂ.ಎಂ. (ಸಂ.೬)(೧೯೯೩-೧೬೦)

ಉಪ್ಪು ಉದಕವ ಬೆರೆಸಿದಂತೆ
ವಾರಿಕಲ್ಲು ವಾರಿಯ ಬೆರೆಸಿದಂತೆ
ಕರ್ಪೂರ ಅಗ್ನಿಯ ಬೆರೆಸಿದಂತೆ
ಮನಲಿಂಗದಲ್ಲಿ ಲೀಯವಾಗಿಹುದೆ ಭಾವ ಲಿಂಗದ ಪೂಜೆ (ಅದೇ.೧೯೯೩-೧೭೩)

ಕಾವ್ಯಗಳಲ್ಲಿ ಬರುವ ಉಲ್ಲೇಖಗಳು ಈ ಜನಾಂಗ ಕರ್ನಾಟಕದಲ್ಲಿ ಶತಮಾನದಿಂದಲೂ ಇದ್ದರೆಂದು ತಿಳಿಸುತ್ತವೆ.

### ೨.೭ ಶಾಸನಗಳಲ್ಲಿ ಉಪ್ಪಾರರ ಉಲ್ಲೇಖಗಳು

ಒಂದು ಜನಾಂಗದ ಇತಿಹಾಸವನ್ನು ರೂಪಿಸುವಲ್ಲಿ ಶಾಸನಗಳು ಬಹು ಮುಖ್ಯ ಆಕರಗಳಾಗಿವೆ. ಉಪ್ಪಾರರಿಗೆ ಸಂಬಂಧಿಸಿದ ಶಾಸನಗಳು ಕರ್ನಾಟಕದ ಹಲವೆಡೆಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಹಿಂದೆ ಉಪ್ಪಾರರು ಹೇಗಿದ್ದರು? ಅವರ ಬದುಕು ಹೇಗಿತ್ತು? ಅವರ ವ್ಯಕ್ತಿತ್ವದ ಬಗೆಗೆ ಅಪೂರ್ವ ಮಾಹಿತಿ ನೀಡುವುದರ ಜೊತೆಗೆ ಗುಂಪಾಗಿ ಬದುಕಿ ಬಾಳಿದ್ದರು ಎನ್ನುವುದನ್ನು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ಉಪ್ಪಾರರು ವಾಸಿಸುವ ಸ್ಥಳಗಳಲ್ಲಿ ದೊರೆಯುವ ಶಾಸನಗಳನ್ನು ಅವಲೋಕಿಸಿದಾಗ ಈ ಜನಾಂಗವು ಇಲ್ಲಿ ಅನೇಕ ವರ್ಷಗಳಿಂದ ನೆಲೆಗೊಂಡಿರುವ ಸಾಧ್ಯತೆ ಕಂಡು ಬರುತ್ತದೆ.

ಕೆಲ ಶಾಸನಗಳಲ್ಲಿ "ಗೌಡ" "ಶೆಟ್ಟಿ" ಎಂಬ ಪದಗಳು ಪದವಿ (ವೃತ್ತಿ) ಸೂಚಕವಾಗಿ ಪ್ರಯೋಗವಾಗಿವೆ. "ಶೆಟ್ಟಿ" ಎಂಬ ಉಲ್ಲೇಖವು ಹೊಯ್ಸಳ ದೇವರ ತಾಮ್ರಶಾಸನದಲ್ಲಿ ಬರುವ "ವೀರ ಬಲ್ಲಾಳ ದೇವರು ಮಹದೇವರಿಗೆ ಉಪ್ಪಲಿಗ ಶೆಟ್ಟರು ಎಣ್ಣೆ ಮಜ್ಜನದ ಸೇವೆಯನ್ನು ಮೆಚ್ಚಿ ಈ ಬಗ್ಗೆ ತ್ರಾಮ ಶಾಸನವನ್ನು (ಶಾ.ಸಂ.೧೨೪೬ ಬರೆಸಿದ್ದನೆಂದು ವಿವರಣೆಗಳಿವೆ" (ಉಪ್ಪಾರ ಸಂಚಿಕೆ ೧೯೯೪ ) ದೈವಭಕ್ತರಾದ ಇವರಿಗೆ ಮಹಾದೇವನು ಒಲಿದು ಎಣ್ಣೆ ಮಜ್ಜನಕ್ಕಾಗಿ ನೇಮಿಸಿಕೊಂಡ ವಿವರಗಳು ಶ್ರೀರಂಗಪಟ್ಟಣದ ಆಧಿಪತ್ಯಕ್ಕೆ ಸೇರಿದ ತಾಮ್ರ ಶಾಸನದಲ್ಲಿ ಬರುತ್ತವೆ.* ಸರಗೂರಯ್ಯ ಮಹಾನ ಭಕ್ತ ಇವನ ಬಗೆಗೆ 'ಮಲೆಮಹಾದೇಶ್ವರ' ಜನಪದ ಮಾಹಾಕಾವ್ಯದಲ್ಲಿ ಬರುತ್ತದೆ. ಇದನ್ನು ಜನರು ಸರಗುರಯ್ಯನ 'ಕೌಟ್ಲು ' ಎಂದು ಕರೆಯುತ್ತಾರೆ ಇದರಲ್ಲಿ ಆತನ ಜೀವನದ ವೃತ್ತಾಂತಗಳು ಮತ್ತು ಮಹಾದೇಶ್ವರರಿಗೆ ಭಕ್ತರಾದ ಬಗೆಗಿನ ವಿವರಗಳಿವೆ.

" ನವಗ್ರಹ ದೇವಸ್ಥಾನದ ಮುಂದೆ ಹಿರಿಯಮ್ಮನ ಕಟ್ಟೆಗೆ ಒರಗಿಸಿರುವ ವೀರಗಲ್ಲಿನಲ್ಲಿ ಉಪ್ಪಲಿಗ ಸಿಂಗ ಮತ್ತು ಕೆರೆಹಳ್ಳಿಯ ವೀರೋಜನ ಮಗ ಕಾವೋಜನಿಗೆ ನಡೆದ ಕಾಳಗದ ಬಗೆಗೆ ಉಲ್ಲೇಖವಿದೆ. * ಹರದನಹಳ್ಳಿ ಊರಿನಲ್ಲಿ ರಾಮಕೃಷ್ಣ ಜೋಯಿಸರಲ್ಲಿದ್ದ ತ್ರಾಮಶಾಸನದಲ್ಲಿ ಭೂಮಿಯ ಅಳತೆಗಳನ್ನು ಹೇಳುವಾಗ ಆಯಾಯಾ ಸ್ಥಳದಲ್ಲಿ ಹೆಚ್ಚಾಗಿದ್ದ ಜನರ ಹೆಸರುಗಳನ್ನು ಉಲ್ಲೇಖಿಸಲಾಗಿದೆ "ಹೊಳೆಗೆ ಪಡವಲು ಉಪ್ಪಲಿಗ ಶಂಬು ತೋಟಕ್ಕೆ ಪಡುವಲು ನೆಟ್ಟಕ/ ಇದಕ್ಕೆ ಬಡಗಲು ಈ ಶಂಬು ತೋಟದ ತೆವರಿನಲ್ಲಿ ನೆಟ್ಟಕ/ ಇದಕ್ಕೆ ಬಡಗಲು ಯಲ್ಲೇ ಮಧ್ಯ" (ಎಪಿಗ್ರಾಫಿಯ ಕರ್ನಾಟಿಕ (ಸಂ.೪)೧೯೭೫-೧೮೨) ಹೊನ್ನೂರು ಕೆಲಕೆರೆ ಕಟ್ಟೆಯಲ್ಲಿ ಹೂತು ಹೋಗಿದ್ದ ಕಲ್ಲಿನಲ್ಲಿ * ಉಪ್ಪಲಿಗರಿಗೆ ಉಮ್ಮಳಿಯಾಗಿ ಬಿಟ್ಟ ಕೆರೆಗಳ ಬಗೆ ಉಲ್ಲೇಖವಿದೆ. "ಪುನರ್ವಸು ನಕ್ಷತ್ರದಲು ಹೊಸೂರಾದ ಯಿಳಚಲ ಹೊದವಿಚಲು ಬೈರಮಂಗಲದ ಅಶೇಷ ಮಹಾಜನಂಗಳು ..... ಬೆಳವಕ್ಕಳು ಉಪ್ಪಲಿಗರಿಗೆ ನಾರ ಬಿಟ್ಟ ಕೊಡಂಗೆ ಕುಡಿ ನೀರಕೆಣೆಯ ಬಳಗೆರೆಯ ಕೆಟ್ಟೆಲೆಯ ಗುಂಡಗೆ ಕೆಳಗೆ ಅಮ್ಮೆಳೆಯ ನಮ್ಮ ಸೀಮೆಯಿಂದ ಬಡಗಲು ದಾಸರ ಹೊಲಕ್ಕೆ ಪಡುವಲು ಕರುಮಾಣ ದೇವರ ರಾದಾನಕ್ಕೆ ತೆಂಕಲು ಯೀ ಚತುಸೀಮೆಯಿಂದೊಳಗಾದ ಮಣ್ಣನು ಮಹಾ ಜನಕ್ಕೆ ಬೆಸಗೈದಿರಲು ಬಿಟ್ಟಯ ಉಪ್ಪರಿಂಗೆ ಸಿದ್ದಾಯ ಸೇಸೆ...ಕೊ...ಚಂದ್ರಾರ್ಕತಾರಂ ಬರ ಬಿಟ್ಟರು ಮಂಗಳಮಹಾಶ್ರೀಶ್ರೀ"(ಅದೇ.೧೯೩೫:೨೮೨).

ಉಪ್ಪಾರರಿಗೂ ಮಠಗಳಿದ್ದವೂ ಎನ್ನುವುದಕ್ಕೆ ಬಾನಗವಾಡಿಯ ಮಾರಿಗುಡಿಯ ಮುಂದೆ ಸಲ್ಲಿಸಿರುವ ಕಲ್ಲಿನ ಮೇಲೆ ಉಲ್ಲೇಖಗಳು ಸಿಗುತ್ತವೆ. ಉಮ್ಮತ್ತೂರಿನ ಮಠದ ಸಿಂಹಾಸನದ ಅಧಿಪತಿಗಳಿಗೆ ಕೊಟ್ಟದಾನ ಸಾಧನ ಉಪ್ಪರಿಕೆಯ ಮಠ ಎಂದು ಬರುತ್ತದೆ. * ಉಮ್ಮತ್ತರು ಸಿಂಹಾಸನದ ಹಿರಿಯ ಒಡೆಯರು ಮತ್ತು ಕಾಳಮಲ್ಲಿಕಾರ್ಜುನ ದೇವರ ಪಾರುಪತ್ಯೆಕಾರರು ಸೇರಿ ಒಂದು ಬಾವಿಯನ್ನು ಮಾಡಿರುತ್ತಾರೆ. ಈ ಬಾವಿಯ

ಜೀರ್ಣೋದ್ಧಾರ ಕಾರ್ಯ ನಡೆಯುತ್ತದೆ. * ಉಪ್ಪಾರರು ಉಪ್ಪು ತಯಾರಿಸುವಾಗ ಆ ವೃತ್ತಿಗೆ "ಉಪ್ಪಿನ ಕಾವಲಿ" ಎಂಬ ಸುಂಕವನ್ನು ಕಟ್ಟುತ್ತಿದ್ದರು. ಈ ಬಗೆಗಿನ ಉಲ್ಲೇಖಗಳು ದಾಸನಪುರ ಶಾಸನದಲ್ಲಿ ಸಿಗುತ್ತವೆ. * ಈ ಉಪ್ಪಿನ ಕಾವಲಿ ಬಗ್ಗೆ ಸಿಂಗನಲ್ಲೂರು ಶಾಸನದಲ್ಲಿ ಬರುತ್ತದೆ. ಉಪ್ಪಾರರು ತಾವು ತಯಾರಿಸಿದ ಉಪ್ಪಿನ ಮಾರಾಟವನ್ನು ಎತ್ತು ಮತ್ತು ಎಮ್ಮೆಗಳ ಮೇಲೆ ಹೇರಿ ಸಾಗಿಸುತ್ತಿರುವುದು ಶಾಸನಗಳು ಉಲ್ಲೇಖಿಸುತ್ತವೆ. "ಎತ್ತಿನ ಉಪ್ಪಿನ (ಹುತ್ತಿ ಎಲೆ ಅಡಿಕೆ ವಿಳಗು ಇವಕೆ ವಿಸದ ಮೆಣಸು ಸೀರೆ ಉಪ್ಪಿನ ಕಾವಲಿ ನೂಲು ಇದಕೆ ಹೇರುಗೆ ತಾ|| ಕುದುರೆ ಭಂಡಿ ತೊತ್ತುಯಿ ಹಾಗದ ವೀಸದ ಎತ್ತಿನ ಹೇರು ಉಭಯ ರವ ಮಾರ್ಗ ಮಾರಾಟದ ಎತ್ತಿಗೆ ಹೊ. ೧ ಸಾವರ ಮ ಎಮೆಗೆ ತಾ ಗಾಣಕೆ ತಾ|| ಮೊಗ್ಗಕ್ಕೆ ತಾ ೧||ಶ್ರೀ||. (ಎಪಿಗ್ರಾಫಿಯ ಕರ್ನಾಟಿಕ ಸಂ.೪ ೧೯೭೫ ಪು. ೪೩೩).

ಉಪ್ಪಿನ ಮೊಳೆಗಳ ಬಗೆಗೆ ಕುಂತೂರು ಶಾಸನದಲ್ಲಿದೆ. 'ಯೆಳೆಬೇವಿನ ತಾಳಲ್ಲಿ ಬಡಗಮುಖವಾದ ಲಿಂಗಮುದ್ರೆ ಕಲ್ಲು ಅಲಿಂದಂ ಪಡುವ ಏಡದು ಉಪ್ಪಿನಮೊಳೆಯಲ್ಲಿ ಬಡಗಮು" (ಎಪಿಗ್ರಾಪಿಯ ಕರ್ನಾಟಿಕ (ಸಂ.೪) ೧೯೭೫ ೪೦೨) ಇಡೀ ಮೊಳೆಗಳ ಬಗೆಗೆ ಸಜ್ಜಲೂರು ಶಾಸನದಲ್ಲಿದೆ. * ಉಪ್ಪಾರರು ಉಪ್ಪುಮಾಡುವ ಕಾರ್ಯ ಜೊತೆಗೆ ವ್ಯವಸಾಯ ಮಾಡುತ್ತಿದ್ದಾರೆ ಎನ್ನುವುದನ್ನು ತಿರುಮಕೊಡಲು ನರಸೀಪುರದ ತಾಮ್ರ ಶಾಸನದಲ್ಲಿ ಬರುತ್ತದೆ." ಪಡು ಮುಖವಾಗಿ ನೆ ೧. ಇದಕ್ಕೆ ಯಾ| ಉಪ್ಪರಸನ ತೆಂಗಿನ ತೋಟಕ್ಕೆಶಾನ್ಯ ಪಡುವಿನು ನೆ ೧ ಇದಕ್ಕೆ ಮಾ| ಉಪ್ಪರಸನ ತೋಟದ ಮಾ| ಪಡುವ ಮುಖವಾನೆ ೧ ಇದಕ್ಕೆ ಮೂಡವತ್ತಿ ತೆಂಕ ನಡದು| ಕನ್ನಾರನಕಟ್ಟೆ" (ಎಪಿಗ್ರಾಫಿಯ ಕರ್ನಾಟಿಕ (ಸಂ.೫) ೧೯೭೬-೩೭೩) ನಾಗವಳ್ಳಿಯ ಹಲಗೆ ಮೇಲೆ ಉಪ್ಪಲಿಗ ಜೋಗಿ ಹುಂಡಿ ಎಂಬ ಊರಿನ ಉಲ್ಲೇಖ ಬರುತ್ತದೆ * ಉಪ್ಪಾರರ ಹೆಸರಿನ ಗುಡಿಗಳು ಇರುವುದು ಯಲೂಕೂರ ಹಲಿಗೆಯಲ್ಲಿ "ದಿ ಮಹಾ ಜನರಿಗೆ ಸಮಾಂಶವಾಗಿ ಸಲುವದು ಈ ಗ್ರಾಮಕ್ಕೆ ಕಲ್ಲ ನೆಟ್ಟ ವಿವದ ಗ್ರಾಮ ಮಧ್ಯದ ಉಪ್ಪರಿಗೆ ಬಸವನ ಗುಡಿಗೆ ಮೂಡಲು ಬಸರೀ ಮರಕ್ಕೆ ಮಾ| ಮೂಡಮುಖವಾಗಿ ನೆಟ್ಟ ಕಲ್ಲು ೧ ಇದಕ್ಕೆ ಈಶಾನ್ಯ | ದೇವ ಲಿಂಗನ ಪುರಕ್ಕೆ ಪ| ಇರುವ ಕಟ್ಟೀಯೇರಿಗೆ" (ಅದೇ. ೧೯೭೬ -೪೦೨)

ರಾಜನು ತೀರ್ಪುನೀಡುವಾಗ ಗೌಡ ಉಪ್ಪಾರ ಮತ್ತು ಇತರ ಕುಲದ ಮುಖಂಡರ ಸಾಕ್ಷಿ ಇಟ್ಟುಕೊಂಡು ತೀರ್ಪು ನೀಡುತ್ತಿದ್ದನು. ಇದನ್ನು ಹೆಮ್ಮರಗಾಲ ಶಾಸನ ತಿಳಿಸುತ್ತದೆ.* ಆ ಕಾಲದಲ್ಲಿ ರಾಜನ ಬೊಕ್ಕಸಕ್ಕೆ ಕಂದಾಯದ ರೂಪವಾಗಿ ಆಯಾ ಕಸುಬುದಾರರು ತಮ್ಮ ವೃತ್ತಿಯ ಮೇಲಿನ ತೆರಿಗೆಯನ್ನು ಕೊಡುತ್ತಿದ್ದರೆಂದು ಅವು ಗಾಣದ ಸುಂಕ , ಉಪ್ಪಲಿಗ ಕಾವಲಿ ಸುಂಕ, ಮಗ್ಗಿ ಸುಂಕ, ಮಾದಾರಿಕೆ ಸರಿಯಾದ ವರ್ತನೆ, ಇತ್ಯಾದಿ ಕಸುಬಿನ ಹೆಸರುಗಳಿಂದಲೇ ಕರೆಯುತ್ತಿದ್ದರು. ಈ ವಿವರಗಳು ತ್ರಿಯಂಬಕ ಪುರ ಶಾಸನದಲ್ಲಿ ದೊರಕುತ್ತವೆ.* ಇದೇ ರೀತಿಯ ಉಪ್ಪಿನ ಕಾವಲಿ ಎನ್ನುವ ಹೆಸರು ಹೊಣಕನಹಳ್ಳಿ

ಶಾಸನದಲ್ಲಿ "ರದೆರೆಗೆ ಕುಳಿದೆರೆಗೆ ಎಲೆಯ ತರುಗು ಮಾದಾರಿಕೆ ಉಪ್ಪಿನ ಕಾವಲಿ ಜೀಯರ ತೆರಿಗೆ ಸುಂಕ ಮೊದಲಾದ ಸಮಸ್ತ" (ಎ.ಕ. ಸಂ. ೩-೧೯೭೪-೨೫) ಇದೇ ಹೆಸರನ್ನು ತ್ರಿಯಂಬಕಪುರ ಶಾಸನದಲ್ಲಿ ಬರುತ್ತದೆ.* ಊರಿನ ಹೆಸರನ್ನು ಉಪ್ಪಿನ ಹಳ್ಳಿ ಶಾಸನದಲ್ಲಿ ಬರುತ್ತದೆ. ಇದರಿಂದ ಈ ಜನ ವರ್ಗ ಗುಂಪು ಗುಂಪಾಗಿ ಊರುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬದುಕುತ್ತಿದ್ದುದರಿಂದ ಈ ರೀತಿ ಜಾತಿಯ ಹೆಸರನ್ನೇ ಊರಿಗಿಟ್ಟಿರಬಹುದು "ಸ್ವಾಸ್ತಿ ಕಳಲೇಸೀ ಮೆಗೆ ಸಲುವ ಉಪ್ಪಿನ ಹಳ್ಳಿಯ ಗ್ರಾಮವನ್ನು ಶಿವಾರ್ಪಿತವಾಗಿ ಲಿಂಗಮುದ್ರೆಯ ಕಲ್ಲನ್ನು ಸ್ತಾ(ಪಿ) ತವನು ಮಾಡಿದ ಸಂಬಂಧ ಆ ಗ್ರಾಮದಲಿಹವಿಶಿಷ್ಟ ಸರ್ವಸ್ವಾಮ್ಯವನು ಆಚಂದ್ರಾರ್ಕವಾಗಿ ಧರ್ಮವಾಗಿ" (ಎಕ, ಸಂ. ೩-೧೯೭೪-೪೦೭) ಇದೇ ರೀತಿಯ ಊರಿನ ಹೆಸರನ್ನು ಹೆಜ್ಜಿಗೆ ಹಳ್ಳಿ ಶಾಸನದಲ್ಲಿ ಬಂದಿವೆ.*

ಇವುಗಳಲ್ಲದೆ ಈ ಕೆಳಗಿನ ಅನೇಕ ಶಾಸನಗಳಲ್ಲಿ ಬರುವ ವಿವರಗಳು ಈ ರೀತಿ ಇವೆ. "ಉಪ್ಪಾರರಿಗೆ ಕೊಟ್ಟ ಉಪ್ಪಿನ ಮೊಳೆ" ( ಎಕ XI ಮೊಳಕಾ ೬-೪-೧೫೫೧) ಮೊಳೆ ಎಂದರೆ ಉಪ್ಪಾರರು ವಾಸಿಸುವ ಸ್ಥಳಗಳು. ಅಲ್ಲಿಯೇ ಅವರು ಉಪ್ಪನ್ನು ತಯಾರಿಸುತ್ತಿದ್ದರು. "ಉಪ್ಪಿನ ಮೊಳೆಯ ರೊಕ್ಕಕ್ರಮ ಕಡ್ಡಾಯ ಬಿಟ್ಟ ಬಿರಾಡ ಕಾಣಿಕೆ" (ಎಕ. XI ಜಗಳೂ ೪೫ ೩.೨, 1526) ಉಪಿನ ಮೇಲೆ ಉಪ್ಪಾರರಿಗೆ ಕಡ್ಡಾಯವಾಗಿ ತೆರಿಗೆ ಹಾಕಿದ ವಿವರಗಳು ಈ ಶಾಸನದಿಂದ ತಿಳಿಸುತ್ತದೆ. "ಹೊಗೆದೆರ್ಕಿ ಮುಗ್ಗದೆರ್ಕಿ ಪಂಚಾಕಾರುಕ ಕಬ್ಬುನದ ಸುಂಕ ಬಿಲ್ಲಹದಿಕೆ ಬಾಲವಣ ಉಪುಲಿಕದೆರ್ಕ ಒಳಗಾದ" (ಎಕ. XVI ಚಿಕ್ಕನಾ. ೭೧-೨೯ 1330) "ಮಲಪನಾಯಕರು ಹಿರಿಯಾರ ಸೀಮೆಯ ಉಪ್ಪಲಿಕರಿಗೆ ಕೊಟ್ಟ" (ಎಕ. XI ಹಿರಿಯಾ ೪೧-೪ 1551) "ಉಪ್ಪಲಿಗ ಜೋಗಿ ಉಂಡಿಗೆ ಪಡವಲು" (ಎಕ III ತಿರುಮ ೬೨-೮೫೮ 1748) "ಉಪ್ಪಲಿಗರ ಕಾವಲಿ ಅಂತು ಯಾ ತೆರಿಗೆ ಸಹವಾಗಿ" (ಎಕ. XIV ಗುಂಡ್ಲು ಪೇ. ೧೨೯:೧೦೧ 1521) "ಹೊರಿನ ಹಳ್ಳದ ಆ ಉಪ್ಪಿನ ಮೊಳೆ ಅಳಿಗೆರೆಗಳಲ್ಲಿ" (ಎಕ. III ಮಳವ ೧೨೧-೧೬೫ 1474) "ಉಪ್ಪಿನಾಗರ ಗೇಣಿಯರ ವರುಷ ಕಂಬಹ ರೊಕ್ಕಗ ೬"(ಸೌ ಇ ಇ IX ii, ೪೦೯-೨೨-1365) "ಕಾಡಾರಂಭಸುವರ್ನಾದಾಯವಾರಕಾರು ಸೇಸೆ ಸಿದ್ದಾಯ ಉಪ್ಪಿನ ಮೋಳೆ ದಣಾಯಕ ಸಾಮ್ಯಾ" (ಸೌ ಇ ಇ IX ii, ೪೪೦-೨೪-1419) "ಉಪಾ(ಪ್ಪಾ)ವಿರ ಮೊಳೆಯ ರೊಕ ಸಹ ಬ್ರಹ್ಮಸಮುದ್ರಗ್ರಾಮ" (ಸೌ ಇ ಇ IV ೨೫೫-೫೫ -1513) "ಉಪ್ಪಿನ ಮೊಳೆಯ ಚಾಡಗೊಂಡನ ಗದ್ದೆಯಲ್ಲಿ" ಸೌ ಇ ಇ IV ೨೫೪ -೫೪-1513) " ಕಬ್ಬಿಣದ ಪೊಂಮುಚರಾದಾಯ ಹುಲ್ಲುಹಣಾ ಪುಪ್ಪಿನ ಮೋಳೆಯಾಚಲ ಪುರು"(ಮೈಆರಿ. ೧೯೩೬ ೪೨-೬೪ -1825). "ವೃತ್ತಿಯಿಂದ ಕ್ಷಾರಕಾರ, ಲವಣಕಾರ, ಉಪ್ಪಾರ, ಬೆಲ್ದಾರ, ಚುನಾರ್, ಗಾವಡಿ, ಗೌಂಡಿ, ಕಲ್ಲುಕುಟಿಗ ಉಪ್ಪಾರ, ಲೋನಾರಿ, ಮೇಲು ಸಕ್ಕರೆಯವರು, ಕೆರೆ ಬಂಡಿಯವರು, ನಾಮದ ಉಪ್ಪಾರ, ಪಡಿಲ್, ಪಾಡಿ, ಸಗರ ಸುಣ್ಣಗಾರ ಉಪ್ಪಾರ, ಉಪ್ಪಲಿಗ, ಉಪ್ಪಲಿಗಶೆಟ್ಟಿ, ಉಪ್ಪಲಿಯನ್, ಉಪ್ಪೋರ, ಯಕ್ಕ ಯಕ್ಕಲಿ ಎಂದು ಶಾಸನ ಪುರಾಣ ಇತಿಹಾಸಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ". (ಎಚ್ಚೆತ್ತ ಉಪ್ಪಾರ 1994 : I).

### ೨-೮. ಕೈಫಿಯತ್ತುಗಳಲ್ಲಿ ಉಪ್ಪಾರರ ಉಲ್ಲೇಖಗಳು

ಜನಾಂಗಗಳ ಇತಿಹಾಸವನ್ನು ರೂಪಿಸುವಲ್ಲಿ ಶಾಸನಗಳ ಪಾತ್ರ ಎಷ್ಟು ಮುಖ್ಯವೋ ಅಷ್ಟೇ ಪಾತ್ರವನ್ನು ಕೈಫಿಯತ್ತುಗಳು ವಹಿಸುತ್ತವೆ. ಉಪ್ಪಾರರಿಗೆ ಸಂಬಂಧಪಟ್ಟ ಕೈಫಿಯತ್ತುಗಳು ಕರ್ನಾಟಕದ ಕೆಲಭಾಗಗಳಲ್ಲಿ ಕಂಡುಬರುತ್ತವೆ. ಇವು ಅಂದಿನ ಉಪ್ಪಾರರ ಬಗೆಗೆ, ಅವರ ಬದುಕಿನ ಬಗೆಗೆ, ವ್ಯಕ್ತಿತ್ವದ ಬಗೆಗೆ ಮಹತ್ವಪೂರ್ಣ ಮಾಹಿತಿ ಒದಗಿಸುತ್ತವೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದ ಉಪ್ಪಾರರು ನೆಲೆಸಿರುವ ಸ್ಥಳಗಳಿಗೆ ಸಂಬಂಧಿಸಿದ ಉಪ್ಪಾರರ ಕೈಫಿಯತ್ತುಗಳನ್ನು ಅವಲೋಕಿಸಿದಾಗ ಈ ಜನರು ಈ ನೆಲದಲ್ಲಿ ಹಲವಾರು ವರ್ಷಗಳಿಂದ ಬದುಕಿ ಬಾಳಿದ್ದಾರೆ ಎಂದು ತಿಳಿದುಬರುತ್ತದೆ.

ಕೆಲವೊಂದು ಕೈಫಿಯತ್ತುಗಳಲ್ಲಿ 'ಗವುಡ' ಎಂಬ ಶಬ್ದ ವೃತ್ತಿಸೂಚಕವಾಗಿಯೂ, ಗೌರವ ಹುದ್ದೆ ಎಂದೂ ಬಳಕೆಯಾಗಿದೆ. ಇದಕ್ಕೆ ಉದಾಹರಣೆಯಾಗಿ ಮೇಲುಸಾಖರೆ ಜಾತಿರಿವಾಜು ಕೈಫಿಯತ್ತಿನಲ್ಲಿ ಬರುವ "ಭಾವ ಸಂವತ್ಸರದ ನಿಜ ಭಾದ್ರಪದ ಶು ೧೦ ಲ್ಲು ಬನವಾಸಿ ಸೋದೆ ಸೀಮೆ ವಳಗಳ ಮೇಲು ಸಕ್ಕರೆ ಜಾತಿಯವರು ಗವುಡ ಬುಳ್ಳಂಣೂರ ಮದುಲಿಂಗಣ್ಣ ವುಪ್ಪಾರ ಮಧುಲಿಂಗ ಮರಿಯ ಕೆರೆಮಲ್ಲು, ಗುತ್ತ್ಯಾ ಹುಚ್ಚನಾಯಕ, ಸೂರಬದ ಎಲ್ಲ ಮುಂತಾದ ಕುಲ ಸಮಸ್ತರು ಬರೆಸಿಕೊಟ್ಟ ಜಾತಿ ರಿವಾಜು ಕೈಫಿಯತ್ತು" (ಕಲಬುರ್ಗಿ ಎಂ.ಎಂ. 1994-593) ಉಪ್ಪಾರರಲ್ಲಿ ಹೆಸರಿನ ಮುಂದೆ ಅವರು ಆ ಕಾಲದಲ್ಲಿ ಮಾಡುವ ಕೆಲಸಗಳ ಬಗೆಗೆ ಸೂಚಿಸುವ ಗೌಡ ಮತ್ತು ಶೆಟ್ಟಿ ಕಂಡು ಬಂದಿದೆ. ಈಗಲೂ ಉಪ್ಪಾರ ಗೌಡ, ಉಪ್ಪಲಿಗ ಶೆಟ್ಟಿ ಎನ್ನುವ ಜಾತಿ ಸೂಚಕವಾದ ಪದಗಳನ್ನು ಕಾಣಬಹುದಾಗಿದೆ. ಮೇಲಿನ ಕೈಫಿಯತ್ತುಗಳನ್ನು ನೋಡಿದರೆ ಉಪ್ಪಾರರು ಊರಿನಲ್ಲಿ ನ್ಯಾಯ ಮಾಡುವಾಗ ಭೂಮಿಯನ್ನು ದತ್ತಿಕೊಡುವಾಗ ಪ್ರಮುಖ ಸಾಕ್ಷಿಗಳಲ್ಲಿ ಒಬ್ಬರಾಗಿರುತ್ತಿರುವುದು ಸ್ಪಷ್ಟವಾಗುತ್ತದೆ. ಅಲ್ಲಿ ಬರುವ 'ಗವುಡ' ಅವರ ಸ್ಥಾನಸೂಚಕವಾಗಿ ಅಭಿವ್ಯಕ್ತಗೊಂಡಿರುವುದು ಸ್ಪಷ್ಟವಾಗುತ್ತದೆ. ಈ ರೀತಿ ವೃತ್ತಿ ಅಥವಾ ಪದವಿಗಳು ಈ ಜಾತಿಯವರಿಗೂ ಇದ್ದವೆಂದು ತಿಳಿಯುತ್ತವೆ.

ಅನೇಕ ಪುರಾಣ ಕಥೆಗಳು ಉಪ್ಪಾರರ ಮೇಲೆ ಇರುವುದು ಕಂಡು ಬರುತ್ತವೆ. ಅಂತಹ ಎರಡು ಕಥೆಗಳನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ. ಒಮ್ಮೆ ಪರಮೇಶ್ವರನು ಉಪ್ಪು ಆಗಬೇಕಿಲ್ಲ ಎಂದು ಯೋಚಿಸಿ, ಅವನ ಶರೀರದ ಬೆವರಿನಿಂದ ಒಂದು ಉಂಡೆ ಮಾಡಿ ಇಡುತ್ತಾನೆ. ಆ ಉಂಡೆಯಿಂದ ಒಬ್ಬ ಹುಟ್ಟುತ್ತಾನೆ. ಅವನು ಪರಮೇಶ್ವರನ ಮುಂದೆ ಕೈಜೋಡಿಸಿ ಎನು ಆಗಬೇಕು ಅಪ್ಪಣೆ ಮಾಡಿ ಸ್ವಾಮಿ ಎಂದು ಕೇಳಿದಾಗ ಪರಮೇಶ್ವರನು ಉಪ್ಪನ್ನು ಮಾಡು ಎಂದು ಹೇಳಿದನಂತೆ. ಅದರ ಜೊತೆಗೆ ಉಪ್ಪು ತೆಗೆಯುವ ಕಾವಲಿ ಮತ್ತು ಕರಕಡಿಯನ್ನು ಕೊಟ್ಟನಂತೆ. ಇಷ್ಟನ್ನು ಪಡೆದ ಆ ವ್ಯಕ್ತಿ ಒಂದು ಹೆಣ್ಣುಬೇಕು ಎಂದು ಬೇಡಿದಾಗ ಒಬ್ಬ

ಹೆಣ್ಣನ್ನು ಕರುಣಿಸಿದನಂತೆ. ಅದರಂತೆ ಉಪ್ಪಾರನು ಚವಳು ಮಣ್ಣಿನಿಂದ ಉಪ್ಪನ್ನು ತಯಾರಿಸಿ, ಅದನ್ನು ಮೂಗಿನಲ್ಲಿ ರುಚಿ ನೋಡಿದ್ದರಿಂದ ಮೂಗಿನಲ್ಲಿ ಸುರಿಯುವ 'ಗೊಣ್ಣೆ ' ಉಪ್ಪಾಗಿದೆ ಎಂದು ಹೇಳುತ್ತಾರೆ. ಉಪ್ಪು ತಯಾರಿಸುವ ವಿಧಾನವನ್ನು ಈ ರೀತಿಯಾಗಿ ವಿವರಿಸಲಾಗಿದೆ. "ಚವಳ ಮಣ್ಣು ತಂದು ಆ ಮಣ್ಣು ಮೂಗಿನಲ್ಲಿ ರುಚಿ ನೋಡಿ ಆ ಮಣ್ಣುಯೆಲ್ಲ ತಂದೂರಿ ಆ ಮೇಲೆ...... ಕತ್ತಿ ಕೆಳಗೆ ಮಡಕೆ ಹೂಳಿ ಆ ಸಾರದ ನೀರು ಮಡಕೆಗೆ ಇಳಿಸಿ, ಆ ನೀರು ತೆಗೆದುಕೊಂಡು ಕಾವಲಿಗೆ ಹುಯದು, ಸುಂಠಿ, ಹಿಪ್ಪಲಿ, ಉಪ್ಪು ಆದಂಥಾ ೩ ತೆಗೆದು ಸ್ವಾಮಿಗೆ ೫೨ ಹೆಣ್ಣಾಗಿ ವಪ್ಪಿಸಿ "(ಅದೇ 1994-567) ಉಪ್ಪಾರನ ತನಗೆ ಒಪ್ಪಿಸಿದ ಹೆಣ್ಣಿನ ಬಗೆಗೆ ದೂರು ಅಂತಹ ಹೆಂಡತಿಯ ಅವಶ್ಯಕತೆ ತನಗಿಲ್ಲವೆಂದೂ, ಅವಳ ಬದಲು ಕುಂಚು ತಲೆಯವಳು ಬೇಕೆಂದು ಪರಮೇಶ್ವರನಲ್ಲಿ ಬೇಡಿಕೊಳ್ಳುತ್ತಾನೆ. "ನನಗೆ ಯೀ ಮಿಂಡು (ಅಥವಾ ಬಡು) ತಲೆಯವಳು ಬೇಡ, ಕುಂಚು ತಲೆಯವಳ ಅಪ್ಪಣೆ ಕೊಡಬೇಕು" ಯೆಂದು ಕೇಳಿಕೊಂಡಲ್ಲಿ, ಸ್ವಾಮಿ ಕುಂಚು ತಲೆಯವಳ ಅಪ್ಪಣೆ ಕೊಟ್ಟು ಕಳುಹಿಸಿದಲ್ಲಿ, ಅವಳನ ಕರಕೊಂಡು ಬಂದು ಎಲ್ಲಿ ಉಪ್ಪು ಮಾಡಿಕೊಂಡು ಯಿದ್ದುದ್ದರಿಂದ 'ಉಪ್ಪಲಿಗರು' ಎಂದು ಹೆಸ್ರು ಬಂತು" * ಉಪ್ಪಲಿಗರ ಕೈಫಿಯತ್ತು ಯಾಗಿ (ಅದೇ 1994-567).

ಉಪ್ಪಾರರು ವ್ಯಾಪಾರಿಗಳು ಆಗಿದ್ದರು ಎನ್ನುವುದಕ್ಕೆ ಇಲ್ಲಿ ಉಲ್ಲೇಖಗಳು ಸಿಗುತ್ತವೆ. ತ್ರೇತಾಯುಗದಲ್ಲಿ ಬ್ರಹ್ಮ ಕ್ಷತ್ರಿಯ, ವೈಶ್ಯ ಶೂದ್ರ ನಾಲ್ಕು ಜಾತಿಗಳು ಉದಯಿಸಿದಾಗ ಪ್ರಪಂಚದಲ್ಲಿ ಕ್ರಯ ಮತ್ತು ವಿಕ್ರಯ ಮಾಡಲು ವರ್ತಕರು ಇರಲಿಲ್ಲವಂತೆ. ಈಶ್ವರನ ಬಳಿಯಲ್ಲಿ ವೈಶ್ಯಯರು ಇದ್ದರಂತೆ. ಆಗ ಈಶ್ವರನು ವೈಶ್ಯರಿಗೆ ಹೀಗೆ ಹೇಳಿದನಂತೆ "ನೀವು ಭೂಲೋಕಕ್ಕೆ ಹೋಗಿ ವ್ಯಪಾರದಲ್ಲಿ ತೊಡಗಿರಿ" ಎಂದನಂತೆ. ಆಗ ವೈಶ್ಯರು "ಸ್ವಾಮಿ ನಿಮ್ಮನ್ನು ಅಗಲಿ ನಾವು ಬದುಕುವುದಿಲ್ಲ" ಎಂದರು. ಅದಕ್ಕೆ ಈಶ್ವರನು ನಗರೇಶ್ವರನಾಗಿ ಹುಟ್ಟುತ್ತೇನೆ ಎಂದು ಮಾತು ಕೊಟ್ಟನಂತೆ. ಹಾಗೆಯೇ ವಿಷ್ಣುವು ಜನಾರ್ದನನಾಗಿಯೂ, ಬ್ರಹ್ಮನು ಕುಲಪುರೋಹಿತನಾಗಿಯೂ ಜನಿಸಿದರಂತೆ.

ಪೆನಗೊಂಡ ಪಟ್ಟಣವನ್ನು ಜನಾರ್ದನ ದೊರೆ ಆಳುತ್ತಿದ್ದನು. ಒಮ್ಮೆ ಜನಾರ್ದನನ್ನು ಶೆಟ್ಟಿಗಳ ಊರಿಗೆ ಬಂದಾಗ ಕೊಮೆಟಿಗ ಕಸುಬ ಶೆಟ್ಟಿ ಮಗಳು ಆರತಿ ಎತ್ತಿ ಸ್ವಾಗತಿಸಿದಳು. ಇವಳನ್ನು ಜನಾರ್ದನನು ಮೋಹಿಸಿ ಮದುವೆಯಾಗುತ್ತಾನೆ. ವಿಷ್ಣುವೇ ಶೆಟ್ಟಿಯ ಮಗಳ ಮದುವೆಯಾಗುವುದನ್ನು ಈ ಪುರಾಣ ತಿಳಿಸುತ್ತದೆ.

ಪ್ರತಿಯೊಂದು ಜಾತಿಗೂ ಅದರದೆ ಆದ ರೀತಿರಿವಾಜುಗಳು ಇರುತ್ತವೆ. ಅಂತಹ ರೀತಿ ರಿವಾಜುಗಳು ಬರವಣಿಗೆಯಲ್ಲಿಯೂ ಮೌಖಿಕವಾಗಿಯೂ ಸಿಗುತ್ತವೆ. ಉಪ್ಪಾರರಲ್ಲಿ ಸಿಗುವ ಕೆಲವು ರೀತಿ ರಿವಾಜುಗಳು ಈ ರೀತಿ ಇವೆ.

ಮಗು ಜನಿಸಿದರೆ ಹತ್ತು ದಿನ  ಹೊಲೆ ಇರುತ್ತದೆ; ಅಂದರೆ ಸೂತಕವಿರುತ್ತದೆ. ಹನ್ನೆರಡನೇ ದಿನ ಮನೆಯನ್ನು ಸಾರಿಸಿಕೊಂಡು ಆರಬೆಯ ದೀಪ ಹಚ್ಚಿ ಕುಲಮರ್ಯಾದೆಯ ಪ್ರಕಾರ ಆಚರಿಸಬೇಕು. ಇಪ್ಪತ್ತು ದಿವಸದ ನಂತರ ಹೊಳೆಯ ಪೂಜೆಯನ್ನು ಸಾಂಪ್ರದಾಯಿಕವಾಗಿ ಮಾಡಬೇಕಾಗುತ್ತದೆ. ಪೂಜೆಯಲ್ಲಿ ಕಾಯಿ, ಹಣ್ಣು  ವಿಳ್ಯೆ ಇರಲೇಬೇಕು. ಪೂಜೆಯ ಅನಂತರ ಒಂದು ಕೊಡ ನೀರನ್ನು ಮನೆಗೆ ತರಬೇಕು.

ಮದುವೆಯಲ್ಲಿ ಪ್ರಮುಖವಾಗಿ ಬೆಡಗನ್ನು ನೋಡುವುದು ರೂಢಿ. ಒಂದೇ ಬೆಡಗಿನವರು ಮದುವೆ ಮಾಡಿಕೊಳ್ಳುವುದಿಲ್ಲ. ಅವರು ಅಣ್ಣ ತಮ್ಮಂದಿರಾಗುತ್ತಾರೆ. ಒಂದೇ ರಕ್ತ ಸಂಬಂಧಿಕರಾಗಿರುತ್ತಾರೆ. ಇಲ್ಲಿ ೫ ಬೆಡಗನ್ನು ಗುರುತಿಸಲಾಗಿದೆ.

೧. ಶಲ್ಕಲೋರು

೨. ಹಲುನ್ಯೋರು

೩. ತುರುಬೊನಾರು

೪. ರಾಯದುರ್ಗದೋರು

೫. ಜಢ್ಯನೋರು

೬. ಜುಮಲಾ

ಇವುಗಳಲ್ಲದೇ ಉಪ್ಪಾರರಲ್ಲಿ ನೂರಾರು ಬೆಡಗುಗಳಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಮೇಲು ಕೈರೆಯವರೇ ಉಪ್ಪಾರರಲ್ಲಿ ಶ್ರೇಷ್ಠರಾದವರು. ಈ ಕಾರಣಕ್ಕಾಗಿ ಅಲ್ಲಿಂದ ಹೆಣ್ಣು ತಂದರೆ, ಕೊಟ್ಟರೆ, ತೆಗೆಕೊಡವ ಪದ್ಧತಿ ಇದೆ. ಮದುವೆ ಮಾಡುವಾಗ ಹೆಣ್ಣಿನ ಮನೆಯಿಂದ ಐದು ಜನ ಮುತ್ತೈದೆಯರು ಅಗತ್ಯವಾಗಿ ಇರಬೇಕು. ಅವರ ಸಂಮುಖದಲ್ಲಿಯೇ ಮದುವೆಯ ಸಂಪ್ರದಾಯಗಳು ನಡೆಯಬೇಕು ಹೀಗೆ ಆಗದೇ ಮದುವೆ ನಿಶಿದ್ಧ ಮದುವೆಯ ಅನಂತರ ಮೆರವಣಿಗೆ ಮಾಡಲೇಬೇಕು. ಇದರ ಜೊತೆಗೆ ಶಿವಾಯ ಕಳಸ, ಕನ್ನಡಿ ಬಟ್ಟಲುಗಳು, ಇರುತ್ತವೆ. ಮತ್ತೆ ಹಾಲುಗಂಬದ ಮುತ್ತೈದೇರೂ ಇರುತ್ತಾರೆ. ಇವರು ಗಂಡಿನ ಮನೆ ಮತ್ತು ಹೆಣ್ಣಿನ ಮನೆಯಲ್ಲಿ ಇರುತ್ತಾರೆ. ಇವರಲ್ಲಿ ವೀಳ್ಯೆ ಕೊಡುವ ಪದ್ಧತಿ ಇದೆ.

ಮದುವೆ ಮಾಡಿಸುವ ಬಗೆಗೆ, ಮೂಹೂರ್ತ ಮಾಡಿಸುವ ಬಗೆಗೆ, ಪುರೋಹಿತರನ್ನು ಕೇಳುತ್ತಾರೆ. ಧಾರೆ ದಿವಸವನ್ನು ಅವರಿಂದಲೇ ಗೊತ್ತು ಮಾಡಿಕೊಂಡು ಅವರಿಂದಲೇ ಶಾಸ್ತ್ರಗಳನ್ನು ಮಾಡಿಸುತ್ತಾರೆ. "ಸದರ ಯೀ ಲಗ್ನಾ ಮಾಡಿಸುವ ಬಗ್ಗೆ ಧಾರೆ ಜೋಯಿಸರಲ್ಲಿ ಲಗ್ನಾ ಕಟ್ಟಿಸಬೇಕು. ಆ ಬಳಿಕ ಲಗ್ನದ ದಿವಸ ಧಾರೆ.

ರಾಮಜೋಯಿಸರ ಸಮತು ಬ್ರಾಷ್ಮಣನ ಸಹಾ ಕರಕೊಂಡು ಬಂದು ಲಗ್ನಾಮಾಡಿಸಬೇಕು" (ಅದೇ 1994-594).

ಉಪ್ಪಾರರಲ್ಲಿ ಪ್ರಚಲಿತವಿರುವ ಆಚರಣೆಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. "ಬಾಳೆಹಣ್ಣು & ವಿಳ್ಯೆ ಅಡಿಕೆ ಸಹಾ ೧ ಟಿ ಲ೬ಗಣೇಶ್ವರ ಪೂಜೆ ಬಗ್ಗೆ ಲ೬ ಗಿಂಡಿ ಪೂಜೆ ಬಗ್ಗೆ ಟ೧ ಚರಕ ಪೂಜೆ ಬಗ್ಗೆ ಲ೬ ಪಾದಪೂಜೆ ಬಗ್ಗೆ ಲ೬ ಮಂಗಳ ಸೂತ್ರ ಕಟ್ಟುವ ಬಗ್ಗೆ ಯಿದರ ಶಿವಾಯೆ ದೇವರ ದಕ್ಷಿಣೆ ಲ೩ ಮಧುಕೇಶ್ವರ ದೇವರಿಗೆ, ಲ೩ ಅಮ್ಮಾನವರಿಗೆ ಲ೨ ಗಣಪತಿಗೆ ಲ೩ ನರಸಿಂಹದೇವರಿಗೆ ಟಂ1 ಬ್ರಾಹ್ಮಣ ದಕ್ಷಿಣೆ ಬಗ್ಗೆ " (ಅದೇ 1994-595) ಉಪ್ಪಾರರು ಕೆಳ ಜಾತಿಯರ ಮನೆಯಲ್ಲಿ ಊಟ ಮಾಡುವಂತಿಲ್ಲ, ಹಾಗೆ ಉಲ್ಲಂಘಿಸಿದರೆ ಅಂಥವರಿಗೆ ಶಿಕ್ಷೆ ವಿಧಿಸಲಾಗುವುದು. ಹಜಾಮರನ್ನು ಕರೆಯಿಸಿ ತಲೆ ಬೋಳಿಸಲಾಗುವುದು. ಉಗುರು ತೆಗೆದು ನಾಲಿಗೆಯನ್ನು ಕತ್ತರಿಸಿ ಗುಡಿಸಲನ್ನು ಕಟ್ಟಿ ಅದರೊಳಗೆ ಪ್ರವೇಶ ಮಾಡಿದ ತಕ್ಷಣ ಬೆಂಕಿ ಹಚ್ಚಬೇಕು. ಅನಂತರ ಆ ವ್ಯಕ್ತಿ ಹೊಳೆಯಲ್ಲಿ ಮುಳುಗಿ ಎದ್ದನಂತರ ಅವನ ಮೇಲೆ ತೀರ್ಥವನ್ನು ಚುಮುಕಿಸಿದರೆ ಆತ ಮಾಡಿದ ಪಾಪ ಪರಿಹಾರವಾಗುತ್ತದೆ. ಹೀಗೆ ತಪ್ಪನ್ನು ಒಪ್ಪಿಕೊಂಡವನು ಜಾತಿಯಲ್ಲಿ ಹಿರಿಯರಿಗೆ ಸದಾ ಗೌರವಿಸಬೇಕು. ಅವರು ಎದುರಾದರೆ ನಮಸ್ಕಾರ ಮಾಡಬೇಕು ಎನ್ನುವ ಉಲ್ಲೇಖಗಳು ದೊರಕುತ್ತವೆ.

ಜಾತಿಗೆ ವಿರುದ್ಧವಾಗಿ ಏನಾದರೂ ತಪ್ಪು ಮಾಡಿದರೆ ಅಂಥವರನ್ನು ಪಂಪಾಪತಿ ಕಟ್ಟೆ ಹತ್ತಿಸಿ ಪಂಚರ ಎದುರು ನಿಲ್ಲಿಸಲಾಗುವುದು. ತಪ್ಪಿತಸ್ಥನಿಗೆ ದಂಡ ವಿಧಿಸಲಾಗುವುದು. ದಂಡಕ್ಕೆ ಗುರಿಯಾದ ವ್ಯಕ್ತಿಯಿಂದ ದಂಡವನ್ನು ತೆಗೆದುಕೊಂಡು ಅದರಲ್ಲಿ ಅರ್ಧಭಾಗವನ್ನು ಗುರುಮನೆಗೆ ಕಳುಹಿಸಿಕೊಡುತ್ತಿದ್ದರು. ಉಳಿದ ಅರ್ಧಭಾಗವನ್ನು ಕುಲದವರು ಸೇರಿ ಒಂದು ಔತಣಕೂಟವನ್ನು ಏರ್ಪಡಿಸಿ, ಸಾಮೂಹಿಕವಾಗಿ ಊಟಮಾಡುತ್ತಾರೆ. ಈ ರೀತಿಯಾಗಿ ಉಪ್ಪಾರರ ಕುಲದಲ್ಲಿ ಜಾತಿ ರಿವಾಜು ಇರುತ್ತದೆ. ಹೀಗೆ ದಕ್ಷಿಣ ಕರ್ನಾಟಕದಲ್ಲಿ ಉಪ್ಪಾರರು ನೆಲಸಿರುವ ಪ್ರದೇಶಗಳಲ್ಲಿ ಅನೇಕ ಕೈಫಿಯತ್ತುಗಳು ಸಿಗುತ್ತವೆ. ಇವುಗಳಲ್ಲಿ ದಾನ, ದೇವಾಲಯ ನಿರ್ಮಾಣ, ಪ್ರಶಸ್ತಿ, ಸಾಕ್ಷಿ ಮುಂತಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಜನಾಂಗದ ಕೊಡುಗೆಗಳನ್ನು ತಿಳಿಸಲು ನೆರವಾಗಿವೆ. ಉಪ್ಪಾರರಲ್ಲಿ ಅನೇಕ ವೀರರ ತ್ಯಾಗದ, ಔದಾರ್ಯದ ಪೌರುಷದ ಸಂಗತಿಗಳು ಘಟಿಸಿ ಹೋಗಿವೆ. ಈ ಎಲ್ಲವೂ ಕೈಫಿಯತ್ತುಗಳಲ್ಲಿ ಲಭ್ಯವಿಲ್ಲ. ಸಿಕ್ಕಿರುವ ದಾಖಲೆಗಳ ಹಿನ್ನೆಲೆಯನ್ನು ಇಟ್ಟಿಕೊಂಡು ಅಂದಿನ ಇವರ ಜೀವನಕ್ರಮವನ್ನು ತಿಳಿದುಕೊಳ್ಳಬಹುದು. ದಕ್ಷಿಣ ಕರ್ನಾಟಕವು ಇಂಥ ಒಂದು ಭವ್ಯವಾದ ಪರಂಪರೆಯನ್ನು ಉಪ್ಪಾರ ಜನಾಂಗದ ಮೇಲೆ ಪ್ರಭಾವ ಬೀರಿದ ಕಾರಣ ಇದು ತನ್ನ ವ್ಯಕ್ತಿತ್ವ ಮತ್ತು ಅಭಿರುಚಿಗಳನ್ನು ಸೃಷ್ಟಿಸಿಕೊಂಡು ತನ್ನದೇ ಆದ ವೈಶಿಷ್ಟತೆಯನ್ನು ಪಡೆದುಕೊಂಡಿದೆ.

ಉಪ್ಪಾರರ ಪ್ರತ್ಯೇಕತೆ ಜೀವಂತವಾಗಿ ಉಳಿದುಕೊಂಡು ಬಂದಿರುವುದು ಅವರ ಸಂಪ್ರದಾಯಗಳಲ್ಲಿ ಮಾತ್ರ, ಇಂಥ ಸಂಪ್ರದಾಯಗಳು ಆಯಾ ಜನಾಂಗದ ಬದುಕನ್ನು ನಿರ್ದೇಶಿಸುತ್ತವೆ.

# ಅಧ್ಯಾಯ-೩

## ಸಾಮಾಜಿಕ ಬದುಕು

೩.೧. ಕುಟುಂಬ ಪದ್ಧತಿ

೩.೨. ಒಳಪಂಗಡಗಳು

೩.೩. ಮನೆಗಳ ನಿರ್ಮಾಣ

೩.೪. ನ್ಯಾಯ ಪದ್ಧತಿ

೩.೪.೧. ಶಿಕ್ಷೆಗಳು

೩.೫. ಜಾತಿಗೆ ಸೇರಿಸಿಕೊಳ್ಳುವುದು

೩.೬. ಆಹಾರ ಪದ್ಧತಿ

೩.೭. ಉಡುಗೆ-ತೊಡುಗೆ

೩.೭.೧. ನಿತ್ಯ ಉಡುಗೆ

೩.೮. ವೈದ್ಯ

೩.೮.೧. ಮಾನವ

೩.೮.೨. ಪ್ರಾಣಿ

೩.೯. ಬೇಟೆ

೩.೯.೧. ಪಕ್ಷಿ

೩.೯.೨. ಪ್ರಾಣಿ

೩.೯.೩. ಜಲಚರ

ಅಗತ್ಯವಾಗಿ ಬೇಕಾದ ಎಲ್ಲ ವ್ಯವಸ್ಥೆ ಇರುವ ಮನೆಗಳಲ್ಲಿಯೇ ಇವರು ವಾಸಮಾಡುತ್ತಾರೆ. ಇಟ್ಟಿಗೆ ಮಾಡುವವರು ಮತ್ತು ಗುತ್ತಿಗೆದಾರರು, ಉತ್ತಮವಾದ ಮನೆಗಳಲ್ಲಿ ಆಧುನಿಕ ರೀತಿಯಲ್ಲಿ ವಾಸಿಸುತ್ತಾರೆ. ವ್ಯವಸಾಯ ಅವಲಂಬಿಸಿದ ಉಪ್ಪಾರರು ಮತ್ತು ಇತರ ಜನರು ಕೃಷಿ ಸಮುದಾಯದ ನಡುವೆ ಅಂತಹ ಬೇಧವು ಸಾಮಾಜಿಕವಾಗಿ ಕಂಡು ಬರುವುದಿಲ್ಲ. ಕೆಳಜಾತಿಗಳಿಗಿರುವ ಯಾವುದೇ ಸಾಮಾಜಿಕ ನಿಷೇಧಗಳು ಇವರಿಗಿಲ್ಲ. ಆದರೆ, ಪಟ್ಟಣಗಳಲ್ಲಿ ತಮ್ಮದೇ ಆದ ಬೇರೆ ಹಟ್ಟಿಗಳಲ್ಲಿ ಕೆಲವರು ವಾಸಿಸುತ್ತಾರೆ. ಅಗಸ ಮತ್ತು ಕ್ಷೌರಿಕನು ಯಾವ ಆತಂಕವಿಲ್ಲದೆ ಉಪ್ಪಾರರ ಸೇವೆಯನ್ನು ಮಾಡುತ್ತಾನೆ. "The washer man and the barber give their services to the Upparas without any objection".(The Mysore Tribes and castes Vol.(IV:655) ಮಲೆನಾಡಿನಲ್ಲಿ ವಾಸಿಸುವ "ಹೊಲೆಯರು ಉಪ್ಪಾರರು ಮುಂತಾದ ಕೆಳ ಕೋಮಿನ ಜನಗಳಿಗೆ ಹಜಾಮರು ಕ್ಷೌರ ಮಾಡುವುದಕ್ಕೆ ಒಪ್ಪುತ್ತಿರಲಿಲ್ಲ" (ಬಿಳುಮನೆ ರಾಮದಾಸ್ 1990:75) ವಿಜಾಪುರ ಜಿಲ್ಲೆಯಲ್ಲಿ ಕೆಲವರು ತಲೆಯ ಮೇಲೆ ಚಂಡಿಕೆ ಕಾಯುವುದಿಲ್ಲ ಉಳಿದವರೆಲ್ಲ ಚಂಡಿಕೆ ಕಾಯುತ್ತಾರೆ."ಸಾಧಾರಣ ಶೂದ್ರರಂತೆ ಉಪ್ಪಾರರ ಉಡಿಗೆಗಳಿರುತ್ತವೆ. ಹೆಂಗಸರು ಕಚ್ಚೆಹಾಕುವುದಿಲ್ಲ. ಇವರಲ್ಲಿ ಮಲಿನತನ ಬಹಳ. ಹೆಣ್ಣು ಮಕ್ಕಳ ಲಗ್ನ ಚಿಕ್ಕಂದಿನಲ್ಲಿ ಮಾಡುವರು". (ಗ್ಯಾಝಿಟೀರ್ ಮುಂಬಯಿ ಇಲಾಖೆ 1893:151) ಕೆಲ ಉಪ್ಪಾರರು ಬ್ರಾಹ್ಮಣರಂತೆ ಜನಿವಾರ ಧರಿಸುತ್ತಾರೆ. ಬ್ರಾಹ್ಮಣರಿಗೆ ದಾನ ಕೊಡುವ ಪದ್ಧತಿಯೂ ಉಂಟು. ಉಪ್ಪಾರರು ಸಾಮಾನ್ಯವಾಗಿ ಮದ್ಯ ಮಾಂಸಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಮೈಸೂರು ಭಾಗದಿಂದ ಬೇರೆಡೆಗೆ ವಲಸೆ ಹೋದವರು ಊರಿನ ಹೊರಭಾಗದಲ್ಲಿ ವಾಸಿಸುತ್ತಾರೆ. ಇವರು ಲಂಗೋಟಿ, ಕಂಬಳಿ ಉಪಯೋಗಿಸುತ್ತಾರೆ. ಮಾಂಸ ಮತ್ತು ಶೆರೆ ಕುಡಿಯಲು ಬಹಳ ಇಷ್ಟ ಪಡುತ್ತಾರೆ. ಹೆಂಗಸರು ಹಾಲಕ್ಕಿ ಒಕ್ಕಲಿಗರಂತೆ ಕೊರಳಲ್ಲಿ ಕರಿಮಣಿಗಳ ಜಡೆಗಳನ್ನು ಹಾಕಿಕೊಳ್ಳುತ್ತಾರೆ. ಲಗ್ನ ಮುಂತಾದ ಕಾರ್ಯಗಳಲ್ಲಿ ಕೆಲವರು ಅಯ್ಯಗಳನ್ನು ಮತ್ತೆ ಕೆಲವರು ಬ್ರಾಹ್ಮಣರನ್ನು ಕರೆಯಿಸಿ ಅವರಿಂದ ನೆರವೇರಿಸಿಕೊಳ್ಳುತ್ತಾರೆ. ಕೆಲವು ವೇಳೆ ಸೂತಕಗಳನ್ನು ಕಳೆಯುವುದಕ್ಕೂ ಕರೆಸುತ್ತಾರೆ. ಇತರ ಬ್ರಾಹ್ಮಣರ ದೃಷ್ಟಿಯಲ್ಲಿ ಕೀಳಾಗುತ್ತೇವೆಂದು ಭಾವಿಸದೇ ಉಪ್ಪಾರರ ಮನೆಗಳಿಗೆ ಬ್ರಾಹ್ಮಣರು ಬರುತ್ತಾರೆ.

ಊರಿನಿಂದ ಮಾಳೆಗಳಿಗೆ ಹೋಗಿ ಉಪ್ಪು ತಯಾರಿಸಿ ಮತ್ತೆ ಊರಿಗೆ ಬಂದು ಸೇರುತ್ತಾರೆ. ಕೆಲವು ಭಾಗಗಳಲ್ಲಿ ಅದೇ ಪ್ರದೇಶದಲ್ಲಿಯೇ ವಾಸಿಸುತ್ತಾರೆ. ಕೆಲವು ಕುಟುಂಬಗಳು ಕಲ್ಲು ಕಡಿಯುವುದು, ಮನೆ ಕಟ್ಟುವುದು, ಕೆರೆ ತೋಡುವುದು ಮತ್ತು ಸುಣ್ಣ ತಯಾರು ಮಾಡುವ ಕೆಲಸಗಳಲ್ಲಿ ತೊಡಗಿದ್ದಾರೆ. ತಾವು ಹಿಡಿದ ಕೆಲಸಗಳು ಯಾವುದೇ ಸ್ಥಳದಲ್ಲಿದ್ದರೂ ಇವರು ಅಲ್ಲಿಗೆ ತಾತ್ಕಾಲಿಕವಾಗಿ ಹೋಗಿ ಪುನಃ ಹಿಂದಿರುಗುತ್ತಾರೆ.

ಉಪ್ಪು ಮಾಡುವ ಮೂಲವೃತ್ತಿ ಕೈತಪ್ಪಿದ ಬಳಿಕ ಇವರು ಅನೇಕ ಕೆಲಸಗಳಲ್ಲಿ ತೊಡಗಿಕೊಂಡರು. ಇವುಗಳಿಂದ ಜೀವನ ಸಾಗಿಸಲಿಕ್ಕೆ ಕಷ್ಟ ಆದಾಗ ಉಪಕಸುಬಾಗಿ ಸುಣ್ಣ ಮಾಡುವ ಕೆಲಸದಲ್ಲಿ ತೊಡಗಿದರು. ಇಷ್ಟಾದರು ಇವರ ಆರ್ಥಿಕ ಜೀವನ ಸುಧಾರಿಸಿಲ್ಲ. ಉಡುಗೆ, ತೊಡೆಗೆ ಜೀವನ ವಿಧಾನದಲ್ಲಿ ಬೇರೆ ಸಮೂಹಗಳಿಗಿಂತ ಭಿನ್ನವಾಗಿಲ್ಲ.The Social status of the caste is immediately below the kapus or Kunbis and other castes occupying the same social rank (Syed Siraj Ul Hassan 1989:623). ಇವರು ಮಾಂಸಹಾರಿಗಳಾಗಿದ್ದು ಕುರಿ, ನರಿ, ಜಿಂಕೆ, ಮೀನು, ಕೋಳಿ, ಇಲಿ ಮುಂತಾದವುಗಳನ್ನು ತಿನ್ನುತ್ತಾರೆ. ದನ ಮತ್ತು ಹಾವುಗಳನ್ನು ತಿನ್ನುವುದಿಲ್ಲ. ಮದ್ಯಪಾನ ಮಾಡುವುದಿಲ್ಲವೆಂದು, ಸಮಯ ಬಂದಾಗ ಆ ವಿಷಯದಲ್ಲಿ ಕಠಿಣ ವ್ರತರಲ್ಲ."They eat the Flesh of Sheep, Deer, Pigs, Fowl and Fish and drink spiritnous and intoxicating liquors" (Syed Siraj Ul Hassan -1989:623).ಇವರಲ್ಲಿ ಇಟ್ಟಿಗೆ ಬಡಗಿ ಮತ್ತು ಗುತ್ತಿಗೆ ಕೆಲಸಗಾರರು ಬಹು ಶುಚಿಯಾಗಿದ್ದು ಪ್ರತಿನಿತ್ಯವೂ ಸ್ನಾನಮಾಡುತ್ತಾರೆ. ಕೃಷಿ ಕೆಲಸವ ಮಾಡುವುದು ಮೇಲಿನವರಿಗಿಂತ ಕೆಳಮಟ್ಟದ ಬದುಕನ್ನು ಸಾಗಿಸುತ್ತಾರೆ. ಆದರೆ ಉಪ್ಪಿನ ಕೆಲಸ ಮಾಡುವರು ಮತ್ತು ಕೆರೆ ಅಗೆಯು ವವರನ್ನು ವಡ್ಡರಿಗಿಂತ ಭಿನ್ನವಾಗಿ ಕಾಣಲು ಅಸಾಧ್ಯ"..... Women Wear the big nose screw, which is also the characteristic ornament of an odda woman".ಇತರ ಜನ ಸಮೂಹದ ಹೆಂಗಸರಂತೆ".. get tattored with the common desgins"(The Mysore Tribes and castes Vol.IV: 656)."

ಇವರು ಸಭೆ ಸಮಾರಂಭಗಳಲ್ಲಿ ಭಾಗಿಯಾಗುತ್ತಿದ್ದರು. ಬ್ರಾಹ್ಮಣ ವರ್ಗವು ಇತರ ಒಕ್ಕಲಿಗ, ಕುರುಬ, ಕುಂಬಾರ, ಅಗಸ ಮುಂತಾದ ಜಾತಿಗಳನ್ನು ಕಂಡ ಹಾಗೆ ಇವರನ್ನೂ ಕಾಣುತ್ತಿದ್ದರು. ಕೆಲವು ಸಂದರ್ಭದಲ್ಲಿ "ಅಂಬಿಗ, ಉಪ್ಪಾರ, ಹಳ್ಳೇರು, ಮುಕ್ತಿ ಜನಗಳು ಭಜನೆ ಮುಂತಾದ ಕಾರ್ಯಕ್ರಮಗಳಿಗಾಗಿ ಗುಮ್ಮಟಿಯನ್ನು ಬಳಸುವುದುಂಟು". (ಹೆಗಡೆ. ಜಿ. ಎಂ. 1993:124) ಸಮಾನ್ಯವಾಗಿ ಹೊಲೆಯ, ಮಾದಿಗ, ಬೇಡ, ನಾಯಕ, ಅಗಸ ಮತ್ತು ಹಜಾನುರಿಗಿಂತ ಮೇಲಿನ ವರ್ಗದಲ್ಲಿದ್ದಾರೆ. 'ಗೌಡ' ಎಂಬ ಪದ ಇವರ ಹೆಸರಿನ ಮುಂದೆ ಬಂದರೂ ಇವರು ಒಕ್ಕಲಿಗ ಜನಾಂಗದವರಲ್ಲ. "ಗೌಡ" ಎಂಬುದು ಪದವಿ ಸೂಚಕವಾಗಿ ಬಳಕೆಯಲ್ಲಿ ಇದ್ದುದನ್ನು ಧ್ವನಿಸುತ್ತದೆಯೇ ಹೊರತು ಜನಾಂಗ ಸೂಚಿಯಾಗಲ್ಲ". (ಬಾನುಮತಿ ವೈ.ಸಿ. 1994:7).

ಉಪ್ಪಾರರು ಶಕ್ತಿದೇವತೆಗಳ ಆರಾಧಕರು ಮತ್ತು ಪೂಜಾರಿಗಳೂ ಆಗಿದ್ದಾರೆ. ದುರ್ಗಮ್ಮ ಮಾರಮ್ಮ , ಅಂಕಾಳಮ್ಮ , ದ್ಯಾಮವ್ವ , ಸುಂಕಾಲಮ್ಮ , ಕಾಳಮ್ಮ , ಕರಿಯಮ್ಮ , ಮಸಿಯಮ್ಮ ಮತ್ತು ಉರಿಸಲಮ್ಮ ಅಕ್ಕಮ್ಮ ಮುಂತಾದ ದೇವತೆಗಳ ಪೂಜಾರಿಗಳಾಗಿದ್ದಾರೆ. ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಕೊರಟಗೆರೆ, ಸಿರಾ ತಾಲೂಕುಗಳಲ್ಲಿ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು,

ಗುಡಿಬಂಡೆ, ಬಾಗೇಪಲ್ಲಿ ತಾಲೂಕುಗಳಲ್ಲಿ, ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ಮುಂತಾದ ತಾಲೂಕುಗಳಲ್ಲಿ ಅಕ್ಕಮ್ಮ ದೇವತೆಯ ಗುಡಿಗಳಿವೆ. ಇವಳನ್ನು ಅಕ್ಕಯ್ಯ ದೇವತೆ, ಅಕ್ಕಾಯಮ್ಮ ಅಂಕಮ್ಮ ಎಂಬ ಹೆಸರುಗಳಿಂದ ಕರೆಯುತ್ತಾರೆ. ಈ ದೇವತೆಯನ್ನು ಉಪ್ಪಾರರು ಮಾತ್ರವಲ್ಲದೇ ಒಕ್ಕಲಿಗರು, ಬೇಡರು, ಗೊಲ್ಲರು ಮತ್ತು ಅಕ್ಕಸಾಲಿಗರು ಪೂಜಾರಿಗಳಾಗಿರುತ್ತಾರೆ.

ಶಿವಮೊಗ್ಗದ ಉಪ್ಪಾರಕೇರಿ, ಸೊರಬ ಮತ್ತು ಮಧುಗಿರಿ ತಾಲೂಕು ಹೊಸಹಳ್ಳಿಯಲ್ಲಿರುವ ದುರ್ಗಮ್ಮನನ್ನು ಉಪ್ಪಾರರೇ ಪೂಜಿಸುತ್ತಾರೆ. ಈ ದೇವತೆಗೆ ವರ್ಷಕ್ಕೆ ಒಂದು ಬಾರಿ ಜಾತ್ರೆ ನಡೆಯುತ್ತದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಹರ್ತಿಕೋಟೆಯ ಉರುಸಲಮ್ಮನ ಪೂಜಾರಿಗಳು ಉಪ್ಪಾರರಾಗಿದ್ದಾರೆ. ಈ ಗುಡಿಯ ಸುತ್ತ ಮುತ್ತ ಉಪ್ಪು ತಯಾರಿಸುವ ಮಾಳಿಗಳನ್ನು ಇವತ್ತಿಗೂ ನೋಡಬಹುದು.

### ೩.೨. ಉಪ್ಪಾರರ ಕುಟುಂಬ ಪದ್ಧತಿ

ಇವರಲ್ಲಿ ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂಬ ಎರಡು ಪ್ರಬೇಧಗಳಿವೆ. ಅವುಗಳಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚು. ಅವಿಭಕ್ತ ಕುಟುಂಬಗಳ ಅಣ್ಣನಾದವನೇ ಮನೆಯ ಯಜಮಾನ ಆಗಿರುತ್ತಾನೆ. ಅವಿಭಕ್ತ ಕುಟುಂಬದ ಸದಸ್ಯರ ಸಂಖ್ಯೆ ೨೫ ರಿಂದ ೧೦೦ರ ವರೆಗೆ ಇರುತ್ತದೆ. ಈ ಎರಡೂ ಕುಟುಂಬದಲ್ಲಿಯ ಸದಸ್ಯರಿಗೆ ಸ್ಥಾನಮಾನಗಳು ಸಾಂಪ್ರದಾಯಕ ಪದ್ಧತಿಗಳಿಗನುಗುಣವಾಗಿಯೇ ಇರುತ್ತವೆ. ರಕ್ತ ಸಂಬಂಧವು ಕುಟುಂಬವನ್ನು ಬೆಳೆಸುವ ಮತ್ತು ನಿರ್ಧರಿಸುವ ಮೂಲಭೂತ ಅಂಶವಾಗಿದೆ. ಇಲ್ಲಿ ಭಾವನಾತ್ಮಕ ಸಂಬಂಧಗಳು ಹೆಚ್ಚು ಮಹತ್ವ ಪಡೆದಿರುತ್ತವೆ. ಕುಟುಂಬದ ಮುಖ್ಯಸ್ಥನ ಸ್ಥಾನ ಇಲ್ಲಿ ಆನುವಂಶಿಯವಲ್ಲ. ಹೆಚ್ಚಾಗಿ ಕುಟುಂಬಕ್ಕೆ ಹಿರಿಯನಾದವನೇ ಮುಖ್ಯಸ್ಥನಾಗಿರುತ್ತಾನೆ. ಇದು ಅಲ್ಲಿಯ ಹಿರಿತನಕ್ಕೆ ಅನುಗುಣವಾಗಿ ಬರುತ್ತದೆ. ಕೆಲವು ವೇಳೆ ಮನೆಯ ಹಿರಿಯ ಬುದ್ಧಿಯಲ್ಲಿ ತಮ್ಮನಿಗಿಂತ ಕಡಿಮೆ ಇದ್ದರೆ ಆಗ ಹಿರಿತನ ತಮ್ಮನಿಗೆ ವರ್ಗಾಯಿಸುತ್ತದೆ. ಕುಟುಂಬದ ಉತ್ಪಾದನೆ ಮತ್ತು ಅದರ ವಿತರಣೆಯು ಹಿರಿಯವನ ಮುಂದೆ ನಡೆಯುತ್ತದೆ. ಕುಟುಂಬಕ್ಕೆ ಲಾಭ ಬರುವ ಯಾವುದೇ ಕೆಲಸವನ್ನು ಹಿರಿಯ ವ್ಯಕ್ತಿ ಸೂಚಿಸಿದರೆ ಉಳಿದ ಸದಸ್ಯರು ಬಹಳ ಗೌರವ ಮತ್ತು ಭಕ್ತಿಯಿಂದ ಮಾಡುತ್ತಾರೆ. ಮಕ್ಕಳ ಪಾಲನೆ, ಪೋಷಣೆಗಳು ಅವರವರ ತಂದೆ ತಾಯಿಗಳಾಗಿದ್ದರೂ, ಅವರ ಉಡುಗೆ, ತೊಡುಗೆ, ಮನರಂಜನೆ, ಇತರ ಅಗತ್ಯಗಳೆಲ್ಲ ಹಿರಿಯನೇ ಒದಗಿಸುತ್ತಾನೆ. ಮದುವೆ, ಹಬ್ಬ ಇತ್ಯಾದಿ ಆಚರಣೆಗಳು ಇವನ ಒಪ್ಪಿಗೆ ಮೇರೆಗೆ ನಡೆಯುತ್ತವೆ. ಮನೆಯಲ್ಲಿ ನಡೆಯುವ ಒಳಜಗಳಗಳು ಇವನ ಮೂಲಕ ಪರಿಹಾರಗೊಳ್ಳುತ್ತವೆ.

ವಿಭಕ್ತ ಕುಟುಂಬದಲ್ಲಿ ಪತಿ, ಪತ್ನಿ ಮತ್ತು ಮಕ್ಕಳು ಸೇರಿರುತ್ತಾರೆ. ಇಲ್ಲಿ ತಂದೆ ಪ್ರಧಾನ ವ್ಯಕ್ತಿಯಾಗಿರುತ್ತಾನೆ. ಕುಟುಂಬದ ಪೂರ್ಣ ಜವಾಬ್ದಾರಿ ಮತ್ತು ನಿಯಂತ್ರಣ ತಂದೆಯದಾಗಿರುತ್ತದೆ. ವೃದ್ಧರಿಗೆ ಮನೆಯ ಅಧಿಕಾರವಿರುವುದಿಲ್ಲ. ತನ್ನ ಮಕ್ಕಳು ಮದುವೆಯಾಗುವ ವರೆಗೆ ಅವನ ಜೊತೆ ಇದ್ದು ನಂತರ ಅವರಿಗೆ ಬಂದ ಭಾಗದಲ್ಲಿ ಸುಖವಾಗಿ ಬದುಕುತ್ತಾರೆ. ಈ ಕಾರಣದಿಂದ ಗಂಡುಮಕ್ಕಳಿಗೆ ಮದುವೆಯು ಪ್ರಧಾನ ಘಟ್ಟ. ಈ ಕುಟುಂಬದಲ್ಲಿ ತಂದೆ ಪ್ರಧಾನ ರಕ್ಷಕನಾಗಿ ಕೆಲಸ ನಿರ್ವಹಿಸುತ್ತಾನೆ. ಇವರಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಇದ್ದು ಮದುವೆಯಲ್ಲಿ ಬೆಡಗನ್ನು (ಬಳಿ) ತಂದೆಯಿಂದಲೇ ಗುರುತಿಸಿಕೊಳ್ಳುತ್ತಾರೆ. ಮಕ್ಕಳ ಮೇಲೆ ತಂದೆಗೆ ಹಿಡಿತವಿರುತ್ತದೆ. ಆಸ್ತಿಯ ಹಕ್ಕು ತಂದೆಯಿಂದ ಮಗನಿಗೆ ವರ್ಗಾವಣೆಯಾಗುತ್ತದೆ. ಇವರಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇರುವುದಿಲ್ಲ.

ಉಪ್ಪಾರರಲ್ಲಿ ತಂದೆಯ ಕಡೆಯ ರಕ್ತ ಸಂಬಂಧಿಗಳಿಗೆ ವಿಶೇಷ ಮಹತ್ವ ಸಿಕ್ಕುತ್ತದೆ. ತಂದೆಯ ತಂದೆ, ತಾಯಿ, 'ಅಜ್ಜಿ'ಯರೆಂದು ಕರೆಸಿಕೊಳ್ಳುತ್ತಾರೆ. ಮೊಮ್ಮಕ್ಕಳಿಗೆ ಅಜ್ಜ-ಅಜ್ಜಿಯರೆಂದರೆ ಬಹಳ ಪ್ರೀತಿ. ಹಾಗೆಯೇ ಅಜ್ಜ-ಅಜ್ಜಿಯರಿಗೂ, ಮೊಮ್ಮಕ್ಕಳನ್ನು ವಿಶೇಷ ಮಮತೆಯಿಂದ ಬೆಳೆಸುತ್ತಾರೆ. ಕೆಲವು ವಿಶೇಷ ದಿನಗಳಲ್ಲಿ ಹಣವನ್ನು ಕೊಡುತ್ತಾರೆ. ಹೊಸ ಬಟ್ಟೆಗಳನ್ನು ಹೊಲಿಸಿ ಕೊಡುವುದೂ ಉಂಟು.

ಕುಟುಂಬವು ಪ್ರಾಥಮಿಕ ಘಟ್ಟವಾಗಿದ್ದು ಇಂತಹ ಹಲವು ಕುಟುಂಬಗಳನ್ನು ನೋಡಿಕೊಳ್ಳಲು ಕೇರಿಗೊಬ್ಬನಂತೆ ಗೌಡನಿರುತ್ತಾನೆ. ಇವನಿಗೆ ವಂಶ ಪಾರಂಪರಿಕವಾಗಿ ಅಧಿಕಾರದ ಎಲ್ಲಾ ವಿಶೇಷ ಸಂದರ್ಭಗಳಲ್ಲಿಯೂ ತಾಂಬೂಲ ಸ್ವೀಕರಿಸುವ ಹಕ್ಕುಗಳನ್ನು ಪಡೆದಿರುತ್ತಾನೆ. ೧೮ ಫಣ ವಿಭಾಗಕ್ಕೆ ಸೇರಿದ ಉಪ್ಪಾರರು 'ಚಲವಾದಿ' ಎನ್ನುವ ಸೇವಕ ವರ್ಗದ ಸೇವೆಯನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ. ಗಂಟೇ ಉದ್ದಾರಣೆಗಳು, ಉಪ್ಪಾರರ ವೃತ್ತಿ ಸಂಕೇತವಾಗಿವೆ. ಈ ಕೇರಿ ಗೌಡನ ಮೇಲೆ ಶೆಟ್ಟಿ ಅಥವಾ ಯಜಮಾನನಿರುತ್ತಾನೆ. ಇವನ ಸ್ಥಾನ ಸರ್ವೋಚ್ಚವಾದುದಾಗಿದೆ. ಇವರ ಕೈ ಕೆಳಗೆ ಭಂಡಾರಿ ಅಥವಾ ಕೋಲ್ಕಾರರಿರುತ್ತಾರೆ. ಇವರೆಲ್ಲರಿಗೂ ಮೇಲೆ, ಚಿತ್ರದುರ್ಗ ಜಿಲ್ಲೆಯ 'ಕರ್ಲಹಟ್ಟಿಯ' ಗುರುಮಠವಿದೆ. ಈಚೆಗೆ ದಿನದಲ್ಲಿ ಇದು ಹೊಸದುರ್ಗದ ಬ್ರಹ್ಮವಿದ್ಯಾನಗರಿಯಲ್ಲಿ ಉಪ್ಪಾರರ ಗುರುಮಠ ಅಸ್ತಿತ್ವಕ್ಕೆ ಬಂದಿದೆ.

### ೩.೩. ಉಪ್ಪಾರ ಒಳಪಂಗಡಗಳು

ಇನ್ನಿತರ ಜನಾಂಗಗಳಲ್ಲಿರುವಂತೆ ಕರ್ನಾಟಕದಾದ್ಯಂತ ನೆಲೆಸಿರುವ ಉಪ್ಪಾರರಲ್ಲಿ ಅನೇಕ ಬಗೆಯ ಒಳಪಂಗಡಳಿವೆ. ಈ ರೀತಿಯ ಒಳಪಂಗಡಗಳು ಹುಟ್ಟಿಕೊಳ್ಳಲು ಮುಖ್ಯವಾಗಿ ಆ ಪ್ರದೇಶದ ಭೌಗೋಳಿಕ ಹಾಗೂ ಸಾಮಾಜಿಕ ಭಿನ್ನತೆಯೇ ಕಾರಣವಾಗಿರುತ್ತದೆ. ಮೂಲತಃ ಒಂದೇ ಜಾತಿಯರಾಗಿದ್ದು

ಕಾಲಾಂತರದಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿಕೊಂಡಿರಬೇಕು. ಈಗಿನಂತೆ ಸಂಪರ್ಕ-ಸಾಧನಗಳ ಸೌಲಭ್ಯವಿರದಿದ್ದ ಕಾರಣದಿಂದ ತಾವು ಎಲ್ಲೆಲ್ಲಿ ನೆಲೆಸಿದ್ದರೂ ಆಯಾಯಾ ಭಾಗದ ಪರಿಸರಕ್ಕನುಗುಣವಾಗಿ ಜೀವನ ಮತ್ತು ಸಂಸ್ಕೃತಿಯನ್ನು ರೂಢಿಸಿಕೊಂಡರು. ಇವರು ವಾಸಿಸುವ ಪ್ರದೇಶಗಳಲ್ಲಿ ಪ್ರಬಲವಾಗಿರುವ ಧರ್ಮಗಳು ಪ್ರಭಾವ ಬೀರಿದ್ದರಿಂದ ಆ ಧರ್ಮಗಳಿಗೆ ನಿಷ್ಠರಾದರು. ೧೨ನೇ ಶತಮಾನದವರ ಧಾರ್ಮಿಕ ಕ್ರಾಂತಿಯ ಪ್ರಭಾವ ಉಪ್ಪಾರರ ಮೇಲು ಬಹಳಷ್ಟು ಆಯಿತು. ಇದರಿಂದ ಉತ್ತರ ಕರ್ನಾಟಕದಲ್ಲಿ ವಾಸಿಸುತ್ತಿದ್ದ ಇತರ ಜಾತಿಯವರು ವೀರಶೈವ ಮಠಕ್ಕೆ ಮತಾಂತರ ಹೊಂದಿರುವ ಹಾಗೆ ಉಪ್ಪಾರರಾದರು ಇವರಲ್ಲಿರುವ ಲಿಂಗಾಯತ, ಉಪ್ಪಾರ ಎನ್ನುವ ಒಳ ಉದಾಹರಣೆ ಉಂಟು. ಆದರೆ ದಕ್ಷಿಣ ಕರ್ನಾಟಕದ ಉಪ್ಪಾರರು ಹೀಗೆ ಮತವನ್ನು ಬದಲಿಸದೇ ತಮ್ಮ ಮತಗಳಿಗೆ ನಿಷ್ಠರಾಗಿದ್ದರು (ಗೌರವಿಸಿದರು)ಇವರ ಮೇಲೆ, ಮೊದಲು ಜೈನಧರ್ಮ ಆನಂತರ ವೈಷ್ಣವಧರ್ಮ ಪ್ರಭಾವ ಬೀರಿತು. ಈ ಕಾರಣದಿಂದ ಇಲ್ಲಿ ಹೆಚ್ಚು ಮಂದಿ ಉಪ್ಪಾರರು ವೈಷ್ಣವ ಭಕ್ತರಾಗಿರುವುದಕ್ಕೆ ಕಾರಣ. ಇವರ ಮನೆ ದೇವರು ಚನ್ನಕೇಶನೇ ಆಗಿದ್ದಾನೆ. ಭೌಗೋಳಿಕ ಹಾಗೂ ಸಾಮಾಜಿಕ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕದ ಉಪ್ಪಾರರನ್ನು ಬಯಲುನಾಡಿನ ಉಪ್ಪಾರರು, ಮಲೆನಾಡಿನ ಉಪ್ಪಾರರು, ಮತ್ತು ಕರಾವಳಿ ಉಪ್ಪಾರರೆಂದು ವಿಂಗಡಿಸಿಕೊಳ್ಳಬಹುದು (ಬಯಲುನಾಡಿನ ಉಪ್ಪಾರರು ಮತ್ತು ಮಲೆನಾಡಿನ ಉಪ್ಪಾರರೇ ಕರಾವಳಿ ಉಪ್ಪಾರರಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಇವರು ಸಾಮಾಜಿಕವಾಗಿ ತೀರಾ ಹಿಂದುಳಿದವರಾಗಿರುತ್ತಾರೆ.) ಮೈಸೂರು ಜಿಲ್ಲೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಉಪ್ಪಾರರನ್ನು ಈ ರೀತಿ ಕರೆಯುತ್ತಾರೆ. (ಮಳವಳ್ಳಿ, ಗುಂಡ್ಲುಪೇಟೆ ಕೊಳ್ಳೆಗಾಲ).

೧. ಉಪ್ಪಲಿಗರು
೨. ಮೇಲು ಸಕ್ಕರೆಯವರು
೩. ಸಗರ ವಂಶದವರು
೪. ಭಗೀರಥ ವಂಶದವರು
೫. ಕೆರೆಬಂದಿಯವರು
೬. ಗಾರೆ ಉಪ್ಪಾರರು
೭. ಸುಣ್ಣ ಉಪ್ಪಾರರು
೮. ಜನಿವಾರ ಉಪ್ಪಾರರು (ಕಲ್ಲು ಕುಟಿಗ)
೯. ಸಾದ ಉಪ್ಪಾರರು
೧೦. ಉಪ್ಪಲಿಗ
೧೧. ಉಪ್ಪಲಿಗ ಶೆಟ್ಟಿ
೧೨. ಮಣ್ಣು ಉಪ್ಪಾರ

ಎಂಬುದಾಗಿ ಕರೆಯುತ್ತಾರೆ. ಇವರ ಮುಖ್ಯ ಕಸಬು ವ್ಯಾಪಾರ, ಗಾರೆ ಕೆಲಸಗಳನ್ನು ಮಾಡುವುದು. ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ಚಿಕ್ಕಮಗಳೂರು, ಹಾಸನ ಮತ್ತು ಕೋಲಾರ ಜಿಲ್ಲೆಗಳಲ್ಲಿ ವಾಸಿಸಲು ಉಪ್ಪಾರರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಇಲ್ಲಿ ಇವರನ್ನು

೧. ಮಣ್ಣು ಉಪ್ಪಾರರು

೨. ಮೇಲು ಸಕ್ಕರೆಯುರು

೩. ಕಲ್ಲು ಕುಟಿಗ ಮತ್ತು ಜನಿವಾರದ ಉಪ್ಪಾರರು ಎಂದು ಕರೆಯುತ್ತಾರೆ.

ಚೌಳು ಮಣ್ಣಿನಿಂದ ಉಪ್ಪನ್ನು ತಾಯಾರಿಸುತ್ತಿದ್ದರಿಂದ ಅವರನ್ನು ಮಣ್ಣು ಉಪ್ಪಾರರೆಂದು, ಇವರಿಗಿಂತ ಶ್ರೇಷ್ಠರಾದ ಕುಲಸ್ಥರನ್ನು ಮೇಲು ಸಕ್ಕರೆಯಂತಲೂ ಮತ್ತು ಕಲ್ಲು ಕುಟಿಗ, ಗಾರೆ, ಮನೆ ಕಟ್ಟುವ ಕಾರ್ಯ ನಿರ್ವಹಿಸುವ ಉಪ್ಪಾರರನ್ನು ಕಲ್ಲು ಕುಟಿಗ ಅಥಾವ ಜನಿವಾರ ಉಪ್ಪಾರರೆಂದು ಕರೆದರು. ಇವರು ಜನಿವಾರ ಧರಿಸಿದ್ದರಿಂದ ಈ ಹೆಸರು ಬಂದಿರಬೇಕು.

ಸವದತ್ತಿ, ಗೋಕಾಕ, ಬಿಜಾಪುರ ಮೊದಲಾದೆಡೆಗಳಲ್ಲಿ ವಾಸಿಸುವ ಉಪ್ಪಾರರು ಕಲ್ಲು ಮತ್ತು ಕಟ್ಟಡಗಳ ಕೆಲಸವನ್ನು ನಿರ್ವಹಿಸುತ್ತಿದ್ದರು. ಈ ಭಾಗದ ಉಪ್ಪಾರರಿಗೆ ಕಲ್ಲು ಉಪ್ಪಾರರೆಂದೇ ಕರೆಯಲಾಗಿದೆ.

ಹೈದ್ರಾಬಾದ್ ಕರ್ನಾಟಕದಲ್ಲಿ ಬದುಕುವ ಉಪ್ಪಾರರು ಹೆಚ್ಚಾಗಿ ಕೆರೆ-ಕಾಲುವೆಗಳನ್ನು ನಿರ್ಮಿಸುವ ಕೆಲಸದಲ್ಲಿ ತೊಡಗಿಕೊಂಡದ್ದರಿಂದ ತೆಲಗು ಮನೆ ಮಾತಾಗಿ ಬಳಸುತ್ತಿದ್ದರಿಂದಲೂ ಅವರುಗಳಿಗೆ ತೆಲುಗು ಉಪ್ಪಾರರೆಂದು ಕರೆಯಲಾಗಿದೆ. ಇದಲ್ಲದೆ ಇವರನ್ನು ತೆಲುಗು ಬಣಜಿಗ ಉಪ್ಪಾರರೆಂದೂ ಕರೆಯುತ್ತಾರೆ.

ಕೆಲವೆಡೆ ಇವರನ್ನು ತೆಲುಗು ಬಣಜಿಗ ಉಪ್ಪಾರರೆಂದು, ಮಾಳೆ ಉಪ್ಪಾರರೆಂದು, ದೊಂಬರ ಉಪ್ಪಾರರೆಂದು ಕರೆಯುತ್ತಾರೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮುಂದೆ ಬರಲು ತಮ್ಮ ಜಾತಿಯಲ್ಲಿ ಅಡ್ಡಿ ಉಂಟು ಮಾಡಿದೆ ಎಂದು, ತಮ್ಮ ಮೂಲ ಜಾತಿಗೆ ತೆಲುಗು ಬಣಜಿಗ ಎಂಬುದನ್ನು ಸೇರಿಸಿಕೊಂಡ ಇವರು, ಮೂಲ ಕಸಬು ಬಿಟ್ಟು ಉಪ್ಪಾರರು ವ್ಯಾಪಾರಕ್ಕೆ ಕೈ ಹಾಕಿದರು. ಈ ಕಾರಣದಿಂದ ಅವರನ್ನು ತೆಲುಗು ಬಣಜಿಗ ಉಪ್ಪಾರ ಎಂದು ಕರೆಯಲಾಯಿತು. ಇವರನ್ನು ಬೆಂಗಳೂರಿನ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕಂಡು ಬರುತ್ತಾರೆ. ಸರಕಾರಕ್ಕೆ ಉಪ್ಪ ತಯಾರಿಸುವುದನ್ನು ನಿಷೇಧಿಸಿದರು. ಬಳನಾಡಿನಲ್ಲಿ ಮಾಳೆಗಳನ್ನು ತಯಾರಿಸಿ ತಮ್ಮ ಮೂಲವೃತ್ತಿಯನ್ನು ಮಾಡುತ್ತಾ ಬಂದವರಿಗೆ ಮಾಳೆ ಉಪ್ಪಾರರು ಎಂದು ಕರೆಯಲಾಗಿದೆ. ಎಲ್ಲಿಯೂ ನಿಲ್ಲದೆ ಸಂಚಾರ ಮಾಡುತ್ತಾ ಜೀವನ ಸಾಗಿಸುತ್ತಿದ್ದು ದೊಂಬರುಗಳನ್ನು ಹೋಲುವ ಜನವರ್ಗ ಗಳನ್ನು ದೊಂಬರ ಉಪ್ಪಾರರು ಎಂದು ಕರೆಯಲಾಗಿದೆ. ಈ ದೊಂಬ ಉಪ್ಪಾರರು ಮಹಿಳೆಯರನ್ನು ಬಸವಿ ಬಿಡುವ ಪದ್ಧತಿಯಾಗಲಿ, ಅವರು ಬೇರೆಯವರೊಂದಿಗೆ ಸಂಪರ್ಕ ಇರಿಸಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಅ. ೧

### ಸಗರ ಚಕ್ರವರ್ತಿ ವಂಶದವರು

ವೈಷ್ಣವ — ತ್ರಿನಾಮಧಾರಿಗಳು

ಶೈವರು — ಪಾಕುತ್ರ

ಅ. ೨.

ಸಗರ ಉಪ್ಪಾರರು ----› ಇವರು ಕಾಶಿಯಿಂದ ಸೊಲ್ಲಾಪುರಕ್ಕೆ ವಲಸೆ ಬಂದವರಾಗಿದ್ದಾರೆ ಇವರಲ್ಲಿ ನಾಲ್ಕು ಒಳ ಪಂಗಡಗಳಿವೆ.

೧. ಗಾಡ್‌ವಾಟೀ
೨. ಕಲ್‌ಬುರ್ಗೆ ಪಂಗಡಗಳಿವೆ.
೩. ಕಾಲ್ವೆ
೪. ನಾರ್ನೆ

### ಉಪ್ಪಾರ

ವೈಷ್ಣವರು — ನಾಮದ ಉಪ್ಪಾರ

೧. ಕಲ್ಲು ಕುಟಿಗ ಉಪ್ಪಾರ
೨. ಜನಿವಾರದ ಉಪ್ಪಾರ

ಶ್ರೀ ಚೆನ್ನಕೇಶವನ ಆರಾಧನೆ ಮಾಡುತ್ತಾರೆ.
ಮಾಂಸವನ್ನು ತಿನ್ನುವುದಿಲ್ಲ.

ಶೈವರು — ಲಿಂಗಾಯತ ಉಪ್ಪಾರ

ವೀರಶೈವರಂತೆ ಲಿಂಗಧಾರಣೆ ಮಾಡಿಕೊಂಡು-ಬಸವಣ್ಣನ ಅನುಯಾಯಿಗಳಾಗಿರುತ್ತಾರೆ.

ಇವರು ತಾವು ಉತ್ತರದ ಕಡೆಯಿಂದ ಬಂದು, ಸೊಲ್ಲಾಪುರದಲ್ಲಿ ನೆಲೆಸಿ, ಅಲ್ಲಿಂದ ಬೇರೆ ಬೇರೆ ಕಡೆಗೆ ಹರಡಿಕೊಂಡರೆಂದೂ ಹೇಳಿಕೊಳ್ಳುತ್ತಾರೆ. ತಮ್ಮ ಮೂಲಪುರುಷ ಸಗರ ಚಕ್ರವರ್ತಿಯೆಂದೂ ಅದನ್ನು ಸಮರ್ಥಿಸಿಕೊಳ್ಳಲು ಕಥೆಯನ್ನೇ ಹೇಳುತ್ತಾರೆ. (ಕಥೆಯನ್ನು ಉಪ್ಪಾರರ ಧಾರ್ಮಿಕ ಹಿನ್ನೆಲೆಯಲ್ಲಿ ಕೊಡಲಾಗಿದೆ). ೧೨ ನೇ ಶತಮಾನದ ಧಾರ್ಮಿಕ ಕ್ರಾಂತಿಯು ಇವರ ಮೇಲೆ ತುಂಬಾ ಪ್ರಭಾವವನ್ನು ಬೀರಿದೆ. ಈ ಕಾರಣದಿಂದಾಗಿ ಉತ್ತರ ಕರ್ನಾಟಕದ ಅನೇಕ ಉಪ್ಪಾರರು (ವೀರಶೈವ)-ಬಸವಣ್ಣನ ಅನುಯಾಯಿಗಳಾಗಿ ಲಿಂಗಾಯುತ ಉಪ್ಪಾರರಾದರು. ದಕ್ಷಿಣ ಕರ್ನಾಟಕದ ಉಪ್ಪಾರರು ಮತಾಂತರ ಹೊಂದದೇ ವೈಷ್ಣವ ಪಂಥದ ಪ್ರಭಾವಕ್ಕೊಳಗಾಗಿ, ಅವುಗಳಿಗೆ ನಿಷ್ಠರಾದರು. ಶ್ರೀ ರಾಮಾನುಜಾಚಾರ್ಯರು ೧೨ ನೇ. ಶ. ದಲ್ಲಿ ಶೈವ ಧರ್ಮದ ಆಶ್ರಯದಾತರಾದ ಚೋಳರಾಜರ ಕಿರುಕುಳ ಸಹಿಸಲಾಗದೇ ತಮಿಳನಾಡಿನ ಶ್ರೀರಂಗವನ್ನು ತ್ಯಜಿಸಿ, ಮೈಸೂರು ರಾಜ್ಯಕ್ಕೆ ಬಂದು, ಹೊಯ್ಸಳರ ಆಶ್ರಯದಲ್ಲಿ ಮೇಲುಕೋಟೆಯಲ್ಲಿ ಧಾರ್ಮಿಕ ಕೇಂದ್ರವನ್ನು ಸ್ಥಾಪಿಸಿ, ಶ್ರೀ ವೈಷ್ಣವ ಪಂಥವನ್ನು ಸಾರಿದರು. ಇವರು ವಾದದಲ್ಲಿ ಜೈನಯತಿಗಳನ್ನು

ಸೋಲಿಸಿದರು. ಅವರ ಉಪದೇಶದಿಂದ ಹೊಯ್ಸಳ ಚಕ್ರವರ್ತಿ 'ಬಿಟ್ಟಿದೇವ' ವಿಷ್ಣುವರ್ಧನನೆಂಬ ಹೆಸರಿನಲ್ಲಿ ವೈಷ್ಣವನಾಗಿ ಮತಾಂತರ ಹೊಂದಿ ಬೇಲೂರಿನಲ್ಲಿ ಚನ್ನಕೇಶವಸ್ವಾಮಿ ದೇವಾಲಯ ವನ್ನು ಕಟ್ಟಿಸಿದನು ಎಂದು ಚಾರಿತ್ರಿಕ ಮೂಲಗಳು ಹೇಳುತ್ತವೆ.(Anantha Krishna Iyer L.K., The Mysore Tribes and castes Vol. II. 1930, P.? ಹೀಗೆ, ಮೇಲುಕೋಟೆ ಮತ್ತು ಬೇಲೂರುಗಳು ಶ್ರೀ ವೈಷ್ಣವ ಮತದ ಪ್ರಚಾರ ಕೇಂದ್ರಗಳಾದ ಮೇಲೆ ಆ ಸುತ್ತಲಿನ ಹಲವಾರು ಉಪ್ಪಾರ ಕುಟುಂಬಗಳು ಈವರೆಗೂ ಜೈನಮತದಿಂದ ಪ್ರಭಾವಿತರಾದವರು. ವೈಷ್ಣವ ಮತಕ್ಕೆ ತಮ್ಮ ನಿಷ್ಠೆಯನ್ನು ಬದಲಾಯಿಸಿಕೊಂಡರು. ಇವರಂತೆಯೇ ಇನ್ನು ಅನೇಕ ಜಾನಂಗದವರು ವೈಷ್ಣವ ಸಂಪ್ರದಾಯಕ್ಕೆ ಸೇರಿಕೊಂಡರು. ಉಪ್ಪಾರರು ತಮ್ಮ ಜಾತಿಯಲ್ಲೇ ಉಳಿದುಕೊಂಡಿದ್ದು ಮತ್ತೊಂದು ಮತದ ಪ್ರಭಾವಕ್ಕೆ ಒಳಗಾಗಿ, ಅದಕ್ಕೂ ನಿಷ್ಠೆಯನ್ನು ತೋರಿಸಿ, ತಾವು ಪ್ರಭಾವಕ್ಕೊಳಗಾದ ಧರ್ಮದ ಆಚರಣೆಗಳನ್ನು ಮಾಡುತ್ತಾ, ಜೊತೆ ಜೊತೆಗೆ ತಮ್ಮ ಜಾತೀಯ ಆಚರಣೆಗಳನ್ನು ಬಿಡದೇ, ಕೆಲವನ್ನು ವಿಶೇಷವಾಗಿ, ಕೆಲವನ್ನು ಸಾಧಾರಣವಾಗಿ ಆಚರಿಸುತ್ತಾ ಬಂದಿದ್ದಾರೆ. ಸಾಧಾರಣವಾಗಿ ಇವರಲ್ಲಿ ವೈಷ್ಣವ ಮತ್ತು ಶೈವ ಸಂಪ್ರದಾಯದ ಎರಡು ಗುಂಪುಗಳನ್ನು ಗುರುತಿಸಬಹುದು. ದಕ್ಷಿಣ ಕರ್ನಾಟಕದ ಉಪ್ಪಾರರು ವೈಷ್ಣವ ಸಂಪ್ರದಾಯದವರೆನಿಸಿಕೊಂಡರು. ಉತ್ತರ ಕರ್ನಾಟಕದ ಕಡೆಯವರು ಶೈವ ಮೂಲದವರೆಂದು ಗುರುತಿಸಲ್ಪಟ್ಟಿದ್ದಾರೆ. ಮೂಲದಲ್ಲಿ ಎರಡು ಗುಂಪುಗಳು ಒಂದೇ ಪ್ರದೇಶದಿಂದ ಹೊರಟಿರಬಹುದು ಎಂದು ನಿರ್ಧರಿಸುವುದಕ್ಕೆ ನಿದರ್ಶನಗಳು ಕಂಡು ಬಂದಿವೆ. ವೈಷ್ಣವ ಮೂಲಕ್ಕೆ ಆರೋಪಿಸಿಕೊಳ್ಳುವವರು, ತಿರುಪತಿ ತಿಮ್ಮಪ್ಪ ಮೇಲುಕೋಟೆ ಚೆಲುವರಾಯ ಸ್ವಾಮಿ, ಧರ್ಮಸ್ಥಳದ ಮಂಜುನಾಥ ಈ ಮುಂತಾದ ದೇವರುಗಳನ್ನು ಮನೆದೇವರಾಗಿ ಒಪ್ಪಿಕೊಂಡಿದ್ದರೆ; ಶೈವ ಮೂಲದವರೆಂದು ಗುರುತಿಸಿಕೊಂಡವರು ಕಾಲ ಭೈರವ ಮುಂತಾದವರನ್ನು ಮನೆದೇವರಾಗಿ ಪೂಜಿಸುತ್ತಾರೆ. ಜೊತೆ ಜೊತೆಗೆ ಚೆನ್ನಕೇಶವನನ್ನು ಪೂಜಿಸುತ್ತಾರೆ. ಎರಡೂ ಗುಂಪಿನವರು ಶಿವ ಮತ್ತು ವಿಷ್ಣುವನ್ನು ಸಮನಾಗಿ ಪೂಜಿಸುತ್ತಾರೆ. ಇದರಿಂದ ಇವರು ಶಿವಾರಾಧಕರೂ ಮತ್ತು ವೈಷ್ಣವಾರಾಧಕರೂ ಎಂದು ಸ್ಪಷ್ಟವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಶೈವಾರಾದಕರೇ ಹೆಚ್ಚಾಗಿದ್ದಾರೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ವೈಷ್ಣವಾರಾಧಕರ ಸಂಖ್ಯೆಯೇ ಹೆಚ್ಚು. ವೈಷ್ಣವರ ಸಂಖ್ಯೆ ಹೆಚ್ಚಾಗಲು ತಮಿಳುನಾಡಿನಿಂದ ಬಂದ ವೈಷ್ಣವ ಹೆಬ್ಬಾರರ ಪ್ರಭಾವವೇ ಕಾರಣವಾಗಿದೆ. ಇವರು ಮೊಟ್ಟಮೊದಲು ತಮಿಳುನಾಡಿನ ಶ್ರೀರಂಗ ಮತ್ತು ಕಾಂಜೀವರಂ ಕಡೆಯಿಂದ ವಲಸೆ ಬಂದು, ಆಗಿನ ಮೈಸೂರು ರಾಜ್ಯದ ತುಮಕೂರು, ಹಾಸನ ಜಿಲ್ಲೆ, ಶ್ರೀರಂಗಪಟ್ಟಣ, ಬೆಂಗಳೂರು ಜಿಲ್ಲೆ, ಬೇಲೂರು, ಈ ಐದು ಸ್ಥಳಗಳಲ್ಲಿ ನೆಲೆಸಿದರು. ನೆಲೆಸಿ ತಮ್ಮ ಸುತ್ತಲಿನ ಜನರಿಗೆ ವೈಷ್ಣವ ಮತದಲ್ಲಿ ಒಲವು ಹುಟ್ಟಿಸಿದರು.

1986 ರಲ್ಲಿ 'ಎ' ಗುಂಪಿಗೆ ಸೇರಿಸಲಾಗಿತ್ತು. 1994 ರಲ್ಲಿ ಮೀಸಲಾತಿಗಾಗಿ ಈ ಜನಾಂಗವನ್ನು Catagory I ಇದರಲ್ಲಿ ಗುರುತಿಸಲಾಗಿದೆ. ಆ ಪ್ರಕಾರ ಈ ಕೆಳಗಿನ ಒಳಪಂಗಡಗಳು ಸೇರಿಕೊಳ್ಳುತ್ತವೆ. ಅವುಗಳೆಂದರೆ:

a) Uppara b) Beldar c) Chunar d) Gavadi e) Goundi f) Kallu Katiga Uppara g) Lonari h) Melu Sakkreyavaru i) Melusakkare j) Namada Uppara k) Padit/Padti l) Padithi m) Padi n) Sagara o) Sunnagara p) Sunna Uppara q) Uppaliga r) Uppallga shetty s) Uppaliyan t) Uppera u) Yakalara v) Yekkali Government order No. SWD 150 BCA 94 dated 17.09.94 (Page No. 12)

೩: ೪. ಮನೆಗಳ ನಿರ್ಮಾಣ

ಪ್ರಕೃತಿಯ ವೈಪರೀತ್ಯಗಳಿಂದ ರಕ್ಷಣೆ ಪಡೆಯಲು, ಮತ್ತು ಕುಟುಂಬ ವ್ಯವಸ್ಥೆಯನ್ನು ರೂಢಿಸಿಕೊಂಡ ಮನುಷ್ಯ ವಾಸಿಸಲು ಪ್ರಾರಂಭದಲ್ಲಿ ಗುಹೆ, ಪೊಟರೆ, ಹುಲ್ಲಿನ ಗುಡಿಸಲು ಕಾಲಾನಂತರದಲ್ಲಿ ಮನೆಗಳ ನಿರ್ಮಾಣಕ್ಕೆ ತೊಡಗಿದ. (ಕಾಲಕ್ರಮೇಣ ಮನೆಗಳ ನಿರ್ಮಾಣದಲ್ಲಿ ಸುಧಾರಣೆಗಳಾದವು )ಭೌಗೋಳಿಕ ಪರಿಸರಕ್ಕನುಸರಿಸಿ ಗೃಹಗಳ ನಿರ್ಮಾಣವಾದವು. ಪ್ರಸ್ತುತ ಉಪ್ಪಾರರು ಗುಂಪು ಗುಂಪಾಗಿ ಊರ ಹೊರವಲಯ, ಇಲ್ಲವೇ ತಮ್ಮದೇ ಹಟ್ಟಿಗಳಲ್ಲಿ ವಾಸಿಸಲು ಪ್ರಾರಂಭಿಸಿದರು. ಇವರು ಮನೆಗಳು ಇತರ ಜನಾಂಗದವರ ಮನೆಗಳಂತೆಯೇ ರಚಿತವಾದವು. ಇಂಥಹ ಮನೆಗಳು ಹೆಚ್ಚುಕಾಲ ಸುಭದ್ರವಾಗಿ ಇರುವಂತೆ ರಚಿಸಲಾಯಿತು. ಹೀಗೆ ರಚಿಸಿದ ಮನೆಗಳು ಆ ಜನಾಂಗಗಳ ವಾಸ್ತು ಮತ್ತು ಸೌಂದರ್ಯ ಪ್ರಜ್ಞೆಯ ದ್ಯೋತಕಗಳಾಗಿವೆ.

ಮನುಷ್ಯನ ವಸತಿಯನ್ನು ಕುರಿತಾದ ಅಧ್ಯಯನವು ನೇರವಾಗಿ ವಾಸ್ತುಶಿಲ್ಪದ ಅಧ್ಯಯನವೇ ಆಗಿದೆ. ಅದು ಮಾನವನ ಸಾಂಸ್ಕೃತಿಕ ಬದುಕಿನ ಅಧ್ಯಯನವೂ ಹೌದು. ಮುಖ್ಯವಾಗಿ ಭೌಗೋಳಿಕ ಕಾರಣಕ್ಕಾಗಿ ವಿಶಿಷ್ಟ ವಿನ್ಯಾಸ ಮತ್ತು ಮಾದರಿಗಳ ವಸತಿಗಳು ಕರ್ನಾಟಕದ ಉದ್ದಗಲಕ್ಕೂ ಕಂಡುಬರುವುದರಿಂದ ಈ ಅಧ್ಯಯನ ತುಂಬಾ ಮಹತ್ವಪೂರ್ಣದ್ದಾಗಿದೆ. 'ವಾಸ್ತುಶಿಲ್ಪದ ಇತಿಹಾಸದಲ್ಲಿ ನಾವು ಮೊದಲು ಕಾಣುವುದು ಗೃಹಗಳನ್ನು, ತನಗಾಗಿ, ತನ್ನವರಿಗಾಗಿ ವಾಸಸ್ಥಳ ವೊಂದನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದುದೇ, ೭, ೦೦೦ ವರ್ಷಗಳ ಹಿಂದೆ; ಕ್ರಿ.ಪೂ. ಸುಮಾರು ೫, ೦೦೦ ದ ಸುಮಾರಿಗೆ ಎನ್ನಬಹುದು. ಅದಕ್ಕೂ ಹಿಂದೆ ಆತ ತನ್ನ ಸುತ್ತಲಿನ ಪ್ರಾಕೃತಿಕ ಸನ್ನಿವೇಶಗಳನ್ನವಲಂಬಿಸಿದ್ದ ಅಲೆಮಾರಿ ಜೀವನವನ್ನು ಮುಕ್ತಾಯಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲಸುವುದನ್ನು ಕಲಿತು, ಜನರೊಡನೆ ಗುಂಪುಗೂಡಿ ವಾಸಮಾಡಲಾರಂಭಿಸಿ, ತಾನು, ತನ್ನದು ಎಂಬ ಮನೋಭಾವ ಬೆಳದು, ಕುಟುಂಬ ಪದ್ಧತಿ, ಆರಂಭವಾದಾಗ ಮನೆಯ ಆವಶ್ಯಕತೆ ಉಂಟಾಯಿತು. ಈ ಮನೆಗಳು ಪ್ರಾರಂಭದಲ್ಲಿ ಗುಡಿಸಲುಗಳಾಗಿದ್ದವು '.

(ಬಾ.ರಾ.ಗೋಪಾಲ 1993:6) ಮೊದಮೊದಲು ಮನೆಗಳು ಗಾಳಿ ಮಳೆಗಳಿಂದ ರಕ್ಷಿಸಿಕೊಳ್ಳಲು ನಿರ್ಮಾಣವಾದವು. ಆನಂತರ ಕಾಲದಲ್ಲಿ ಆತನು ವ್ಯವಸಾಯ ಕೈಗೊಂಡು, ಪಶುಪಾಲನೆ ಆರಂಭಿಸಿದಾಗ ಅವನಿಗೆ ಕೃಷಿ ಸಲಕರಣೆಗಳನ್ನಿಡುವುದಕ್ಕೂ ಸಾಕುಪ್ರಾಣಿಗಳನ್ನು ಗಾಳಿ-ಮಳೆಗಳಿಂದ ರಕ್ಷಿಸಿಕೊಳ್ಳುವುದಕ್ಕೂ ಮನೆಯನ್ನು ಕಟ್ಟಿಕೊಂಡನು. ಇಂದಿನ ಹಾಗೆ, ಹಿಂದೆ ಕಲ್ಲು ಇಟ್ಟಿಗೆಗಳನ್ನು ಬಳಸಿ ಮನೆಕಟ್ಟುತ್ತಿರಲಿಲ್ಲವಾದರೂ, ಅವು ಭದ್ರವಾಗಿದ್ದು, ಗಾಳಿ-ಮಳೆಯಿಂದ ರಕ್ಷಿತವಾಗಿದ್ದವು ಅವುಗಳನ್ನು ಕಟ್ಟುವಾಗಲೇ ನೆಲದಿಂದ ಕಡಿಮೆ ಎತ್ತರದಲ್ಲಿ, ಗಾಳಿಯ ಹೊಡೆತ ಕಡಿಮೆ ಇರುವ ಸ್ಥಳವನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದರು. ಬದಲಾದ ಈಗಿನ ದಿನಗಳಲ್ಲಿ ಉಪ್ಪಾರರು ಇತರ ಜನವರ್ಗದವರಂತೆ ತಮಗೆ ಬೇಕಾದ ರೀತಿಯಲ್ಲಿ ಗೃಹನಿರ್ಮಾಣ ಮಾಡಿಕೊಂಡಿದ್ದಾರೆ. ಮುಖ್ಯವಾಗಿ ಮನೆಗಳ ನಿರ್ಮಾಣವನ್ನು ಇವರೇ ಮಾಡುತ್ತಾರೆ. ಸಾಮಾನ್ಯವಾಗಿ ಇವರು ಗುಂಪು-ಗುಂಪಾಗಿ ವಾಸಿಸಲು ಇಷ್ಟಪಡುತ್ತಾರೆ. ಪ್ರತಿಯೊಂದು ಮನೆಯ ಮುಂದೆ ಸ್ವಲ್ಪ ಜಾಗವಿರುವಂತೆ ನೋಡಿಕೊಂಡು ಮನೆಗಳನ್ನು ನಿರ್ಮಿಸಿರುತ್ತಾರೆ. ಇದಕ್ಕೆ 'ಅಂಗಳ' ವೆಂದು ಕರೆಯುತ್ತಾರೆ.

ಮನೆಕಟ್ಟುವುದಕ್ಕೂ ಮೊದಲು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು, ಊರಿನ ಪುರೋಹಿತ ಅಥವಾ ಜಂಗಮರಿಂದ ಶಾಸ್ತ್ರವನ್ನು ಕೇಳಿಸಿ, ಆ ಸ್ಥಳದ ಬಗೆಗಿನ ವಿವರಗಳನ್ನು ತಿಳಿದುಕೊಳ್ಳುತ್ತಾರೆ. ಆ ಸ್ಥಳದಲ್ಲಿ ಭೂತಸ್ಥಾನಗಳೂ, ನಾಗನೆಡೆ, ಸ್ಮಶಾನದ ಜಾಗ, ಇಂಥವುಗಳ ಕುರುಹುಗಳು ಇದ್ದರೆ ಆ ಜಾಗವನ್ನು ಆರಿಸಿಕೊಳ್ಳುವುದಿಲ್ಲ. ಶಾಸ್ತ್ರದ ಮುಖಾಂತರ ಸ್ಥಳ ಒಳ್ಳೆಯದಿದ್ದರೆ, ತಮಗೆ ಬೇಕಾದ ಅಳತೆಯಲ್ಲಿ ಆಯವನ್ನು ನೋಡಿ ಮನೆಕಟ್ಟಿ ಕೊಳ್ಳುತ್ತಾರೆ.

ಮನೆಯನ್ನು ಪ್ರವೇಶಿಸಿದಾಗ ಎಡಬಲ ಭಾಗದಲ್ಲಿ ದನ-ಕರುಗಳನ್ನು ಕಟ್ಟುವುದಕ್ಕೆ ತಗ್ಗಾದ ಸ್ಥಳವಿದ್ದು ಆನಂತರ ಎತ್ತರದ ಕಟ್ಟೆಯಾಕಾರದ ವಿಶಾಲವಾದ 'ಪಡಸಾಲೆ' ಇರುತ್ತದೆ. ಇಲ್ಲಿಯೇ ಧಾನ್ಯಗಳನ್ನು ಸಂಗ್ರಹಿಸಿಡಲು 'ಕಣಜ'ವಿದ್ದೂ ಮತ್ತೊಂದು ಕಡೆ ರಾತ್ರಿ ಮಲಗಿಕೊಳ್ಳಲು ಸ್ಥಳ ವಿರುತ್ತದೆ. ಇದರ ಪಕ್ಕದಲ್ಲಿ ತೆಂಗಿನಕಾಯಿ ಸಂಗ್ರಹಿಸಿಡಲು ಒಂದು ಕೋಣೆ ಇರುತ್ತದೆ. ಇದರ ಬಳಕೆಗೆ ಅಟ್ಟವನ್ನೂ ಬಳಸಿಕೊಳ್ಳುತ್ತಾರೆ. 'ಪಡಸಾಲೆ'ಯ ಆನಂತರ ಎಡಬಲಗಳಲ್ಲಿ ಒಂದೊಂದು ಮಲಗುವ ಕೋಣೆಗಳಿದ್ದು ಆನಂತರದಲ್ಲಿ ಸ್ನಾನದ ಮನೆ ಇರುತ್ತದೆ. ಮಧ್ಯದಲ್ಲಿ ಚೌಕಾಕಾರದ ಚೌಕಿ ಇರುತ್ತದೆ. ಅದರ ಸುತ್ತಲು ಅಡಿಗೆ ಮನೆ, ದೇವರ ಮನೆ, ಊಟದ ಮನೆಗಳು ಆವರಿಸಿಕೊಂಡಿರುತ್ತವೆ. ಇಂಥ ಮನೆಗಳಿಗೆ ಚೌಕಿಮನೆಗಳೆಂದು ಕರೆಯುತ್ತಾರೆ.

ಮನೆಗಳ ಗೋಡೆಯನ್ನು ಮಣ್ಣಿನಿಂದ ನಿರ್ಮಿಸಿದ ದಪ್ಪಗೋಡೆಗಳಿದ್ದು ಮೇಲುಹೊದಿಕೆ ಬಿದಿರಿನ ದಬ್ಬೆಗಳನ್ನು ಕಟ್ಟಿ ಅದರ ಮೇಲೆ 'ನಾಡ ಹಂಚ' ನ್ನು ಹೊದಿಸಿರುತ್ತಾರೆ. ಈ ತರಹದ ಮನೆಗಳು

ಬೇಸಗೆಯಲ್ಲಿ ತಂಪಾಗಿಯೂ, ಚಳಿಗಾಲ ಮತ್ತು ಮಳೆಗಾಲದಲ್ಲಿ ಬೆಚ್ಚಗಿರುತ್ತವೆ. ಮನೆಯ ಪಕ್ಕದಲ್ಲಿ ವ್ಯವಸಾಯೋಪಕರಣಗಳನ್ನು ಇಟ್ಟುಕೊಳ್ಳಲು ಕಡಿಮಾಡೊಂದನ್ನು ನಿರ್ಮಿಸಿ ಕೊಂಡಿರುತ್ತಾರೆ. ಇದರಲ್ಲಿ 'ಕೋಳಿಗೂಡು, ಕುರಿಹಟ್ಟಿ', ಮಳೆಗಾಲಕ್ಕೆ ಬೇಕಾದ ಸೌದೆಯನ್ನು ಸಂಗ್ರಹಿಸಿಟ್ಟುಕೊಂಡಿರುತ್ತಾರೆ.

ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲರಾಗಿರುವವರು ಆಧುನಿಕ ರೀತಿಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಹಳ್ಳಿಯಲ್ಲಿ ಬದುಕುವ ಶ್ರೀಮಂತರು ಆಧುನಿಕ ರೀತಿಯ ಮನೆ ಕಟ್ಟಿಕೊಂಡರೂ ಹಳೆಯ ಮನೆಗಳನ್ನು ಕೆಡವದೇ ಅವುಗಳನ್ನು ಕೃಷಿ (ಸಾಮಾನ) ಉಪಕರಣಗಳನ್ನಿಡಲು, ಜಾನುವಾರುಗಳನ್ನು ಕಟ್ಟಲು ಉಪಯೋಗಿಸುತ್ತಾರೆ. ಇವರ ಮನೆಗಳು ಅದ್ಭುತ ಕಲಾವಿನ್ಯಾಸಕ್ಕೆ ಹೆಸರಾಗಿವೆ. ಮನೆಯಲ್ಲಿರುವ ದ್ವಾರಬಾಗಿಲುಗಳ ಮೇಲೂ ಕಂಬಗಳ ಮೇಲೂ ಕುಸುರಿ ಕೆಲಸಗಳನ್ನು ಮಾಡಿರುತ್ತಾರೆ. ಕೆಲವು ಮನೆಗಳು ಅಂತಸ್ತಿನ ಮನೆಗಳಾಗಿವೆ. ಇವುಗಳನ್ನು'ಉಪ್ಪರಿಗೆಯ ' ಮನೆಗಳೆಂದೂ ಕರೆಯುತ್ತಾರೆ. ಇಂಥ ಮನೆಗಳನ್ನು ನಿರ್ಮಿಸುವುದರಲ್ಲಿ ಇವರು ನಿಪುಣರಾಗಿದ್ದಾರೆ. ಈ ಕಾರಣದಿಂದ ಇವರಿಗೆ 'ಉಪ್ಪರಿಗೆ ಕಾರ' ಎಂದೂ ಹೆಸರಾಗಿ 'ಉಪ್ಪಾರ' ಆಯಿತೆಂದು ಜನ ಹೇಳುತ್ತಾರೆ.

ಹಬ್ಬ-ಹರಿದಿನಗಳಲ್ಲಿ ಮನೆಯ ಗೋಡೆಗಳಿಗೆ ಸುಣ್ಣ ಬಣ್ಣಗಳಿಂದ ಅಲಂಕರಿಸಿರುತ್ತಾರೆ. ಮದುವೆಯ ಸಂದರ್ಭದಲ್ಲಿ ಗೋಡೆಯ ಮೇಲೆ 'ಹಸೆ'ಯ ಚಿತ್ರ ಬರೆಯುವುದನ್ನು ಕಾಣಬಹುದು. ಸೂರ್ಯ, ಚಂದ್ರ, ಕಳಸ ಹಿಡಿದ ನಾರಿ, ನವಿಲು, ಮುತ್ತೈದೆಯರು, ಈ ಚಿತ್ರಗಳನ್ನು ಬಿಡಿಸಿರುತ್ತಾರೆ. ಹೊಸಮನೆ ಪ್ರವೇಶದ ಸಂದರ್ಭದಲ್ಲಿ ಪುರೋಹಿತರು ಗೋಡೆಯ ಮೇಲೆ 'ಓಂ', 'ಶ್ರೀ' ಬರೆಯುವುದು ಕಂಡು ಬರುತ್ತದೆ. ಇದಲ್ಲದೆ ಶಾಸ್ತ್ರ ಕಂಡು ಕೊಳ್ಳಲು ಕೆಲವು ರೀತಿಯ ಚಿತ್ರಗಳನ್ನು ಬರೆಯುವುದೂ ವಾಡಿಕೆಯಲ್ಲಿದೆ. ಮನೆಯ ಮುಂದಿನ ಅಂಗಳವನ್ನು ಪ್ರತಿ ಶನಿವಾರ ಅಥವಾ ಸೋಮವಾರ ಸಗಣಿಯಿಂದ ಸಾರಿಸಿ ರಂಗೋಲಿ ಹಾಕುತ್ತಾರೆ.

**ಗೃಹ ಪ್ರವೇಶ :** - ಪುರೋಹಿತರಿಂದ ಶಾಸ್ತ್ರ ಕೇಳಿ ಆಯ್ಕೆ ಮಾಡಿದ ಸ್ಥಳದಲ್ಲಿ ಮನೆಯೊಂದನ್ನು ನಿರ್ಮಿಸಿದ ನಂತರ, ಒಳ್ಳೆಯ ದಿನ ನೋಡಿ ಶಾಸ್ತ್ರೋಕ್ತವಾಗಿ ಗೃಹ ಪ್ರವೇಶ ಮಾಡುತ್ತಾರೆ. ಮೊದಲು ಮನೆಗೆ ಶೃಂಗರಿಸಿದ ಬಸವಣ್ಣನನ್ನು ದಾಟಿಸಿ, ಅನಂತರ ಮಗುವಿನಿಂದ ತುಂಬಿದ ತೊಟ್ಟಿಲನ್ನು ತೆಗೆದುಕೊಂಡು ಹೋಗುವರು. ಅನಂತರ ಮಧ್ಯ ಮನೆಯ ಒಳಗೆ, ಚೌಕಾಕಾರದ ಹೋಮಕ್ಕೆ ತುಪ್ಪ, ಹಾಲು, ಜೇನು, ಸಕ್ಕರೆ ಇತ್ಯಾದಿಗಳನ್ನು ಹಾಕುತ್ತಾರೆ. ಮನೆಯ ಮಾಡಿನ ಸುತ್ತಲೂ ದರ್ಭೆಯ ಹುಲ್ಲಿನ ದಾರವನ್ನು ಒಂದು ಸುತ್ತು ಕಟ್ಟುತ್ತಾರೆ. ನಾಲ್ಕು ಮೂಲೆಗೂ ಒಂದೊಂದು ಕುಂಬಳಕಾಯಿಕಟ್ಟುತ್ತಾರೆ. ಅದರ ಕೆಳಭಾಗದಲ್ಲಿ ಕುಂಬಳಕಾಯಿ ಮತ್ತು ಅನ್ನದ ಚೆರುವನ್ನು ಹಾಕಿ ಬಲಿ ತೆಗೆದು ಕುಂಬಳ ಕಾಯಿ ಒಡೆದು ಕುಂಕುಮ ತುಂಬುತ್ತಾರೆ. ಅನಂತರದಲ್ಲಿ ಆಯಾಯಾ ವ್ಯಕ್ತಿಗಳ ಸಾಮರ್ಥ್ಯಕ್ಕನುಗುಣವಾಗಿ ಕುರಿ, ಕೋಳಿಯನ್ನು

ಬಲಿಕೊಡುತ್ತಾರೆ. ಅದರ ಮಾಂಸವನ್ನು ಅಡುಗೆ ಮಾಡಿ 'ಹಿರಿಯರಿಗೆ ಎಡೆ' ಮಾಡಿ ಎಲ್ಲರೂ ಸಹಪಂಕ್ತಿ ಭೋಜನಮಾಡುತ್ತಾರೆ.

### ೨. ೫. ನ್ಯಾಯ ಪದ್ಧತಿ

ಉಪ್ಪಾರರಲ್ಲಿ ವಂಶ ಪರಂಪರಾಗತವಾಗಿ ಬಂದ ನ್ಯಾಯಪದ್ಧತಿಯ ವ್ಯವಸ್ಥೆಯು ಸಾಂಸ್ಕೃತಿಕವಾಗಿ ಬಹು ಮಹತ್ವದ ಅಂಶವಾಗಿದೆ. ಶಾಂತ ಹಾಗೂ ವ್ಯವಸ್ಥಿತವಾಗಿ ಜೀವನ ನಡೆಸಲು ಪ್ರತಿಯೊಂದು ಜನಾಂಗವೂ ತನ್ನದೇ ಆದ ರೀತಿಯಲ್ಲಿ ನ್ಯಾಯ ವ್ಯವಸ್ಥೆಯೊಂದನ್ನು ಮಾಡಿಕೊಂಡಿರುತ್ತದೆ. ಇದನ್ನು 'ಕಟ್ಟೇಮನೆ ನ್ಯಾಯ' ಎಂದು ಕರೆಯುತ್ತಾರೆ. ಈ ನ್ಯಾಯ ವ್ಯವಸ್ಥೆಯಲ್ಲಿ ಆ ಜಾತಿಯ ಹಿರಿಯರು ಇರುತ್ತಾರೆ. ಇವರು ತಮ್ಮ ಜೀವನಾನುಭವದಲ್ಲಿ ಅನೇಕ ನ್ಯಾಯ ಪಂಚಾಯಿತಿಗಳಲ್ಲಿ ಭಾಗವಹಿಸುತ್ತಾರೆ. ಕಠಿಣ ಸಂದರ್ಭದಲ್ಲಿ ಸಮಯೋಚಿತವಾದ ನಿರ್ಣಯಗಳನ್ನು ಕೊಟ್ಟು ಆ ಜನರಲ್ಲಿ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಈ ಪಂಚರು ಗೌರವ ಪೂರ್ಣ ವ್ಯಕ್ತಿಗಳು ಅಸಭ್ಯ ತೀರಿಯಲ್ಲಿ ವರ್ತಿಸಿದರೆ ಜಾತಿಯ ನಿಯಮಗಳನ್ನು ಮೀರಿದರೆ, ಕಟ್ಟುಕಟ್ಟಳೆಗಳನ್ನು ಉಲ್ಲಂಘನೆ ಮಾಡಿದರೆ ಅಂಥ ವ್ಯಕ್ತಿಗಳನ್ನು ಜಾತಿಯಿಂದ ಹೊರಗೆ ಹಾಕುವ ಅಥವಾ ಬಹಿಷ್ಕರಿಸುವ ಅಧಿಕಾರವನ್ನು ಇವರು ಹೊಂದಿದ್ದಾರೆ. ಈ ರೀತಿಯ ಅಧಿಕಾರಗಳನ್ನು ಬುಡಕಟ್ಟು ಜನಾಂಗಗಳಲ್ಲಿ ಕಾಣಬಹುದು. ಜಾತಿಯವರಲ್ಲಿ ನಡೆಯುವ ಜಗಳ, ಹಾದರ, ಕಳ್ಳತನ, ಬೇರೆ ಜಾತಿಯರನ್ನು ವಿವಾಹವಾಗುವುದು, ಸಾಮೂಹಿಕ ಕಾರ್ಯದಲ್ಲಿ ಭಾಗಿಯಾಗದೇ ಗಲಾಟೆ ಮಾಡುವುದು, ವಿವಾಹಿತಳನ್ನು ಬಿಡುವುದು ಇನ್ನು ಮುಂತಾದ ಸಂದರ್ಭದಲ್ಲಿ ಯಜಮಾನ, ಭಂಡಾರಿ ಮತ್ತು ಕೋಲ್ಕಾರರ ಪ್ರಮುಖ ಪಾತ್ರಗಳು ಮಹತ್ವವಾಗಿರುತ್ತವೆ. ಊರಿಗೊಬ್ಬರಂತೆ 'ಶೆಟ್ಟಿ' ಅಥವಾ 'ಯಜಮಾನ' ಇರುತ್ತಾನೆ. ಇವರು ಕಟ್ಟೆಮನೆಯವರಾಗಿರುತ್ತಾರೆ. ಇವರ ಕೆಲಸವನ್ನು ನಡೆಸಿಕೊಂಡು ಹೋಗಲು ಬಂಢಾರಿ ಇರುತ್ತಾನೆ. ಕಟ್ಟೆಮನೆ ಶೆಟ್ಟಿಗೂ ಭಂಡಾರಿಗೂ ಸಮಾನ ಗೌರವಗಳು ಜನಾಂಗದವರಿಂದ ಸಲ್ಲುತ್ತವೆ. ಈ ಜಾನಾಂಗದಲ್ಲಿ ಶೆಟ್ಟಿ, ಗೌಡ, ಮತ್ತು ಯಜಮಾನ ಇವು ಪ್ರತಿಷ್ಠಿತ ಹುದ್ದೆಗಳೆಂದು ಪರಿಗಣಿತವಾಗಿವೆ. ಭಂಡಾರಿಯ ಸಮಾನವಾಗಿಯೇ 'ಕೋಲ್ಕಾರ' ಎಂಬುವ ನೊಬ್ಬನಿರುತ್ತಾನೆ. ಇವನು, ಅವರ ಸಮಾನ ಗೌರವಗಳನ್ನು ಹೊಂದಿರುತ್ತಾನೆ. ಪ್ರಮುಖವಾಗಿ ಈತ ಸಭೆಯನ್ನು ಸೇರಿಸುವ ಕೆಲಸವನ್ನು ನಿರ್ವಹಿಸುತ್ತಾನೆ. ಹಬ್ಬ , ಜಾತ್ರೆ, ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಇವರನ್ನು ಜನಾಂಗದವರು ಪ್ರತ್ಯೇಕ ಹೇಳಿಕೆ ಮಾಡಿಕೊಂಡು ಸ್ವಾಗತಿಸುತ್ತಾರೆ. ಸಭೆ ಸಮಾರಂಭಗಳಲ್ಲಿ ಅವರುಗಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಇರುತ್ತದೆ. ಯಾವ ಸಂದರ್ಭದಲ್ಲಿ ಬೇಕಾದರೂ ತಪ್ಪಿತಸ್ಥರನ್ನು ಪ್ರಶ್ನಿಸುವ ವಿಚಾರಣೆ ನಡೆಸುವ ಹಕ್ಕನ್ನು ಪಡೆದಿರುತ್ತಾರೆ. ಉಪ್ಪಾರರ ಜೊತೆ ಒಡಗೂಡಿ

ಬದುಕುವ ಮತ್ತು ನ್ಯಾಯವ್ಯವಸ್ಥೆಯಲ್ಲಿ ಪಾಲುಗೊಳ್ಳುವ ಅವರು ತುಂಬಾ ಜವಾಬ್ದಾರಿಯುತ ವ್ಯಕ್ತಿಗಳಾಗಿರುತ್ತಾರೆ. ಇವರು ಆ ಜನಾಂಗದವರಲ್ಲಿಯೇ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ತುಂಬಾ ಶ್ರೀಮಂತರಾಗಿದ್ದು ಪ್ರತಿಷ್ಠಿತ ವ್ಯಕ್ತಿಗಳಾಗಿರುತ್ತಾರೆ.

ಕಟ್ಟೆಮನೆ ಯಜಮಾನನು ಸರ್ವೋಚ್ಚವಾದ ಸ್ಥಾನದಲ್ಲಿದ್ದು ಉಚ್ಚ ನ್ಯಾಯಧೀಶನಾಗಿರುತ್ತಾನೆ. ಈತನ ತೀರ್ಮಾನವೇ ಅಂತಿಯವಾಗಿದ್ದು ಇದನ್ನು ಎಲ್ಲರು ಒಪ್ಪುತ್ತಾರೆ. ಸಾಮಾನ್ಯವಾಗಿ ಊರಿನ ಸಾರ್ವಜನಿಕ ಕೆಲಸಗಳು ನಡೆಯಬೇಕಾದಾಗ ಕಟ್ಟೆಮನೆ ಯಜಮಾನ, ಭಂಡಾರಿ, ಕೋಲ್ಕಾರ ಮತ್ತು ಜಾತಿಯ ಹಿರಿಯ ಮುಖಂಡರ ಜೊತೆಗೆ ಸೇರಿ ಚರ್ಚಿಸಲಾಗುತ್ತದೆ. ಆನಂತರ ಕಾಲದಲ್ಲಿ ಎಲ್ಲರಿಗೂ ಸರಿಹೊಂದುವ ದಿನಾಂಕವನ್ನು ಗೊತ್ತು ಪಡಿಸಲಾಗುವುದು. ಆ ಕಾರ್ಯಕ್ಕೆ ತಗಲುವ ವೆಚ್ಚದ ವಿವರವನ್ನು ತಿಳಿದು ಚರ್ಚಿಸಿ ಊರಿನ ಮನೆ ಮನೆಗೂ ಎಷ್ಟೆಷ್ಟು ಚಂದಾಹಾಕಬೇಕು ಎನ್ನುವುದನ್ನು ನಿರ್ಧಾರಿಸಲಾಗುತ್ತದೆ. ಹೀಗೆ ನಿರ್ಧಾರ ಮಾಡುವಾಗ, ಆ ವ್ಯಕ್ತಿಯ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡಿರುತ್ತಾರೆ. ಊರಿನಲ್ಲಿ ನಡೆಯುವ ಜಾತ್ರೆ ಅಥವಾ ಹರಕೆಯಾದರೆ ಆದು ಇದೇ ಊರಿಗೆ ಸಂಬಂಧಿಸಿರುತ್ತದೆ. ಈ ಕಾರಣದಿಂದ ಆ ಊರಿನಲ್ಲಿ ಇರುವ ಇತರ ಜನಾಂಗದವರೊಂದಿಗೂ ಹಣವನ್ನು ಸಂಗ್ರಹಿಸುತ್ತಾರೆ. ಹಣ ಸಂಗ್ರಹ ಕಾರ್ಯಕ್ಕೆ ಜಾತಿಯ ಇತರರು ಕೋಲ್ಕಾರನಿಗೆ ಸಹಾಯ ಮಾಡುತ್ತಾರೆ. ಗ್ರಾಮದ ಇತರ ಮೇಲ್ವನಾಂಗದವರ ಮುಖಂಡರು ಧಾರ್ಮಿಕ ಕಾರ್ಯಗಳಿಗೆ ಬಂದರೆ ಅವರಿಗೆ ವೀಳ್ಯವನ್ನು ಕಟ್ಟೆಮನೆ ಯಜಮಾನನೇ ಕೊಡಬೇಕು.

ಕಟ್ಟೆಮನೆ ಯಜಮಾನನು ವಿವಾಹ, ಶುಭ-ಸಂದರ್ಭಗಳಲ್ಲಿ ಬೇಟಿ ನೀಡಿ ಜಾತಿಯ ನಿಯಮವನ್ನು ಉಲ್ಲಂಘನೆ ಆಗದಂತೆ ನೋಡಿಕೊಳ್ಳುತ್ತಾನೆ. ಎಲ್ಲಾ ಶಾಸ್ತ್ರಗಳೂ ಕ್ರಮವಾಗಿ ನಡೆಯುವಂತೆ ಕಾರ್ಯ ಮಾಡುವ ಮನೆಯವರು ಜಾಗ್ರತೆವಹಿಸುತ್ತಾರೆ. ತಮ್ಮ ಶುಭಕಾರ್ಯಕ್ಕೆ ಬಂದ ಯಜಮಾನನನ್ನು ವಿಶೇಷ ಗೌರವ ಆದರಗಳಿಂದ ಸ್ವಾಗತಿಸಿ ಸತ್ಕರಿಸುತ್ತಾರೆ.

ಉಪ್ಪಾರ ಜನಾಂಗದವರು ವಾಸಿಸುವ ವ್ಯಾಪ್ತಿಗೆ ಸೇರುವ ಜಾಗದಲ್ಲಿ ಕಟ್ಟೆಮನೇ ಶೆಟ್ಟಿ ಅಥವಾ ಯಜಮಾನನು ಕೆಲವು ನಿರ್ದಿಷ್ಟ ನ್ಯಾಯಕಟ್ಟೆಗಳನ್ನು ಸ್ಥಾಪಿಸುತ್ತಿದ್ದನು. ದೇವಸ್ಥಾನದ ಚಾವುಡಿ, ಅರಳೀಕಟ್ಟೆ, ಬೇವಿನಮರ, ಹಲಸಿನಮರಗಳ ಕಟ್ಟೆಗಳು ನಾಯ್ಯಕಟ್ಟೆಗಳಾಗಿರುತ್ತಿದ್ದವು. ಕೆಲವೊಮ್ಮೆ ಯಜಮಾನನು ಈ ಕಟ್ಟೆಯಲ್ಲಿ ಬಂದು ಜನರನ್ನು ಬೇಟಿಯಾಗುವುದೂ ಉಂಟು. ಹೀಗೆ ಬರುವುದನ್ನು ಕೋಲ್ಕಾರನು ಊರಿನ ಜನರಿಗೆ ತಿಳಿಸಿರುವುದರಿಂದ ಯಜಮಾನನ ಬೇಟಿಯನ್ನು ಜನರು ಸದುಪಯೋಗ ಮಾಡಿಕೊಳ್ಳುತ್ತಿದ್ದರು. ನ್ಯಾಯ ವ್ಯವಸ್ಥೆಯಲ್ಲಿ ಮುಖಂಡರು ತಮ್ಮ ಕೆಳಗಿನ ಪಂಚರು ತಪ್ಪುಮಾಡಿದರೆ

ಅವರನ್ನು ದಂಡಿಸುವ ಮತ್ತು ಆ ಹುದ್ದೆಯಿಂದ ತೆಗೆದು ಹಾಕುವ ಅಧಿಕಾರವನ್ನು ಹೊಂದಿದ್ದರು. ಹಾಗೆ ಅಧಿಕಾರದಿಂದ ಇಳಿಸುವ ಮತ್ತು ತೆರವಾದ ಹುದ್ದೆಗೆ ನೇಮಿಸಿಕೊಳ್ಳುವ ಕೆಲಸಗಳು ನ್ಯಾಯಕಟ್ಟೆಗಳಲ್ಲಿ ನಡೆಯುತ್ತಿದ್ದವು. ಈ ನೇಮಕಾತಿಗಳು ಆ ವ್ಯಕ್ತಿಯ ವಂಶಪಾರಂಪರೆಯನ್ನು ಅನುಲಕ್ಷಿಸಿ ಯೋಗ್ಯನೆಂದು ಕಂಡು ಬಂದರೆ ಅವನನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು.

ಪಂಚಾಯತಿ ಸಭೆಯನ್ನು ಸೇರಿಸುವ ಕೋಲ್ಕಾರರಿಗೆ ಊರಿನವರು ಯಾವುದೇ ಹಣವನ್ನು ಕೊಡುವುದಿಲ್ಲ. ಅದರ ಬದಲಾಗಿ ಭತ್ತ, ತೆಂಗಿನಕಾಯಿ, ತರಕಾರಿಗಳನ್ನು ಮನೆಗೆ ಕಳುಹಿಸುತ್ತಾರೆ ಮತ್ತು ಅವರನ್ನು ಪ್ರೀತಿಯಿಂದ ಕಾಣುತ್ತಾರೆ. ಈ ನ್ಯಾಯ ವ್ಯವಸ್ಥೆಗೆ ಒಳಪಟ್ಟವರು ಬಹಳ ಗಂಭೀರವಾಗಿ ಬದುಕುತ್ತಿದ್ದರು. ನ್ಯಾಯ ಕೊಡುವಾಗ ಯಾವುದೇ ತಾರತಮ್ಯವನ್ನು ಮಾಡದೇ ನಿರ್ಣಯ ನೀಡುತ್ತಿದ್ದರು.

ವಂಶ ಪರಂಪರೆಯಾಗಿ ನ್ಯಾಯ ನೀಡುತ್ತಾ ಬಂದ ಕಟ್ಟೆಮನೆ ಯಜಮಾನ, ಭಂಡಾರಿ ಮತ್ತು ಕೋಲ್ಕಾರರು ತಮ್ಮ ಜನಾಂಗದಲ್ಲಿ ಆಗುವ ಜಗಳ, ಹಿಂಸೆ, ಅತ್ಯಾಚಾರ ಮುಂತಾದವುಗಳನ್ನು ತಮ್ಮಲ್ಲಿಯೇ ಬಗೆ ಹರಿಸಿಕೊಳ್ಳುತ್ತಿದ್ದರು. ಯಾವುದೇ ಜಟಿಲ ಸಮಸ್ಯೆಗಳು ಎದುರಾದರೂ ತಮ್ಮ ಜನಾಂಗದ ಒಳಜಗಳಗಳ ಬಗೆಗೆ ಅನ್ಯ ಜನಾಂಗದವರಿಗೆ ತಿಳಿಯಪಡಿಸುತ್ತಿರಲಿಲ್ಲ. ಕಾರಣ ಅವರಿಗೆ ತಮ್ಮ ಜನಾಂಗದ ಮೇಲಿನ ಗೌರವಗಳೇ ಇದಕ್ಕೆ ಕಾರಣವಾಗಿವೆ. ಆತ್ಮಾಭಿಮಾನ ಗೌರವಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಾಗೂ ತಮ್ಮ ಸಮಾಜದ ಹಿತದೃಷ್ಟಿಯಿಂದ ರಹಸ್ಯವನ್ನು ಬಯಲು ಮಾಡದೇ ತಮ್ಮ ತಮ್ಮವರಲ್ಲೆ ಉಪಾಯವಾಗಿ ಬಗೆಹರಿಸಿಕೊಳ್ಳುವ ವಿವೇಕಶಾಲಿಗಳಾಗಿರುತ್ತಾರೆ. 'ಕೆಲವು ಸಾರಿ ಅನ್ಯ ಜನಾಂಗದ ಜನರೊಂದಿಗೆ ಜಗಳಗಳಾದಾಗ ಊರ ಮುಖಂಡರಿಂದ ನ್ಯಾಯ ಬಗೆಹರಿಸಿಕೊಳ್ಳುವುದುಂಟು' (ರಮೇಶ್ ಸ.ಚಿ. 1994:8) ಉಳಿದಂತೆ ಒಳಜಗಳನ್ನು ಅವರ ಮುಂದೆ ತೆಗೆದುಕೊಂಡು ಹೋಗುವುದಿಲ್ಲ.

### ೩.೫.೧. ಶಿಕ್ಷೆಗಳು

ಧಾರ್ಮಿಕ ಕಾರ್ಯದಲ್ಲಿ ತಪ್ಪಿಸಿಕೊಳ್ಳುವುದು, ಜಗಳ, ಕಳ್ಳತನ, ಇನ್ನು ಮಾದಲಾದ ಕೃತ್ಯಗಳನ್ನು ಎಸಗಿದರೆ ದಂಡ ವಿಧಿಸುತ್ತಿದ್ದರು. ಇಲ್ಲದಿದ್ದರೆ ಊರಿನ ಗ್ರಾಮ ದೇವತೆಯ ಪೂಜೆಯನ್ನು ನಡೆಸುವಂತೆ ತೀರ್ಪು ಕೊಡುತ್ತಿದ್ದರು. ಇದನ್ನು ಒಪ್ಪಿಕೊಳ್ಳದಿದ್ದರೆ ಜಾತಿಯಿಂದ ಬಹಿಷ್ಕಾರ ಹಾಕುತ್ತಿದ್ದರು. ಹೀಗೆ ಬಹಿಷ್ಕರಿಸಲ್ಪಟ್ಟವನಿಗೆ ಊರಿನಲ್ಲಿ ಯಾರು ಮಾತನಾಡಿಸುತ್ತಿರಲಿಲ್ಲ. ಯಾವ ಸಭೆ ಸಮಾರಂಭಗಳಿಗೆ ಕರೆಯುತ್ತಿರಲಿಲ್ಲ. ಮದುವೆ, ಮುಂಜಿ, ಹಬ್ಬ ಹರಿದಿನ ಮುಂತಾದ ಸಂತೋಷ ಕೂಟಗಳಲ್ಲಿ ಅವನಿಗೆ ಪ್ರವೇಶವಿರುತ್ತಿರಲಿಲ್ಲ.

ಹೆಂಡತಿಯನ್ನು ಬಿಡುವುದು, ಹಾದರ ಮಾಡುವುದು, ಅನ್ಯ ಜಾತಿಯವರನ್ನು ಮದುವೆ ಮಾಡಿಕೊಳ್ಳುವುದು, ಅನ್ಯರ ಹೊಲಕ್ಕೆ ಮನೆಗಳಿಗೆ ಬೆಂಕಿ ಇಡುವುದು ಇನ್ನೂ ಮುಂತಾದ ಕೃತ್ಯವನ್ನು ಎಸಗಿದವರಿಗೆ ಬಹಿಷ್ಕರಿಸಿ, ಜಾತಿಯಿಂದ ಹೊರಗಿಡುವುದು, ಊರಿನಿಂದ ಮನೆಯನ್ನು ಕೀಳಿಸುವುದು ಇನ್ನೂ ಮುಂತಾದ ಶಿಕ್ಷೆಗಳಿದ್ದವು. ಮಾಡಿದ ಹಾದರವನ್ನು ಒಪ್ಪಿಕೊಂಡರೆ ಅವರಿಗೆ ದಂಡವನ್ನು ವಿಧಿಸುತ್ತಿದ್ದರು. ಅಂತರ ಜಾತಿಯ ವಿವಾಹವಾದವರಿಗೆ ದಂಡ ವಿಧಿಸುತ್ತಿದ್ದರು ಮತ್ತು ತಮ್ಮ ಜಾತಿಗೆ ಸೇರಿಸಿಕೊಳ್ಳುತ್ತಿದ್ದರು. ಹೆಂಡತಿಯನ್ನು ಬಿಡಲು ಅದಕ್ಕೆ ಸರಿಯಾದ ಕಾರಣಗಳಿದ್ದರೆ ಅವನನ್ನು ದಂಡ ವಿಧಿಸದೆ ಬಿಡುತ್ತಿದ್ದರು. ಅವಳು ಹಾದರ, ಜಗಳ ಗಂಟಿತನ, ಮನೆಯ ಮರ್ಯಾದೆ ಕಳೆದರೆ ಅವಳನ್ನು ಬಿಡಲು ಸರಿಯಾದ ಕಾರಣಗಳಾಗಿವೆ. ಸಾಮಾನ್ಯ ಕಾರಣಗಳಿಗೆ ಬಿಟ್ಟಿದ್ದರೆ ಅವಳನ್ನು ಸೇರಿಸಿಕೊಳ್ಳಲು ಪಂಚರು ಒತ್ತಾಯಿಸಿ ಸೇರಿಸುತ್ತಾರೆ. ಹಾಗೆ ಒಪ್ಪಿಕೊಳ್ಳದೆ ಇದ್ದರೆ ಅಂಥವರಿಗೆ ಬಹಿಷ್ಕಾರ ಹಾಕುತ್ತಾರೆ.

ಒಂದು ವೇಳೆ ಹೆಂಡತಿಯಲ್ಲಿಯೇ ದೋಷವಿದ್ದರೆ, ಗಂಡನು ಕಟ್ಟಿದ್ದ ತಾಳಿ, ಮೂಗುತಿ ಹಾಗೂ ಓಲೆಗಳನ್ನು ತೆಗೆದುಕೊಳ್ಳುತ್ತಾನೆ. ಹೆಂಗಸೇ ಗಂಡನನ್ನು ಬಿಟ್ಟಿದ್ದರೆ 'ತೆರ'ವನ್ನು ಹಿಂತಿರುಗಿ ಸುತ್ತಿದ್ದಳು. ಹೆಂಡತಿ ಇದ್ದು ಎರಡನೇ ಮದುವೆ ಮಾಡಿಕೊಂಡರೆ ಮೊದಲ ಹೆಂಡತಿಗೆ ಇವರ ಜೊತೆ ಬದುಕಲು ಇಷ್ಟವಿಲ್ಲದಿದ್ದರೆ ಅಂಥವಳಿಗೆ ಗಂಡನಿಂದ ಪರಿಹಾರವನ್ನು ಕೊಡಿಸುತ್ತಿದ್ದರು. ಅವಳಿಗೆ ಮಕ್ಕಳಿದ್ದರೆ ಅವುಗಳ ಜವಾಬ್ದಾರಿ ಗಂಡನೇ ನೋಡಿಕೊಳ್ಳಬೇಕಾಗುತ್ತದೆ.

ಎರಡನೇ ಮದುವೆಯಾಗುವವರು ತಮಗೆ ಇಷ್ಟ ಬಂದ ಹಾಗೆ ಮದುವೆ ಮಾಡಿಕೊಳ್ಳುವಂತಿಲ್ಲ, ಹಾಗೆ ಆಗುವವರು ಮೊದಲು ಯಜಮಾನರಿಗೆ ತಿಳಿಸಿ ಅವರ ಒಪ್ಪಿಗೆ ಪಡೆದ ಅನಂತರವೇ ಮದುವೆ ಮಾಡಿಕೊಳ್ಳಬೇಕು. ಗಂಡ ಬಿಟ್ಟಿದ್ದವಳನ್ನು ಮದುವೆಯಾಗಲು ಇಚ್ಛಿಸಿದವನು ಪಂಚರ ಅಥವಾ ನ್ಯಾಯ ಕಟ್ಟೆಯ ಎದುರು ಅವಳನ್ನು ಮದುವೆಯಾಗುವೆನೆಂದು ತಿಳಿಸಬೇಕು. ಅವಳಿಗೆ ಮಕ್ಕಳು ಇಲ್ಲದಿದ್ದರೆ ಅವರ ಜವಾಬ್ದಾರಿಯು ಅವನಿಗೆ ಸೇರುತ್ತದೆ. ಅವಳಿಗೆ ನ್ಯಾಯ ಕಟ್ಟೆಯ ಎದುರೆ ತಾಳಿಕಟ್ಟಿ ಹೆಂಡತಿಯನ್ನಾಗಿ ಸ್ವೀಕರಿಸಿ ಅಲ್ಲಿ ನೆರೆದಿರುವ ಎಲ್ಲರಿಗೂ ಊಟ ಕೊಡುತ್ತಾನೆ. ಹೀಗೆ ಮದುವೆಯಾದ ಹೆಂಡತಿಯನ್ನು ಯಾವುದೇ ಕಾರಣದಿಂದಲೂ ಬಿಡುವಂತಿಲ್ಲ. ಹಾಗೆ ಬಿಟ್ಟರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಕೆಲವೊಂದು ವೇಳೆ ಜಾತಿಯಿಂದ ಬಹಿಷ್ಕರಿಸುವುದೂ ಉಂಟು.

ಕೆಲವು ಸಾರಿ ನ್ಯಾಯ ತೀರ್ಮಾನಗಳು ಜಟಿಲವೆಂದು ತೋರಿದರೆ ಅಥವಾ * ತಮ್ಮ ಕೈಮೀರುವ ಸಂಭವವಿದ್ದರೆ ಆದಿನ ತೀರ್ಪನ್ನು ಕೊಡದೆ ಮುಂದಿನ ದಿನವನ್ನು ಗೊತ್ತು ಮಾಡುತ್ತಿದ್ದರು. ಸಮಸ್ಯೆಗಳ ನ್ಯಾಯ ನಿರ್ಣಯಕ್ಕಾಗಿ ಸುತ್ತಲಿನ ಪ್ರಮುಖ ಜಾತಿ ಮುಖಂಡರುಗಳನ್ನು ಗೌರವದಿಂದ ಆಹ್ವಾನಿಸುತ್ತಿದ್ದರು. ಹೀಗೆ, ಗೌರವಾನ್ವಿತ ಯಜಮಾನರು ಒಂದೆಡೆ ಸೇರಿ ತಮ್ಮ ತಮ್ಮಲ್ಲಿಯೇ ವಿಷಯದ ಕುರಿತು ಚರ್ಚೆ ನಡೆಸಿ

ಯೋಗ್ಯ ನಿರ್ಣವನ್ನು ಗೊತ್ತು ಮಾಡಿಕೊಂಡು ಸಭೆಯಲ್ಲಿ ತೀರ್ಪನ್ನು ಕೊಡುತ್ತಾರೆ. ನ್ಯಾಯ ಸ್ಥಾನದಲ್ಲಿ ಕುಳಿತ ಯಾರೂ ಕೊಡ ಯಾರೊಬ್ಬರ ಪರ ವಹಿಸದೆ ನ್ಯಾಯ ಮಾಡುತ್ತಾರೆ. ತಾರತಮ್ಯವೆಸಗುವುದು ಘನಘೋರವಾದ ಪಾಪವೆಂದು ಅವರು ಭಾವಿಸುತ್ತಾರೆ. ಅನ್ಯಾಯ ಯಾವಾಗಲು ಕೆಟ್ಟದ್ದನ್ನು ಎಸಗುತ್ತದೆ ಎಂದು ದೃಢವಾಗಿ ನಂಬುತ್ತಾರೆ.

ಒಟ್ಟಿನಲ್ಲಿ ಇವರ ನ್ಯಾಯ ಪದ್ಧತಿಯನ್ನು ಗಮನಿಸಿದರೆ ತಮ್ಮ ಪೂರ್ವಜರು ಹಾಕಿ ಕೊಟ್ಟ ತತ್ವಗಳನ್ನು ಪಾಲಿಸುತ್ತಾ ಅವರವರೊಳಗೇ ನ್ಯಾಯ ತೀರ್ಮಾನಗಳನ್ನು ಕಟ್ಟೆಮನೆ ಯಜಮಾನ ಅಥವಾ ಶೆಟ್ಟಿ ಅವರುಗಳೇ ಬಗೆ ಹರಿಸಿಕೊಂಡು ಬಂದಿದ್ದಾರೆ. ಈಚಿನ ದಿನಗಳಲ್ಲಿ ಅನಾದಿ ಕಾಲದಿಂದ ಬಂದ ನ್ಯಾಯಪದ್ಧತಿ ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣದಿಂದಾಗಿ ಇವರಲ್ಲಿ ಕಣ್ಮರೆಯಾಗಿದೆ.

**೩.೧೬. ಜಾತಿಗೆ ಸೇರಿಸಿಕೊಳ್ಳುವುದು**

ಉಪ್ಪಾರರು ಕೆಲವು ಸಂದರ್ಭಗಳಲ್ಲಿ ತಮ್ಮಜಾತಿಗೆ ಅನ್ಯ ಜಾತಿಯವರನ್ನು ಸೇರಿಸಿಕೊಳ್ಳಲೇ ಬೇಕಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ವಿಶಿಷ್ಟ ಆಚರಣೆಗಳ ಮೂಲಕ ವಿಧಿವತ್ತಾಗಿ ಜಾತಿಗೆ ಸೇರಿಸಿಕೊಳ್ಳುತ್ತಾರೆ. ತಮ್ಮ ಜಾತಿಯ ಹುಡುಗನೊಬ್ಬ ಬೇರೆ ಜಾತಿಯ ಹೆಣ್ಣನ್ನು ಮದುವೆ ಮಾಡಿಕೊಂಡರೆ ಅಂಥಹ ಸಂದರ್ಭದಲ್ಲಿ ಕಡ್ಡಾಯವಾಗಿ ಹುಡುಗಿಯನ್ನು ತಮ್ಮ ಜಾತಿಗೆ ಸೇರಿಸಿ ಕೊಳ್ಳುತ್ತಿದ್ದರು. ಮತಾಂತರ ಹೊಂದುವ ವ್ಯಕ್ತಿಯು ನ್ಯಾಯಕಟ್ಟೆಯ ಎದುರು ಎಲ್ಲರಿಗೂ ತಿಳಿಯುವಂತೆ "ನಾನು ಜಾತಿಗೆ ಸೇರುತ್ತೇನೆ " ಎಂದು ಹೇಳಬೇಕಾಗಿತ್ತು. ಆತನು/ಅವಳು ಉಪ್ಪಿನ ತುಂಬಿದ ಬುಟ್ಟಿಯನ್ನು ಹೊತ್ತುಕೊಂಡು ನ್ಯಾಯಕಟ್ಟೆಯನ್ನೊ ಅಥವಾ ದೇವಸ್ಥಾನವನ್ನೊ ಪ್ರದಕ್ಷಿಣೆ ಮಾಡಬೇಕಾಗಿತ್ತು. ಹೀಗೆ ಒಂದು ವ್ಯಕ್ತಿಯ Such admissions are, however, rare and the issue of unions with persons so admitted are kept separate as a new line for one or two generations, after which they become merged into the main body. (The Mysore Tribes and Castes, Vol. IV 1935:651). ಹೀಗೆ ಜಾತಿಯಲ್ಲಿ ವಿಲೀನವಾದ ವ್ಯಕ್ತಿಯು ಉಪ್ಪಾರರ ಸಭೆ ಸಮಾರಂಭಗಳಲ್ಲಿ ಗೌರವಕ್ಕೆ ಪಾತ್ರನಾಗುತ್ತಿದ್ದ. ತಮ್ಮ ಮೂಲಕ ಕಸುಬಿನಿಂದ ಒಂದು ಉಪ್ಪನ್ನು ಹೊತ್ತು ಪಂಚರ ಅಥವಾ ದೇವಿಯ ಎದುರು ಪ್ರಮಾಣ ವಚನವನ್ನು ಸ್ವೀಕರಿಸಿದರೆ ಮತ್ತೆ ಯಾವುದೇ ಕಾರಣಕ್ಕೂ ಜಾತಿಗೆ ದ್ರೋಹ ಬಗೆಯುವುದಾಗಲೀ ಮತ್ತು ಅವನಿಗೆ ಉಪ್ಪಾರ ಕುಲದೇವತೆಯೇ ಶಿಕ್ಷೆ ವಿಧಿಸುತ್ತಾಳೆ ಎಂದು ನಂಬುತ್ತಾರೆ. ತಪ್ಪಿತಸ್ಥನು ಪಂಚರ ಎದುರು ಪ್ರಮಾಣ ಅಥವಾ ಆಣೆ ಮಾಡುವುದಾದರೆ ಸಂಗಮೇಶ್ವರ ಪೀಠ ಎಂದು ಪೀಠವನ್ನು ಮುಟ್ಟಿ ಪ್ರಮಾಣ ಮಾಡಬೇಕಿತ್ತು. ಈ ಸಂಪ್ರದಾಯ ಮೈಸೂರು ಜಿಲ್ಲೆ ಮತ್ತು ಕರ್ನಾಟಕದ ಕೆಲವೆಡೆ ಕಂಡುಬರುತ್ತದೆ.

ಅನ್ಯ ಜಾತಿಯಿಂದ ಬಂದ ಪುರುಷ ಅಥವ ಮಹಿಳೆಯನ್ನು ಬಹಳ ಪ್ರೀತಿಯಿಂದ ಕಾಣುತ್ತಾರೆ. ತಮ್ಮ ಜಾತಿ ರೀತಿ ರಿವಾಜುಗಳನ್ನು ಅವರು ನಿಧಾನವಾಗಿ ತಿಳಿಸುತ್ತಾರೆ. ಈ ಕೆಲಸಗಳನ್ನು ಜಾತಿಯ ಹಿರಿಯ ವೃದ್ಧರು ಮತ್ತು ಮಹಿಳೆಯರು ಮಾಡುತ್ತಿದ್ದರು.

ಈಚಿನ ದಿನಗಳಲ್ಲಿ ಜಾತಿಯನ್ನು ಬಿಡುವ ಹಾಗೂ ಜಾತಿಗೆ ಸೇರಿಸುವ ಯಾವ ಆಚರಣೆಗಳು ಇವರಲ್ಲಿ ಕಂಡು ಬರುವುದಿಲ್ಲ. ಇದು ಉಪ್ಪಾರರಲ್ಲಿ ಮಾತ್ರವಲ್ಲದೆ ಇತರ ಜನಾಂಗದವರಲ್ಲೂ ಕಾಣೆಯಾಗಿದೆ. ನಮ್ಮ ಪ್ರಜಾಪ್ರಭುತ್ವ ಕಲ್ಪನೆ, ಆರ್ಥಿಕ ಸ್ಥಿತಿಗತಿ, ಮತ್ತು ಸಾಮಾಜಿಕತೆಯಲ್ಲಿ ಆದ ಬದಲಾವಣೆಗಳು ಈ ಎಲ್ಲಾ ಆಚರಣೆಗಳನ್ನು ಮುಚ್ಚಿ ಹಾಕಿವೆ.

**೩.೭. ಆಹಾರ ಪದ್ಧತಿ**

ಜನಾಂಗಗಳು ವಾಸಿಸುತ್ತಿರುವ ಭೌಗೋಳಿಕ ಪರಿಸರಕ್ಕನುಗುಣವಾಗಿ ಅಡುಗೆ ಪದ್ಧತಿಯು ಇರುತ್ತದೆ. ಎಲ್ಲಾ ಕಡೆಯೂ ಒಂದೇ ರೀತಿಯ ಅಡುಗೆ ಪದ್ಧತಿಯು ಇರಲು ಸಾಧ್ಯವಿಲ್ಲ. ಈ ಕಾರಣದಿಂದ ಬಯಲು ಸೀಮೆ, ಕರಾವಳಿ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕಗಳಲ್ಲಿ ಉಟೋಪಾಚಾರಗಳಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. "ಆಹಾರ ಪಾನೀಯಗಳು ಮಾನವನಿಂದ ಮಾನವನಿಗೆ, ಜನಾಂಗದಿಂದ ಜನಾಂಗಕ್ಕೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಭಿನ್ನವಾಗುತ್ತ ಸಾಗಿತ್ತು. ವಸ್ತುಸ್ಥಿತಿ ಹೀಗಿರುವುದರಿಂದಲೇ ಆಹಾರ ಪಾನೀಯ ಪದ್ಧತಿಗಳು ಸಂಸ್ಕೃತಿಯ ದ್ಯೋತಕವೆನಿಸಿಕೊಂಡಿತ್ತು. ಅವುಗಳ ಅಧ್ಯಯನವೇ ಒಂದು ಸಮಾಜದ ಒಂದು ಸಂಸ್ಕೃತಿಯ ಪುನರ್ ರಚನೆಯಾಗುತ್ತದೆ. "(ಪದ್ಮಾಶೇಖರ್ -1989:260) ಆದರಿಂದ ಒಂದು ಜನಾಂಗದಲ್ಲಿಯೇ ಅವರು ನೆಲಸಿರುವ ಪ್ರದೇಶಕ್ಕೆ ಅನುಗುಣವಾಗಿ ಊಟೋಪಚಾರದಲ್ಲಿ ವ್ಯತ್ಯಾಸಗಳು ಉಂಟಾಗುತ್ತವೆ. ಪ್ರಸ್ತುತ ದಕ್ಷಿಣ ಕರ್ನಾಟಕದ ಉಪ್ಪಾರರ ಅಡುಗೆ ಪದ್ದತಿಯನ್ನು ಇಲ್ಲಿ ಚರ್ಚಿಸಲಾಗಿದೆ.

ಉಪ್ಪಾರರು ಮಾಂಸಹಾರಿಗಳಾಗಿದ್ದು ಕುರಿ, ಜಿಂಕೆ, ಮೀನು, ಕೋಳಿ ಮೊದಲಾದವುಗಳನ್ನು ತಿನ್ನುತ್ತಾರೆ. ದನ ಮತ್ತು ಹಾವುಗಳನ್ನು ತಿನ್ನುವುದಿಲ್ಲ."They are said not to drink liquor, but are not very punctilious in this matter. The bricklayers, Carpenters and Contractors are very clean", (The Mysore Tribes and Castes Vol. IV 1935-656) ಆದರೆ ಉಪ್ಪಿನ ತಯಾರಿಕೆ ಮತ್ತು ಕೆರೆ ಆಗೆಯುವ ಉಪ್ಪಾರರು ವಡ್ಡರಿಂದ ಭಿನ್ನವಾಗಿಲ್ಲ, ಈ ಕಾರಣದಿಂದ ಇವರ ಆಹಾರ ಕ್ರಮದಲ್ಲೂ ಬದಲಾವಣೆ ಉಂಟಾಗಿದೆ.

ಉಪ್ಪಾರರ ಅಡಿಗೆ ಪದ್ಧತಿಯು ಸಾಂಪ್ರದಾಯಕವಾಗಿದ್ದು ಸ್ಥಳೀಯ ಗುಣವನ್ನು ಹೊಂದಿದೆ. ಬಯಲು ಸೀಮೆಯಲ್ಲಿ ವಾಸಿಸುವವರು ರಾಗಿ ಮತ್ತು ರಾಗಿ ಮುದ್ದೆ ಜೋಳ-ರೊಟ್ಟಿಗಳು, ಪ್ರಿಯವಾದಷ್ಟೆ ಕೆಲವರಿಗೆ

ಅಕ್ಕಿ-ಅಕ್ಕಿ ಹಿಟ್ಟಿನ ಪದಾರ್ಥಗಳು ಪ್ರಿಯವಾಗಿರುತ್ತವೆ. ಇವರುಗಳ ಅಡುಗೆಯನ್ನು ನಿತ್ಯ ಅಡುಗೆಗಳು, ಹಬ್ಬದ ಅಡುಗೆಗಳು ಮದುವೆ ಅಡುಗೆಗಳು ಮತ್ತು ತಿಥಿ ಇತ್ಯಾದಿ ಸಂದರ್ಭದಲ್ಲಿಯ ಅಡುಗೆಗಳು ಎಂದು ವಿಂಗಡಿಸಿಕೊಳ್ಳಲಾಗಿದೆ.

**ನಿತ್ಯ ಅಡುಗೆಗಳು :** ಉಪ್ಪಾರರ ದಿನನಿತ್ಯದ ಅಡುಗೆ ತುಂಬಾ ಸರಳವಾಗಿದ್ದು ಮತ್ತು ಅತೀ ಕಡಿಮೆ ಖರ್ಚಿನದು. ಹೊಲ-ಗದ್ದೆ-ತೋಟಗಳಲ್ಲಿ ಕೆಲಸ ಮಾಡಲು ಶಕ್ತಿ ಬರುವಂಥ ರಾಗಿ ಮುದ್ದೆ ರೊಟ್ಟಿಯನ್ನು ಹೆಚ್ಚಾಗಿ ಬಳಸುತ್ತಾರೆ. ಶಿವಮೊಗ್ಗ ಜಿಲ್ಲೆಯ ಉಪ್ಪಾರರು ಅಕ್ಕಿಯಿಂದ ಮಾಡಿದ ರೊಟ್ಟಿ, ಅನ್ನ, ಇತ್ಯಾದಿಗಳನ್ನು ಉಪಯೋಗಿಸುತ್ತಾರೆ. ಬೆಳಗಿನ ಉಪಹಾರವಾಗಿ ಇಡ್ಲಿ, ದೋಸೆ, ರೊಟ್ಟಿ ಮುಂತಾದವುಗಳಾದರೆ, ಇವುಗಳಿಗೆ ನಂಚಿಕೆಯಾಗಿ ಕಾಯಿ ಚಟ್ನಿ, ತರಕಾರಿಯಪಲ್ಯ, ಉಪ್ಪಿನ ಕಾಯಿಗಳನ್ನು ಬಳಸುತ್ತಾರೆ. ಇವರು ಅಲಸಂದೆ, ಹಸಿಕಡ್ಲೆ, ಅವರೆಕಾಳನ್ನು ಪಲ್ಯಕ್ಕಾಗಿ ಬಳಸುತ್ತಾರೆ. ಆಹಾರ ಪದ್ಧತಿಯಲ್ಲಿ ಇತರರಿಗಿಂತ ವ್ಯತ್ಯಾಗಳೇನೂ ಇಲ್ಲ. ಈ ಕಾರಣದಿಂದ ಅವರ ಮಾಂಸಹಾರವನ್ನು ಮಾತ್ರ ವಿವರವಾಗಿ ನೋಡಬಹುದು. ಮಾಂಸಹಾರಿಗಳೆಲ್ಲರೂ ಬಳಸುವ ಕೋಳಿ, ಆಡು, ಕುರಿ, ಹಂದಿ, ಮೀನು, ಮತ್ತು ಬೇಟೆಯಿಂದ ದೊರಕುವ ಸಾರಂಗ, ಕಡವೆ, ಮೊಲ, ಉಡಗಳನ್ನು ತಿನ್ನುತ್ತಾರೆ. ಇವರು ವಿಶೇಷವಾಗಿ ಇಲಿಯನ್ನು ಬೇಟಿಯಾಡಿ ಆಹಾರವಾಗಿ ಉಪಯೋಗಿಸುತ್ತಿದ್ದರು. ಈಗ ಇದರ ಉಪಯೋಗ ಕಡಿಮೆಯಾಗಿದೆ. ಇಲಿಯ ಮಾಂಸ ಪೌಷ್ಠಿಕತೆಯಿಂದ ಕೂಡಿದ್ದು ಶ್ರಮಜೀವಿಗಳಿಗೆ ಶಕ್ತಿ ನೀಡುತ್ತದೆಂದು ಅವರ ನಂಬಿಕೆ. ೧೦೦ ಗ್ರಾಂ ತುಪ್ಪಕ್ಕೆ ಒಂದು ಇಲಿಯ ಮಾಂಸ ಸಮವೆಂದು ಹೇಳುತ್ತಾರೆ. ಇಲಿಯನ್ನು ಬೇಟೆಯಾಡಿ ಅವುಗಳ ಹೊಟ್ಟೆಯಲ್ಲಿರುವ ಹೊಲಸನ್ನು ತೆಗೆದು ಅದನ್ನು ಚಪ್ಪಟೆಯಾಗಿ ಒತ್ತಿ, ಉಪ್ಪಿಗೆ ಹಾಕಿ ಒಣಗಿಸಿ ಇಟ್ಟುಕೊಂಡು ಆಗಾಗ ಅದನ್ನು ಉಪಯೋಗಿಸುತ್ತಾರೆ.

ಹಂದಿ ಮಾಂಸವನ್ನು ಬಿಟ್ಟು ಉಳಿದೆಲ್ಲ ಪ್ರಾಣಿಗಳ ಮಾಂಸವನ್ನು ಕಾದ ಎಣ್ಣೆಗೆ ಈರುಳ್ಳಿ ಹಾಕಿ, ನಂತರ ಮಾಂಸ ಹಾಕಿ, ಅದರ ಬೇಯುವ ವರೆಗೂ ಹುರಿದು, ಪರಿಮಳಕ್ಕೆ ಕೊತ್ತಂಬರಿ ಸೊಪ್ಪು, ರುಚಿಗೆ ಬೆಳ್ಳುಳ್ಳಿ, ಮೆಣಸು, ಅರಶಿಣ, ಚಕ್ಕೆ, ಲವಂಗದಿಂದ ಮಾಡಿದ ಮಸಾಲೆ ಹಾಕಿ ಕುದಿಸುವರು. ನಂತರ ರುಬ್ಬಿದ ಕಾಯಿತುರಿಯನ್ನು ಹಾಕುವರು. ಈ ಪದಾರ್ಥವನ್ನು ಅನ್ನ, ರೊಟ್ಟಿ, ದೋಸೆ, ಕಡಬುಗಳ ಜೊತೆಗೆ ಉಪಯೋಗಿಸುತ್ತಾರೆ.

ಮೀನನ್ನು ಶುಚಿಮಾಡಿ ಅದಕ್ಕೆ ಕಾರ, ಮಸಾಲೆ ಹಚ್ಚಿ ಒಂದು ಗಂಟೆಯ ವರೆಗೆ ನೆನೆಸಿಟ್ಟು, ಕಾವಲಿಗೆ ಎಣ್ಣೆ ಹಾಕಿ ಮೀನನ್ನು ಬೇಯಿಸುತ್ತಾರೆ. ಇದೊಂದು ರೀತಿಯ ಮೀನಿನ ಭಕ್ಷ್ಯವಾದರೆ, ಮತ್ತೊಂದು

ರೀತಿಯಲ್ಲಿ ಮೀನನ್ನು ಎಣ್ಣೆಯಲ್ಲಿ ಕರಿದು, ತಿನ್ನಲು ಉಪಯೋಗಿಸುತ್ತಾರೆ. ಮೀನಿನ ಸಾರನ್ನು ಮಾಡುತ್ತಾರೆ. ಇದನ್ನು ಅನ್ನ, ರೊಟ್ಟಿ, ಮುದ್ದೆ ದೋಸೆಗಳ ಜೊತೆಗೆ ತಿನ್ನುತ್ತಾರೆ.

ಶೈವ ಉಪ್ಪಾರರಾದರೆ ಸೋಮವಾರವೂ, ವೈಷ್ಣವ ಉಪ್ಪಾರರಾದರೆ ಶನಿವಾರದಂದೂ ಮಾಂಸಹಾರ ನಿಷಿದ್ಧ. ಉಳಿದಂತೆ ಎಲ್ಲಾ ದಿನಗಳಲ್ಲೂ ಮಾಂಸಹಾರದ ಬಳಕೆ ಇದೆ. ಕೆಲವು ಹಬ್ಬ-ಹರಿದಿನ, ಸಂತೋಷ ಕೂಟಗಳಲ್ಲಿ ಮಾಂಸಹಾರವೇ ಪ್ರಮುಖವಾಗಿರುತ್ತದೆ. ಕಡ್ಡಾಯವಾಗಿ ವೈಕುಂಠ/ಶಿವಗಣಾರಾಧನೆಯ ದಿನದಂದು ಮಾಂಸಹಾರವಿರಲೇಬೇಕು. ಅದನ್ನು ಪ್ರಸಾದವಾಗಿ ಬಂದವರೆಲ್ಲಾ ಸ್ವೀಕರಿಸಿ, ಊಟಕ್ಕೂ ಅದೇ ಇರುತ್ತದೆ.

೩ ನೇ ದಿನದ ತಿಥಿಯಲ್ಲಿ ಬಾಳೇಕಾಯಿ ಸಾರು, ಕುಂಬಳಕಾಯಿಸಾರು, ಇದರ ಜೊತೆಗೆ ಕೆಲವು ಭಾಗದಲ್ಲಿ ಗೋಧಿಹುಗ್ಗಿ ಎಡೆ ಮಾಡಿ ಇಡುತ್ತಾರೆ. ಇವರು ನಿಂಬೆಹಣ್ಣಿನ ಪಾನಕ, ರಾಗಿ ಪಾನಕ, ಹೆಸರುಕಾಳು ಪಾನಕ, ಕರಬೂಜ ಹಣ್ಣಿನ ಪಾನಕಗಳನ್ನು ಪಾನೀಯಗಳನ್ನಾಗಿ ಉಪಯೋಗಿಸುತ್ತಾರೆ.

ಹಬ್ಬ-ಹರಿದಿನಗಳಲ್ಲಿ ಮಾಂಸದ ಅಡಿಗೆ ಜೊತೆಗೆ ಸಿಹಿ ಅಡುಗೆಯನ್ನೂ ಮಾಡುತ್ತಾರೆ. ಹೋಳಿಗೆ, ಪಾಯಸ, ಉಂಡೆ, ಕೋಸಂಬರಿ, ತರಕಾರಿ ಪಲ್ಯ ಉಪ್ಪಿನಕಾಯಿ, ಹಪ್ಪಳ ಸಂಡಿಗೆ ಇತ್ಯಾದಿಗಳು ಇರುತ್ತವೆ. ದಿನನಿತ್ಯದ ನಂಚಿಕೆಗಳಿಗಾಗಿ ಮಾವಿನ ಕಾಯಿ, ನಿಂಬೆ ಕಾಯಿ, ನೆಲ್ಲಿಕಾಯಿ, ಹುಣಸೇಕಾಯಿ, (ಇತ್ಯಾದಿ) ಮುಂತಾದವುಗಳ ಉಪ್ಪಿನಕಾಯಿಗಳನ್ನು ಬಳಸುತ್ತಾರೆ. ಕೆಲವು ಭಾಗಗಳಲ್ಲಿ ಚಟ್ನಿಪುಡಿಗಳನ್ನು ಮಾಡಿ ಇಟ್ಟುಕೊಳ್ಳುತಾರೆ. ಗೂರೆಳ್ಳು, ಎಳ್ಳು, ಶೇಂಗಾ, ಹುರುಕಡ್ಲಿ, ಮುಂತಾದವುಗಳಿಗೆ ಮೆಣಸಿನಕಾಯಿ, ಬೆಳ್ಳುಳ್ಳಿ, ಕೊಬ್ರಿ, ಉಪ್ಪು ಸೇರಿಸಿ ಕುಟ್ಟಿ ಪುಡಿಮಾಡಿ ಸೀಸೆಯಲ್ಲಿ ತುಂಬಿಟ್ಟು ಕೊಂಡಿರುತ್ತಾರೆ. ಅಕ್ಕಿ , ರಾಗಿ, ಸಬ್ಬಕ್ಕಿಯಿಂದ ಹಪ್ಪಳ, ಸಂಡಿಗೆ, ಚಕ್ಕುಲಿಗಳನ್ನು ತಯಾರಿಸಿಟ್ಟು ಕೊಳ್ಳುತ್ತಾರೆ. ಗೋಧಿಯಿಂದ ಶಾವಿಗೆಯನ್ನು ತಯಾರಿಸಿ ಹಬ್ಬಗಳಲ್ಲಿ ಅಥವಾ ವಿಶೇಷ ದಿನಗಳಲ್ಲಿ ಉಪಯೋಗಿಸುವ ಪರಿಪಾಠವುಂಟು.

ಮದುವೆ ಸಂದರ್ಭದಲ್ಲಿ ಅನ್ನ, ಸಾರು, ಪಾಯಸ, ಪಲ್ಯಗಳಿರುತ್ತವೆ. ಸಾಮಾನ್ಯವಾಗಿ ಹಿಂದೆ, ಈ ದಿನದಲ್ಲೂ ಕೂಡಾ ಮಾಂಸಹಾರವಿತ್ತು. ಈಗ ಅದರ ಸ್ಥಾನವನ್ನು ಸಿಹಿ ಅಡುಗೆ ಆಕ್ರಮಿಸಿಕೊಂಡಿದೆ.

ಒಟ್ಟಾರೆಯಾಗಿ ಉಪ್ಪಾರ ಅಡುಗೆಗಳಲ್ಲಿ ಅಕ್ಕಿ ರಾಗಿ, ಜೋಳಗಳು ಪ್ರಧಾನ ಪಾತ್ರವನ್ನು ವಹಿಸಿಕೊಂಡಿವೆ. ಹಾಲು, ಮೊಸರು, ತುಪ್ಪವನ್ನು ಹೇರಳವಾಗಿ ಬಳಸಿದರೂ, ಎಣ್ಣೆಯಲ್ಲಿ ಕರಿದ ತಿಂಡಿ ತಿನಿಸುಗಳಗಿಂತ, ಹಂಚಿನಲ್ಲಿ ಬೇಯಿಸುವ, ಹಬೆಯಲ್ಲಿ ಬೇಯಿಸುವ ಅಡುಗೆಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಹೀಗೆ

ಮಾಡುವುದರಿಂದ ಆಹಾರ ಪದಾರ್ಥದ ಸತ್ವವೂ ಕಡಿಮೆಯಾಗದೇ ಆರೋಗ್ಯದಾಯಕವಾಗಿರುತ್ತದೆ. ಇವರ ಬದುಕಿನಲ್ಲಿ ಆಧುನಿಕ ನಾಗರೀಕತೆಯ ಪ್ರಭಾವದಿಂದ ಆಹಾರ ಪದ್ಧತಿಯಲ್ಲಿ ತುಸು ಬದಲಾವಣೆ ಆಗಿವೆ. ಆದರೂ ಅವರ ಹಳೆಯ ಅಡುಗೆ ಪದ್ಧತಿಯನ್ನು ಆಧುನಿಕ ಅಡುಗೆ ಪದ್ಧತಿಗಿಂತ ಕಡಿಮೆಯೆಂದು ಭಾವಿಸದೇ ಯಾರೂ ಅವುಗಳನ್ನು ಕೈಬಿಟ್ಟಿಲ್ಲ. ಹಳೆಯ-ಅಡುಗೆ ಪದ್ಧತಿ ಹೊಸದರ ಜೊತೆಗೆ ಕೂಡಿಕೊಂಡು ಬಂದರೂ ಹಳೆಯ ವಿಧಾನ ಹೆಚ್ಚು ಪ್ರಚಲಿತವಿದೆ.

೩.೮. ಉಡುಗೆ - ತೊಡುಗೆ

ಮಾನವನಿಗೆ ಗಾಳಿ, ನೀರು, ಆಹಾರ ಅವಶ್ಯಕವಿದ್ದಂತೆ, ಉಡುಗೆಯೂ ಕೂಡಾ ಅಷ್ಟೇ ಆವಶ್ಯಕ, ಒಬ್ಬ ಮನುಷ್ಯನ ಗುಣನಡೆತೆಗಳನ್ನು, ಅವನು ಧರಿಸಿದ ಉಡುಗೆಗಳಿಂದ ಗುರುತಿಸಬಹುದು. ಉಡುಗೆಗಳು ಅವನ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಪ್ರತಿನಿಧಿಸುತ್ತವೆ. ಈ ಉಡುಗೆಗಳು ಪ್ರಾದೇಶಿಕವಾಗಿ ವೈವಿಧ್ಯತೆಯನ್ನು ಪಡೆದುಕೊಂಡಿದೆ. ಯಾವುದೇ ಒಬ್ಬ ವ್ಯಕ್ತಿಯು ತೊಡುವ ಬಟ್ಟೆ; ಮಾಡಿಕೊಳ್ಳುವ ಅಲಂಕಾರ, ಹಾಕಿಕೊಳ್ಳುವ ಒಡವೆಗಳು ಅವರ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿಗಳಾಗಿವೆ. ಉಡುಗೆಗಳು ಅವರ ಮಾನಸಿಕ ಸಂತೋಷ ಮತ್ತು ಸುಖವನ್ನು ಹೆಚ್ಚಿಸುತ್ತವೆ. ಆದರೂ "ಸಾಮಾಜಿಕ, ರಾಜಕೀಯ, ಧಾರ್ಮಿಕ ಮೌಲ್ಯಗಳನ್ನು ಬದಲಾದಂತೆಲ್ಲಾ, ಜನರು ಸಾಮಾಜಿಕ ಪರಿವರ್ತನೆಗೆ ಒಳಪಟ್ಟಂತೆಲ್ಲಾ ಪ್ರತಿಯೊಂದು ಸಮೂಹ, ತನ್ನ ನೀತಿ-ನಿಯಮಗಳಲ್ಲಿ ಬದಲಾಗುತ್ತದೆ" [ಗೊ.ರು. ಚೆನ್ನಬಸಪ್ಪ:ಸಂ:1979:73]. ಇದು ಉಡುಗೆ-ತೊಡುಗೆಗಳಿಗೂ ಅನ್ವಯಿಸುತ್ತದೆ. ವಿಶೇಷವಾಗಿ ಆಯಾಯಾ ಜನಾಂಗಗಳು ನಡೆಸುವ, ಅವರದೇ ಆದ ಹಬ್ಬ, ಜಾತ್ರೆ, ಹರಕೆ, ವಿವಾಹ ಮೊದಲಾದವುಗಳಲ್ಲಿ ತೊಡುವ ಉಡುಗೆಗಳಲ್ಲಿ ಮಾತ್ರ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು. ಆದರೆ, ಒಂದೇ ಭೌಗೋಳಿಕ ಪರಿಸರದಲ್ಲಿ ನೆಲೆಸಿದ ಜನರು, ಆ ಪ್ರದೇಶಕ್ಕೆ ಹೊಂದಿಕೊಳ್ಳುವ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ಅದರಂತೆ ಉಪ್ಪಾರರು ಕೂಡಾ ದಿನನಿತ್ಯ ಇತರ ಜನಾಂಗದವರಂತೆ ಉಡುಗೆ-ತೊಡುಗೆಗಳಿದ್ದು ವಿಶೇಷ ಸಂದರ್ಭದಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಅಗತ್ಯಗಳಿಗನುಗುಣವಾಗಿ ಆ ಸ್ಥಳೀಯ ಉಡುಗೆಗಳನ್ನೇ ತೊಡುತ್ತಾರೆ.

ಉಪ್ಪಾರರು ಪಶುಪಾಲಕರಾಗಿದ್ದು ಕೃಷಿಯನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದರಿಂದ ಸ್ಥಳೀಯ ಉಡುಗೆಗಳಿಗೆ ಅಂಟಿಕೊಂಡರೆಂದು ತೋರುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ ದುರ್ಬಲರಾಗಿರುವುದರಿಂದ ಇವರ ಉಡುಗೆ-ತೊಡುಗೆಗಳು ಯಾವ 'ಸಂಸ್ಕೃತೀಕರಣ'(Acculturation)ಕ್ಕೊಳಗಾಗದೇ ಮೂಲ ಸ್ವರೂಪವನ್ನು ಉಳಿಸಿಕೊಂಡಿವೆ.

**ನಿತ್ಯ ಉಡುಗೆಗಳು:** ಶಿವಮೊಗ್ಗ ಜಿಲ್ಲೆಯ ಉಪ್ಪಾರರು ಕೆಲವಷ್ಟು ಮಂದಿ ಮೈಪೂರ್ತಿ ಬಟ್ಟೆಯನ್ನು ತೊಡುವುದಿಲ್ಲ. ಗಂಡಸರು ಲಂಗೋಟಿ ಮತ್ತು ಅಡ್ಡಪಂಚೆ, ತಲೆಗೊಂದು ಟವೆಲನ್ನು ಸುತ್ತಿಕೊಂಡೋ ಇಲ್ಲವೇ ಹೆಗಲ ಮೇಲೆ ಹಾಕಿಕೊಂಡಿರುತ್ತಾರೆ. ವರ್ಷಪೂರ್ತಿ ಹೊಲ ಗದ್ದೆಗಳಲ್ಲಿಯೂ, ಮತ್ತೆ ಕೆಲವರು ಹೈನುಗಾರಿಕೆಯೂ ತೊಡಗಿದ್ದರಿಂದ ಅವರ ಉಡುಗೆಗಳು ಅದಕ್ಕೆ ಹೊಂದಿಕೊಂಡಂತೆ ಇರುತ್ತವೆ.

ಚಿತ್ರದುರ್ಗ ಜಿಲ್ಲೆಯ ಉಪ್ಪಾರರು ಉದ್ದನೆಯ ಚಡ್ಡಿ ಮತ್ತು ಅದರ ಮೇಲೆ ಬಿಳಿಪಂಚೆಯನ್ನು ತೊಟ್ಟು ಮೈ ತುಂಬಾ ಬಟ್ಟೆಯನ್ನು ಧರಿಸಿಕೊಂಡಿರುತ್ತಾರೆ. ಕೆಲವರು ಅಲ್ಲಿಯೇ ಶಿವಮೊಗ್ಗ ಜಿಲ್ಲೆಯ ಉಪ್ಪಾರರ ಉಡುಗೆಗಳಂತೆ ಇರುತ್ತವೆ.

ಎಲ್ಲ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಹೆಂಗಸರು ಸೀರೆ ಮತ್ತು ರವಿಕೆಯನ್ನು ತೊಟ್ಟಿರುತ್ತಾರೆ. ಕೆಲವು ಮಕ್ಕಳು ಅರ್ಧಂಬರ್ಧ ಬಟ್ಟೆಯನ್ನು ಹಾಕಿಕೊಂಡಿರುತ್ತಾರೆ.

ವಿಶೇಷ ಸಂದರ್ಭಗಳಲ್ಲಿ ಜರಿಸೀರೆ, ಬಣ್ಣದ ಸೀರೆಗಳನ್ನು ರೇಷ್ಮೆ ಸೀರೆಗಳನ್ನು, ಬೆಲೆ ಬಾಳುವ ಸೀರೆಗಳನ್ನು ಧರಿಸಿ ತಲೆಬಾಚಿಕೊಂಡು ಕೆಲವರು ಜಡೆಬಂಗಾರ, ಒಡವೆಗಳನ್ನು, ಇತರ ಉಡುಗೆಗಗಳನ್ನು ಹಾಕಿಕೊಂಡಿದ್ದು ಅಂದ ಹೆಚ್ಚಿಸಿಕೊಳ್ಳಲು ತಲೆಬಾಚಿಕೊಂಡು ಮಲ್ಲಿಗೆ ಹೂಗಳನ್ನು ಮುಡಿಯುತ್ತಾರೆ. ಮಕ್ಕಳು ಚಣ್ಣ ಅಂಗಿ ಧರಿಸುತ್ತಾರೆ. ಹೆಣ್ಣು ಮಕ್ಕಳು ಗೌನ್ ಮತ್ತೂ ಕೆಲವರು ಲಂಗ ರವಿಕೆಯನ್ನು, ಮಧ್ಯ ವಯಸ್ಸಿನ ಹೆಣ್ಣು ಮಕ್ಕಳು ಲಂಗ, ದಾವನಿ, ರವಿಕೆಯನ್ನು ಹಾಕಿಕೊಳ್ಳುತ್ತಾರೆ. ಹಣೆಗೆ ನಾಮದ ಬೊಟ್ಟು, ಕೊರಳಿಗೆ ಬಂಗಾರದ ಸರ, ಕಿವಿಗೆ ಓಲೆ, ಕೈಗೆ ಬಳೆ, ಕಾಲಿಗೆ ಕೆಲವರು ಕಡಗವನ್ನು ಮತ್ತೆ ಕೆಲವರು ಕಾಲು (ಪೈಜಣ) ಚೈನನ್ನು ಧರಿಸುತ್ತಾರೆ. ಗಂಡಸರಲ್ಲಿ ಕೆಲವರು ಕಿವಿಗೆ ಓಲೆಯನ್ನು ಮತ್ತೆ ಕೆಲವರು (ವಯಸ್ಸಾದವರೂ) ಒಂದು ಕಾಲಿಗೆ ಬೆಳ್ಳಿಯ ಕಡಗ ಹಾಕುತ್ತಾರೆ.

ಮದುವೆ ಸಂದರ್ಭಗಳಲ್ಲಿ ಗಂಡಸರು ಬಿಳಿಯ ಪಂಚೆ, ಬಿಳಿಯ ಅಂಗಿತೊಟ್ಟು, ಹೆಗಲ ಮೇಲೆ ಶಲ್ಯವೊಂದನ್ನು ಹಾಕಿಕೊಂಡಿರುತ್ತಾರೆ.

ಮದುಮಗನಾದವನಿಗೆ ಹದಿನಾರು ಮೊಳದ ಪಂಚೆಯಿಂದ ಕಚ್ಚೆಯನ್ನು ಉಡಿಸಿ, ಬಿಳಿಯ ಅಂಗಿ, ಪೇಟ ಸುತ್ತಿರುತ್ತಾರೆ. ಅದರ ಮೇಲೆ ಬಾಸಿಂಗ ಕಟ್ಟಿ, ಕೊರಳಿಗೆ ಬಂಗಾರದ ಗುಂಡಿನ ಸರವನ್ನು ಹಾಕಿರುತ್ತಾರೆ. ಹೆಣ್ಣಿಗೆ ಬೆಲೆಬಾಳುವ ರೇಷ್ಮೆಸೀರೆ ತೊಡಿಸಿ ಬಂಗಾರದ ಸೊಂಟಪಟ್ಟಿ ಜಡೆಬಂಗಾರ, ತೋಳುಬಂದಿ, ಕೊರಳಹಾರ, ಕೈಬಳೆಗಳಿಂದ ಶೃಂಗರಿಸುತ್ತಾರೆ. ಕೆಲವೆಡೆ ಅತಿ ದೊಡ್ಡ ಮೂಗುತಿಯನ್ನು ಧರಿಸಿರುವುದನ್ನು (ಹಾಕಿಕೊಂಡಿರುವುದು) ಕಂಡು ಬರುತ್ತದೆ. [Some places, women wear the big nose screw, which is also the characteristic ornament of an odda woman P-656]. ಗಂಡಿನ ಉಡುಗೆಗಳಿಗಿಂತ ಹೆಣ್ಣಿನ

ಉಡುಗೆ ವೈಭವ ಪೂರ್ಣವೂ, ಶ್ರೀಮಂತವೂ ಆಗಿರುತ್ತದೆ. ಮದುವೆಗೆ ಬರುವ ಗಂಡಸರು ಹೆಚ್ಚಾಗಿ ಬಿಳಿ ಪಂಚೆಯನ್ನು ಮತ್ತು ತಮಗಿಷ್ಟ ಬಂದ ಬಣ್ಣದ ಅಂಗಿಗಳನ್ನು ತೊಟ್ಟಿರುತ್ತಾರೆ. ಗಂಡಸರು ನೆಂಟರ ಮನೆಗೆ ಹೋಗುವಾಗಲೂ, ಇದೇ ರೀತಿ ಉಡುಗೆಯನ್ನು ಧರಿಸುತ್ತಾರೆ.

ಸಾಮಾನ್ಯವಾಗಿ ಕೃಷಿಕರ ದಿನನಿತ್ಯದ ಉಡುಗೆ ಒಂದು ರೀತಿಯದಾದರೆ, ಸಭೆ, ಸಮಾರಂಭಗಳಲ್ಲಿ ಮತ್ತೊಂದು ರೀತಿಯ ಉಡುಗೆಗಳನ್ನು ಧರಿಸುತ್ತಾರೆ. ಹೀಗೆ ಈ ತರಹದ ಉಡುಗೆಗಳನ್ನು ತೊಡಲು ಅವರು ಅವಲಂಬಿಸಿದ ಕೃಷಿಯೇ ಕಾರಣವಾಗಿದೆ. ಪೂರ್ಣ ಮೈ ಮುಚ್ಚಿಕೊಂಡಿರುವ ಉಡುಗೆಯನ್ನು ತೊಟ್ಟು ಹೊಲ-ಗದ್ದೆಗಳಲ್ಲಿ ಕೆಲಸ-ಕಾರ್ಯಮಾಡಲು ಅನುಕೂಲವಾಗುವುದಿಲ್ಲವಷ್ಟೆ, ಅವರ ಕೆಲಸಕಾರ್ಯಗಳಿಗೆ ಪೂರ್ಣ ಉಡುಗೆ ಅಡ್ಡಿಯನ್ನುಂಟು ಮಾಡುತ್ತದೆ. ಈ ಕಾರಣದಿಂದಲೇ ಅವರು ಅರೆ ಉಡುಗೆಗೆ ಮೊರೆ ಹೋಗುತ್ತಾರೆ. ಬಿಸಿಲಿನ ಜಳಕ್ಕೆ ಮೈ ಬೆವರಿ, ಬಟ್ಟೆಗಳು ಮೈಗೆ ಅಂಟಿಕೊಂಡು ಕೆಲಸಕಾರ್ಯಗಳಿಗೆ ಕಿರಿಕಿರಿಯನ್ನುಂಟು ಮಾಡುವುದರಿಂದಲೂ, ಅವರು ಅರೆ ಉಡುಗೆಗಳನ್ನು ತೊಡುತ್ತಾರೆ.

ಒಂದು ಜನಾಂಗವು ಜೀವನೋಪಾಯಕ್ಕೆ ಅವಲಂಬಿಸಿದ ವೃತ್ತಿಯ ಮೇಲೆ ಆ ಜನಾಂಗದ ಉಡುಗೆ-ತೊಡುಗೆಗಳು ಇರುತ್ತವೆ. ಅವರ ಉಡುಗೆಗಳು ಆ ಜನಾಂಗದ ಬದುಕನ್ನು ಚಿತ್ರಿಸುವುದರ ಜೊತೆಗೆ, ಅವರ ಶಕ್ತಿ-ಸಾಮರ್ಥ್ಯವನ್ನು ವಿವರಿಸುತ್ತವೆ. ಎಲ್ಲದಕ್ಕಿಂತ ಮುಖ್ಯವಾಗಿ ಆ ಸಮಾಜದ ಆರ್ಥಿಕ ವ್ಯವಸ್ಥೆ ಸಾಮಾಜಿಕ, ಧಾರ್ಮಿಕ ಜೀವನದ ಬಗೆಗೂ ಸಾಕಷ್ಟು ವಿವರಗಳನ್ನು ಒದಗಿಸುತ್ತೇವೆ.

**೩.೯. ವೈದ್ಯ**

ಉಪ್ಪಾರರು ಹಿಂದಿನಿಂದಲೂ ತಮ್ಮ ಕಾಯಕವನ್ನು ಕೆರೆ, ಕಾಲುವೆ, ಹಳ್ಳಗಳ ಪಕ್ಕದಲ್ಲಿರುವ ಜೌಗು ಮಣ್ಣಿನ ಪ್ರದೇಶದಲ್ಲಿ ಮಾಡುತ್ತಿದ್ದುದರಿಂದ ಅವರು ಗುಂಪು ಗುಂಪಾಗಿಯೇ ಒಂದು ಕಡೆಗೆ ವಾಸಿಸುತ್ತಿದ್ದರು. ಈ ಕೆರೆ ಹಳ್ಳಗಳು ಊರ ಹೊರಗಿನ ಕಾಡು-ಗುಡ್ಡ ಪ್ರದೇಶಗಳಲ್ಲಿ ಇದ್ದುದರಿಂದ ಅವರಿಗೆ ಅನೇಕ ಬಗೆಯ ಸಸ್ಯಗಳ ಪರಿಚಯವೂ ಆಯಿತು. ತಮಗೆ ಬಂದೊದಗುವ ರೋಗ-ರುಜಿನಗಳಿಗೆ ಆ ಸಸ್ಯಗಳಿಂದಲೇ ಮದ್ದನ್ನು ಕಂಡುಕೊಂಡರು. ಇದನ್ನು ಜನಪದ ವೈದ್ಯವೆಂದು ಕರೆಯಲಾಗಿದೆ. ಈ ವೈದ್ಯವು ಮಾನವನ ಹುಟ್ಟಿನೊಂದಿಗೇ ಜನ್ಮತಾಳಿರುವ, ಇದಕ್ಕೆ ಮಾನವನಷ್ಟೇ ಪ್ರಾಚೀನವಾದ ಇತಿಹಾಸವಿದೆ. 'ಜನಪದ ವೈದ್ಯ ಜನಪದ ಸಂಸ್ಕೃತಿಯ ಒಂದು ಭಾಗ. ಅದು ದೇಶೀಯವಾದುದು; ಸಾಂಪ್ರದಾಯಿಕವಾದುದು. ಮುಖ್ಯವಾಗಿ ಪ್ರಾದೇಶಿಕವಾದುದು. ಈಗ ಜಗತ್ತಿನಾದ್ಯಂತ ಬಳಕೆಯಲ್ಲಿರುವ: -ಅಲೋಪತಿ, ಆಯುರ್ವೇದ, ಯುನಾನಿ, ಹೋಮಿಯೋಪತಿ, -ಈ ಎಲ್ಲಾ ವೈದ್ಯಪದ್ಧತಿಗಳಿಗೂ ಜನಪದ ವೈದ್ಯಪದ್ಧತಿಯೇ ಮೂಲ [ಅಂಬಳಿಕೆ

ಹಿರಿಯಣ್ಣ] ಡಾನ್ ಯಾಡರ್ ಹೇಳುವಂತೆ ಇದು "represents one of man's earliest reactions to his natural environment and involves the seeking of cures for his ills in the herbs, plants, minerals and animal substance of nature" [Don yoder -1972 -P:192].

ಮಾನವನಿಗೆ ಕಾಡುವ ರೋಗಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಅವನು ಮೊದಲು ಪ್ರಾಕೃತಿಕ ಪರಿಸರಕ್ಕೆ ಪ್ರತಿಕ್ರಿಯಿಸಿದ. 'ಪಶ್ಚಿಮದವರು ನಮ್ಮದೇಶಕ್ಕೆ ಕಾಲಿಡುವುದಕ್ಕೆ ಮುನ್ನ ಜನಪದ ವೈದ್ಯವೇ ಶಾರೀರಕ ರಕ್ಷೆಯಾಗಿತ್ತು. ಆದಿ ಮಾನವನ ಕಾಲದಲ್ಲಿ ಅಥವಾ ನಮ್ಮ ಪೂರ್ವಿಕರ ಕಾಲದಲ್ಲಿ ಅವರ ಬದುಕು ಪೂರ್ಣವಾಗಿ ನೈಸರ್ಗಿಕವಾದುದ್ದರಿಂದ ಅವರ ಸಂಶೋಧನೆಗಳೆಲ್ಲಾ ಪ್ರಾಕೃತಿಕ ಜನ್ಯವಾದವುಗಳು. ತಮ್ಮ ರೋಗಗಳಿಗೆ ಸಸ್ಯ ಪ್ರಾಣಿ, ಖನಿಜ ರೂಪದ ವಸ್ತುಗಳಲ್ಲಿ ಪರಿಹಾರ ಕಂಡುಕೊಂಡರು. ಹೀಗಾಗಿ ಪ್ರಕೃತಿಯೇ ಅವರ ಪಾಲಿಗೆ ಸಂಜೀವಿನಿ ಆಯಿತು'[ಚಂದ್ರಶೇಖರ ಕಂಬಾರ:ಸಂ -1985 :827].

ಶಿಷ್ಟ, ಪ್ರೌಢ, ಆಧುನಿಕ, ವೈಜ್ಞಾನಿಕ ಎಂದೆಲ್ಲಾ ಕರೆಯಲಾಗುವ ಬಹಳಷ್ಟು ವಿಷಯ ವಸ್ತುಗಳಿಗೆ ಜಾನಪದವೇ ಮೂಲವಾಗಿರುವಂತೆ ಈ ಎಲ್ಲಾ ವೈದ್ಯ ಪದ್ಧತಿಗಳಿಗೂ ಸಹ ಹಳ್ಳಿಯ ವೈದ್ಯ ನಾಟಿವೈದ್ಯ ನಾಡವೈದ್ಯ ಮನೆಮದ್ದು ಕೈಔಷಧಿ, ಹಸಿರು ಔಷಧಿ ಮೊದಲಾಗಿ ಕರೆಯುವ ಜನಪದ ವೈದ್ಯವೇ ಮಾತೃಸ್ಥಾನದಲ್ಲಿದೆ [ಶಿವರಾಮು - 1989:289] ಜನಪದ ವೈದ್ಯ ಆಯಾ ಪ್ರದೇಶದಲ್ಲಿ ದೊರಕುವ ಸಸ್ಯ, ಪ್ರಾಣಿ, ಖನಿಜ ಮುಂತಾದವುಗಳನ್ನು ಅವಲಂಬಿಸಿರುತ್ತದೆ. ಶಿಷ್ಟ ವೈದ್ಯರಿಂದ ಪ್ರಭಾವದಿಂದಾಗಿ ಜನಪದ ವೈದ್ಯ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದರೂ ಇಂದಿಗೂ ಹಳ್ಳಿಗಾಡಿನಲ್ಲಿ ಜನಪದ ವೈದ್ಯವೇ ಪ್ರಚಲಿತವಿದೆ. ಉಪ್ಪಾರ ಜನಾಂಗದಲ್ಲಿ ಸ್ಥಿತಿವಂತರು ಆರ್ಥಿಕವಾಗಿ ಮುಂದುವರಿದವರೂ ತಮ್ಮ ದೈಹಿಕಸ್ವಾಸ್ಥ್ಯವನ್ನು ಗುಣಪಡಿಸಿಕೊಳ್ಳಲು (ಪಟ್ಟಣದ) ಶಿಷ್ಟವೈದ್ಯರ ಮೊರೆ ಹೋಗುತ್ತಾರೆ. ಬಡವರು, ಈ ಜನಪದ ವೈದ್ಯದಲ್ಲಿ ತಮ್ಮ ರೋಗಗಳಿಗೆ ಮದ್ದನ್ನು ಕಂಡುಕೊಂಡಿದ್ದಾರೆ. ಪ್ರಸ್ತುತ ಉಪ್ಪಾರರಲ್ಲಿ ಬಳಕೆಯಲ್ಲಿರುವ ಮುಖ್ಯವಾದ ವೈದ್ಯ ಪದ್ಧತಿಗಳನ್ನು ಇಲ್ಲಿ ವಿವರಿಸಲಾಗಿದೆ.

ಇತರ ಜನಾಂಗಗಳಂತೆಯೇ ಉಪ್ಪಾರರೂ ಕೊಡಾ ಕಾಯಿಲೆ ಬಂದಾಗ ಹರಕೆ ಸಲ್ಲಿಸುವುದು, ಕಂಡು ಬರುತ್ತದೆ. ಕೆಲವು ರೋಗಗಳಿಗೆ ತಮ್ಮ ಸುತ್ತಮುತ್ತಲಿನ ಸಸ್ಯ ಪ್ರಾಣಿ, ಖನಿಜಗಳಿಂದ ಮದ್ದನ್ನು ತಯಾರಿಸುವ ಪರಿಣತ ಜನಪದವೈದ್ಯನಿಂದ ಔಷಧಿ ಪಡೆದುಕೊಳ್ಳುತ್ತಾರೆ. ಇವರ ವೈದ್ಯ ವಿಧಾನವನ್ನು 'ಮಾನವ ವೈದ್ಯ' ಮತ್ತು 'ಪ್ರಾಣಿ ವೈದ್ಯ' ವೆಂದು ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಇವುಗಳನ್ನು ನೈಸರ್ಗಿಕ ಚಿಕಿತ್ಸಾ ವಿಧಾನದಿಂದಲೂ, ನಂಬಿಕೆ, ಮಾಟ-ಮಂತ್ರದ ಮೂಲಕ ಮದ್ದು ನೀಡುವ

ಬಳಕೆಗೆ ತಂದಿದ್ದಾರೆ. ಮಾನವರಿಗೆ ಕೊಡುವ ವೈದ್ಯದಲ್ಲಿ ಬಾಣಂತಿಯರಿಗೆ, ಮಕ್ಕಳಿಗೆ, ವಿಶೇಷವಾದ ಮದ್ದುಗಳನ್ನು ಕೊಡುತ್ತಾರೆ. ಗುಣಪಡಿಸಲಾಗದ ರೋಗಗಳಿಗೆ ಕೊನೆಗೆ ಆಸ್ಪತ್ರೆಯನ್ನೇ (ಶಿಷ್ಟವೈದ್ಯ) ಅವಲಂಬಿಸುತ್ತಾರೆ.

**೩.೯.೧. ಮಾನವ ವೈದ್ಯ:**

ಸಾಮಾನ್ಯವಾಗಿ ಮನೆ ಮದ್ದಾಗಿ ಕೊಡುವ ಔಷಧಿಗಳನ್ನು ಈ ಕೆಳಗೆ ಕೊಡಲಾಗಿದೆ. ಮಕ್ಕಳಿಗೆ-ಸೀತ, ಕೆಮ್ಮು ವಾಂತಿ, ಹೊಟ್ಟೆ ಉಬ್ಬಸ, ಜ್ವರ, ಅಜೀರ್ಣ ಮುಂತಾದವುಗಳಾಗಿ ವೀಳದೆಲೆಯ ಜೊತೆ ಜೇನು ಮತ್ತು ಶುಂಠಿ ಸೇರಿಸಿ ಕೊಡುತ್ತಾರೆ. ತುಳಸೀ ರಸದೊಂದಿಗೆ ಶುಂಠಿಯನ್ನು ಸೇರಿಸಿದ ಔಷಧಿ ಹೊಟ್ಟೆನೋವಿಗೆ ಬಳಸುತ್ತಾರೆ. ಅಜೀರ್ಣ ಹೋಗಲಾಡಿಸಲು ಶುಂಠಿ, ಕಾಳು ಮೆಣಸಿನ ಕಷಾಯ, ಈರುಳ್ಳಿ, ಬೆಳ್ಳುಳ್ಳಿ ಹಸಿಯಾಗಿ ತಿನ್ನುವುದರ ಮೂಲಕ ಗುಣಪಡಿಸಿಕೊಳ್ಳುತ್ತಾರೆ. ಜ್ವರ ತಡೆಗಟ್ಟಲು ಶುಂಠಿ, ಚಂದನದ ಚಕ್ಕೆ ಒಣಶುಂಠಿ ಒಂದು ಜಾತೀಯ ಬೇರು, ಗುದ್ದಿ ಪುಡಿಮಾಡಿ ನೀರಿಗೆ ಹಾಕಿ ಚೆನ್ನಾಗಿ ಕುದಿಸಿ ಕುಡಿಯುತ್ತಾರೆ. ಕೊತ್ತಂಬರಿ ಬೀಜ, ಬಜೆ, ಕುಂಬಳದ ಬೇರು, ಒಣಶುಂಠಿ, ಗಳನ್ನು ಪುಡಿಮಾಡಿ ನೀರಿನಲ್ಲಿ ಕುದಿಸಿ ಶೋಧಿಸಿ ಕುಡಿಯುತ್ತಾರೆ. ಇವುಗಳನ್ನು ಕೆಮ್ಮು ಉಷ್ಣ ಪಿತ್ತಗಳಿಗೆ ಮದ್ದಾಗಿ ಬಳಸುತ್ತಾರೆ. ಜೇನು, ಒಣದ್ರಾಕ್ಷಿ, ನಲ್ಲಿಕಾಯಿ, ಸಂಪಿಗೆ ಗಡ್ಡೆಗಳ ಮಿಶ್ರಣವನ್ನು ಸಕ್ಕರೆ-ಜೇನುಗಳಿಗೆ ಸೇರಿಸಿ ಕುಡಿದರೆ ವಾಂತಿ, ತಲೆ ತಿರುಗುವುದು ಗುಣವಾಗುತ್ತದೆ. ರಕ್ತಬೇದಿಗೆ ಗೋಣಿ ಮರದ ಮೊಗ್ಗನ್ನು ತಂದು, ಅಂಡಾಶಯವನ್ನು ಕಲ್ಲುಸಕ್ಕರೆ ಉತ್ತತ್ತಿಯಲ್ಲಿ ಪಾಕಮಾಡಿ ಸೇವಿಸಿದರೆ ರೋಗ ಗುಣವಾಗುತ್ತದೆ. ಹಲ್ಲು ಹುಳುಕಾದರೆ ಈ ಕೆಳಗಿನ ಮದ್ದುಗಳನ್ನು ಕೊಡುತ್ತಾರೆ.

೧. ತತಾದ ಹಲ್ಲಿನ ಭಾಗಕ್ಕೆ ಹೊಗೆ ಸೊಪ್ಪಿನ ಸಣ್ಣ ಉಂಡೆಯನ್ನು ಇಟ್ಟು, ಅದರ ರಸವನ್ನು ಪ್ರತಿಸಾರಿಯೂ ಉಗುಳುವಂತೆ, ಈ ಹೊಗೆ ಸೊಪ್ಪಿನ ರಸ ಹಲ್ಲಿನ ರಂಧ್ರದೊಳಗೆ ಪ್ರವೇಶಿಸಿ, ಹಲ್ಲು ನೋವು ಕಡಿಮೆಯಾಗುತ್ತದೆ.

೨. ಕಾಳು ಮೆಣಸು, ಬೆಳ್ಳುಳ್ಳಿಯನ್ನು ಜಜ್ಜಿ ಸಣ್ಣ ಗುಳಿಗೆಯನ್ನು ಮಾಡಿ ಹುಳುಕಲ್ಲಿನ ಮೇಲೆ ಇಡುತ್ತಾರೆ.

೩. ಉಪ್ಪನ್ನು ನೀರಿಗೆ ಹಾಕಿ ಬಾಯಿ ಮುಕ್ಕಳಿಸಿದರೆ ವಾಸಿಯಾಗುತ್ತದೆ.

ಕಿವಿನೋವಾದರೆ ಬೆಳ್ಳುಳ್ಳಿ ಜಜ್ಜಿ ಕೊಬ್ರಿ ಎಣ್ಣೆಯಲ್ಲಿ ಹಾಕಿ ಬಿಸಿ ಮಾಡಿ, ತಣ್ಣಗಾದ ಮೇಲೆ ಕಿವಿಯೊಳಗೆ ಹಾಕಿಕೊಂಡರೆ ಕಡಿಮೆಯಾಗುತ್ತದೆ.

ಕಿವಿಗೆ ಬೆಚ್ಚನೆಯ ಉಪ್ಪುನೀರು ಬಿಡುವುದರಿಂದಲೂ ಕಿವಿ ನೋವು ಉಪಶಮನವಾಗುತ್ತದೆ, ಬಾಯಿಯಲ್ಲಾಗುವ ಹುಣ್ಣಿಗೆ, ಬೇವಿನ ಸೋಪಿನ ಜೊತೆಗೆ ಪಂಚಪತ್ರೆ ಸೊಪ್ಪನ್ನು ಸೇರಿಸಿ ಅರೆದು ಬಾಯನ್ನು ಮುಕ್ಕಳಿಸಿದರೆ ಹುಣ್ಣು ವಾಸಿಯಾಗುತ್ತದೆ.

ಇವಲ್ಲದೇ ಇನ್ನು ಅನೇಕ ರೋಗಗಳಿಗೆ ಮದ್ದನ್ನು ತಮ್ಮ ಸುತ್ತಲಿನ ಪ್ರಕೃತಿಯಿಂದಲೇ ಪಡೆಯುತ್ತಾರೆ. ಇದು ಅವರ ನೈಸರ್ಗಿಕ ಬಳಕೆಯ ವಿಧಾನವಾಗಿದೆ. ಅವರ ಎರಡನಯ ಮಾರ್ಗ ಮಾಟ-ಮಂತ್ರಗಳಿಗೆ ಮೊರೆ ಹೋಗುವುದು. ಮಕ್ಕಳಿಗೆ ದೃಷ್ಟಿಯಾಗಿ ಗದ್ದಲ ಮಾಡುತ್ತಿದ್ದರೆ ಮನೆಯ ಹಿರಿಯರು ದೇವರಿಗೆ ಹರಕೆಯನ್ನು ಸಲ್ಲಿಸುತ್ತೇವೆಂದು ಹೇಳಿಕೊಳ್ಳುತ್ತಾರೆ. ತಕ್ಷಣದ ಉಪಶಮನಕ್ಕಾಗಿ ಉಪ್ಪು, ಮೆಣಸಿನಕಾಯಿ, ಸಾಸಿವೆಯನ್ನು ಎಡಗೈಯಲ್ಲಿ ಹಿಡಿದು ಮಗುವಿಗೆ ಮೂರು ಸುತ್ತು ನಿವಾಳಿಸಿ ಬೆಂಕಿಗೆ ಹಾಕುತ್ತಾರೆ. ಇದರಿಂದ ದೃಷ್ಟಿ ದೋಷ ಹೋಗುತ್ತದೆ.

ಹರಳೆಣ್ಣೆ ದೊಪದಿಂದ ಕಾಯಿಸಿದ ಸೂಜಿಯಿಂದ ಎಳೆಯ ಮಗುವಿನ ನೆತ್ತಿಗೆ ಬರೆ ಹಾಕಿದರೆ ನೆತ್ತಿಯ ಬಿಚ್ಚುವುದಿಲ್ಲ, ಇದು ಒಂದು ಮುಷ್ಕವಾಗಿದೆ.

ಕಾಯಿಸಿದ ಕಲ್ಲೊಂದನ್ನು ಹೆದರಿಕೊಂಡ ಮಗುವಿಗೆ ನಿವಾಳಿಸಿ, ಎದುರಿಗಿನ ನೀರಿನ ಪಾತ್ರೆಗೆ ತಟ್ಟನೆ ಹಾಕುವುದರಿಂದ ಹೆದರಿಕೆ ಹೋಗುವುದೆಂದು ನಂಬುತ್ತಾರೆ.

**೩.೯.೨. ಪ್ರಾಣಿ ವೈದ್ಯ**

ಇವರು ತಮ್ಮ ಮೂಲವೃತ್ತಿಯನ್ನು ಕೈಬಿಟ್ಟು ಜೀವನೋಪಾಯಕ್ಕಾಗಿ ವ್ಯವಸಾಯವನ್ನು ಅವಲಂಬಿಸಿದರಿಂದ ದನ, ಕರು, ಕೋಳಿ, ನಾಯಿ ಮುಂತಾದವುಗಳು ಇವರ ಸಂಗಾತಿಗಳಾದವು. ಅವುಗಳನ್ನು ತಮ್ಮಂತೆಯೇ ಜೋಪಾನ ಮಾಡುತ್ತಿದ್ದರು. ಅವುಗಳ ಜೀವನ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಅದನ್ನು ತಮ್ಮ ಅನುಭವದಿಂದ ಕಂಡುಕೊಂಡು ತಕ್ಕ ಮದ್ದನ್ನು ಮಾಡುತ್ತಿದ್ದರು. ಸಾಮಾನ್ಯವಾಗಿ ಪ್ರಾಣಿಗಳು ಉಚ್ಚಿಕೊಳ್ಳುವುದು, ಕಂದು ಹಾಕುವುದು, ಬಳ್ಳಿ ಮುಟ್ಟುವುದು, ಚಪ್ಪೆರೋಗ, ಹೊಟ್ಟೆ ಉಬ್ಬರಿಸುವುದು, ಕಾಲು, ಬಾಯಿ ರೋಗ, ಗರ್ಭಧರಿಸುವಂತೆ ಮಾಡುವುದು, ಹೂ ಕೂರುವುದು, ಕಪ್ಪೆರೋಗ ಮುಂತಾದ ರೋಗಗಳಿಂದ ನರಳುತ್ತವೆ.

**ಉಚ್ಚಿಕೊಳ್ಳುವುದು:** ಮಜ್ಜಿಗೆ ಕುಡಿಸುವುದರಿಂದಲೂ, ಕುಚ್ಚುಲಕ್ಕಿ ಗಂಜಿ ಕುಡಿಸುವುದರಿಂದ ಗುಣವಾಗುತ್ತದೆ.

**ಕಂದು ಹಾಕುವುದು:** ಗರ್ಭಧರಿಸಿದ ಹಸುವೊಂದು ಅವಧಿಗೆ ಮುನ್ನವೇ ಕರು ಹಾಕಿದರೆ, ಅದನ್ನು ತಡೆಗಟ್ಟಲು ಉದ್ದನ್ನು ಕಡೆದು ಕುಡಿಸುತ್ತಾರೆ. ಎಳ್ಳೆಣ್ಣೆ ಕುಡಿಸುವುದರಿಂದ ಮುಂದೆ ಹೀಗಾಗುವುದಿಲ್ಲವೆಂದು ನಂಬುತ್ತಾರೆ.

**ಬಳ್ಳಿ ಮುಟ್ಟುವುದು:** ದನ-ಕರುಗಳಿಗೆ ಹಾವು ಕಡಿದಾಗ ಜನರು ಅದನ್ನು ಬಳ್ಳಿಮುಟ್ಟಿದೆ ಎಂದು ಕರೆಯುತ್ತಾರೆ. ಹಾವು ಕಡಿದಿದೆ ಎಂದು ಹೇಳುವುದರಿಂದ ಕಡಿಸಿಕೊಂಡ ಪ್ರಾಣಿ ಬಹು ಬೇಗ ಸಾಯುತ್ತದೆಂದು ನಂಬಿ ಹೀಗೆ ಹೇಳುತ್ತಾರೆ. ಪ್ರಾಣಿಯೊಂದು ಇದ್ದಕ್ಕಿದ್ದಂತೆ ಬಿದ್ದು ಒದ್ದಾಡಿ ಬಾಯಿಯಲ್ಲಿ ಜೊಲ್ಲುಸುರಿಸಿ, ಹೊಟ್ಟೆ ಉಬ್ಬರಿಸಿಕೊಂಡರೆ ಅದನ್ನು ನೋಡಿದ ಅನುಭವಸ್ಥನು ಅದರ ಮೈಮೇಲೆ ಕೈಯಾಡಿಸಿ ಕೂದಲನ್ನು ಗಟ್ಟಿಯಾಗಿ ಎಳೆಯುತ್ತಾನೆ. ಕೂದಲು ಅವನ ಕೈಯಲ್ಲಿ ಬಂದರೆ ಹಾವು ಕಚ್ಚಿದೆ ಎಂದೂ, ಇಲ್ಲವಾದರೆ ಇನ್ನಾವುದೋ ಗಂಟಲು ಕಟ್ಟುವ ರೋಗವೆಂದು ಖಾತರಿ ಮಾಡಿಕೊಳ್ಳುತ್ತಾನೆ. ಇದಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ 'ಬಳ್ಳಿಮುಟ್ಟುವುದು' ಎಂದು ಕರೆಯುತ್ತಾರೆ. ಹೆದ್ದುಂಬೆ ಸೊಪ್ಪನ್ನು ಹಸುವಿನ ದೇಹದ ಮೇಲೆಲ್ಲಾ ಬಡಿದು, ಮದ್ದರಸನ ತೊಗಟೆಯನ್ನು ಬಾಯಿಲ್ಲಿ ಕಚ್ಚಿ, ನುಣ್ಣಗೆ ಜಗಿದು, ಮೂಗು ಮತ್ತು ಕಣ್ಣಿಗೆ ಉಗಿದು, ಬಾಲವನ್ನು ಎಳೆದು, ಬೆನ್ನೆಲುಬನ್ನು ಚೆನ್ನಾಗಿ ನೀವುತ್ತಾರೆ.

**ಚಪ್ಪೆರೋಗ:** ದನ-ಕರುಗಳಿಗೆ ನಿಶ್ಯಕ್ತಿವುಂಟಾಗಿ ಮಲಗಿದ್ದು ಏಳಲು ಕಷ್ಟ ಪಡುತ್ತಿರುತ್ತವೆ. ಆಗ ಹುಲ್ಲು, ನೀರನ್ನು ಕುಡಿಯುವುದಿಲ್ಲ, ಹತ್ತಿರ ಹೋದರೆ ಬಾಯಿಯಲ್ಲಿ ಕೆಟ್ಟವಾಸನೆ ಬರುತ್ತದೆ. ಈ ರೋಗಕ್ಕೆ ಬಿಸಿ ನೀರಿಗೆ ಉಪ್ಪನ್ನು ಸೇರಿಸಿ ಬಾಯಿಯನ್ನು ತೊಳೆಯುತ್ತಾರೆ. ತೆಂಗಿನ ಕಾಯಿ ತುರಿಗೆ ಬೆಲ್ಲ ಸೇರಿಸಿ ತಿನ್ನಿಸುವುದರಿಂದಲೂ, ಬಿಸಿಯಿರುವ ರಾಗಿ ಅಂಬಲಿಯನ್ನು ಕುಡಿಸುವುದರಿಂದ ಈ ರೋಗ ಗುಣವಾಗುತ್ತದೆ.

**ಹೊಟ್ಟೆ ಉಬ್ಬರಿಸುವುದು:** ದನ-ಕರುಗಳು ತಿಂದ ಆಹಾರ ಅಜೀರ್ಣವಾಗಿ ಹೊಟ್ಟೆ ಉಬ್ಬರಿಸಿರುತ್ತದೆ. ಜೀರ್ಣಮಾಡಿಸುವುದಕ್ಕಾಗಿ ಬೆಳ್ಳುಳ್ಳಿಯನ್ನು ಅರೆದು ತಿನ್ನಿಸುತ್ತಾರೆ. ಕೆಲವೆಡೆ ಉಪ್ಪಿನ ಕಾಯಿ ರಸ ಕುಡಿಸಿ ಕಾಯಿಲೆಯನ್ನು ಗುಣಪಡಿಸುತ್ತಾರೆ.

**ಕಾಲು, ಬಾಯಿ ರೋಗ :** ಸಾಮಾನ್ಯವಾಗಿ ಈ ರೋಗವು ಚಳಿಗಾಲದ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತದೆ. ಬಾಯಿ ಹುಣ್ಣಿನಿಂದ ತುಂಬಿದ್ದು ಕಾಲಿನ (ಕೊಸಳ) ಗೊರಸಿನಲ್ಲಿ ಹುಳು ಕಾಣಿಸಿಕೊಳ್ಳುತ್ತದೆ. ಇದರಿಂದ ತುಂಬಾ ಜಾನುವಾರುಗಳಿಗೆ ಹಿಂಸೆಯಾಗುತ್ತಿರುತ್ತದೆ. ಕೆಸರಿನ ಚೌಕಾಕಾರದ ಮುಡಿಯೊಳಗೆ ಗೇರುಎಣ್ಣೆ ಅಣಿತಿ ಕಾಯಿಯನ್ನು ಪುಡಿ ಮಾಡಿ ಹಾಕಿ, ಚೆನ್ನಾಗಿ ಮಿಶ್ರಣ ಮಾಡಿ ಅದರ ಒಳಗೆ ದನಗಳನ್ನು ನಡೆದಾಡಿಸುತ್ತಾರೆ. ಹೀಗೆ ಮಾಡುವುದರಿಂದ ಕೆಸರಿನಲ್ಲಿ ಬೆರೆತ ಮದ್ದು ಕಾಲಿಗೆ ಪ್ರವೇಶಿಸಿ, ಅಲ್ಲಿರುವ ಹುಳುಗಳನ್ನು ಕೊಲ್ಲುತ್ತದೆ. ಅನಂತರ ಕಾಲನ್ನು ತೊಳೆದು ಬೇವಿನ ಎಣ್ಣೆಯನ್ನು ಹಚ್ಚುತ್ತಾರೆ.

**ಗರ್ಭಧಾರಣೆ:** ತಮ್ಮಲ್ಲಿರುವ ಕಂತ್ರಿ ಹಸುಗಳಿಂದ ಸುಧಾರಿತ ಫಲವನ್ನು ಪಡೆಯುವುದಕ್ಕೆ ದಷ್ಟಪುಷ್ಟವಾದ ಹೋರಿಯನ್ನು ಕೂಡುವಂತೆ ಮಾಡುತ್ತಾರೆ. ಅನಂತರ ಉದ್ದು ಎಳ್ಳೆಣ್ಣೆ ಹಸುವಿಗೆ ಕೊಡುತ್ತಾರೆ. ಇದರಿಂದ ಒಳ್ಳೆಯ ತಳಿ ಬರುವುದೆಂದು ನಂಬುತ್ತಾರೆ.

**ಹೂಕೂರುವುದು:** ದನ-ಕರುಗಳ ಕಣ್ಣಿಗೆ ಪೆಟ್ಟಾದಾಗ ಜನರು ಅದನ್ನು ಹೂಕೂರುವುದೆಂದು ಕರೆಯುತ್ತಾರೆ. ಇದನ್ನು ಹೋಗಲಾಡಿಸಲು ಒಂದು ಜಾತಿಯ ಮುಳ್ಳು ಎಲೆಗಳಿಂದ ಕೂಡಿದ ಬಳ್ಳಿಯನ್ನು ಅರೆದು ಕಣ್ಣಿಗೆ ರಸವನ್ನು ಹಾಕುವುದರಿಂದ ಈ ಗಾಯ ವಾಸಿಯಾಗುತ್ತದೆ.

**ಕಪ್ಪೆರೋಗ:** ಕಪ್ಪೆಯಾಕಾರದಲ್ಲಿ ನಾಲಿಗೆ ದಪ್ಪವಾಗಿರುವುದಕ್ಕೆ ಕಪ್ಪೆರೋಗವೆಂದೂ ಕರೆಯುತ್ತಾರೆ. ಈ ರೋಗದಿಂದ ನರಳುವ ಜಾನುವಾರುಗಳು ಮೇವು ತಿನ್ನದೇ ಜೊಲ್ಲು ಸುರಿಸುತ್ತಿರುತ್ತವೆ. ಜೀರಿಗೆ, ಮೆಣಸಿನ ಕಾಳು, ಉಪ್ಪು- ಈ ಮೂರನ್ನೂ ಪುಡಿ ಮಾಡಿದ ಮಿಶ್ರಣವನ್ನು ನಾಲಿಗೆ ಮೇಲೆ ಉಜ್ಜುವುದರಿಂದ ರೋಗ ಗುಣವಾಗುತ್ತದೆ.

ಕೆಲವು ಸಂದರ್ಭದಲ್ಲಿ ಜಾನುವಾರುಗಳು ವಿಚಿತ್ರ ರೀತಿಯಲ್ಲಿ ವರ್ತಿಸುತ್ತಿದ್ದರೆ, ಚೆನ್ನಾಗಿ ಹಾಲು ಕೊಡುವ ಹಸುವೊಂದರ ಹಾಲು ಇಂಗಿ ಹೋದಾಗ, ಜಾನುವಾರುಗಳು ತಪ್ಪಿಸಿಕೊಂಡಾಗ ಉಪ್ಪಾರರು ಅಂತರಿಗಟ್ಟಮ್ಮ, ಮಸಿಯಮ್ಮ, ಕರಿಯಮ್ಮ ಮಾರಿಕಣಿವೆಯಮ್ಮ, ಮತ್ತು ದುರುಗಮ್ಮರಿಗೆ ಹರಕೆಯನ್ನು ಹೊರುತ್ತಾರೆ. ಜಾನುವಾರುಗಳ ಕಾಯಿಲೆ ಕಡಿಮೆಯಾದರೆ ತಾವು ಹೊತ್ತುಕೊಂಡ ಹರಕೆಯ ಪ್ರಕಾರ ಕೋಳಿಯನ್ನೋ, ಕುರಿಯನ್ನೋ ಬಲಿಗೊಟ್ಟು ದೇವತೆಯನ್ನು ಪ್ರಾರ್ಥಿಸಿಕೊಳ್ಳುತ್ತಾರೆ.

ಆಧುನಿಕ ವೈದ್ಯಕೀಯದ ಎಲ್ಲಾ ಸವಲತ್ತುಗಳು ಇರುವ ಈ ಕಾಲದಲ್ಲೂ ಹಳ್ಳಿಯ ವೈದ್ಯ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಜಾನಪದದ ಜೀವಂತಿಕೆಗೆ ಸಾಕ್ಷಿಯಾಗಿದೆ. ಜಾನಪದ ಎಂದೂ ಬತ್ತಲಾರದ ಜೀವಂತ ನದಿ ಎಂಬ ಮಾತು ಇದರಿಂದ ಸ್ಪಷ್ಟವಾಗುತ್ತದೆ.

ಚಾರ್ಲ್ಸ್ ಫ್ರಾನ್ಸಿಸ್ ಪಾಟರ್ ರವರ 'Folklore is a lively fossil which refases to die' ಎಂಬ ಅಭಿಪ್ರಾಯ ನಿತ್ಯಸತ್ಯವಾಗಿದೆ. ಜಾನಪದ ತನ್ನ ಉಳಿವನ್ನು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿಯೂ ಉಳಿಸಿಕೊಂಡು ಬರುತ್ತಿದೆ.

**೩.೧೧. ಬೇಟೆ:**

ಬೇಟೆ ಎನ್ನುವುದು ಜನಪದ ಜೀವನಕ್ಕೆ ಹೊಂದಿಕೊಂಡು ಬಂದ ಸಹಜ ಕ್ರಿಯೆಯಾಗಿದೆ. ಜಲಚರ, ಕ್ರಿಮಿಕೀಟ, ಪಕ್ಷಿಗಳು, ಕಾಡಿನ ಕ್ರೂರ ಪ್ರಾಣಿಗಳಿಂದ ಬೆಳೆದು ಮಾನವನ ವರೆಗೂ ಈ ಕ್ರಿಯೆ ಜೀವನದ ಜೊತೆಗೆ ಬೆಸೆದುಕೊಂಡಿದೆ. ಪ್ರಾಚೀನ ಕಾಲದ ರಾಜ-ಮಹಾರಾಜರು ಬೇಟೆಯನ್ನು ಒಂದು ವಿನೋದವಾಗಿಯೂ, ಪ್ರಜಾಹಿತರಕ್ಷಣೆಯಾಗಾಗಿಯೂ, ಅವಶ್ಯ ಕರ್ತವ್ಯವೆಂದೂ ಭಾವಿಸಿಕೊಂಡಿದ್ದರು. ಕವಿಗಳು ತಮ್ಮ ಕಾವ್ಯದಲ್ಲಿ ಅದೊಂದು ವರ್ಣನೆಯ ಅಂಗವೆಂದೂ ಭಾವಿಸಿಕೊಡಿರುವುದಕ್ಕೆ ಮಹಾಕಾವ್ಯಗಳೇ ಇದಕ್ಕೆ ನಿದರ್ಶನ.

ಆದಿಮ ಕಾಲದಲ್ಲಿ ಪ್ರಚಲಿತವಿದ್ದ ಬೇಟೆ, ಅನೇಕ ಬದಲಾವಣೆಯನ್ನು ಹೊಂದುತ್ತ ಆಧುನಿಕ ಯುಗದಲ್ಲೂ ಕೆಲವು ಪ್ರದೇಶಗಳಲ್ಲಿ ಇನ್ನೂ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಉಪ್ಪಾರ ಜನಾಂದಲ್ಲಿಯೂ ಇಂತಹ ಬೇಟೆಯ ಕ್ರಮವನ್ನು ಗುರುತಿಸಬಹುದು. ಇವರು ಅನುಸರಿಸುವ ಬೇಟೆ ವಿಧಾನಗಳೂ, ತಂತ್ರಗಳೂ, ಆದಿವಾಸಿ ಜನರ ಕೆಲವು ಬೇಟೆ ವಿಧಾನದಂತೆಯೇ ಇರುವುದು ಕಂಡುಬರುವುದು. ಇವರು ಹಕ್ಕಿಯನ್ನೂ, ಬಿಲ್ಲು ಬಾಣಗಳಿಂದಲೂ, ಕೈಬಲೆಯಿಂದ ಪಾರಿವಾಳ, ಮೀನು-ಮೊಲಗಳನ್ನೂ, ಹಿಡಿಯುತ್ತಾರೆ. [ಬೇಟೆಗೆ ನಾಯಿಗಳ ಸಹಾಯವನ್ನು ಉಪಯೋಗಿಸಿ] ಪ್ರಾಣಿಗಳನ್ನು ಅಟ್ಟಿಸಿಕೊಂಡು ಹೋಗಲು ಮತ್ತು ಅವುಗಳ ಇರುವಿಕೆಯನ್ನು ಕಂಡುಕೊಳ್ಳಲು ನಾಯಿಗಳ ಸಹಾಯ ಪಡೆಯುತ್ತಾರೆ. ದೊಡ್ಡ ದೊಡ್ಡ ಪ್ರಾಣಿಗಳನ್ನು ಬಂದೂಕಿನಿಂದಲೂ, ಸಣ್ಣ ಸಣ್ಣ ಪ್ರಾಣಿಗಳನ್ನು ಬಲೆಗಳಿಂದಲೂ, ಮತ್ತೆ ಕೆಲವು ಪ್ರಾಣಿಗಳನ್ನು ಅವಿತು ಕುಳಿತು, ಇನ್ನೂ ಕೆಲವನ್ನ ಅವುಗಳ ಕೂಗಿನಂತೆ ಅನುಕರಣೆ ಮಾಡಿ ಕೂಗಿ ಅವು ಹತ್ತಿರ ಬಂದಾಗ ಕೊಲ್ಲುವ ತಂತ್ರವನ್ನು ನಾವು ಇವರ ಬೇಟೆಯ ವಿಧಾನಗಳಲ್ಲಿ ಕಂಡು ಕೊಳ್ಳಬಹುದಾಗಿದೆ.

ಉಪ್ಪಾರರು ಇತರ ಜನಾಂಗದವರಂತೆ ಬೇಟೆಯನ್ನಾಡುತ್ತಾರೆ. ಆದರೂ, ಅವರ ಜೀವನೋಪಾಯ ತಮಗೆ ಬೇಕಾದ ಬಹುಪಾಲು ಮಾಂಸವನ್ನು ಬೇಟೆಯಿಂದಲೇ ದೊರಕಿಸಿಕೊಳ್ಳುತ್ತಾರೆ. ಈ ಜನಾಂಗ ಇಂದಿಗೂ ಬೇಟೆಯನ್ನು ತಮ್ಮ ಸಂಸ್ಕೃತಿಯ ಒಂದು ಅಂಗವಾಗಿ ಉಳಿಸಿಕೊಂಡು ಬಂದಿದ್ದಾರೆ. ಸರ್ಕಾರದ ಯಾವ ಕಾನೂನುಗಳು ಇವರಗೆ ಕ್ರಿಯೆಗೆ ಅಡ್ಡಿಯನ್ನುಂಟುಮಾಡಿದರೂ ಬೇಟೆಯನ್ನು ನಿಲ್ಲಿಸಿಲ್ಲ.

ಉಪ್ಪಾರರಲ್ಲಿ ಹಲವು ರೀತಿಯ ಬೇಟೆಗಳು ರೂಢಿಯಲ್ಲಿವೆ. ಅವುಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಬಹುದು.

೧. ಪಕ್ಷಿ ಬೇಟೆ

೨. ಪ್ರಾಣಿ ಬೇಟೆ

೩. ಜಲಚರ ಬೇಟೆ.

**೩:೧೦:೧. ಪಕ್ಷಿ ಬೇಟೆ**

ಸಾಮಾನ್ಯವಾಗಿ ಉಪ್ಪಾರರು ಪಕ್ಷಿ ಬೇಟೆಯಲ್ಲಿ ನವಿಲು ಬೇಟೆ ಮುಖ್ಯವಾದದು. ಇವುಗಳಿಗೆ ಬಲೆ ಹಾಕಿ ಹಿಡಿಯುತ್ತಿದ್ದರು. ಈಗ ನವಿಲು ರಾಷ್ಟ್ರಪಕ್ಷಿಯಾಗಿದ್ದೂ ಸರ್ಕಾರ ಇದರ ಬೇಟೆಗೆ ನಿರ್ಬಂಧ ಹಾಕಿದ್ದರಿಂದ

ಈ ಬೇಟೆ ಪರಿಪೂರ್ಣ ನಿಂತು ಹೋಗಿದೆ. ಹಿಂದೆ ಇವರು ಈ ಬೇಟೆಯನ್ನು ಸೂರ್ಯ ಮುಳುಗುವ ಸಮಯದಲ್ಲಿ, ಬಲೆ ಹಾಕಿ ಹಿಡಿಯುತ್ತಿದ್ದರು.

**೩:೧೦:೨. ಪ್ರಾಣಿ ಬೇಟೆ**

ಇವರು ಆಡುವ ಬೇಟೆಗಳಲ್ಲಿ ಹುಲ್ಲೇಕರು (ಜಿಂಕೆ), ಕಾಡುಕುರಿ, ಕಾಡುಹಂದಿ, ಸಾರಂಗ, ಉಡ, ಮೊಲ ಮತ್ತು ಇಲಿಬೇಟೆ ಮುಖ್ಯವಾದವು. ಸಾಮಾನ್ಯವಾಗಿ ಹುಲ್ಲೇಕರು, ಕಾಡುಕುರಿ, ಕಾಡಂದಿ, ಸಾರಂಗಗಳ ಬೇಟೆಗೆ ಗುಂಪು ಗುಂಪಾಗಿ ಹೋಗಿ ಬೇಟೆಯಾಡುತ್ತಾರೆ. ಕೆಲವರು ಬಂಧೂಕನ್ನೂ, ಮತ್ತೆ ಕೆಲವರು ದೊಣ್ಣೆ ಕತ್ತಿಗಳನ್ನೂ, ಜೊತೆಗೆ ನಾಯಿಗಳೊಂದಿಗೆ ಶಿಕಾರಿಗೆ ಹೋಗುತ್ತಾರೆ. ನಾಯಿಗಳು ಕಾಡಿನಲ್ಲಿ ಸುತ್ತಾಡಿ ಬೇಟೆಗಾರರಿಗೆ ಪ್ರಾಣಿಯ ಇರುವಿಕೆಯನ್ನು ತೋರಿಸುತ್ತವೆ. ಅನಂತರ ಬೇಟೆಗಾರರು ಬಂದೂಕು ಇರುವವರು ಕಾಡಿನ ಸುತ್ತ ಆಯಕಟ್ಟಿನ ಸ್ಥಳದಲ್ಲಿ ನಿಲ್ಲುತ್ತಾರೆ. ಉಳಿದ ಸೋವುಗಾರರು ಬೊಬ್ಬೆ ಹಾಕುತ್ತಾ, ಕಿರುಚುತ್ತಾ, ತಮ್ಮ ಕೈಯಲ್ಲಿರುವ ದೊಣ್ಣೆಯಿಂದ ಗಿಡಗಂಟೆಗಳನ್ನು ಬಡಿಯುತ್ತಾ, ಸದ್ದು ಮಾಡಿ, ನಾಯಿಗಳನ್ನು ಛೂ ಬಿಟ್ಟು, ಪ್ರಾಣಿಗಳು ಬಿಲ್ಲುಗಾರರ ಬಳಿ ಹೋಗುವಂತೆ ಮಾಡುತ್ತಾರೆ. ಪ್ರಾಣಿಗಳು ಬಿಲ್ಲುಗಾರರ ಆಯಕಟ್ಟಿನ ಜಾಗಕ್ಕೆ ಬಂದ ಕೂಡಲೇ ಗುರಿಯಿಟ್ಟು ಬಂದೂಕಿನಿಂದ ಹೊಡೆಯುತ್ತಾರೆ. ಹೀಗೆ ಬೇಟೆಯಾದ ಪ್ರಾಣಿಯನ್ನು ಸಂಜೆ ಊರಿಗೆ ತಂದು ಹಸಿಗೆ ಮಾಡಿ ಎಲ್ಲರೂ ಅವರ ಯೋಗ್ಯತಾನುಸಾರ (ಕೋವಿ. ನಾಯಿ ಹೊಂದಿದವನಿಗೆ ೨ ಪಾಲು ಹೆಚ್ಚಿಗೆ) ಮಾಂಸವನ್ನು ಹಂಚಿಕೊಳ್ಳುತ್ತಾರೆ.

ಕೆಲವು ಸಂದರ್ಭದಲ್ಲಿ ಬಂದೂಕನ್ನು ಹಿಡಿದು ಬೆಳದಿಂಗಳ ರಾತ್ರಿ ಒಬ್ಬರೇ ಹೋಗಿ ಪ್ರಾಣಿಗಳ ಬೇಟೆಯಾಡುವ ಕ್ರಮವೂ ಉಂಟು. ಹಣ್ಣಿನ ಮರದ ಪಕ್ಕದಲ್ಲಿ ಅಥವಾ ಹಣ್ಣಿನ ಮರದಲ್ಲಿ 'ಮೊರಸ'ನ್ನು ಮಾಡಿ ಹಣ್ಣನ್ನು ತಿನ್ನಲು ಬಂದ ಪ್ರಾಣಿಗೆ ಗುರಿಯಿಟ್ಟು ಹೊಡೆಯುತ್ತಾರೆ. ಉದಾಃ ಕುರಿ, ಸಾರಂಗ, ಮೊಲ.

ಮರದ ಪೊಟರೆ ಅಥವಾ ಹುತ್ತದ ಒಳಗೆ ಇರುವ ಉಡಗಳನ್ನು ಗುರುತಿಸಿ ಬೇಟೆಯಾಡುತ್ತಾರೆ. ಹುತ್ತವನ್ನು ಅಗದು ಅಥವಾ ಮರದ ಪೊಟರೆಯನ್ನು ಕೊಡಲಿಯಿಂದ ಕೆತ್ತಿ ಅದರಲ್ಲಿರುವ ಉಡವನ್ನು ಹೊಡೆದು ಕೊಲ್ಲುತ್ತಾರೆ. ಸಾಮಾನ್ಯವಾಗಿ ಈ ಬೇಟೆಯನ್ನು ಒಬ್ಬನೇ ಆಡುತ್ತಾನೆ. ಅವನು ಅದರ ಚರ್ಮ ಸುಲಿದು ಒಳಗಿನ ಮಾಂಸವನ್ನು ಉಪಯೋಗಿಸುತ್ತಾನೆ. ಚರ್ಮವನ್ನು ಒಣಗಿಸಿ ಅದರೊಳಗೆ ಹುಲ್ಲು ತುಂಬಿ ಉಡದಂತೆ ಮಾಡುತ್ತಾನೆ.

ಉಪ್ಪಾರರ ಪ್ರಮುಖ ಬೇಟೆಗಳಲ್ಲಿ ಇಲಿ ಬೇಟೆಯೂ ಒಂದು. ಇದು ಅವರ ಸಾಂಸ್ಕೃತಿಕ ಮಹತ್ವ ಪಡೆದಿದೆ. ಸಗರವಂಶದವರೆಂದು ಆರೋಪಿಸಿಕೊಳ್ಳುವ ಉಪ್ಪಾರರ ಮೂಲ ಪುರುಷರಾದ ಸಗರ ೬೦

ಸಾವಿರ ಮಕ್ಕಳು ಯಜ್ಞಾಶ್ವಕ್ಕಾಗಿ ಭೂಮಿಯನ್ನು ಅಗೆಯುತ್ತಿದ್ದಾಗ ಅವರ ಹಸಿವನ್ನು ಇಂಗಿಸಿಕೊಳ್ಳಲು ಅಲ್ಲಿ ಸಿಕ್ಕ ಇಲಿಗಳನ್ನು ತಿಂದದ್ದರೆಂಬ ನಂಬಿಕೆ ಇವರಿಗಿರುವುದರಿಂದ ಇಂದಿಗೂ ಅದರ ಸ್ಮರಣೆಗಾಗಿ ಇಲಿ ಬೇಟೆಯನ್ನು ಉಳಿಸಿಕೊಂಡು ಬಂದಿದ್ದೇವೆ ಎಂದೂ ಈ ಜನಾಂಗದವರು ಹೇಳುತ್ತಾರೆ. ಅನೇಕ ಜಾತಿಯ ಇಲಿಗಳಿವೆ. ಅದರಲ್ಲಿ ಬಿಳಿ ಇಲಿ ಮತ್ತೇ ತೋಡವನ್ನು ಮಾತ್ರ ಹಿಡಿಯುತ್ತಾರೆ. ಅವು ಇತರ ಇಲಿಗಳಂತೆ ಅಲ್ಲ ಎನ್ನುವ ವಾದವನ್ನು ಮುಂದಿಡುತ್ತಾರೆ. ಈ ಇಲಿಗಳು ಕೇವಲ ಹೊಲದಲ್ಲಿಯೇ ವಾಸಿಸುತ್ತವೆಯೆಂದೂ, ಹೊಲಸನ್ನು ತಿನ್ನುವುದಿಲ್ಲವೆಂದೂ, ಅವು ಕಾಳು-ಕಡಿಗಳನ್ನು ಮಾತ್ರ ತಿನ್ನುವುದರಿಂದ, ಅವುಗಳಲ್ಲಿ ಪೌಷ್ಠಿಕತೆ ತುಂಬಿಕೊಂಡಿದ್ದರಿಂದ ತಿನ್ನುತ್ತೇವೆ ಎಂದೂ ಹೇಳುತ್ತಾರೆ. ಈ ಇಲಿಗಳು ತಮ್ಮ ಬಿಲದಲ್ಲಿ ಸುಮಾರು ೫, ರಿಂದ ೬ ಲೀಟರ್ ಕಾಳು ಶೇಖರಿಸಿಟ್ಟಿರುತ್ತವೆಂದೂ ಆ ಸಂದರ್ಭದಲ್ಲಿ ಬಿಲದ ಬಾಗಿಲು ಹಸಿಯಾಗಿರುವುದನ್ನು ಗುರುತಿಸಿ, ಆಗ (ಬೇಟೆಯಾಡುತ್ತೇವೆಂದು ಹೇಳುತ್ತಾರೆ) ಇದರಿಂದ ಅಲ್ಲಿ ಇಲಿಗಳು ಇವೆ ಎಂಬುದು ಸ್ಪಷ್ಟವಾಗಿ ಬೇಟೆಯಾಡುತ್ತಾರೆ.

ಇಲಿಯನ್ನು ತಿನ್ನುವುದು ಸಾಮಾಜಿಕವಾಗಿ ಶ್ರೇಷ್ಠವಲ್ಲವೆಂದು ಉಪ್ಪಾರರೇ ಹೇಳುತ್ತಾರೆ. ಆದರೂ ಸಾಂಸ್ಕೃತಿಕ ಮಹತ್ವ ಪಡೆದಿರುವುದರಿಂದ ಇದನ್ನು ಉಳಿಸಿಕೊಂಡಿದ್ದಾರೆ. ತಮ್ಮ ಪೂರ್ವಿಕರು ಹುತ್ತವನ್ನು ಅಗೆದು ಇಲಿ ಹಿಡಿಯುತ್ತಿದ್ದಾಗ ಹಠಾತ್ತನೇ ಮೂಲ ಪುರುಷ ರಕ್ತಕಾರಿ ಸತ್ತು ಹೋದನಂತೆ. ಅಂದಿನಿಂದ ಹೀಗೆ ಆದದ್ದು ಏಕೆಂದೂ, ಶಾಸ್ತ್ರ ಕೇಳಲಾಗಿ, ಇಲ್ಲಿ ಮಾರಿ ನೆಲಸಿದ್ದಾಳಂತೆ, ನೆಲ ಅಗೆಯುತ್ತಿದ್ದಾಗ ಗುದ್ದಲಿಯ ಪೆಟ್ಟು ಮಾರಿಗೆ ಬಿದ್ದಿದ್ದರಿಂದ, ಅವಳು ಕೋಪಗೊಂಡು, ರಕ್ತಕಾರಿ ಸಾಯುವಂತೆ ಮಾಡಿದಳಂತೆ. ಇಷ್ಟೆಲ್ಲಾ ಅನಾಹುತಗಳಿಗೆ ಕಾರಣವಾದದ್ದು ಇಲಿಗಳಿಂದಲೇ ಎಂದೂ, ಈ ಕಾರಣಕ್ಕಾಗಿ ಇವರು ಇಲಿ ಬೇಟೆಯನ್ನು ಸಂಪೂರ್ಣ ನಿಲ್ಲಿಸಿದ್ದೇವೆಂದೂ ಹೇಳುತ್ತಾರೆ.



### ೩.೧೦.೩ ಜಲಚರಬೇಟೆ

ಇವರ ಜಲಚರ ಬೇಟೆಯಲ್ಲಿ ಮೀನು ಮತ್ತು ಏಡಿ ಬೇಟೆ ಮುಖ್ಯವಾದದ್ದು. ಮೀನುಗಳನ್ನು ಕೂಣಿಯಿಂದಲೂ, ಬಲೆಯಿಂದಲೂ, ಗಾಳದಿಂದಲೂ ಹಿಡಿಯುತ್ತಾರೆ. ಅತಿ ಹೆಚ್ಚು ಮೀನುಗಳು ಸಿಕ್ಕಾಗ ಅವುಗಳನ್ನು ಒಣಗಿಸಿ ಡಬ್ಬಿಯಲ್ಲಿ ತುಂಬಿಸಿಟ್ಟುಕೊಂಡು ಆಗಾಗ ಅಡಿಗೆಗೆ ಉಪಯೋಗಿಸುತ್ತಾರೆ. ಇವರು ಏಡಿ ಬೇಟೆಯನ್ನು ಕೊಳ, ಹೊಂಡ, ಹಳ್ಳ, ಕೆರೆ, ಇವುಗಳಲ್ಲಿ ಮಾಡುತ್ತಾರೆ. ಒಂದು ಬಿದಿರಿನ ಉದ್ದವಾದ ಕೋಲಿನ, ತುದಿಗೆ ಕೊಂದ ಕಪ್ಪೆಯ ಮಾಂಸವನ್ನು ಕಟ್ಟಿ, ಏಡಿಗಳು ವಾಸವಾಗಿರುವ ನೀರಿನ ಕಲ್ಲು ಪೊಟರೆಗಳ ಸಂಧಿಯಲ್ಲಿ ಹಿಡಿಯುತ್ತಾರೆ. ಕಪ್ಪೆಯ ಮಾಂಸದ ವಾಸನೆಯನ್ನು ಗ್ರಹಿಸಿ ತಿನ್ನಲು ಬಂದ ಏಡಿ

ಬಿದಿರಿನ ಕೋಲನ್ನು ಕಚ್ಚುತ್ತದೆ. ಹೀಗೆ ಕಚ್ಚಿದ ಏಡಿಯನ್ನು ತಮ್ಮಲ್ಲಿರುವ ಕೋಲು ಅಥವಾ ಕತ್ತಿಯಿಂದ ಹೊಡೆದು ಸಾಯಿಸುತ್ತಾರೆ. ಅದನ್ನು ಏಡಿಯ ಕೊಂಬುಗಳನ್ನು ಮುರಿದು ಬುಟ್ಟಿಯೊಳಗೆ ತುಂಬಿಸಿಕೊಂಡು ಹೋಗುತ್ತಾರೆ. ಇಂಥಹ ಬೇಟೆಯನ್ನು ಸಾಮಾನ್ಯವಾಗಿ ಒಬ್ಬನೇ ಮಾಡುತ್ತಾನೆ. ಹುಡುಗರು ಕೆಲವೊಮ್ಮೆ ಹೆಂಗಸರೂ ಕೂಡಾ ಈ ಬೇಟೆಯಲ್ಲಿ ಪಾಲ್ಗೊಳ್ಳುವುದುಂಟು.

ಬೇಟೆಯನ್ನು ಹವ್ಯಾಸವಾಗಿಟ್ಟು ಕೊಂಡಿರುವ ಈ ಜನಾಂಗ ಮೀನು, ಏಡಿ, ಬೇಟೆಯಾಡಲು ತಮಗೆ ವಿಶಿಷ್ಟವಾದ ತಮ್ಮದೇ ವಿಧಾನಗಳನ್ನು ಕಂಡುಕೊಂಡಿದ್ದಾರೆ.

ಇದು ವರೆಗೂ ನಿರೂಪಿಸಿದ ಬೇಟೆ ವಿಧಾನವನ್ನು ಸೂಕ್ಷ್ಮವಾಗಿ ಗಮನನಿಸಿದಾಗ, ಇವರು ಆಡುವ ಬೇಟೆ ಆಹಾರಕ್ಕಾಗಿ ಮತ್ತು ತಮ್ಮ ಆಹಾರ ಬೆಳೆಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿಯೇ ಹೊರತು, ವಿನೋದಕ್ಕಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮಕ್ಕಳು ಹಕ್ಕಿ ಮೀನು ಹಿಡಿಯುವುದು ವಿನೋದವಾಗಿ ಕಂಡು ಬರುತ್ತದೆ. ದೊಡ್ಡವರು ನಿರ್ವಹಿಸುವ ಬೇಟೆಯಲ್ಲಿ ವಿನೋದವಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ, ವಿನೋದವೇ ಅದರ ಉದ್ದೇಶವಲ್ಲ.

ಇಲಿ ಬೇಟೆ, ಬಲೆ ಹಾಕಿ ಹಿಡಿಯುವ ಬೇಟೆ, ಏಡಿ ಬೇಟೆಯನ್ನು ಗಮನಿಸಿದರೆ, ಅವುಗಳಲ್ಲಿ ತೀರಾ ಹಳೆಯ ಬೇಟೆಯ ತಂತ್ರವಿಧಾನಗಳು ಉಳಿದುಬಂದಿರುವುದು ಕಂಡು ಬರುತ್ತದೆ. ಆಧುನಿಕ ಸೌಲಭ್ಯಗಳಿರುವ ಇಂಥ ದಿನಗಳಲ್ಲೂ ಹಳೆಯ ಬೇಟೆಯ ತಂತ್ರಗಳು ಉಳಿದು ಬಂದಿರಬೇಕಾದರೆ ಇವರು ಎಷ್ಟರ ಮಟ್ಟಿಗೆ ಸಂಪ್ರದಾಯ ಶೀಲರೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ ಇದಕ್ಕೆ ಕಾರಣ ಆರ್ಥಿಕವಾಗಿ, ಸಾಮಾಜಿಕವಾಗಿ ದುರ್ಬಲರಾಗಿರುವುದೇ ಕಾರಣವಾಗಿದೆ.

# ಅಧ್ಯಾಯ - ೪

## ೪. ಆಚರಣೆಗಳು

೪:೧. ಜೀವನಾವರ್ತನದ ಆಚರಣೆಗಳು

೪:೧:೧. ಜನನ

೪:೧:೨. ಪ್ರೌಢ

೪:೧:೩. ಮದುವೆ

೪:೧:೪. ವಿಚ್ಛೇಧನ

೪:೧:೫. ಮರಣ

೪:೨. ವಾರ್ಷಿಕಾವರ್ತನದ ಆಚರಣೆಗಳು

೪:೨:೧. ಹಬ್ಬ

೪:೨:೨. ಜಾತ್ರೆ

### ೪.ಆಚರಣೆಗಳು

ಸಮಾಜವನ್ನು ಒಂದುಗೂಡಿಸುವ, ಶಕ್ತಿಯನ್ನು ಸಂಪ್ರದಾಯಗಳು ಮತ್ತು ಆಚರಣೆಗಳು ನೀಡುತ್ತವೆ. ಇವು ವ್ಯಕ್ತಿಯ ಬಾಳಿನ ಅವಿಭಾಜ್ಯ ಸಂಗತಿಗಳಾಗಿ, ಅವನ ಜೀವನವನ್ನು ರೂಪಿಸಿ, ಸಂಸ್ಕೃತಿಯನ್ನು ಪೋಷಿಸಿ, ನಾಗರಿಕತೆಯನ್ನು ಬೆಳೆಸುವಲ್ಲಿ ಮಹತ್ವದ ಪ್ರಾತವನ್ನು ವಹಿಸುತ್ತವೆ. ಇದು ಇವುಗಳ ಮೂಲ ನಂಬಿಕೆಯೇ ಆಗಿದೆ. "ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿ ನಿಷೇಧಗಳಾಗಿ ಉಪಾಸನೆ (Rituals) ಗಳಾಗಿ ಸಾಕಾರತೆ ಪಡೆಯುತ್ತವೆ". (ಜವರೇಗೌಡ. ದೇ. 1976:321) ಇಂಥ ಆಚರಣೆಗಳಿಂದಲೇ ಸಂಪ್ರದಾಯಗಳು ಉಳಿದುಕೊಂಡು ಬಂದಿವೆ. ಭೌಗೋಳಿಕ ಮಿತೀಯ ಹಾಗೂ ಸಾಂಸ್ಕೃತಿಕ ಪರಿಸರಗಳ ಹಿನ್ನೆಲೆಯಲ್ಲಿ, ಆಯಾಯಾ ಜನರ ಮನೋಧರ್ಮವನ್ನಲಂಬಿಸಿ ಸಂಪ್ರದಾಯಗಳು ಉಗಮಿಸಿ ಆಚರಣೆಗಳಿಂದ ಉಳಿದುಕೊಂಡಿವೆ. ಮಾನವನ ಬೌದ್ಧಿಕ, ಮಾನಸಿಕ ಹಾಗೂ ಶಾರೀರಕ ಗುಣ ಲಕ್ಷಣ ಕ್ರಿಯೆಗಳು ಸಾರ್ವತ್ರಿಕವಾಗಿ ಏಕರೂಪವಾಗಿರುವುದರಿಂದ ಒಂದೇ ಬಗೆಯ ಸಂಪ್ರದಾಯ ಆಚರಣೆಗಳು ಭಿನ್ನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರೂಪುಗೊಳ್ಳಲು ಅವಕಾಶವುಂಟು. ಈ ಕಾರಣದಿಂದಲೇ ಬೇರೆ ಬೇರೆ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಕೃಷಿ, ವಿವಾಹ ಸಂಬಂಧವಾದ ಹಾಗೂ ಮರಣೋತ್ತರ ಸಂಪ್ರದಾಯಾಚರಣೆಗಳಲ್ಲಿ ಸಾದೃಶ್ಯ ಮತ್ತು ವೈದೃಶ್ಯಗಳಿವೆ.

ಮೌಲ್ಯಗಳು ಬದಲಾದಂತೆ ಸಂಪ್ರದಾಯ ಮತ್ತು ಆಚರಣೆಗಳು ವ್ಯತ್ಯಾಸವಾದರೂ ಅವು ಸಂಪೂರ್ಣ ಇಲ್ಲವಾಗುವುದಿಲ್ಲ. ಕೆಲವು ಆಚರಣೆಗಳು ಆಧುನಿಕತೆಯ ಜೀವನದ ಅತಿಗಳಿಗೆ ಲೆಕ್ಕಿಸದೇ ಇನ್ನೂ ಜೀವಂತವಾಗಿವೆ. ಉಪ್ಪಾರ ಜನಾಂಗದ ಆಚರಣೆಗಳು ಕರ್ನಾಟಕದಾದ್ಯಂತ ಭಿನ್ನವಾದರೂ, ದಕ್ಷಿಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಹೆಚ್ಚು ವ್ಯತ್ಯಾಸಗಳಿಲ್ಲದೆ ಉಳಿದಿವೆ.

### ೪.೧. ಜೀವನಾವರ್ತನದ ಆಚರಣೆಗಳು

ವ್ಯಕ್ತಿಯ, ಹುಟ್ಟಿನಿಂದ ಮರಣದ ವರೆಗೆ ನಡೆಯುವ ಆಚರಣೆಗಳು ವೈವಿಧ್ಯಮಯದಿಂದ ಕೂಡಿರುತ್ತವೆ. ಒಂದು ಗುಂಪಿನ ಜನ ಆಚರಿಸುವ ಈ ಆಚರಣೆಗಳು ಒಂದೇ ತೆರನಾಗಿರುತ್ತವೆ. ಕೆಲವು ವೇಳೆ ತಮ್ಮ ಸುತ್ತಲಿನ ಬಹುಸಂಖ್ಯಾ ಜನಾಂಗದಿಂದ ಪ್ರಭಾವ ಪಡೆದು ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಅವುಗಳು ತಮ್ಮ ಮೂಲವನ್ನು ಹಾಗೆಯೇ ಉಳಿಸಿಕೊಂಡಿವೆ.

## ೪.೧.೧. ಜನನ

ಸಂತಾನೋತ್ಪತ್ತಿ ವಿವಾಹದ ಮೂಲ ಉದ್ದೇಶವಾಗಿದೆ.ಜನರ ಬದುಕಿನಲ್ಲಿ ಇದಕ್ಕೆ ಅತ್ಯಂತ ಮಹತ್ವವಿದೆ. ಪ್ರತಿಯೊಬ್ಬರು ತಮ್ಮ ಸಂತಾನ ಆನುವಂಶಿಕ ರೋಗಗಳಿಲ್ಲದೇ ಆರೋಗ್ಯವಾಗಿರಬೇಕೆಂದು ಆಸೆ ಪಡುವುದು ಸಹಜ ಸಂಗತಿಯಾಗಿದೆ. ಪುರುಷ ಸ್ತ್ರೀಯರು ಸಮಾಜದ ಅನುಮತಿಯಾದ ವಿವಾಹವಾದ ನಂತರ ಬಹಳ ಸುಖವಾಗಿ ಬದುಕುತ್ತಾರೆ. ಹೀಗೆ, ಒಬ್ಬರನೊಬ್ಬರು ಅರಿತು ಬದುಕಿನ ಫಲವೇ ಸಂತಾನದ ಉಗಮಕ್ಕೆ ಕಾರಣವಾಗಿದೆ. ಹೆಣ್ಣು ಗರ್ಭ ಧರಿಸುತ್ತಾಳೆ; ದಿನದಿಂದ ದಿನಕ್ಕೆ ಅವಳ ಶರೀರ ಬದಲಾಗುತ್ತಾ ಹೋಗುತ್ತವೆ. ಈ ವೇಳೆಯಲ್ಲಿ ಅನೇಕ ಸಂಪ್ರದಾಯಗಳು, ನಿಷೇಧಗಳು ಆಚರಣೆಗಳು ನಡೆಯುತ್ತವೆ. ಇವುಗಳು ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿರುತ್ತವೆ. ಜೀವನದ ಮುಖ್ಯ ಘಟ್ಟವಾದ ಜನನ ಸಂದರ್ಭದಲ್ಲಿ ತನಗೆ ತೀರ ಹತ್ತಿರದವರು ಜೊತೆಗೆ ಸೇರಿ ಹಿಂದಿನಿಂದ ನಡೆದು ಬಂದ ಪದ್ಧತಿಯಂತೆ ನಡೆಸಲು ಇಚ್ಛೆ ಪಡುತ್ತಾರೆ. ಎಲ್ಲಾ ಜನಾಂಗಗಳಂತೆ ಉಪ್ಪಾರ ಜನಾಂಗದವರು ಈ ಸಂದರ್ಭದಲ್ಲಿ ಅನೇಕ ಬಗೆಯ ಸಂಪ್ರದಾಯಗಳನ್ನು ಇಟ್ಟುಕೊಂಡಿರುವುದು ಕಂಡು ಬರುತ್ತದೆ.

ಒಂದು ಗೊತ್ತಾದ ದಿನ ಗಂಡ ಹೆಂಡತಿಯರಿಬ್ಬರು ಮನೆ ದೇವತೆಯನ್ನು ಸಂಪ್ರದಾಯದಂತೆ ಪೂಜಿಸಿ ಮನೆಯನ್ನು ಸಂಪ್ರದಾಯದಂತೆ ಸೇರುತ್ತಾರೆ. ಇದರ ಫಲವಾಗಿ ಹೆಣ್ಣು ಗರ್ಭಧರಿಸುತ್ತಾಳೆ. ಏಳು ತಿಂಗಳು ಪೂರ್ಣ ಗರ್ಭವತಿಯಾದಾಗ ಆಕೆಗೆ ಸಹಜವಾಗಿ ತವರಿನ ಆಸೆ, ಹಂಬಲ ಉಂಟಾಗುತ್ತದೆ. ತನ್ನ ಚೊಚ್ಚಲು ತಾಯ್ತನವನ್ನು ಅದರ ಸಿರಿಯನ್ನು ಹೆತ್ತಮ್ಮನ ಎದುರಿನಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಕಾತರಿಸುತ್ತಾಳೆ. ಈ ಅವಧಿ ಹೆಣ್ಣಿನ ಬದುಕಿನಲ್ಲಿ ಬಹಳ ಮಹತ್ವ ಪೂರ್ಣವೂ ಹಾಗೂ ಸೂಕ್ಷ್ಮವೂ ಆಗಿರುತ್ತದೆ. ನಿದಿಷ್ಟ ಅವಧಿ ತುಂಬಿದ ಬಳಿಕ ತವರಿನವರು ಕರೆಯಲು ಸಜ್ಜಾಗುತ್ತಾರೆ. ಮಗಳನ್ನು ಕರೆದುಕೊಂಡು ಬರುವ ದಿನವನ್ನು ಊರಿನ ಪುರೋಹಿತರಿಂದ ತಿಳಿದುಕೊಳ್ಳುತ್ತಾರೆ. ಅವರು ಹೇಳಿದ ದಿನವನ್ನು ಆ ಕಾರ್ಯಕ್ಕಾಗಿ ಗೊತ್ತು ಪಡಿಸಿಕೊಳ್ಳಲಾಗುವುದು. ಮಗಳ ಗಂಡನ ಮನೆಯವರಿಗೂ ತಾವು ಕರೆಯಲು ಬರುವ ದಿವಸವನ್ನು ಖಚಿತವಾಗಿ ತಿಳಿಸುತ್ತಾರೆ.

ಚೊಚ್ಚಲು ಬಸುರಿಯಾದ ಹೆಣ್ಣು ಮಗಳನ್ನು ಉಪ್ಪಾರರಲ್ಲಿ ಸಾಮಾನ್ಯವಾಗಿ ಐದು ಅಥವಾ ಏಳನೇ ತಿಂಗಳಲ್ಲಿ ತವರಿಗೆ ಕರೆಯುವುದು ವಾಡಿಕೆ ಇದೆ. ಮೊದಲ ಹೆರಿಗೆ ತವರಿನಲ್ಲೇ ನಡೆಯಬೇಕೆಂಬ ನಿಯಮವಿದೆ. ಇದು ಹೆಣ್ಣಿನ ಆಸೆಯೂ ಆಗಿರುತ್ತದೆ. ಹೆಣ್ಣನ್ನು ಕರೆತರಲು ತವರಿನವರು ಗಂಡನ ಮನೆಗೆ ಹೋದಾಗ 'ಬಯಕೆ' ಶಾಸ್ತ್ರವನ್ನು ಮಾಡುತ್ತಾರೆ.

ಬಯಕೆ ಶಾಸ್ತ್ರ ಅಂದಿನ ಮುಖ್ಯ ಕಾರ್ಯಕ್ರಮವೆಂದರೆ ಗರ್ಭಿಣಿಯನ್ನು 'ಹಸಗೆ' ಹತ್ತಿಸುವುದು. ಈ ಸಮಾರಂಭಕ್ಕೆ ಅವರ ಹತ್ತಿರದ ರಕ್ತ ಸಂಬಂಧಗಳು, ನೆಂಟರಿಷ್ಟರು ಹಾಗೂ ನೆರೆ ಹೊರೆಯವರನ್ನು

ಆಹ್ವಾನಿಸಿರುತ್ತಾರೆ. ತವರಿನಿಂದ ಇಬ್ಬರು ಮುತ್ತೈದೆಯವರು ಹಾಗೂ ಸೋದರ ಮಾವ. ಗರ್ಭಿಣಿ ಹೆಂಗಸು ಇಷ್ಟಪಡುವ ತಿಂಡಿ ತಿನಿಸುಗಳನ್ನು ಸಿದ್ಧಪಡಿಸಿಕೊಂಡು ಬರುತ್ತಾರೆ.

ಶಾಸ್ತ್ರದ ಸಂದರ್ಭದಲ್ಲಿ ತುಂಬು ಗರ್ಭಿಣಿಗೆ ಹಸಿರು ಬಳೆ, ಹಸಿರು ಸೀರೆ ತೊಡಿಸುತ್ತಾರೆ. ಮತ್ತೆ ಶಾಸ್ತ್ರಕ್ಕಾಗಿ ಐದು ಜನ ಮುತ್ತೈದೆಯರು ಸೇರಿ ಅವಳಿಗೆ ಹಸಿರುಬಳೆ, ಇಡಿಸಿ ಮಡಿಲುದುಂಬಿಸುತ್ತಾರೆ. ಈ ಸಂದರ್ಭದಲ್ಲಿ ಅವಳಿಗೆ ಸೇಸೆ ಇಕ್ಕುತ್ತಾರೆ. ಮನೆಯ ಮಧ್ಯ ಒಳಗೆ ಎರಡು ಮಣೆಗಳನ್ನು ಇಟ್ಟು ಆ ಮಣೆಗಳ ಮೇಲೆ ಎರಡು ತಟ್ಟೆಗಳನ್ನಿರಿಸಿ ಬಸುರಿ ಮತ್ತು ಅವಳ ಗಂಡನನ್ನು ಅಲ್ಲಿ ಕೂರಿಸಿ ತವರಿನಿಂದ ತಂದ ತಿನಿಸುಗಳನ್ನು ಬಡಿಸಿ, ಉಣ್ಣಲು ಹೇಳುತ್ತಾರೆ. ಕೊನೆಗೆ ಸಮಾರಂಭಕ್ಕೆ ಬಂದ ಎಲ್ಲಾ ಅತಿಥಿಗಳಿಗೂ ಊಟವಿರುತ್ತದೆ. ಊಟ ಮುಗಿದ ಮೇಲೆ ಮುತ್ತೈದೆಯರು ಮತ್ತೆ ಅವಳನ್ನು ಹಸೆಮಣೆಯಲ್ಲಿ ಕೂರಿಸಿ ಅರಿಶಿನ ಕುಂಕುಮ ಇರಿಸಿ ಶುಭಕೋರುವ ರೀತಿ ಸಾಂಕೇತಿಕವೂ, ವಿಶಿಷ್ಟವೂ ಆಗಿದೆ. ಪುರೋಹಿತರು ಹೇಳಿದ ದಿನದಂದು ಬಸುರಿಯನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ. ಊರು ಸಮೀಪ ಬಂದಾಗ ಸಮೀಪದ ದೇವರ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಹೀಗೆ ಮಾಡುವುದರಿಂದ ಆ ದೇವರ ಕೃಪೆಗೆ ಪಾತ್ರರಾಗಿ, ಮುಂದೆ ಆಗುವ ಹೆರಿಗೆ ಸುಖವಾಗಿ ಆಗುವುದೆಂದು ನಂಬಿಕೆ ಇವರಲ್ಲಿದೆ. ಮನೆಯ ಅಂಗಳದಲ್ಲಿ ದೇವರಿಗೂ ಪೂಜಿಸಿ, ಗರ್ಭಿಣಿ ಮನೆ ಒಳಗೆ ಪ್ರವೇಶ ಮಾಡುತ್ತಾಳೆ. ಹೀಗೆ ಬಂದ ಗರ್ಭಿಣಿಯನ್ನು ಆ ಸಮುದಾಯದ ಜನರು, ನೋಡಲು ಬರುತ್ತಾರೆ. ಹೀಗೆ ಬಂದವರಿಗೆಲ್ಲ ಕಾಫಿ ತಿಂಡಿ ಕೊಡುತ್ತಾರೆ.

ತವರಿಗೆ ಬಂದ ಬಸುರಿಗೆ ಅನೇಕ ಬಯಕೆಗಳುಂಟಾಗುತ್ತವೆ. ತಿಂಡಿ ತಿನಿಸುಗಳನ್ನು, ಬಂದು ಬಳಗದವರನ್ನು ನೋಡುವ, ವಸ್ತ್ರಾಭರಣಗಳ ಬಯಕೆ ಉಂಟಾಗುತ್ತವೆ. ಈ ಎಲ್ಲಾ ಬಯಕೆಗಳನ್ನು ತವರಿನವರು ಈಡೇರಿಸಲು ಯತ್ನಿಸುತ್ತಾರೆ. ಒಂದು ವೇಳೆ ಅವಳ ಬಯಕೆಗಳನ್ನು ಈಡೇರಿಸದೇ ಬಿಟ್ಟರೆ ಗರ್ಭಿಣಿಗೆ ಕಣ್ಣು ಕಾಣುವುದಿಲ್ಲವೆಂದೂ, ಎದೆ ಹಾಲು ಇಂಗಿ ಹೋಗುತ್ತದೆಂದೂ, ದುರ್ಬಲ ಮನಸ್ಕಳಾಗುತ್ತಾವೆಂದೂ ನಂಬಿಕೆಗಳಿವೆ.

ಸಾಮಾನ್ಯವಾಗಿ ಚೊಚ್ಚಲು ಬಸುರಿಯನ್ನು ಬಹಳ ಮಾತುವರ್ಜಿಯಿಂದ ನೋಡಿಕೊಳ್ಳಲಾಗುವುದು. "ಬಸುರಿಯಲ್ಲಿ ಗೇದು, ಉಣ್ಣು ಬಾಣಂತಿಯಲ್ಲಿ ಕೂತು ಉಣ್ಣು" ಎಂಬ ಗಾದೆಯಂತೆ ಬಸುರಿ ಹೆಂಗಸಿನ ಕೈಯಲ್ಲಿ ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿಸುತ್ತಾರೆ. ಹಾಗೆ ಮಾಡುವುದರಿಂದ ಪ್ರಸವ ಕಾಲದಲ್ಲಿ ಸುಲಭವಾಗುತ್ತದೆ ಎಂದು ನಂಬುತ್ತಾರೆ. ಗ್ರಹಣಗಳ ಕಿರಣಗಳು ಬಸುರಿಯ ಮೈಮೇಲೆ ಬೀಳದಂತೆ ಎಚ್ಚರಿಗೆ ವಹಿಸುತ್ತಾರೆ. ಈ ಕಾರಣಕ್ಕಾಗಿ ಅವಳನ್ನು ಕತ್ತಲೆ ತುಂಬಿದ ಕೋಣೆಯಲ್ಲಿ ಮಲಗಿಸುತ್ತಾರೆ. ಹೆರಿಗೆಯ ಸಮಯದಲ್ಲಿ ಅವಳು ತೊಟ್ಟಿದ್ದ ಬಳೆ, ಆಭರಣಗಳನ್ನು ತೆಗೆದಿರಿಸುತ್ತಾರೆ.

ಹೆರಿಗೆಯನ್ನು ಅನುಭವಿ ಸೂಲಗಿತ್ತಿ ಬಂದು ಮಾಡಿಸುತ್ತಾಳೆ. ಹೆರಿಗೆ ಕಷ್ಟ ಆದರೆ ಊರಿನ ದೇವರಿಗೆ ಕಾಣಿಕೆ ಕಟ್ಟಿಕೊಳ್ಳುವ ಪದ್ಧತಿಯೂ ಉಂಟು. ಆದರೆ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಹೆರಿಗೆಯಾದ ಅನಂತರ ತಾಯಿ ಮತ್ತು ಮಗುವನ್ನು ಸೂಲಗಿತ್ತಿಯ ಹೊಕ್ಕುಳ ಬಳ್ಳಿಯನ್ನು ಬಂದು ಚಾಕುವಿನಿಂದ ಕತ್ತರಿಸುವುದರ ಮೂಲಕ ಬೇರ್ಪಡಿಸುತ್ತಾಳೆ. ಮಗುವಿನ ಹೊಕ್ಕಳ ಬಳ್ಳಿಯ ತುದಿಯನ್ನು ಬಂದು ನೂಲಿನಿಂದ ಕಟ್ಟಿ ಅರಿಸಿನ ಕೊಂಬುನ್ನು ಅಲ್ಲಿಟ್ಟು ಮತ್ತೆ ನೂಲಿನಿಂದ ಹೊಕ್ಕಳ ಬಳ್ಳಿಯನ್ನು ಬಿಗಿಯುತ್ತಾರೆ. ಹೀಗೆ ಮಾಡುವುದು ರಕ್ತ ಸೋರುವಿಕೆಯನ್ನು ನಿಲ್ಲಿಸುವ ಉದ್ದೇಶದಿಂದ. ಮಗು ಹುಟ್ಟಿದ ಕೊಡಲೇ ಒಬ್ಬ ಅಗಸನು ಆಕೆಯ ತಂದೆಗೆ ಶುದ್ಧಿಯನ್ನು ಕೊಟ್ಟು ಕಾಣಿಕೆಯನ್ನು ಪಡೆಯುವನು. * ಮೂರನೆಯ ದಿನ ಮನೆಯ ಅಂಗಳದಲ್ಲಿ ತೋಡಿದ ಹಳ್ಳವೊಂದರಲ್ಲಿ ಈಗಾಗಲೇ ಮಡಿಕೆಯೊಂದರಲ್ಲಿ ಹಾಕಿಟ್ಟಿದ್ದ 'ಹೊಕ್ಕಳ ಬಳ್ಳಿಯನ್ನು ಹೂತು ಆದರ ಮೇಲೆ ಎಕ್ಕ ಅಥವಾ ಕಳ್ಳಿಯನ್ನು ಸಿಕ್ಕಿಸುತ್ತಾರೆ. * ಆ ಸ್ಥಳದಲ್ಲಿ ಬೇಯಸಿದ ಪದಾರ್ಥಗಳನ್ನು ಹಂಚುತ್ತಾರೆ.

**ಸೂತಕ ತೆಗೆದುಕೊಳ್ಳುವುದು**

ಮಗು ಜನಿಸಿದ ೫ ಅಥವಾ ೯ ದಿನಗಳ ವರೆಗೆ ಸೂತಕವಿರುತ್ತದೆ. ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸುವುದರ ಮೂಲಕ ಮೈಲಿಗೆಯನ್ನು ಕಳೆಯುತಾರೆ. ಆ ದಿನ ಮನೆ ಮಂದಿಯನ್ನು ಬಟ್ಟೆ ಬರಿಗಳನ್ನೆಲ್ಲ ಸ್ವಚ್ಛಗೊಳಿಸಿಕೊಳ್ಳುವುದರ ಜೊತೆಗೆ ಸ್ನಾನ ಮಾಡಿ ಮನೆಯನ್ನೆಲ್ಲ ಗೋಮಾಯ ಹಾಕಿ ಶುಚಿಗೊಳಿಸುತ್ತಾರೆ.

**ತೊಟ್ಟಿಲ ಶಾಸ್ತ್ರ**

ಮಗು ಮರದಿಂದ ತೊಟ್ಟಿಲನ್ನು ಏರುವ ಶಾಸ್ತ್ರೋಕ್ತವಾದ ಶುಭದಿನವಾಗಿದೆ. ಇದಕ್ಕೆ ತೊಟ್ಟಿಲ ಪೂಜೆ ಎಂದೂ, ನಾಮಕರಣ ಎಂದೂ ಕರೆಯುತ್ತಾರೆ. ಮಗು ಹುಟ್ಟಿ ಹನ್ನೊಂದನೆಯ ದಿನ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸಿದ ಅನಂತರ ಅಂದಿನ ಶಾಸ್ತ್ರಗಳು ಆರಂಭವಾಗುತ್ತವೆ. ಮನೆಯ ಎಲ್ಲಾ ಭಾಗದಲ್ಲೂ ಗೋಮಾಯ ಸಿಂಪಡಿಸಿ ಶುಚಿಗೊಳಿಸಿಕೊಳ್ಳುತ್ತಾರೆ. ಕೆಲವೆಡೆಗಳಲ್ಲಿ ಬ್ರಾಹ್ಮಣರನ್ನು ಕರೆಯಿಸಿ ಮನೆಯನ್ನು ಶುಚಿಗೊಳಿಸುವುದರೊಂದಿಗೆ ತಾಯಿ, ಮಗುವನ್ನೂ ಹರಸುವಂತೆ ಕೇಳಿಕೊಳ್ಳುತ್ತಾರೆ.

ಮುತ್ತೈದೆಯರು ತೊಟ್ಟಿಲನ್ನು ಪೂಜೆ ಮಾಡಿ, ತೊಟ್ಟಿಲ ಒಳಗೆ ಎಲೆಯನ್ನು, ಅರಿಸಿಣವನ್ನು ಹಾಕಿದ ನಂತರ, ಮಗುವನ್ನು ತೊಟ್ಟಿಲಿಗೆ ಮೂರು ವಾಗಿ ಸುತ್ತಿಸುತ್ತಾರೆ. ಮೊದಲು ಮಗುವಿನ ಅಪ್ಪ ಮತ್ತು ಅಮ್ಮ ತೊಟ್ಟಿಲಿಗೆ ಹಾಕುತ್ತಾರೆ. ಈ ಸಂದರ್ಭದಲ್ಲಿ ಮಗುವಿನ ಸೋದರತ್ತೆಯು ಪುರೋಹಿತರು ಸೂಚಿಸಿದ ಹೆಸರನ್ನು

೩ ಬಾರಿ ಹೇಳುತ್ತಾರೆ. ಅಲ್ಲಿ ನೆರೆದಿರುವ ಬಂದು ಬಾಂಧವರಿಗೆಲ್ಲ ಸಕ್ಕರೆ, ಬಾಳೆಹಣ್ಣು , ಎಲೆ ಅಡಿಕೆ ನೀಡುವುದರ ಜೊತೆಗೆ ಹೆಸರನ್ನು ಅವರಿಗೆ ಹೇಳುತ್ತಾರೆ. ಇದಾದ ನಂತರ ವಿಶೇಷ ಔತಣವಿರುತ್ತದೆ .

ಸಾಮಾನ್ಯವಾಗಿ ಮಗುವಿಗೆ ಇಡುತ್ತಿದ್ದ ಹೆಸರು ತಮ್ಮ ಪೂರ್ವಿಕರ ಅಥವಾ ಮನೆಯ ದೇವತೆಯ ಹೆಸರಾಗಿರುತಿತ್ತು. ಹುಟ್ಟಿದ ಮಗುವು ಪದೇ ಪದೇ ಅನಾರೋಗ್ಯ ಪೀಡಿತವಾಗುತ್ತಿದ್ದರೆ. ಪುರೋಹಿತ, ಕಣಿ ಹೇಳುವವ ಅಥವಾ ದೇವರನ್ನು ಹೂ ಕೇಳುವ ಮೂಲಕ ಮೊದಲಿನ ಹೆಸರನ್ನು ಬದಲಾಯಿಸುತ್ತಿದ್ದರು. ಮುಂದೆ ಇಡುತ್ತಿದ್ದ ಹೆಸರುಗಳು ತಮ್ಮ ಜಾತಿ ಮತ್ತು ಬೆಡಗಿನ ಗೌರವಕ್ಕೆ ಯೋಗ್ಯವಾಗಿರುತ್ತಿದ್ದವು. ವಿಚಿತ್ರ ಹೆಸರುಗಳನ್ನು ಇಡುತ್ತಿರಲಿಲ್ಲ. ಇವರಲ್ಲಿ ಬಹಳಷ್ಟು ಜನ ವೈಷ್ಣವರಾದುದರಿಂದ ಶಿವನಿಗಿಂತ ವಿಷ್ಣುವಿನ ಹೆಸರನ್ನೇ ಸಾಮಾನ್ಯವಾಗಿಡುತ್ತಿದ್ದರು. ಪ್ರೀತಿಯಿಂದ ಮಗುವಿಗೆ ಪುಟ್ಟು, ಸ್ವಾಮಿ ಎಂದು ಕರೆಯುತ್ತಿದ್ದರು.

**ಕಿವಿ ಚುಚ್ಚುವುದು** : ಮಗುವಿಗೆ ೫ ತಿಂಗಳು ತುಂಬಿದ ಅನಂತರ ದೇವರಿಗೆ ಬಿಟ್ಟಿದ್ದ ಕೂದಲುಗಳನ್ನು ಕ್ಷೌರಿಕರಿಂದ ತೆಗೆಯುತ್ತಾರೆ. ಕೆಲವೆಡೆ ದೇವಸ್ಥಾನದಲ್ಲಿ ನಡೆಯುತ್ತದೆ. (ಧರ್ಮಸ್ಥಳ, ತಿರುಪತಿ, ಹೊರನಾಡು) ತೆಗೆಸಿದ ಕೂದಲನ್ನು ಬಾಳೆಯ ಎಲೆಯ ಮೇಲೆ ಹಾಕಿ ನದಿಯಲ್ಲಿ ಬಿಡುತ್ತಾರೆ. ಕೂದಲು ತೆಗೆದ ಕ್ಷೌರಿಕನಿಗೆ ವಿಶೇಷವಾದ ಮನ್ನಣೆಯನ್ನು ಕೊಟ್ಟು ಗೌರವಿಸುತ್ತಾರೆ. ಮಗುವಿಗೆ ಸ್ನಾನ ಮಾಡಿಸಿದ ನಂತರ ಅಕ್ಕಸಾಲಿಗನೊಬ್ಬನಿಂದ ಕಿವಿ ಚುಚ್ಚುವ ಶಾಸ್ತ್ರ ಆರಂಭವಾಗುತ್ತದೆ. ಹೊಸದುರ್ಗದ ಸುತ್ತಮುತ್ತ ಈ ಕಾರ್ಯ ದೇವಸ್ಥಾನಗಳಲ್ಲೂ ಜರುಗುತ್ತದೆ. ಈ ದಿನವೂ ಬಂದು-ಬಾಂಧವರಿಗೂ ಊಟವಿರುತ್ತದೆ. ಅಕ್ಕಸಾಲಿಗನು ಮಗುವಿನ ಕಿವಿ ಚುಚ್ಚಿದ ಮೇಲೆ ಲೋಲಾಕು ಹಾಕಿ, ಕೈಗೆ ಬಳೆ, ಕಾಲಿಗೆ ಕಡಗ, ಸೊಂಟಕ್ಕೆ ಬೆಳ್ಳಿ ಉಡಿದಾರವನ್ನು ಹಾಕುತ್ತಾನೆ. * ಇದಾದನಂತರ ಮಗುವಿಗೆ ಹೊಸ ಬಟ್ಟೆ ತೊಡಿಸಲಾಗುವುದು. ಕಿವಿ ಚುಚ್ಚಿದ ಪ್ರಯುಕ್ತ ಅಕ್ಕಸಾಲಿಗೆ ಹಣ, ಅಕ್ಕಿ, ತೆಂಗಿನಕಾಯಿ, ಎಲೆ ಅಡಿಕೆ ಕೊಟ್ಟು ಗೌರವಿಸಿ ಕಳುಹಿಸುತ್ತಾರೆ. ಇವರಲ್ಲಿ ಗಂಡು ಮಕ್ಕಳಿಗೂ ಈ ಶಾಸ್ತ್ರವನ್ನು ಮಾಡುತ್ತಾರೆ.

**ಬಾಣಂತಿಯ ಆರೈಕೆ**: ತಾಯಿಯ ಆರೈಕೆಯಿಂದ ಮಗುವಿನ ಮೇಲೆ ಪರಿಣಾಮ ಬೀರುತ್ತದೆ. ಮಗು ಹೆಣ್ಣಾಗಿದ್ದರೆ ಅದಕ್ಕೆ ಅರಗಿಸಿಕೊಳ್ಳುವ ಶಕ್ತಿ ಕಡಿಮೆ ಇರುತ್ತದೆ. ಈ ಕಾರಣದಿಂದ ತಾಯಿಗೆ ಆರೈಕೆ ಮಾಡುವಾಗ ಮಗು ಗಂಡಾಗಿದ್ದರೆ ಒಂದು ರೀತಿಯ ಪಥ್ಯ ಹೆಣ್ಣಾಗಿದ್ದರೆ; ಇನ್ನೊಂದು ರೀತಿಯ ಪಥ್ಯ ಮಾಡುತ್ತಾರೆ.

ಹೆರಿಗೆಯಾದ ದಿನದಿಂದ ಮುಂದಿನ ಹನ್ನೊಂದು ದಿನಗಳ ವರೆಗೆ ಬಾಣಂತಿಗೆ ದಿನಕ್ಕೆ ಎರಡು ಸಲ ಸ್ನಾನ, ಚೆನ್ನಾಗಿ ಕುದಿಸಿದ ನೀರನ್ನು ಹಾಕುತ್ತಾರೆ. ಇದಾದ ಮೇಲೆ ಬಟ್ಟೆ ಅಥವಾ ಕಂಬಳಿಯನ್ನು ಮುಸುಕು

ಹಾಕಿ ಮಲಗಿಸುತ್ತಾರೆ. ಹೀಗೆ ಮಾಡಿದಾಗ ಚೆನ್ನಾಗಿ, ಬೆವರುತ್ತಾಳೆ. ಬಾಣಂತಿ ಕೆಟ್ಟನೀರು ಮೈಯಿಂದ ಹೊರಗೆ ಹೋಗಿ ಬಾಣಂತಿಯ ಆರೋಗ್ಯ ಸುಧಾರಿಸುತ್ತದೆ ಎಂದು ನಂಬುತ್ತಾರೆ. ಬಾಣಂತಿಯನ್ನು ಕತ್ತಲೆ ಕೋಣೆಯೊಳಗೆ ಹೊಟ್ಟೆಗೆ ಬಟ್ಟೆ ಸುತ್ತಿ ಮಲಗಿಸುತ್ತಾರೆ. ಬಾಣಂತಿ ಕತ್ತಲಲ್ಲಿಯೇ ಕುಳಿತು ಊಟ ಮಾಡುತ್ತಾಳೆ. ದಾರಿಯಲ್ಲಿ ಸುಳಿದಾಡುವವರ ನೆರಳು ತಾಗಿದರೆ ಬಾಣಂತಿಯ ಆರೋಗ್ಯ ಹೆಚ್ಚುಕಮ್ಮಿ ಆಗುತ್ತದೆಂದು ಈ ಕ್ರಮವನ್ನು ಅನುಸರಿಸುತ್ತಾರೆ. ಮೊದಲ ಹನ್ನೊಂದು ದಿನಗಳ ವರೆಗೆ ಹೆರಿಗೆಯ ನಂಜಿನ ನಿವಾರಣೆಗಾಗಿ ಮೆಣಸಿನ ಹಿಟ್ಟು ಮತ್ತು ಸ್ವಲ್ಪ ಸರಾಯಿ ಕೊಡುತ್ತಾರೆ. ಜೊತೆಗೆ ಬೇವಿನೆಣ್ಣೆಯನ್ನು ಕುಡಿಸಿ, ಕಾಳುಜೀರಿಗೆ ಹಿಟ್ಟನ್ನು ತಿನ್ನಿಸುತ್ತಾರೆ. ಇದರೊಂದಿಗೆ ಹೆರಿಗೆಯಾದ ಐದು ದಿನಗಳ ವರೆಗೆ ಕಾಡಿನಲ್ಲಿ ಸಿಗುವ ಒಂದು ಜಾತಿಯ 'ಬಳ್ಳಿ'ಯನ್ನು ಅರೆದು ಕೊಡುತ್ತಾರೆ. * ಎರಡು ದಿನಗಳಾದ ಮೇಲೆ ಮಧ್ಯಾಹ್ನದ ಹೊತ್ತು ಸ್ವಲ್ಪ ಬಸಿದ ಅನ್ನ, ಮೆಣಸಿನ ಹಿಟ್ಟು ಕೊಡುತ್ತಾರೆ. ಐದು ದಿನಗಳವರೆಗೆ ರಾತ್ರಿ ಮಲಗುವ ಹೊತ್ತಿನಲ್ಲಿ ಒಂದು ಹಿಡಿ ಹುಡಿಅನ್ನ ಮತ್ತು ಉಪ್ಪಿನಕಾಯಿ. ಆಮೇಲೆ ಐದು ದಿವಸಗಳಲ್ಲಿ ದಿನಕ್ಕೆ ಒಂದು ಹೊತ್ತು ಮಾತ್ರ ಊಟ. ಹನ್ನೊಂದನೆಯ ದಿನದಿಂದ ಮುಂದಿನ ಐದು ದಿನಗಳ ವರೆಗೆ ಶುಂಠಿ, ಜಾಯಿಕಾಯಿ, ಬಜೆ, ಕಹಿ ಜೀರಿಗೆ ಇವುಗಳ ಮಿಶ್ರಣದಿಂದ ತಯಾರಿಸಿದ ಪದಾರ್ಥವನ್ನು ಕೊಡುತ್ತಾರೆ. ಇದನ್ನು ಬಾಣಂತಿ ಸ್ನಾನಕ್ಕೆ ಹೋಗುವ ಮೊದಲು ಕೊಡುತ್ತಾರೆ. ಮೆಂತ್ಯೆ ಗೋಧಿ ಹಾಕಿ ಕಡಬು ಮಾಡಿ ಶಕ್ತಿ ಬರಲು ಕೊಡುತ್ತಾರೆ. ಮೆಂತೆ ತಿಂದರೆ ಬಣ್ಣ ಬರುವುದೆಂದು ನಂಬಿಕೆ ಇದೆ. ಬಾಣಂತಿಗೆ ಒಂದು ತಿಂಗಳು ಐದು ದಿನವಾದ ಮೇಲೆ ಅನ್ನ, ಸಾರು ಕೊಡುತ್ತಾರೆ. ಬಾಣಂತಿಯ ಹೊಟ್ಟೆಗೆ ತೊಂದರೆಯಾಗಬಾರದೆಂದು ಓಮಿನ ಕಾಳಿನ ಸಾರು ಮಾಡಿಕೊಡುತ್ತಾರೆ. ಎರಡು ತಿಂಗಳು ತುಂಬಿದ ಮೇಲೆ ಮಜ್ಜಿಗೆ ಮೊಸರು ಕೊಡುತ್ತಾರೆ. ರಾತ್ರಿ ಗೋಧಿ, ಅಕ್ಕಿ ಮೆಂತ್ಯೆ ಈ ಮೂರು ಬಗೆಯ ಹಿಟ್ಟನ್ನು ಮಿಶ್ರಣದಿಂದ ಕಡಬನ್ನು ತಯಾರಿಸಿ ಕೊಡುತ್ತಾರೆ. ಕೆಲವು ದಿನ ರಾತ್ರಿ ರೊಟ್ಟಿಯನ್ನು ಮಾಡಿಕೊಡುತ್ತಾರೆ. ರೊಟ್ಟಿಗೆ ತುಪ್ಪ, ಮೀನು, ಮಾಂಸದ ಪಲ್ಯವಿರುತ್ತದೆ. ತುಪ್ಪವನ್ನು ಯಥೇಚ್ಛವಾಗಿ ತಿನ್ನಲು ಕೊಡುತ್ತಾರೆ. ಎದೆ ಹಾಲು ಕಡಿಮೆಯಾಗದಿರಲೆಂದು ಮಜ್ಜಿಗೆ, ದ್ರಾಕ್ಷಿ, ಗೋಡಂಬಿ, ಉದ್ದನ್ನು ಸೇರಿಸಿದ ಆಹಾರವನ್ನು ಕೊಡುತ್ತಾರೆ.

**ಮಗುವಿನ ಆರೈಕೆ :** ಮಗುವಿಗೆ ಪ್ರತಿದಿನ ಬೆಳಿಗ್ಗೆ ಬೆಚ್ಚನೆಯ ನೀರಿನಲ್ಲಿ ಒಂದು ಸಾರಿ ಸ್ನಾನ ಮಾಡಿಸುತ್ತಾರೆ. ಮಗುವಿಗೆ ಮೂರು ತಿಂಗಳು ತುಂಬುವ ವರೆಗೂ ಬೆಂಕಿಯ ಶಾಖದಲ್ಲಿ ತಲೆ ಮೈಯನ್ನು ಒಣಗಿಸಿ ತಲೆಗೆ ಬಿಳಿವಸ್ತ್ರ ಕಟ್ಟಿ ಮೈಗೆಲ್ಲ ಬಟ್ಟೆಯನ್ನು ಸುತ್ತಿ ಬೆಚ್ಚಗೆ ಮಲಗಿಸುತ್ತಾರೆ. ಹನ್ನೆರಡು ತಿಂಗಳು ತುಂಬಿದ ಬಳಿಕ ಮೈ ತಲೆಗೆ ಎಣ್ಣೆ ಸವರಿ ಸ್ನಾನ ಮಾಡಿಸುತ್ತಾರೆ. ಸಂಜೆ ಮಲಗಿಸುವ ಮುನ್ನ ಮಗುವಿಗೆ ಎಣ್ಣೆಯನ್ನು ತಿಕ್ಕಿ ಮಲಗಿಸುತ್ತಾರೆ. ಮಗುವಿಗೆ ಶೀತಜ್ವರ ಬರದಿರಲೆಂದು ಒಂದು ಚಳಲೆ ಸರಾಯಿ ಕುಡಿಸುತ್ತಾರೆ. ಇದರಲ್ಲಿ ಒಂದು ಜಾತಿಯ ಔಷಧಿ ಸೊಪ್ಪು ಮತ್ತು ಜನಪದ ವೈದ್ಯರು ತಯಾರಿಸಿದ

ಗುಳಿಗೆಗಳು ಸಾರಾಯಿ ಬಾಟಲಿಯಲ್ಲಿ ಹಾಕಿಡುತ್ತಾರೆ. ಇದರ ಮಿಶ್ರಣದ ದ್ರವವನ್ನೇ ಆಗಾಗ ಮಗುವಿಗೆ ಕುಡಿಸುತ್ತಾರೆ. ದಿನದಲ್ಲಿ ಮೂರು ಸಲ ಆಕಳ ಹಾಲು ಕುಡಿಸುತ್ತಾರೆ. ಉಳಿದಂತೆ ಪದೇ ಪದೇ ಎದೆಹಾಲು ಕುಡಿಸುತ್ತಾರೆ. ಮಗುವಿನ ನೆತ್ತಿಯನ್ನು ಹರಳೆಣ್ಣೆ ಸೊಡರಿನಿಂದ ಕಾಯಿಸಿದ ಅರಿಶಿಣದ ಕೊಂಬಿನಿಂದ ಸುಟ್ಟು ನೆತ್ತಿಕೂಡಿಸುತ್ತಾರೆ. ಸುಟ್ಟ ಉರಿಯನ್ನು ಉಪಶಮನ ಮಾಡಲು ಆಕಳ ಬೆಣ್ಣೆಯನ್ನು ಲೇಪಿಸಿ ತಲೆಯನ್ನು ಬಟ್ಟೆಯಿಂದ ಚೆನ್ನಾಗಿ ಬಿಗಿದು ಕಟ್ಟುತ್ತಾರೆ.

ಮಗುವಿಗೆ ಒಂದು ತಿಂಗಳು ತುಂಬಿದ ಬಳಿಕ ಕಫ ತೆಗೆಯುವ ಅಥವಾ ಗೂರು ತೆಗೆಯುತ್ತಾರೆ. ಇದನ್ನು ಆ ಊರಿನ ವೃದ್ಧ ಅನುಭಸ್ಥ ಮಹಿಳೆಯೊಬ್ಬಳು ಮಾಡುತ್ತಾಳೆ. ಬಜೆ, ಜಾಯಿಕಾಯಿ, ಜೇಷ್ಟಮದ, ಮೆಣಸಿನಕಾಳು, ಓಮಿನಕಾಳು ಇವುಗಳನ್ನು ಸೇರಿಸಿ ನುಣ್ಣಗೆ ಅರೆದು ಪಾತ್ರೆಯೊಂದರಲ್ಲಿ ಕುದಿಸಿ ನಂತರ ತಣ್ಣಗೆ ಮಾಡಿ ಕುಡಿಸುತ್ತಾರೆ. ಹೀಗೆ ಮಾಡಿದಾಗ ಮಗು ಬೇದಿ ಮತ್ತು ವಾಂತಿ ಎರಡನ್ನೂ ಮಾಡಿಕೊಳ್ಳುತ್ತದೆ. ಇದೇ ರೀತಿ ಮಗುವಿಗೆ ಮೂರನೇಯ ತಿಂಗಳಲ್ಲಿ ಒಂದು ಸಾರಿ ಮಾಡುತ್ತಾರೆ. ಬಾಣಂತಿ ಮತ್ತು ಮಗುವಿನ ದೇಹಸ್ಥಿತಿ ಚೆನ್ನಾಗಿಲ್ಲದಿದ್ದರೆ, ಉಪ್ಪು ಮೆಣಸು ಪೊರಕೆ ಕಟ್ಟ ತಲೆಗೂದಲು ಇತ್ಯಾದಿಯನ್ನು ನೀವಾಳಿಸಿ ತೆಗೆದು ಒಲೆಗೆ ಹಾಕುತ್ತಾರೆ. ಒಲೆಯ ಬೂದಿಯನ್ನು ಎಡಗೈ ಹೆಬ್ಬೆರಳಿನಲ್ಲಿ ಹಚ್ಚಿಕೊಂಡು ಬಾಣಂತಿ ಮತ್ತು ಮಗುವಿನ ಹಣೆಗೆ ಇಡುತ್ತಾರೆ. ಇದಕ್ಕೆ ದೃಷ್ಟಿತೆಗೆಯುವುದು ಎಂದು ಕರೆಯುತ್ತಾರೆ.

"ಕಾಗೆ ಕಣ್ಣು
ಗುಬ್ಬಿ ಕಣ್ಣು
ಹಾದಿಲಿ ಹೋಗರ ಕಣ್ಣು
ಬೀದಿಲಿ ಹೋಗರ ಕಣ್ಣು
ದೈವದ ಕಣ್ಣು ಎಲ್ಲಾರ ಸಿಡ್ ಬಡ್ ಎಂದು ಹೋಗಲಿ"

" ಹಾದಿಕಣ್ ಬೀದಿಕಣ್
ಬಂದರ್ ಕಣ್ ಹೋದರ್ ಕಣ್
ಕೂತರ್ ಕಣ್ ನಿತ್ತರ್ ಕಣ್
ಅಪ್ಪನಕಣ್ ಅವ್ವನ ಕಣ್
ಗುಬ್ಬಿಕಣ್ ಚಿಕ್ಕನ ಕಣ್
ನಾಯಿಕಣ್ ಕಾಗೇ ಕಣ್
ಎಲ್ಲಾರ್ದು ಹೊಟ್ಟರಿ
ಚಟ್ ಅಂದು ಹೋಗಲಿ"

ತವರಿನಲ್ಲಿದ್ದ ಬಾಣಂತಿ ಮತ್ತು ಮಗುವನ್ನು ನೋಡಲು ಅತ್ತೆ ಮಾವ ಬರುವ ಪದ್ಧತಿ ಇದೆ. ಅವರು ಬರುವಾಗ ಅವಳು ಬಯಸುವ ತಿಂಡಿ ತಿನಿಸುಗಳನ್ನು ಜೊತೆಗೆ ಅಕ್ಕಿ ಮೆಣಸು, ಕೊಬ್ಬರಿ, ಶುಂಠಿ, ಬೆಲ್ಲ, ತುಪ್ಪ ತರುತ್ತಾರೆ. ರಕ್ತ ಸಂಬಂಧಿಗಳು ಬಂದಾಗಲು ಬಾಣಂತಿಯು ಬಯಸುವ ತಿನಿಸುಗಳನ್ನು ತರುತ್ತಾರೆ. ಹಾಗೆ ಬಂದವರು ಮಗುವಿನ ಕೈಗೆ ಹಣಕೊಡುವ ಪದ್ಧತಿಯೂ ಉಂಟು.

**ತವರಿನಿಂದ ಗಂಡನ ಮನೆಗೆ**

ಬಾಣಂತಿ ಮತ್ತು ಮಗುವನ್ನು ತವರಿನಿಂದ ಗಂಡನ ಮನೆಗೆ ಮೂರು ತಿಂಗಳಾದ ಮೇಲೆ ಪುರೋಹಿತ ಸೂಚಿಸಿದ ಶುಭದಿನದಂದು ಕರೆದುಕೊಂಡು ಹೋಗುತ್ತಾರೆ. ಗಂಡನ ಮನೆಯಿಂದ ಅತ್ತೆ, ಮಾವ, ಅತ್ತಿಗೆ, ನಾದಿನಿ ಮುಂತಾದವರು ಮನೆಗೆ ಬರುತ್ತಾರೆ. ಬಂದವರಿಗೆ ಆ ದಿನ ವಿಶೇಷ ಔತಣವಿರುತ್ತದೆ. ಇದರ ಜೊತೆಗೆ ಸೀರೆ ರವಿಕೆಗಳನ್ನು ಉಡುಗೊರೆಯಾಗಿ ನೀಡುತ್ತಾರೆ. ತವರಿನವರು ಕೊಟ್ಟ ಹೊಸ ಸೀರೆ, ರವಿಕೆಗಳನ್ನು ಬಾಣಂತಿ ಉಟ್ಟುಕೊಂಡು , ಮಗುವಿಗೂ ತವರಿನವರು ಕೊಟ್ಟ ಹೊಸ ಬಟ್ಟೆಯನ್ನು ತೊಡಿಸುತ್ತಾರೆ. ಹೀಗೆ ಬಟ್ಟೆ ಹಾಕುವ ಮೊದಲು ತವರಿನವರು ಮಗುವಿಗೆ ಎಣ್ಣೆ ತೀಡುತ್ತಾರೆ. ಬಾಣಂತಿ ಹೊರಡುವ ಮೊದಲು ತನಗಿಂತ ಹಿರಿಯರಾದ ಎಲ್ಲರಿಗೂ ಪಾದಮುಟ್ಟಿ ನಮಸ್ಕರಿಸುತ್ತಾಳೆ. ನಿಶ್ಚಿತ ವೇಳೆಗೆ ಸರಿಯಾಗಿ ತೊಟ್ಟಿಲು ಹೊರಡುತ್ತದೆ. ಬಾಣಂತಿಯು ಮನೆಯ ದೇವರಿಗೆ ನಮಸ್ಕರಿಸಿ ವಾಹನವನ್ನು ಏರುತ್ತಾಳೆ. (ಗಾಡಿ, ಬಸ್ಸು ಕಾರು, ಜೀಪು ಇತ್ಯಾದಿ) ವಾಹನದಿಂದ ಇಳಿದು ಮನೆಯನ್ನು ಸೇರುವ ದಾರಿಯಲ್ಲಿ ನೀರು ಹರಿಯುವ ಹಳ್ಳಗಳು, ಸಣ್ಣ ನದಿಗಳು ಸಿಕ್ಕರೆ ಮಗುವಿಗೆ ವೀಳ್ಯದೆಲೆ ಹಾಗೂ ಅಡಿಕೆಗಳನ್ನು ಸುಳಿದು ನೀರಿಗೆ ಬಿಡುತ್ತಾರೆ. ಈಗ ಈ ಸಂಪ್ರದಾಯ ಅಳಿಸಿ ಹೋಗುತ್ತಿದೆ. ಹಿಂದೆ ತವರಿನಿಂದ ಮಗುವಿನೊಡನೆ ಮನೆಗೆ ಹಿಂತಿರುಗಿ ಬರುವ ಬಾಣಂತಿಗೆ ಸಂಪ್ರದಾಯದ ಸ್ವಾಗತ ಕಾದಿರುತ್ತಿತ್ತು. 'ದಿಷ್ಟಿ' ತೆಗೆದು ಅದರ ನೀರನ್ನು ಹೊರಗೆ ಚೆಲ್ಲುತ್ತಿದ್ದರು. ಹೀಗೆ ಮಾಡುವುದರಿಂದ ಭೂತ, ಗಾಳಿ, ಪ್ರೇತ, ಸೋಂಕು, ತಗುಲದಿರಲೆಂದು. ಮಗುವಿನೊಡನೆ ಬಂದ ತಾಯಿ, ಮನೆಯ ದೇವರಿಗೆ ಪ್ರದಕ್ಷಿಣೆ ಮಾಡಿ ಮನೆಗೆ ಪ್ರವೇಶ ಮಾಡುತ್ತಾಳೆ. ತವರಿನಿಂದ ತಂದ ತಿನಿಸುಗಳನ್ನು ಅಲ್ಲಿರುವ ಎಲ್ಲರಿಗೂ ಹಂಚಿ ತಾನೂ ತಿನ್ನುತ್ತಾಳೆ. ತೊಟ್ಟಿಲು ಅಂದು ಮನೆಗೆ ಬಂದ ಮೊದಲ ದಿನವಾದ್ದರಿಂದ ವಿಶೇಷ ಅಡುಗೆ ಮಾಡಿ ಊಟಮಾಡುತ್ತಾರೆ. ಬಾಣಂತಿಯ ಜೊತೆಗೆ ಬಂದ ಹೆಂಗಸರಿಗೆ ಸೀರೆ ಕೊಡುವ ಪದ್ಧತಿ ಇದೆ.

ಮುಂದೆ ತವರಿನಿಂದ ಬಂದ ಕರೆಯ ಪ್ರಕಾರ ಮಗು ಮತ್ತು ತಾಯಿ ಹೋಗುತ್ತಾರೆ. ಈ ಸಾರಿ ಅವಳು ಹೆಚ್ಚುದಿನ ತವರಿನಲ್ಲಿ ಇರುವುದಿಲ್ಲ. ಇದಾದ ಕೆಲ ತಿಂಗಳು , ವರ್ಷಗಳಲ್ಲಿ ಅವಳಿಗೆ ಆಸೆ ಆದಾಗಲೆಲ್ಲಾ ತನ್ನ ತವರಿಗೆ ಹೋಗಿಬರುತ್ತಿರುತ್ತಾಳೆ.

ಹಿಂದೆ, ಹತ್ತು ಆರುತಿಂಗಳಾಗುವ ವರೆಗೂ ಗಂಡ ಹೆಂಡತಿ ಒಂದಾಗುತ್ತಿರಲಿಲ್ಲ. ಹಾಗೇ ಒಂದಾದರೆ ಇಬ್ಬರಲ್ಲೊಬ್ಬರಿಗೆ ಆರೋಗ್ಯ ಹಾನಿಯಾಗುತ್ತದೆ ಎಂದು ನಂಬುತ್ತಿದ್ದರು. ಈಗ ಈ ಪದ್ಧತಿಯಿಲ್ಲ.

ಇದು ವರೆಗೆ ನಿರೂಪಿಸಿದ ರೂಢಿ, ಪದ್ಧತಿ ಮತ್ತು ಸಂಪ್ರದಾಯಗಳು ಅರ್ಥಹೀನ ಪದ್ಧತಿಗಳಾಗಿ, ಶುಷ್ಕ ಸಂಪ್ರದಾಯಗಳಾಗಿ ಕಂಡು ಬಂದರೂ ಮೇಲ್ನೋಟಕ್ಕೆ ಅವುಗಳ ಆಳದಲ್ಲಿ ಇರುವ ವೈಜ್ಞಾನಿಕ ಸತ್ಯವನ್ನು

ತಳ್ಳಿಹಾಕುವಂತಿಲ್ಲ. ಗರ್ಭಿಣಿಗೆ ಐದು ಅಥವಾ ಏಳು ತಿಂಗಳು ತುಂಬಿದಾಗ ಆಚರಿಸುವ ಸೀಮಂತ ತೀರ ಔಪಚಾರಿಕೆ ಎನ್ನಿಸಿಕೊಂಡರೂ. ಈ ಆಚರಣೆ ಬಸುರಿಗೆ ಧೈರ್ಯ ತುಂಬಿ, ಅವಳ ಮನಸ್ಸನ್ನು ಶಾಂತಗೊಳಿಸಿ ಸಂತೋಷಗೊಳಿಸಲು ಮಾಡುತ್ತಾರೆ. ಆಕೆ ಇಷ್ಟ ಪಡುವ ತಿಂಡಿ ತಿನ್ನಿಸು ಮಾಡಿ ಹಾಕುವ ಉದ್ದೇಶ ಆಕೆಯ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗುವಿನ ಆರೋತ್ತರಗಳಿಗೆ ಆ ಊಟ ನಾಂದಿಯಾಗಲಿ ಎಂಬುದಾಗಿದೆ.

ಬಸುರಿಯನ್ನು ತವರಿಗೆ ಕರೆತರುವಾಗ, ಪುರೋಹಿತರನ್ನು ಕೇಳುವುದು ಅರ್ಥವಿಲ್ಲದವು ಎಂದು ಕಂಡರೂ. ಬಸುರಿ ವಿಶ್ರಾಂತಿ ಪಡೆಯುವುದಕ್ಕಿಂತ ಶ್ರಮದಾಯಕ ಕೆಲಸಗಳಲ್ಲಿ ತೊಡಗಬೇಕು ಎನ್ನುವಲ್ಲಿ ಸತ್ಯವಿದೆ. ಆಕೆಯ ಹೆರಿಗೆಯು ಸುಗಮವಾಗಿ ಆಗುತ್ತದೆ ಎಂದು ವೈದ್ಯಕೀಯ ದೃಷ್ಟಿಯಿಂದ ಸಮರ್ಥನೀಯವಾದುದು.

ವೃದ್ಧೆಯೊಬ್ಬಳು ಹೆರಿಗೆ ಮಾಡಿಸುವ ರೀತಿ ತೀರಾ ಬಡವಾಗಿ ಕಂಡರೂ, ಅವಳು ಅನುಸರಿಸುವ ಕೆಲವು ಮಾರ್ಗ, ವಿಧಾನಗಳು ಸರಳವಾದವು. ಆದರೆ ಹೊಕ್ಕಳ ಬಳ್ಳಿಯನ್ನು ಕತ್ತರಿಸುವಾಗ ಕತ್ತಿ ಬಳಸುವುದು ಅಪಾಯಕರವಾಗಿದೆ. ಹೆರಿಗೆ ಮಾಡಿಸುವ ಮೊದಲು ಬಸುರಿಯ ಮೈಮೇಲಿನ ಒಡವೆ ಆಭರಣ ವಸ್ತ್ರಗಳನ್ನು ತೆಗೆದಿಟ್ಟಿರುವುದರಿಂದ ಹೆರಿಗೆ ಆಗುವಾಗ ಯಾವ ಅಡಚಣೆಗಳೂ ಉಂಟಾಗುವುದಿಲ್ಲ. ಆದರೆ, ಹೆರಿಗೆಯ ನಂತರ ಹೊಟ್ಟೆಗೆ ಬಟ್ಟೆ ಸುತ್ತುವ ಕ್ರಮ ಒಳ್ಳೆಯದಲ್ಲ ಇದರಿಂದ ಉಸಿರಾಟಕ್ಕೆ ತೊಂದರೆಯಾಗುತ್ತದೆ. ಸೂತಕ ಆಚರಿಸುವುದು ಕೇವಲ ತೋರಿಕೆಯಲ್ಲ. ಅದರಲ್ಲಿ ಒಳ್ಳೆಯ ಉದ್ದೇಶ ಅಡಗಿದೆ. ಸೂತಕದ ಹೆಸರಿನಲ್ಲಿ ಮನೆ ಸುತ್ತ-ಮುತ್ತ ಶುಚಿಗೊಳ್ಳುವುದು ಒಂದು ಉಪಯೋಗ. ಇದರ ಜೊತೆಗೆ ಮನೆಯರೆಲ್ಲರೂ ತಮ್ಮ ಬಟ್ಟೆ ಬರೆಗಳನ್ನು ತೊಳೆದು ಶುಚಿಗೊಳಿಸಿಕೊಳ್ಳುವುದು ಇನ್ನೊಂದು ಒಳ್ಳೆಯ ಉದ್ದೇಶವಾಗಿದೆ. ಹೀಗೆ, ಮನೆ ಮಂದಿಯಲ್ಲಿ ಶುಚಿಯಾಗಿರುವುದರಿಂದ ಬಾಣಂತಿ ಮತ್ತು ಮಗುವಿಗೆ ರೋಗಗಳುಂಟಾಗುವುದಿಲ್ಲ. ಅಗಸನು ಬಂದು ಬಟ್ಟೆ ಬರೆಯನ್ನು ತೊಳೆದು ಇನ್ನೂ ಹೆಚ್ಚಿನ ಸ್ವಚ್ಛತೆಗೆ ಶುಚಿಗೆ ಕಾರಣನಾಗುತ್ತಾನೆ.

ಕತ್ತಲ ಕೋಣೆಯಲ್ಲಿ ಗಾಳಿ ಬೆಳಕು ಇಲ್ಲದೆ ಬಾಣಂತಿ ಮತ್ತು ಮಗುವಿಕೆ ಆರೋಗ್ಯ ಹಾನಿಯಾಗಬಹುದು. ಬಾಣಂತಿ ಮತ್ತು ಮಗುವಿರುವ ಸ್ಥಳಕ್ಕೆ ಹೋಗುವವರು ಕಾಲು ತೊಳೆದು ಹೋಗಲೇಬೇಕು ಎನ್ನುವುದರಲ್ಲಿ ಒಳ್ಳೆಯ ಉದ್ದೇಶವಿದೆ. ಹೊರಗಡೆಯಿಂದ ಬಂದ ವ್ಯಕ್ತಿ ಕಾಲಿನಲ್ಲಿ ಧೂಳು ಬಾಣಂತಿ ಮತ್ತು ಮಗುವಿನ ಆರೋಗ್ಯಕ್ಕೆ ಹಾನಿ ಉಂಟು ಮಾಡಬಹುದೆಂದು ಈ ಕ್ರಮವನ್ನು ಪಾಲಿಸುತ್ತಾರೆ. ಮಗುವಿನ ನಾಮಕರಣ ಮತ್ತು ನೋಡಲು ಬಂದವರೆಲ್ಲ ಮಗುವಿನ ಕೈಲಿ ಹಣ ಕೊಡುವುದು ಬಹಳ ಪ್ರಯೋಜನವಿದೆ. ಇದು ಬಡ್ಡಿ ಇಲ್ಲದ ಸಾಲ. ಈ ಹಣದಿಂದ ಬಾಣಂತಿ ಸದ್ಯದ ಆವಶ್ಯಕ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೆ

ಅನುಕೂಲವಾಗುತ್ತದೆ. ಆದರೆ, ಕತ್ತಲ ಸ್ಥಳವಾದ ಆ ಕೋಣೆಯಲ್ಲಿ ಊಟಮಾಡುವುದು ತೀರಾ ಅವೈಜ್ಞಾನಿಕವಾಗಿದೆ. ಹಾಗೆ ಕತ್ತಲಲ್ಲಿ ಕುಳಿತು ಊಟಮಾಡುವಾಗ ಯಾವುದಾದರು ಹುಳಗಳು ಅವಳ ಆಹಾರದಲ್ಲಿ ಸೇರಿಕೊಳ್ಳಬಹುದು. ಮಗುವಿನ ಕಫಯನ್ನು ತೆಗೆಯುವ ಕ್ರಮವಂತೂ ತೀರಾ ಅಮಾನವೀಯವಾಗಿ ಕಂಡುಬರುತ್ತದೆ. ಆಗ ತಾನೇ ತವರಿನಿಂದ ಬಂದ ಬಾಣಂತಿ ಮತ್ತು ಮಗುವನ್ನು ಗಂಡನ ಮನೆಯಲ್ಲಿ ಸ್ವಾಗತಿಸುವ ರೀತಿ, ಆ ಸ್ವಾಗತಕ್ಕೆ ಅನುಸರಿಸುವ ವಿಧಾನಗಳು ತಳಬುಡವಿಲ್ಲವಾದರೂ ತವರಿನಿಂದ ಬಂದ ಅವಳ ಮನಸ್ಸು ಸಂತೋಷಗೊಳಿಸಲು ಇದು ಅನುಕೂಲವಾಗುತ್ತವೆ.

ಉಪ್ಪಾರರ ಜನನ ಸಂರ್ಭದಲ್ಲಿ ಕೆಲವು ನಂಬಿಕೆಗಳಿವೆ. ಅವುಗಳು ಈ ಕೆಳಗಿನಂತಿವೆ.

೧. ಅವಳಿ ಮಕ್ಕಳಾದರೆ ತಂದೆ ತಾಯಿಗಳಿಗೆ ಶುಕ್ರದೆಸೆ

೨. ತೊಟ್ಟಿಲನ್ನು ಕಾಲಿನಿಂದ ಒದೆಯಾಬಾರದು.

೩. ಮಗು ಸಕ್ಕರೆ ನಿದ್ದೆಯಲ್ಲಿ ಅತ್ತರೆ ಅದು ಶಿವನಾಟ

೪. ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಮಗುವನ್ನು ಹೊರಗೆ ಕರೆತರಬಾರದು

೫. ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಮಗುವಿಗೆ ಸ್ನಾನಮಾಡಿಸಬಾರದು

೬. ಮಗು ಹೊಸ್ತಿಲು ದಾಟಿದ ದಿನ ಹೊಸ್ತಿಲುಪೂಜೆ ಮಾಡಬೇಕು

೭. ಮಗುವಿಗೆ ಕಿವಿ ಚುಚ್ಚಿದರೆ ಮಗುವಿನ ಬುದ್ಧಿ ಮಂದವಾಗುತ್ತದೆ.

೮. ತಾಯಿಯ ಗರ್ಭದಿಂದ ಹೊರಬರುವ ಮಗು ಮಗುಚಿ ಬೀಳಬಾರದು

೯. ತಾಯಿಯ ಗರ್ಭದಿಂದ ಹೊರಬರುವಾಗ ಕಾಲು ಮುಂದಾಗಿ ಬಂದರೆ ಶ್ರೇಷ್ಠ

೧೦. ಮೂಲಾ ನಕ್ಷತ್ರದಲ್ಲಿ ಜನಿಸಿದ ಮಗುವಿನಿಂದ ತಂದೆ ತಾಯಿಯರಿಗೆ ಕೆಟ್ಟದ್ದು.

ಮೇಲಿನ ನಂಬಿಕೆಗಳಲ್ಲಿ ಅನೇಕವು ಅವೈಜ್ಞಾನಿಕವಾಗಿ ಕಂಡರೂ ಕೆಲವು ವೈಜ್ಞಾನಿಕ ಸತ್ಯದಿಂದ ತುಂಬಿಕೊಂಡಿವೆ. ಉದಾಃ ೧, ೮, ಅವಳಿ ಮಕ್ಕಳಾದರೆ ತಂದೆ ತಾಯಿಗಳಿಗೆ ಶುಕ್ರದೆಸೆ ಎಂಬ ನಂಬಿಕೆ ಕುಟುಂಬದ ಸಂಖ್ಯೆ ಹೆಚ್ಚಿ ಅವರ ಕೆಲಸಕ್ಕೆ ಅನುಕೂಲವಾಗುತ್ತದೆಂಬುದೆ ಆಗಿದೆ. ಆದರೆ, ಈ ನಂಬಿಕೆಯೂ ತನ್ನ ಹಿಂದಿನ ಬೆಲೆಯನ್ನು ಕಳೆದುಕೊಂಡಿದೆ. ಬದಲಾಗಿ ಅವಳಿ ಮಕ್ಕಳಾದರೆ ಕುಟುಂಬದ ಸಂಖ್ಯೆ ಹೆಚ್ಚಿ ತಂದೆ ತಾಯಿಯರ ಆರ್ಥಿಕಸ್ಥಿತಿಯಲ್ಲಿ ಬದಲಾವಣೆಗಳಾಗಿ ನಷ್ಟವಾಗುತ್ತದೆ. ತಾಯಿಯ ಗರ್ಭದಿಂದ ಹೊರಬರುವ ಮಗು ಮಗುಚಿ ಬಂದರೆ ಮುಖ, ಕಿವಿ, ಕಣ್ಣುಗಳು ಊನವಾಗಬಹುದು. ಇದು ಹೆರಿಗೆ ಮಾಡಿಸುವವರು ಜಾಗರೂಕತೆಯಿಂದ ಹೆರಿಗೆ ಮಾಡಿಸಲಿ ಎಂಬುದನ್ನು ತಿಳಿಸುತ್ತದೆ. ಉಪ್ಪಾರರು ಈ

ಸಂದರ್ಭದಲ್ಲಿ ಕೆಲವು ನಿಷೇಧಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಅವುಗಳೆಂದರೆ:

೧. ಶವ ಸಂಸ್ಕಾರದ ಕ್ರಿಯೆಗಳಿಗೆ ಹೋಗಬಾರದು ೨. ಪ್ರಾಣಿ ಹತ್ಯೆ ಮಾಡಬಾರದು ೩. ಹೆರಿಗೆಯ ಸಮಯದಲ್ಲಿ ಹೆಂಡತಿಯ ಹತ್ತಿರದಲ್ಲಿಯೇ ಇರಬೇಕು ೪. ಸೂತಕ ಮುಗಿಯುವವರೆಗೆ ಮನೆಯ ಹೊರಗೆ ಹೋಗಬಾರದು ೫. ಸೂತಕ ಮುಗಿಯುವ ವರೆಗೂ ಬಾಣಂತಿ ಮನೆಯ ಒಳಗಿನ ಯಾವ ವಸ್ತುಗಳನ್ನೂ ಮುಟ್ಟಬಾರದು.

ಒಂದನೇ ನಿಷೇಧ ಈ ಕೆಳಗೆ ಹೇಳಲಾದ ಕಾರಣದಿಂದ ಹುಟ್ಟಿರಬಹುದು. ಸತ್ತ ವ್ಯಕ್ತಿಗೆ ಯಾವುದಾದರೂ ಸೊಂಕು ಇದ್ದರೆ, ಅವನನ್ನು ಹೊತ್ತ ವ್ಯಕ್ತಿಗೆ ತಗಲಿ, ಅದರಿಂದ ಅವನ ಹೆಂಡತಿ ಮತ್ತು ಮನೆ ಮಂದಿಗೆಲ್ಲ ಹರಡಬಹುದೆಂದು ಭಾವಿಸಿ ಅದನ್ನು ತಪ್ಪಿಸಲು ಇದು ಜಾರಿಗೆ ಬಂದಿರಬಹುದು. ತಾನು ಕೊಂದ ಪ್ರಾಣಿಯ ವಿಷಯ ತಿಳಿದು ತನ್ನ ಹೆಂಡತಿಯ ಮನಸ್ಸಿನ ಮೇಲೆ ವಿಪರೀತವಾಗಿ ಮುಂದೆ ಹುಟ್ಟಲಿರುವ ಮಗುವಿನ ಮೇಲೆ ಕೆಟ್ಟ ಪರಿಣಾಮವಾಗಬಹುದೆಂದು ಈ ನಿಷೇಧ ಜಾರಿಗೆ ಬಂದಿರಬೇಕು. ಹೆರಿಗೆಯ ಸಮಯದಲ್ಲಿ ಗಂಡನಾದವನು ಹತ್ತಿರದಲ್ಲಿದ್ದರೆ ಆ ಸಂದರ್ಭಕ್ಕೆ ಬೇಕಾದ ಜನರನ್ನು ಕರೆಯಲು ಸಹಾಯಕನಾಗಬಹುದು. ಹೆರಿಗೆಯಾದನಂತರ ತಾಯಿ ಮತ್ತು ಮಗುವಿನ ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಈ ಕೆಲಸವನ್ನು ಗಂಡನೇ ಚೆನ್ನಾಗಿ ನಿರ್ವಹಿಸ ಬಲ್ಲವನಾಗಿರುತ್ತಾನೆ. ಇಂಥ ಸಂದರ್ಭದಲ್ಲಿ ಆತ ಮನೆಯವರು ಆಚೆಗೆ ಹೋದರೆ ತೊಂದರೆಯಾಗುತ್ತದೆ. ಹಾಗೇ ಹೋಗದಂತೆ ತಡೆಗಟ್ಟಲು ಈ ನಿಷೇಧ ಜಾರಿಗೆ ಬಂದಿದೆ. ಆದರೆ ಕ್ಷೌರ ಮಾಡಿಸಿಕೊಳ್ಳಬಾರದು, ಮುಖಕ್ಷೌರ ಮಾಡಿಸಿಕೊಳ್ಳಬಾರದು. ಸ್ನಾನ ಮಾಡಬಾರದು ಇವೆಲ್ಲವು ಅರ್ಥಹೀನವಾಗಿ ಕಂಡುಬರುತ್ತದೆ. ಸೂತಕದ ನಿರ್ದಿಷ್ಟ ಅವಧಿ ಮುಗಿಯದ ಮುನ್ನ ಏನನ್ನು ಮುಟ್ಟಬಾರದು ಎನ್ನುವ ನಿಷೇಧ ಅರ್ಥಪೂರ್ಣವಾಗಿದೆ. ಈ ವೇಳೆಯಲ್ಲಿ ಬಾಣಂತಿಯ ಜನನಾಂಗದಿಂದ ದ್ರವ ಒಸರುವುದರಿಂದ ಅವಳು ಅಶುದ್ಧಳೆನಿಸಿಕೊಳ್ಳುತ್ತಾಳೆ. ಹಾಗೆ ಅಶುದ್ಧ ಮಹಿಳೆ ದಿನ ಬಳಕೆಯ ವಸ್ತುಗಳನ್ನೂ ಮುಟ್ಟಿದರೆ, ಅವಳಲ್ಲಿರುವ ಕನರು, ಕೆಟ್ಟವಾಸನೆ ವಸ್ತುಗಳಿಗೆ ತಗಲಿ ಇತರರಿಗೆ ಹೇಸಿಗೆಯಾಗಿ ಕಾಣಬಹುದು. ಈ ಹಿನ್ನಲೆಯಲ್ಲೆ ನೋಡಿದರೆ ಮನೆಯಲ್ಲಿ ಶುದ್ಧತೆಯನ್ನು ಕಾಪಾಡುವ ಸಲುವಾಗಿ ಈ ನಿಷೇಧ ಹುಟ್ಟಿಕೊಂಡಿದೆ ಯೆಂದು ತಿಳಿಯಲು ಸಾಧ್ಯವಿದೆ.

### ೪:೧:೨. ಪ್ರೌಢ ಸಂಸ್ಕಾರ

ಬಾಲ್ಯಾದಿಂದ ಪ್ರೌಢಾವಸ್ಥೆಯನ್ನು ದಾಟುವ ವ್ಯಕ್ತಿಯ ಶಾರೀರಿಕ ಮತ್ತು ಮಾನಸಿಕ ಪರಿವರ್ತನೆಗಳನ್ನು ಗುರುತಿಸಿ, ಒಂದು ಮಹತ್ವದ ಸ್ಥಾನದಲ್ಲಿರಿಸಿ ಗೌರವಿಸುವುದು ಸಮಾಜದ ಜವಾಬ್ದಾರಿಯಾಗಿದೆ. ಪ್ರತಿಯೊಂದು ಜನಾಂಗವೂ ಗಂಡು ಹೆಣ್ಣುಗಳೂ ಲಿಂಗಪ್ರೌಢಿಮೆ ಹೊಂದುವಾಗ ಉಂಟಾಗಬಹುದಾದ ಬದಲಾವಣೆಗಳನ್ನು ಗುರುತಿಸಿ ಸಾಂಪ್ರದಾಯಿಕ ರೀತಿಯಲ್ಲಿ ಆಚರಿಸಿ ಎಲ್ಲರಿಗೂ ಪರಿಚಯಿಸುತ್ತಾರೆ. ಉಪ್ಪಾರ ಜನಾಂಗವು ಇದನ್ನು ತನ್ನದೇ ಆದ ಸಾಂಪ್ರಾದಾಯಿಕ ರೀತಿಯಲ್ಲಿ ಆಚರಿಸುತ್ತದೆ.

ಗಂಡು ಹೆಣ್ಣುಗಳಿಗೆ ಒಂದೇ ವಯಸ್ಸಿನಲ್ಲಿ ಲಿಂಗ ಪ್ರೌಢಿಮೆ ಉಂಟಾಗುವುದಿಲ್ಲ. ಸಾಮಾನ್ಯವಾಗಿ ಗಂಡಿಗೆ ಹದಿನಾಲ್ಕುರಿಂದ ಹದಿನಾರರವರೆಗೂ, ಹೆಣ್ಣಿಗೆ ಹನ್ನೆರಡರಿಂದ ಹದಿನಾಲ್ಕರೊಳಗೆ ಘಟಿಸುತ್ತದೆ. ದೈಹಿಕ ಮತ್ತು ಮಾನಸಿಕ ಬದಲಾವಣೆಯಿಂದ ಸಹಜವಾಗಿ ಅವರಲ್ಲಿ ಕೆಲವು ಬದಲಾವಣೆಗಳುಂಟಾಗುತ್ತವೆ. ಹುಡುಗನಾದರೆ ಕಂಠನಾಳ ದೊಡ್ಡವಾಗಿ ಧ್ವನಿ ಗಡಸಾಗುವುದು, ಗಲ್ಲ ಮತ್ತು ಕೆನ್ನೆಗಳಲ್ಲಿ ರೋಮಗಳು ಕಾಣಿಸಿಕೊಳ್ಳವುದು. ಹೆಣ್ಣಿನಲ್ಲಿ ದೈಹಿಕ ಬದಲಾವಣೆ ಕಂಡು, ರಜಸ್ವಲೆಯಾಗುವುದು ಇದನ್ನೇ ಋತುವಾಗುವಿಕೆ, ದೊಡ್ಡವಳಾಗುವುದು, ಮೈನೆರೆಯುವುದು, ಎಂದು ಕರೆದು ಆ ದಿನದಿಂದ ಸೂತಕ ಕಳೆಯುವ ವರೆಗೆ ವಿಶೇಷ ವಿಧಿಗಳನ್ನು ಆಚರಿಸುವುದರ ಮೂಲಕ ಆಕೆಯನ್ನು ಸಾಂಸಾರಿಕ ಜೀವನಕ್ಕೆ ಪ್ರವೇಶ ಹೊಂದಲು ಅರ್ಹಳನ್ನಾಗಿ ಮಾಡುತ್ತಾರೆ.

ಉಪ್ಪಾರರ ಹೆಣ್ಣು ಮಗುವೊಂದು ಹದಿನಾಲ್ಕು ವರ್ಷದ ಒಳಗೆ ದೊಡ್ಡವಳಾಗದಿದ್ದರೆ, ಇದು ಯಾವುದೋ ದೆವ್ವದ ಕಾಟದಿಂದ ಹೀಗೆ ಆಗಿಯೆಂದೂ, ಅದಕ್ಕೆ ಪರಿಹಾರಾರ್ಥವಾಗಿ ಬೇಗ ಋತುಮತಿಯಾಗುವಂತೆ ಮಾಡಲು ಹರಕೆಯನ್ನು ಹೊರುತ್ತಾರೆ.

ಇತರ ಜಾತಿಯ ಹೆಣ್ಣುಮಕ್ಕಳಂತೆ ಉಪ್ಪಾರರ ಹೆಣ್ಣು ಮಗಳು, ತನ್ನ ದೇಹದಲ್ಲಾದ ಬದಲಾವಣೆಯನ್ನು ಕಂಡು, ಬೆರಗಾಗಿ ಏನೂ ತೋಚದಂತೆ ದಿಗ್ಭ್ರಾಂತಳಾಗುತ್ತಾಳೆ. ಇದನ್ನು ಹತ್ತಿರದಲ್ಲಿರುವ ದೊಡ್ಡವರು ಗಮನಿಸಿ ಅವಳನ್ನು ಕರೆದುಕೊಂಡು ಬಂದು ಮೊದಲು ಫಲಕೊಡುವ ಮರಗಳಿಗೆ ಮುಟ್ಟಿಸುತ್ತಾರೆ. ಅನಂತರ ಮೂರು ದಿನಗಳ ಕಾಲ ಮನೆಯಲ್ಲಿ ಮೂರು ದಿನಗಳ ಕಾಲ ಪ್ರತ್ಯೇಕವಾಗಿ ಕೂರಿಸಿ ನಾಲ್ಕನೆಯ ದಿನದ ಸ್ನಾನದ ನಂತರ ಹಸಿರು ಗರಿ ಹೊದಿಸಿದ ಮನೆಯೊಂದರಲ್ಲಿ ಐದು ದಿನಗಳ ಕಾಲ ಇಡುತ್ತಾರೆ. "When she is

exhibited every evening in the Company of married women who are invited. At the end of this period, she is again bathed and taken in to the house". (Anantha Krishana Iyer L.K. 1935 : 646) ಈ ರೀತಿಯ ಆಚರಣೆಯ ದೊಡ್ಡಾರತಿವರೆಗೂ ನಡೆಯುತ್ತದೆ. ಈ ಕೆಲಸವನ್ನು ಅನುಭವಿ ಮಹಿಳೆ ನಿರ್ವಹಿಸುತ್ತಾಳೆ. ಸೋದರ ಮಾವ ಮೂರು ಹೊತ್ತಿಗಾಗುವ ಐದು ದಿನದ ವರೆಗೆ ಊಟಕ್ಕೆ ಆಗುವ ಆಹಾರ ಪದಾರ್ಥದ ಜೊತೆಗೆ ಬಂದಿರುತ್ತಾನೆ. ಐದು ಜನ ಮುತ್ತೈದೆ ಹುಡುಗಿಯನ್ನು ಸ್ನಾನದ ಮನೆಗೆ ಕರೆದೊಯ್ದು ಹಾಲು-ತುಪ್ಪ ಹಾಕಿ ನೀರು ಹಾಕಿ, ನಂತರ ಮುತ್ತೈದೆಯರು ಅರಿಶಿಣ ಹಚ್ಚಿ ನೀರು ಹಾಕಿ ಸ್ನಾನ ಮಾಡಿಸುತ್ತಾರೆ. ಸೋದರ ಮಾವನು ತಂದ ಆಹಾರ ಪದಾರ್ಥಗಳಿಂದ ಅಡಿಗೆ ಮಾಡಿ, ಮೊದಲನೆಯ ದಿನವೇ ಹುಣಸೇ ಎಲೆಯಲ್ಲಿ ಊಟಕ್ಕೆ ಬಡಿಸುತ್ತಾರೆ. ಎರಡನೇ ದಿನ ಬೇವಿನ ಎಲೆಯಲ್ಲಿ, ಮೂರನೇ ದಿನ ಆಲದ ಎಲೆಯಲ್ಲಿ, ನಾಲ್ಕನೇ ದಿನ ಅರಳೀ ಎಲೆಯಲ್ಲಿ ಮತ್ತು ಐದನೇ ದಿನ ಹಲಸಿನ ಎಲೆಯಲ್ಲಿ ಊಟಕ್ಕೆ ಬಡಿಸುತ್ತಾರೆ. ಐದೂ ದಿನವೂ ಸಿಹಿಯಾದ ಮತ್ತು ಸಪ್ಪೆಯಾದ ಊಟ ಕೊಡುತ್ತಾರೆ.

ಐದು ಅಥವಾ ಒಂಬತ್ತನೇ ದಿನ ಹುಡುಗಿಯ ಬಟ್ಟೆಯನ್ನು ಅಗಸನೇ ಮಡಿ ಬಟ್ಟೆ ಒದಗಿಸುತ್ತಾನೆ. (ಸೂತಕ ಕಳೆಯುವವರೆಗೂ) ಪ್ರತಿದಿನ ಸ್ನಾನದ ಅನಂತರ ಅವಳನ್ನು ಅಲಂಕರಿಸಿ, ಮುತ್ತೈದೆಯರೂ ಆರತಿಮಾಡುತ್ತಾರೆ. ತಿಂಗಳ ಒಳಗೆ ಇಲ್ಲವೇ ೨೧ನೇ ದಿನಕ್ಕೆ ದೊಡ್ಡ ಆರತಿ ಮಾಡುತ್ತಾರೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಕೆಲಭಾಗಗಳಲ್ಲಿ ಒಂದು ತಿಂಗಳವರೆಗೆ ಇದರ ಮಲಿನತೆ ಹೋಗುವುದಿಲ್ಲವೆಂದು, ಮತ್ತೆ ಅವಳನ್ನು ಐದು ಅಥವಾ ಏಳು ದಿನ ಹೊರಗೆ ಕೂರಿಸಿ, ವಿವಾಹಿತ ಮಹಿಳೆಯರು ಸ್ನಾನಮಾಡಿಸಿ ಮಡಿಮಾಡುತ್ತಾರೆ. ಅನಂತರ ಅವಳನ್ನು ಗಂಗಾ ಪೂಜೆಗಾಗಿ ನದಿಗೆ ಕರೆದೊಯ್ದು ಒಂದು ಕೊಡ ನೀರನ್ನು ಅವಳಿಂದ ಹೊರಸಿಕೊಂಡು ಬರುತ್ತಾರೆ. ಮೈನೆರೆದವಳು ವಿವಾಹಿತಳಾಗಿದ್ದರೆ ಆ ನೀರಿನಿಂದ ಗಂಡನ ಪಾದವನ್ನು ತೊಳೆಯುತ್ತಾಳೆ. ಅವಿವಾಹಿತಳಾಗಿದ್ದರೆ ಆ ನೀರನ್ನು ಯಾವುದಾದರು ಹೂವಿನ ಗಿಡದ ಮೇಲೆ ಚೆಲ್ಲಿಸುತ್ತಾರೆ. "…. she bathes and dresses herself in washed clothes, and is taken in the evening to a river, or a tank, in the company of married women. She door puja to Ganga, and brings home a potful of water. If she is already married. She washes the feet of her husband with the water but it unmarried. She throws the water on some flower plant, such as asmine' (Anantha Krishana Iyer L.K. 1935:646) ಫಲವತಿಯಾದವಳು ತಂದ ನೀರು ಫಲವಂತಿಕೆಯ ಸಂಕೇತವಾದ ಹೂವಿನ ಮೇಲೆ ಚಿಮುಕಿಸಿದರೆ; ಆ ಹೂ ಅರಳಿದಂತೆ ತನ್ನ ಫಲಗಳು ಅರಳಲಿ ಎನ್ನುವ ಉದ್ದೇಶ ಇದರಲ್ಲಿ ಅಡಗಿದೆ.

**ದೊಡ್ಡಾರತಿ:** ಆದಿನ ಮನೆಯನ್ನು ಗುಡಿಸಿ ಸಾರಿಸಿರುತ್ತಾರೆ. ಮುಂದಿನ ಅಂಗಳನ್ನು ಶುಚಿಗೊಳಿಸಿ ರಂಗೋಲಿಯಿಂದ ಅಲಂಕರಿಸುತ್ತಾರೆ. ಮನೆಯವರೆಲ್ಲರೂ ಬಟ್ಟೆಬರಿಗಳನ್ನು ಶುಚಿಗೊಳಿಸಿ, ಸ್ನಾನ ಮಾಡುತ್ತಾರೆ. ಋತುಮತಿಯಾದ ಹುಡುಗಿಗೆ ಹಾಲು-ತುಪ್ಪದಿಂದ ಎರೆದು ನೀರು ಹಾಕುತ್ತಾರೆ. ನಂತರ ಮುತ್ತೈದೆಯರು ಮೈಗೆ ಅರಿಶಿಣ ಹಚ್ಚಿ ಸ್ನಾನ ಮಾಡಿಸುತ್ತಾರೆ. ಅಲ್ಲಿ ನೆರೆದ ಸ್ತ್ರೀಯರು ಈ ಕೆಳಗಿನ

ಮುಕ್ಕಣ್ಣೇಶ್ವರ ಶಿವಪೂಜೆS
ಮುಕ್ಕಣ್ಣೇಶ್ವರS ಶಿವ ಪೂಜೆಗೆ ಹೋಗುವಾಗSS
ನಿಸ್ತ್ರೀಯರು ಗಣಿಯ ಎರೆದಾರು
ಪುತ್ರುಗ ಹೊಯ್ಯದ ನೀರು ಹಟ್ಯಾಗ ಹರಿದಾವS
ಹಟ್ಯಾಗ ಆವರ ಹಿರಿಯಣ್ಣSS
ಬಾಳೆಗೂ ತಿರುವ್ಯಾನೆ ಹರಿನೀರಾS
ಬಾಳೆ ವಾಲಾಡಿ ಬೆಳೆದಾSವೆSS

ಸೋದರ ಮಾವನು ತಂದ ಹೊಸಬಟ್ಟೆಯನ್ನು ತೊಡಿಸುತ್ತಾರೆ. 'ಗುರುಮುಟ್ಟಿದ್ದ ಗುಡ್ಡ ' ಎನ್ನುವ ಗಾದೆಯಂತೆ, ಐನೋರು ಬಂದು ಗೋಮಾ ಹಾಕಿ ಸೂತಕ ಕಳೆಯುತ್ತಾರೆ. ಕೆಲವಡೆ ಈ ಕೆಲಸವನ್ನು ಪುರೋಹಿತರು ಮಾಡುತ್ತಾರೆ. ಆನಂತರ ಜಂಗಮರ ಪಾದ ತೊಳೆದು ಆ ನೀರನ್ನು ಮನೆಗೆಲ್ಲಾ ಚಿಮುಕಿಸಿ, ಮತ್ತೆ ಮನೆಯವರೆಲ್ಲಾ ಕುಡಿಯುತ್ತಾರೆ. ಬಂದ ಜಂಗಮನಿಗೆ ಹಣ್ಣು ಎಲೆ, ಅಡಿಕೆ, ಕಾಯಿ, ದಕ್ಷಿಣೆ ಕೊಟ್ಟು ಗೌರವಿಸಿ ಕಳಿಸಿಕೊಡುತ್ತಾರೆ. ಇದಾದ ನಂತರ ಹುಡುಗಿಗೆ 'ಉಡಿ ತುಂಬಿ' (ಅಕ್ಕಿ ಕೊಬ್ಬರಿ, ಅಡಿಕೆ, ಎಲೆ, ಕಾಯಿ, ಹಣ್ಣು ಉತ್ತತ್ತಿ, ಅರಿಶಿಣ ಕುಂಕುಮ)ಆರತಿ ಮಾಡುತ್ತಾರೆ.

ಈ ಸಂದರ್ಭಕ್ಕೆ ಸೋದರಮಾವ ಬಂದು-ಬಾಂಧವರು, ಊರಿನವರೆಲ್ಲಾ ನೆರೆದಿರುತ್ತಾರೆ. ಈ ವಿಶೇಷ ದಿನದಂದು ಎಲ್ಲರಿಗೂ ಸಿಹಿ-ಭೋಜನ ಇರುತ್ತದೆ. ಆನಂತರದಲ್ಲಿ ದಿನಗಳಲ್ಲಿ ಅಕ್ಕ ಪಕ್ಕದ ಮನೆಯವರು ಆ ಹೆಣ್ಣುಮಗಳನ್ನು ತಮ್ಮ ನೆಗೆ ಕರೆದುಕೊಂಡು ಹೌಗಿ ಎಣ್ಣೆ ಹಚ್ಚಿ ಸ್ನಾನ ಮಾಡಿಸಿ, ಅವಳಿಗೆ ಸಿಹಿ ಅಡಿಗೆ ಮಾಡಿ ನೀಡುತ್ತಾರೆ. "ಬೆಳೆಯುವ ಮಕ್ಕಳಿಗೆ ಬೆಲ್ಲ ಬೇಕು" ಎನ್ನುವ ಗಾದೆಯಂತೆ ಅವಳನ್ನು ಅಕ್ಕಪಕ್ಕದ ಮನೆಯವರು ಗೌರವಿಸಿ, ಶಾವಿಗೆ, ರವೆ ಉಂಡೆ, ಪಾಯಸ, ಇತ್ಯಾದಿ ಸಿಹಿ ಅಡಿಗೆ ಮಾಡಿ ಬಡಿಸುತ್ತಾರೆ.

ಚಿಕ್ಕ ವಯಸ್ಸಿನಲ್ಲಿ ಮದುವೆಯಾದ ಹೆಣ್ಣು ಅವಳು ಋತುವಾದ ಮೂರು ತಿಂಗಳ ಪೂರ್ಣ ಆದ ಮೇಲೆ ಗಂಡ ಹೆಂಡಿರನ್ನು ಒಂದು ಮಾಡುತ್ತಾರೆ. "In the case of a girl married after puberth consummation is put off for three months after the marriage" (Anantha Krishna Iyer 1935:646) ಮದುವೆಯಾಗಿ ಒಂದು ವರ್ಷದ ಒಳಗೆ ಸಂತಾನವಾಗಬಾರದೆಂದು ನಂಬಿಕೆ ಇವರಲ್ಲಿದೆ. ಏಕೆಂದರೆ "It is possible that this practice of putting off the actual consummation for three months, which is fairly common, originated as a means of making certain that the married woman introduced no foreign oftspring into the family" (ಅದೇ 1935 : 647).

ಋತುಮತಿಯಾದ ತಕ್ಷಣ ಮಗಳ ಮುಖವನ್ನು ತಾಯಿ ನೋಡಬಾರದೆಂಬ ನಂಬಿಕೆ ಇವರಲ್ಲಿ ಉಂಟು. ಕೆಲವುಕಡೆ ತಾಯಿ ತನ್ನ ಮಗಳ ಮುಖವನ್ನು ಮೂರು ಅಥವಾ ಐದು ದಿನಗಳವರೆಗೆ ನೋಡುವುದಿಲ್ಲ. ಮನೆಯಲ್ಲಿ ಸೂತಕ ಮುಗಿಯುವ ವರೆಗೆ ದೇವರಿಗೆ ದೀಪ ಹಚ್ಚಬಾರದೆಂಬ ನಿಷೇಧವಿದೆ. ಸೂತಕವಿರುವ ಮನೆಯ ಸದಸ್ಯರು ಬೇರೆಯವರ ಮನೆಗೆ ಸೂತಕ ಮುಗಿಯುವ ವರೆಗೆ ಹೋಗುವಂತಿಲ್ಲ. ಎರಡೂ ಸೂತಕಗಳು ಒಟ್ಟಿಗೆ ಸೇರಬಾರದೆಂಬ ಬಲವಾದ ನಂಬಿಕೆ ಇದೆ.

### ೪:೧:೩ ಮದುವೆ ಸಂಪ್ರದಾಯಗಳು

ಮದುವೆಯು ಬದುಕಿನ ಬಹು ಮಹತ್ವದ ಘಟ್ಟ. ವ್ಯಕ್ತಿಯ ಬದುಕಿನಲ್ಲಿ ಒಮ್ಮೆ ಮಾತ್ರ ನಡೆಯುವ ಮಹತ್ವದ ಸಮಾರಂಭ. ಬದುಕಿಗೆ ಒಂದು ಭದ್ರತೆಯನ್ನು ಜವಾಬ್ದಾರಿಯನ್ನು ತಂದು, ಜೀವನೋಪಾಯವನ್ನು ಇದು ತುಂಬುತ್ತದೆ. ಮದುವೆಯು ಗಂಡು ಹೆಣ್ಣುಗಳನ್ನು ಬೆಸೆಯುವುದಲ್ಲದೆ; ಎರಡು ಮನೆಗಳ, ಎರಡು ಊರುಗಳ ಸಂಬಂಧವನ್ನು ಏರ್ಪಡಿಸುತ್ತದೆ. ಮದುವೆಯ ಬಗೆಗೆ ಈಗಾಗಲೇ ಅನೇಕ ತಜ್ಞರು ವಿವರಣೆಗಳನ್ನು ಕೊಟ್ಟಿದ್ದಾರೆ. "ಎಲ್ಲ ಮಾನವ ಸಮಾಜಗಳಲ್ಲೂ ಮದುವೆಯ ಉದ್ದೇಶ ಒಂದೇ ಆಗಿದ್ದರೂ ಅದನ್ನು ನಡೆಸುವ ರೀತಿ ಮಾತ್ರ ಒಂದೇ ತೆರನಾಗಿಲ್ಲ. ಸಮಾಜ ನೆಲೆಗೊಂಡ ಪರಿಸರ, ಬದುಕಿನ ಸ್ಥಿತಿಗತಿ, ಧರ್ಮ, ನಂಬಿಕೆ ಇವೇ ಮುಂತಾದ ಅಂಶಗಳಿಗನುಣವಾಗಿ ಮದುವೆ ಪದ್ಧತಿ ರೂಪು ಪಡೆದಿದೆ. ಕಾಲದ ಮಹಿಮೆಯಿಂದಾಗಿ ಬದುಕಿನ ಇನ್ನಿತರ ಮಹತ್ವದ ಘಟ್ಟಗಳ ಅನುಸರಣೆಯಲ್ಲಿ ಅನೇಕ ಬದಲಾವಣೆಗಳುಂಟಾದಂತೆ ಮದುವೆ ಪದ್ಧತಿಯ ಹಲವು ಬದಲಾವಣೆಗಳು ಸಾಧಿತವಾಗಿವೆ. ನಿರ್ದಿಷ್ಟ ಸಮಾಜವೊಂದರಲ್ಲಿ ಜರುಗುವ ಮದುವೆ ಆಚರಣೆಯ ಅಧ್ಯಯನವೆಂದರೆ: ಆ ಸಮಾಜದ ಸಂಸ್ಕೃತಿಯ ಅಧ್ಯಯನವೇ ಸರಿ.ಕಾರಣ ಮದುವೆ ಕೂಡ ಆ ಸಮಾಜದ ಒಂದು ಸಾಂಸ್ಕೃತಿಕ ಕ್ರಿಯೆ. ಇಡೀ ಸಮಾಜ

ಅಥವಾ ಆ ಸಮಾಜದ ಬಹುಪಾಲು ಸಮೂಹ ಆ ಕ್ರಿಯೆಯಲ್ಲಿ ಭಾಗಿಯಾಗುವುದನ್ನು ಕಾಣಬಹುದು" (ಚೆನ್ನಬಸಪ್ಪ ಗೊ.ರು. 1978 :369).

ಬಹಳಷ್ಟು ಜನಾಂಗಗಳಲ್ಲಿರುವಂತೆ ದಕ್ಷಿಣ ಕರ್ನಾಟಕದ ಉಪ್ಪಾರರಲ್ಲಿ ಮದುವೆ ಸಂಪ್ರದಾಯಕ್ಕೆ ವಿಶೇಷ ಮಹತ್ವವಿದೆ. ಇದೊಂದು 'ದೇವರ ಕಾರ್ಯ' ಎಂಬ ಕಲ್ಪನೆಯನ್ನು ಹೊಂದಿದ್ದಾರೆ. The marriage consists of the following ceremonies : Haladi or rubbing the boy and the girl with turmeric paste; Devakarya, in which a parts of males and females goes in processing to a Pipri (Ficas tsiela) free or a sheing (prosopis Spicigera) bush which is worshipped by five unwidows women; a bougle is halagamb (Enthouen Re. 1990-395). ಈ ಕಾರಣದಿಂದ ಇವರ ಮದುವೆಗಳಲ್ಲಿ ಅನೇಕ ವಿಧಿಶಾಸ್ತ್ರ ವಿಧಾನಗಳು ಹೇರಳವಾಗಿ ಆಚರಣೆಯಲ್ಲಿವೆ. ವಿವಾಹಿತ ವ್ಯಕ್ತಿಗೆ ಬಹಳ ಗೌರವ ಮರ್ಯಾದೆ ಇರುತ್ತದೆ. ಅವಿವಾಹಿತ ವ್ಯಕ್ತಿ ಸತ್ತರೆ ಆತನಿಗೆ ಮುಕ್ತಿ ಸಿಗದೇ ಪಿಶಾಚಿಯಾಗುತ್ತಾನೆಂದು ಬಲವಾಗಿ ನಂಬುತ್ತಾರೆ.* ಮದುವೆಯಾದ ಮೇಲೆ ಒಂದು ಗಂಡು ಅಥವಾ ಹೆಣ್ಣು ಸಂತಾನವನ್ನಾದರೂ ಪಡೆಯಲೇಬೇಕು. ಇಲ್ಲವಾದರೆ ಪಿತೃ ಋಣವನ್ನು ತೀರಿಸಲು ಆಗುವುದಿಲ್ಲವೆಂದು ನಂಬುತ್ತಾರೆ.

ಋತುಮತಿಯಾಗುವ ಮುನ್ನ ಮದುವೆಯಾಗುವುದು ನಿಷಿದ್ಧವಲ್ಲ * ಆದರೆ, ಇತ್ತೀಚೆಗೆ ಮೇಲ್ವರ್ಗದ ಜನರ ರೀತಿಯನ್ನು ಅನುಸರಿಸಿ ಈಗ ಋತುಪೂರ್ವ ಮದುವೆ ನಡೆಯುವುದಿಲ್ಲ. "Girls are generally married before they attain puberty".(Enthoven R.E. 1990 : 395). ಋತುಮತಿಯಾದ ನಂತರ ನಡೆಯುವ ಮದುವೆಯಲ್ಲಿ ಎಲ್ಲಾ ಆಚರಣೆಗಳು ಚಚುತಪ್ಪದೆ ನಡೆಯುತ್ತವೆ. ಮೈಸೂರು, ಮಂಡ್ಯ ಜಿಲ್ಲೆಗಳ ಕೆಲಭಾಗಗಳಲ್ಲಿ ಕೆಲ ಆಚರಣೆಗಳು ಕೈ ಬಿಟ್ಟು ಹೋಗಿವೆ. ಈಗ ಎಷ್ಟು ಸರಳವಾಗಿವೆ ಎಂದರೆ ಮಾಲೆ ಹಾಕುವುದರ ಮೂಲಕ ಮದುವೆ ಮುಗಿದೇ ಹೋಗುತ್ತದೆ. ಇಂತಹ ವಿವಾಹಗಳನ್ನು ಸಮಾಜ ಒಪ್ಪಿಕೊಂಡಿದೆ. ಮಹಿಳೆಯೊಬ್ಬಳು ಇಚ್ಚಿಸಿದ್ದಲ್ಲಿ ಕೊನೆಯ ವರೆಗೂ ಅವಿವಾಹಿತೆಯಾಗಿಯೇ ಉಳಿಯಬಹುದು.

ವೃತ್ತಿಪರವಾಗಿ ಉಪ್ಪಾರರು ವಿಭಜಿತರಾಗಿದ್ದು ಕಾಲ ಕ್ರಮೇಣ ಹೊಸವರ್ಗವಾಗಿ ಗುರುತಿಸಿಕೊಂಡರು ಪೂರ್ವದಲ್ಲಿ ಉಪ್ಪನ್ನು ತಯಾರಿಸುತ್ತಿದ್ದರೂ , ಬದಲಾದ ದಿನಗಳಲ್ಲಿ ಜೀವನಕ್ಕಾಗಿ ಗಾರೆ ಇತರೆ ಕೆಲಸವನ್ನು ಮಾಡುತ್ತಿದ್ದು; ಗಾರೆ ಉಪ್ಪಾರರಾದು ಇಂತಹ ಉಪ್ಪಾರರೊಂದಿಗೆ ಮದುವೆ ಸಂಬಂಧವನ್ನು ಇತರ ಉಪ್ಪಾರರು ಬೆಳೆಸುವುದಿಲ್ಲ. ಈ ರೀತಿಯ ಜನರನ್ನು 'ಕೊರಚ' ಉಪ್ಪಾರ ಎಂದು ಕರೆಯುತ್ತಾರೆ.

ಬಹುಪಾಲು ಜನಾಂಗಗಳಲ್ಲಿ ಕಂಡು ಬರುವ ಹಿಂದಿನ ಭಿನ್ನ ಭಿನ್ನ ಮದುವೆ ಪದ್ಧತಿಗಳು ಇವರಲ್ಲೂ ಕಂಡು ಬರುತ್ತವೆ. ಈಗಲೂ ಅಪರೂಪಕ್ಕೆಂಬಂತೆ ಆಚರಣೆಯಲ್ಲಿವೆ. ಅಳಿಯ ಸಂತಾನ, ನಾದಿನಿ ವಿವಾಹ, ಬಾಲ್ಯವಿವಾಹ, ಕೂಡಾವಳಿ (ವಿಧವಾವಿವಾಹ) ವಿನಿಮಯ ವಿವಾಹ, ಏಕಪತ್ನಿತ್ವ ಇವುಗಳಲ್ಲಿ ಏಕಪತ್ನಿತ್ವ ಹೆಚ್ಚು ಪ್ರಚಲಿತವಿದ್ದು ಅಳಿಯ ಸಂತಾನ ಮತ್ತು ನಾದಿನಿವಿವಾಹಗಳು ಉಪ್ಪಾರರಲ್ಲಿ ಈಗ ಹೆಚ್ಚು ಪ್ರಚಲಿತವಿರುವ ಶಾಸ್ತ್ರೋಕ್ತ ಮದುವೆ ಸಂಪ್ರದಾಯದಂತೆ ನಡೆಯುತ್ತವೆ. ಬಾಲ್ಯವಿವಾಹ ಮತ್ತು ಕೂಡಾವಳಿಗಳ ಸಂಪ್ರದಾಯಗಳೇ ಭಿನ್ನ ರೀತಿಯಲ್ಲಿ ನಡೆಯುತ್ತವೆ.

**ಅಳಿಯ ಸಂತಾನ:** ಗಂಡು ಸಂತಾನವಿಲ್ಲದ ವ್ಯಕ್ತಿಗಳು ತಮ್ಮ ಹೆಣ್ಣುಮಕ್ಕಳಿಗೆ ಯೋಗ್ಯವರನನ್ನು ಹುಡುಕಿ ಆತನನ್ನು ಅಳಿಯ ಸಂತಾನವೆಂದು ಕರೆಯುತ್ತಾರೆ. ಕೆಲವು ವೇಳೆ ಒಬ್ಬಳಿಗಿಂತ ಹೆಚ್ಚು ಹೆಣ್ಣು ಮಕ್ಕಳಿದ್ದರೆ, ಆಗ ಒಬ್ಬಳಿಗೆ ಮಾತ್ರ ತನ್ನ ಮನೆಯಲ್ಲಿಟ್ಟುಕೊಂಡು ಉಳಿದ ಹೆಣ್ಣು ಮಕ್ಕಳನ್ನು ಬೇರೆಡೆಗೆ ಮದುವೆ ಮಾಡಿಕೊಡುತ್ತಾರೆ. ತನ್ನ ತಂದೆಯ ನಂತರ ಆಸ್ತಿಯ ಹಕ್ಕು ಆ ಅಳಿಯನಿಗೆ ಬರುತ್ತದೆ. ಅನಂತರ ಅವರ ಮಕ್ಕಳಿಗೆ ಬರುತ್ತದೆ. ಹೀಗೆ ಮಾಡಿದ್ದರಿಂದ ಆಸ್ತಿ ಬೇರೆಯವರ ಕೈವಶವಾಗದೇ ತನ್ನ ರಕ್ತ ಸಂಬಗರಲ್ಲಿಯೇ ಉಳಿಯಲು ಸಾಧ್ಯವಾಯಿತು. ಈಗಲೂ ಈ ರೀತಿಯ ಮದುವೆಗಳು ಪ್ರಚಲಿತವಿವೆ. ಮದುವೆಯ ಎಲ್ಲಾ ಸಂಪ್ರದಾಯಗಳು ಶಾಸ್ತ್ರೋಕ್ತ ಮದುವೆಯಲ್ಲಿ ನಡೆಯುವಂತೆ ನಡೆಯುತ್ತದೆ. ಇಲ್ಲಿ ಗಂಡು ಹೆಣ್ಣಿನ ಮನೆಯಲ್ಲಿಯೇ ಉಳಿಯಬೇಕಾಗುತ್ತದೆ. ಈ ಮದುವೆ ಹಿರಿಯ ಅಥವಾ ಕಿರಿಯ ಮಕ್ಕಳಿಗೆ ಮಾಡುತ್ತಿರುವುದು ಹೆಚ್ಚು ರೂಢಿಯಲ್ಲಿದೆ. ಮಧ್ಯದಲ್ಲಿರುವವರನ್ನು ಹೊರಗೆ ಕೊಡುವುದೇ ಹೆಚ್ಚು. ವರ ಸೋದರಿಕೆ ಸಂಬಂಧದ ಇಲ್ಲವೆ ದೂರದ ಸಂಬಂಧಿಯಾಗುತ್ತಾನೆ. ಕಂಡು ಕೇಳಿ ಬಳಕೆಯಿದ್ದ ವ್ಯಕ್ತಿಗಳನ್ನು ಮಾತ್ರ ಮನೆ ಅಳಿಯನ ಸ್ಥಾನಕ್ಕೆ ಆರಿಸುತ್ತಾರೆ. ಹೀಗೆ ಗೊತ್ತಿದ್ದ ವ್ಯಕ್ತಿಯಾದರೆ ಆ ಮನೆ ಯಶಸ್ಸು ಹೊಂದುತ್ತದೆ ಎನ್ನುವ ನಂಬಿಕೆಯೇ ಇದಕ್ಕೆ ಕಾರಣವಾಗಿದೆ.

**ನಾದಿನಿ ವಿವಾಹ:** ಈ ಮದುವೆಯು ಇವರಲ್ಲಿ ಹೆಚ್ಚು ಪ್ರಚಲಿತವಿದೆ. ಮದುವೆಯಾದ ವ್ಯಕ್ತಿಯ ಹೆಂಡತಿ ಬಂಜೆಯಾಗಿದ್ದರೆ, ಅಥವಾ ಅಕಾಲ ಮರಣವನ್ನಪ್ಪಿದ್ದರೆ, ಅವಳ ತಂಗಿಯನ್ನೇ ಮದುವೆಯಾಗುವ ಪದ್ಧತಿಯಿದು. ಪೂರ್ವಕಾಲದಲ್ಲಿ ಹೆಂಡತಿಯ ತಂಗಿಗೆ ಇಷ್ಟವಿಲ್ಲದಿದ್ದರೂ ಕಡ್ಡಾಯವಾಗಿ ನೆಡೆಸಿಬಿಡುತ್ತಿದ್ದರು. ಆದರೆ, ಈಗ ಕಡ್ಡಾಯ ತಪ್ಪಿ ಹೋಗಿದೆ. ಇಷ್ಟ ಪಟ್ಟರೆ ಮಾತ್ರ ಮದುವೆ ನೆರವೇರಿಸುತ್ತಾರೆ. ಇಲ್ಲವಾದರೆ ಹೊಸ ಸಂಬಂಧವನ್ನು ನೋಡಿ ಹೆಂಡತಿ ಕಳೆದುಕೊಂಡ ವ್ಯಕ್ತಿಗೆ ಮದುವೆ ಮಾಡುತ್ತಾರೆ. ಉಪ್ಪಾರರ ಪ್ರಚಲಿತ ಮದುವೆ ಸಂಪ್ರದಾಯದಂತೆ ಈ ಮದುವೆಯೂ ನಡೆದು ಹೋಗುತ್ತದೆ.

**ಬಹುಪತ್ನಿತ್ವ:** ಏಕಪತ್ನಿತ್ವಕ್ಕೆ ವಿರುದ್ಧವಾದದ್ದು ಇದು ಒಬ್ಬಳಿಗಿಂತ ಹೆಚ್ಚು ಹೆಂಡತಿಯರನ್ನು ಪಡೆಯುವಿಕೆ. ಅಪರೂಪಕೆಂಬಂತೆ ಈಗಲೂ ಈ ಮದುವೆ ನಡೆಯುತ್ತದೆ. ಮೊದಲ ಮದುವೆಯ ಯಾವ ಆಡಂಬರವೂ ಇಲ್ಲದೆ ಸರಳವಾಗಿ ನಡೆಯುತ್ತದೆ. ಹೆಂಡತಿ ಬಂಜೆಯಾಗಿದ್ದರೆ, ಮೊದಲಿನ ಹೆಂಡತಿ ತನಗಿಷ್ಟವಿಲ್ಲದಾಗ ಈ ಮದುವೆ ನಡೆಯುತ್ತಿತ್ತು. ಮೊದಲಿನ ಹೆಂಡತಿಯ ಒಪ್ಪಿಗೆಯ ಮೇರೆಗೆ ಈ ಮದುವೆ ಜರುಗುತ್ತಿತ್ತು.

**ಬಾಲ್ಯವಿವಾಹ:** ಈಗಲೂ ಉತ್ತರಕರ್ನಾಟಕದ ಕೆಲವೆಡೆ ನಡೆಯುತ್ತದೆ. ಅಕ್ಷರಸ್ಥರಲ್ಲದ ಬಡವರ್ಗದಲ್ಲಿ ಮಾತ್ರ ನಡೆಯುವುದು ಎಂಬ ಅಂಶ ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಇದಕ್ಕೆ ಅವರ ಅಜ್ಞಾನ ಬಡತನಗಳೇ ಕಾರಣವಾಗಿವೆ. ತಂದೆ-ತಾಯಿಗಳು ತಮ್ಮ ಮಕ್ಕಳ ಮದುವೆಯನ್ನು ತಮ್ಮ ಜೀವನ ಅವಧಿಯಲ್ಲೇ ನೋಡಬೇಕು ಎನ್ನುವ ಹಂಬಲದಿಂದ ಈ ಮದುವೆಗಳು ನಡೆಯಲು ಕಾರಣವಾಗಿವೆ, ಹೆಣ್ಣು ದೊಡ್ಡವಳಾಗುವುದಕ್ಕೆ ಮೊದಲೇ ಮದುವೆ ಮಾಡಿದರೆ ತಂದೆ-ತಾಯಿಯವರಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯೂ ಇದಕ್ಕೆ ಕಾರಣವಾಗಿದೆ. ಆರೇಳು ವರ್ಷಗಳ ಒಳಗೆ ಮದುವೆ ಮಾಡುತ್ತಾರೆ. ಮದುವೆ ಸಂಪ್ರದಾಯದಲ್ಲಿ ಯಾವ ಬದಲಾವಣೆಗಳೂ ಇಲ್ಲ. ಹೆಣ್ಣು ವಯಸ್ಸಿಗೆ ಬರುವ ವರೆಗೂ ತನ್ನ ತಂದೆಯ ಮನೆಯಲ್ಲಿಯೇ ಇರುತ್ತಾರೆ. ಮೈನೆರೆದ ನಂತರ ತನ್ನ ಗಂಡನ ಮನೆಗೆ ಕಳುಹಿಸಿ ಕೊಡುತ್ತಾರೆ. ಮಂಗಳವಾರ ಮತ್ತು ಶುಕ್ರವಾರ ಮಕ್ಕಳನ್ನು ಗಂಡನ ಮನೆಗೆ ಕಳುಹಿಸುವುದಿಲ್ಲ.

**ಕೂಡಿಕೆ (ವಿಧವಾ ವಿವಾಹ):**

ಗಂಡನನ್ನು ಕಳೆದುಕೊಂಡವರು, ಹೆಂಡತಿಯನ್ನು ಕಳೆದುಕೊಂಡವರು ವಿವಾಹವಾಗುವ ಪದ್ಧತಿಯಿದು, ಕೆಲವು ವೇಳೆ ಹೆಂಡತಿ ಇದ್ದವರೂ ಕೂಡಿಕೆ ಮಾಡಿಕೊಳ್ಳುತ್ತಾರೆ. ಮದುವೆಯಾಗುವ ಹೆಣ್ಣಿಗೆ ಮೊದಲ ಗಂಡನಿಂದ ಹುಟ್ಟಿದ ಮಕ್ಕಳ ಅವುಗಳನ್ನು ಅವನಿಗೆ ಅಥವಾ ಅದೇ ಊರಿನಲ್ಲಿ ಬಿಟ್ಟು ಬರುತ್ತಿದ್ದರು.ಇಂಥ ಮಕ್ಕಳನ್ನು ಕೂಡಿಕೆಯಾಗುವವನು ಸ್ವೀಕರಿಸುವುದಿಲ್ಲ. ಅಂಥ ಮಕ್ಕಳಿಗೆ ಆಸ್ತಿಯ ಹಕ್ಕೂ ಇರುವುದಿಲ್ಲ. * ಕೂಡಿಕೆಯನ್ನು ಇಷ್ಟಪಟ್ಟವರೂ ಮಾತ್ರಮಾಡಿ ಕೊಳ್ಳುತ್ತಿದ್ದರು. ಹೆಚ್ಚಾಗಿ ಚಿಕ್ಕ ವಯಸ್ಸಿನಲ್ಲಿ ಗಂಡ ತೀರಿಕೊಂಡರೆ ಅಂತಹ ಮಹಿಳೆಗೆ ಮರು ವಿವಾಹವಾಗುವಂತೆ ಹಿರಿಯರು ಒಪ್ಪಿಸುತ್ತಿದ್ದರು.ಒಪ್ಪಿದ ಹೆಣ್ಣನ್ನು ಮೃತಗಂಡನ ಮನೆಯಿಂದ ತವರು ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಇದಕ್ಕೆ ಕಾರಣವೆಂದರೇಗಂಡನ ಮನೆಯಲ್ಲಿ ತಾನು ಇರುವರೆಗೂ ಇನ್ನೊಂದು ಮದುವೆ ಮಾಡಿಕೊಳ್ಳಲು ಅವಕಾಶವಿರುತ್ತಿರಲಿಲ್ಲ.

ವಿಧವಾ ವಿವಾಹವು ಇವರಲ್ಲಿ ಒಪ್ಪಿದ ಪದ್ಧತಿಯಾಗಿದೆ."A Widow is allowed to marry, but not her busband's brother. On the wedding day the widow is presented with a new sari and choli and one rupee for bangles. She is taken to the

maruti's temple by other widows and made to sit by a Knite which represents the bridegroom. A man of the Golla Dasri caste tier a pusti round her neck" (Syedsiraj Ul Hasaan -1989 -621) ವಿಚ್ಛೇಧನ ಮಹಿಳೆ ಅಥವಾ ವಿಧವೆಯೊಬ್ಬಳು ಎಷ್ಟು ಭಾರಿ ಬೇಕಾದರೂ ವಿವಾಹವಾಗಬವುದು. ಅವಳು ವಿವಾಹವಾಗುವ ಪೂರ್ವದಲ್ಲಿ ವಿಧವೆಯಾಗಿರಬೇಕು ಇಲ್ಲವೆ ವಿಚ್ಛೇದಿತಗಳಾಗಿರಬೇಕು. ವಿಧವೆಯೊಬ್ಬಳು ತನ್ನ ಮೃತಪತಿಯ ಸಹೋದರ ಅಥವಾ ಸಹೋದರ ಸಂಬಂಧಗಳನ್ನು ಮದುವೆಯಾಗುವಂತಿಲ್ಲ. ಕೆಲವೊಮ್ಮೆ ಅವರ ಕುಲದಲ್ಲಿಯೇ ಯಾರನ್ನಾದರೂ ಮದುವೆಯಾಗುವ ಅವಕಾಶಗಳಿವೆ. (ಬ್ರಹ್ಮಚಾರಿ) ಅವಿವಾಹಿತನೊಬ್ಬ ವಿಧವೆಯನ್ನು ಮದುವೆಯಾಗುವುದು ನಿಷಿದ್ಧ "A bachelor is not allowed to marry a widow. Divorce is allowed. The caste follow the Hindu law of inheritance".(Enthoven RE. 1990:395). ಹಾಗೊಮ್ಮೆ ಅವನು ಒತ್ತಾಯ ಮಾಡಿದರೆ (ಹಟಮಾಡಿದರೆ) ವಿಧವೆಯ ಕೊರಳಿಗೆ ಮಾಂಗಲ್ಯ ಕಟ್ಟುವ ಮೊದಲು ಅವನಿಂದ ಶಾಸ್ತ್ರೋಕ್ತವಾಗಿ ಎಕ್ಕೆಗಿಡಕ್ಕೆ ತಾಳಿಕಟ್ಟಿಸಿ ಅನಂತರ ಮದುವೆ ಮಾಡುತ್ತಿದ್ದರು. ಇಂಥಹ ಮದುವೆ ನಡೆಯಬೇಕಾದರೆ ಹೆಣ್ಣಿನ ತಂದೆಗಳು ಒಪ್ಪಿದ ಅನಂತರವೇ ಆಗುತ್ತಿದ್ದವು. ಮೃತವ್ಯಕ್ತಿಯ ಮನೆಯವರು ಇಷ್ಟವಿಲ್ಲದಿದ್ದರೂ ಒಪ್ಪಿಗೆ ಕೊಡಲೇಬೇಕಿತ್ತು. ಮೃತವ್ಯಕ್ತಿ ಕಟ್ಟಿದ ತಾಳಿಯೊಂದಿಗೆ 'ವಿಮೋಚನ ಹಣ' ವನ್ನು ಅವನ ಸಂಬಂದಿಕರಿಗೆ ಕೊಟ್ಟು ವಿಧವೆಯು ಮುಕ್ತಳಾಗಬೇಕು. ಈ ಆಚರಣೆ ಇನ್ನೊಬ್ಬ ವಿಧವೆ ಅಥವಾ ಮರು ಮದುವೆ ಮಾಡಿಕೊಂಡವಳಿಂದ ನಡೆಯುತ್ತದೆ. ಇದು ಸೂರ್ಯ ಮುಳುಗುವ ಸಮಯದಲ್ಲಿ ನಡೆಯುತ್ತದೆ. * ಇನ್ನು ಕೆಲಭಾಗಗಳಲ್ಲಿ ದೇವಸ್ಥಾನ ಅಥವಾ ವಾಸವಿಲ್ಲದ ಹಾಳು ಮನೆಯ ಮುಂದೆ ನಡೆಯುತ್ತದೆ. * ಮದುವೆ ನಡೆಯುವುದು ಕೃಷ್ಣಪಕ್ಷದ ರಾತ್ರಿಯಲ್ಲಿ "The ceremony takes places on a dark night. It consists in tying a lucky necklace round the widow's neck. after which a dinner is given" (Enthoven RE. 1990 -393). ಈ ಸಮಾರಂಭದಲ್ಲಿ ಮುತ್ತೈದೆಯರು ಮತ್ತು ಮಕ್ಕಳು ಇರುವುದಿಲ್ಲ. ಇದರ ಬದಲಾಗಿ ಇವರಂತೆ ಮರು ವಿವಾಹವಾದವರು ಮತ್ತು ಗಂಡಸರು ಇರುತ್ತಾರೆ. ವಿವಾಹವಾಗುವ ಗಂಡಸು ಜನಾಂಗದ ಮುಖಂಡರ ಮುಂದೆ ಹೆಣ್ಣಿಗೆ ಬಳೆ, ಸೀರೆ, ಕುಪ್ಪಸ, ಆಭರಣ ಮತ್ತು ಅರಿಶಿಣ ಕುಂಕುಮ ನೀಡುತ್ತಾನೆ. ಹೆಣ್ಣು ಇನ್ನೊಬ್ಬಳ ಸಹಾಯದಿಂದ ಇವುಗಳನ್ನು ತೊಟ್ಟು ಅಲಂಕರಿಸಿಕೊಳ್ಳುತ್ತಾಳೆ. ಇದೆಲ್ಲವೂ ದೇವಸ್ಥಾನದ ಎದುರು ಅಥವ ಹಾಳು ಮನೆಯ ಮುಂದೆ ನಡೆಯುತ್ತದೆ.

ಕೂಡಿಕೆಯಾಗುವ ಸಂಜೆ ಅವಳನ್ನು ತಂದೆಯ ಮನೆಯ ಹಿಂಬಾಗಿಲಿನಿಂದ ಕರೆ ತಂದು ಸ್ನಾನಮಾಡಿಸಿ ಕೂಡಿಸಿ ಕೊಳ್ಳುವವನಿಂದ ಬಂದ ಹೊಸ ಬಟ್ಟೆಗಳಿಂದ ಅಲಂಕೃತಳಾಗಿ ದೇವಸ್ಥಾನದ ಕತ್ತಲ ಕೋಣೆ

ಯೊಂದರಲ್ಲಿ ಬಾಗಿಲ ಹಿಂಭಾಗದಲ್ಲಿ ಕುಳಿತು ಕೊಳ್ಳುತ್ತಾಳೆ. ಕೂಡಿ ಕೊಳ್ಳುವವನು ಜನಾಂಗದವರ ಒಪ್ಪಿಗೆಯಂತೆ ಹೆಣ್ಣಿಗೆ ತೆರವನ್ನು ಕೊಡುತ್ತಾನೆ. * ಅವನು ಕೊಟ್ಟ 12 ರೂ ತೆರವನು ಪಡೆದ ನಂತರ ಬಣಿಗ ಗೌಡ ಅಥವಾ ಕೋಲ್ಕಾರ ಎದುರು ತಾಳಿಕಟ್ಟುಮಾಡುತ್ತಾನೆ. ಕೋಲ್ಕಾರ ಅವರಿಬ್ಬರ ತಲೆಯ ಮೇಲೆ ಮಂತ್ರಾಕ್ಷತೆ ಹಾಕಿ ಶುಭಹಾರೈಸುತ್ತಾನೆ. ಅನಂತರ ಕೋಲ್ಕಾರನು ಹೆಣ್ಣಿಗೆ ತನ್ನ ಕೈಯಲ್ಲಿ ಹಿಡಿದ ದೊಣ್ಣೆಯಿಂದ ಮೂರು ಏಟು ಕೊಟ್ಟು (ನಿಧಾನವಾಗಿ) ಗಂಡಿಗೆ ಐದು ಏಟು ಕೊಟ್ಟು ಈ ರೀತಿ ಹೇಳುತ್ತಾನೆ. "ದೊಡ್ಡಗುರು ಮತ್ತು ಸಂಬಂಧಿಕರ ಎದುರಿನಲ್ಲಿ ಈ ಸ್ತ್ರೀಯು ನಿನಗೆ ಕೊಡಲಾಗಿದೆ. ಆಕೆಯ ವಿಷಯದಲ್ಲಿ ನೀನು ತಪ್ಪಿಸ್ಥನಾಗಿ ನಡೆದರೆ ಶಿಕ್ಷೆಗೆ ಗುರಿಯಾಗ ಬೇಕಾಗುತ್ತದೆ". ಇನ್ನು ಮುಂದೆ ಇವರಿಬ್ಬರೂ ಗಂಡ ಹೆಂಡತಿಯರು ಎಂದು ಅಲ್ಲಿ ನೆರೆದ ಜನರಿಗೆ ಸಾರಿ ಹೇಳುತ್ತಾನೆ. ಇಂಥ ಮದುವೆಗಳು ಹಿಂದೆ ಗಂಡಿನ ಊರಿನಲ್ಲಾಗಲಿ ಹೆಣ್ಣಿನ ಊರಿನಲ್ಲಾಗಲಿ ನಡೆಯದೇ ಬೇರೊಂದು ಊರಿನಲ್ಲಿ ನಡೆಯುತ್ತಿತ್ತು. * ಹೀಗೆ ಮದುವೆಯಾದ ಗಂಡ ಹೆಂಡತಿಯರು ಕೆಲದಿನಗಳು ತಮ್ಮ ಊರಿಗೆ ಹೋಗುವಂರಲಿ. ಹೀಗೆ ಮದುವೆಯಾದ ಹೆಣ್ಣುಮಗಳು ಮುತ್ತೈದೆಯರನ್ನು ಮೂರು ದಿನಗಳವರೆಗೆ ನೋಡಬಾರದು ಎಂಬ ನಿಷೇಧ ಇವರಲ್ಲಿದೆ.

ಮದುವೆಯಾದ ನಂತರ ಗಂಡಿಗಿಲ್ಲದ ಕೆಲವು ನಿಯಮಗಳು ಹೆಣ್ಣಿಗಿವೆ. ಜನಾಂಗದ ಎಲ್ಲಾ ಆಚರಣೆಗಳಲ್ಲಿ ಇವಳು ಭಾಗವಹಿಸಬಾರದು. ಮತ್ತು ಅವಳಿಗೆ ಹುಟ್ಟಿದ ಮಕ್ಕಳು ಮತಕ್ಕೆ ಸೇರಬಾರದೆಂಬ ನಿಯಮವಿದೆ. ಮುಂದೆ ಮೂರು ತಲೆಮಾರುಗಳ ನಂತರ ಭಿನ್ನಮತವು ಹೋಗಿ ಮತಕ್ಕೆ ತಾನಾಗಿ ಸೇರಿ ಹೋಗುತ್ತದೆ. ಆದರೆ, ಇಷ್ಟು ಭೀಕರವಾದ ನಿಯಮಗಳು ಈಗ ಉಳಿದುಕೊಂಡಿಲ್ಲ. ಮಕ್ಕಳಿದ್ದ ವಿಧವೆಯೊಬ್ಬಳು ಮದುವೆಯಾದರೆ ತನ್ನ ಮದುವೆ ನಂತರ ಮಕ್ಕಳ ಸಂಬಂಧವನ್ನು ಕೊಳ್ಳುವುದಿಲ್ಲ ಆದರೆ, ಈಗಿನ ಪತಿಯ ಆಸ್ತಿಯ ಒಡೆತನ ಮಾತ್ರ ಅವುಗಳಿಗಿರುವುದಿಲ್ಲ. ಕೂಡಿಕೆ ವಿವಾಹಗಳ ಕನ್ಯಾಶುಲ್ಕವೂ ಪ್ರಥಮ ವಿವಾಹದ ಕನ್ಯಾ ಶುಲ್ಕದ ಅರ್ಧದಷ್ಟಿರುತ್ತದೆ. ಈ ಶುಲ್ಕವನ್ನು ಕನ್ಯೆಯ ತಂದೆಯೇ ಸ್ವೀಕರಿಸುತ್ತಾನೆ.

**ವಿನಿಮಯ ವಿವಾಹ:** ಹೆಣ್ಣು ಕೊಟ್ಟು ಹೆಣ್ಣು ತರುವುದು ಅಥವಾ ಕೊಟ್ಟು ತರುವ ಪದ್ಧತಿ ಇದಾಗಿದೆ. ಇದು ಈಗಲೂ ನಡೆಯುತ್ತದೆ. ಒಂದು ಮನೆಯ ಅಣ್ಣ ತಂಗಿಯರಿಗೆ ಇನ್ನೊಂದು ಕುಟುಂಬದ ಅಣ್ಣತಂಗಿಯರ ಜೊತೆ ಮದುವೆ ಮಾಡಕೊಳ್ಳವುದು. ಪೂರ್ವದಲ್ಲಿ ಹೆಣ್ಣಿಗೆ ತೆರಕೊಡಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಅನಿವಾರ್ಯವಾಗಿ ಈ ಮದುವೆಗೆ ಒಪ್ಪಲೇ ಬೇಕಾಗುತ್ತಿತ್ತು. ಇಂದು ವರದಕ್ಷಿಣೆ ಕೊಡಲು ಆಗದಿದ್ದರಿಂದ ಅಣ್ಣ ತನ್ನ ತಂಗಿಯ ಮದುವೆ ಮಾಡಲು ಅವಳ ಗಂಡನ ತಂಗಿಯನ್ನು ತನ್ನ ಹೆಂಡತಿಯಾಗಿ ಸ್ವೀಕರಿಸುತ್ತಾನೆ. ಕಾರಣದಿಂದ ಈ ಪದ್ಧತಿ ಈಗಲೂ ಜೀವಂತವಾಗಿದೆ. ಮದುವೆಯ ಆಚರಣೆಯಲ್ಲಿ ಯಾವುದೇ ಬದಲಾವಣೆಗಳಿಲ್ಲ.

ಹೀಗೆ ಇವರಲ್ಲಿ ಹಲವು ಬಗೆಯ ಮದುವೆ ಪದ್ಧತಿಗಳು ನಡೆಯುತ್ತಾವಾದರೂ ಏಕಪತ್ನಿತ್ವಕ್ಕೆ ಹೆಚ್ಚು

ಗೌರವವಿದ್ದು ಹೆಚ್ಚು ಜನಪ್ರಿಯವಾಗಿದೆ. ಮೊದಮೊದಲಿಗೆ ಒಳಬಾಂಧವ್ಯ ವಿವಾಹ ಪದ್ಧತಿಗಳು ಹೆಚ್ಚಾಗಿ ನಡೆಯುತ್ತಿದ್ದವು. ಈಗ ನಾಗರಿಕತೆಯ ಪ್ರಭಾವದಿಂದಾಗಿ ಹೊರಬಾಂಧವ್ಯದ ವಿವಾಹ ಪದ್ಧತಿಗಳು ಹೆಚ್ಚಾಗಿ ರೂಢಿಯಲ್ಲಿವೆ. ಕಷ್ಟ ಸುಖಗಳಿಗೆ ಹೆಚ್ಚು ಜನರ ಸಲಹೆ ಸಹಕಾರದ ಆವಶ್ಯಕತೆ ಇದ್ದುದರಿಂದ ಹೊರಬಾಂಧವ್ಯದ ಸಂಬಂಧಗಳು ಇವರಿಗೆ ಇಷ್ಟವಾಗಿ ಮನ್ನಣೆ ಪಡೆದವೆಂದು ತೋರುತ್ತದೆ. ದೊಡ್ಡವರು ನೋಡಿ ಬಂದವರನ್ನು ಒಪ್ಪಿ ಮದುವೆಯಾಗಬೇಕಾದ ಸ್ಥಿತಿ ಈಗ ಹೆಸರಿಗೆ ಮಾತ್ರ ಉಳಿದುಕೊಂಡಿದೆ. ಹುಡುಗ ಹುಡುಗಿ ಒಪ್ಪಿಕೊಂಡರೆ ಮಾತ್ರ ಮದುವೆ ನಡೆಯುತ್ತದೆ.

**ಶಾಸ್ತ್ರೋಕ್ತ ವಿವಾಹ:** ಈ ವಿವಾಹ ಪದ್ಧತಿಯಲ್ಲಿ ಪರಂಪರೆಯಿಂದ ಬಂದು ಸಂಪ್ರದಾಯ ನಡಾವಳಿಗಳು ಇನ್ನೂ ಜೀವಂತವಾಗಿ ಆಚರಣೆಯಲ್ಲಿವೆ. ಇವು ಉಪ್ಪಾರರ ಸಂಸ್ಕೃತಿಯ ಸೆಲೆಯನ್ನು ಬಿಚ್ಚಿ ತೋರಿಸುತ್ತವೆ. ಹೆಣ್ಣು ಗಂಡುಗಳ ಆಯ್ಕೆ ಅವರವರ ಬೆಡಗುಗಳ ಮೇಲೆ ನಿರ್ದಾರವಾಗುತ್ತವೆ. ಕುಲಗಳೇ ಇಲ್ಲಿ ಬೆಡಗುಗಳೆಂದು ಕರೆಯಿಸಿಕೊಂಡಿವೆ.

**ಬೆಡಗು:** ಮದುವೆಯ ಮೊದಲ ಹಂತವೇ ಬೆಡಗಿನ ಆಯ್ಕೆಯಾಗಿದೆ. ಬೆಡಗುಗಳನ್ನು ಗಿಡ, ಪ್ರಾಣಿ, ಮತ್ತಿತರ ವಸ್ತುಗಳನ್ನು ಸಂಕೇತಿಸುತ್ತಾರೆ. ಆಯಾ ವೃಕ್ಷ, ಪ್ರಾಣಿ ಅಥವಾ ವಸ್ತುಗಳ ಜೊತೆಗಿನ ಅವರ ಬದುಕಿನ ಸಂಪರ್ಕವೇ ಇದಕ್ಕೆ ಮುಖ್ಯ ಕಾರಣವಾಗಿದೆ. ಒಂದೇ ಕುಲದವರಲ್ಲಿ ಯಾವುದೇ ಕಾರಣಕ್ಕೂ ವಿವಾಹ ಸಂಬಂಧ ನಡೆಯಬಾರದು. ಹಾಗೆ ಉಲ್ಲಂಘಿಸಿದರೆ ಅಂಥವರನ್ನು ಜಾತಿಯಿಂದ ಹೊರಗೆ ಹಾಕುತ್ತಾರೆ. ಇವರಲ್ಲಿ ಬೆಡಗುಗಳು ಪುರುಷ ಪ್ರಧಾನವಾಗಿರುತ್ತವೆ. ಇವರಲ್ಲಿ ಕರ್ನಾಟಕದಾದ್ಯಂತ ಇರುವ ಕುಲಗಳೆಂದರೆ,

| | | | |
|---|---|---|---|
| ಅಗಿಲ | ಅರಸು | ಚಿಲುಮೆ | ಹುಲಿವನ |
| ಆಳೆ | ಬೇಲದ | ದೊಡ್ಡಿ | ಜೋಗುಳ |
| ಅಲ್ಗಿದಾಲ | ಬೆಳ್ಳಿ | ಗೌಡ | ಕಾಗಳ |
| ಆನೆ | ಚಂದು | ಹೊಂಗೆ | ಕಗ್ಗಲ್ಲು |
| ಅರಿಸಿಣ | ಪತ್ರಿ | ಹೊನ್ನು | ಕರಗ |
| ಕಠಾರಿ | ಕಸ್ತೂರಿ | ಕೆಂಡ | ಮಣಕ |
| ಸಕ್ಕರೆ | ಕೊತ್ತಂಬರಿ | ಮುಚ್ಚಳ | ಸಣ್ಣಕ್ಕಿ |
| ಕೆಂದೂರಿ | ಮುತ್ತು | ಸಣ್ಣತತ್ತಿ | ಯಾದರಸ |
| ನಾಚಾಲ | ಮಜ್ಜನ | ನಾಗರ | ಸೆಟ್ಟಿ |
| ನರಿ | ತಳಗ | ಮಲ್ಲಿಗೆ | ನೆರಳೆ |

ತುಪ್ಪ ಎಲಪ

ಇವುಗಳಲ್ಲದೆ ಇನ್ನೂ ನೂರಕ್ಕೂ ಹೆಚ್ಚು ಬೆಡಗುಗಳು ಇವರಲ್ಲಿವೆ. * ಸಮೀಕ್ಷೆಗಾಗಿ ಹೊಸದುರ್ಗ ತಾಲೂಕಿನ ಮಧುರೆಯಲ್ಲಿನ ಕ್ಷೇತ್ರಕಾರ್ಯದಲ್ಲಿ ದೊರೆತ ಬೆಡಗುಗಳ ಪಟ್ಟಿಹೀಗಿದೆ!

| | |
|---|---|
| ೧. ಸಣ್ಣಕ್ಕಿಯವರು | ೯. ಬೆನ್ನಲೆಯರು |
| ೨. ಆದೇಲಿಯರು | ೧೦. ಬಲಬೂಜ |
| ೩.ಜನ್ ಪಲ್ಲಾರ್ | ೧೧. ಮಂತ್ರಿಗಳು |
| ೪. ಮಿಳಿಲಾರ್ | ೧೨. ಒಂದೇಲಿಯರು |
| ೫. ಒನ್ನೇರು | ೧೩. ಬಾಧಲೆಯರು |
| ೬. ಬಾಗಲೇರು | ೧೪. ಸಗರ |
| ೭. ಮಾದಕ್ಸರರು | ೧೫. ಸಕ್ಕರೆ |
| ೮. ರಾಮಸ್ವಾಮಿಗಳು | ೧೬. ಸಂಪಿಗೆ |

ಈ ಬೆಡುಗಳಲ್ಲಿಯೇ ೭ ವರದವರು ೮ ವರದವರು ೫ ವರದವರಂದು ಕರೆಯಿಸಿಕೊಳ್ಳುವವರು ಇದ್ದಾರೆ. ಮದುವೆಯಾಗುವ ಹುಡುಗನೊಬ್ಬ ತನ್ನ ಬೆಡಗನ್ನು ಬಿಟ್ಟು ಉಳಿದ ಯಾವ ಬೆಡಗಿನ ಕನ್ಯೆಯನ್ನಾದರೂ ತನ್ನ ಸಂಗಾತಿಯನ್ನಾಗಿ ಆರಿಸಿಕೊಳ್ಳಬಹುದು. ಇಲ್ಲಿ ೧೬ ಬೆಡಗುಗಳು ಕಂಡು ಬಂದು ಸಗರ, ಸಕ್ಕರೆ, ಸಂಪಿಗೆ ಯವರ ಜೊತೆಗೆ ವಿವಾಹ ಸಂಬಂಧಗಳು ಏರ್ಪಡಲಾಗದು ಈ ಕೆಳಗಿನ ಪಟ್ಟಿ ಮೂಲಕ ಕಂಡು ಬರುತ್ತದೆ. ಇದಕ್ಕೆ ಇವರಲ್ಲಿದ್ದ ಮೇಲುಸಕ್ಕರೆಯವರೇ ಶ್ರೇಷ್ಠರೆಂಬ ಕಲ್ಪನೆಯೇ ಕಾರಣವಾಗಿದೆ. ಉಳಿದಂತೆ ಎಲ್ಲರೂ ತಮ್ಮ ಬೆಡಗನ್ನು ಬಿಟ್ಟು ಉಳಿದ ಬೆಡಗುಗಳ ಜೊತೆಗಾರರ ಸಂಬಂಧ ಬೆಳೆಸುತ್ತಾರೆ. ಒಟ್ಟಿನಲ್ಲಿ ಹುಡುಗ ಅಥವಾ ಹುಡುಗಿ ಇಷ್ಟ ಪಡುವುದೇ ಇಲ್ಲಿ ಮುಖ್ಯ ಆನಂತರವೇ ಅವರ ಬೆಡಗು ನೋಡುವುದು.

**ಹೆಣ್ಣು/ಗಂಡಿನ ಆಯ್ಕೆ:**

ಹೆಣ್ಣನ್ನು ಆರಿಸುತ್ತ ಮೊದಲು ಗಂಡಿನ ಕಡೆಯವರೆ ಹೋಗುತ್ತಾರೆ. ಹೆಣ್ಣು ಇರುವ ಮನೆಗೆ ನೇರವಾಗಿ ಹೋಗುವುದಿಲ್ಲ. ಪಕ್ಕದ ಪರಿಚಿತರಿಂದ ತಿಳಿದು, ವಿಚಾರಿಸಿಕೊಂಡು ಆ ಹುಡುಗಿ ತಮ್ಮ ವರನಿಗೆ ಆಗಬಹುದೆಂದು ಮನೆಯವರಿಗೆ ಮಾತ್ರ ಅವರ ಬಗೆಗೆ ಕೇಳಿ ತಿಳಿದುಕೊಳ್ಳುತ್ತಾರೆ. ಹುಡುಗಿಯನ್ನು ಗಂಡಿನ ಕಡೆಯವರು ಮದುವೆಯಲ್ಲೂ, ಜಾತ್ರೆಯಲ್ಲೂ ಮೊದಲೆ ನೋಡಿರುತ್ತಾರೆ. ಹೀಗೆ ಹೆಣ್ಣಿನ ಕಡೆಯವರು ಹುಡುಗನನ್ನು ನೋಡಿರುತ್ತಾರೆ.

ತಮಗೆ ಸಂಬಂಧ ಆಗಬಹುದು ಎಂಬುದು ಮನಸ್ಸಿಗೆ ಹಿಡಿಸಿದ ಮೇಲೆ ಒಂದು ಶುಭದಿನ ಮೂರು

ಹೆಣ್ಣು

ಗಂಡು

| ಬೆಡಗುಗಳು | ಸಕ್ಕಾಂಕ್ಷಿ | ಆದೇಲಿ | ಓನ್‌ಪತ್ತಾರ್ | ಮೊಳಿಲಾರ್ | ಓನ್ನೇರು | ಬಾಗಲೇರು | ಮೊದಕ್ಕರರು | ರಾಮಸ್ವಾಮಿ | ಬೆನ್ನಳಿ | ಬಲಬೂಜ | ಮಂತ್ರಿಗಳು | ಒಂದೇಲಿ | ಬಾಧಲಿ | ಸಗರ | ಸಕ್ಕರೆ | ಸಂಪಿಗೆ |
|---|---|---|---|---|---|---|---|---|---|---|---|---|---|---|---|---|
| ಸಕ್ಕಾಂಕ್ಷಿಯವರು | | • | • | • | • | | • | | • | | • | | | •• | • | • |
| ಆದೇಲಿಯವರು | | | | | | | | | | | | | | •• | • | • |
| ಓನ್‌ಪತ್ತಾರ್ | | | | | | | | | | | | | | • | •• | • |
| ಮೊಳಿಲಾರ್ | •• | •• | • | | • | | • | • | | | | | | • | • | ••• |
| ಓನ್ನೇರು | | | | | | | | | | | | | | •• | • | • |
| ಬಾಗಲೇರು | | | | | | | | | | | | | | • | • | • |
| ಮೊದಕ್ಕರರು | | | | | | | | | | | | | | ••• | ••• | ••• |
| ರಾಮಸ್ವಾಮಿಗಳು | • | • | • | | | | | | | | | | | •• | •• | •• |
| ಬೆನ್ನಳಿಯವರು | | | | | | | | | | | | | | •• | • | • |
| ಬಿಲಬೂಜ | | | | | | | | | | | | | | •• | • | • |
| ಮಂತ್ರಿಗಳು | • | • | • | • | • | • | • | • | | | | | | ••• | • | • |
| ಒಂದೇಲಿಯವರು | | | | | | | | | | | | | | •• | • | • |
| ಬಾಧಲಿಯವರು | | | | | | | | | | | | | | • | • | • |
| ಸಗರ | ••• | •• | • | •• | • | • | • | • | • | • | • | • | • | | ••• | ••• |
| ಸಕ್ಕರೆ | ••••• | ••• | •• | • | • | • | • | • | • | • | • | • | • | • | | •••• |
| ಸಂಪಿಗೆ | •••• | ••• | •• | • | • | • | • | • | • | • | • | •• | • | • | •• | |

ಉಪ್ಪಾರ ಜನಾಂಗದಲ್ಲಿ ಬೆಡಗುಗಳ ಅಂತ್ಯಕ್ಷಿ

ಜನ ಸೇರಿಕೊಂಡು ದಾರಿ ಶಕುನ ನೋಡಿ ಹೊರಡುತ್ತಾರೆ. ಹೀಗೆ ಹೊರಡುವ ಮೊದಲೇ ಹುಡುಗಿಯ ಮನೆಯವರಿಗೆ ತಿಳಿಸಿರುತ್ತಾರೆ. ಇವರ ಬರುವಿಕೆಯನ್ನು ಎದುರು ನೋಡುತ್ತಿರುತ್ತಾರೆ. ಹೆಣ್ಣು ನೋಡಲು ಬಂದ ವ್ಯಕ್ತಿಗಳಿಗೆ ಕಾಲು ತೊಳೆಯಲು ನೀರು ಕೊಟ್ಟು ನಂತರ ಒಳಗೆ ಬರಮಾಡಿಕೊಂಡು ಕುಡಿಯಲು ನೀರು ಕೊಟ್ಟು ಸತ್ಕರಿಸುತ್ತಾರೆ. ಅನಂತರ ಹುಡುಗಿಯನ್ನು ಅಲಂಕರಿಸಿ ಅವಳಿಂದಲೇ ಕಾಫಿ, ತಿಂಡಿ, ಊಟ ಕೊಡಿಸುತ್ತಾರೆ. ಬಂದವರು ಸತ್ಕಾರಗಳನ್ನು ಸ್ವೀಕರಿಸಿ ಹುಡುಗಿ ಒಪ್ಪಿಗೆಯಾದರೆ ಹೆಣ್ಣಿನ ಮನೆಯವರನ್ನು ತಮ್ಮ ಮನೆಗೆ ಬರಲು ಹೇಳಿ ತಮ್ಮ ಊರಿಗೆ ಹೊರಡುತ್ತಾರೆ. ಹುಡುಗಿ ಇಷ್ಟ ಆಗದೇ ಇದ್ದರೆ ಅದನ್ನು ನೇರವಾಗಿ ತಿಳಿಸದೇ ಊರಿಗೆ ಹೋದನಂತರ ಹೇಳಿಕಳುಹಿಸುತ್ತೇವೆ ಎನ್ನುತ್ತಾರೆ.

ಹೆಣ್ಣನ್ನು ಪರೀಕ್ಷೆ ಮಾಡಿ ನೋಡಿದಂತೆ ಗಂಡನ್ನು ನೋಡುವುದಿಲ್ಲ. ಗಂಡಿನ ಮನೆ, ತಂದೆ, ತಾಯಿ , ಆಸ್ತಿ, ಕೆಲಸ ಇವುಗಳನಷ್ಟೇ ಕೇಳಿತಿಳಿದು ಕೊಳ್ಳುತ್ತಾರೆ. ಹೀಗೆ ಇಬ್ಬರ ಮನಸ್ಸಿಗೆ ಬಂದರೆ ಹೆಸರುಗಳಿಗೆ 'ಸಲಾವಳಿ' ಬರುತ್ತದೆಯೋ ಎಂದು ತಿಳಿದುಕೊಳ್ಳಲು ಊರ ಪುರೋಹಿತರ ಬಳಿಗೆ ಗಂಡಿನವರು ಮತ್ತು ಹೆಣ್ಣಿನರಿಬ್ಬರೂ ಕೂಡಿ ಹೋಗುತ್ತಾರೆ.

**ಸಾಲಾವಳಿ:** ಗಂಡು ಹೆಣ್ಣು ಈ ಹೆಸರುಗಳ ಮೊದಲಕ್ಷರಗಳು ಸಂಕೇತಿಸುವ ನಕ್ಷತ್ರಗಳು ಒಂದು ಗೂಡುತ್ತವೆಯೇ ಇಲ್ಲವೊ ಎಂಬುದನ್ನು ನೋಡುವುದೇ ಸಾಲಾವಳಿ * ಹೀಗೆ ಸಾಲಾವಳಿ ಬಂದರೆ ಗಂಡಿನ ಅಕ್ಕ ತಂಗಿ ಮತ್ತು ಸಂಬಂಧಿಕ ಹೆಂಗಸರು ಅರಿಶಿಣ-ಕುಂಕುಮ ಹೂ, ಹಣ್ಣು ಎಲೆ, ಅಡಿಕೆ ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗಿ ಅವರ ಆತಿಥ್ಯವನ್ನು ಸ್ವೀಕರಿಸುತ್ತಾರೆ. ಸಾಲಾವಳಿಯನ್ನು ಊರಿನ ಪುರೋಹಿತ ನೋಡಿ ತಿಳಿಸುತ್ತಾನೆ. ಶಿವಮೊಗ್ಗ ಚಿತ್ರದುರ್ಗಗಳಲ್ಲಿ ದೇವರಲ್ಲಿ ಹೂ ಕೇಳುವ ಪದ್ಧತಿ ಕಂಡು ಬರುತ್ತದೆ. ಗಂಡುಹೆಣ್ಣಿನವರು ದೇವರ ಗುಡಿಗೆ ಹೋಗಿ ಭಕ್ತಿಯಿಂದ "ಸಂಬಂಧ ಕೂಡುವುದಾದರೆ ಹೂ ಬಲಕ್ಕೆ ಬೀಳಲಿ" ಎನ್ನುತ್ತಾರೆ. ಬಲಕ್ಕೆ ಹೂವು ಬಿದ್ದರೆ ಸಂಬಂಧ ಬೆಳೆಸುತ್ತಾರೆ. ಇಲ್ಲವಾದರೆ ಇಲ್ಲ. ಇಷ್ಟೆಲ್ಲ ಆದನಂತರ 'ತಾರಾಬಲ' ನೋಡುವ ಪದ್ಧತಿಯೂ ಕೆಲವೆಡೆ ಕಂಡು ಬರುತ್ತದೆ. ಹೆಣ್ಣು ಗಂಡಿನ ಜಾತಕವನ್ನು ಪುರೋಹಿತನಲ್ಲಿ ತೋರಿಸಿ ಗಣಕೂಟಗಳನ್ನು ಸರಿಹೊಂದುತ್ತವೊ ಇಲ್ಲವೋ ಎಂದು ನೋಡಿ; ನಂತರ ಸಂಬಂಧ ಒಪ್ಪಿಕೊಳ್ಳುವ ಪದ್ಧತಿ ಇವೆಲ್ಲವೂ ಹೆಣ್ಣು ಗಂಡಿನ ಸಂಬಂಧವನ್ನು ಬೆಸೆಯುವಾಗ ಮೊದಲು ನಡೆಸುವಂತಹವು. ಇದಾದನಂತರ ಹೆಣ್ಣನ್ನು ಒಪ್ಪಿಕೊಂಡು ಬರುವ ಕಾರ್ಯ ನಡೆಯುತ್ತದೆ.

**ನಿಶ್ಚಿತಾರ್ಥ:** ಇದನ್ನು ಉಪ್ಪಾರರು ಎರಡು ಬಗೆಯಲ್ಲಿ ಮಾಡುತ್ತಾರೆ. ಮೊದಲು ಚಿಕ್ಕ ಇಳ್ಯಾ ನಡೆಯುತ್ತದೆ. ಅನಂತರ ದೊಡ್ಡ ಇಳ್ಯಾ ನಡೆಯುತ್ತದೆ. ಚಿಕ್ಕ ಇಳ್ಯಾವನ್ನು ಹೆಣ್ಣಿನ ಮನೆಯಲ್ಲಿ ನಡೆಸುತ್ತಾರೆ. ಗಂಡಿನ ಮನೆಯಿಂದ ಮುತ್ತೈದೆಯರಲ್ಲಿ ಹೂ, ಹಣ್ಣು ಕಾಯಿ , ಅರಿಶಿಣ ಕುಂಕುಮ, ಎಲೆ, ಅಡಿಕೆ, ಸೀರೆ

ಕುಪ್ಪಸಗಳನ್ನು ತೆಗೆದು ಕೊಂಡು ಹೋಗಿ ಹೆಣ್ಣಿಗೆ ಅಲಂಕರಿಸಿ ಮಡಿಲು ತುಂಬುತ್ತಾರೆ. ಮುಂದೆ ನಡೆಯುವ ದೊಡ್ಡ ಇಳ್ಯಾದ ದಿನವನ್ನು ಹೇಳಿ, ಅಂದು ತಮಗೆ ಬರಬೇಕಾದ ದಕ್ಷಿಣೆಗಳ ಬಗ್ಗೆ ಮಾತನಾಡಿ ಬರುತ್ತಾರೆ. ಈ ಸಮಾರಂಭಕ್ಕೆ ಸಂಬಂಧಿಕರು ರಕ್ತ ಸಂಬಂಧಿಗಳೂ ಸೇರಿಸುತ್ತಾರೆ. ಈ ಸಂತೋಷದ ಸಮಾರಂಭದಲ್ಲಿ ಅಲ್ಲಿ ಸೇರಿದ ಎಲ್ಲರಿಗೂ ಊಟದ್ದವಿರುತ್ತದೆ. ಇದು ಗಂಡಿನ ಕಡೆಯವರು ಹೆಣ್ಣು ಒಪ್ಪಿಸಿ ಬರುವ ಶಾಸ್ತ್ರವಾದ ಕ್ರಮ "Then the match is settled by the ceremony of Vityada Sastra, when the father of the boy accompanied by some friends, goes to the girls house"[The Mysore Tribes and Castes Vol. IV 644].

**ದೊಡ್ಡ ಇಳ್ಯ:** ಎರಡು ಕಡೆಯ ಕುಲಬಾಂಧವರು ಈ ಸಮಾರಂಭದಲ್ಲಿ ಸೇರುತ್ತಾರೆ. ಸಣ್ಣ ಇಳ್ಯಾದಲ್ಲಿ ಕೊಡುವ ತೆಗೆದು ಕೊಳ್ಳುವ ಮಾತುಕತೆ ನಡೆದರೆ ಇಲ್ಲಿ ತಮಗೆ ಬೇಕಾದನ್ನು ತೆಗೆದುಕೊಂಡು ಕೊಡ ಬೇಕಾದದ್ದನ್ನು ಕೊಡುತ್ತಾರೆ. ಚಿಕ್ಕ ಇಳ್ಯಾದಲ್ಲಿ ಗೊತ್ತುಮಾಡಿದ ದಿನಾಂಕದಂದು ಐದು ಜನ ಮುತ್ತೈದೆಯರು ಸೇರಿದಂತೆ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಮಡಿಲು ತುಂಬುವ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. When the father of the boy accompanied by some friends, goes to the girls house, with turmeric, kunkuma, coconuts and other things and presents her with a sari and a bodice cloth and sometimes a jewel" (ಅದೇ. 644). ತಾವು ತಂದ ವಸ್ತುಗಳನ್ನು ಮಡಿಲು ತುಂಬಿ ಕಾರ್ಯಕ್ರಮವನ್ನು ಆರಂಭಿಸುತ್ತಾರೆ. ಹುಡುಗ ತಂದು ಬಂಗಾರದ ಉಂಗುರವನ್ನು ಹುಡುಗಿಗೆ ಹಾಕುತ್ತಾನೆ. ಪರಸ್ಪರರು ಹೂಮಾಲೆಗಳನ್ನು ಹಾಕಿಕೊಳ್ಳುತ್ತಾರೆ. ಇವೆಲ್ಲವೂ ರಾಗಿ, ಅಕ್ಕಿ ಮೇಲೆ ಇಟ್ಟ ಕಳಸದ ಎದುರೇ ನಡೆಯುತ್ತವೆ. ಹುಡುಗಿಯ ತನ್ನ ಗಂಡನಾಗುವವನಿಗೆ ಉಂಗುರವನ್ನೊ ಸರವನ್ನೊ ಹಾಕುತ್ತಾಳೆ. ಇದು ಒಂದು ರೀತಿಯಲ್ಲಿ ಚಿಕ್ಕ ಮರಿ ಮದುವೆಯಾಗಿಯೇ ನಡೆಯುತ್ತದೆ. ದೊಡ್ಡ ಇಳ್ಯಾದ ನಂತರ ಸಂಬಂಧ ವನ್ನು ಮುರಿಯುವಂತಿಲ್ಲ. ಹೆಣ್ಣಿನ ಮನೆಗೆ ಬಂದ ಗಂಡಿನ ಕಡೆಯ ಹೆಣ್ಣುಮಕ್ಕಳು ಹೆಣ್ಣನ್ನು ಜಗುಲಿಗೆ ಕರೆದು ಅವಳಿಗೆ ವಿವಿಧ ಆಭರಣ ಮಾಡಿಸಲು ಅಳತೆ ತೆಗೆದುಕೊಳ್ಳುತ್ತಾರೆ. ಈ ಕಾರ್ಯ ನಡೆಯುವಾಗ ಉದ್ದಕ್ಕೂ ಹಾಡನ್ನು ಹೇಳುತ್ತಾರೆ.

ಗಂಡಿನವರಿಗೆ ಕೊಡಬೇಕಾದುದನ್ನು ವೀಳ್ಯದೆಲೆ ಅಡಿಕೆ ಜೊತೆ ಇಟ್ಟು ಸಮಸ್ತರ ಎದುರು ಕೊಡುತ್ತಾರೆ. ಇಲ್ಲಿಗೆ ಈ ಕಾರ್ಯ ಮುಗಿಯುತ್ತದೆ. ಸಂತೋಷದ ಸಮಾರಂಭಕ್ಕಾಗಿ ಅಲ್ಲಿ ನೆರೆದವರಿಗೆಲ್ಲ ಸಿಹಿಯಿರುತ್ತದೆ.

**ಲಗ್ನಪತ್ರಿಕೆ**: ಈ ದಿನವನ್ನು 'ಲಕ್ಷ್ಮಿಮಾಡುವುದು' ಎಂದು ಕರೆಯುತ್ತಾರೆ. ಇದು ಮದುವೆಗೆ ಐದು ಅಥವಾ ಎಂಟು ದಿನಗಳ ಮೊದಲು ಜರುಗುತ್ತದೆ. ಹೆಣ್ಣು ಮತ್ತು ಗಂಡಿನ ಕಡೆಯ ಹಿರಿಯರು ಹೆಣ್ಣಿನ ಮನೆಯಲ್ಲಿ ಸೇರಿ ಪುರೋಹಿತರಿಂದ ಲಗ್ನಪತ್ರಿಕೆ ಬರೆಸುತ್ತಾರೆ. ಪುರೋಹಿತರು ಶುಭಮುಹೂರ್ತದಲ್ಲಿ ಮದುವೆ ಪತ್ರಿಕೆ ಬರೆದು ಕೊಡುತ್ತಾರೆ. ಹಾಗೆ ಮಾಡುವ ಮುನ್ನ ಆ ಪತ್ರಿಕೆಯ ನಾಲ್ಕು ಮೂಲೆಗಳಿಗೆ ಅರಿಶಿಣ ಕುಂಕುಮ ಹಚ್ಚಿ ಮಂತ್ರ ಹೇಳುತ್ತಾರೆ. ಒಮ್ಮೆ 'ಲಗ್ನ ಪತ್ರಿಕೆ' ಬರೆಯಿಸಿದ ನಂತರ ಗಂಡಿನವರಾಗಲಿ ಹೆಣ್ಣಿನವರಾಗಲಿ ಆ ಸಂಬಂಧವನ್ನು ಬಿಡುವಂತಿಲ್ಲ.

ಲಕ್ಷ್ಮಿ ಫೋಟೊಕ್ಕೆ ಎಡೆ ಸಲ್ಲಿಸಿ ಪೂಜಿಸುತ್ತಾರೆ. ಹೀಗೆ ಎಡೆಯಾದ ಪ್ರಸಾದವನ್ನು ಸೇವಿಸಿದ ಐದು ಮಂದಿ ಅಂದು ರಾತ್ರಿ ಮನೆಯ ಹೊರಗೆ ಹೋಗುವಂತಿಲ್ಲ. ಹಾಗೆ ಹೋದರೆ ಅದೃಷ್ಟ ಲಕ್ಷ್ಮಿ ಮನೆ ಬಿಟ್ಟು ಹೋಗುತ್ತಾಳೆ ಎನ್ನುವ ನಂಬಿಕೆ ಇದೆ. ನಂತರ ಪುರೋಹಿತರಿಂದ ಪಡೆದ ಹಸ್ತಪತ್ರಿಕೆಯನ್ನು ಪ್ರಿಂಟ್ ಮಾಡಿಸುತ್ತಾರೆ.

**ಮದುವೆ ಕರೆ** : ಅಚ್ಚಾದ ಲಗ್ನ ಪತ್ರಿಕೆಗಳನ್ನು ಮನೆಗೆ ತಂದು ದೇವರ ಎದುರು ಇಟ್ಟು ಪೂಜಿಸುತ್ತಾರೆ. ಅನಂತರ ಪ್ರತಿಯೊಂದಕ್ಕೂ ಅರಿಶಿಣ ಕುಂಕುಮವನ್ನು ಹಚ್ಚುತ್ತಾರೆ. ಹೀಗೆ ಸಿದ್ಧವಾದ ಪತ್ರಿಕೆಗಳನ್ನು ಸಂಬಂಧಿಕರಿಗೆ ಕಳುಹಿಸಿಕೊಡುತ್ತಾರೆ. ಅನಂತರ ಹತ್ತಿರದ ಬಂಧುಗಳನ್ನು ತಂದೆ ತಾಯಿಗಳೇ ಮನೆ ಮನೆಗೆ ಹೋಗಿ ಕೈ ಜೋಡಿಸಿ ನಿಂತು ಮದುವೆಗೆ ಬನ್ನಿ ಎಂದು ಹೇಳಿ ಪತ್ರಿಕೆ ಕೊಡುತ್ತಾರೆ. ಊರಿನವರಿಗೆ ಎಣ್ಣೆ ಬೀರುವ ಮೂಲಕ ಇನ್ನೂ ಆತ್ಮೀಯವಾಗಿ ಕರೆಯುತ್ತಾರೆ. ಇದು ಚಪ್ಪರದ ದಿನ ನಡೆಯುತ್ತದೆ. ಈ ಮದುವೆಯ ಕರೆಯನ್ನು ಹುಡುಗ ಮತ್ತು ಹುಡುಗಿಯರು ಮಾಡುತ್ತಾರೆ.

**ಹಿರಿಯರ ಪೂಜೆ**: ಲಕ್ಷ್ಮಿಪೂಜೆಯಾದ ಮೂರನೆಯ ದಿನ ಸಂಜೆ ಈ ಪೂಜೆ ನಡೆಯುತ್ತದೆ. ಮನೆಯ ಮಧ್ಯದಲ್ಲಿ ಪಿತೃಗಳಿಗೆ ಎಡೆಮಾಡಿ, ಮದುವೆಗೆ ತಂದ ಹೊಸಬಟ್ಟೆಗಳನ್ನು ಇಟ್ಟು, ಭಕ್ತಿಯಿಂದ ಪೂಜಿಸುತ್ತಾರೆ. ಈ ಕಾರ್ಯಕ್ರಮ ಗಂಡು ಮತ್ತು ಹೆಣ್ಣಿನ ಮನೆಗಳಲ್ಲಿ ನಡೆಯುತ್ತದೆ. ಹೀಗೆ ಪೂಜೆ ಸಲ್ಲಿಸದೇ ಇದ್ದರೆ ಮದುವೆಯಲ್ಲಿ ವಿಘ್ನವಾಗುತ್ತದೆ ಎಂದು ಬಲವಾಗಿ ನಂಬುತ್ತಾರೆ. ಈ ದಿನ ಹೆಚ್ಚಾಗಿ ಮಾಂಸದ ಎಡೆಯನ್ನು ಮಾಡುತ್ತಾರೆ. ಈ ದಿನವೂ ಬಂಧುಗಳು ಸೇರಿರುತ್ತಾರೆ.

ಮದುವೆ ಗೊತ್ತಾದ ದಿನದಿಂದ ಇವರಲ್ಲಿ ಒಂದಲ್ಲ ಒಂದು ಆಚರಣೆಗಳು ನಡೆಯುತ್ತಲೇ ಇರುತ್ತವೆ. ಮದುವೆ ದಿನ ಸಮೀಪ ಬರುತ್ತಿರುವಾಗ ಆಚರಣೆ ಸಂಪ್ರದಾಯಗಳು ಹೆಚ್ಚಾಗಿರುತ್ತವೆ.

**ಹಂದರ:** ಮನೆಯ ಮುಂದೆ ಶಾಸ್ತ್ರಕ್ಕಾಗಿ ಹಾಕುವ ಚಪ್ಪರಕ್ಕೆ ಹಂದರ ಎಂದು ಕರೆಯುತ್ತಾರೆ. ಇದನ್ನು ಊರಿನವರ ಸಹಾಯದಿಂದ ಹಾಕುತ್ತಾರೆ. ಮದುವೆ ಧಾರೆ ಎಲ್ಲಿ ನಡೆಯುತ್ತದೋ ಆ ಮನೆಯ ಮುಂದೆ ದೊಡ್ಡದಾದ ಚಪ್ಪರ ಹಾಕುತ್ತಾರೆ. ಹೆಚ್ಚಾಗಿ ಧಾರೆ ಗಂಡಿನ ಮನೆಯ ಮುಂದೆ ನಡೆಯುತ್ತದೆ. ಹೆಣ್ಣಿನ ಮನೆಯ ಮುಂದೆಯು ಚಪ್ಪರ ಹಾಕುವ ಸಂಪ್ರದಾಯವಿದೆ. ಚಪ್ಪರದ ಕಂಬ ಕಂಬಗಳಿಗೂ ಮಾವಿನ ತಳಿರುತೋರಣಗಳಿಂದ ಅಲಂಕರಿಸಿ, ಚಪ್ಪರಕ್ಕೆ ಮಾವಿನ ಸೊಪ್ಪನ್ನು ತೂಗಿ ಬಿಡುತ್ತಾರೆ. ಮನೆಯ ಬಾಗಿಲುಗಳಿಗೆ ತೆಂಗಿನ ಗರಿಯನ್ನು ಕಟ್ಟಿ ಅಲಂಕರಿಸುತ್ತಾರೆ. ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಮಾವಿನ ಸೊಪ್ಪಿನ ದೊಡ್ಡ ಬಾಗಿಲನ್ನೇ ಕಟ್ಟುವ ಕ್ರಮ ಕಂಡು ಬಂದಿದೆ. ಅಂಗಳ ಮತ್ತು ಮನೆಯ ಸುತ್ತಲು ಸಗಣಿಯಿಂದ ಸಾರಿಸುತ್ತಾರೆ. ಅಂಗಳದ ಮಧ್ಯಭಾಗದಲ್ಲಿ ನಾಲ್ಕು ಕಂಬ ನೆಟ್ಟು,ಮಂಟಪ ನಿರ್ಮಿಸಿ ಅಲಂಕಾರ ಮಾಡುತ್ತಾರೆ. ಕೆಲವೆಡೆ ಈ ಮಂಟಪ ಕಂಡು ಬರುವುದಿಲ್ಲ. ಒಟ್ಟಿನಲ್ಲಿ ಮದುವೆಯ ಎಲ್ಲಾ ಕಾರ್ಯಕ್ರಮಗಳೂ ಚಪ್ಪರದ ಅಡಿಯಲ್ಲಿಯೇ ನಡೆಯುತ್ತವೆ. ಅವರು ದಿನನಿತ್ಯ ಬಳಸುತ್ತಿದ್ದ ಸ್ಥಳವನ್ನು ಆ ದಿನ ಪವಿತ್ರಗೊಳಿಸಿ ಒಂದು ದೈವತ್ವವನ್ನಾಗಿ ಮಾಡುತ್ತಾರೆ. ಮದುಮಗನೊಬ್ಬ ನಾಲ್ಕು ಹಾಲು ಬರುವ ಗಿಡದ ಸಣ್ಣ ಕರುಗಳನ್ನು ಚಪ್ಪರದ ಅಡಿಯಲ್ಲಿ ನಿಲ್ಲಿಸಲು ವ್ಯವಸ್ಥೆ ಮಾಡಿರುತ್ತಾನೆ. "The second day is styled chappara of devaruta. This day the marriage pandal is erected on 12 pillars, with a Halukanbha ariveri pots are wrought and installed in the house. A party of married women proceed to a river, and after worshipping Ganga, bring water styled sastrada Niru (ceremonial water) and use it for preparing food that day (ಅದೇ. 644). ಆ ಕಂಭಗಳನ್ನು ಮದುವೆಯಾಗುವ ಹೆಣ್ಣು/ಗಂಡು ಗಳಿಂದ ನಿಲ್ಲಿಸುತ್ತಾರೆ. ಹೀಗೆ ಮಾಡುವಾಗ ಕುಣಿಯಲ್ಲಿ ಲೋಹ, ಹಾಲು ಅರಿಶಿಣ ಕುಂಕುಮ ಹಾಕುವ ಸಂಪ್ರದಾಯವಿದೆ. ಹೀಗೆ ಮದುಮಗ ನೆಡುವ ಕಂಬಕ್ಕೆ ಹಾಲುಕಂಬದ ಶಾಸ್ತ್ರ ಎಂದು ಕರೆಯುತ್ತಾರೆ. ಸಂಜೆ ಮದುಮಗ/ಮದುಮಗಳಿಗೆ ಅರಿಶಿಣವನ್ನು ಹಚ್ಚಿ ಸ್ನಾನಮಾಡಿಸುವ ಜಕಳಿ ಮಾಡುವ ಅಥವ ಅದರ ಸ್ನಾನದ ಶಾಸ್ತ್ರಗಳು ನಡೆಯುತ್ತವೆ. ಇಲ್ಲಿ ನಡೆಯುವ ಎಲ್ಲ ಶಾಸ್ತ್ರಗಳನ್ನು ಸೇರಿಸಿ ಚಪ್ಪರ ಶಾಸ್ತ್ರ ಅಥವಾ ದೇವರೂಟ ಎಂದು ಕರೆಯುತ್ತಾರೆ. ಮದುವೆಯ ಹಿಂದಿನ ನಡೆಯುವ ಈ ಸಮಾರಂಭಕ್ಕೆ ಎಲ್ಲರೂ ಬಂದಿರುತ್ತಾರೆ. ಬಂದ ನಂಟರು, ಬಂಧುಗಳು ಆಪ್ತರಿಗೆ ಊಟದ ವ್ಯವಸ್ಥೆ ಇರುತ್ತದೆ.

ನಿತ್ಯ ಉಪಯೋಗಿಸುತ್ತಿದ್ದ ಅಂಗಳ, ಚಪ್ಪರ ಹಾಕಿದ್ದರಿಂದ ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತಾರೆ. ಚಪ್ಪರ ಹಾಕುವುದರ ಮೂಲಕ ಆ ಪ್ರದೇಶವನ್ನು ಅಸಾಮಾನ್ಯ ಪ್ರದೇಶವನ್ನಾಗಿ ಮಾಡಿ ಅದಕ್ಕೆ ದೈವತ್ವವನ್ನು ಕಲ್ಪಿಸುತ್ತಾರೆ. ಇದು ಒಂದು ಮಹತ್ವವನ್ನು ಹೇಳಿದರೆ, ಚಪ್ಪರ ಶುಭಕಾರ್ಯ

ಸಂಕೇತವಾಗಿಯೂ ಅಲ್ಲಿ ಮದುವೆ ನಡೆಯುವುದೆಂದು ತಿಳಿಸುವ ಮಾಧ್ಯಮವಾಗಿರುತ್ತದೆ. ಇಷ್ಟೆಲ್ಲ ಇದ್ದರೂ ಅದರ ಮುಖ್ಯ ಉದ್ದೇಶ ನೆರಳಿಗಾಯೇ.

**ಸೇಶಿಕಟ್ಟೆ:** ಸಾಲಾವಳಿಗೆ ಬಂದ ಐದು ಜನ ಐದುಗಿತ್ತಿಯರು ಚಪ್ಪರದ ದಿವಸ ಸಂಜೆ ಹುತ್ತಕ್ಕೆ ಹಾಲು ಎರೆದು, ಪೂಜೆ ಮಾಡಿದ ನಂತರ ಹುತ್ತಿನ ಮಣ್ಣನ್ನು ಮನೆಗೆ ತರುತ್ತಾರೆ. ಇಲ್ಲಿ ಬಂಜೆಯರು ಮತ್ತು ವಿಧವೆಯರು ಭಾಗವಹಿಸುವಂತಿಲ್ಲ, ಬಾವಿಯಿಂದ ತಂದ ಹೊಸ ನೀರಿನಿಂದ ಹುತ್ತದ ಮಣ್ಣನ್ನು ಚೆನ್ನಾಗಿ ಕಲಸಿ ಮನೆಯ ಮುಂದಿನ ಗೋಡೆಗೆ ತಾಗಿದಂತೆ ಒಂದು ಅಡಿ ಎತ್ತರದ ನಾಲ್ಕು ಜನ ಕುಳಿತುಕೊಳ್ಳಲು ಸಾಧ್ಯವಾಗುವಂತೆ ಒಂದು ಮಣ್ಣಿನ ವೇದಿಕೆಯನ್ನು ನಿರ್ಮಿಸುತ್ತಾರೆ. ಈ ವೇದಿಕೆಯ ಹಿಂಭಾಗದ ಗೋಡೆಯ ಮೇಲೆ ಎರಡು ಚಿತ್ರಗಳನ್ನು ಬರೆದಿರುತ್ತಾರೆ. ವದೂವರರನ್ನು ಚಿತ್ರಗಳ ಕೆಳಗೆ ವಧುವರರು ಮದುವೆಯ ದಿನ ಕುಳಿತುಕೊಳ್ಳುತ್ತಾರೆ.

**ಎಣ್ಣೆಬೀರುವುದು:**ಚಪ್ಪರದ ರಾತ್ರಿ ಐದುಗಿತ್ತಿಯರು ಮತ್ತು ಆಪ್ತ ಬಂಧುಗಳು ಊರಿನ ದೇವಸ್ಥಾನಗಳ ಕಡೆ ಹಣತೆಗಳನ್ನು ಹಿಡಿದು ಮೆರವಣಿಗೆ ಹೋಗುತ್ತಾರೆ. ಪ್ರತಿದೇವಸ್ಥಾನಗಳ ಗರ್ಭಗುಡಿಗಳ ಮುಂದೆ ತಮ್ಮಲ್ಲಿದ್ದ ಮಣ್ಣಿನ ಹಣತೆ ಇದ್ದು ದೀಪಹಚ್ಚಿದ 'ಮದುವೆ ಯಾವ ವಿಘ್ನವಾಗದೇ ನಡೆಯಲಿ' ಎಂದು ಬೇಟಿಗೊಳ್ಳುತ್ತಾರೆ.

ಹೀಗೆ ದೇವಸ್ಥಾನಗಳಿಗೆ ಎಣ್ಣೆಬೀರಿದ ನಂತರ ಊರಿನ ಪ್ರತಿಮನೆಗೂ ಹೋಗಿ ದೇವರ ದೀಪಕೊಟ್ಟು ಅವರ ಹಣತೆಗೆ ಎಣ್ಣೆ ಹಾಕಿ ಪ್ರೀತಿಯಿಂದ 'ಮದುವೆಗೆ ಬರಬೇಕು' ಎಂದು ವಿನಂತಿಸಿಕೊಳ್ಳುತ್ತಾರೆ. ಹೀಗೆ ಪರಸ್ಪರ ಎಣ್ಣೆ ಎರೆದುಕೊಳ್ಳುವಾಗ ಮಧ್ಯ ದೀಪದ 'ಸಾಕ್ಷಿ' ಇರುವುದರಿಂದ ಇದಕ್ಕೆ ಎಣ್ಣೆ ಬೀರುವುದೆಂದು ಕರೆಯುತ್ತಾರೆ. ಊರಿನವರಿಗೆ ಹೀಗೆ ಗೌರವದಿಂದ ಕರೆಯದೇ ಲಗ್ನ ಪತ್ರಿಕೆ ಕಳುಹಿಸಿದರೆ ಮದುವೆಗೆ ಬರುವುದಿಲ್ಲ.

**ಬಿಡದಿ ಮನೆ:**ಹೆಣ್ಣಿನ ಕಡೆಯವರು ಗಂಡನ ಮನೆಗೆ ಒಂದು ದಿನ ಮೊದಲೇ ಬರುತ್ತಾರೆ. ಹೊರಡುವಾಗ ಹಾದಿ ಶಕುನ ನೋಡಿ ಹೊರಡುತ್ತಾರೆ. ಹೀಗೆ ಬಂದವರು, ಮದುವೆಗೆ ಮುಂಚಿತವಾಗಿ ಗಂಡಿನ ಮನೆಗೆ ಬರುವಂತಿಲ್ಲ. ಆದ್ದರಿಂದ ಊರಿನ ದೇವಸ್ಥಾನದಲ್ಲಿ ಇದ್ದು ಗಂಡಿನಮನೆಯ ಹಿರಿಯರ ಕರೆಯ ಮೇರೆಗೆ ತಮಗಾಗಿಯೇ ಬಿಟ್ಟುಕೊಟ್ಟ ಕೊಠಡಿಗೆ ಬರುತ್ತಾರೆ. ಈ ಕೊಠಡಿಯು ಮನೆಯಿಂದ ಹೊರಗೆ ಇರುತ್ತದೆ. ಇದಕ್ಕೆ 'ಬಿಡದಿ ಮನೆ' ಎಂದು ಕರೆಯುತ್ತಾರೆ. ಹೆಣ್ಣಿನ ಅಲಂಕಾರ ಮತ್ತು ಇತರ ಶಾಸ್ತ್ರಗಳು ನಡೆಯುತ್ತವೆ. ಚಪ್ಪರದ ಊಟದಲ್ಲಿ ಇವರ ಭಾಗವಹಿಸುವಂತಿಲ್ಲ. ಅವರಿಗೆ ಅಂದಿನ ಅಡುಗೆಯನ್ನು ಒಂದು ಬಿದಿರಿನ ಬುಟ್ಟಿಯಲ್ಲಿ ಕಳಿಸುತ್ತಾರೆ. ಇದಕ್ಕೆ 'ಮಸಿಯೂಟ' ವೆಂದು ಕರೆಯುತ್ತಾರೆ. ಅಂದು ಬದನೆಕಾಯಿ ಪಲ್ಯ ವಿಶೇಷವಾಗಿರುತ್ತದೆ. ಇದರ ಜೊತೆಗೆ ಕರಿಗಡಬು, ಸಾರು ಇರುತ್ತದೆ.

**ಕೋಲಾಟ:** ಆಪ್ತರು, ಬಂಧುಗಳು ಪ್ರೀತಿಯಿಂದ ಮಧುಮಕ್ಕಳನ್ನು ವರೋಪಚಾರದಿಂದ ಸತ್ಕರಿಸುತ್ತಾರೆ. ಇದು ಮದುವೆ ನಿಶ್ಚಿತವಾದ ದಿನದಿಂದ ಚಪ್ಪರದ ದಿನದ ವರೆಗೆ ನಡೆಯುತ್ತದೆ. ಆ ದಿನಗಳೆಲ್ಲ ಅವರಿಗೆ ಮಾಂಸದ ಊಟ ಹಾಕುತ್ತಾರೆ. ಒಳ್ಳೆಯ ಗೌರವದಿಂದ ನಡೆಸಿಕೊಳ್ಳುತ್ತಾರೆ. ಮದುವೆ ಗೊತ್ತಾದ ದಿನದಿಂದಲೇ ಆ ವ್ಯಕ್ತಿಯನ್ನು ಸಮೂಹದಿಂದ ಬೇರೆಯಾಗಿ ನೋಡುತ್ತಾರೆ. ಮದುವೆಗೆ ಮಹತ್ವವಿರುವುದರಿಂದಲೇ ಹೀಗೆ ನಡೆಸಿಕೊಳ್ಳುವವನ ಬದುಕು ಸಾರ್ಥಕವಾಗುತ್ತದೆ. ಎನ್ನುವ ಕಲ್ಪನೆ ಅವರಲ್ಲಿದೆ. ಊಟದ ನಂತರ ಮದುಮಗ/ ಮಗಳನ್ನು ಅವರರವರ ಮನೆಗೆ ಜೋಪಾನವಾಗಿ ಕಳುಹಿಸಿ ಬರುತ್ತಾರೆ.

**ಹಸೆಕಟ್ಟೆ** : ಇದನ್ನು ಹಸ್ತಗೋರೆ ಎಂತಲೂ ಕರೆಯುತ್ತಾರೆ. ಚಪ್ಪರದ ರಾತ್ರಿ ಮನೆಯ ಮಧ್ಯದ ಗೋಡೆಯಲ್ಲಿ ಬರೆಯುವ. ಚಿತ್ರವನ್ನು ನಿಪುಣ ಚಿತ್ರಗಾರನಿಂದ ಬರೆಯಿಸುತ್ತಾರೆ. ಹಾಗೆ ಬರೆಯಬೇಕಾದರೆ ಮದುಮಗನಿಂದ ಒಂದು ನೀರನ್ನು ಹಾಕಿಸುತ್ತಾರೆ. ಇದನ್ನು ಹೆಣ್ಣಿನ ಮನೆಯಲ್ಲಿಯೇ ಮಾಡುತ್ತಾರೆ. ಗೋಡೆಯಲ್ಲಿ ಎರಡು ಪ್ರತ್ಯೇಕವಾದ ಚಿತ್ರಗಳನ್ನು ಬರೆಯಲಾಗುವುದು.ಸೂರ್ಯ ಚಂದ್ರ, ಕಳಸ, ಹೆಣ್ಣುಮಕ್ಕಳ ತೆಗೆದ ಅನೇಕ ಚಿತ್ರಗಳಿರುತ್ತವೆ. ಮದುವೆಯ ನಂತರ ಹೆಣ್ಣುಗಂಡುಗಳನ್ನು ಆ ಚಿತ್ರದ ಕೆಳಗೆ ಕೂರಿಸಿ ಅಕ್ಷತೆ ಹಾಕುತ್ತಾರೆ. ಚಿತ್ರವನ್ನು ಬರೆದವನಿಗೆ ಕಾಯಿ, ಎಲೆ, ಅಡಿಕೆ ಕೊಡುತ್ತಾರೆ. ಇವರು ಬರೆಯುವ ಚಿತ್ರಗಳಲ್ಲಿ ಗಂಡು ಹೆಣ್ಣು ಸಂಕೇತಿಸುವ ಬಾಕು ಮತ್ತು ಚಂದ್ರನ ಗುರುತುಗಳು ಇರುತ್ತವೆ.

ಗಂಡು ಕೂರುವ ಸ್ಥಳದ ಚಿತ್ರದಲ್ಲಿ ಸೂರ್ಯ, ಲಿಂಗ, ಬಸವ, ಬಾಸಿಂಗ, ನಕ್ಷತ್ರಗಳು ಇದ್ದರೆ, ಹೆಣ್ಣಿನ ಕಡೆಯ ಚಿತ್ರದಲ್ಲಿ ಚಂದ್ರ, ಕಳಸವನ್ನು ಹೊತ್ತ ಮಹಿಳೆಯರು, ಹಂಸ ಪಕ್ಷಿಗಳು ಕಂಡು ಬರುತ್ತವೆ.

ಧಾರೆಯ ದಿನವನ್ನೇ ಇವರು ಮದುವೆ ಎಂದು ಕರೆಯುತ್ತಾರೆ. ಈ ಹಿಂದೆ ನಡೆದ ಕಾರ್ಯಕ್ರಮಗಳೆಲ್ಲ ಮದುವೆಯ ಹಿಂದಿನ ದಿನಗಳು ನಡೆಯುತ್ತವೆ. ಹೆಚ್ಚಿನ ಶಾಸ್ತ್ರಗಳು ಧಾರೆಯ ದಿನವೇ ನಡೆಯುತ್ತವೆ. ಇವುಗಳೆಲ್ಲ ಹೆಚ್ಚಾಗಿ ಗಂಡಿನ ಮನೆಯಲ್ಲಿ ನಡೆಯುತ್ತವೆ. ಮುಂಜಾನೆಯಿಂದಲೇ ಊರಿನ ಜನರೆಲ್ಲ ಮದುವೆಯ ಕಾರ್ಯಗಳಲ್ಲಿ ನೆರವು ನೀಡಲು ಸೇರುತ್ತಾರೆ. ಈ ಎಲ್ಲಾ ಕಾರ್ಯಗಳಲ್ಲೂ ಹಾಡುಗಾರ್ತಿಯರ ಹಾಡಿನ ಮಧುರ ರಾಗಾಲಾಪ ಕೇಳಿಬರುತ್ತದೆ. ಮದುವೆಗೆ ಬೇಕಾದ ಹೂ, ತೆಂಗಿನ ಕಾಯಿ, ವೀಳ್ಯದೆಲೆ, ಅಡಿಕೆ, ಬಾಳೆಯೆಲೆಯೆಲ್ಲಾ ಅಲ್ಲಲ್ಲಿ ತುಂಬಿ ಕೊಂಡಿರುತ್ತವೆ. ಅರಸಿನೆಣ್ಣೆಯ ಸಿದ್ಧತೆ ಒಂದು ಕಡೆಯಲ್ಲಿ ನಡೆದರೆ, ಇನ್ನೊಂದು ಕಡೆ ಚಪ್ಪರ ಸಿಂಗಾರ ಮತ್ತು ಆಸನಾದಿಗಳ ಸಿದ್ಧತೆ ನಡೆಯುತ್ತಿರುತ್ತದೆ. ಜೊತೆಗೆ ಅಡಿಗೆ ಸಿದ್ಧಗೊಳಿಸುವುದು, ಸಾರಣೆ ಕಾರಣೆಗಳ ಕೆಲಸ ಮುಂತಾದವುಗಳು ಭರದಿಂದ ನಡೆಯುತ್ತಲಿರುತ್ತವೆ. ನಸುಕಿನಲ್ಲಿಯೇ ಕುಂಬಾರ, ಕುಂಭಗಳನ್ನು ಬಾಸಿಂಗದವನ್ನೂ, ಬಾಸಿಂಗವನ್ನೂ, ಚಮ್ಮಾರನು ಚಪ್ಪಲಿಯನ್ನೂ ತಂದಿರುತ್ತಾರೆ.

ಇವುಗಳನ್ನೆಲ್ಲಾ ಶಾಸ್ತ್ರದಂತೆ ಐದು ಜನ ಐದುಗಿತ್ತಿಯರು ಅವರಿಗೆ ಕೊಡಬೇಕಾದ ಕಾಣಿಕೆ ಸಲ್ಲಿಸಿ ತರುತ್ತಾರೆ. ಇವರು ನಡೆಸುವ ಶಾಸ್ತ್ರಗಳನ್ನು ಕ್ರಮವಾಗಿ ಮುಂದೆ ವಿವರಿಸಿದೆ.

**ಐರಣಿಶಾಸ್ತ್ರ:** ಕುಂಬಾರನಿಂದ ಹೊಸ ಮಡಿಕೆಗಳನ್ನು ಶಾಸ್ತ್ರದಂತೆ ಪಡೆಯುವ ಆಚರಣೆಗೆ ಐರಣಿಶಾಸ್ತ್ರ ಎಂದು ಕರೆಯಲಾಗಿದೆ. ಮೊದಲೇ ತೀರ್ಮಾನಿಸಿದಂತೆ ಕುಂಬಾರ ಆ ಊರಿನ ದೇವರ ಗುಡಿ ಹತ್ತಿರ ತನ್ನ ಮಡಿಕೆಗಳ ಜೊತೆ ಕಾದಿರುತ್ತಾನೆ. ಊರಿನ ಹಿರಿಯರು, ಬಂಧುಗಳು, ಮುತ್ತೈದೆಯರು ಓಲಗದವರೊಡನೆ ಅಲ್ಲಿಗೆ ಹೋಗಿ ಅವನು ಇರಿಸಿದ್ದ ಮಡಿಕೆಗಳನ್ನು ಪೂಜಿಸಿ ನಂತರ ಅವನಿಗೆ ಕೊಡಬೇಕಾದ ಅಕ್ಕಿ ಭತ್ತ, ರಾಗಿ, ಎಲೆ, ಅಡಿಕೆ, ಹಣ, ಕಾಯಿ ಕೊಟ್ಟು ಮಡಿಕೆಗಳನ್ನು ತರುತ್ತಾರೆ.

ಕುಂಬಾರನಿಂದ ಐರಣಿ ತರುವಂತೆ ಬಾಸಿಂಗದವರಿಂದ ಬಾಸಿಂಗವನ್ನು, ಚಮ್ಮಾರನಿಂದ ಚಪ್ಪಲಿಯನ್ನು ತರುತ್ತಾರೆ. ಈ ಶಾಸ್ತ್ರದಲ್ಲಿ ಕಡ್ಡಾಯವಾಗಿ ಐದುಜನ ಸಾಲಾವಳಿ ತಂದ ಮುತ್ತೈದೆಯರು ಇರಲೇಬೇಕು. ಮದುವೆಯ ಎಲ್ಲಾ ಶಾಸ್ತ್ರಗಳು ಸಾಲಾವಳಿ ಮುತ್ತೈದೆಯರ ಮೂಲಕವೇ ನಡೆಯುತ್ತದೆ.

**ಗಂಗೆಪೂಜೆ:** ಮದುವೆಯ ದಿನ ಮುಂಜಾನೆ ಐದುಗಿತ್ತಿಯರು ಕುಂಬಾರನಿಂದ ಮಡಕೆಗಳನ್ನು ತೆಗೆದುಕೊಂಡು ಬಾವಿಗೆ ಬರುತ್ತಾರೆ. ಇವರೊಂದಿಗೆ ಓಲಗದವರ ಓಲಗ ನುಡಿಸುತ್ತಿರುತ್ತಾರೆ. ಮೆರವಣಿಗೆಯಲ್ಲಿ ಊರಿನವರು, ಬಂಧುಗಳು, ಹೆಂಗಸರು, ಮಕ್ಕಳು ಇರುತ್ತಾರೆ. ಮೊದಲು ಬಾವಿಗೆ ಹಣ್ಣು ಹೂ, ಗಂಧ ಚಂದನಗಳಿಂದ ಪೂಜಿಸುತ್ತಾರೆ. ಒಂದು ಬಾಳೆಯ ಎಲೆಯ ಮೇಲೆ ಬಾಳೆ, ಹಣ್ಣು , ಎಲೆ, ಅಡಿಕೆ, ಹೂ ಇದ್ದು ಆ ಐದು ಜನ ಮಹಿಳೆಯರು ಕೈಯಲ್ಲಿ ಹಿಡಿದು ಬಾವಿಗೆ ಹಾಕುತ್ತಾರೆ. ನಂತರ ನೀರನ್ನು ಸೇದುತ್ತಾರೆ ಕುಂಬಾರನಿಂದ ಪಡೆದ ಐದು ಕೊಡಗಳಿಗೆ ಪೂಜೆ ಸಲ್ಲಿಸಿ ಅವುಗಳಿಗೆ ನೀರನ್ನು ತುಂಬುತ್ತಾರೆ. ನೀರಿನಿಂದ ತುಂಬಿದ ಮಡಕೆಗಳನ್ನು ತಲೆಯ ಮೇಲೆ ಹೊತ್ತು ಮೆರವಣಿಗೆಯಲ್ಲಿ ಮನೆಗೆ ಬರುತ್ತಾರೆ. ಅಂಗಳದಲ್ಲಿ ಆಗಲೇ ಗೊತ್ತು ಮಾಡಿದ 'ಸುರುಗಿ' ಸ್ಥಳದಲ್ಲಿ ಅದನ್ನೂ ಇಳಿಸುತ್ತಾರೆ. ಇಲ್ಲೂ ಹಾಡುಗಾರ್ತಿಯರು ಹಾಡುತ್ತಿರುತ್ತಾಳೆ.

**ಸುರುಗಿ ಸುತ್ತುವುದು:**ಐದುಗಿತ್ತಿಯರು ಗಂಗೆಯನ್ನು ಪೂಜಿಸಿ ಕೊಡಗಳನ್ನು ತುಂಬಿಸಿಕೊಂಡು ಮೆರವಣಿಗೆಯಲ್ಲಿ ಬರುತ್ತಾರೆ. ನೀರು ತುಂಬಿದ ಕೊಡಗಳನ್ನು ಮನೆ ಮುಂದೆ ಆಗಲೇ ನಿರ್ಮಿಸಿದ ಹಂದರದ ಕೆಳಗೆ ಕ್ರಮವಾಗಿ ಇಡುತ್ತಾರೆ. ಅವುಗಳನ್ನು ಒಂದು ವೃತ್ತಾಕಾರದಲ್ಲಿ ಇಟ್ಟು ಆ ಕೊಡಗಳ ಕಂಠಕ್ಕೆ ಅರಿಶಿಣ ಲೇಪನದ ದಾರವನ್ನು ಐದುಗಿತ್ತಿಯರು ಐದು ಸುತ್ತು ಸುತ್ತುತ್ತಾರೆ. ಅನುವೃತ್ತಾಕಾರವಾಗಿ ದೊಡ್ಡದಾಗಿರುತ್ತವೆ. ಸಾಮಾನ್ಯವಾದ ಸ್ಥಳಕ್ಕೊಂದನ್ನು ಪ್ರತ್ಯೇಕಗೊಳಿಸಿ ಪವಿತ್ರಗೊಳಿಸುತ್ತಾರೆ. ಹೀಗೆ

ಮಾಡಿದ್ದರಿಂದ ಆ ಸ್ಥಳಕ್ಕೆ ಪ್ರತ್ಯೇಕ ಅಸ್ತಿತ್ವ ಬರುತ್ತದೆ. ಸಾಮಾನ್ಯವಾಗಿ ಮದುವೆಯ ದಿನ ನಡೆಯುವ ಎಲ್ಲಾ ಆಚರಣೆಗಳೂ ಇಲ್ಲಿಯೇ ನಡೆಯುತ್ತವೆ. ಅರಿಶಿಣ ತಿಕ್ಕುವ, ಸ್ನಾನಮಾಡಿಸುವ ಅಲಂಕಾರ ಮಾಡುವ ಹೀಗೆ ಅನೇಕ ಶಾಸ್ತ್ರಗಳು ಇಲ್ಲಿ ನಡೆಯುತ್ತವೆ. ಹೀಗೆ ಅಲಂಕಾರಗೊಂಡ ಮದುಮಗ ಮತ್ತು ಮದುಮಗಳು ಆ ಸ್ಥಳವನ್ನು ಬಿಟ್ಟು ಧಾರೆ ಮುಹೂರ್ತ ಬರುವ ವರೆಗೂ ಹೊರಬರುವ ಹಾಗಿಲ್ಲ. ಅರಶಿನ ತಿಕ್ಕಿದ ಮೇಲೆ ಅವರು ಹಸಿಮೈ ವ್ಯಕ್ತಿಗಳಾಗಿರುತ್ತಾರೆ. ಅವರುಗಳನ್ನು ಅಂದು ಸಾಮಾನ್ಯ ಜೀವನ ಕ್ರಮದಿಂದ ಪ್ರತ್ಯೇಕಗೊಳಿಸಿ ದೈವತ್ವಕ್ಕೇರಿಸಿ, ಗೌರವಿಸುತ್ತಾರೆ. ಇದಕ್ಕಾಗಿಯೇ ಅವರಿಗೆ ಅರಿಶಿಣ ತಿಕ್ಕುವುದು, ಸ್ನಾನಮಾಡಿಸುವುದು, ಛತ್ರಿ ಹಿಡಿಯುವುದು, ಕೈಗೆ ಕಂಕಣ ಕಟ್ಟುವುದು, ಪೇಟ ಕಟ್ಟುವುದು , ಹೂವಿನ ಕೋಲು ಹಿಡಿಯುವುದು.ಧಾರೆಯ ಮೂಹೂರ್ತ ಬಂದಾಗ ಹೆಣ್ಣನ್ನು ಬಿಡದಿ ಮನೆಯೊಳಗೆ ಕಳುಹಿಸಿ ಗಂಡನ್ನು ಧಾರೆ ಎತ್ತಿನ ಮೇಲೆ ಕೂರಿಸಿಕೊಂಡು ಮೆರವಣಿಗೆ ಹೊರಡುತ್ತಾರೆ.

ಚಪ್ಪರದ ಕೆಳಗೆ ನಿರ್ಮಿತಿಗೊಂಡ ಮಂಟಪದಲ್ಲಿ ಪುರೋಹಿತರು ಅಥವಾ ಐನೋರು ಅಕ್ಕಿಯ ಅಥವಾ ಜೋಳದ ರಾಶಿಯನ್ನು ಚೌಕಾಕಾರದ ವೇದಿಕೆ ಹಾಕಿ ಅದರ ಮೇಲೆ ಕಂಚಿನ ಅಥವಾ ಹಿತ್ತಾಳೆಯ ಐದು ಸಣ್ಣ ಕಳಸಗಳನ್ನು ಇಟ್ಟು ಅವುಗಳಿಗೆ ನೀರು ತುಂಬಿ ಕಳಸದ ಬಾಯಿಗೆ ವೀಳ್ಯದೆಲೆಯನ್ನು ಸುರುಳಿ ಮಾಡಿ ಇಡುತ್ತಾರೆ. ಕಳಸಗಳ ಕಂಠಕ್ಕೆ ಅರಿಶಿಣ ಲೇಪಿತ ದಾರವನ್ನು ಐದೈದು ಸುತ್ತು ಸುತ್ತುತ್ತಾರೆ. ಇದರ ಪಕ್ಕದಲ್ಲೆ ಧಾರೆ ನಡೆಯುವ ಸ್ಥಳವೂ ಆಗಿರುತ್ತದೆ. ಪುರೋಹಿತರು ಮಾಡುವ ಈ ಕಾರ್ಯಕ್ಕೂ 'ಸುರುಗಿ ಸುತ್ತುವಿಕೆ' ಎಂದು ಕರೆಯುತ್ತಾರೆ. ಸ್ಥಳ ಮತ್ತು ವ್ಯಕ್ತಿಗಳನ್ನು ಪ್ರತ್ಯೇಕಿಸಿದ ಹಾಗೆ ಸಮಯವನ್ನು ಪ್ರತ್ಯೇಕಿಸಿ 'ಮೂಹೂರ್ತ' ವನ್ನು ನಿರ್ಧರಿಸುತ್ತಾರೆ. ಸ್ಥಳವನ್ನು ಪ್ರತ್ಯೇಕಿಸಿದ ಸುರುಗಿ, ಧಾರಾಮಂಟಪ ವ್ಯಕ್ತಿಯನ್ನು ಪ್ರತ್ಯೇಕಿಸಿದ ಅರಿಶಿಣ, ಸಮಯವನ್ನು ಪ್ರತ್ಯೇಕಿಸಿದ ಮೂಹೂರ್ತಗಳು ಈ ಪವಿತ್ರವೆನಿಸುತ್ತವೆ. ಒಂದು ನಿರ್ದಿಷ್ಟ ಉದ್ದೇಶದ ಬದ್ಧತೆಯಲ್ಲಿ ಸಮಾನವಾದ ಮಹತ್ವವನ್ನು ಪಡೆದು 'ವ್ಯಕ್ತಿ', 'ಮುಹೂರ್ತ' ಮತ್ತು 'ಸ್ಥಳ'ಗಳು ಮದುವೆಯಲ್ಲಿ ಪಾವಿತ್ರ್ಯತೆಯನ್ನು ಪಡೆದಿರುತ್ತವೆ.

**ಧಾರೆ ಎತ್ತು:** ಇದು ಉಪ್ಪಾರರಲ್ಲಿ ವಿಶೇಷವಾಗಿ ಕಂಡು ಬರುವ ಪದ್ಧತಿ. ಗಂಡಿಗೆ ಮದುವೆಯ ವಸ್ತ್ರ ಆಭರಣಗಳನ್ನು ತೊಡಿಸಲಾಗುವುದು. ಅಂಗಳದಲ್ಲಿ ಹಾಸಿದ ಚಾಪೆಯ ಮೇಲೆ ಅಥವಾ ಜಗಲಿಯ ಮೇಲೆ ಹಾಸಿದ ಚಾಪೆಯು ಮೇಲೆ ನಿಲ್ಲಿಸಿ ಕಚ್ಚೆಪಂಚೆ, ತುಂಬು ತೋಳಿನ ಅಂಗಿ, ಅಂಗಿಯ ಮೇಲೆ ಕರಿಯ ಕೋಟು, ಕೋಟಿನ ಮೇಲೆ ವಸ್ತ್ರ ತಲೆಗೆ ಜರಿಪೇಟ ಸುತ್ತಿ ಬಾಸಿಂಗಕಟ್ಟಿ ಕೈಗೆ ವೀಳೆಯದೆಲೆಯ ಪಟ್ಟಿಕಟ್ಟಿ, ಆ ಮೇಲೆ ಕಾಲಿಗೆ ಕೈಗೆ ಬೆಳ್ಳಿಯ ಹಾಗೂ ಚಿತ್ತಾರ ಉಂಗುರ ಹಾಕಿ ಕೊರಳಿಗೆ ಸರವನ್ನು ಹಣೆಗೆ ಕುಂಕುಮದ ಬೊಟ್ಟನ್ನು ಇಡಲಾಗುವುದು. ಹೀಗೆ ಅಲಂಕಾರಗೊಂಡ ಮದುಮಗನನ್ನು ಶೃಂಗಾರಮಾಡಿದ ಬಸವನ

ಮೇಲೆ ಕೂರಿಸಿಕೊಂಡು ಊರದೇವರ ಗುಡಿಗೆ ಮೆರವಣಿಗೆ ಹೊರಡುತ್ತಾರೆ. "On the third day the boy is ceremonially received by the bride's party. This is called "Simant pujan", after which he is conducted either on a bullock or a horse to the marriage mandap" (Syed siraj V.L. Hassan: 1989 -629). ದೇವರ ಗುಡಿಯಲ್ಲಿ ದೇವರಿಗೆ ಅರಿಶಿಣ ಕುಂಕುಮ 'ಗಂಧ' ಸಿಂಗರಿಸಿ ಹಣ್ಣುಕಾಯಿಗಳನ್ನು ಇಟ್ಟು ಪೂಜಿಸಿ ಆರ್ಶೀವಾದ ಪಡೆದು ಮೆರವಣಿಗೆ ಮೂಲಕ ಮದುವೆ ಚಪ್ಪರಕ್ಕೆ ಬರುತ್ತಾರೆ

ಧಾರೆ:ಮದುವೆಯ ಮುಖ್ಯ ಭಾಗವೇ ಧಾರೆ. ಹೆಚ್ಚಾಗಿ ಗಂಡಿನ ಮನೆ ಮುಂ ಅಥವಾ ದೇವಸ್ಥಾನಗಳಲ್ಲಿ ಇದು ನಡೆಯುತ್ತದೆ. ಅಪರೂಪಕ್ಕೆ ಹೆಣ್ಣಿನ ಮನೆಯಲ್ಲೂ ನಡೆಯುತ್ತದೆ. ಹೆಣ್ಣಿನವರಿಗಾಗಿ ಬಿಟ್ಟುಕೊಟ್ಟ ಬಿಡದಿ ಮನೆಯಗೆ ಹೆಣ್ಣಿಲ್ಲಿ ಅಲಂಕಾರ ಮಾಡಿ ಅನಂತರ ಮಡಿಲು ತುಂಬಲಾಗುವುದು. ಹೀಗೆ ಮಡಿಲು ತುಂಬಿ ಹೆಣ್ಣನು ಬಿಡದಿಮನೆಯ ಒಳಗಿನಿಂದ ಧಾರಾ ಮಂಟಪಕ್ಕೆ ಕರೆತರುತ್ತಾರೆ. ಈ ಕೆಲಸವನ್ನು ಹೆಣ್ಣಿನ ಸೋದರ ಮಾವನೇ ಮಾಡುತ್ತಾನೆ. ಹೆಣ್ಣು ಮನೆಯ ಒಳಗಿನಿಂದ ಧಾರೆಯ ಮಂಟಪಕ್ಕೆ ಬಂದರೆ ಗಂಡು ಹೊರಗಿನಿಂದ ಧಾರೆಮಂಟಪವನ್ನು ಪ್ರವೇಶ ಮಾಡುತ್ತಾನೆ. ಮೆರವಣಿಗೆಯಿಂದ ನೇರವಾಗಿ ಬಂದ ಗಂಡನ್ನು ಮಂಟಪದಲ್ಲಿ ಹಾಕಿದ ಅಕ್ಕಿ ಅಥವಾ ಜೋಳದ ಮೇಲೆ ನಿಲ್ಲಿಸಿ ಮುಂದೆ ಮರೆಯನ್ನು ಹಿಡಿಯುತ್ತಾರೆ. ಅನಂತರ ಹೆಣ್ಣನ್ನು ಗಂಡಿನ ಎದುರು ನಿಲ್ಲಿಸುತ್ತಾರೆ. * ಕೆಲವೆಡೆ ಕೂರಿಸಿ ಧಾರೆಮಾಡುವ ಪದ್ಧತಿಯು ಇದೆ. ಪುರೋಹಿತ ಅಥವಾ ಐಯ್ಯನವರು ಮಂತ್ರ ಜಪಿಸುತ್ತಿರುತ್ತಾರೆ. "The Brahmin priest repeats mantras and benedictory verses and cotton thread is wound five times round the pair. It is then made into two bracelets which are fastened to their wrists. The marriage string (mangalsutra) is handed over to the boy, who ties it round the neck of his wife. Their garments are knotted together and they bow before the family gods and the elders of the family" (Syed Siraj Ul Hassan : 1989 : 621) ಹೆಣ್ಣಿನ ತಂದೆ ತಾಯಿ ಧಾರೆ ಎರೆದು ಕೊಡಲು ಸಿದ್ಧರಾಗಿರುತ್ತಾರೆ. ಗಂಡಿನ ಎರಡು ಹಸ್ತಗಳ ಮೇಲೆ ಹೆಣ್ಣಿನ ಹಸ್ತವನ್ನು ಇರಿಸಿ ಅದರ ಮೇಲೆ ವೀಳ್ಯದೆಲೆ, ತೆಂಗಿನಕಾಯಿ ಇಟ್ಟು ಪುರೋಹಿತರು ಹೆಣ್ಣಿನ ತಂದೆ ತಾಯಿಯಿಂದ ಹಾಲು ನೀರು ಬಿಡಲು ಹೇಳುತ್ತಾರೆ. ನಿಗದಿತ ವೇಳೆ ಬರುವಾಗ ತಾಳಿಯಿರುವ ತಟ್ಟೆಯನ್ನು (ತಾಳಿ, ಬೆಲ್ಲದ ಅಚ್ಚು, ಎಲೆ ಅಡಿಕೆ, ಕಾಯಿ) ಹಿರಿಯರು ಹಾಗೂ ಮುತ್ತೈದೆಯರೊಂದಿಗೆ ಮುಟ್ಟಿಸಿ ತಾಳಿಯನ್ನು ಗಂಡಿನಿಂದ ಹೆಣ್ಣಿನ ಕೊರಳಿಗೆ ಕಟ್ಟಿಸುತ್ತಾರೆ. ಇದು ವರೆಗೂ

"ಸುಲಗ್ನಾ ಸಾವಧಾನ ಸುಮುಹೂರ್ತ ಸಾವಧಾನ" ಎಂದು ಹೇಳುತ್ತಿರುವಾಗ ಜೋರಾಗಿ ಓಲಗ ಮಾಡುವಂತೆ ಹೇಳಿ "ಮಾಂಗಲ್ಯಮಂ ತಂತುನಾನೇನ ನವ ಜೀವನ ಹೇತುನಾ ಕಂಠೆಭದ್ರ ಸುಭಗ ಸಂಜೀವ..........".

ಹೀಗೆ ಮಂತ್ರ ಹೇಳುವಾಗ ವರ ವಧುವಿನ ಕೊರಳಿಗೆ ತಾಳಿ ಕಟ್ಟುತ್ತಾನೆ. ಅಲ್ಲಿ ನೆರೆದವರೆಲ್ಲ ಅಕ್ಕಿಯನ್ನು ಎರಚುತ್ತಾರೆ. ಇಲ್ಲಿ ಮದುವೆಯ ಬಹುಮುಖ್ಯ ಉಡುಗೆಗೆ ಗಂಟು ಹಾಕಿ ಅವರನ್ನು ಒಂದು ಮಾಡುತ್ತಾರೆ. ಇಲ್ಲಿ ಎಲ್ಲರೂ ಗಂಡು ಹೆಣ್ಣಿನ ಮೇಲೆ ಅಕ್ಕಿಯನ್ನು ತಲೆಯ ಮೇಲೆ ಹಾಕಿ, ಮಾತನಾಡಿಸಿಕೊಂಡು ಹೋಗುತ್ತಾರೆ. ಅನಂತರ ಪುರೋಹಿತರು ವಧೂವರರಿಗೆ ಸೂರ್ಯ ನಮಸ್ಕಾರ ಮಾಡಿಸಲು ಮಂಟಪದಿಂದ ಹೊರಗೆ ಕರೆತರುತ್ತಾರೆ. * ಮಂಟಪದಲ್ಲಿ ಎರಡು ಕುರ್ಚಿಗಳ ಮೇಲೆ ಗಂಡು ಹೆಣ್ಣನ್ನು ಕೂರಿಸುತ್ತಾರೆ. ಮದುವೆಗೆ ಬಂದ ನೆಂಟರು ಮತ್ತು ಆಪ್ತರು ತಮ್ಮ ಕೈಲಾದಷ್ಟು ಹಣ ಅಥವಾ ಉಡುಗೊರೆ ಕೊಡುತ್ತಾರೆ. ಇದನ್ನು 'ಮುಯ್ಯ ಇಡುವುದು' ಎಂದು ಹೇಳುತ್ತಾರೆ. ಹೀಗೆ ಕೆಲವರ ಹೆಸರು ಮತ್ತು ಊರುಗಳನ್ನು ಒಬ್ಬನು ಬರೆದು ಕೊಳ್ಳುತ್ತಿರುತ್ತಾನೆ. ಇದಾದ ನಂತರ ಗಂಡ ಹೆಂಡಿರನ್ನು ಮಂಟಪದಿಂದ ಹೊರಗೆ ಕರೆ ತರಲಾಗುವುದು. ಮದುವೆಗೆ ಬಂದವರ ಜೊತೆ ಪಂಕ್ತಿಯಲ್ಲಿ ಕುಳಿತು ಊಟಮಾಡುವ ದೃಶ್ಯ ಚೆನ್ನಾಗಿಯು ಮತ್ತು ಅರ್ಥ ಗರ್ಭಿತವಾಗಿರುತ್ತದೆ. ಇದನ್ನು ಬೂಮ ಎಂದು ಪರಸ್ಪರರು ಕರೆಯುತ್ತಾರೆ. ಸಿಹಿಯನ್ನು ತಿನ್ನಿಸುವುದು ಮೋಜಿನದಾಗಿಇರುತ್ತದೆ. ಗಂಡ ಹೆಂಡತಿಯರು ಮದುವೆಗೆ ಬಂದವರಿಗೆ ಸಿಹಿಯನ್ನು ಬಡಿಸುವುದು ಕಂಡು ಬರುತ್ತದೆ. ಅಂದು ಸಂಜೆ, ಮೆರವಣಿಗೆಗಿಂತ ಮೊದಲು ವರನು ಮಾವನ ಮನೆಯಿಂದ ಒಂದು ಪಾತ್ರೆಯನ್ನು ಕದ್ದು ಓಡಿ ಅವಿತುಕೊಳ್ಳುತ್ತಾನೆ. ಇದನ್ನು ಕಂಡ ವಧುವು ಅವನನ್ನು ಕರೆತರುತ್ತಾಳೆ. ಶಿವನೆ ಆ ಪ್ರದೇಶದಲ್ಲಿ ಅಡಗಿ ಕುಳಿತು ಹುಡುಗಿಯನ್ನು ಹುಡುಗನೇ ಹುಡುಕಿ ತರುತ್ತಾನೆ.

ಧಾರೆಯ ಸಂಜೆ ಮದುಮಕ್ಕಳನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಕಡ್ಡಾಯವಾಗಿ ಮಾಡುತ್ತಾರೆ. ಮೆರವಣಿಗೆಯಲ್ಲಿ ಊರಿನ ಹಿರಿಯರು, ಬಂದುಗಳು ಮತ್ತು ಆಪ್ತರು ಸೇರಿರುತ್ತಾರೆ. ವಧೂ ವರರು ತೊಟ್ಟ ಉಡುಗೆಗಳನ್ನು ನಾಗೋಲಿ ಶಾಸ್ತ್ರದ ವರೆಗೆ ಬಿಚ್ಚುವ ಹಾಗಿಲ್ಲ. ಧಾರೆಯ ದಿನ ಒಬ್ಬರೆ ಮನೆಯ ಹೊರಗೆ ಬರುವಂತಿಲ್ಲ. ನಾಗೋಲಿಶಾಸ್ತ್ರ ಧಾರೆಯಾದ ಐದು ದಿನದ ನಂತರ ನಡೆಯುತ್ತದೆ.

**ಪಾದಪೂಜೆ**: ಧಾರೆಮುಗಿದ ಮೇಲೆ ವಧೂವರರ ಕೈ ಹಿಡಿಸಿ, ಹುಡುಗನ ಶ್ಯಾಲ್ಯಕ್ಕೂ ಹುಡುಗಿಯ ಸೆರಗಿಗೂ ಗಂಟು ಹಾಕುತ್ತಾರೆ. ಆನಂತರ ಮನೆಯ ಹೊಸ್ತಿಲು ದಾಟಬೇಕಾದರೆ ಮೊದಲು ವಧುವರರ ಪಾದ ತೊಳೆದು

ಪೂಜೆ ಮಾಡುವ ಶಾಸ್ತ್ರ ನಡೆಯುತ್ತದೆ. ಇದನ್ನು ವರನ ತಂಗಿ ಅಥವಾ ಅಕ್ಕ ನೆರವೇರಿಸುತ್ತಾಳೆ. ವಧೂವರರ ಪಾದಗಳನ್ನು ನೀರಿನಿಂದ ತೊಳೆದು ಕುಂಕುಮ, ಅರಷಿಣ ಹಚ್ಚಿ, ಹೂವುಗಳಿಂದ ಸಿಂಗರಿಸಿ ಹಣ್ಣು ಕಾಯಿಗಳಿಂದ ಪೂಜಿಸಿ ಕಾಲನ್ನು ಮುಟ್ಟಿ ನಮಸ್ಕರಿಸುತ್ತಾಳೆ. ಹೀಗೆ ಮಾಡುವಾಗ ಅವನ ಪಾದವನ್ನು ಹಿಡಿದು "ನಿನ್ನ ಮಗಳನ್ನು ನನ್ನ ಮಗನಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತಾಳೆ. ಇದಕ್ಕೆ ಆತನಿಂದ ಒಪ್ಪಿಗೆ ಪಡೆದ ಮೇಲೆ, ಹಿಡಿದ ಪಾದವನ್ನು ಬಿಡುತ್ತಾಳೆ. ತನ್ನ ತವರಿನ ಸಂಬಂಧವನ್ನು ಉಳಿಸಿಕೊಳ್ಳುವ ಮಹತ್ವದ ಉದ್ದೇಶಿದಾಗಿದೆ. ಇಲ್ಲಿ ತಮ್ಮನ ಅಥವಾ ಅಣ್ಣನ ಪ್ರವೇಶವನ್ನು ಪಡೆಯುವ ಹಕ್ಕು ತಂಗಿ ಅಥವಾ ಅಕ್ಕನಿಗಿರುತ್ತದೆ.

**ಗೃಹಪ್ರವೇಶ**: ಧಾರೆಯ ನಂತರ ವಧುವನ್ನು ವರನು ತನ್ನ ಮನೆಗೆ ಕರೆದುಕೊಂಡು ಬರುವ ಪದ್ದತಿಉಂಟು ಇದನ್ನು ಕೆಲವರು ಆರನೆಯ ಅಥವಾ ಹತ್ತನೆಯ ದಿನ ಜರಗುತ್ತದೆ. ಈ ಪದ್ಧತಿ ಹೆಚ್ಚು ಪ್ರಚಲಿತವಿರುವುದು ಧಾರೆಯ ನಂತರವೇ. ಮದುಮಗ ತನ್ನ ಹೆಂಡತಿಯನ್ನು ತನ್ನ ಮನೆಗೆ ತುಂಬಿಸಿಕೊಳ್ಳುವ ಸಂಪ್ರದಾಯ. ನಡುಮನೆಯಲ್ಲಿ ದೀಪ ಬೆಳಗಿಸಿದ ಅನಂತರ ಪ್ರಧಾನ ಬಾಗಿಲ ಮಧ್ಯದಲ್ಲಿ ಒಂದು ಸಿದ್ದೆ ಅಕ್ಕಿಯನ್ನು ತುಂಬಿಸಿ ಅದರ ಮೇಲೆ ಬೆಲ್ಲದ ಅಚ್ಚನ್ನು ಇಟ್ಟು ಬಾಗಿಲ ಎರಡು ಕಡೆ ಎಲೆ ಅಡಿಕೆಗಳನ್ನಿಟ್ಟಿರುತ್ತಾರೆ. ಹೆಣ್ಣು ಮನೆಯನ್ನು ಪ್ರವೇಶ ಮಾಡುವಾಗ ಬಲಗಾಲು ಮುಂದಿಟ್ಟು ಒಳಗೆ ಪ್ರವೇಶ ಮಾಡಬೇಕು. ಹೀಗೆ ಮಾಡುವಾಗ ಬಲಗಾಲಿನಿಂದ ಅಕ್ಕಿಯನ್ನು ನಡುಮನೆಯ ಒಳಕ್ಕೆ ಬೀಳುವಂತೆ ತಳ್ಳಿ ಒಳಗೆ ಬರಬೇಕು. ಇದೇ ರೀತಿ ಮೂರು ಭಾರಿ ನಡೆಯುತ್ತದೆ. ನಂತರ ಗಂಡು ಹೆಣ್ಣನ್ನು ಬೇರೆ ಮಾಡುವ ಹಸೆ ಚಿತ್ರದ ಒಳಗೆ ಬಂದು ಕುಳಿತುಕೊಳ್ಳಬೇಕು. ಮಧ್ಯಬಾಗಿಲನ್ನು ಪ್ರವೇಶ ಮಾಡಿದ ಗಂಡು ಹೆಣ್ಣುಗಳು ಹಸೆಗೋಡೆಯ ಅವರವರ ಸ್ಥಳದಲ್ಲಿ ಕುಳಿತುಕೊಳ್ಳುತ್ತಾರೆ. ಅಲ್ಲಿ ನೆರೆದ ಊರಿನವರು ದಂಪತಿಗಳಿಗೆ ಅಕ್ಕಿ (ಅಕ್ಷತೆ) ಹಾಕಿ ಶುಭಕೋರಿ ತಮ್ಮ ಕೈಲಾದಷ್ಟು ಮುಯ್ಯಿಮಾಡುತ್ತಾರೆ.

**ಮೊಳೆ ಬಡಿಯುವ ಶಾಸ್ತ್ರ**:ಧಾರೆಯಾದ ಮಾರನೆಯ ದಿನ ಬೆಳಿಗ್ಗೆ ಗಂಡು ಹೆಣ್ಣನ್ನು ಸ್ನಾನ ಮಾಡಿಸಿದ ಮುತ್ತೈದೆಯರು ಬಾವಿಗೆ ಕರೆದುಕೊಂಡು ಹೋಗುತ್ತಾರೆ. ಬಾವಿಕಟ್ಟೆಯ ಮೇಲೆ ಬಾಳೆ ಎಲೆಯ ಮೇಲೆ ಮಣ್ಣಿನ ಎಡೆ ಇಟ್ಟು, ಜೊತೆಗೆ, ಎಲೆ, ಅಂಡಿಕೆ ಬಾಳೆಹಣ್ಣು, ಹೂ ಇಟ್ಟು ಪೂಜಿಸಿ ಐದು ಜನರ ಜೊತೆಗೆ ಹೆಣ್ಣು ಗಂಡು ಸೇರಿ ಎಡೆಯನ್ನು ಬಾವಿಗೆ ಹಾಕುತ್ತಾರೆ. ಅನಂತರ ನೀರನ್ನು ಸೇದಿ ಹೆಣ್ಣು ಗಂಡುಗಳಿಗೆ ಸಿಂಪಡಿಸಿ, ಹೆಣ್ಣಿನ ತಲೆ ಮೇಲೆ ಗಂಡು ನೀರುತುಂಬಿ ಕೊಡವನ್ನು ಹೊರಿಸಿ ಕೊಡವನ್ನು ಹೊತ್ತು ಮನೆಗೆ ಪ್ರವೇಶಮಾಡುವಾಗ ಹೊಸಲು ಮೇಲೆ, ಬಲಗಾಲನ್ನು ಇಟ್ಟಾಗ ಹೆಬ್ಬೆರಳಿನ ಸಂಧಿಯಲ್ಲಿ ಮೊಳೆ ಇಟ್ಟು ಗಂಡು ಹೊಡೆಯುತ್ತಾನೆ. ಅಂದಿನಿಂದ ಆ ಹೆಣ್ಣಿಗೆ ಆ ಮನೆಯಲ್ಲಿ ಅಧಿಕಾರ ಸಿಕ್ಕಿತು. ಕೆಲವು ಸಂದರ್ಭದಲ್ಲಿ ಅತ್ತೆ

ಸೊಸೆಯರು ಜಗಳಕಾದರೆ ಸೊಸೆ ಹೀಗೆ ಹೇಳುತ್ತಾಳೆ. "ನಾನೇನು ನಿನ್ನ ಮಗನ ಜೊತೆ ಓಡಿ ಬಂದಿಲ್ಲ. ಹೊಸಲಿಗೆ ಮೊಳೆ ಬಡಿಸಿಕೊಂಡು ಬಂದೀನಿ".

**ಜೂಜಾಡುವುದು:** ಹಾಲು ತುಂಬಿದ ಪಾತ್ರೆಯಲ್ಲಿ ಮೂಗುತಿಯನ್ನು ಪುರೋಹಿತರು ಹಾಕುತ್ತಾರೆ. ಅದನ್ನು ಮೊದಲು ಯಾರು ತೆಗೆಯುತ್ತಾರೋ ಅವರು ಜಯಶೀಲರು. ಹೀಗೆ ಮೂರು ಸಾರಿ ಮಾಡಿಸುತ್ತಾರೆ. 'ಇದಲ್ಲದೆ ಬೆಲ್ಲದ ಅಚ್ಚಿಗೆ ದಾರಕಟ್ಟಿ ಒಂದು ತುದಿಯಲ್ಲಿ ಹಿಡಿದಿಟ್ಟಿರುತ್ತಾರೆ. ಅದನ್ನು ಯಾರು ಮೊದಲು ಬಾಯಿಯಲ್ಲಿ ಕಚ್ಚುತ್ತಾರೋ ಅವರು ಜಯಶೀಲರು. ನಾಲ್ಕು ಕವಡೆ ಅಥವಾ ಅಡಿಕೆ ಹೋಳುಗಳನ್ನು ಕೈಯಲ್ಲಿ ಹಿಡಿದು ಹೆಣ್ಣು ಗಂಡಿಗೆ ಕೇಳುತ್ತಾಳೆ ಅದಕ್ಕೆ ಗಂಡು ಸರಿಯಾದ ಉತ್ತರ ಹೇಳಿದರೆ ಹೇಳಬೇಕು;ಇಲ್ಲವಾದರೆ ಸೋಲನ್ನು ಒಪ್ಪಿಕೊಳ್ಳಬೇಕು. ಇಲ್ಲಿ ಹೆಣ್ಣಿನ ಕಡೆಗೆ ಹಲವರು ಗಂಡಿನ ಕಡೆಗೆ ಒಂದಷ್ಟು ಜನರು ಇರುತ್ತಾರೆ. ಅಂದರೆ ಪ್ರಬಲವಾದ ಎರಡು ಗುಂಪುಗಳಿದ್ದು ಅವರ ಆ ಗುಂಪುಗಳನ್ನು 'ಗಂಡಿನ ಕಡೆಯ ಗುಂಪು' ಎಂದು ಕರೆಯುತ್ತಾರೆ. ಇವಷ್ಟೆ ಅಲ್ಲದೇ ಇನ್ನೂ ಅನೇಕ ಜೂಜು, ಮತ್ತಿತರ ಆಟಗಳು ನಡೆಯುತ್ತವೆ.

ಮದುವೆಗೆ ಬಂದ ನಂಟರೆಲ್ಲರೂ ಧಾರೆಯನ್ನು ಮುಗಿಸಿಕೊಂಡು ಊಟಮಾಡಿ ಅವರವರ ಮನೆಗಳಿಗೆ ಹೊರಡುತ್ತಾರೆ. ಮೊದಲಗಿತ್ತಿಯ ಜೊತೆಗೆ ಕೆಲವು ಹೆಣ್ಣುಮಕ್ಕಳು ಇರುತ್ತಾರೆ. ಮದುವೆಯಲ್ಲಿ ಪ್ರಮುಖ ಪಾತ್ರ ವಹಿಸಿಕೊಂಡ ಐದುಗಿತ್ತಿಯರು ಅಂದು ವರನ ಮನೆಯಲ್ಲಿಯೇ ಉಳಿದುಕೊಂಡಿರುತ್ತಾರೆ. ಮರುದಿನ ಮುಂಜಾನೆ ಹೆಣ್ಣು ನಾಲ್ಕಾರು ಪಾತ್ರೆಗಳನ್ನು ತೊಳೆದು, ಹಸೆ ಗೋಡೆಯನ್ನು ಸ್ವಚ್ಛ ಮಾಡುತ್ತಾಳೆ. ಆ ನಂತರ ಅವಳಿಂದ ಮಜ್ಜಿಗೆ ಕಡೆಯುವಂತೆ ಐದುಗಿತ್ತಿಯರು ಸೂಚಿಸುತ್ತಾರೆ. ಅದರಂತೆ ಅವಳು ಮಜ್ಜಿಗೆ ಕಡೆದು ಬೆಣ್ಣೆಯನ್ನು ತೆಗೆಯುತ್ತಾಳೆ.

ಧಾರೆಯ ದಿನ ಬಾವಿಪೂಜೆ ಮಾಡಿದಾಗ ವಧೂವರರು ಇರುವುದಿಲ್ಲ. ಆದರೆ, ಇಲ್ಲಿ ವಧೂವರರೆ ಮುಖ್ಯರಾಗಿರುತ್ತಾರೆ. ಬಾವಿಯನ್ನು ಶಾಸ್ತ್ರೋಕ್ತವಾಗಿ ಪೂಜೆಮಾಡಿ ಭಕ್ತಿಯಿಂದ ನಮಸ್ಕರಿಸುತ್ತಾರೆ. ಗಂಡು ಅಲ್ಲಿಯೇ ಪಕ್ಕದಲ್ಲಿ ಮಣ್ಣಿನ ಏರಿಯನ್ನು ನಿರ್ಮಿಸುತ್ತಾನೆ. ಹೆಣ್ಣು ಅದಕ್ಕೆ ಬೀಜ ಹಾಕಿ, ನೀರು ಹುಯ್ಯುತ್ತಾಳೆ. ಇದಾದನಂತರ ಹೆಣ್ಣಿನ ತಲೆಯ ಮೇಲೆ ತುಂಬಿದ ಕೊಡವನ್ನು ದೇವರ ಕಟ್ಟೆಯ ಮೇಲೆ ಇರಿಸಿ ಮತ್ತೆ ಕೈಮುಗಿದು ಕೊಳ್ಳುತ್ತಾಳೆ.

ಧಾರೆಯ ದಿನ ಧರಿಸಿದ ಬಟ್ಟೆಗಳನ್ನು ಯಾವುದೇ ಕಾರಣಕ್ಕೂ ಬದಲಿಸುವಂತಿಲ್ಲ. ಇದು ಪ್ರಬಲವಾದ ನಿಷೇಧವಾಗಿದೆ. ಐದನೇ ದಿನ ಹೆಣ್ಣಿನ ಮನೆಯಲ್ಲಿ ಅವುಗಳನ್ನು ಬಿಚ್ಚುತ್ತಾರೆ. ಪವಿತ್ರವಾದ ಜಲವನ್ನು ದೇವರ ಮುಂದೆ ಇಳಿಸಿದ ಹೆಣ್ಣು ತನ್ನ ಗಂಡನ ಪಾದಗಳನ್ನು ತೊಳೆದು ಪೂಜೆ ಮಾಡಬೇಕು. ಇದು ಹಂದರದ

ಕೆಳಗೆ ಇಟ್ಟ ಮಣೆಯ ಮೇಲೆ ಇದುನಡೆಯುತ್ತದೆ. ಮಣೆಯ ಮೇಲೆ ನಿಂತ ಗಂಡನ ಪಾದಗಳನ್ನು ನೀರಿನಿಂದ ಚೆನ್ನಾಗಿ ತೊಳೆದು, ನಂತರ ಪಾದಗಳಿಗೆ ಕುಂಕುಮ, ಹಳದಿ, ಗಂಧ, ಹೂ, ಇತ್ಯಾದಿಗಳನ್ನು ಇಟ್ಟು ಪಾದ ಮುಟ್ಟಿ ನಮಸ್ಕಾರ ಮಾಡುತ್ತಾಳೆ. ಹೀಗೆ, ಮೂರು ಬಾರಿ ಆದಮೇಲೆ ಗಂಡಿನ ಪಾದಗಳ ಮೇಲೆ ಹಾಲನ್ನು ಬಿಡುತ್ತಾರೆ. ಅದನ್ನು ಹೆಣ್ಣು ಭಕ್ತಿಯಿಂದ ಕುಡಿಯುತ್ತಾಳೆ.

ಇದಾದ ನಂತರ ಹೆಣ್ಣಿನ ಕಡೆಯ ಹುಡುಗಿಯರು ಮತ್ತು ಐದುಗಿತ್ತಿಯರು, ಸ್ನಾನದ ಮನೆಗೆ ಬರುತ್ತಾರೆ. ಹೆಣ್ಣು ಗಂಡನ್ನು ಸ್ನಾನಮಾಡಿಸುವ ಶಾಸ್ತ್ರವನ್ನು ಮಾಡಿಸುತ್ತಾರೆ. ಮೊದಲು ಹೆಣ್ಣು -ಗಂಡಿನ ಮೇಲೆ ನೀರನ್ನು ಹಾಕುತ್ತಾಳೆ. ಆನಂತರ ಅರಿಶಿಣವನ್ನು ಲೇಪಿಸಿ ಮತ್ತೆ ನೀರನ್ನು ಹಾಕಿ, ಬೆನ್ನು, ಕೈಗಳನ್ನು ಉಜ್ಜುತ್ತಾಳೆ.

ಹೀಗೆ ಗಂಡಿನ ಮನೆಯಲ್ಲಿ ಈ ಎಲ್ಲಾ ಶಾಸ್ತ್ರಗಳೂ ಗಂಡಿನ ಮನೆಯಲ್ಲಿ ನಡೆಯುತ್ತವೆ. ಐದು ದಿನಗಳವರೆಗೆ ಹೆಣ್ಣು ಮತ್ತು ಅವಳ ಜೊತೆಗೆ ಬಂದ ಹುಡುಗಿಯರು ಗಂಡಿನ ಮನೆಯಲ್ಲಿಯೇ ಇರುತ್ತಾರೆ. ಐದುಗಿತ್ತಿಯರು ಕೆಲವರು ತಮ್ಮ ಮನೆಗೆ ಹೋಗಿರುತ್ತಾರೆ. ಉಳಿದವರು ಹೆಣ್ಣಿನ ಮನೆಯಲ್ಲಿ ನಡೆಯುವ ಶಾಸ್ತ್ರಗಳನ್ನು ಮಾಡಲು ಇರುತ್ತಾರೆ. ಐದು ದಿನಗಳ ನಂತರ ಹೆಣ್ಣಿನ ಮನೆಗೆ ಗಂಡು, ಐದುಗಿತ್ತಿಯರಲ್ಲಿ ಉಳಿದು ಕೊಂಡವರು, ಹೆಣ್ಣಿನ ಕಡೆಯ ಹುಡುಗಿಯರು, ಮತ್ತು ಹುಡುಗನ ಕೆಲವು ಸ್ನೇಹಿತರು ಸೇರಿ ಹೋಗುತ್ತಾರೆ.

ದೂರದಿಂದಲೇ ಅಳಿಯ, ಮಗಳು, ಮತ್ತು ಪರಿವಾರದವರನ್ನು ಹೆಣ್ಣಿನ ತಂದೆ, ತಾಯಿ, ಅಣ್ಣ ತಮ್ಮ ಅತ್ತಿಗೆ ಇತರರು ಸೇರಿ ಆದರದಿಂದ ಸ್ವಾಗತಿಸಿ, ಅವರಿಗೆ ಕೈಕಾಲು ತೊಳೆದುಕೊಳ್ಳುವಂತೆ ಹೇಳಿ ಒರಸಿಕೊಳ್ಳಲು ವಸ್ತ್ರಗಳನ್ನು ಕೊಟ್ಟು, ಅನಂತರ ಅವರುಗಳನ್ನು ಮನೆಯ ಒಳಗೆ ಬರಮಾಡಿಕೊಳ್ಳುತ್ತಾರೆ. ಹೀಗೆ ಬರಮಾಡಿಕೊಳ್ಳುವಾಗ ಗಂಡು-ಹೆಣ್ಣಿಗೆ ಆರತಿ ಬೆಳಗಿ, ಹಳದಿಯ ನೀರನ್ನು ದೂರಕ್ಕೆ ಚೆಲ್ಲುತ್ತಾರೆ. ಇಲ್ಲಿಗೆ, ದಾರಿಯಲ್ಲಿ ಗಂಡು ಹೆಣ್ಣಿಗೆ ತಗುಲಿದ ದೃಷ್ಟಿ ತೊಲಗಿಸಲು ಇದನ್ನು ಮಾಡುತ್ತಾರೆ. ಗಂಡು ತನ್ನ ಮಾವನ ಮನೆಗೆ ಮೊದಲ ಪ್ರವೇಶ ಮಾಡುತ್ತಿರುವುದಾಗಿದೆ. ಬಂದ ನೆಂಟರೆಲ್ಲರೂ ಚಾಪೆಯ ಮೇಲೆ ಕುಳಿತುಕೊಳ್ಳುತ್ತಾರೆ. ಅವರಿಗೆಲ್ಲಾ ತಂಪಾದ ಪಾನಿಯಗಳನ್ನು ಕೊಟ್ಟು ಸತ್ಕರಿಸುತ್ತಾರೆ.

**ನಾಗೋಲಿಶಾಸ್ತ್ರ**:ಮದಲಿಂಗ ಹಾಗೂ ಮೊದಲಗಿತ್ತಿಯರು ಧಾರೆ ದಿನದಿಂದ ತೊಟ್ಟುಕೊಂಡ ಬಟ್ಟೆಗಳನ್ನು ತೆಗೆಯುವ ಶಾಸ್ತ್ರ ನಡೆಯುತ್ತದೆ. ಇದನ್ನು 'ನಾಗೋಲಿ ಶಾಸ್ತ್ರ' ಎಂದು ಕರೆಯುತ್ತಾರೆ. ವಧೂವರರನ್ನು ಸ್ನಾನದ ಮನೆಗೆ ಕರೆದೊಯ್ದು ಅವರು ತೊಟ್ಟ ಬಟ್ಟೆಗಳನ್ನು ಬಿಚ್ಚಿಸಿ, ಅವರಿಗೆ ಸ್ನಾನಮಾಡಿಸಿ,

ಹೊಸಬಟ್ಟೆಗಳನ್ನು ಕೊಡುತ್ತಾರೆ. ಸ್ನಾನದ ನಂತರ ವಧೂವರರು ಚಪ್ಪರ ಹಾಕಿರುವ ಹಾಲುಕಂಬಗಳನ್ನು ಪೂಜಿಸುತ್ತಾರೆ. ಮಡಿಯುಟ್ಟು ಹೋಗಿ ಗಂಗಾಪೂಜೆಯ ನಂತರ ಅಂದಿನ ಅಡುಗೆಗಾಗಿ ಬಳಸುವ ಎರಡು ಕೊಡ ನೀರನ್ನು ತಂದ ನಂತರ ಕಂಕಣಗಳನ್ನು ತೆಗೆಯುತ್ತಾರೆ. ಅಂದಿನ ಮಧ್ಯಾಹ್ನ ಸಿಂಹಾಸನ ಪೂಜೆ ನಡೆಯುತ್ತದೆ. ಕುಲದ ಮುಖ್ಯಸ್ಥನು ನಡೆಸಿ ಕೊಡುವ ಈ ಕಾರ್ಯದಲ್ಲಿ ಕುರಿಯನ್ನು ಬಲಿಕೊಡುತ್ತಾರೆ. ಅನಂತರ ಕೆಲವು ವಿಧಿವಿಧಾನದಲ್ಲಿ ತಾಂಬೂಲ ವಿನಿಮಯ ನಡೆಯುತ್ತದೆ. "The Yajaman or the caste officiates at it, and a sheep is generally killed near it. Tambulas are distributed in the prescribed order. The marriage proper closes that evening with the procession of the married couple in the Streets". (The Mysore Tribes and Castes Vol IV:646). ಇಲ್ಲಿಗೆ ನಾಗೋಲಿಶಾಸ್ತ್ರವೂ ಮುಗಿದಂತೆ. ಇಷ್ಟು ದಿನ 'ಹಸಿ' ಮೈಯನ್ನು ಇಟ್ಟುಕೊಂಡದನ್ನು ಕಳೆದು ಕೊಳ್ಳುತ್ತಾರೆ. ಆದರೆ, ಪೂರ್ಣ ಪ್ರಮಾಣದಲ್ಲಿ ಅಲ್ಲ. ಮುಂದೆ ನಡೆಯುವ ಎಲ್ಲಾ ಕಾರ್ಯ ಮುಗಿಯುವ ವರೆಗೆ ಈ 'ಹಸಿ' ಮೈ ಮುಂದುವರೆದು ಕೊಂಡು ಹೋಗುತ್ತದೆ. ನಾಗೋಲಿ ಶಾಸ್ತ್ರ ಮುಗಿದ ನಂತರ ಹೊಸ ಬಟ್ಟೆಗಳನ್ನು ತೊಟ್ಟ ಹೆಣ್ಣು -ಗಂಡುಗಳನ್ನು ಹಸೆ ಗೋಡೆಯ ಹತ್ತಿರ ಹಾಸಿದ ಜಮಖಾನದ ಮೇಲೆ ಕೂರುವಂತೆ ಹೇಳಿ, ಅವರಿಗೆ ಅಕ್ಕಿಯನ್ನು ಮುತ್ತೈದೆಯರು ನವದಂಪತಿಗಳ ಕೈ ಮೊಳಕಾಲು, ತಲೆಗೆ ತಾಗಿಸಿ ಹಿಂದೆ ಹಾಕುತ್ತಾರೆ. ಹೀಗೆ ಮಾಡಿದ ಹಿರಿಯರ ಕಾಲಿಗೆ ಗಂಡು, ಹೆಣ್ಣುಗಳು ನಮಸ್ಕರಿಸುತ್ತಾರೆ. ಕಿರಿಯರು ದೊಡ್ಡವರು ಮಾಡಿದಂತೆ ಮಾಡಿ, ಗಂಡು, ಹೆಣ್ಣಿನ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಹೀಗೆ ಹಿರಿಯರು, ಕಿರಿಯರು ಶಾಸ್ತ್ರವನ್ನು ಮುಗಿಸಿದ ನಂತರ ಗಂಡು-ಹೆಣ್ಣನ್ನು ಅಲ್ಲಿಂದ ಏಳಿಸುತ್ತಾರೆ.

ಹಸೆಶಾಸ್ತ್ರ ಮುಗಿದ ನಂತರ 'ವಧೂವರ' ರನ್ನು ಹಂದರದ ಕೆಳಗೆ ನಿಲ್ಲಿಸಿ ಆರತಿ ಬೆಳಗುತ್ತಾರೆ. ಇಲ್ಲಿ ಹೆಣ್ಣಿನ ತಂಗಿ ಭಾಗವಹಿಸುತ್ತಾಳೆ. ಈ ಸಮಯದಲ್ಲಿ ಹಾಡನ್ನು ಹೇಳುತ್ತಾರೆ. ಅಂದು ಸೇರಿದವರಿಗೆಲ್ಲ ಸಿಹಿ ಊಟವಿರುತ್ತದೆ. ಊಟದ ಕಾರ್ಯ ಮುಗಿದ ನಂತರ ಆ ದಿನದ ಎಲ್ಲಾ ಶಾಸ್ತ್ರಗಳೂ ಮುಗಿಯುತ್ತವೆ.

ಕಾರ್ಯ: ಮರುದಿನ ಬೆಳಿಗ್ಗೆ ಗಂಡು, ಹೆಣ್ಣುಗಳು ಸ್ನಾನಮುಗಿಸಿ ಊರಿನ ದೇವರ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಅದೇ ದಿನ ಸಂಜೆ, ಹುಡುಗಿಯ ಪಕ್ಕದ ಕೋಣೆಯಲ್ಲಿ ಹಾಸಿಗೆ ಸಿದ್ಧಪಡಿಸಿ ಬರುತ್ತಾಳೆ. ಅಲ್ಲಿ ಕುಡಿಯಲು ನೀರು ಇಟ್ಟಿರುತ್ತಾರೆ. ಊಟವಾದ ಬಳಿಕ ಗಂಡು ಕೋಣೆಗೆ ಹೋಗಿ ಮಲಗಿಕೊಳ್ಳುತ್ತಾನೆ. ಇದಾದ ನಂತರ ಹುಡುಗಿಯನ್ನು ಜೊತೆಗಿದ್ದವರು ಕೋಣೆಗೆ ಹೋಗುವಂತೆ ಸೂಚಿಸುತ್ತಾರೆ. ಹೆಣ್ಣು ನಾಚುತ್ತಾಳೆ. ಅವಳ ಕೈ ಹಿಡಿದು ಗಂಡು ಇರುವ ಕೋಣೆಗೆ ತಳ್ಳಿ ಬಾಗಿಲು ಹಾಕಿಕೊಳ್ಳುತ್ತಾರೆ. ಈ ಕಾರ್ಯ

ಹೆಣ್ಣಿನ ಮನೆಯಲ್ಲಿಯೆ ನಡೆಯಬೇಕು ಎನ್ನುವ ನಿರ್ಬಂಧವಿಲ್ಲ. ಕೆಲವರು ಇದನ್ನು ಗಂಡಿನ ಮನೆಯಲ್ಲಿ ಮಾಡುತ್ತಾರೆ. ಇಲ್ಲಿ ಹಾಸಿ ಕೊಡುವವಳು ಗಂಡನ ಅಕ್ಕ ಆಗಿರುತ್ತಾಳೆ. ಹೆಣ್ಣು ಕೋಣೆಗೆ ಹೋಗುವಾಗ ಅವಳು ಒಂದು ಲೋಟ ಹಾಲು ಹಿಡಿದಿರುತ್ತಾಳೆ. ಹಿಂದೆ ಇವರಲ್ಲಿ ಈ ರೀತಿ ಇರಲಿಲ್ಲ. ಆ ದಿನವೇ ಗಂಡು ಹೆಣ್ಣನ್ನು ಕೂಡುವ ದಿನವಾಗಿರುತ್ತದೆ. ಅಂದಿನಿಂದ ಒಬ್ಬರನೊಬ್ಬರು ಅರಿತುಕೊಂಡು ಜೀವನ ಸಾಗಿಸುತ್ತಾರೆ.

ಗಂಡು ಕೆಲವು ದಿನಗಳು ಹೆಣ್ಣಿನ ಮನೆಯಲ್ಲಿಯೇ ಇದ್ದು ತನ್ನ ಮನೆಗೆ ಹೆಂಡತಿಯನ್ನು ಕರೆದುಕೊಂಡು ಬರುತ್ತಾನೆ. The bridegroom returns one or two days after. The milk post is kept for about a month, and it is removed after some milk is poured on it. (The Mysore Tribes and CastesVol IV:646) ಮದುವೆಯ ಹೊಸತನಗಳು ಎಲ್ಲವು ಅಂಗಳದಲ್ಲಿ ನೆಟ್ಟ ಹಾಲು ಕಂಬಕ್ಕೆ ಒಂದು ತಿಂಗಳ ನಂತರ ಹಾಲು ಎರೆಯುವುದರ ಮೂಲಕ ಕಳೆದುಹೋಗುತ್ತವೆ. ಸಾಮಾನ್ಯ ವ್ಯಕ್ತಿಗಳಿಂದ ಪ್ರತ್ಯೇಕಿಸಿದ ವ್ಯಕ್ತಿಗಳು ಮತ್ತೆ ನಿಧಾನವಾಗಿ ಸಾಮಾನ್ಯ ವ್ಯಕ್ತಿಗಳಾಗಿ ಪರಿವರ್ತಿತರಾಗುತ್ತಾರೆ.

**ಶಕುನಗಳು:**

ಉಪ್ಪಾರರು ಹಿಂದೆ ತಮ್ಮ ನಿತ್ಯ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಶಕುನ ನೋಡಿ ಕೆಲಸ ಮಾಡುತ್ತಿದ್ದರೆಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಇತ್ತೀಚೆಗೆ ಶಕುನ ನೋಡುವುದನ್ನು ಮಂಗಳ ಕಾರ್ಯದಲ್ಲಿ ಮಾತ್ರ ಸೀಮಿತಗೊಳಿಸಿಕೊಂಡಿದ್ದಾರೆ. ಮಂಗಳ ಕಾರ್ಯಕ್ಕೆ ಸಂಬಂಧಿಸಿದ ಶಕುನಗಳನ್ನು ನೋಡಿದರೆ, ಬಹುಪಾಲು ಶಕುನಗಳು 'ಮದುವೆ' ಸಂದರ್ಭಕ್ಕೇ ಮೀಸಲಿದ್ದಂತಿವೆ. ಇವರು ಹೆಣ್ಣು ನೋಡುವ ಸಂದರ್ಭದಿಂದ ಹಿಡಿದು ಮದುವೆ ಮುಗಿದು ಗಂಡು ಹೆಣ್ಣು ಹಳಬರಾಗುವ ವರೆಗೂ ಶಕುನಗಳನ್ನು ಗಮನಿಸುತ್ತಾರೆ. ಇಲ್ಲಿ ಕೆಲವು ಶಕುನಗಳನ್ನು ಪಟ್ಟಿ ಮಾಡಲಾಗಿದೆ.

**ಶುಭ ಶಕುನಗಳು:**

1. ನರಿ, ಮುಂಗಸಿ ಮುಖ ತೋರಿಸಿದರೆ ಒಳ್ಳೆಯದು.
2. ಕೆಳಜಾತಿಯವನು ಅಡ್ಡ ಬಂದರೆ ಒಳ್ಳೆಯದು.
3. ಹಣ್ಣು ಹೂ, ಅಡ್ಡಬಂದರೆ ಒಳ್ಳೆಯದು.
4. ಮುತ್ತೈದೆಯರು, ತುಂಬಿದಕೊಡ, ಹೆಣ, ಎದುರಾದರೆ ಶುಭ.
5. ಸೂಳೆಯರು ಅಡ್ಡ ಬಂದರೆ ಶುಭ.

**ಅಶುಭ ಶಕುನಗಳು:**

1. ನಾಗರ ಹಾವು, ಬೆಕ್ಕು ಅಡ್ಡ ಬಂದರೆ ಅಪಶಕುನ. 2. ವಿಧವೆ, ಒಂಟಿ ಬ್ರಾಹ್ಮಣ, ಅಡ್ಡ ಬಂದರೆ ಅಪಶಕುನ 3. ಅಂಗ (ಒಂದು ಜಾತಿಯ ಹಕ್ಕಿ) ಬಲದಿಂದ ಎಡಕ್ಕೆ ಹೋದರೆ. 4. ಕಾಗೆ ಎಡದಿಂದ ಬಲಕ್ಕೆ ಹೋದರೆ. 5. ಹೆಣ್ಣಿನ ಮನೆಗೆ ಹೊರಡಬೇಕು ಎನ್ನುವಾಗ ಹಲ್ಲಿ ಲೊಚಗುಟ್ಟಿದರೆ ಅಶುಭ. 6. ಕಟ್ಟಿಗೆ ಹೊರೆ ಅಡ್ಡ ಬರಬಾರದು. 7. ಹೊಸ ಮಡಿಕೆ ಹೊತ್ತವನು ಅಡ್ಡ ಬರಬಾರದು. 8. ಹೆಣ್ಣು ಕೆದರಿದ ತಲೆ ಬಿಟ್ಕೊಂಡು ಬಾಗಿಲಲ್ಲಿ ನಿಂತಿರಬಾರದು. 9. ಗುದ್ದಲಿ ಸಲಿಕೆ ಎದುರಾಗಬಾರದು. 10. ಹೆಣ್ಣಿನ ಮನೆಗೆ ಹೋದಾಗ ಹೆಣ್ಣು ಕಸಬರಕೆ ಹಿಡಿದಿರಬಾರದು.

ಮೇಲಿನ ಪಟ್ಟಿಯನ್ನು ಗಮನಿಸಿದರೆ ಮುಖ್ಯವಾಗಿ ಪ್ರಾಣಿ, ಮನುಷ್ಯ ಸಸ್ಯ ಮತ್ತು ಇತರ ವಸ್ತುಗಳು ಶಕುನ ಸೂಚಕಗಳಾಗಿರುವುದು ಕಂಡುಬರುತ್ತವೆ. ಮೃಗ ಪಕ್ಷಿ ಜಂತುಗಳಾದಿಗಳ ದೈಹಿಕಕ್ರಿಯೆ ಪ್ರತಿಕ್ರಿಯೆಗಳಲ್ಲಿ ಶಕುನ ಫಲ ಕಂಡುಕೊಳ್ಳುವುದು ವಿಲಕ್ಷಣವಾಗಿ ತೋರುತ್ತದೆ. ಹಕ್ಕಿಗಳು ಹಾರುವುದು, ಹಲ್ಲಿ ಲೊಚಗುಟ್ಟುವುದು, ನರಿ, ಬೆಕ್ಕು ಹಾವು ಇತ್ಯಾದಿಗಳು ದಾರಿಯನ್ನು ಆಚೆ ಈಚೆ ದಾಟುವುದು, ಆಯಾಯ ಪ್ರಾಣಿಗಳ ಸ್ವಭಾವ ಸಿದ್ಧವಾದ ನಡವಳಿಗಳಾಗಿವೆ. ಈ ಪ್ರಾಣಿ, ಪಕ್ಷಿ ಸ್ವಭಾವವನ್ನೇ ಶುಭ ಅಶುಭ ಎಂದು ತಿಳಿಯುವುದು ತೀರ ವಿಚಿತ್ರವಾಗಿ ಕಾಣುತ್ತದೆ. ಇನ್ನೊಂದು ಗಮನಿಸಬೇಕಾದ ಅಂಶ ಎಂದರೆ:ವಾಸ್ತವಿಕ ಬದುಕಿನಲ್ಲಿ ಯಾವ ವಸ್ತು ಮತ್ತು ವ್ಯಕ್ತಿಗಳನ್ನು ಗೌರವ ಭಾವನೆಯಿಂದ ಕಾಣುವುದಿಲ್ಲವೋ ಅವು ಇಲ್ಲಿ ಶುಭ ಶಕುನಗಳಾಗಿ ಕಾಣುತ್ತವೆ. ಉದಾಃ ವೇಶ್ಯೆ, ಕೆಳಜಾತಿಯವನು, ತುಂಬಿದ ಕೊಡ ಇತ್ಯಾದಿ. ದೇವದಾಸಿ ಎಂಬ ಕ್ಕಾರಣಕ್ಕಾಗಿ ವೇಶ್ಯೆಯಲ್ಲಿ ಮಂಗಲವನ್ನು ಕಾಣುತ್ತಾರೆ. ಇವಳು ನಿತ್ಯ ಸುಮಂಗಲಿ. ದೇವರ ಸೇವೆಗಾಗಿಯೇ ಇರುವವಳು ಎಂಬ ಕಲ್ಪನೆಗಳು ಇವರಲ್ಲಿರುವುದರಿಂದಲೂ, ಊರಿನ ಹೆಣ್ಣು ಮಕ್ಕಳ ಶೀಲವನ್ನು ಕಾಪಾಡುವವಳೂ ಆಗಿರುವುದರಿಂದಲೂ ಇವಳು ಶುಭ ಶಕುನವಾಗಿರುತ್ತಾಳೆ. ಕೆಳಜಾತಿಯವನು ಎಲ್ಲಾ ಕಾಲದಲ್ಲೂ ಅಂದರೆ ಹುಟ್ಟಿನಿಂದ ಸಾವಿನ ವರೆಗೆ ನಡೆಯುವ ಆಚರಣೆ ಸಂಪ್ರದಾಯಗಳಲ್ಲಿ ಭಾಗವಹಿಸುವುದರಿಂದ, ಹೇಳಿದಂತೆ ಕೇಳುವ ಗುಣವನ್ನು ಹೊಂದಿದ್ದರಿಂದ ವ್ಯವಸಾಯ ಇತ್ಯಾದಿ ಕೆಲಸಗಳಲ್ಲಿ ಶ್ರದ್ಧೆಯಿಂದ ದುಡಿಯುವುದರಿಂದಲೂ ಶುಭ ಶಕುನವಾಗುತ್ತಾನೆ. ತುಂಬಿದ ಕೊಡದ ಮೇಲುನೋಟದ ಅರ್ಥವಲಯ ತೀರ ಸಾಮಾನ್ಯವಾಗಿ ಕಂಡರೂ ಜನಪದರು ಅದನ್ನು ಹಗುರವಾಗಿ ಕಾಣುವುದಿಲ್ಲ. ಅದರ ಒಳ ಅರ್ಥ ಸದಾ ದವಸ ಧಾನ್ಯ ಹಣ, ಸಂಪತ್ತಿನಿಂದ ಮನೆ, ಮನ ತುಂಬಿರಲಿ ಎನ್ನುವುದೇ ಆಗಿರುತ್ತದೆ. ಇದು ನಿಜಕ್ಕೂ ಅರ್ಥಪೂರ್ಣವಾಗಿ ಕಂಡು ಬರುತ್ತದೆ.

**ನಂಬಿಕೆಗಳು:**

1. ಮಾಲುಗಣ್ಣಿನ ಹುಡುಗಿಯರು ಅದೃಷ್ಟವಂತರು.
2. ಹೆಣ್ಣು ನೋಡಲು ಹೊರಟಾಗ ದಾರಿಯುದ್ದಕ್ಕೂ ಶುಭ ಸೂಚನೆಗಳೇ ಆಗಬೇಕು
3. ಹುಡುಗನಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಎರಡು ಮಂದಿ ಹೆಂಡಂದಿರು ಆಗುತ್ತಾರೆ.
4. ಹೆಣ್ಣು ನೋಡಲು ಹೋದಾಗ ಹೆಣ್ಣಿನ ಮನೆಬಾಗಿಲು ಹಾಕಿರಬಾರದು.
5. ಮದುವೆ ಚಪ್ಪರದಲ್ಲಿ ತೂಗಿ ಹಾಕಿದ ತಳಿರು-ತೋರಣಗಳು ಅವಿವಾಹಿತರ ತಲೆಗೆ ತಾಗಿದರೆ ಅವರಿಗೂ ಬೇಗನೆ ಮದುವೆ ಯೋಗ ಕೂಡಿಬರುತ್ತದೆ.
6. ಮದುವೆಯಾಗದೆ ಸತ್ತ ಯುವಕ ಅಥವಾ ಯುವತಿ ದೆವ್ವ ಅಥವಾ ಮೋಹಿನಿಯರಾಗಿ, ಉಳಿದವರನ್ನು ಕಾಡುತ್ತಾರೆ.
7. ಮದುವೆ ದಿನ ಹೊತ್ತಿಸಿದ ಹಸೆ ದೀಪ, ಶಾಸ್ತ್ರಗಳು ಮುಗಿಯುವ ಮುನ್ನವೇ ಆರಬಾರದು.

ಈ ನಂಬಿಕೆಗಳ ಹಿಂದೆ ಸದುದ್ದೇಶಗಳಿರುತ್ತವೆ. ಉದಾ: "ಮಾಲಗಣ್ಣಿನ ಹುಡುಗಿ ಅದೃಷ್ಟವಂತೆ' ಸುಂದರವಾಗಿರುವ ಹೆಣ್ಣೊಬ್ಬಳನ್ನು ಮದುವೆ ಮಾಡುವಾಗ ಆಯ್ಕೆ ಕಷ್ಟ ಆಗಲಾರದು. ಅದೇ ಎಲ್ಲಾ ಅಂಗಾಂಗಗಳು ಸರಿ ಇದ್ದು ಕೆಲವು ಅಂಗಗಳು ವಕ್ರವಾಗಿದ್ದರೆ ಅಂತಹ ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಜನ ಮುಂದೆ ಬರುವುದಿಲ್ಲ, ಈ ಕಾರಣಕ್ಕಾಗಿ ಒಂದು ಹುಡುಗಿಯ ಮದುವೆ ನಡೆಯದೆ ಹೋಗಬಹುದು ಎಂಬ ಕಾರಣಕ್ಕಾಗಿ ಈ ನಂಬಿಕೆಗಳ ಹಿಂದೆಯೂ ಒಂದು ಮಹತ್ವದ ಅಂಶ ಅಡಗಿರುತ್ತದೆ. ಮೇಲು ನೋಟಕ್ಕೆ ನಂಬಿಕೆಗಳು ಹುರುಳಿಲ್ಲದಂತೆ ತೋರಿದರೂ ಆ ನಂಬಿಕೆಗಳು ಹೊರಗೆಡಹುವ ಒಂದು ವಾಸ್ತವ ಸತ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮೇಲಿನ ಮಾತನ್ನು ಈ ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ ಕೊಳ್ಳಬಹುದು. ಹೆಣ್ಣಿನ ಕಡೆಯವರಿಗೆ ಯಾವುದೇ ಒಂದು ಕುಟುಂಬದೊಡನೆ ಬಾಂಧವ್ಯ ಬೆಳೆಸಲು ಇಷ್ಟ ವಿಲ್ಲದಿದ್ದಾಗ ಅವರು ತಮ್ಮ ಮನೆ ಬಾಗಿಲು ಮುಚ್ಚುವ ರೂಪದಲ್ಲಿ ಪ್ರಕಟಿಸಿರಬಹುದು. ಮುಖಾ ಮುಖಿಯಾಗಿ ಈ ಸಂಬಂಧ ಇಷ್ಟ ಇಲ್ಲ ಎಂದು ಹೇಳಿ ವಾತಾವರಣವನ್ನು ಕಹಿಗೊಳಿಸಿಕೊಳ್ಳುವುದರ ಬದಲು ಮೌನವಾಗಿಯೆ ಪ್ರತಿಕ್ರಿಯೆ ಅರ್ಥಪೂರ್ಣವಾಗಿ ತೋರುತ್ತದೆ.

ತಳಿರು ತೋರಣಗಳನ್ನು ಮಂಗಲ ಕಾರ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ದೃಶ್ಯವಾಗಿದೆ. ಹದಿ ಹರೆಯದವರ ಜೀವನ ಚಿಗುರಿನಂತೆ ದಟ್ಟವಾಗಿ ಚಿಗುರಲಿ ಎನ್ನುವ ಸತ್ಯ ಇಲ್ಲಿ ಅಡಗಿದೆ. ಮದುವೆಯಾಗದ ಗಂಡು ಹೆಣ್ಣುಗಳ ತಲೆಯ ಮೇಲೆ ಇಂತಹ ತಳಿರು ತೋರಣಗಳು ತಾಗುವುದರಿಂದ ಅವರಿಗೂ ಕಂಕಣ ಬಲ ಕೂಡಿ ಬರುತ್ತದೆ ಎಂದು ನಂಬುವುದು ಅವಾಸ್ತವಿಕವಾಗಿ ಕಂಡರೂ, ಸದಾ ಮಂಗಲ ಕಾರ್ಯಗಳು ನಡೆಯಲಿ ಎನ್ನುವ ಸದುದ್ದೇಶ ಅವರಲ್ಲಿ ಅಡಗಿರುವಂತೆ ಕಾಣುತ್ತದೆ.

ಹಸೆ ದೀಪವನ್ನು ಉರಿಸುವುದರಲ್ಲಿ ಗಂಡು ಹೆಣ್ಣುಗಳ ಮುಂದಿನ ಬದಕು ಉಜ್ವಲವಾಗಿರಲಿ ಎಂಬ ಹಾರೈಕೆ ಅಡಗಿದೆ. ದೀಪವು ಜ್ಞಾನದ ಸಂಕೇತ. ದೀಪ ಉರಿಯುವ ಕ್ರಿಯೆ ಮುಂದಿನ ಬದುಕಿನ ಪ್ರಜ್ವಲತೆಯನ್ನು ಸೂಚಿಸುತ್ತದೆ. ಇವರಲ್ಲಿ ನಡೆಯುವ ಮದುವೆ ವಿಧಾನಗಳಲ್ಲಿ ಅನೇಕವು ಅರ್ಥಪೂರ್ಣವಾಗಿದ್ದು ಇವರ ಸಂಸ್ಕೃತಿಯ ಶ್ರೀಮಂತಿಕೆಯನ್ನು ಎತ್ತಿತೋರಿಸುತ್ತವೆ, ಗಂಡು ತನಗೆ ಸರಿಹೊಂದುವ ಹೆಣ್ಣನ್ನು ನೇರವಾಗಿ ನೋಡದೇ ಬೇರೆಲೊ ನೋಡಿ ನಂತರ ಆ ಸಂಬಂಧವನ್ನು ಬೆಳೆಸಲು ಮುಂದಾಗುತ್ತಾನೆ. ಒಮ್ಮೆಗೆ ಮನೆಗೆ ಹೋಗಿ ಹೆಣ್ಣು ಸರಿಹೊಂದದಿದ್ದರೆ ಈ ಹೆಣ್ಣು ಬೇಡ ಎಂದು ಹೇಳಿದರೆ; ಹೆಣ್ಣಿಗೂ ಆಕೆಯ ತಂದೆ ತಾಯಿಗಳಿಗೂ ಬಹಳ ನೋವಾಗುತ್ತದೆ. ಇದನ್ನು ತಡೆಗಟ್ಟಲು ಇವರ ಆಯ್ಕೆಯಲ್ಲಿ ಕಂಡುಕೊಂಡ ಕ್ರಮ ಉತ್ತಮವಾಗಿದೆ.

ಇವರಲ್ಲಿ ಕುಲಗಳನ್ನು ಬೆಡಗುಗಳ ಮೂಲಕ ಗುರುತಿಸಿಕೊಳ್ಳುತ್ತಾರೆ. ಒಂದೇ ಬೆಡಗಿಗೆ ಸೇರಿದವರು ಮದುವೆ ಮಾಡಿಕೊಳ್ಳುವುದಿಲ್ಲ. ಒಂದೇ ಕುಲದವರು ಅಣ್ಣ-ತಂಗಿಯರೆಂಬ ಭಾವನೆ ಇದ್ದು ಒಂದೇ ತಾಯಿಯ ಮಕ್ಕಳು ಎಂಬ ಭಾವನೆಯೂ ಇದೆ. ಒಂದೇ ರಕ್ತಸಂಬಂಧಿಗಳು ಲೈಂಗಿಕ ಸಂಪರ್ಕದಿಂದ ಹುಟ್ಟಿದ ಮಕ್ಕಳು ಅಂಗಾಂಗಗಳು ದೌರ್ಬಲ್ಯಗಳಿಂದ ಕೂಡಿದ ಮಕ್ಕಳು ಜನಿಸುತ್ತವೆ. ಈ ಅನಾಹುತವನ್ನು ತಪ್ಪಿಸಲು ಇವರು ಪ್ರಬಲವಾಗಿ ಸಗೋತ್ರ ವಿವಾಹ ಪದ್ಧತಿಯನ್ನು ನಿಷೇಧಿಸಿದ್ದಾರೆ.

ಹಿಂದೆ, ಹಿರಿಯರು ಒಪ್ಪಿ ಒಂದು ಹೆಣ್ಣನ್ನು ಮಗ ಮದುವೆಯಾಗಬೇಕಾಯ್ತು , ಆದರೆ ಈ ಕ್ರಮ ಈಗ ಸಂಪೂರ್ಣ ಇಲ್ಲವಾಗಿ ಹುಡುಗ-ಹುಡುಗಿ ಒಪ್ಪಿದರೆ ಮಾತ್ರ ಮದುವೆ ಮಾಡುತ್ತಾರೆ. ಇದು ಇವರ ಮದುವೆ ಕ್ರಮದಲ್ಲಾದ ಬದಲಾವಣೆ. ಹೆಣ್ಣೊಬ್ಬಳು ಇಷ್ಟಪಟ್ಟರೆ ಕೊನೆಯ ವರೆಗೂ ಅವಿವಾಹಿತೆಯಾಗಿ ಇರಬಹುದು. ಇದು ಹೆಣ್ಣಿಗಿರುವ ಸ್ವಾತಂತ್ರವನ್ನು ತಿಳಿಸುತ್ತದೆ. ಈ ಕ್ರಮ "Women may remain unmarried if they Choose" ಎಂದು ದಾಖಲಿಸಿದೆ. (The Mysore Tribes and Castes Vol. IV: 644).

ವಿವಿಧ ಉದ್ದೇಶಗಳಿಗಾಗಿ ಇವರಲ್ಲಿ ಅಳಿಯ ಸಂತಾನ, ನಾದಿನಿವಿವಾಹ, ಬಹುಪತ್ನಿತ್ವ, ಬಾಲ್ಯವಿವಾಹ, ವಿಧವಾವಿವಾಹ, ವಿನಿಮಯವಿವಾಹ ಪದ್ಧತಿಗಳು ಜರುಗಿವೆ. ಆಸ್ತಿಯನ್ನು ಉಳಿಸಿಕೊಂಡು ತಮ್ಮ ತಮ್ಮಲ್ಲಿಯೇ ಸಂಬಂಧ ಬೆಳೆಸಿಕೊಳ್ಳಲು (ಒಂದೇ ಬೆಡಗಿನವರನ್ನು ಬಿಟ್ಟು ) ಹೆಣ್ಣು ಗಂಡಿಗೆ ಕೊಟ್ಟುತೆಗೆದು ಕೊಳ್ಳಲು ಕಷ್ಟವಾಗಿದ್ದನ್ನು ನಿವಾರಿಸಿಕೊಳ್ಳಲು ಕಾರಣವಾದರೆ. ವಿಧವಾವಿವಾಹ ಕ್ರಮವನ್ನು ಪ್ರೋತ್ಸಾಹಿಸಿದ್ದು ಜೀವನಪ್ರೀತಿಯನ್ನು ಕಳೆದುಕೊಂಡವರಿಗೆ ದಾರಿ ದೀಪವಾಗಿಸಿದೆ. "A widow is allowed to marry, but not her husbands, brother" (Syed Sira ul Hassan 1989: 621) ಬಾಲ್ಯವಿವಾಹ ಅಲ್ಲಲ್ಲಿ ಇನ್ನೂ ಜೀವಂತವಾಗಿದೆ. ಉಪ್ಪಾರರು ಶಿಕ್ಷಣದಲ್ಲಿ ಹಿಂದಿದ್ದು

ಬಡವರಾಗಿದ್ದದ್ದೇ ಇದಕ್ಕೆ ಕಾರಣವಾಗಿದೆ. ಇವರಲ್ಲಿ 90% ರಷ್ಟು ಕಡು ಬಡುತನದಲ್ಲಿದ್ದು ಅಜ್ಞಾನ ಅಂಧಕಾರದಿಂದ ತುಂಬಿದ್ದಾರೆ. ವಿದ್ಯಾವಂತರು ಸಾಮಾಜದ ಇತರ ಮೇಲುವರ್ಗದ ಜನರಂತೆ ಜೀವನ ಸಾಗಿಸುತ್ತಿದ್ದಾರೆ.

ಇವರ ವಿವಾಹ ಪದ್ಧತಿಯಲ್ಲಿ ನಡೆಯುವ ಅನೇಕ ಶಾಸ್ತ್ರಗಳು ಸಾಮಾಜದ ಇತರ ವರ್ಗಗಳಲ್ಲೂ ಕಂಡು ಬರುತ್ತವೆ. ಎಲ್ಲರಲ್ಲೂ ಮದುವೆ;ಜೀವನದ ಮಹತ್ವದ ಸಾಮಾರಂಭ, ಬದುಕಿನ ಪ್ರಮುಖ ಘಟ್ಟ ಈ ಕಾರಣಕ್ಕಾಗಿ ಮದುವೆಯಾಗುವ ವ್ಯಕ್ತಿಯನ್ನು ಬಹಳ ಗೌರವದಿಂದ ಕಾಣುವುದು. ಮದುವೆಯ ನಂತರ ವ್ಯಕ್ತಿಗೆ ಜವಾಬ್ದಾರಿ ಬರುತ್ತದೆ. ಮದುವೆಯಾಗುವ ವ್ಯಕ್ತಿಗಳನ್ನು ಸಮೂಹದಿಂದ ಬೇರೆ ಮಾಡಿ ಪೂಜನೀಯರನ್ನಾಗಿ ಮಾಡುವುದಕ್ಕಾಗಿ ಆ ದಿನ ಅವರಿಗೆ ಅರಿಶಿಣ ಹಚ್ಚುವುದು, ಎಣ್ಣೆ ಹಚ್ಚಿ ಸ್ನಾನಮಾಡಿಸುವುದು. ವ್ಯಕ್ತಿಯನ್ನು ಸಮೂಹದಿಂದ ಬೇರೆ ಮಾಡಿದಂತೆ ಸ್ಥಳ ಮತ್ತು ವೇಳೆಯನ್ನು ಬೇರೆ ಮಾಡಿ ಅತಿಮಾನಸವನ್ನು ಆರೋಪಿಸುತ್ತಾರೆ. ಮದುಮಗ ಮದುಮಗಳು (ವ್ಯಕ್ತಿಯ) ಸ್ಥಳ, ವೇಳೆಯನ್ನು ಜನರು ಗೌರವಿಸಿ, ಅವುಗಳನ್ನು ಆದಿನ ಬಹಳ ಪಾವಿತ್ರತೆಯಿಂದ ಕಾಣಬೇಕು ಎನ್ನುವ ಮಹತ್ವದ ಉದ್ದೇಶ ಅದರ ಹಿಂದೆ ಅಡಗಿದೆ. ಚಪ್ಪರ ಹಾಕುವುದರ ಉದ್ದೇಶ ನೆರಳಿಗಾಗಿಯಾದರೂ, ಅದು ಅಲ್ಲಿ ಶುಭ ಸಮಾರಂಭ ನಡೆಯುತ್ತದೆ ಎನ್ನುವುದನ್ನೂ ಪರ್ಯಾಯವಾಗಿ ತಿಳಿಸುತ್ತದೆ. ದೇವರಿಂದ ದೀಪ ಹತ್ತಿಸಿಕೊಂಡು ಅನಂತರ ಮನೆಮನೆಗೂ ಹೋಗಿ ಮದುವೆಗೆ ಕರೆಯುವುದು ಇತರ ಸಾಂಸ್ಕೃತಿಕ ಅನನ್ಯತೆಯನ್ನು ತೋರಿಸುತ್ತದೆ. 'ನಾಳೆ ಕರೆದಿಲ್ಲ' ಎನ್ನುವ ಅಪವಾದ ಬರುವುದು ಬೇಡ ಎಂದು ಬೆಳಕಿನ ಸಾಕ್ಷಿಯಲ್ಲಿ ಕರೆಯುವುದೇ ಎಣ್ಣೇ ಬೀರುವ ಶಾಸ್ತ್ರ. ಧಾರೆಗೆ ಬರುವ ಗಂಡನ್ನು ಬಸವನ ಮೇಲೆ ಕೂರಿಸುವುದು ಅವರಲ್ಲಿರುವ ಪಶುಪಾಲನೆಯನ್ನು ನೆನಪಿಸುತ್ತದೆ. ಹೆಣ್ಣು ಧಾರೆ ಮಂಟಪವನ್ನು ಮನೆಯ ಒಳಗಿನಿಂದಲೂ ಗಂಡು ಹೊರಗಿನಿಂದಲೂ ಪ್ರವೇಶಮಾಡುವುದು ಹಿಂದೆ ಇದ್ದಿರಬಹುದಾದ ಮಾತೃಪ್ರಧಾನ ವ್ಯವಸ್ಥೆಯನ್ನು ಪರೋಕ್ಷವಾಗಿ ತಿಳಿಸುತ್ತದೆ.

ತಾಳಿ ಕಟ್ಟುವ ಮುನ್ನ ಅದನ್ನು ಹಿರಿಯರು ಮತ್ತು ಮುತ್ತೈದೆಯರು ಮುಟ್ಟಿ ನಮಸ್ಕಾರ ಮಾಡಿದ ನಂತರ ಅವರ ಸಮ್ಮುಖದಲ್ಲಿ ಗಂಡು ಹೆಣ್ಣಿಗೆ ತಾಳಿ ಕಟ್ಟುತ್ತಾನೆ. ಆಗ ಜೋರಾಗಿ ಓಲಗದವರು ಬಾರಿಸುತ್ತಾರೆ. ಹಿರಿಯರು ಸಾಕ್ಷಿಯಾದರೆ, ಜೋರಾಗಿ ಬಾರಿಸಿದ ಓಲಗ ದೂರದಲ್ಲಿದ್ದವರಿಗೆ ತಾಳಿ ಕಟ್ಟಿ ಆಯಿತು ಎಂದು ತಿಳಿಸುವ ಮಾಧ್ಯಮವಾಗಿದೆ. ಇದಲ್ಲದೇ ಅವರು ಮಾಡುವ ಅರುಂಧತಿ ಶಾಸ್ತ್ರವೂ ಒಂದೇ ರೀತಿಯ ಸಾಕ್ಷಿಯಾಗಿದೆ. ಹಿಂದೆ ಇವರಲ್ಲಿ ರಾತ್ರಿ ಮದುವೆಯಾಗುತ್ತಿತ್ತು ಎನ್ನುವುದನ್ನು ತಿಳಿಸುತ್ತದೆ. "The bridegroom leading the bride by the lard look at the Arundhati star, "

(The Mysore Tribes and castes Vol. IV:645). ಮದುವೆ ನಂತರ ಆಡಿಸುವ ಆಟಗಳು ದಂಪತಿಗಳು ಪರಸ್ಪರರು ಪ್ರೀತಿಯಿಂದ ಬದುಕಲಿ ಎನ್ನುವು ಉದ್ದೇಶವಾಗಿದೆ.

ನದಿಯನ್ನು ಪೂಜಿಸುವ ಕ್ರಮವು ಇವರ ಮೂಲದ ಬಗೆಗಿರುವ ಕತೆಗೆ ಹೋಲುತ್ತದೆ. ಎಲ್ಲಾ ಜನಾಂಗಗಳಲ್ಲೂ ಗಂಗೆಪೂಜೆ ಇದ್ದೇ ಇರುತ್ತದೆ. ಪ್ರತ್ಯೇಕವಾಗಿ ನಾಗೋಲಿ ಶಾಸ್ತ್ರದಲ್ಲಿ ಹೊಳೆಗೆ ಹೋಗಿ ಪೂಜಿಸುವುದು ಇವರಲ್ಲಿ ಕಂಡು ಬರುತ್ತದೆ. ಇವರ ಮೂಲ ಕಸುಬಿಗೆ ಅಗತ್ಯವಾಗಿ ಬೇಕಾಗಿರುವುದು ನೀರು. ಈ ಕಾರಣದಿಂದ ವಂಶಪರಾಂಪಗತವಾಗಿ ಈ ಪದ್ಧತಿ ನಡೆದುಕೊಂಡು ಬಂದಿದೆ ಎಂದು ತಿಳಿಯುತ್ತದೆ. ಹಲವು ಸಮುದಾಯಗಳಲ್ಲಿ ಕಂಡು ಬರುವಂತೆ, ಇವರಲ್ಲಿ ಅಕ್ಕಿ ಜೋಳ ಫಲವಂತಿಕೆಯ ಸಂಕೇತವಾಗಿದ್ದಲ್ಲಿ , ಮದುವೆಯಲ್ಲಿ ಇವುಗಳಿಗೆ ಮಹತ್ವದ ಸ್ಥಾನವನ್ನು ಪಡೆದಿವೆ. ಇವರಲ್ಲಿ ಪುರುಷ ಪ್ರಧಾನ ಕುಟುಂಬವಿದೆ ಎಂದು ಅವರು ಆರಿಸುವ ಬೆಡಗುಗಳೇ ತಿಳಿಸುತ್ತವೆ. ತಂದೆಯ ಬೆಡಗನ್ನೆ ಪರಿಗಣಿಸುವುದು ಇದಕ್ಕೆ ಸಾಕ್ಷಿಯಾಗಿದೆ. ಅಣ್ಣ ತಂಗಿಯರ ನಡುವೆ ಮದುವೆ ನಡೆಯಲೇ ಬಾರದೆಂದು ಕಟ್ಟಳೆ ಇವರಲ್ಲಿದೆ. ಇವರ ನಿತ್ಯ ಆಹಾರಗಳಲ್ಲಿ ಅಕ್ಕ ಅರಿಶಿಣ, ಬೆಲ್ಲದ ಜೀರಿಗೆ, ಎಳ್ಳು, ಕೊಬ್ಬರಿ, ಮುಂತಾದುವುಗಳು ಮಹತ್ವದ ಸ್ಥಾನ ಪಡೆದುಕೊಂಡಿವೆ. ಇವೆಲ್ಲವೂ ಒಂದು ರೀತಿಯಲ್ಲಿ ಹಸಿವು ಮತ್ತು ಕಾಮದ ಪೂರೈಕೆಗಳಾಗಿ ಕಂಡುಬರುತ್ತವೆ. ಮದುವೆಯ ಎಲ್ಲ ಮಹತ್ವದ ಆಚರಣೆಗಳು ಮನೆಯ ನಡುವೆ ನಡೆಯುತ್ತವೆ. ಹೆಣ್ಣನ್ನು ಮನೆಯೊಳಗೆ ದಾಟಿಸುವಾಗ ಹೊಸಲಿನ ಮೇಲೆ ಅಕ್ಕಿ ಇಟ್ಟು ಬೀಳಬೇಕಾದುದ್ದು ಇಲ್ಲೇ. ಈ ಕಾರಣಬಂದ ಇವರ ನಡುಮನೆಯು ಪ್ರಧಾನ ಘಟ್ಟವಾಗಿದೆ.

ಮದುವೆಯಲ್ಲಿ ಪ್ರಕಾಶವಾಗಿ ಕಂಡು ಬರುವುದು ಮೆರವಣಿಗೆ. ಇದು ಊರಿನ ವರಿಗೆ ಮತ್ತು ಇತರರಿಗೆ ತಿಳಿಸುವುದು ಮತ್ತು ಸಾಕ್ಷಿಯು ಉದ್ದೇಶವೂ ಹೌದು. ಸೋದರಮಾವ ಹೆಣ್ಣನ್ನು ಧಾರೆ ಮಂಟಪಕ್ಕೆ ಕೈ ಹಿಡಿದು ಕರೆತರುವುದು, ಹಿಂದೆ ಇವರಲ್ಲಿದ್ದ ಒಳ ಸಂಬಂಧದ ವಿವಾಹವನ್ನು ನೆನೆಪಿಗೆ ತರುತ್ತದೆ. ಅದು ಈಗ ಆಚರಣೆಯ ಮೂಲಕ ಅದನ್ನು ಕಳೆದುಕೊಳ್ಳುವ ಉದ್ದೇಶದಿಂದ ಸೋದರಮಾವನೇ ನಿರ್ವಹಿಸುತ್ತಾನೆ. ಅದು ಅವನ ಹಕ್ಕು ಆಗಿರುತ್ತದೆ.

ಮದುವೆ ಕಾಲದಲ್ಲಿ ಅನೇಕ ಶಕುನ ನಂಬಿಕೆಗಳನ್ನು ನೋಡಿ ಕಾರ್ಯ ನಡೆಸುವುದು ಕಂಡು ಬರುತ್ತದೆ. ಇವು ಅವರು ನೆರವೇರಿಸುವ ಕಾರ್ಯಗಳಿಗೆ ಚಾಲನೆ ನೀಡಿವೆ. ಇವುಗಳಲ್ಲಿ ಕೆಲವು ಅರ್ಥ ಪೂರ್ಣವಾಗಿದ್ದರೆ ಇನ್ನು ಕೆಲವು ಅತಿವೈಜ್ಞಾನಿಕವಾಗಿವೆ. ಒಟ್ಟಿನಲ್ಲಿ ಇವರ ಮದುವೆಯ ಸೂತ್ರವು ಹಸಿ ಮತ್ತು ಕಾಮ ಸುತ್ತಿದ್ದು ಅದರ ಪೂರೈಕೆಯೇ ಇದರ ಉದ್ದೇಶವಾಗಿದೆ.

೪.೧.೪. ವಿಚ್ಛೇಧನ:

ದಂಪತಿಗಳಲ್ಲಿ ವೈಷಮ್ಯಗಳು ಬಂದರೆ ವಿವಾಹ ವಿಚ್ಛೇಧನ ಮಾಡಿಕೊಳ್ಳುವ ಅವಕಾಶ ಇವರಲ್ಲಿದೆ. ಪತಿಯಿಂದ ಪತ್ನಿಗೆ ಹಿಂಸೆಯಾಗುತ್ತಿದ್ದರೆ ಅಥವಾ ಪತ್ನಿಯು ವ್ಯಭಿಚಾರಿಣಿಯಾದರೆ ಅಥವಾ ಗಂಡನು ಜಾತಿಯಿಂದ ಬಹಿಷ್ಕಾರಹಾಕಿಸಿ ಕೊಂಡರೆ ವಿವಾಹ ವಿಚ್ಛೇಧನವು ಸ್ವೀಕೃತವೆನಿಸುತ್ತದೆ. ಇಂತಹ ವಿಷಯಗಳನ್ನು ಜನಾಂಗದ ಪಂಚಾಯಿತರ ಮುಂದೆ ನ್ಯಾಯಕ್ಕಿಟ್ಟು ತಪ್ಪಿತಸ್ಥರು ದಂಡ ಅಥವಾ ಪರಿಹಾರ ನೀಡುವುದರ ಮೂಲಕ ವಿಚ್ಛೇಧನವನ್ನು ಘೋಷಿಸುತ್ತಾರೆ. ವ್ಯಭಿಚಾರದ ವಿಚಾರದಲ್ಲಿ, ಆಕೆಯ ಬಿಟ್ಟ ಪುರುಷನು ಮದುವೆಯ ವೆಚ್ಚವನ್ನು ಜಾತಿಯ ಮುಖ್ಯಸ್ಥರಿಗೆ ದಂಡ ತೆರಬೇಕಾಗುತ್ತದೆ. ಆಗ ಆ ಮಹಿಳೆಯು ತನ್ನ ಗಂಡನ ತಾಳಿಯನ್ನು ಹಿಂದಿರುಗಿಸಿ 'ಕೂಡಿಕೆ' ಮಾಡಿಕೊಳ್ಳಬಹುದು. ಅಥವಾ ಅವನನ್ನು ಪುನರ್ ವಿವಾಹವಾಗಬಹುದು. "Divorse is permitted and enforced by forming the woman out of the house is the presence of the caste panchayat. The divorced woman is allowed to remarry by the same rite as widows. Adultery on the part of a woman, if with a member of higher caste, is condoned by a fine ranging from Rs.5 to Rs. 25, but it with a member of a lower caste it is punished by expulsion from her caste" (Syed Siraj Ul Hassan: 1989:621-622) ನ್ಯಾಯ ತೀರ್ಪು ಹಿಂದೂ ಕಾನೂನಿನ ಅನ್ವಯುವಿರುತ್ತದೆ. ಇದನ್ನು ಜಾತಿ ಹಿರಿಯ ಮುಖಂಡ ನೀಡುತ್ತಾನೆ. "The members of the caste follow the Hindu law of Inheritance. Female inberit in default of males. In Telangana the eldest son gets an ox in addition to his share, while in the carnatic he receives a few rupees more than his brothers"(ಅದೇ 622).

ಕೀಳು ಜಾತಿಯವನೊಂದಿಗೆ ನಡೆದ ವ್ಯಭಿಚಾರಕ್ಕೆ ಜಾತಿ ಬಹಿಷ್ಕಾರ ಅಥವಾ ದಂಡ ಹಾಕುತ್ತಾರೆ. ಹಿಂದೆ ಇವರಲ್ಲಿ ಕಠಿಣ ತರವಾದ ಶಿಕ್ಷೆ ವಿಧಿಸುತ್ತಿದ್ದರು. ತಪಿತಸ್ಥ ಮಹಿಳೆಗೆ ತಲೆ ಬೆಳಿಸುವುದು , ತಣ್ಣೀರಿನಿಂದ ಸ್ನಾನ ಮಾಡಿಸಿ, ಗಂಜಳ ಕುಡಿಸುವುದು ನಂತರ ಅವಳನ್ನು ದೇವಸ್ಥಾನಕ್ಕೆ ಕರೆದೊಯ್ದು ಪೂಜಾರಿಯ ಕೈಯಿಂದ ತೀರ್ಥವನ್ನು ಹಾಕಿಸಿ, ಅವಳ ಕುಟುಂಬದವರಿಂದ ದಂಡವನ್ನು ಕಟ್ಟಿಸಿಕೊಳ್ಳುತ್ತಿದ್ದರು. ತಪಿತಸ್ಥ ಪುರುಷನಾಗಿದ್ದರೆ ಆತನ ಅರ್ಧ ಮೀಸೆ, ಅರ್ಧ ಹುಬ್ಬು ಮತ್ತು ತಲೆಯ ಕೂದಲನ್ನು ಮೂರು ಸಮಾನಾಂತರ ಗೆರೆಗಳಲ್ಲಿ ಬೋಳಿಸುತ್ತಿದ್ದರು ನಂತರ ದೇವಸ್ಥಾನಕ್ಕೆ ಹೋಗಿ ತೀರ್ಥ ಚಿಮುಕಿಸಿಕೊಂಡು, ದಂಡ ಕಟ್ಟಿದ ನಂತರ ಬೆಂಕಿ ಹಚ್ಚಿ ಹುಲ್ಲಿನ ಮೇಲೆ ನಡೆದು ಬರಬೇಕಿತ್ತು.

ಕೆಲವು ವೇಳೆ ಗಂಡನ ಇಚ್ಚೆಯಂತೆ ಆ ವ್ಯಭಿರಕ್ಕೆ ವಿಷಾದಿಸಿ ಆ ಕುಲಕ್ಕೆ ತೆರಬೇಕಾದ ಅಲ್ಪ ದಂಡವನ್ನು ಶಿಕ್ಷೆಯಾಗಿ ಪರಿಗಣಿಸಲಾಗುತ್ತದೆ. ಅವಿವಾಹಿತಳೊಬ್ಬಳು ಪುರುಷನೊಂದಿಗೆ ವಾಸಿಸುತ್ತಿದ್ದರೆ ಮುಂದೆ ಆಕೆಯು ಕೂಡಿಕೆ ವಿಧಾನದಲ್ಲಿ ವಿವಾಹ ಮಾಡಿಕೊಳ್ಳುವ ಅವಕಾಶವಿದೆ. ಮೇಲುಜಾತಿಯ ಪುರುಷನೊಂದಿಗೆ ಸಂಬಂಧ ಹೊಂದಿದಾಗಲೂ 'ಕೂಡಿಕೆ' ಮಾಡಿಕೊಳ್ಳಬಹುದು. ಆದರೆ ಗಾರೆ ಉಪ್ಪಲಿಗರು ಇಂತಹ ಸಂಬಂಧಗಳನ್ನು ಸಹಿಸುವುದಿಲ್ಲ. ಇವರಲ್ಲಿ ಬಸವಿ ಬಿಡುವ ಪದ್ಧತಿ ಇಲ್ಲ. ಅನೈತಿಕ ಮಹಿಳೆಯರನ್ನು ಬಹಿಷ್ಕರಿಸುತ್ತಿದ್ದರು. ಅನೈತಿಕ ಮಹಿಳೆಯರು ಸತ್ತಾಗ ಅವರ ಹಣೆಯ ಮೇಲೆ ನಾಮಗಳನ್ನು ಬಳಸಿ, ಅವರಿಂದಲೇ ಸಂಸ್ಕಾರ ಮಾಡಿಸುತ್ತಿದ್ದರು.

ವಿಚ್ಛೇದನಕ್ಕೆ ಪ್ರಬಲ ಕಾರಣವಿರಬೇಕು. "Divorce is allowed. The cast follow the Hindu Law of inberitance (Enthoven R.E. 1990:395)ವಿಚ್ಛೇದನ ಕಾನೂನಿನ ಪ್ರಕಾರ ನಡೆಯುತ್ತದೆ. ವಿಚ್ಛೇದನ ಒಳ್ಳೆಯ ವಿಧಾನ. ಇಷ್ಟವಿಲ್ಲದವನ ಅಥವಾ ಇಷ್ಟವಿಲ್ಲದವಳ ಜೊತೆ ಕಷ್ಟದಿಂದ ಬದುಕುವುದಕ್ಕಿಂತ ಈ ವ್ಯವಸ್ಥೆ ಉತ್ತಮವಾಗಿ ಕಾಣುತ್ತದೆ. ಗುರು ಹಿರಿಯರ ಮಧ್ಯೆ ಒಪ್ಪಿಗೆ ಪಡೆದು ತಾವು ಇಷ್ಟ ಪಡುವವರನ್ನು ವರಿಸುವುದು ಆರೋಗ್ಯಕರವಾಗಿ ಕಂಡು ಬರುತ್ತದೆ. ಮನುಷ್ಯನಾದವನು ತಪ್ಪುಮಾಡುತ್ತಾನೆ. ಹಾಗೆಂದ ಮಾತ್ರಕ್ಕೆ ಕ್ಷಮೆ ಇಲ್ಲವೆಂದಲ್ಲ ಎನ್ನುವುದನ್ನು ಇವರು ಮರೆತಿಲ್ಲ. ಒಮ್ಮೆ ತಪ್ಪಿದವರಿಗೆ ಇನ್ನೊಂದು ಅವಕಾಶ ಮಾಡಿಕೊಟ್ಟು ಅವರನ್ನು ಸರಿಪಡಿಸುವಂತೆ ಮಾಡುವ ಕಾರ್ಯ. ಇದು ಇವರಲ್ಲಿರುವ ಮಾನವೀಯ ಮೌಲ್ಯದ ಬೆಲೆಯನ್ನು ಹೆಚ್ಚಿಸಿದೆ. ತನ್ನ ಸುಖ ಮೊದಲು ಅನಂತರ ಸಮೂಹದ ಮರ್ಯಾದೆ. ತಾನು ಸುಖವಾಗಿದ್ದರೆ ಸಮೂಹದ ಮಾನ, ಮಾರ್ರ್ಯಾದೆ, ಘನತೆ, ಗೌರವಗಳು ಉಳಿಯುತ್ತವೆ ಎಂದು ನಂಬುತ್ತಾರೆ. ಈ ಕಾರಣದಿಂದಲೇ ಹಿಂದೆ ಇರುವ ಶಿಕ್ಷೆಗಳು ಎಷ್ಟು ಕಠಿಣವಾಗಿದ್ದರೂ ಆನಂತರ ಅವರನ್ನು ಸಮೂಹದ ಒಳಗೆ ಸೇರಿಸಿಕೊಳ್ಳಲಾಗುತ್ತಿತ್ತು. ಪಂಚರ ಸಭೆಯಲ್ಲಿ ಜಾತಿ ಮುಖ್ಯಸ್ಥನು ಕೋಲ್ಕಾರ ತಮಿಳಿನಲ್ಲಿ ಪೆರಿಯರುಗಳು, ಬುದ್ಧಿವಂತ, ಕಟ್ಟೆಮನೆಯವರು ಸೇರಿಕೊಂಡಿರುತ್ತಿದ್ದರು.

೪.೧೧.೫ ಮರಣ ಸಂಪ್ರದಾಯ

ಹುಟ್ಟು-ಸಾವು ಬದುಕಿನ ಎರಡು ಪ್ರಮುಖ ಘಟ್ಟಗಳು. ಇವು ಬದುಕಿನ ಮಹತ್ವದ ಕ್ಷಿತಿಜಗಳಾಗಿವೆ. ಒಂದಲ್ಲಾ ಒಂದುದಿನ ಸಾವನ್ನು ಎದುರಿಸಲೇ ಬೇಕು. ಇದು ವ್ಯಕ್ತಿಯ ಬೆನ್ನ ಹಿಂದೆಯೇ ಇರುತ್ತದೆ

ಅಂದರೆ ವ್ಯಕ್ತಿಯ ಬದುಕಿನ ಕಾಲ ಅನಿಶ್ಚಿತ. ಇತರ ಜನಾಂಗಗಳಂತೆ ಉಪ್ಪಾರರು ಸಾವೇ ಮನುಷ್ಯನ ಜೀವನದ ಕೊನೆಯಲ್ಲ ಎಂದು ನಂಬುತ್ತಾರೆ. ಶರೀರ ನಶ್ವರ, ಆತ್ಮ ಶಾಶ್ವತವಾದದ್ದು. ಅವನ ದೇಹದಲ್ಲಿ ಅಗೋಚರವಾದಂತಹ ಒಂದು ಚೇತನ ಅಥವಾ ಆತ್ಮ ಇದೆ ಎಂದೂ, ಅದಕ್ಕೆ ಎಂದೂ ಸಾವಿಲ್ಲ. ಮತ್ತೆ ಮತ್ತೆ ಆತ್ಮ ಈ ಭೂಮಿಯ ಮೇಲೆ ಅನೇಕ ಜನ್ಮಗಳನ್ನು ಪಡೆಯುತ್ತದೆ. ವ್ಯಕ್ತಿಯು ತನ್ನ (ಬದುಕಿನ ಕಾಲದಲ್ಲಿ) ಜೀವಿತಾವಧಿಯಲ್ಲಿ ಮಾಡಿದ ಪಾಪ-ಪುಣ್ಯಗಳ ಮೇಲೆ ಸತ್ತನಂತರ, ಅವನ ಆತ್ಮವು ಮುಂದಿನ ಜನ್ಮದಲ್ಲಿ, ಅದಕ್ಕನುಸರಿಸಿ ಜನ್ಮ ಪಡೆಯುತ್ತದೆ ಎಂದು ದೃಢವಾಗಿ ಉಪ್ಪಾರರು ನಂಬುತ್ತಾರೆ. ಈ ಕಾರಣದಿಂದಲೇ ವ್ಯಕ್ತಿ ಸತ್ತಾಗ ಮತ್ತು ಸತ್ತ ಆನಂತರ ಅನೇಕ ರೂಢಿ, ವಿಧಿ, ವಿಧಾನಗಳಿಗೆ ಆಧಾರವಾಗಿದೆ. ಮೃತ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿಯೇ ಒಳ್ಳೆಯವನಾಗಿದ್ದರೆ, ಆತ ಮರಣಿಸಿದಾಗ ಅವನನ್ನು ಜನ ಕೊಂಡಾಡುತ್ತಾರೆ. "ಶರಣರ ಜೀವನವನ್ನು, ಮರಣದಲ್ಲಿ ನೋಡು" ಎಂಬ ಗಾದೆಯಂತೆ ಉತ್ತಮ ವ್ಯಕ್ತಿಯ ಸಾವಿನಲ್ಲಿ ಜನ ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ; ಹೊಗಳಿ ಕೊಂಡಾಡುತ್ತಾರೆ. ಇದು ಆ ವ್ಯಕ್ತಿಯ ಬದುಕಿನ ಸಾರ್ಥಕತೆಗೆ ಸಾಕ್ಷಿಯಾಗಿದೆ.

ವ್ಯಕ್ತಿಯ ಸಾವು ಸಮೀಪಿಸಿದಾಗ ಅವನ ಶರೀರವನ್ನು ಮನೆಯ ಅಂಗಳಕ್ಕೆ ಅಥವಾ ಪಡಸಾಲೆಗೆ ತಂದು ಚಾಪೆ ಮೇಲೆ ಮಲಗಿಸುತ್ತಾರೆ. ಆ ಸಂದರ್ಭದಲ್ಲಿ ಆತನ ಬಾಯಿಗೆ, ಆತನ ಮಕ್ಕಳು, ಹತ್ತಿರದ ಸಂಬಂಧಿಗಳು, ನೆರೆಹೊರೆಯವರು, ಬಾಯಿಗೆ ವೀಳ್ಯದೆಲೆಯಿಂದ ಹಾಲು-ನೀರು ಬಿಡುತ್ತಾರೆ. ಇದಕ್ಕೆ "ಬಾಯಿಗೆ ಬಿಡುವುದು" ಎಂದು ಕರೆಯುತ್ತಾರೆ. ವ್ಯಕ್ತಿಯು ಸತ್ತ ನಂತರ ಮನೆಯ ಅಂಗಳದಲ್ಲಿ ಬೆಂಕಿ ಹಾಕುತ್ತಾರೆ. ಇದು ಆ ಮನೆಯಲ್ಲಿ ಯಾರೋ ಮರಣಹೊಂದಿದ್ದರೆ ಎನ್ನುವುದನ್ನು ಸೂಚಿಸುತ್ತದೆ.

ಹಾಲು ಮತ್ತು ನೀರನ್ನು ವ್ಯಕ್ತಿಯ ಬಾಂಧವರೆಲ್ಲಾ ಬಿಟ್ಟ ನಂತರ ಆತನ ತಲೆಯ ಬಲಭಾಗಕ್ಕೆ ದೀಪ ಹಚ್ಚಿಡುತ್ತಾರೆ. ಮತ್ತು ಒಂದು ತಂಬಿಗೆ ನೀರನ್ನು ತುಂಬಿಟ್ಟಿರುತ್ತಾರೆ. ಪೂಜೆಗೆ ಬೇಕಾದ ಸಾಮಾಗ್ರಿಗಳನ್ನು, ಹೂವು, ಕಾಯಿ, ಹಣ್ಣು ಎಲ್ಲವನ್ನು ಇಟ್ಟಿರುತ್ತಾರೆ. ಮೃತವ್ಯಕ್ತಿಯನ್ನು ನೋಡಲು ಬಂದವರು, ಅಂದರೆ ಹತ್ತಿರದ ಬಂಧುಗಳು, ಹೂವು, ಕಾಯಿ, ಹೂವು ತಂದು, ಪೂಜಿಸಿ ಮೃತ ವ್ಯಕ್ತಿಗೆ ಅಂತಿಮ ಗೌರವನ್ನು ಸಲ್ಲಿಸುತ್ತಾರೆ. ನಂತರ 'ಸತಾನಿ' ಎಂಬ ಪೂಜಾರಿ ಬಿದಿರಿನ ಚಕ್ರವನ್ನು ತಯಾರಿಸಿ, ಹೆಣದ ಮುಂದೆ ಇಟ್ಟು ಪೂಜಿಸುತ್ತಾರೆ. ಈ ವೇಳೆಗಾಗಲೇ ಸತ್ತಸುದ್ದಿಯನ್ನು ತಿಳಿಸಲು ಕವಡಿಗಳನ್ನು ಕಳುಹಿಸುತ್ತಾರೆ. * ('ಕವಡಿ' ಎಂದರೆ ಆದಿ ಕರ್ನಾಟಕ) ಕವಡಿಯು ಮೃತವ್ಯಕ್ತಿಯ ಬಂಧುಗಳ ಮನೆಗೆ ಹೋಗಿ ಸಾವಿನ ಸುದ್ದಿಯನ್ನು ತಿಳಿಸುತ್ತಾನೆ. ಈತನಿಗೆ ಅವರು ಹಣ, ಅಕ್ಕಿ ಯಾವುದಾದರೂ ಲೋಹದ ತಂಬಿಗೆ, ಬಟ್ಟೆ ಕೊಡುತ್ತಾರೆ. ಆತ ದುಃಖದ ಸಂದೇಶವನ್ನು ತಂದಿದ್ದಕ್ಕಾಗಿ ಈ ಕಾಣಿಕೆಯನ್ನು ಕೊಟ್ಟು ಅವನನ್ನು ತೃಪ್ತಿಗೊಳಿಸುತ್ತಾರೆ. ಈ ಸಾವಿನ ಸುದ್ದಿಯನ್ನು ತಿಳಿಸಲು ಇತರ ಜನಾಂಗದವರು ಹೋಗುತ್ತಾರೆ.

ಸುದ್ದಿಯನ್ನು ತಿಳಿದ ಬಂಧುಗಳು ಮೃತವ್ಯಕ್ತಿಯ ಮನೆಯ ಮುಂದೆ ಬಂದು ಸೇರುತ್ತಾರೆ.

ಮೃತವ್ಯಕ್ತಿಯ ಜೀವಿತಾವಧಿಯಲ್ಲಿ ಆಸೆ ಪಡುವ ಪದಾರ್ಥ ಮತ್ತು ವಸ್ತುಗಳನ್ನು ಶವದ ಪಕ್ಕದಲ್ಲಿ ಇಡುತ್ತಾರೆ. ಮನೆಯ ಹೊರಗಡೆ ಆ ಪ್ರದೇಶದಲ್ಲಿ ಬೆಳೆಯುವ ಧಾನ್ಯಗಳನ್ನು (ರಾಗಿ, ಜೋಳ, ಭತ್ತ) ಮರದಲ್ಲಿ ತುಂಬಿಡುತ್ತಾರೆ. ಶವ ಎತ್ತಿದ ಅನಂತರ ಮೊರದಲ್ಲಿರುವ ದವಸ ಧಾನ್ಯಗಳನ್ನು ಮಡಿವಾಳ ಮತ್ತು ಹೊಲೆಯರಿಗೆ ದಾನ ಕೊಡುತ್ತಾರೆ.

ಶವಕ್ಕೆ ಸ್ನಾನ ಮಾಡಿಸಿ ಆತನ ಮದುವೆಯ ಸಂದರ್ಭದಲ್ಲಿ ಹೇಗೆ ಅಲಂಕಾರ ಮಾಡುತ್ತಾರೋ ಅದೇ ರೀತಿ ಅಲಂಕರಿಸಿ ಪೂಜಿಸುತ್ತಾರೆ. ಸತ್ತ ವ್ಯಕ್ತಿ 'ಹೆಂಗಸಾದರೆ' ಅವಳ ಪಕ್ಕದಲ್ಲಿ ಗಂಡನನ್ನು ಕೂರಿಸಿ ಆರತಿ ಮಾಡುತ್ತಾರೆ. ಹೆಂಡತಿಯನ್ನು ಪಕ್ಕದಲ್ಲಿ ಕೂರಿಸಿ ಆರತಿಯನ್ನು ಮಾಡುತ್ತಾರೆ. ಮೃತವ್ಯಕ್ತಿಯ ಹಿರಿಯ ಮಗನು ಅಂಗಳದಲ್ಲಿ ಉರಿಯುವ ಬೆಂಕಿಯ ಮೇಲೆ ಹೊಸ ಮಡಿಕೆಯನ್ನು ಇಟ್ಟು ನೀರು ಹಾಕಿ ಒಂದು ಹಿಡಿ ಅಕ್ಕಿಯನ್ನು ಹಾಕಿ, ಅರೆಬರೆ ಬೇಯಿಸುತ್ತಾನೆ. ಬೆಂಕಿಯನ್ನು ಒಂದು ಸಣ್ಣ ಮಡಿಕೆಗೆ ಹಾಕಿಕೊಂಡು 'ಕುಳ್ಳು' (ಬೆರಣಿ) ಹಾಕಿ, ಗಂಧದ ಚೆಕ್ಕೆಯನ್ನು ಹಾಕಿ, ಮಡಿಕೆಯನ್ನು ಆಗಲೇ ಸಿದ್ಧಪಡಿಸಿಟ್ಟುಕೊಂಡ ತ್ರಿಕೋನದ ಮೇಲೆ ಇಟ್ಟು, ಹಗ್ಗದ ಹಿಡಿಕೆಯನ್ನು ಹಿಡಿದುಕೊಂಡು ಮುನ್ನಡೆಯುತ್ತಾನೆ. ಆತನ ಹಿಂದೆ ಮೃತವ್ಯಕ್ತಿಯನ್ನು ಹೊತ್ತುಕೊಂಡ ಮಕ್ಕಳು ಮತ್ತು ಬಂಧುಗಳು ಹೋಗುತ್ತಾರೆ. * ಶವವನ್ನು ಹೊತ್ತವರು ಮಾರ್ಗದಲ್ಲಿ ಅಲ್ಲಲ್ಲಿ ಇಳಿಸಿ ಹಿಂದೆ ಹೊತ್ತವರು ಮುಂದೆ ಮುಂದೆ ಹೊತ್ತವರು ಹಿಂದೆ ಹೆಗಲನ್ನು ಬದಲಾಯಿಸಿಕೊಂಡು ಹೋಗುವ ಪದ್ಧತಿ ಇವರಲ್ಲೂ ಉಂಟು. ವೈಷ್ಣವ ಭಕ್ತರಾದರೆ 'ಗೋವಿಂದ' 'ಗೋವಿಂದ' ಎಂತಲೂ, ಶಿವಭಕ್ತರಾದರೆ 'ಶಿವ' 'ಶಿವ' ಎಂತಲೂ ಹೇಳುತ್ತಾ ಹೋಗುತ್ತಾರೆ. ದಾರಿ ಉದ್ದಕ್ಕೂ ಶವದ ಮೇಲೆ ಕಾಸು, ಮತ್ತು ಮಂಡಕ್ಕಿ ಎರೆಚುತ್ತಾರೆ. ಮನೆಗೂ ಸಂಸ್ಕಾರದ ಜಾಗಕ್ಕೂ ಮಧ್ಯಬಂದಾಗ ಆ ಸ್ಥಳದಲ್ಲಿ 3 ಕಲ್ಲನ್ನು ಇಟ್ಟು ಹೊಸಮಡಿಕೆಯನ್ನು ಅದರ ಮೇಲೆ ಎತ್ತಿಹಾಕುತ್ತಾನೆ. ಆಗ ಶವವನ್ನು ಹೊತ್ತವರು ಮುಂದೆ ಇದ್ದವರು ಹಿಂದಕ್ಕೂ ಹಿಂದೆ ಇದ್ದವರು ಮುಂದಕ್ಕೂ ಬರುತ್ತಾರೆ. ಮಡಿಕೆ ಒಡೆದು ಹಾಕಿದವ (ಹಿರಿಯ ಮಗ) ಮುಂದೆ ಮುಂದೆ ಹೋಗುತ್ತಿರುತ್ತಾನೆ. ರುದ್ರಭೂಮಿಯಲ್ಲಿ ಆಗಲೇ ನಿರ್ಮಿಸಿದ ಗುಣಿಯ ಹತ್ತಿರ ಶವವನ್ನು ಹೊತ್ತು ತರುತ್ತಾರೆ. ಈ ಸಂದರ್ಭದಲ್ಲಿ ಆತನ ಬಂಧು-ಬಾಂಧವರೆಲ್ಲಾ ಆ ಸ್ಥಳಕ್ಕೆ ಬಂದಿರುತ್ತಾರೆ. ಶವದ ಮೇಲಿನ ಎಲ್ಲಾ ಬಟ್ಟೆಗಳನ್ನು ತೆಗೆದು ಹಾಕುತ್ತಾರೆ. ಈ ಬಟ್ಟೆಗಳನ್ನು ಮಡಿವಾಳ ಅಥವಾ ಹೊಲೆಯ ತೆಗೆದುಕೊಳ್ಳುತ್ತಾನೆ. ಅನಂತರ ಶವವನ್ನು ಕುಣಿಯಲ್ಲಿ ಅಂಗಾತ ಮಲಗಿಸಿ, ಹಿರಿಯ ಮಗ ಮೊದಲು ಮಣ್ಣನ್ನು ಹಾಕುತ್ತಾನೆ. ಅವನ ಅನಂತರ ಹೆಂಡತಿ, ಮಕ್ಕಳು, ಬಂಧು-ಭಾಂಧವರೆಲ್ಲಾ ಮಣ್ಣನ್ನು ಹಾಕಿ ಅಂತಿಮ ಋಣ ತೀರಿಸುತ್ತಾರೆ. *

ಸುದ್ದಿಯನ್ನು ತಿಳಿದ ಬಂಧುಗಳು ಮೃತವ್ಯಕ್ತಿಯ ಮನೆಯ ಮುಂದೆ ಬಂದು ಸೇರುತ್ತಾರೆ.

ಮೃತವ್ಯಕ್ತಿಯ ಜೀವಿತಾವಧಿಯಲ್ಲಿ ಆಸೆ ಪಡುವ ಪದಾರ್ಥ ಮತ್ತು ವಸ್ತುಗಳನ್ನು ಶವದ ಪಕ್ಕದಲ್ಲಿ ಇಡುತ್ತಾರೆ. ಮನೆಯ ಹೊರಗಡೆ ಆ ಪ್ರದೇಶದಲ್ಲಿ ಬೆಳೆಯುವ ಧಾನ್ಯಗಳನ್ನು (ರಾಗಿ, ಜೋಳ, ಭತ್ತ) ಮರದಲ್ಲಿ ತುಂಬಿಡುತ್ತಾರೆ. ಶವ ಎತ್ತಿದ ಅನಂತರ ಮೊರದಲ್ಲಿರುವ ದವಸ ಧಾನ್ಯಗಳನ್ನು ಮಡಿವಾಳ ಮತ್ತು ಹೊಲೆಯರಿಗೆ ದಾನ ಕೊಡುತ್ತಾರೆ.

ಶವಕ್ಕೆ ಸ್ನಾನ ಮಾಡಿಸಿ ಆತನ ಮದುವೆಯ ಸಂದರ್ಭದಲ್ಲಿ ಹೇಗೆ ಅಲಂಕಾರ ಮಾಡುತ್ತಾರೋ ಅದೇ ರೀತಿ ಅಲಂಕರಿಸಿ ಪೂಜಿಸುತ್ತಾರೆ. ಸತ್ತ ವ್ಯಕ್ತಿ 'ಹೆಂಗಸಾದರೆ' ಅವಳ ಪಕ್ಕದಲ್ಲಿ ಗಂಡನನ್ನು ಕೂರಿಸಿ ಆರತಿ ಮಾಡುತ್ತಾರೆ. ಹೆಂಡತಿಯನ್ನು ಪಕ್ಕದಲ್ಲಿ ಕೂರಿಸಿ ಆರತಿಯನ್ನು ಮಾಡುತ್ತಾರೆ. ಮೃತವ್ಯಕ್ತಿಯ ಹಿರಿಯ ಮಗನು ಅಂಗಳದಲ್ಲಿ ಉರಿಯುವ ಬೆಂಕಿಯ ಮೇಲೆ ಹೊಸ ಮಡಿಕೆಯನ್ನು ಇಟ್ಟು ನೀರು ಹಾಕಿ ಒಂದು ಹಿಡಿ ಅಕ್ಕಿಯನ್ನು ಹಾಕಿ, ಅರೆಬರೆ ಬೇಯಿಸುತ್ತಾನೆ. ಬೆಂಕಿಯನ್ನು ಒಂದು ಸಣ್ಣ ಮಡಿಕೆಗೆ ಹಾಕಿಕೊಂಡು 'ಕುಳ್ಳು' (ಬೆರಣಿ) ಹಾಕಿ, ಗಂಧದ ಚೆಕ್ಕೆಯನ್ನು ಹಾಕಿ, ಮಡಿಕೆಯನ್ನು ಆಗಲೇ ಸಿದ್ಧಪಡಿಸಿಟ್ಟುಕೊಂಡ ತ್ರಿಕೋನದ ಮೇಲೆ ಇಟ್ಟು, ಹಗ್ಗದ ಹಿಡಿಕೆಯನ್ನು ಹಿಡಿದುಕೊಂಡು ಮುನ್ನಡೆಯುತ್ತಾನೆ. ಆತನ ಹಿಂದೆ ಮೃತವ್ಯಕ್ತಿಯನ್ನು ಹೊತ್ತುಕೊಂಡ ಮಕ್ಕಳು ಮತ್ತು ಬಂಧುಗಳು ಹೋಗುತ್ತಾರೆ. * ಶವವನ್ನು ಹೊತ್ತವರು ಮಾರ್ಗದಲ್ಲಿ ಅಲ್ಲಲ್ಲಿ ಇಳಿಸಿ ಹಿಂದೆ ಹೊತ್ತವರು ಮುಂದೆ ಮುಂದೆ ಹೊತ್ತವರು ಹಿಂದೆ ಹೆಗಲನ್ನು ಬದಲಾಯಿಸಿಕೊಂಡು ಹೋಗುವ ಪದ್ಧತಿ ಇವರಲ್ಲೂ ಉಂಟು. ವೈಷ್ಣವ ಭಕ್ತರಾದರೆ 'ಗೋವಿಂದ' 'ಗೋವಿಂದ' ಎಂತಲೂ, ಶಿವಭಕ್ತರಾದರೆ 'ಶಿವ' 'ಶಿವ' ಎಂತಲೂ ಹೇಳುತ್ತಾ ಹೋಗುತ್ತಾರೆ. ದಾರಿ ಉದ್ದಕ್ಕೂ ಶವದ ಮೇಲೆ ಕಾಸು, ಮತ್ತು ಮಂಡಕ್ಕಿ ಎರೆಚುತ್ತಾರೆ. ಮನೆಗೂ ಸಂಸ್ಕಾರದ ಜಾಗಕ್ಕೂ ಮಧ್ಯಬಂದಾಗ ಆ ಸ್ಥಳದಲ್ಲಿ 3 ಕಲ್ಲನ್ನು ಇಟ್ಟು ಹೊಸಮಡಿಕೆಯನ್ನು ಅದರ ಮೇಲೆ ಎತ್ತಿಹಾಕುತ್ತಾನೆ. ಆಗ ಶವವನ್ನು ಹೊತ್ತವರು ಮುಂದೆ ಇದ್ದವರು ಹಿಂದಕ್ಕೂ ಹಿಂದೆ ಇದ್ದವರು ಮುಂದಕ್ಕೂ ಬರುತ್ತಾರೆ. ಮಡಿಕೆ ಒಡೆದು ಹಾಕಿದವ (ಹಿರಿಯ ಮಗ) ಮುಂದೆ ಮುಂದೆ ಹೋಗುತ್ತಿರುತ್ತಾನೆ. ರುದ್ರಭೂಮಿಯಲ್ಲಿ ಆಗಲೇ ನಿರ್ಮಿಸಿದ ಗುಣಿಯ ಹತ್ತಿರ ಶವವನ್ನು ಹೊತ್ತು ತರುತ್ತಾರೆ. ಈ ಸಂದರ್ಭದಲ್ಲಿ ಆತನ ಬಂಧು-ಬಾಂಧವರೆಲ್ಲಾ ಆ ಸ್ಥಳಕ್ಕೆ ಬಂದಿರುತ್ತಾರೆ. ಶವದ ಮೇಲಿನ ಎಲ್ಲಾ ಬಟ್ಟೆಗಳನ್ನು ತೆಗೆದು ಹಾಕುತ್ತಾರೆ. ಈ ಬಟ್ಟೆಗಳನ್ನು ಮಡಿವಾಳ ಅಥವಾ ಹೊಲೆಯ ತೆಗೆದುಕೊಳ್ಳುತ್ತಾನೆ. ಅನಂತರ ಶವವನ್ನು ಕುಣಿಯಲ್ಲಿ ಅಂಗಾತ ಮಲಗಿಸಿ, ಹಿರಿಯ ಮಗ ಮೊದಲು ಮಣ್ಣನ್ನು ಹಾಕುತ್ತಾನೆ. ಅವನ ಅನಂತರ ಹೆಂಡತಿ, ಮಕ್ಕಳು, ಬಂಧು-ಭಾಂಧವರೆಲ್ಲಾ ಮಣ್ಣನ್ನು ಹಾಕಿ ಅಂತಿಮ ಋಣ ತೀರಿಸುತ್ತಾರೆ. *

ಶವವನ್ನು ಹೊತ್ತವರು ಶವಸಂಸ್ಕಾರದ ನಂತರ ಹತ್ತಿರದಲ್ಲಿರುವ ನದಿ ಅಥವಾ ಬಾವಿಗೆ ಹೋಗಿ ಸ್ನಾನಮಾಡುತ್ತಾರೆ. ಯಾವುದೇ ಕಾರಣಕ್ಕೂ ಸೋಪನ್ನು ಬಳಸುವುದಿಲ್ಲ. ನಂತರ ನೇರವಾಗಿ ಮೃತವ್ಯಕ್ತಿಯ ಮನೆಗೆ ಬಂದು ಸ್ನಾನಮಾಡಿ ಸಪ್ಪೆಯ ಊಟವನ್ನು ಮಾಡಿ, ಅವರವರ ಊರಿಗೆ ಹೊರಡುತ್ತಾರೆ. ಹೊರಡುವಾಗ ಯಾರಿಗೂ ಹೇಳದೇ ತಮ್ಮ ತಮ್ಮ ಹಾಡಿಗೆ ಹೋಗುತ್ತಾರೆ.

ಬಸುರಿ, ಬಾಣಂತಿ, ಅಕಾಲ ಮರಣಕ್ಕೆ ಈಡಾದವರು, ತೊನ್ನು ಮತ್ತು ಇತರೆ ಸಾಂಕ್ರಾಮಿಕ ರೋಗದಿಂದ ಸತ್ತವರನ್ನು ಸುಡುತ್ತಾರೆ. ಇವರನ್ನು ಹೂಳುವುದರಿಂದ ಮಳೆ, ಬೆಳೆ ಆಗುವುದಿಲ್ಲವೆಂದೂ, ದೆವ್ವ, ಪಿಶಾಚಿ, ಗಳಾಗುತ್ತಾರೆಂದು ನಂಬುತ್ತಾರೆ. ಕೆಲ ಭಾಗದಲ್ಲಿ ಯಾವುದೇ ವ್ಯಕ್ತಿ ಶುಕ್ರವಾರದಂದು ಸತ್ತರೆ ಆ ವ್ಯಕ್ತಿಯ ಶರೀರವನ್ನು ಸುಡುತ್ತಾರೆ. ಕಲ್ಲು ಸೇವೆ ಅಥವಾ ಕಲ್ಲು ಬಣ ಎಂದು ಕರೆಯುವ ಕಲ್ಲಿನ ರಾಶಿಗಳ ಕೆಳಗೆ ಶರೀರವನ್ನು ಹೂಳುವ ಆಚರಣೆಯೂ ಉಂಟು. ಶುಭಕಾರ್ಯಗಳಲ್ಲಿ ಸತ್ತರೆ ಅಂತವರನ್ನು ಕಂಬಳಿಯಲ್ಲಿ ಸುತ್ತಿಕೊಂಡು ಹೋಗುತ್ತಾರೆ.

**ಗುಡ್ಡೇಶಾಸ್ತ್ರ:** ಇದನ್ನು ಕೆಲವು ಭಾಗಗಳಲ್ಲಿ ಇಂಡೇಕೂಳು, ಕೂಳು ಹಾಕುವುದು ಮತ್ತು ಹಾಲು ಹಾಕುವುದು ಎಂದು ಕರೆಯುತ್ತಾರೆ. ಈ ಪದ್ಧತಿಯನ್ನು ವ್ಯಕ್ತಿಯು ಸತ್ತ ಮೂರನೆ ದಿನಕ್ಕೆ ಮಾಡುತ್ತಾರೆ. ಶವ ಸಂಸ್ಕಾರಕ್ಕೆ ಬಂದ ವ್ಯಕ್ತಿಗಳೆಲ್ಲಾ ಆ ದಿನ ಸೇರಿ, ಮೃತನ ಮನೆಯಲ್ಲಿ ಅಡುಗೆಮಾಡಿಕೊಂಡು ಶವ ಹೂತಿರುವ ಜಾಗಕ್ಕೆ ಹೋಗಿ ಎಡೆ ಇಟ್ಟು ಪೂಜಿಸಿಕೊಂಡು ಬರುತ್ತಾರೆ. ಒಂದು ವೇಳೆ ಮೂರನೇ ದಿನ ಅಮಾವಾಸ್ಯೆ ಆದರೆ ಐದನೇ ದಿನ ಈ ಶಾಸ್ತ್ರವನ್ನು ಮಾಡುತ್ತಾರೆ. ಸತ್ತ ದಿನದಿಂದ ಮೂರನೇ ದಿನದ ವರೆಗೂ ಮೃತವ್ಯಕ್ತಿಗಾಗಿ ಕಂಬದಲ್ಲಿ ಮನೆಯ ಹೊರಗಿನ ಹಿತ್ತಲಲ್ಲಿ ಮೂರು ಹೊತ್ತೂ ಗಂಜಿಯನ್ನು ಇಡುತ್ತಾರೆ. ಕರವದಲ್ಲಿರುವ ಇಲ್ಲದಿದ್ದರೆ ಮೃತ ವ್ಯಕ್ತಿ ತಿಂದು ಹೋಗಿದ್ದಾನೆಂದು ನಂಬುತ್ತಾರೆ. ಮೃತವ್ಯಕ್ತಿಗೆ ಊಟ ಇಡುವವನ ಮೇಲೆ ವಿಶ್ವಾಸ, ಪ್ರೀತಿ ಇಲ್ಲದೇ ಇದ್ದರೆ ಗಂಜಿಯನ್ನ ತಿನ್ನುವುದಿಲ್ಲವೆಂದೂ ನಂಬುತ್ತಾರೆ. ಈ ಕಾರಣದಿಂದ ಯಾರು ಹೆಚ್ಚು ಪ್ರಿಯರೋ ಅವರೇ ಈ ಕೆಲಸವನ್ನು ನಿರ್ವಹಿಸುತ್ತಾರೆ.

**ಕಟ್ಲೆ** : 11 ನೇ ದಿನ ನೆಡೆಯುವ ಆಚರಣೆಗೆ ಸಮಾರಾಧನೆಯೆಂದೂ ಅಥವಾ ಶಿವಗಣಾರಾಧನೆಯೆಂದೂ, ಅಥವಾ ವೈಕುಂಠ ಸಮಾರಾಧನೆ ಯೆಂದೂ ಕರೆಯುತ್ತಾರೆ. ಈ ಕಾರ್ಯವನ್ನು ಹನ್ನೊಂದನೆಯ ದಿನಕ್ಕೆ ಇಲ್ಲವೆ ಸತ್ತ ತಿಂಗಳೊಳಗಾಗಿ ಮಾಡುತ್ತಾರೆ. ಆ ದಿನ ಮನೆಯನ್ನು ಸ್ವಚ್ಛಗೊಳಿಸುತ್ತಾರೆ. ಇಲ್ಲವೇ ಸುಣ್ಣ ಬಣ್ಣ ಬಳಿಯುತ್ತಾರೆ. ಮನೆ ಮಂದಿಯ ಬಟ್ಟೆಗಳನ್ನೆಲ್ಲ ಅಗಸನು ಒಗೆದು ತಂದು ಕೊಡುತ್ತಾನೆ. ಮನೆಯ ಒಳಗೂ ಮತ್ತು ಹೊರಗೂ ಗೋಮೂತ್ರ ಹಾಕಿ ಸತ್ತ ಸೂತಕ ತೆಗೆದುಕೊಳ್ಳುತ್ತಾರೆ. ಮೃತವ್ಯಕ್ತಿ ಕೊನೆಯುಸಿರೆಳೆದ

ಸ್ಥಳದಲ್ಲಿ ಒಲೆಯನ್ನು ಹೂಡಿ ಸಿಹಿ ಅಡಿಗೆ ಮಾಡುತ್ತಾರೆ. ನಂತರ ಮನೆಯ ಒಳಗಡೆ ತೊಳೆದ ಮಣೆಯ ಮೇಲೆ ಅಕ್ಕಿ ಹಾಕಿ ಅದರ ಮೇಲೆ ಕಳಸವನ್ನು ಇಟ್ಟು ತೆಂಗಿನ ಕಾಯಿ ಇಡುತ್ತಾರೆ. ಪಕ್ಕದಲ್ಲಿ ಅವನು ತೊಡುತ್ತಿದ್ದ ಬಟ್ಟೆ, ಉಪಯೋಗಿಸುತ್ತಿದ್ದ ವಸ್ತುಗಳೇನಾದರೂ ಇದ್ದರೆ ಅವನ್ನು ಇಡುತ್ತಾರೆ. ಮಣೆಯ ಮುಂದೆ ಬಾಳೆ ಎಲೆಯನ್ನು ಹಾಕಿ ಆತ ಇಷ್ಟಪಡುತ್ತಿದ್ದ ತಿನಿಸುಗಳನ್ನು ಇಡುತ್ತಾರೆ. ಮಣೆಯ ಇನ್ನೊಂದು ಭಾಗದಲ್ಲಿ ಉರಿಯುತ್ತಿರುವ ಹಣತೆಯನ್ನು ಇಟ್ಟಿರುತ್ತಾರೆ. ಉಪ್ಪಾರರ ಹಿರಿಯ ವ್ಯಕ್ತಿಯೊಬ್ಬ ಎಡೆಯ ಪಕ್ಕದಲ್ಲಿ ನಿಂತು ಮನೆಯ ಬಾಗಿಲ ಕಡೆಗೆ ಮುಖಮಾಡಿ ಮೃತವ್ಯಕ್ತಿಯ ಹೆಸರು ಹೇಳಿ 'ಊಟ ಮಾಡುವೆ ಬಾ' ಎಂದು ಕರೆಯುತ್ತಾನೆ. ಹೀಗೆ ಮೂರು ಬಾರಿ ಕರೆದು ಎಡೆಗೆ ಧೂಪ ಹಾಕಿಕೊಳ್ಳುತ್ತಾನೆ. ಅನಂತರ ಮೃತವ್ಯಕ್ತಿಯ ಮಕ್ಕಳು, ಬಂಧುಗಳೆಲ್ಲಾ ಧೂಪ ಹಾಕಿ ಎಡೆಗೆ ಕೈ ಮುಗಿಯುತ್ತಾರೆ. ಮೃತವ್ಯಕ್ತಿಯು ಸತ್ತ ಸ್ಥಳದಲ್ಲಿ ತಯಾರಿಸಿದ ಸಿಹಿ ತಿನಿಸುಗಳನ್ನು ಒಂದು ಮೊರದಲ್ಲಿ ಇಟ್ಟುಕೊಂಡು ಮಡಿಕೆ ಒಡೆದ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಎಡೆ ಇಟ್ಟು ಪೂಜಿಸುತ್ತಾರೆ. ಆ ಎಡೆಯ ಸ್ವಲ್ಪ ಭಾಗವನ್ನು ಅಲ್ಲಿಯೇ ಇರಿಸಿ ಉಳಿದದ್ದನ್ನು ಪ್ರಸಾದವೆಂದು ಇಟ್ಟುಕೊಂಡಿರುತ್ತಾರೆ. ಉಳಿದ ಎಡೆಯನ್ನು ಅಲ್ಲಿಯೇ ಇರಿಸಿ, ಸ್ವಲ್ಪದೂರದಲ್ಲಿ ಕಾದು ಕುಳಿತು 'ಕೂಳು ತಿನ್ನಬಾ' ಎಂದು ಕರೆಯುತ್ತಾರೆ. ಕಾಗೆ ಒಂದು ಕೂಳನ್ನು ತಿಂದರೆ ಮೃತವ್ಯಕ್ತಿಯ ಕಾಗೆಯ ರೂಪದಲ್ಲಿ ಬಂದು ಕೂಳನ್ನು ತಿಂದ-ನೆಂದು ನಂಬುತ್ತಾರೆ. ಹಾಗೆ ಶವ ಸಂಸ್ಕಾರ ಮಾಡಿದ ಸ್ಥಳದಲ್ಲೂ ಪೂಜೆ ಇಟ್ಟು ಪೂಜಿಸುತ್ತಾರೆ.

ಮನೆಗೆ ಬಂದು ಎಲ್ಲರೂ ಒಳಗಡೆ ಇದ್ದ ಎಡೆಗೆ ಧೂಪ ಹಾಕಿಕೊಂಡು ಅಡ್ಡಬಿದ್ದು ಕೈಮುಗಿದು ಕೊಳ್ಳುತ್ತಾರೆ. ಅನಂತರ ಎಲ್ಲರೂ ಎಡೆಯ ತಿನಿಸುಗಳನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ. ಆ ದಿನದ ಎಡೆಯ ವಿಶೇಷ ಮಾಂಸಾಹಾರ ಆಗಿರುತ್ತದೆ. ಮಾಂಸ ತಿನ್ನದ ವ್ಯಕ್ತಿ ಮೃತನಾಗಿದ್ದರೆ ಆತನಿಗೆ ಸಿಹಿ ಅಡಿಗೆ ಮಾತ್ರ ಮಾಡುತ್ತಾರೆ. ಬ್ರಾಹ್ಮಣರಂತೆ ಪ್ರತಿತಿಂಗಳ ಮಾಸಿಕವನ್ನು ಮಾಡುವುದಿಲ್ಲ. ವರ್ಷಕ್ಕೆ ಒಂದು ಬಾರಿ ಎಡೆ ಹಾಕುತ್ತಾರೆ. ಇದನ್ನು ಪಿತೃಪಕ್ಷದಲ್ಲಿ ಮಾಡುತ್ತಾರೆ. ಪ್ರತಿಹಬ್ಬಗಳಲ್ಲಿ ಎಡೆಯನ್ನು ಮಾಡಿ ಕೈಮುಗಿದು ಕೊಳ್ಳುತ್ತಾರೆ. ಕೆಲವರು ಒಂದು ಎಡೆಯನ್ನು ಮೊರದಲ್ಲಿ ಇಟ್ಟು ಮನೆಯ ಹೊರಗೆ ಕಾಗೆಗಳಿಗೆ ಇಡುವ ಪದ್ಧತಿಯುಂಟು.

ಗರ್ಭಿಣಿ ಸತ್ತರೆ ಆಕೆಯ ಗಂಡನು ಶವಸಂಸ್ಕಾರ ಮಾಡಿದ ಸ್ಥಳಕ್ಕೆ ಹೋಗಿ ಊಟಮಾಡಿ ಬರಬೇಕು. ಇದನ್ನು 'ಉಂಡು ಗಡಿಗೆ' ಎಂದು ಕರೆಯುತ್ತಾರೆ. *

ಮೃತ ವ್ಯಕ್ತಿಯು ಮದುವೆಯಾದ ಗಂಡಸಾದರೆ ಆತನ ಹೆಂಡತಿಗೆ ಹನ್ನೊಂದನೆ ದಿನ ಬಳೆ ತೆಗೆಸುವ ಶಾಸ್ತ್ರ ಅಥವಾ ವಿಧವೆ ಶಾಸ್ತ್ರ ಮಾಡುವ ಪದ್ಧತಿಯುಂಟು. ಈ ಅವಧಿಯ ವರೆಗೂ ಅವಳು ಮುತ್ತೈದೆಯಾಗಿದ್ದು ಪ್ರತಿದಿನ ಹತ್ತಿರ ಸಂಬಂಧಿಕರೆಲ್ಲ ಬಂದು ಹೊಸ ಬಟ್ಟೆ ಹಾಕಿ ಹೂ ಮುಡಿಸಿ ಕುಂಕುಮ , ಆಭರಣಗಳಿಂದ ಅಲಂಕರಿಸುತ್ತಾರೆ. ಮೃತವ್ಯಕ್ತಿಯ ಹನ್ನೊಂದನೆಯ ದಿನದ ವರೆಗೆ ಬದುಕಿರುವನೆಂದು ಉಪ್ಪಾರರು ದೃಢವಾಗಿ ನಂಬಿರುತ್ತಾರೆ. ಆಕೆಯನ್ನು ಹನ್ನೊಂದನೆಯ ದಿನ ಮೃತವ್ಯಕ್ತಿಯ ಸಮಾಧಿಗೆ ಅನುಭವಿ ವಿಧವೆಯರು ಕರೆದುಕೊಂಡು ಹೋಗಿ, ಆಕೆಯನ್ನು ಆತನ ಪಾದಗಳ ಬಳಿ ಬಳೆಗಳನ್ನು ಒಡೆದು, ಕುಂಕುಮ ಅಳಿಸಿ, ತಾಳಿ, ಮೂಗುತಿಗಳನ್ನು ತೆಗೆದು ಹಾಕುವರು. ಅಂದಿನ ಅವಳು ಮುತ್ತೈದೆಯರು ಧರಿಸುವ ವಸ್ತುಗಳನ್ನು ಧರಿಸುವಂತಿಲ್ಲ. ಶುಭಕಾರ್ಯಗಳ ಯಾವುದೇ ವಸ್ತುಗಳನ್ನು ಮಾಡುವಂತಿಲ್ಲ. ಇವರು ಶಾಸ್ತ್ರ ಇತ್ಯಾದಿಗಳಲ್ಲಿ ಭಾಗವಹಿಸುವಂತಿಲ್ಲ.

ಮೊದಲು ಚಕ್ರಕ್ಕೆ ಪೂಜೆ ಮಾಡಿದ 'ಸತಾನಿ' ಪೂಜಾರಿಗೆ 1 3/4 ರೂಪಾಯಿ ಮತ್ತು ದವಸ ದಾನ್ಯವನ್ನು ದಾನವಾಗಿ ಕೊಡುತ್ತಾರೆ. ಮರುದಿನ ಮನೆಯಲ್ಲಿ ಮೃತನ ಸಂಬಂಧಿಕರಿಗೆ ಔತಣ ಏರ್ಪಡಿಸುತ್ತಾರೆ. ಅಂದು ಸಂಜೆ ಮೃತನ ಹತ್ತಿರದ ಸಂಬಂಧಿಗಳು ಇತರರೊಡನೆ ವಿಷ್ಣುದೇವಾಲಯಕ್ಕೆ ಹೋಗಿ ಮೃತನ ಆತ್ಮಕ್ಕಾಗಿ ಸ್ವರ್ಗದ ಬಾಗಿಲನ್ನು ತೆರೆಯುವಂತೆ ಬೇಡಿಕೊಂಡು ಪೂಜೆಮಾಡಿ ಔತಣಕ್ಕಾಗಿ ಮನೆಗೆ ಹಿಂದಿರುಗುತ್ತಾರೆ. ಮೃತನಿಗೆ ಹೊಸಬಟ್ಟೆ ಎಡೆ ಇಡುವ ಪದ್ಧತಿ ಇವರಲ್ಲಿದೆ "The maternal uncle and other near relatives present him with some new clothes before they return to their places". (The Mysore Tribes and Castes Vol -IV -653).

ವಯಸ್ಕರಿಗೆ 10 ದಿನಗಳು ಮಕ್ಕಳಿಗೆ 3 ದಿನಗಳು ಸೂತಕವಿರುತ್ತದೆ. ಆದರೆ, ಕೆಲವರು ವ್ಯಕ್ತಿ ಸತ್ತ ತಿಂಗಳ ಕೊನೆಯ ವರೆಗೂ ಅಂದರೆ ಮೃತನ ಹೆಸರಿನಲ್ಲಿಟ್ಟ ಕಳಸವನ್ನು ಪೂಜಿಸುವ ವರೆಗೂ ಸೂತಕ ಹೋಗುವುದಿಲ್ಲವೆಂದು ಭಾವಿಸುತ್ತಾರೆ. ಮಗಳ, ಮಗನ ಸಾವಿಗೆ ಸೂತಕವಿರುವುದಿಲ್ಲ.ಸಂಬಂಧಿಗಳು ಸುದ್ಧಿಯನ್ನು ಕೇಳಿದ ತಕ್ಷಣ ಸ್ನಾನ ಮಾಡುತ್ತಾರೆ. ಸೂತಕದ ದಿನಗಳಲ್ಲಿ ಮನೆಯ ಚಿನ್ನೆಗಳು, ಹಾಲು, ಸಕ್ಕರೆ ಮಾಂಸಗಳ ಸೇವನೆಗೆ ನಿಷಿದ್ಧ ಮೈಸೂರು ಭಾಗದಲ್ಲಿ ಹೆಣದೊಂದಿಗೆ ಬೇರೆ ಏನನ್ನು ಹೂಳುವುದಿಲ್ಲ. ಕೆಲಭಾಗದಲ್ಲಿ ನಿತ್ಯ ಬಳಕೆಯ ವಸ್ತುಗಳನ್ನು ಹೂಳುವ ಪದ್ಧತಿ ಉಂಟು. ಹೆಣವನ್ನು ಮನೆಯಿಂದ ಹೊರಗೆ ತಂದು ಇಳಿಸುವಾಗ ಒಂದು ಬಟ್ಟೆಯಲ್ಲಿ ಕಟ್ಟಿದ ಸ್ವಲ್ಪ ಅಕ್ಕಿ ಮೂರು ಕಾಶಿನ ನಾಣ್ಯವನ್ನು ಇಟ್ಟು ಬರುತ್ತಾರೆ. ಇದನ್ನು ಹೊಲೆಯನು ತೆಗೆದುಕೊಂಡು ಹೋಗುತ್ತಾನೆ. ಬ್ರಾಹ್ಮಣರ ಹಾಗೆ ಪ್ರತಿ ತಿಂಗಳು

ಶ್ರಾದ್ಧಗಳನ್ನು ಮಾಡುವುದಿಲ್ಲ. ವರ್ಷಕ್ಕೊಮ್ಮೆ ಮಹಾಲಯ ಅಮಾವಾಸ್ಯೆ ದಿನವೆಲ್ಲ ಪಿತೃಗಳ ಹೆಸರಿನಲ್ಲಿ ಸ್ಥಾಪಿಸುವ ಕಳಸಕ್ಕೆ ಪೂಜೆ ಮಾಡಿ ಬ್ರಾಹ್ಮಣ ಮತ್ತು ಸತಾನಿಗಳಿಗೆ ಅಕ್ಕಿಯನ್ನು ದಾನವಾಗಿ ಕೊಡುತ್ತಾರೆ. ಮಹಾನವಮಿ, ಹೊಸವರ್ಷಗಳಂದು ಹೊಸ ಬಟ್ಟೆಯನ್ನು ಹೊದಿಸಿ ಕಶವನ್ನು ತಮ್ಮ ಕುಟುಂಬದ ಸಮಾಧಿಗಳ ಸ್ಥಳಕ್ಕೆ ಕೊಂಡೊಯ್ದು ಗಂಧ ಹಚ್ಚಿ ಗಂಧದ ಕಡ್ಡಿಯಿಂದ ಪೂಜಿಸಿ ಕಾಯಿ ಹೊಡೆಯುವ ಪದ್ಧತಿ ಇವರಲ್ಲಿದೆ. ಬೇರೆ ಬೇರೆ ಭಾಗಗಳಲ್ಲಿ ನಡೆಯುವ ಕ್ರಿಯಾ ವಿಧಾನಗಳನ್ನು ವಿದ್ವಾಂಸರು ಸಂಗ್ರಹಿಸಿ ಬರೆದಿರುವ ಮಾಹಿತಿಯನ್ನು ಮಹಾಪ್ರಬಂಧದ ಕೊನೆ ಟಿಪ್ಪಣಿಯಲ್ಲಿ ಕೊಡಲಾಗಿದೆ. *

**೪: ೨. ವಾರ್ಷಿಕಾವರ್ತನದ ಆಚರಣೆಗಳು**

ಜನಪದರು ಅಗೋಚರವಾದ ದೈವಶಕ್ತಿಗಳ ಪ್ರತೀಕವಾಗಿ ನಡೆಸುವ ಮತಾಚಾರಗಳು ಮತ್ತು ಕರ್ಮವಿಧಿಗಳನ್ನು ಆಚರಣೆಗಳೆಂದು ಕರೆಯಲಾಗುತ್ತದೆ. ಆಚರಣೆಗಳನ್ನು ಪರಂಪರಾಗತವಾಗಿ ಮುಂದುವರಿಸಿಕೊಂಡು ಬರುವುದರಿಂದ ಇವುಗಳ ಹಿನ್ನೆಲೆಯಲ್ಲಿ ಬಲವಾದ ನಂಬಿಕೆಗೂ ಇರುತ್ತವೆ. ಆಚರಣೆಗಳು ಧಾರ್ಮಿಕ ವಲಯದಲ್ಲಿರುವುದೇ ಹೆಚ್ಚು. ಮರ ಗಾಳಿ, ನೀರು ಇವು ಕೆಲವು ಆಚರಣೆಗಳಿಗೊಳಪಡುತ್ತವೆ. ಧಾರ್ಮಿಕ ವ್ಯಕ್ತಿಗಳು ಇಲ್ಲವೆ ಅಸಾಮಾನ್ಯ ವ್ಯಕ್ತಿಗಳೂ ನಿರ್ಧಿಷ್ಟ ಆಚರಣೆಗೊಳಗಾಗುತ್ತಾರೆ. ಆಚರಣೆಗಳ ಸಂದರ್ಭದಲ್ಲಿ ಕತ್ತಿ, ಭಲ್ಲೆ, ತ್ರಿಶೂಲ, ನೇಗಿಲು, ನೊಗ, ಸಲಿಕೆ ಇತ್ಯಾದಿ ಸಾಧನ ಸಲಕರಣೆಗಳನ್ನು ಒಂದೆಡೆ ಇಟ್ಟು ಪೂಜಿಸುವುದು ಆಚರಣೆಯೇ ಆಗುತ್ತದೆ. ಈ ರೀತಿಯ ಆಚರಣೆಗಳನ್ನು ಸಾಮಾನ್ಯವಾಗಿ ಜನಪದರು ತಮ್ಮ ವಾರ್ಷಿಕ ಜೀವನದ ನಿರ್ಧಿಷ್ಟ ಕಾಲಘಟ್ಟಗಳಲ್ಲಿ ಕೈಗೊಳ್ಳುತ್ತಾರೆ. ಇವುಗಳು ಪ್ರತಿ ವರ್ಷ ಪುನಾರಾವರ್ತನೆ ಗೊಳ್ಳುತ್ತವೆ. ಇವುಗಳನ್ನು ವಾರ್ಷಿಕಾವರ್ತನದ ಆಚರಣೆಗಳೆಂದು ಕರೆಯಲಾಗಿದೆ.

ಈ ಆಚರಣೆಗಳು ಮಳೆ, ಮತ್ತು ಬೆಳೆಯನ್ನು ಅವಲಂಬಿಸಿದ್ದು ಬಹಳಷ್ಟು ಮಟ್ಟಿಗೆ ಕಾಲ ಪರಿವರ್ತನೆಯು ಇದರ ಮೇಲೆ ನಿರ್ಧಿರಿತವಾಗಿರುತ್ತದೆ. ಸುಗ್ಗಿಯಕಾಲ ಎಲ್ಲ ಕೆಲಸಗಳಿಗೆ ಒಳ್ಳೆಯದೆಂದೂ ಉಳಿದ ದಿನಗಳು ಅಷ್ಟು ಯೋಗ್ಯವಲ್ಲವೆಂದೂ ತಿಳಿಯುತ್ತಾರೆ. ಸುಗ್ಗಿಯಲ್ಲಿ ಜಾತ್ರೆ, ಹಬ್ಬ, ಮದುವೆ ಸಮಾರಂಭ ಹೆಣ್ಣು ದೊಡ್ಡವಳಾಗುವುದು ಒಳ್ಳೆಯದೆಂದು ನಂಬುತ್ತಾರೆ. ಆಷಾಢದಲ್ಲಿ ಹೆಣ್ಣು ಪ್ರೌಢಾವಸ್ಥೆಗೆ ಬಂದರೆ ಮನೆಗೆ ಅನಿಷ್ಟವೆಂದೂ ನಂಬಿಕೆ ಇದೆ. ದಕ್ಷಿಣ ಕರ್ನಾಟಕದ ಉಪ್ಪಾರರು ಮುಖ್ಯವಾಗಿ ಕೃಷಿಯನ್ನೇ

ಅವಲಂಬಿದ್ದರಿಂದ ಇವರಲ್ಲಿ ಸುಗ್ಗಿಯಲ್ಲಿ ನಡೆಯುವ ಆಚರಣೆಗಳೇ ಹೆಚ್ಚು ಮಹತ್ವವನ್ನು ಪಡೆದಿವೆ. ಈ ಕಾಲ ಗಣನೆಯು ಸೂರ್ಯ ಚಂದ್ರರನ್ನು ಅವಲಂಬಿಸಿದ್ದು ಅವುಗಳ ಚಲನೆಯು ಪ್ರಕೃತಿಯಲ್ಲಿ ಉಂಟು ಮಾಡಿದ ಬದಲಾವಣೆ ಮೇರೆಗೆ ನಿರ್ಧರಿತವಾಗುತ್ತದೆ. ಇಷ್ಟಲ್ಲದೆ, ಅವರಿಗಿರುವ ಉತ್ಪಾದನೆ ಮತ್ತು ಅವರ ವಿಧಾನಗಳು ಕಾಲಗಣನೆಯಲ್ಲಿ ಮುಖ್ಯ ಪಾತ್ರವಹಿಸುತ್ತವೆ.

೪.೩:೧. ಹಬ್ಬ

ಉಪ್ಪಿನ ತಯಾರಿಕೆಯನ್ನು ಮೂಲ ಉದ್ದೇಶವನ್ನಾಗಿಟ್ಟುಕೊಂಡ ಉಪ್ಪಾರರು ಕ್ರಮೇಣ ಕೃಷಿಯನ್ನು ಪ್ರಧಾನ ವೃತ್ತಿಯನ್ನಾಗಿಟ್ಟುಕೊಂಡರು. ಜೊತೆಜೊತೆಗೆ ಮಣ್ಣಿನ ಕೆಲಸ, ಕಲ್ಲಿನ ಕೆಲಸವನ್ನು ಮಾಡ ತೊಡಗಿದರು. ಈ ಕೆಲಸಗಳು ವರ್ಷವೆಲ್ಲ ಇರುವುದರಿಂದ ಇವರಿಗೆ ಬಿಡುವೆಂಬುದು ಇರುವುದಿಲ್ಲ. ಒಂದು ಕೆಲಸ ಮುಗಿದರೆ ಇನ್ನೊಂದು ಕೆಲಸ ಇದ್ದೇ ಇರುತ್ತದೆ. ಇಂಥ ಬಿಡುವಿಲ್ಲದ ಸಮಯದಲ್ಲೂ ಇವರು ಸುಖ ಸಂತೋಷದಿಂದಿರಲು ಕೆಲವು ದಿನಗಳನ್ನು ಇತರ ಜನಾಂಗಗಳಂತೆ ಸಂತೋಷಕ್ಕಾಗಿ ಉಪಯೋಗಿಸಿಕೊಂಡರು. ಈ ದಿನಗಳು ಉಪ್ಪಾರರ ಬದುಕಿನ ರಸ ನಿಮಿಷಗಳಾಗಿದ್ದು ಇವು ಹಬ್ಬ ಜಾತ್ರೆಗಳೆಂದು ಕರೆಯಿಸಿಕೊಂಡವು.

'ಹಬ್ಬ' ಎನ್ನುವ ಪದ ಪರ್ವ * ಶಬ್ದದ ತದ್ಭವಾಗಿದೆ. ಇದು ಜಾನಾಂಗಿಕ ಜೀವನದ ನಿರ್ದಿಷ್ಟ ಕಾಲದ ಉತ್ಸವಕ್ಕೆ ಇದು ಸಂಕೇತವಾಗಿದೆ ಉಪ್ಪಾರರ ಸಂಪ್ರದಾಯ ಮತ್ತು ಆಚರಣೆಗಳೇ ಹಬ್ಬಗಳಿಗೆ ಪ್ರೇರಕವಾಗಿವೆ. ಹೀಗಾಗಿ ಇವರು ಒಂದು ಕಾಲಾವಧಿಯಲ್ಲಿ ನಡೆಸುವ ಆಚರಣೆಗಳು ರೂಢಿ ಉತ್ಸವಗಳು ಹಬ್ಬಗಳಾಗಿವೆ. ಬಾಗ್ಸ್ ಅವರ ಪ್ರಕಾರ ಹಬ್ಬಗಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಸೇರಿಸಬಹುದು. ಏಕೆಂದರೆ ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯೆಯ ರೂಪಗಳೇ ಹಬ್ಬಗಳು. "ನಿಸರ್ಗದ ಆರಾಧನೆ ಮತ್ತು ದೇವರನ್ನು ತಮ್ಮೊಡನೆ ಒಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿಯೇ ಈ ಹಬ್ಬಗಳು ಹುಟ್ಟಿಕೊಂಡಿರುತ್ತವೆ. ಹೀಗಾಗಿ ಕೆಲವು ಸಂಪ್ರದಾಯಗಳ ಸಮೂಹವೇ ಹಬ್ಬಗಳಾಗಿರುತ್ತವೆ." (ಭದ್ರಾಪೂರ ಎಸ್.ಎಸ್) ೧೯೮೭:೪೪) ಬಾಗ್ಸ್ ಅವರು ಹಬ್ಬವನ್ನು ಕುರಿತು ಬರೆಯುತ್ತಾ Festival is a complex unit of customs and other folklore to celebrate a special occasion, usually unuselly, and of public interest ಸಮಾಜದ ಒಳಿತಿಗಾಗಿ ಮತ್ತು ಸಾಮಾಜಿಕ ಹೊಂದಾಣಿಕೆಗಾಗಿ ಪ್ರತಿ

ವರ್ಷ ವಿಶೇಷ ದಿನಗಳಲ್ಲಿ ನಡೆಸುವ ಸಂಪ್ರದಾಯಾಚರಣೆಗಳನ್ನು ಹಬ್ಬ ಸಾಮಾನ್ಯವಾಗಿ ಸಾಮೂಹಿಕ ಸ್ವರೂಪದ ಆಚರಣೆಯಾಗಿರುತ್ತದೆ. ಇವು ವೈಯಕ್ತಿಕ ಮಟ್ಟದಲ್ಲಿ ನಡೆದರೆ ಅದು ಹಬ್ಬ ಎನಿಸಿಕೊಳ್ಳುವುದಿಲ್ಲ. ಅದು ಔತಣ ಕೂಟಾದಿಗಳ ವ್ಯವಸ್ಥೆಗೊಂಡ ವ್ಯಕ್ತಿಯೊಬ್ಬನ ಜೀವನದ ಬೇರೆ ಬೇರೆ ಮಜಲುಗಳ ಸಂಕ್ರಮಣಾವಸ್ಥೆಯ ಕ್ಷಣವಾಗಿರಬಹುದು. (ಹಿರಿಯಣ್ಣ ಅಂಬಳಿಕೆ 1971:). ತನ್ನ ಬದುಕಿನ ಎಲ್ಲ ಆಗು-ಹೋಗುಗಳಿಗೂ ದೈವವೇ ಕಾರಣವೆಂದು ನಂಬಿದ್ದ "ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನ" (ದೇಜಗೌ: 1976: 388) ನಡೆಸಿದುದರ ಫಲದಿಂದಾಗಿ ಹಬ್ಬಗಳು ಹುಟ್ಟಿಕೊಂಡವು.

ಇವರು ಎಲ್ಲ ಕೆಲಸಗಳಿಗೂ ಭೂಮಿಯನ್ನೇ ನಂಬಿದ್ದರಿಂದಾಗಿ ಅದರ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಹಬ್ಬಗಳನ್ನು ಮಾಡುತ್ತಾರೆ. ತಮ್ಮ ಹೊಲ, ಗದ್ದೆ ಕಲ್ಲು ತೆಗೆಯುವ ಸ್ಥಳಗಳಿಗೆ ಅಡ್ಡಿ ಆತಂಕಗಳನ್ನು ಮಾಡುವ ದುಷ್ಟಶಕ್ತಿಗಳನ್ನು ನಿಗ್ರಹಿಸಿ ಪಾರುಮಾಡುವ ತಮ್ಮನ್ನು ಸಲುಹುವ ದೈವಗಳಿಗೆ ಸಂತೋಷ ಪಡಿಸುವುದೇ ಹಬ್ಬಗಳಿಗೆ ಮೂಲವಾಗಿದೆ.

ಇವರ ಹಬ್ಬಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು.

ಹಬ್ಬಗಳು

- ಸಾರ್ವತ್ರಿಕ
  - ನಿರ್ದಿಷ್ಟಕಾಲದಲ್ಲಿ ಆಚರಿಸುವ ಹಬ್ಬಗಳು
    - ನಿರ್ದಿಷ್ಟ ದಿನಗಳಲ್ಲಿ ನಡೆಯುವಂಥವು
      ೧. ಯುಗಾದಿ
      ೨. ಗೌರಿ ಹಬ್ಬ
      ೩. ಶ್ರಾವಣ
      ೪. ದೀಪಾವಳಿ ದೇವೀರಮ್ಮನ ಹಬ್ಬ
      ೫. ಶಿವರಾತ್ರಿ
    - ಅನಿರ್ದಿಷ್ಟ ದಿನಗಳಲ್ಲಿ ನಡೆಯುವಂಥವು
      ೧. ಮಹಾಲಯ
      ೨. ಕಾರಬ್ಬ (ಕಾರಮವಾಸ್ಯೆ)
  - ಅನಿರ್ದಿಷ್ಟ ಕಾಲದಲ್ಲಿ ಆಚರಿಸುವ ಹಬ್ಬಗಳು
- ಸಾಂಘಿಕ
  - ನಿರ್ದಿಷ್ಟ ಕಾಲದಲ್ಲಿ
    - ಅನಿರ್ದಿಷ್ಟ ದಿನಗಳಲ್ಲಿ
      ೧. ಸುಗ್ಗಿ ಹಬ್ಬ
      ೨. ಮಾರಿಹಬ್ಬ
  - ಅನಿರ್ದಿಷ್ಟ ಕಾ
    - ಹರಿಸೇವ

ಸಾಮಾಜಿಕವಾಗಿ ಮೇಲ್ವರ್ಗದವರು ಆಚರಿಸುವ ಎಲ್ಲಾ ಹಬ್ಬಗಳನ್ನು ಉಪ್ಪಾರರು ಆಚರಿಸುತ್ತಾರೆ. ಇದು ಆಯಾಯ ಪ್ರದೇಶಗಳನ್ನು ಅವಲಂಬಿಸಿದೆ. ಇವುಗಳಲ್ಲಿ ಪ್ರಮುಖವಾದ ಕೆಲವು ಹಬ್ಬಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇವರು ಆಚರಿಸುವ ಯುಗಾದಿ ದೊಡ್ಡ ಹಬ್ಬಗಳ ಸಾಲಿನಲ್ಲಿ ಸೇರುತ್ತದೆ.

**ಯುಗಾದಿ:** ವರ್ಷದ ಆರಂಭದಿಂದಲೇ * ಧಾನ್ಯಗಳನ್ನು ಬಿಡಿಸಿ ಮನೆಯೊಳಗೆ ತುಂಬಿದ ಮೇಲೆ ಬರುವ ಹಬ್ಬ ಇದು. ಈ ಹಬ್ಬದ ನಂತರ ಮಳೆಗಾಲ ಆರಂಭವಾಗುತ್ತದೆ. ಪ್ರಧಾನವಾಗಿ ಕೃಷಿಯನ್ನು ಅವಲಂಬಿಸಿದ್ದರಿಂದ ಇದು ಉಪ್ಪಾರರ ಪಾಲಿಗೆ ಹೊಸವರ್ಷದ ಆರಂಭ ಮತ್ತು ಆ ವರ್ಷದ ಮೊದಲದಿನ, ಮೊದಲ ಹಬ್ಬವೂ ಆಗಿದೆ.

ಈ ಹಬ್ಬವು ನಿರ್ದಿಷ್ಟ ಕಾಲದಲ್ಲಿ ಜರುಗುತ್ತದೆ. ಚೈತ್ರ ಶುದ್ಧ ಪಾಡ್ಯದ ದಿನ ಬರುತ್ತದೆ. ಅಂದು ಮನೆ ಮಂದಿಯೆಲ್ಲ ಕಡ್ಡಾಯವಾಗಿ ಹೊಸ ಉಡುಗೆಯನ್ನು ತೊಡಲೇಬೇಕು. ಇದು ವಂಶ ಪರಂಪರಾಗತವಾಗಿ ನಡೆದುಕೊಂಡು ಬಂದಿದೆ. ಹಬ್ಬಕ್ಕೆ ಮೊದಲೆ ಮನೆಯನ್ನು ಗುಡಿಸಿ ಸಾರಿಸಿ, ಗೋಡೆ ನೆಲಗಳಿಗೆ ಬಣ್ಣಬಳಿದು ಮನೆಯನ್ನು ಹೊಸದನ್ನಾಗಿ ಮಾಡುತ್ತಾರೆ. ಮನೆಯ ಹೊರಾಂಗಣವನ್ನು ಸಗಣಿ ನೀರಿನಿಂದ ಸಾರಿಸಿ ರಂಗೋಲಿ ಇಡುತ್ತಾರೆ. ಬಾಗಿಲುಗಳಿಗೆಲ್ಲ ಮಾವಿನ ಎಲೆಗಳನ್ನು ಬೇವಿನ ಎಲೆಗಳನ್ನು ತೋರಣ ಕಟ್ಟುತ್ತಾರೆ. ದೇವರ ಮನೆಯನ್ನು ಶೃಂಗಾರ ಮಾಡಿ, ಮಡಿಮಾಡುತ್ತಾರೆ. ಅಂದು ಮಾಡಿದ ಸಿಹಿ ಅಡುಗೆ ಹಾಗೂ ಬೇವು ಬೆಲ್ಲವನ್ನು ನೈವೇದ್ಯ ಮಾಡುತ್ತಾರೆ. ಪೂಜೆಯ ಅನಂತರ ಮನೆಯವರೆಲ್ಲರೂ ಒಟ್ಟಿಗೆ ಸೇರಿ ಊಟಮಾಡುತ್ತಾರೆ.

ಊಟ ಮುಗಿದ ನಂತರ ಆ ವರ್ಷದ ಒಟ್ಟು ಭವಿಷ್ಯ ಹೇಗಿದೆ ಎಂದು ತಿಳಿದುಕೊಳ್ಳುವುದು, ಈ ಹಬ್ಬದ ವಿಶೇಷವಾಗಿದೆ. ಅಚ್ಚಾಗಿರುವ ಪಂಚಾಂಗವನ್ನು ಓದಿ ಅದರಲ್ಲಿನ ಶುಭಾಶುಭಗಳನ್ನು ಮಳೆಬೆಳೆಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಹಬ್ಬದ ದಿನ ಚಂದ್ರನ ದರ್ಶನ ಮಾಡಿದರೆ ಒಳ್ಳೆದಾಗುತ್ತದೆ ಎಂದು ನಂಬುತ್ತಾರೆ. ಚಂದ್ರ ಒಂದು ಪ್ರಾಣಿಯ ಮೇಲೆ ಪ್ರಯಾಣಿಸುತ್ತಾನೆ ಎಂದು ನಂಬುತ್ತಾರೆ. ಅದರಿಂದ ಆ ಪ್ರಾಣಿವರ್ಗಕ್ಕೆ ಕೇಡಾಗುವುದೆಂದು ಭಾವಿಸುತ್ತಾರೆ. * ಹಬ್ಬದ ಮಾರನೆ ದಿನ ಯಾರು ಯಾವ ಕೆಲಸವನ್ನು ಮಾಡುವಂತಿಲ್ಲ. ಅಂದು ವಿಶ್ರಾಂತಿಯ ದಿನವಾಗಿರುತ್ತದೆ. ಈ ವಿಶ್ರಾಂತಿದಿನ ಮಲೆನಾಡಿನ ಕಡೆಯ ಉಪ್ಪಾರರು ಕೋಳಿ ಅಂಕದಲ್ಲಿ ಭಾಗಿಗಳಾಗಿರುತ್ತಾರೆ. ಈಗ ಈ ಕ್ರೀಡೆ ಕಣ್ಮರೆಯಾಗುತ್ತಲಿದೆ. ಆದರೆ ಮನೆಗಳಲ್ಲಿ ಮಾಂಸದ ಊಟವಿರುತ್ತದೆ.

**ಗೌರಿ ಹಬ್ಬ:** ಈ ಹಬ್ಬದ ದಿನ ಹೊಸದಾಗಿ ಮದುವೆಯಾದ ಅಳಿಯ-ಮಗಳನ್ನು ಕರೆತಂದು ಉಪಚರಿಸುತ್ತಾರೆ. ಎಲ್ಲ ಜನಾಂಗಗಳು ಆಚರಿಸುವಂತೆ ಇವರು ಈ ಹಬ್ಬವನ್ನು ಆಚರಿಸುತ್ತಾರೆ. ಊರಿನವರೆಲ್ಲ ಸೇರಿ ಗಣಪತಿ ಕೂರಿಸುವುದಕ್ಕೆ ಪ್ರತಿದಿನ ಒಬ್ಬರಂತೆ ಪೂಜೆಯನ್ನು ವಹಿಸಿಕೊಳ್ಳುತ್ತಾರೆ. ಇದು ಒಂದು ನಿರ್ದಿಷ್ಟ ದಿನ ಎಂದರೆ ಭಾದ್ರಪದ ಶುದ್ಧ ತೃತೀಯ ಮತ್ತು ಚತುರ್ಥಿಯಂದು ಜರುಗುವ ಹಬ್ಬವಾಗಿದೆ. ಪೂಜೆಯ ನಂತರ, ನೈವೇದ್ಯ ಆದ ಮೇಲೆ ಮನೆ ಮಂದಿಯೆಲ್ಲ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ.

ಊಟದ ನಂತರ ಕೆಲವರು ಕಾಯಿ ಜೂಜಾಡುತ್ತಾರೆ, ಮತ್ತೆ ಕೆಲವರು ಒಟ್ಟಿಗೆ ಸೇರಿ ಬೇಟೆಗೆ ಹೋಗುತ್ತಾರೆ.

**ಕಾಯಿಜೂಜಾಡುವುದು : ಈ ಆಟವನ್ನು ಆಡಲು ಎರಡು ಜನ ಸಾಕು.** ಇಬ್ಬರು ವ್ಯಕ್ತಿಗಳು ಎದುರು ಬದುರಾಗಿ ನಿಂತು, ಕೈಯಲ್ಲಿ ಕಾಯಿ ಹಿಡಿದು ನಿಂತಿರುತ್ತಾರೆ. ಇಬ್ಬರು ವ್ಯಕ್ತಿಗಳು ಒಬ್ಬರ ಕಾಯಿಗೆ ತಗಲುವಂತೆ ನೆಲದ ಮೇಲೆ ಉರುಳಿಸುತ್ತಾರೆ. ಯಾರ ಕಾಯಿ ಒಡೆಯದೇ ಇರುತ್ತದೊ ಅವನು ಗೆದ್ದಂತೆ. ಒಡೆದು ಹೋದ ಕಾಯಿ ಗೆದ್ದವನಿಗೆ ಸಿಗುತ್ತದೆ. ಇದು ಒಂದು ಬಗೆಯ ಆಟವಾದರೆ, ಇನ್ನೊಂದು ರೀತಿಯದೆಂದರೆ 20 ಅಡಿ ದೂರದಲ್ಲಿ ಒಂದು ಕಾಯಿಯನ್ನು ಇಡುತ್ತಾರೆ. ಆ ಕಾಯಿಗೆ ಯಾರು ಕಲ್ಲಿನಿಂದ ಹೊಡೆದು ಚೂರುಮಾಡುತ್ತಾರೋ ಅವರಿಗೆ ಆ ಕಾಯಿ. ಒಂದು ಹೊಡೆತಕ್ಕೆ 15 ಪೈಸೆ ಹಣವನ್ನು ನಿಗದಿ ಮಾಡಲಾಗಿರುತ್ತದೆ. ಕಾಯಿ ಒಡೆಯದಿದ್ದರೆ, ಅದರ ಯಜಮಾನನಿಗೆ ಎಷ್ಟು ಹೊಡೆತ ಹೊಡೆದಿರುತ್ತಾನೋ (ಎಷ್ಟೋ ಕಲ್ಲು ಎಸೆದಿರುತ್ತಾನೋ) ಅಷ್ಟು ಹಣವನ್ನು ಕೊಡಬೇಕಾಗುತ್ತದೆ.

**ಮಹಾಲಯ:** ಇದನ್ನು 'ಪಿತೃಪಕ್ಷ' ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ನವರಾತ್ರಿ ದಿನಗಳಲ್ಲಿ ಯಾವುದಾದರು ಒಂದು ದಿನ ಜರುಗುತ್ತದೆ. ಇದು ಹಿರಿಯರನ್ನು ಆರಾಧಿಸುವ ಹಬ್ಬವಾಗಿರುತ್ತದೆ. ಸತ್ತ ವ್ಯಕ್ತಿಗಳ * ಆತ್ಮಗಳನ್ನು ಸಂತೃಪ್ತಿಪಡಿಸದಿದ್ದರೆ ಅವುಗಳಿಂದ ತೊಂದರೆ ಉಂಟಾಗಬಹುದೆಂದು 'ಹಿರೇರ ಹಬ್ಬ' ಮಾಡುತ್ತಾರೆ. ಈ ಹಬ್ಬದಂದು ಸತ್ತು ಹೋದ ಹಿರೇರೆಲ್ಲರು ಬಂದು ಊಟ ಮಾಡಿಹೋಗುತ್ತಾರೆ ಎಂದು ಬಲವಾಗಿ ಉಪ್ಪಾರರು ನಂಬುತ್ತಾರೆ. ಈ ನಂಬಿಕೆಯನ್ನು ಪ್ರಸಿದ್ಧ ಮಾನವಶಾಸ್ತ್ರಜ್ಞ ಟೇಲರ್ 'ಆತ್ಮತತ್ವ' ಎಂದು ಕರೆಯುತ್ತಾನೆ. ಸತ್ತವ್ಯಕ್ತಿಗೆ ತನ್ನದೇ ಆದ ಆತ್ಮವಿರುತ್ತದೆ. ವ್ಯಕ್ತಿ ಸತ್ತ ಮೇಲೂ ಆತನ ಆತ್ಮ ನಾಶ ಆಗುವುದಿಲ್ಲ. ಇದು ಶಿಕ್ಷಾ, ರಕ್ಷಾ ಸಾಮರ್ಥ್ಯ ಹೊಂದಿರುತ್ತದೆ. ಈ ಕಾರಣಗಳಿಂದಲೇ ವ್ಯಕ್ತಿ ಸತ್ತ ಸ್ಥಳದಲ್ಲಿ ಒಂದು ದಿನವಾದರೂ ದೀಪ ಉರಿಸುವುದು, ಮೂರು, ಒಂಬತ್ತು ಅಥವಾ ಹನ್ನೊಂದನೆಯ ದಿನ ಆ ವ್ಯಕ್ತಿಯ

ಪ್ರಿಯವಾದ ಭಕ್ಷ್ಯಭೋಜ್ಯಗಳನ್ನು ಎಡೆ ಮಾಡಿ ಒಳಗೆ ಕರೆದುಕೊಳ್ಳುವುದು.

ಹಬ್ಬದ ದಿನ ಮನೆಯ ಒಳಗೆ ಮತ್ತು ಹೊರಗೆ ಶುಚಿಯಾಗಿರುವಂತೆ ನೋಡಿಕೊಳ್ಳುತ್ತಾರೆ. ಕಾರಣ ಪಿತೃಗಳ ಋಣ ತೀರಿಸುವಾಗ ಅಶುದ್ಧವಾಗಿದ್ದರೆ ಎಡೆ ಸ್ವೀಕರಿಸುವುದಿಲ್ಲ ಎಂಬ ನಂಬಿಕೆಯಿಂದ ಹಾಗೆ ಮಾಡುತ್ತಾರೆ. ಈ ಹಬ್ಬವನ್ನು ಶನಿವಾರ ಮತ್ತು ಸೋಮವಾರ ಮಾಡುವುದಿಲ್ಲ * ಅಂದಿನ ದಿನ ವಿಶೇಷ ಮಾಂಸದ ಅಡುಗೆಯನ್ನು ಮಾಡುತ್ತಾರೆ.

ಮೃತರು ಬದುಕಿದ್ದಾಗ ಏನೆಲ್ಲ ಆಸೆಪಡುತ್ತಿದ್ದರೊ ಆ ಅಡುಗೆಯನ್ನು ತಯಾರಿಸಿ, ತಮ್ಮ ಸಂಪ್ರದಾಯದಂತೆ ಕಳಸವನ್ನು ಇಡುತ್ತಾರೆ. ಪಕ್ಕದಲ್ಲಿ ಹೊಸಬಟ್ಟೆ ಇಟ್ಟು ಪೂಜಿಸುತ್ತಾರೆ. ಇದು ಅನಿರ್ದಿಷ್ಟ ಕಾಲದಲ್ಲಿ ಬರುವ ಹಬ್ಬವಾದ್ದರಿಂದ ಹತ್ತಿರದ ಬಂಧುಗಳು ಬಂದಿರುತ್ತಾರೆ. ಎಲ್ಲರೂ ಎಡೆಗಳಿಗೆ ಕೈಮುಗಿದು ಕೊಂಡ ಅನಂತರ ಒಂದು ಎಡೆಯನ್ನು ಹೊರಗೆ ಇಡುವ ಪದ್ಧತಿಯುಂಟು * ಇದಾದ ನಂತರ ಸಹಪಂಕ್ತಿ ಭೋಜನ ನಡೆಯುತ್ತದೆ. ಹೀಗೆ ಅಂದಿನ ಕಾರ್ಯ ಮುಕ್ತಾಯವಾಗುತ್ತದೆ.

**ಶ್ರಾವಣ:** ಶ್ರಾವಣ ಮಾಂಸದ ನಾಲ್ಕು ಸೋಮವಾರ ಮತ್ತು ಶನಿವಾರ ಈ ಹಬ್ಬ ನಡೆಯುತ್ತದೆ. ಶೈವಾರಾಧಕರಾದರೆ ಸೋಮವಾರವೂ , ವೈಷ್ಣವರಾದರೆ ಶನಿವಾರವೂ ನಡೆಸುತ್ತಾರೆ. ಆ ದಿನ ಸ್ನಾನ ಮಾಡಿ ಮಡಿಯಿಂದ ಇರುತ್ತಾರೆ. ಅವರು ಉಪವಾಸದಿಂದ ಇದ್ದು ಅಡುಗೆ ತಯಾರಿಸಿ ಎಡೆ ಮಾಡುತ್ತಾರೆ. ಆ ದಿನ ಯಾವುದೇ ಕಾರಣಕ್ಕೂ ಮಾಂಸಹಾರ ಮಾಡುವಂತಿಲ್ಲ. ಕಲವೆಡೆ ಆ ದಿನ ಕೆಲವರು ಶಾಸ್ತ್ರಕ್ಕೆಂದು ನಾಲ್ಕು ಮನೆಯ ಭಿಕ್ಷೆ ಮಾಡಿ ಅದರಿಂದ ಬಂದ ಅಕ್ಕಿಯಿಂದ ಎಡೆಗೆ ಬೇಕಾದ ಆಹಾರವನ್ನು ತಯಾರಿಸಿ ಹಿರಿಯರಿಗೆ ಸಲ್ಲಿಸುತ್ತಾರೆ. ಯಾವುದೇ ರೀತಿಯ ಸೂತಕವಿದ್ದರೂ 'ಶ್ರಾವಣ' ಆಚರಿಸುವುದಿಲ್ಲ.

**ದೀಪಾವಳಿ:** ಇದು ಉಪ್ಪಾರರ ಬಹುದೊಡ್ಡ ಹಬ್ಬವಾಗಿದೆ. ದೀಪಾವಳಿಯು ಮುಖ್ಯವಾಗಿ ಬೆಳಕಿನ ಹಬ್ಬ ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ತಂದುಕೊಡುತ್ತದೆ ಎಂದು ನಂಬುತ್ತಾರೆ. ಈ ಹಬ್ಬವನ್ನು ಒಂದು ತಿಂಗಳು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ನಾಲ್ಕು ದಿನ ಮಾತ್ರ ನಡೆಯುತ್ತದೆ.

ನರಕ ಚತುರ್ದಶಿ ದಿನ, ಮನೆ ಮಂದಿಯೆಲ್ಲ ಎಣ್ಣೆ ಹಚ್ಚಿಕೊಂಡು ಸ್ನಾನಮಾಡುತ್ತಾರೆ. ಶ್ರೀ ಕೃಷ್ಣನು ನರಕಾಸುರನನ್ನು ಕೊಂದ ಸ್ಮರಣೆಗಾಗಿ ಆಚರಿಸುವ ಹಬ್ಬ. ಇದಾಗಿದೆ. ಅಪಮೃತ್ಯುವಿನ ನಿವಾರಣಾರ್ಥವಾಗಿ ದೇವರ ಮನೆಯಲ್ಲಿ ದೀಪ ಹತ್ತಿಸಿ ಇಡುತ್ತಾರೆ. ಕೆಲವೆಡೆ ಅಂಗಳದಲ್ಲಿ ದೀಪವನ್ನು ಹೊತ್ತಿಸಿಡುವ ಪದ್ಧತಿ ಉಂಟು. ಹೆಂಗಸರು ಎಣ್ಣೆ ಸ್ನಾನದ ನಂತರ ಶುಚಿಯಾಗಿ ಅಂದಿನ ಹಬ್ಬಕ್ಕೆ ಬೇಕಾದ ಸಿಹಿ ಅಡುಗೆ

ತಯಾರಿಸುತ್ತಾರೆ. ಈ ಹಬ್ಬದಂದು ಎಲ್ಲರೂ ಕಡ್ಡಯವಾಗಿ ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಎಡೆಯಾದ ನಂತರ ಎಲ್ಲರೂ ಒಟ್ಟಿಗೆ ಕುಳಿತು ಊಟಮಾಡುತ್ತಾರೆ.

ಅಮವಾಸ್ಯೆಯ ದಿನ ಲಕ್ಷ್ಮಿಪೂಜೆ ಮಾಡುತ್ತಾರೆ. ಈ ಪೂಜೆಗೆ ಅಕ್ಕಪಕ್ಕದ ಮನೆಯವರನ್ನು ಕರೆದು ಅವರಿಗೆ ಆ ದಿನದ ಸಂತೋಷಕ್ಕಾಗಿ ಸಿಹಿಯನ್ನು ಕೊಡುತ್ತಾರೆ. ಸಂಜೆ ದೇವಿರಮ್ಮನ ಗುಡಿಗೆ ಹೋಗಿ, ಕರಿ ಕಂಬಳಿ ಹಾಸಿ ಅದರ ಮೇಲೆ ಏಲಕ್ಕಿ ಬೀಜ, ಮೆಣಸಿನ ಬೀಜ ಹಾಕಿ ಅದರ ಮೇಲೆ ಹಣತೆಯನ್ನು ಇಟ್ಟು ದೀಪ ಉರಿಸುತ್ತಾರೆ.

ಅಂದಿನ ದಿನ ಹರಕೆ ಮಾಡಿಕೊಂಡವರು ಬಿದಿರಿನ ತಟ್ಟೆಯಲ್ಲಿ ದೇವೀರಮ್ಮನಿಗೆ ಆರತಿ ಮಾಡುತ್ತಾರೆ. ಹೀಗೆ ಮಾಡುವುದರಿಂದ ಅವರ ಕಷ್ಟ ಪರಿಹಾರ ಆಗುವುದೆಂದು ನಂಬುತ್ತಾರೆ. ದೇವಿರಮ್ಮನ ಗುಡಿ, ಎಲ್ಲಾ ಊರುಗಳಲ್ಲೂ ಇರುವುದಿಲ್ಲ. ಅಂಥ ಕಡೆಯ ಜನರು ಅಮ್ಮನ ಗುಡಿಯ ಕಡೆ ಮುಖಮಾಡಿ ಕರಿಕಂಬಳಿಯನ್ನು ಹಾಸಿ ಏಲಕ್ಕಿ ಮೆಣಸಿನ ಬೀಜ ಹಾಕಿ, ಹಣತೆಯನ್ನು ಇಟ್ಟು ಆರತಿ ಮಾಡಿಕೊಂಡರೆ ಅದು ದೇವತೆಗೆ ತಲುಪುತ್ತದೆ ಎಂದು ಬಲವಾಗಿ ನಂಬುತ್ತಾರೆ. ಹರಕೆ ಹೊತ್ತವರು ಆ ದಿನ ಉಪವಾಸ ಇದ್ದು ಸಂಜೆ ದೇವೀರಮ್ಮನಿಗೆ ಆರತಿ ಮಾಡುತ್ತಾರೆ. ಹೊಸದಾಗಿ ಮದುವೆಯಾದ ಗಂಡ ಹೆಂಡಿರು ದೇವಿರಮ್ಮನಿಗೆ ಕಡ್ಡಾಯವಾಗಿ ಆರತಿ ಮಾಡಲೇಬೇಕು. ಹೀಗೆ ಮಾಡುವುದರಿಂದ ಅವರ ಮನಸ್ಸಿನಲ್ಲಿ ಅಂಧಕಾರ ಹೋಗುತ್ತದೆ ಎಂದು ನಂಬುತ್ತಾರೆ.

**ದೇವಿರಮ್ಮನ ಹಬ್ಬ :** ಬಲಿ ಪಾಡ್ಯಮಿಯ ದಿನ ಆಚರಣೆಗೊಳ್ಳುತ್ತದೆ. ಆ ದಿನ ಮನೆ ಮಂದಿಯೆಲ್ಲಾ ಸ್ನಾನಮಾಡಿ ಹೊಸ ಬಟ್ಟೆ ಧರಿಸುವುದು ಮನೆ ಹೆಬ್ಬಾಗಿಲು , ಬಾಗಿಲು, ಕೊಟ್ಟಿಗೆಬಾಗಿಲುಗಳಿಗೆ ಮಾವಿನ ಎಲೆಗಳ ತೋರಣ ಕಟ್ಟಿ ಸಿಂಗರಿಸುತ್ತಾರೆ. ಹೆಂಗಸರು ಸ್ನಾನ ಮಾಡಿ ಹೊಸ ಮಣ್ಣಿನ ಕೊಡದಲ್ಲಿ ನೀರು ಒಯ್ದು ಅಡುಗೆ ಆರಂಭಿಸುತ್ತಾರೆ. ಗಂಡಸರು ಸ್ನಾನದ ನಂತರ ಕಣಗಲು ಹೂ ಎಲ್ಲಾ ತರಹದ ಧಾನ್ಯದ ಗಿಡಗಳನ್ನೂ ತಂದು, ಸಗಣಿಯಿಂದ ಗಣಪತಿ ಮಾಡಿ ಅದಕ್ಕೆ ಗಿಡಗಳನ್ನು ಸಿಕ್ಕಿಸುತ್ತಾರೆ. ಕೆಲವು ಭಾಗಗಳಲ್ಲಿ ಸಗಣಿ ಉಂಡೆಗೆ ಕರ್ಕಿಯನ್ನು ಸಿಕ್ಕಿಸುತ್ತಾರೆ( ಒಂದು ಜಾತಿಯ ಹುಲ್ಲು) ದೊಡ್ಡ ಗಣಪನನ್ನು ಹೆಬ್ಬಾಗಿಲಿಗೆ ಇಟ್ಟು ಉಳಿದ ಚಿಕ್ಕ ಚಿಕ್ಕ ಸಗಣಿ ಉಂಡೆಗಳನ್ನು ಕ್ರಮವಾಗಿ ಒಲೆ, ಬೀಸೋಕಲ್ಲು, ಬಾವಿ, ಕಡಗೋಲು ಕಂಬ, ಕಣ, ಕೊಟ್ಟಿಗೆ, ಇನ್ನೂ ಮುಂತಾದ ಕಡೆಗಳಲ್ಲಿ ಇಡುತ್ತಾರೆ. ಎಲ್ಲಾ ಗಣಪನ ಹತ್ತಿರ ಪೈರಿನ ತೆನೆ ಮತ್ತು ಉತ್ತಾರಾಣಿಕಡ್ಡಿ ಇಟ್ಟು ಸಾಯಂಕಾಲ ಅವುಗಳನ್ನೆಲ್ಲ ಒಟ್ಟು ಮಾಡಿ ಒಂದು ಕಡೆ ಇಟ್ಟು ಹಂಚಿ ಕಡ್ಡಿಯಿಂದ ಜಡೆ ಹೆಣೆದು ಒಂದೊಂದು ಬಾಗಿಲಿಗೆ ಎರಡೆರಡರಂತೆ ಇಡುವರು. ಆ ರಾತ್ರಿ ಎಲ್ಲಾ ಗಣಪರನ್ನು ಒಟ್ಟಿಗೆ ಕೂಡಿಸಿ ಪೂಜೆ ಮಾಡಿದ ನಂತರ ಬೂದಿಯನ್ನು ಸುತ್ತಿಸಿ ಅವುಗಳನ್ನೆಲ್ಲ ಯಾರಿಗೂ ಕಾಣದಂತೆ ಮನೆಯ ಮಾಳಿಗೆಯ ಮೇಲೆ ಇಡುತ್ತಾರೆ. ಈ ಸಗಣಿಗಣಪತಿಯನ್ನು ಮನೆಗೆ ಬಂದವರು ಕದ್ದು

ಹೋದರೆ ಒಳ್ಳೆಯದಾಗುವುದಿಲ್ಲವೆಂದು ನಂಬುತ್ತಾರೆ. ಈ ಕಾರಣದಿಂದ ಅವುಗಳನ್ನು ಪೂಜೆ ಮುಗಿಯುವ ವರೆಗೆ ಜೋಪಾನವಾಗಿ ಕಾದು ಅನಂತರ ಯಾರಿಗೂ ಕಾಣದಂತೆ ಮಾಳಿಗೆಯಲ್ಲಿ ಇಡುತ್ತಾರೆ. ಅಂದು ಕೊಟ್ಟಿಗೆ ಯಲ್ಲಿದ್ದ ಸಗಣಿಯನ್ನು ರಾಶಿ ಮಾಡಿ ಪೂಜೆಮಾಡುತ್ತಾರೆ. ಆ ದಿನ, ದನ ಕರುಗಳನ್ನು ಮೈತೊಳೆದು ಕೋಡುಗಳಿಗೆ ಬಣ್ಣ ಹೊಡೆದು, ಮೈಮೇಲೆ ಚಿತ್ರ ಬರೆದು ಅವುಗಳಿಗೆ ಪೂಜೆ ಮಾಡುತ್ತಾರೆ. ಬಸವನ ಹಬ್ಬದಲ್ಲೂ ಮಾಡುತ್ತಾರೆ. ಆದರೆ, ಇಲ್ಲಿ ವಿಶೇಷವಾಗಿ ದನ, ಕರು ಎಮ್ಮೆಗಳಿಗೆ ಪೂಜೆ ಸಲ್ಲುತ್ತದೆ.

ಸಂಜೆ ಊರಿನ ವಿಶಾಲವಾದ ಮೈದಾನದಲ್ಲಿ ಎಲ್ಲರೂ ತಮ್ಮ ದನಕರುಗಳನ್ನು ತಂಬಿಕೊಂಡು ಅವುಗಳ ಮುಂಭಾಗದಲ್ಲಿ ಸೋಗೆ ಹುಲ್ಲು ಜೋಳದ ದಂಟು ಇತ್ಯಾದಿಗಳಿಂದ ಒಂದು ಗುಡಿಸಲನ್ನು ಕಟ್ಟುತ್ತಾರೆ. " ಊರಜನರೆಲ್ಲಾ ತಮ್ಮ ದೇವರನ್ನು ಹೊರಡಿಸಿಕೊಂಡು ಕುಂಬಾರನಿಂದ ಮಣ್ಣಿನ ಗೊಲ್ಲಕಟ್ಟನ್ನು ಮಾಡಿಸಿಕೊಂಡು ಎಡೆ ಎಣ್ಣೆ ಬೆಣ್ಣೆ ಬಾಳೆಹಣ್ಣು ಕಾಯಿ ಕರ್ಪೂರ, ಹೂ ಪತ್ರಿಗಳೊಂದಿಗೆ ದನಕಾಯುವವನ ಹತ್ತಿರ ಬಂದು ಆ ಹುಲ್ಲಿನ ಗುಡಿಸಲಲ್ಲಿ ಕುಳ್ಳಿಸಿರಿ ತಲೆಗೆ ಎಣ್ಣೆಹಬ್ಬ ಬಾಯಿಗೆ ಬೆಣ್ಣೆ ಹಾಕಿ ತಂಪು ಮಾಡಿ ಆ ದೇವತೆಯನ್ನು ಪೂಜಿಸಿ ಗುಡಿಸಲಿಗೆ ಬೆಂಕಿ ಇಡುತ್ತಾರೆ. ಚರಗ ಮತ್ತು ಪಂಜು ಹಿಡಿದು ಇಬ್ಬರು ಯುವಕರು ದನಗಳ ಸುತ್ತ ಚರಗ ಚೆಲ್ಲುತ್ತ "ಹೆಚ್ಚಲಿ, ಹೋಲಿಸ್ಯ" ಎಂದು ಕೂಗುತ್ತಾ ಪ್ರದಕ್ಷಿಣೆ ಹಾಕಿ ಬರುತ್ತಾರೆ. ದನಗಳನ್ನು ಕಿಚ್ಚಿನ ಮೇಲೆ ಹಾಯಿಸುತ್ತಾರೆ. ಮನೆಗೆ ಬರುವ ದನಕರುಗಳಿಗೆ ಬಯಕೆ ದಾಟಿಸುವುದು, ಹಿಂದಲಿಚ್ಚಿ ಕಾಯಿನಿಂದ ಹೊಡೆಯುವುದು ಮೊದಲಾದ ಸಂಪ್ರದಾಯಗಳನ್ನ ನಡೆಸುತ್ತಾರೆ". (ಬಸವರಾಜ ನೆಲ್ಲೀಸರ ೧೯೮೭: ೧೩೬) ದನಕರುಗಳು ಸದೃಢವಾಗಿ ಬೆಳೆದ ಕಾಲವಾದ್ದರಿಂದ ಆ ಕಿಚ್ಚಿನ ಹಾರುತ್ತದೆ. 'ದೀಪಾವಳಿಯಲ್ಲಿ ದನ ಕೊಡಬ್ಯಾಡ' ಎಂಬ ಗಾದೆ ಮಾತಿನ ಪ್ರಕಾರ ಯಾರು ಈ ಸಮಯದಲ್ಲಿ ದನಕರುಗಳನ್ನು ವ್ಯಾಪಾರ ಮಾಡುವುದಿಲ್ಲ.

**ಬಲೀಂದ್ರ ಪೂಜೆ**: ಬಲಿ ಚಕ್ರಮರ್ತಿಯ ದಾನ ಗುಣದ ವಿಶೇಷವನ್ನು ನೆನೆಪಿಗೆ ತರುವ ವಿಶೇಷ ಕಾಲ. ಇನ್ನೊಂದು ಕತೆಯ ಪ್ರಕಾರ ಬಲೀಂದ್ರನು ಪ್ರಾಣಿಗಳಿಗೆ ತುಂಬ ಹಿಂಸೆ ಕೊಡುತ್ತಿದ್ದ. ಆ ಕಾರಣಕ್ಕಾಗಿ ಅವನನ್ನು ವಿಷ್ಣು ಸಂಹಾರಮಾಡಿ ದನಕರುಗಳನ್ನು ರಕ್ಷಿಸಿದ್ದಕ್ಕೆ ಆ ದಿನ ಬಲೀಂದ್ರನಿಗೆ ಪೂಜೆ ಮಾಡುತ್ತಾರೆ. ದನಕರುಗಳಿಗೆ ಕಟ್ಟುವ ಚಂಡು ಹೂಗಳು ರಾಕ್ಷಸರ ರುಂಡಗಳೆಂದು ಉಪ್ಪಾರರು ನಂಬುತ್ತಾರೆ. ಆದ್ದರಿಂದ ಚಂಡುಹೂಗಳನ್ನು ಮುಡಿಯುವುದಿಲ್ಲ. ನರಕಚತುರ್ದಶಿ ದಿನ ಬೆಳ್ಳಿಗೆ ತರುವ ಕಣಗಲ ಹೂ ಕೂಡ ರಾಕ್ಷಸನ ರುಂಡವೆಂದೆ ನಂಬುತ್ತಾರೆ. ಈ ಕಾರಣದಿಂದ ವ್ಯಕ್ತಿ ಸತ್ತಾಗ ಕಣಗಲ ಹೂವನ್ನು ಮುಡಿಸುತ್ತಾರೆ. ಬದುಕಿದ್ದಾಗ ಈ ಹೂವನ್ನು ಮುಡಿಯುವುದಿಲ್ಲ.

ದೀಪಾವಳಿ ಬಂತೆಂದರೆ ಎಲ್ಲಿಲ್ಲದ ಸಂಭ್ರಮ. ಪಾಡ್ಯದ ರಾತ್ರಿಯಿಂದ ವರ್ಷ ತೊಡಕು ರಾತ್ರಿಯ ವರೆಗೂ ಮನೆ ಮನೆಗೂ ರಾತ್ರಿಯ ಹೊತ್ತು ದೀವಳಿಗೆ ದಂಡು ಹೊರಡುತ್ತದೆ. ದಂಡಿನಲ್ಲಿ ಎಲ್ಲ ಜಾತಿಯ ಜನರು ಸೇರಿಕೊಂಡಿರುತ್ತಾರೆ. ಭಾಗವತಿಕೆ ಮೇಳವು ಮಂಡ್ಯ, ತುಮಕೂರು, ಹಾಸನ ಈ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬಂದರೆ, ಮಲೆನಾಡಿನ ಭಾಗದಲ್ಲಿ ಅಂಟಿಕೆ-ಪಂಟಿಕೆ ಸಂಪ್ರದಾಯ ಕಂಡು ಬರುತ್ತದೆ. ಎರಡು ಮೂರು ಊರುಗಳ ತರುಣರು ಸೇರಿ ಅಂಟಿಕೆ-ಪಿಂಟಿಕೆ ಎಂಬ ಗೀತಮೇಳಗಳನ್ನು ನಡೆಸುತ್ತಾರೆ. ಆ ಮೂರು ರಾತ್ರಿಗಳಲ್ಲೇ ಆ ಮೇಳಗಳು ಮನೆಯಿಂದ ಮನೆಗೆ ದೀಪಾವಳಿಯ ಬೆಳಕಿನ ದಿವ್ಯ ಸಂದೇಶವನ್ನು ಒಯ್ಯುವ ಜವಾಬ್ದಾರಿಯನ್ನು ಹೊತ್ತಿರುತ್ತವೆ. ಬಲಿಪಾಡ್ಯಮಿಯದಿನ ತಂಡದವರು ಎಲ್ಲ ಸಿದ್ಧತೆಗಳೊಂದಿಗೆ ದೇವರಬನಕ್ಕೆ ಬಂದು ಅಲ್ಲಿ ಹೊತ್ತಿಸಿಟ್ಟ ಹಣತೆಯೊಂದರ 'ಜ್ಯೋತಿ' ಹಚ್ಚಿಸಿಕೊಂಡು ಹಣತೆಗೆ ಹೀಗೆ ನಮಿಸುತ್ತಾರೆ. (ಅಂಬಳಿಕೆ ಹಿರಿಯಣ್ಣ -19)

'ಮಣ್ಣಾಲಿ ಹುಟ್ಟಿದೆ ಮಣ್ಣಾಲಿ ಬೆಳೆದೆ
ಎಣ್ಣೇಲಿ ಕಣ್ಣಾ ಬಿಟ್ಟೀದೆ -ಜಗಜ್ಯೋತಿ
ಸತ್ಯಾದಿಂದುರಿಯೇ ಜಗಜ್ಯೋತಿ'

ಮನೆಯ ಮುಂದೆ ಈ ಹಾಡನ್ನು ಹೇಳಿ ಬಾಗಿಲನ್ನು ಈ ಹಾಡನ್ನು ಹೇಳಿ ತೆಗೆಸುತ್ತಾರೆ. ಈ ಹಾಡು ಹೇಳದಿದ್ದರೆ ಕೆಲವರು ಬಾಗಿಲು ತೆಗೆಯುವುದಿಲ್ಲ.

"ಬಾಗಿಲ ತಗೀರಮ್ಮ ಭಾಗ್ಯದ ಲಕ್ಷಮ್ಮ
ಜೋತಮ್ಮನೊಳಾಗೆ ಕರಕೊಳ್ಳಿ"

ಹೀಗೆ ಹಾಡಿ ಬಾಗಿಲನ್ನು ತೆಗೆಯಿಸಿಕೊಂಡು ಮನೆಯನ್ನು ಪ್ರವೇಶ ಮಾಡಿ ಮುಂದಿನ ಹಾಡನ್ನು ಹೇಳಿ ಅವರು ಕೊಡುವ ಹಣ, ಅಕ್ಕಿ ತೆಗೆದುಕೊಂಡು ಮುಂದಿನ ಮನೆಗೆ ಹೋಗುತ್ತಾರೆ.

ಭಾಗವತಿಕೆ ಮೇಳದವರು ಮತ್ತು ದೀವಳಿಗೆ ದಂಡು ಪ್ರತಿ ಮನೆಮನೆಗೂ ಹೋಗಿ "ವಿಷ್ಣುವನ್ನು ಪ್ರತಿನಿಧಿಸುವ ರಂಗಸ್ವಾಮಿ, ನರಸಿಂಹಸ್ವಾಮಿ, ವೆಂಕಟರಮಣಸ್ವಾಮಿ, ರಾಮದೇವರು ಮುಂತಾದ ದೈವಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಆಕಸ್ಮಾತ್ ದಾರಿಯಲ್ಲಿ ಹೋಗುವಾಗ ಒಂದು ಮೇಳ ಇನ್ನೊಂದು ಮೇಳಕ್ಕೆ ಎದುರಾದರೆ ಹಾಡಿನ ಪೈಪೋಟಿ ನಡೆಯುತ್ತದೆ. ಸೋತವರು ಕಂಬಳಿ ಗದ್ದುಗೆ ಹಾಸಿ ಕಪ್ಪ ಕಾಣಿಕೆ ಕೊಟ್ಟು ಮುಂದೆ ಹೋಗಬೇಕು" (ಬಸವರಾಜ ನೆಲ್ಲಿಸರ ಚಿತ್ರದುರ್ಗದ ಸುತ್ತ ಮುತ್ತಲಿನ ತಾಲೂಕುಗಳಲ್ಲಿ ದೀವಳಿಗೆಯಂದು ಗೋವಳರೆಲ್ಲಾ ಕಲೆತು ದೊಡ್ಡದೊಂದು ದೀವಿಗೆಯನ್ನು ಹೊಂದಿಸಿಕೊಂಡು, ಕಾಡ ಮೇಡನೆಲ್ಲಾ ಶೋಧಿಸಿ ಒಂದು ದೊಡ್ಡ ವಸ್ತ್ರದಲ್ಲಿ ತಂಗಟೆ, ಕಣಿಗಲೆ ಮುಂತಾದ ಹೂಗಳನ್ನು ಸಂಗ್ರಹಿಸಿಕೊಂಡು ರಾತ್ರಿಯ ಮಬ್ಬು ಊರನ್ನು ಮುಸುಗಿದಾಗ ಗುಂಪುಕಟ್ಟಿಕೊಂಡು ಹೊರಡುತ್ತಾರೆ. ಬೆಳಗುವ ಆ ದೊಡ್ಡ ಹಣತೆಯನ್ನು ಹಿಡಿದವನು ಮುಂದೆ ಸಾಗುತ್ತಾನೆ ಅವನ ಹಿಂದೆ

ಇತರರು ನಡೆದು ಒಕ್ಕೊರಲಲ್ಲಿ

ಆಹೋ ಅಲ್ಲರೆ ಗೋಡೆ ಬಿದ್ರೆ ಜಲ್ಲರೆ
ಅಲ್ಲಾಡ್ ಇಲ್ ಬಂದೆವು ಕಾಲೆಲ್ಲ ನೊಂದವು
ವರ್ಷಕೊಂದ್ ಪಬ್ ಬಂದೆವು ದೊಣ್ಣೆ ಪೆಟ್ಟುಲೆಂದೆವು
ಆಮನೆಯಿಂದ ಈ ಮನ್ಗೆ-ನೆರೆಮನೆ ಅಜ್ಜಿ ಹಲ್ಲುಜ್ಜ ಹಲ್ಲುಗಳೊ ಸಿರ್‌ಪಲ್ಲುಗಳೊ

ಹೀಗೆ ಮನೆಮನೆಗೂ ಹೋಗಿ ಬೇರೆ ಬೇರೆ ಹಾಡುಗಳನ್ನು ಹೇಳಿ ದೀಪಕ್ಕೆ ಎಣ್ಣೆ ಹಾಕಿಸಿಕೊಂಡು, ತಮ್ಮಲ್ಲಿದ್ದ ಹೂಗಳನ್ನು ಎರಚಿ ಹಣ, ದವಸ ಧಾನ್ಯಗಳನ್ನು ಸ್ವೀಕರಿಸಿ ಮುಂದೆ ಸಾಗುತ್ತಾರೆ.

**ಶಿವರಾತ್ರಿ;** ಇದು ಸಾಮಾನ್ಯವಾಗಿ ಸಂಜೆ ನಡೆಯುವ ಹಬ್ಬ. ಮಾಘಮಾಸದ ಬಹುಳ ಚತುರ್ದಶಿಯ ದಿನ ಈ ಹಬ್ಬ ಬರುತ್ತದೆ. ರಾತ್ರಿ ದೇವಸ್ಥಾನ ಅಥವಾ ಮನೆಗಳಲ್ಲಿ ಜಾಗರಣೆ ಇರುತ್ತದೆ. ಇದು ಇವರಿಗೆ ಕಡ್ಡಾಯವಾಗಿ ಏನೂ ಇಲ್ಲ. ಆ ದಿನ ಬೆಳಿಗ್ಗೆಯಿಂದ ಸಂಜೆಯ ವರೆಗೆ ಉಪವಾಸವಿದ್ದು ಬ್ರಾಹ್ಮಣ ಅಥವ ಜಂಗಮರಿಗೆ ದವಸ ಧಾನ್ಯಗಳನ್ನು ಕೊಟ್ಟು ಊಟಮಾಡುತ್ತಾರೆ. * ಅಂದು ಸಿಹಿ ಅಡುಗೆ ಮಾಡುತ್ತಾರೆ. ಪ್ರತಿ ಮನೆಯವರು ದೇವರಿಗೆ ಹಣ್ಣುಕಾಯಿ ನೈವೇದ್ಯಮಾಡಿ ಹಿರಿಯರಿಗೆ ಎಡೆ ಇಟ್ಟು ಆನಂತರ ಊಟಮಾಡುತ್ತಾರೆ. * ಅಂದು ಸಿಹಿ ಅಡುಗೆ ಮಾಡುತ್ತಾರೆ. ಪ್ರತಿ ಮನೆಯವರು ದೇವರಿಗೆ ಹಣ್ಣು ಕಾಯಿ ನೈವೇದ್ಯ ಮಾಡಿ ಹಿರಿಯರಿಗೆ ಎಡೆ ಇಟ್ಟು ಆನಂತರ ಊಟಮಾಡುತ್ತಾರೆ.

**ಕಾರಹಬ್ಬ:** ಇದು ಕೃಷಿಗೆ ಸಂಬಂಧಿಸಿದ ಹಬ್ಬ. ಅಂದು ಕೃಷಿಗೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನು ತೊಳೆದು ಓರಣವಾಗಿ ಜೋಡಿಸಿ ಬೇವಿನ ಸೊಪ್ಪಿನಿಂದ ಸಿಂಗರಿಸಿ, ಮನೆಬಾಗಿಲಿಗೂ ಕಟ್ಟಿ ಪೂಜಿಸುತ್ತಾರೆ. ಎತ್ತುಗಳನ್ನು ಮೈ ತೊಳೆದು ಅವುಗಳ ಕೋಡುಗಳಿಗೆ ಬಣ್ಣಹಚ್ಚಿ ಮೈಗೆ ಚಿತ್ತಾರ ಬರೆಯುತ್ತಾರೆ. ದನಗಳಿಗೆ ಪೂಜೆ ಇರುತ್ತದೆ. ಆದರೆ, ಎತ್ತುಗಳಿಗೆ ವಿಶೇಷ ಪೂಜೆ ಇರುತ್ತದೆ. ಕಡ್ಡಾಯವಾಗಿ "ಕಿಚಡಿ"*ಮತ್ತು "ಅನೇಕಲ್ಲು ಪಾಯಸ * ಮಾಡಿ ಎಡೆ ತೋರಿಸುತ್ತಾರೆ".

ಈ ಹಬ್ಬದಲ್ಲಿ ಕಾರೇಸೊಪ್ಪನ್ನು ಹೆಬ್ಬಾಗಿಲಿಗೆ ಕಟ್ಟುತ್ತಾರೆ. ಹೊಸದಾಗಿ ಮದುವೆಯಾದ ಅಳಿಯ ಮಗಳಿಗೆ ಹೊಸಬಟ್ಟೆ ಉಡಿಸುತ್ತಾರೆ. ಬೇವಿನ ಸೊಪ್ಪನ್ನು ಊರಿನ ಬಾಗಿಲಿಗೆ ಕಟ್ಟುತ್ತಾರೆ. ಮೈದಾನದಲ್ಲಿದ್ದ ಕಂಬಕ್ಕೆ ಬೇವಿನ ಸೊಪ್ಪನ್ನು ಸುತ್ತುತ್ತಾರೆ. ಬಯಲಿನ ಮಧ್ಯೆ ನೆಲವನ್ನು ಸಾರಿಸಿ ಆ ಸಾರಿಸಿದ ಸ್ಥಳದಲ್ಲಿ ಒಂದು ಕುಂಬವನ್ನು ಇರಿಸಿ ಅದಕ್ಕೆ ಒಂಬತ್ತು ಧಾನ್ಯಗಳನ್ನು * ತುಂಬಿಸುತ್ತಾರೆ. ನಂತರ ಕುಂಬಕ್ಕೆ ಎತ್ತುಕಟ್ಟಿ ಎಳೆಸುತ್ತಾರೆ. ಕುಂಬ ಒಡೆದು ಯಾವ ಧಾನ್ಯ ಮುಂದೆ ಬೀಳುವುದೊ ಆ ಧಾನ್ಯ ಸಮೃದ್ಧವಾಗಿ ಬೆಳೆಯುತ್ತದೆ ಎಂದು ನಂಬುತ್ತಾರೆ. ಮತ್ತು ಆ ಧಾನ್ಯ ಯಾವ ದಿಕ್ಕಿಗೆ ಬಿದ್ದಿದ್ದೆ ಆ ದಿಕ್ಕಿನ ಕಡೆಗೆ ಬೆಳೆ ಚೆನ್ನಾಗಿ ಬರುತ್ತದೆ ಎಂದು ನಂಬುತ್ತಾರೆ.

ಉಪ್ಪಾರರಿಗೆ ಕಾರಹಬ್ಬ ವರ್ಷದ ಮೊದಲ ಹಬ್ಬವಾಗಿದೆ. ಇವರ ಪ್ರಕಾರ ಇದು ಎಲ್ಲಾ ಹಬ್ಬಗಳನ್ನು ಕರೆದುಕೊಂಡು ಬರುತ್ತದೆ ಎಂದು ಭಾವಿಸಿಕೊಂಡಿದ್ದಾರೆ. ಈ ಜನರಿಗೆ ಶಿವರಾತ್ರಿ ಹಳೇಹಬ್ಬವಾಗಿದ್ದು ವರ್ಷದ ಕೊನೆಯ ಹಬ್ಬವಾಗಿದೆ.

### ೪.೨.೨. ಜಾತ್ರೆಗಳು

ಪ್ರತಿ ನಿತ್ಯವೂ ನಿಸರ್ಗದ ಮಡಿಲಲ್ಲಿ ನಿರಂತರವಾಗಿ ಶ್ರಮವಹಿಸಿ ದುಡಿಯುವ ಇವರು, ಆ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ನೆಮ್ಮದಿಯ ಉಸಿರುಬಿಡಲು ಹಬ್ಬ, ತೇರು, ಉತ್ಸವ, ಜಾತ್ರೆ ಮೊದಲಾದ ಸಾಮೂಹಿಕ ಆಚರಣೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಆಚರಣೆಗಳಲ್ಲೆಲ್ಲ ಸಂತೋಷದ ಜೀವನವನ್ನು ಕಾಣಬಹುದು. ಇವರ ಅನೇಕ ಕೆಲಸಗಳಿಗೆ ಜಾತ್ರೆಯು ಒಂದು ಗಡು. ಈ ವೇಳೆಯಲ್ಲಿ ಹೊಸಬಟ್ಟೆಯನ್ನು ಖರೀದಿ ಮಾಡುವುದು; ಮನೆಗಳಿಗೆ ಸುಣ್ಣ ಬಣ್ಣ ಬಳಸುವುದು; ಇನ್ನೂ ಮುಂತಾದ ಕೆಲಸಗಳನ್ನು ಸಂಭ್ರಮದಿಂದ ನಡೆಸುತ್ತಾರೆ. ಜಾತ್ರೆ ಸಾಮೂಹಿಕವಾಗಿ ಆಚರಣೆಗೊಳ್ಳುವುದರಿಂದ ಇದರ ಕಟ್ಟಳೆಗಳನ್ನು ಯಾರೂ ಮೀರುವುದಿಲ್ಲ. ಒಂದು ವೇಳೆ ಮೀರಿದರೆ, ಅವರು ದೇವರ ಕೋಪಕ್ಕೀಡಾಗಿ ನಾನಾ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾರೆ ಎಂದು ನಂಬುತ್ತಾರೆ. "ಸಮೂಹದ ಕ್ಷೇಮಕ್ಕಾಗಿ ಆಚರಿಸುವ ಈ ಜಾತ್ರೆಯು ಅನೇಕ ಸಂಪ್ರದಾಯಗಳ ಕಟ್ಟಾಗಿದೆ" ಎಂದು ಬಾಗ್ಸ್ ಹೇಳುತ್ತಾರೆ. ಸಮಾನ್ಯವಾಗಿ ಜಾತ್ರೆ ನಡೆದಾಗಲೆಲ್ಲ ಮನೆಮನೆಯಲ್ಲೂ ಹಬ್ಬವಿರುತ್ತದೆ. ಆದರೆ ಹಬ್ಬದ ಸಂದರ್ಭದಲ್ಲಿ ಜಾತ್ರೆ ಇರಬೇಕೆಂದು ನಿಯಮವಿಲ್ಲ. ಹಬ್ಬ ಒಂದು ಕುಟುಂಬಕ್ಕೆ ಸಂಬಂಧಿಸಿದೆ. ಆದರೆ ಜಾತ್ರೆ ಇಡೀ ಊರಿಗೆ ಸಂಬಂಧಿಸಿರುತ್ತದೆ. ಜಾತ್ರೆಯಲ್ಲಿ ನಡೆಯುವ ಆಚರಣೆಗಳೆಲ್ಲ ಸಾಮೂಹಿಕ ಕಾಳಜಿ ಇರುತ್ತದೆ. ಹೀಗಾಗಿ "ಸಮಾಜದ ಹಿತರಕ್ಷಣೆಯೇ ಇವುಗಳ ಮುಖ್ಯ ಉದ್ದೇಶವಾಯಿತು. ಇಂಥ ಉದ್ದೇಶವನ್ನು ಅಭಿವ್ಯಕ್ತಿಸುವ ಹಲವು ಆಚರಣೆಗಳಲ್ಲಿ 'ಜಾತ್ರೆಗಳು', ತುಂಬ ಪ್ರಮುಖ ಪಾತ್ರವಹಿಸುತ್ತವೆ" (ಹಂಪ ನಾಗಾರಾಜಯ್ಯ : 1985:9)

ಜಾತ್ರೆ ಊರೊಟ್ಟಿನ ಹಬ್ಬವಾದುದರಿಂದ ಎಲ್ಲಾ ಜನಾಂಗಗಳು ಸೇರಿಕೊಂಡು ಆಚರಿಸುವುದೊಂದು ಸಹಜ. ಆದರೆ, ಇಲ್ಲಿ ಉಪ್ಪಾರರು ಪೂಜಾರಿಗಳಾಗಿದ್ದು ಜಾತ್ರೆಯನ್ನು ಆಚರಿಸುವುದು ವಿಶೇಷ ಸಂಗತಿಯಾಗಿದೆ.

**ಅಂತರಘಟ್ಟಮ್ಮ**

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿರುವ ಅಜ್ಜಂಪುರದಿಂದ ಸುಮಾರು ಹತ್ತು ಕಿ.ಮೀ ದೂರದಲ್ಲಿರುವ ಅಂತರ ಘಟ್ಟವು ಈ ದೇವತೆಯ ಮೂಲಸ್ಥಾನವೆಂದು ಹೇಳುತ್ತಾರೆ. ಸುತ್ತ ಮುತ್ತಲಿನಲ್ಲಿ

ಇರುವ ಉಪ್ಪಾರರು ಇದಕ್ಕೆ ನಡೆದುಕೊಳ್ಳುತ್ತಾರೆ. ಈ ದೇವಿಯ ಗುಡಿಗಳನ್ನು ಚಿಕ್ಕಮಗಳೂರು ಜಿಲ್ಲೆಯ ಕಡೂರಿ, ಕೊಪ್ಪ ತಾಲೂಕು, ಹಾಸನಜಿಲ್ಲೆಯ ಮತ್ತು ಚೆನ್ನಗಿರಿ ತಾಲೂಕುಗಳಲ್ಲಿ ಕಾಣಬಹುದು. ಅಂತರಗಟ್ಟ ದುರ್ಗಮ್ಮ ಮಲ್ಲೇಶ್ವರದಮ್ಮ ಕರಿಯಮ್ಮ ಇನ್ನೂ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. (ಹುತ್ತದ ರೂಪದಲ್ಲಿ ಕಂಡು ಬರುತ್ತಾಳೆ).

ಉತ್ತರ ದೇಶದ ಅಸಂದಿ ಪಟ್ಟಣದಲ್ಲಿ ಅಜ್ಜಿ ಮತ್ತು ಮೊಮ್ಮಗ ಹೀಗೆ ಇವರೇ ಬಡವರಾಗಿ ಬದುಕುತ್ತಿರುತ್ತಾರೆ. ಅಜ್ಜಿ ಮೊಮ್ಮಗನನ್ನು ಅರಸನೊಬ್ಬನ ಮನೆಯಲ್ಲಿ ಕೆಲಸಕ್ಕೆ ಸೇರಿಸುತ್ತಾಳೆ. ಆದರೆ "ದೊರೆಗಳ ಮನೆಯಲ್ಲಿ ಕೋಲು ಹಿಡಿಯುವುದಿಲ್ಲ" ಎಂದು ಮೊಮ್ಮಗ ಅರಸನಲ್ಲಿ ಕೆಲಸ ಮಾಡಲು ನಿರಾಕರಿಸುತ್ತಾನೆ. ಮುಂದೆ ಶ್ರಮದಿಂದ ಬೇಸಾಯ ಮಾಡುತ್ತಾನೆ. ಕೆಲದಿನಗಳ ನಂತರ ದೊಡ್ಡ ಶ್ರೀಮಂತನಾಗಿ ಅರಮನೆಕಟ್ಟಿ ಮದುವೆ ಆಗುತ್ತಾನೆ. ಅಂದಿನಿಂದ ಕೊಣಬಿ ಗೌಡ ಅಂತ ಹೆಸರಿಟ್ಟುಕೊಳ್ಳುತ್ತಾನೆ. ಅವನಿಗೆ ಒಬ್ಬ ಮಗಳು ಇದ್ದಳು. ಅವಳ ಹೆಸರು ಮುದ್ದಮ್ಮ ಎಂದು. ತಂದೆ ದಾನ ಧರ್ಮ ಮಾಡಿ (ಬಡಬಗ್ಗರಿಗೆ) ಕೊಂಡು ಸುಖವಾಗಿ ಕಾಲ ಕಳೆಯುತ್ತಿರುತ್ತಾನೆ.

ಅದೇ ದಾರಿಯಲ್ಲಿ ದಾಸಯ್ಯ ಬರುತ್ತಾನೆ. ಊಟ ಕೇಳುತ್ತಾನೆ. "ಆಯಿತು ಸ್ನಾನ ಮಾಡಿ ಬಾ" ಎಂದು ಹೇಳಿ ಅವನ ಚೀಲದಲ್ಲಿದ್ದ ಬಂಗಾರದ ಸಂಜೀವಿನಿ ಕಡ್ಡಿಯನ್ನು ಕದಿಯುತ್ತಾಳೆ. ದಾಸಯ್ಯ ಸ್ನಾನದ ನಂತರ ಬಂದು ತನ್ನ ಚೀಲದಲ್ಲಿದ್ದ ಬಂಗಾರದ ಕಡ್ಡಿಯನ್ನು ಕಾಣದೆ ಇವಳನ್ನು ಕೇಳುತ್ತಾನೆ. ಅದಕ್ಕೆ ತನಗೆ ಗೊತ್ತಿಲ್ಲವೆಂದೂ, ಹಾಗೆ ಕೇಳಿದ ತನಗೆ ಅಪಮಾನವೆಂದೂ ತಿಳಿದು ದಾಸಯ್ಯನನ್ನು ಬೈದು ಹೊಡೆದು ಕಳಿಸುತ್ತಾಳೆ. ದಾಸಯ್ಯ ಮಾರಿಯ ಸಹಾಯ ಬೇಡುತ್ತಾನೆ. ಮಾರಿಗೆ ಸಿಟ್ಟು ಬರುತ್ತದೆ. "ಬಟ್ಟಂಚಿನ ಸೀರೆ ಉಟ್ಟು ಗುಲಗಂಜಿ ಆಕಾರದ ರವಿಕೆ ತೊಟ್ಟು, ತನ್ನ ಒಂದೊಂದು ಮೊಲೆ ಏಳು ಮಾರುದ್ದ ಬೆಳೆಸಿ, ಒಂದು ಖಂಡುಗ ಕುಂಕುಮ ಬಳಿದುಕೊಂಡು ನಡುವಿಗೆ ನಾಗರ ಹಾವು ಬಿಗಿದು ಕಟ್ಟಿ, ಕುಲ ಹದಿನೈದು ಜಾತಿಗೂ ಸಂಹಾರ ಮಾಡುವಂತೆ ಭೂಮಿಗೂ ಆಕಾಶಕ್ಕೂ ಒಂದೇ ಆಗಿ ನಿಂತು ಕೊಣವೆ ಗೌಡನ ಮಗಳು ಮುದ್ದಮ್ಮನಿರುವ ಪಟ್ಟಣಕ್ಕೆ ಬರುತ್ತಾಳೆ. ಇದನ್ನು ಕಂಡ ಕೊಣವೆ ಗೌಡ ನೆಲಮಾಳಿಗೆಯಲ್ಲಿ ಅಡಗಿ ಕುಳಿತು ಬಿಡುತ್ತಾನೆ. ನೆಲಮಾಳಿಗೆಯಿಂದ ಪತ್ತೆ ಹಚ್ಚಿ ಮಾರಿಯು ಅವನನ್ನು ಕೊಂದು ಬಿಡುತ್ತಾಳೆ. ಆತನ ಸಂಗಡಿಗರನ್ನು ಕೊಂದು ಬಿಡುತ್ತಾಳೆ. ಮುಂದೆ ದೇವಿ ಬೇರೆ ಬೇರೆ ಊರುಗಳಿಗೆ ಹೋಗಿ ತನ್ನ ಮಹಿಮೆಯಿಂದ ಬೇರೆ ಬೇರೆ ಹೆಸರು ಪಡೆದುಕೊಂಡು ಅನಂತರ ಅಂತರಗಟ್ಟೆಯಲ್ಲಿನ ಒಂದು ಹುತ್ತದಲ್ಲಿ ಸೇರಿಕೊಳ್ಳುತ್ತಾಳೆ.

ಆ ಊರಿನಲ್ಲಿ ಉಪ್ಪಾರರು ಇಲ್ಲಿ ಬೇಟೆಗೆ ಹೋದವರು ಈ ಹುತ್ತವನ್ನು ಅಗೆದು ಇಲಿಗಳನ್ನು ಹಿಡಿಯುವಾಗ ಗುದ್ದಲಿ ಪೆಟ್ಟು ಅಮ್ಮನ ತಲೆಗೆ ತಾಕಿದಾಗ ಅವನು ರಕ್ತ ಕಾರಿ ಸತ್ತ. ಈ ಸುದ್ದಿ ಊರಿನ ದೊರೆಗೆ ತಲುಪಿತು. ಅವನು ಶಾಸ್ತ್ರ ಕೇಳಲಾಗಿ 'ಇಲ್ಲಿ ಮಾರಿ ನೆಲಸಿದ್ದಾಳೆ' ಎನ್ನುವುದನ್ನು ತಿಳಿದ ಅವನು ಗುಡಿ ಕಟ್ಟಿಸಿ ನಿನ್ನ ಪೂಜೆ ನಡೆಯುವಂತೆ ಮಾಡಿದ ಹಾಗೆ ಈಗಲೂ ಪೂಜೆ ನಡೆಯುತ್ತಾ ಬಂತು. ಈ ಘಟನೆಗಳು ನಡೆದುದ್ದಕ್ಕೆ ಕೆಲವು ಸಾಕ್ಷಿಗಳು ಇವೆ ಎಂದು ಭಾವಿಸುತ್ತಾರೆ. ನರಿಗೆಕಲ್ಲುವಿನಲ್ಲಿ ದೇವಿಯ ಪಾದಗಳ ರೇಖೆಗಳಿದ್ದಾವೆ. ಕೊಣವೆ ಗೌಡನನ್ನು ಕೊಂದ ಅನಂತರ ಉರಿಸಲಾದ ಜ್ಯೋತಿಯು ಇಂದಿಗೂ "ಕೊಟ್ಟಳು" ಎಂಬಲ್ಲಿ ಆರದೇ ಉಳಿದಿದೆ ಎಂದು ಹೇಳುತ್ತಾರೆ.

ಕಷ್ಟಗಳು ಬಂದಾಗ, ದನಗಳು ಮತ್ತು ಮಕ್ಕಳಿಗೆ ರೋಗ ಬಂದಾಗ, ಹೆರಿಗೆ ಸುಲಭ ಆಗಿ ಆಗುವುದಕ್ಕೆ ವೈವಾಹಿಕ ಸಂಬಂಧಗಳು ಏರ್ಪಡುವುದಕ್ಕೆ ಇನ್ನೂ ಮುಂತಾದ ಕಷ್ಟಗಳು ಬಂದಾಗ ಉಪ್ಪಾರರು ದೇವತೆಗಳಿಗೆ ವಿಶೇಷವಾಗಿ ಆರಾಧಿಸಿ ಬಲಿ ಅರ್ಪಿಸುತ್ತಾರೆ. ಹೆಣ್ಣು ಮಗಳೊಬ್ಬಳು ದೊಡ್ಡವಳಾದಾಗ ಅಮ್ಮನಿಗೆ ಹೊಸ ಸೀರೆ ರವಿಕೆ ಕೊಟ್ಟು ಪೂಜಿಸುತ್ತಾರೆ. ಹುಟ್ಟಿದ ಮಗುವಿಗೆ ದೇವತೆಯ ಹೆಸರನ್ನು ಇಟ್ಟರೆ ಆಗ ಮಗು ಎಲ್ಲ ಬಗೆಯ ತೊಂದರೆಗಳನ್ನು ಎದುರಿಸಿ ಪಾರಾಗುತ್ತದೆ ಎಂದು ಬಲವಾಗಿ ನಂಬುತ್ತಾರೆ. ಉಪ್ಪಾರರು ಅಂತರಗಟ್ಟಮ್ಮ ಜಾತ್ರೆಯನ್ನು ಬಹಳ ಶ್ರದ್ಧೆ ಭಕ್ತಿ ಗೌರವ ಮತ್ತು ಅದ್ದೂರಿಯಿಂದ ನಡೆಸುತ್ತಾರೆ.ವರ್ಷಕ್ಕೆ ಒಂದು ಸಾರಿ ನಡಯುವ ಈ ಜಾತ್ರೆ ಮಾಘಮಾಸದಲ್ಲಿ ಏರ್ಪಡುತ್ತದೆ. ಭಾನುವಾರದಿಂದ ಆರಂಭವಾಗಿ ಒಟ್ಟು ಆರು ದಿನಗಳ ವರೆಗೆ ಜರುಗುತ್ತದೆ. ಕೆಲವೆಡೆ ಒಂದೇ ದಿನ ನಡೆದು ಬಿಡುತ್ತದೆ. ಕ್ರಮವಾಗಿ ಸಿದ್ದರ ಪೂಜೆ, ಗಂಗೆಪೂಜೆ, ಹೆಂಡದ ಪೂಜೆ ನಡೆಯುತ್ತದೆ. ಕಾಲು ಬೆಳ್ಳಗಿರದ ಕೋಣವನ್ನು ದೇವಿಗೆ ಬಲಿ ಕೊಡಲಾಗುತ್ತದೆ. ಅದೇ ಕೋಣನ ಮಾಂಸವನ್ನು ಅಡುಗೆ ಮಾಡಿ, ದೇವತೆಗೆ ಅರ್ಪಿಸಿ, ಭಕ್ತರಿಗೆ ಉಣ ಬಡಿಸುತ್ತಾರೆ. ಕೋಣನ ಬಾಯಿಗೆ ಅದರ ಕಾಲನ್ನು ಸಿಕ್ಕಿಸುತ್ತಾರೆ. ಅದರ ಕರಳಿನಿಂದ ತಯಾರಿಸಿದ ಎಣ್ಣೆಯಿಂದ ದೀಪವನ್ನು ತಲೆ ಮೇಲಿಟ್ಟು ಉರಿಸುತ್ತಾರೆ. ಕೋಣದ ಮಾಂಸವನ್ನು ಮಾದಿಗರು ಹಂಚಿಕೊಂಡು ಹೋಗುವರು.

ಜಾತ್ರೆಯಲ್ಲಿ ಬರುವ ಗುರುವಾರ ಅಮ್ಮನಿಗೆ ಮದುವೆ ಮಾಡಿಸಲಾಗುತ್ತದೆ. ವಿಧ್ಯುಕ್ತವಾಗಿ ನಡೆಯುವ ಈ ಮದುವೆಯಲ್ಲಿ ಜೋಯಿಸರು ಅಮ್ಮನಿಗೆ ತಾಳಿಕಟ್ಟುತ್ತಾರೆ. ಉಳಿದಂತೆ ಜಾತ್ರೆಯ ಅಂಗವಾಗಿ ಜೋಗಿತಿಯರ ಊಟ, ಬಾಗಿಲು ತೆಗೆಯುವ ಹಟ್ಟಿ ಕಾರ್ಯಕ್ರಮಗಳು ನಡೆಯುತ್ತವೆ. ಅಸಾದಿಗಳ ಕುಣಿತ ಹೆಂಗಸರ ಬಾಯಿಬೀಗ, ಜಾತ್ರೆಯ ಪ್ರಮುಖ ಅಂಶಗಳಾಗಿವೆ. ಊರಿಗೆ ಸಾಮೂಹಿಕವಾಗಿ ತೊಂದರೆ ಬಂದಾಗ ಜನರೆಲ್ಲ ಒಟ್ಟು ಸೇರಿ ಅಮ್ಮನಿಗೆ ದೊಡ್ಡೆಡೆ ಒಪ್ಪಿಸುತ್ತಾರೆ. (ನೋಡಿ. ಬಸವರಾಜ ನೆಲ್ಲಿಸರ 1981).

ಕರಿಯಮ್ಮ:

ಕರ್ನಾಟಕದಾದ್ಯಂತ ಹೇರಳವಾಗಿ ಕಂಡುಬರುವ ಕೆಲವೇ ದೇವತೆಗಳಲ್ಲಿ ಕರಿಯಮ್ಮ ಒಬ್ಬಳು. ಕರಿಯಮ್ಮ ಎಲ್ಲ ಬಗೆಯ ಕಷ್ಟಗಳನ್ನು ಕಳೆದು ಸುಖ, ಸಂತೋಷ ನೆಮ್ಮದಿಯನ್ನು ನೀಡುತ್ತಾಳೆ ಎಂದು ಎಲ್ಲರೂ ನಂಬುವಂತೆ ಉಪ್ಪಾರರು ನಂಬುತ್ತಾರೆ. ಮಕ್ಕಳ ಫಲಕ್ಕೆ ಹಾಗೂ ತಮ್ಮ ದನಕರುಗಳ ರಕ್ಷಣೆಗೋಸ್ಕರ ಇವರು ವಿಶೇಷವಾಗಿ ಈ ದೇವತೆಯನ್ನು ಪೂಜಿಸಿ, ಪ್ರಾರ್ಥಿಸುತ್ತಾರೆ.

ಕರ್ನಾಟಕದಾದ್ಯಂತ ಈ ದೇವತೆಯನ್ನು ಉಪ್ಪಾರರು, ಹರಿಜನರು ಗೌಡರು, ವೃದ್ಧರು, ಇನ್ನೂ ಮೊದಲಾದವರು ಪೂಜಿಸುತ್ತಾರೆ. ಹೊಸದುರ್ಗ ತಾಲೂಕಿನ ಸಾಣೇಹಳ್ಳಿ (ಮಾಗಳಿ) ಗ್ರಾಮದಲ್ಲಿ ಕರಿಯಮ್ಮನನ್ನು ಉಪ್ಪಾರರು ಪೂಜಿಸುತ್ತಾರೆ. ಊರಿನ ಪ್ರವೇಶದ್ವಾರದಲ್ಲಿ ಕರಿಯಮ್ಮನ ಸಿಡಿಗಂಬವಿದೆ. ಇಲ್ಲಿ ವರ್ಷಕ್ಕೆ ಒಂದು ಸಾರಿ ಸಿಡಿಯಾಡುತ್ತಾರೆ. ಸಿಡಿಯಾಡುವವರು ಹರಿಜನರು ಆಗಿರುತ್ತಾರೆ. ವಂಶಪರಂಪರಾಗತವಾಗಿ ಬಂದಿದೆ ಎಂದು ಆ ಊರಿನ ಹರಿಜನರೇ ಹೇಳುತ್ತಾರೆ.

ಕರಿಯಮ್ಮ ಆ ಊರಿನಲ್ಲಿ ಹೇಗೆ ನೆಲೆಸಿದಳು ಎನ್ನುವುದಕ್ಕೆ ಕೆಲವು ಕಥೆಗಳಿವೆ. ಊರಿನಲ್ಲಿ ದನಕರುಗಳು ಮತ್ತು ಮನುಷ್ಯರು ಸಾಯುತ್ತಿದ್ದರು. ಆಗ ಊರಿನ ಒಬ್ಬನು ತನ್ನ ದನಕರುಗಳನ್ನು ಆಡವಿಗೆ ಹೊಡೆದು ಕೊಂಡು ಹೋಗಿ ವಾಸಮಾಡಿಕೊಂಡನಂತೆ. ಆ ವ್ಯಕ್ತಿ ಹೋಗಿ ಕೆಲದಿನಗಳ ನಂತರ ಒಬ್ಬ ಹೆಣ್ಣು ಮಗಳು, ಇವನನ್ನು ನೋಡಿ ಊರನ್ನು ಬಿಟ್ಟು ಇಲ್ಲಿಗೆ ಏಕೆ ಬಂದೆ ಎಂದು ಕೇಳುತ್ತಾಳೆ. ಅದಕ್ಕೆ ಆ ವ್ಯಕ್ತಿ ತನ್ನ ಊರಿಗೆ ಆದ ಸ್ಥಿತಿಯನ್ನು ವಿವರಿಸುತ್ತಾನೆ. ಎಲ್ಲವನ್ನೂ ತಿಳಿದ ಆ ಹುಡುಗಿ ಆವನಿಗೆ ಹೀಗೆ ಹೇಳುತ್ತಾಳೆ "ನಿನ್ನ ಊರಿಗೆ ಕರಿಯಮ್ಮ ಎಂಬ ದೇವತೆ ಬಂದಿದ್ದಾಳೆ. ಅದಕ್ಕೆ ಹೀಗೆ ಜನ ಮತ್ತು ದನಗಳು ಸಾಯುತ್ತಿವೆ. ಅದಕ್ಕಾಗಿ ಶಾಂತಿ ಮಾಡಿದರೆ ಒಳ್ಳೆಯದಾಗುತ್ತದೆ" ಎಂದು ಹೇಳಿ ಊರಿಗೆ ಹೋಗುವಂತೆ ಹೇಳಿ ತಾನು ಅವನ ಜೊತೆಗೆ ಊರಿನ ವರೆಗೂ ಬಂದು "ಇನ್ನೂ ನನ್ನ ಜಾಗ ಬಂತು. ನಾನು ಬರುತ್ತೇನೆ ನೀನು ಊರಿಗೆ ಹೋಗು" ಎಂದು ಹೇಳಿ ಮಾಯವಾದಳಂತೆ. ಅವಳು ಮಾಯವಾದ ಸ್ಥಳದಲ್ಲಿ ಗುಡಿಯನ್ನು ನಿರ್ಮಿಸಲಾಗಿದೆ ಎಂದು ಹೇಳುತ್ತಾರೆ.

ಎರಡನೇ ಕಥೆಯ ಪ್ರಕಾರ ಉಪ್ಪಾರರು ಕಟ್ಟಿಗೆ ತರಲು ಕಾಡಿಗೆ ಹೋದಾಗ ಕಟ್ಟಿಗೆ ಹೊರೆಯಲ್ಲಿ ಕರಿಯಮ್ಮ ಊರಿಗೆ ಬಂದಳೆಂದೂ , ಕಾಡಿನಲ್ಲಿ ಚಳಿ, ಗಾಳಿ, ಮಳೆ ಸಹಿಸದೆ ಊರಿಗೆ ಬಂದು ಕರಿಯಮ್ಮನಿಗೆ ಉಪ್ಪಾರರು ಗುಡಿಕಟ್ಟಿಸಿ ಪ್ರತಿಷ್ಠಾಪನೆ ಮಾಡಿದರೆಂದೂ ಎಂದು ಹೇಳುತ್ತಾರೆ.

ಹಿಂದೆ ಮಾಗಳಿ ಗ್ರಾಮದ ಉಪ್ಪಾರರ ಮನೆಯಲ್ಲಿ ಒಬ್ಬಳು ಸುಂದರ ಹೆಣ್ಣುಮಗಳು ಇದ್ದಳಂತೆ. ಹೀಗೆ ಇರುವಾಗ ಒಬ್ಬ ಯುವಕ ಯಾವ ಕಡೆಯಿಂದಲೋ ಬಂದು ನಾನು ಬ್ರಾಹ್ಮಣ ಎಂದು ಸುಳ್ಳುಹೇಳಿ ಉಪ್ಪಾರರ ಮನೆಯಲ್ಲಿ ಕೆಲಸ ಮಾಡಿಕೊಂಡು ಇರುತ್ತಾನೆ. ಈತನ ಗುಣ ನಡತೆ ಕಂಡು ಆ ಹೆಣ್ಣು ಮಗಳನ್ನು ಮದುವೆ ಮಾಡಿಕೊಡುತ್ತಾರೆ. ಕೆಲವರ್ಷಗಳ ನಂತರ ಆಸ್ತಿ ವಿಭಾಗವಾದಾಗ ಆಗ ಈ ಹೊಸ ದಂಪತಿಗಳು ಬೇರೆ ಸಂಸಾರ ಹೂಡುತ್ತಾರೆ. ಈತನಿಗೆ ಬೇರೆ ಕೆಲಸ ಬರದೆ ತನ್ನ ಮಾಮೂಲಿ ಕೆಲಸವಾದ ಚಪ್ಪಲಿ ಹೊಲಿಯುವ ಕೆಲಸಕ್ಕೆ ಹೋಗುತ್ತಾನೆ. ಒಂದು ದಿನ ಆತನ ಮಗನನ್ನು ಕರೆದುಕೊಂಡು ಹೋಗುತ್ತಾನೆ. ಮಾರನೇ ದಿನ ತನ್ನ ಮಗ ಎಲೆಗಳಲ್ಲಿ ಚಪ್ಪಲಿ ಹೊಲಿಯುತ್ತಿರುತ್ತಾನೆ. ಇದನ್ನು ನೋಡಿದ ತಾಯಿ ಎಲ್ಲಿ ಕಲಿತೆ ಎಂದು ಕೇಳುತ್ತಾಳೆ. ಅದಕ್ಕೆ ಅವನು ಅಪ್ಪ ಹೀಗೆ ಮಾಡುತ್ತಾರೆ ಎಂದನಂತೆ. ಆಗ ಆಕೆಗೆ ತುಂಬಾ ವ್ಯಥೆಯುಂಟಾಗಿ ಗಂಡನ ಎದುರಿಗೆ ನಾನು ಮಾರಿಯಾಗಿ ಹುಟ್ಟುತ್ತೇನೆ. ನೀನು ಕೋಣನಾಗಿಯೂ ನಿನ್ನ ಮಗ ಕುರಿಯಾಗಿಯೂ ಹುಟ್ಟಿ ಎಂದು ತಲೆ ಚಚ್ಚಿಕೊಂಡು ಸಾಯುತ್ತಾಳೆ. ಮುಂದೆ ತಂದೆ ಮತ್ತು ಮಗ ಅಲ್ಲಿ ಇರುವ ಬಾವಿಯನ್ನು ಹಾರಿ ಸಾಯುತ್ತಾರೆ. ಕೆಲದಿನಗಳ ನಂತರ ದಾರಿಯಲ್ಲಿ ಹೋಗುವ ಪ್ರಯಾಣಿಕರು ಅಲ್ಲಿ ತಂಗಿ ಊಟ ತಯಾರಿಸುವುದಕ್ಕಾಗಿ ಕಲ್ಲುಗುಂಡು ಇಟ್ಟು ಅಡಿಗೆ ತಯಾರಿಸಿದಾಗ ಅಡುಗೆಯಲ್ಲಿ ರಕ್ತಮಯವಾಯಿತಂತೆ. ಇದು ಏಕೆ ಹೀಗೆ ಆಯಿತು ಎಂದು ಕೇಳಲು ಊರಿನವರೆಲ್ಲ ವಿಷಕುಡಿದವರಂತೆ ಬಿದ್ದು ಬಿಟ್ಟರಂತೆ ಆನಂತರ ಶಾಸ್ತ್ರ ಕೇಳಲಾಗಿ ಆ ದೇವಿ "ಕೊರವಂಜಿ ವೇಷದಲ್ಲಿ ಹಾದಿಹೋಗರು ಮೂರು ಕಲ್ಲು ಇಟ್ಟು ಪೂಜೆ ಮಾಡಿದ್ದಾರೆ. ಆ ಕಾರಣದಿಂದ ಹೀಗಾಗಿದೆ. ಇಲ್ಲಿ ಗುಡಿಕಟ್ಟಿ" ಎಂದು ಹೇಳಿ ಮಾಯವಾಗುತ್ತಾಳೆ. ಅದರಂತೆ ಅಲ್ಲಿ ಗುಡಿ ಸ್ಥಾಪಿತವಾಗುತ್ತದೆ.

ಸಾಮಾನ್ಯವಾಗಿ ಉಪ್ಪಾರರು ಜನನ ಕಾಲಕ್ಕೆ ಹಾಗೂ ಮದುವೆಯ ವೇಳೆಯಲ್ಲಿ ಕರಿಯಮ್ಮನಿಗೆ ಉಡಿ(ಮಡಿಲು) ತುಂಬಿಸುತ್ತಾರೆ. ಸೂತಕ (ಸಾವಿನ) ಇರುವವರು ಈ ಪೂಜೆ ಮಾಡುವ ಹಾಗಿಲ್ಲ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಜಾತ್ರೆಯ ಸಂದರ್ಭದಲ್ಲಿ ಕರಿಯಮ್ಮನಿಗೆ ಉಪ್ಪಾರರ ಮನೆಯಿಂದ ಕುಂಬಗಳು ಬರುತ್ತವೆ. ಈ ಕುಂಬಗಳು ಬಂದ ಮೇಲೆ ಕೋಣನ ಬಲಿ ಕೊಡುವರು.

**ಜಾತ್ರೆ;** ಶ್ರಾವಣ ಮಾಸದ ಮೂರನೇ ದಿನ ಮಂಗಳವಾರ ಕುಂಬ ಪೂಜೆ ಮಾಡುತ್ತಾರೆ. ಸೋಮವಾರ ಗದ್ದುಗೆಯನ್ನು ಸ್ವಚ್ಛಗೊಳಿಸಿ ಪೂಜೆ ಮಾಡುತ್ತಾರೆ. ಮಂಗಳವಾರ ತನು ಬಿಂದಿಗೆಯನ್ನು ತೆಗೆದುಕೊಂಡು ಮೊದಲು ಹಳ್ಳಿಗೆ ಹೋಗುತ್ತಾರೆ. ಅಲ್ಲಿ ತನು ಬಿಂದಿಗೆಗೆ ತೆಂಗಿನ ಕಾಯಿ ಇಟ್ಟು ತೆಂಗಿನ ಕಾಯಿಗೆ ಓಲೆ, ಮೂಗುತಿ, ಮಾಂಗಲ್ಯ ಸರ ಮತ್ತು ಬಳೆ, ದೇವಿಯ ಬೆಳ್ಳಿಯ ಮುಖವಾಡಗಳನ್ನು ಹಾಕಿ, ಸೀರೆಯನ್ನು

ಉಡಿಸಿ ಗಂಗಾಪೂಜೆ ಮಾಡುತ್ತಾರೆ. ಅನಂತರ ನಡೆಮುಡಿಯ ಮೇಲೆ ಊರಿನ ತುಂಬೆಲ್ಲಾ ಮೆರವಣಿಗೆ ಮಾಡುತ್ತಾರೆ. ಪೂಜಾರಿ ತನ್ನ ಬಿಂದಿಗೆ ಹೊತ್ತುಕೊಂಡು ಬರುತ್ತಾನೆ. ಊರಿನ ಹೆಬ್ಬಾಗಿಲಿಗೆ ಕುಂಬ ಬಂದಾಗ ಗ್ರಾಮದ ಎಲ್ಲಾ ಮನೆಗಳ ಕಳಸಗಳು ಮತ್ತು ಹರಕೆಹೊತ್ತವರು ದೀಪಗಳೊಂದಿಗೆ ದೇವಿಯನ್ನು ಎದುರುಗೊಳ್ಳುತ್ತಾರೆ. ಅಲ್ಲಿಂದ ಭಕ್ತರು ದೇವಿಯ ಮೂಲಸ್ಥಾನ ಸೇರುವ ವರೆಗೂ ಪೂಜಿಸಿ ತಮ್ಮ ತಮ್ಮ ಮನೆಗಳಿಗೆ ಮರಳುತ್ತಾರೆ. (ಕೆಲವೆಡೆ ಮೊದಲರಾತ್ರಿ ಕುರುಬರು, ಹರಿಜನರು, ವಡ್ಡರು, ಕಟ್ಟೇರು ಮತ್ತು ನಾಯಕ ಜನಾಂಗದ ಮುಖಂಡರ ಮನೆಗೆ ಹೋಗಿ ಕಂಕಣವನ್ನು ಕೊಡಲಾಗುತ್ತದೆ. ಈ ಐದೂ ಮುಖಂಡರು ಖಡ್ಗಗಳನ್ನು ಮೆರವಣಿಗೆಯ ಮೂಲಕ ಗರ್ಭಗುಡಿಗೆ ತರುತ್ತಾರೆ. ಕೋಣನ ಬಲಿ ಮಾಡುವ ಕತ್ತಿಯನ್ನು ಆ ಊರಿನ ಗೌಡ ಮುಟ್ಟಿದ ಮೇಲೆ ಬಲಿಗಾಗಿ ಆ ಕತ್ತಿಯನ್ನು ಬಳಸಲಾಗುತ್ತದೆ.)

**ಆಚರಣೆಗಳು**

೧. ಚರಗ ಚಲ್ಲುವುದು  ೨. ಗಾವು ಸಿಗಿಯುವುದು  ೩. ಬೇದುಬೇಟೆ  ೪. ಮುತ್ತೈದೆ ಧಾರಣೆ
೫. ಕೋಣವನ್ನು ಬಿಡುವುದು  ೬. ಮದುವಣಗಿತ್ತಿ ಶಾಸ್ತ್ರ  ೭. ಬಾಯಿಬೀಗ  ೮. ಸಿಡಿ.

**ಮಸಿಯಮ್ಮ:**

ಮಸಿಯಮ್ಮ ದೇವತೆಗೆ ನಿರ್ದಿಷ್ಟ ಮೂರ್ತಿಯಿಲ್ಲ. ಅದನ್ನು ಕಲ್ಲುಗಂಡುಗಳಿಂದ ಸಿಂಗರಿಸಿ ಪೂಜಿಸುತ್ತಾರೆ. ಈ ದೇವತೆಯನ್ನು ಚಿತ್ರದುರ್ಗ, ಹಿರಿಯೂರು, ತುಮಕೂರು, ಕೋಲಾರ, ಬಾಗೇಪಲ್ಲಿ ಇನ್ನೂ ಮುಂತಾದೆಡೆಗಳಲ್ಲಿ ಕಾಣಬಹುದಾಗಿದೆ. ಕೆಲವೆಡೆ ಗುಡಿ ಇರುತ್ತದೆ ಮತ್ತು ಕೆಲವೆಡೆ ಮರದ ಕೆಳಗೆ ಇರುವ ಗುಂಡುಕಲ್ಲೇ ಮಸಿಯಮ್ಮನೆಂದು ಪೂಜಿಸುತ್ತಾರೆ. ಗುಡಿ ಇರುವ ಕಡೆ ಗುಡಿಗೆ ಕಳಸವಿರುತ್ತದೆ. ಒಳಗಡೆ ಕಟ್ಟೆಯ ಮೇಲೆ ದೇವತೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಅದರ ಪಕ್ಕದಲ್ಲಿ ತ್ರಿಶೂಲ, ಭರ್ಚಿ ಇಟ್ಟಿರುತ್ತಾರೆ. ದೇವತೆಯನ್ನು ಬಣ್ಣದ ಸೀರೆಯಿಂದ ಸಿಂಗರಿಸಿ ಒಡವೆಗಳಿಂದ ಅಲಂಕರಿಸಿರುತ್ತಾರೆ. ಈ ದೇವತೆಯನ್ನು ಕೆಲವೆಡೆ ಉಪ್ಪಾರರು ಪೂಜಿಸಿದರೆ ಮೇಲುಸಕ್ಕರೆಯವರು ಪೂಜಿಸುತ್ತಾರೆ (ಉಪ್ಪಾರರ ಒಳಪಂಗಡ) ಹಿರಿಯರಂತಾರ್ಯಿನ ಹೂವಿನ ಹೊಳೆ ಗ್ರಾಮದಲ್ಲಿ)

ದೇವಿ ಹೇಗೆ ಸುದ್ದಳಾದಳು ಎನ್ನುವುದಕ್ಕೆ ಒಂದು ಕಥೆ ಈ ರೀತಿ ಇದೆ. ಉಪ್ಪಾರರು ಉಪ್ಪು ತಯಾರಿಸಲು ಚೌಳುಮಣ್ಣನ್ನು ತರಲು ಚೌಗುಪ್ರದೇಶಕ್ಕೆ ಹೋಗಿ ಬರುತ್ತಿದ್ದರು. ಒಂದು ದಿನ ದಾರಿಯಲ್ಲಿ ಒಂದು ಬುಟ್ಟಿ ಕಾಣಿಸಿಕೊಂಡಿತು. ಅದನ್ನು ದಾರಿಯ ಪಕ್ಕಕ್ಕೆ ಸರಿಸಿ ತಮ್ಮ ಕೆಲಸಕ್ಕೆ ಹೋಗುತ್ತಿದ್ದರು. ಹೀಗೆ ಅನೇಕ ಬಾರಿ ಅದೆ ಬುಟ್ಟಿಯನ್ನು ತಳ್ಳಿ ತಳ್ಳಿ ಸಿಟ್ಟು ಬಂದು ಉಪ್ಪಾರರು ಆ ಊರಿನ ಗಡಿಯ ಆಚೆ

ತೆಗೆದುಕೊಂಡು ಹೋಗಿ ಎಸೆದು ಬಂದರು. ಆನಂತರ ದಾರಿಯಲ್ಲಿ ಬುಟ್ಟಿ ಕಾಣಿಸಲಿಲ್ಲ. ಊರಿನ ಗಡಿಯಾಚೆಯ ಬಯಲಿನಲ್ಲಿ ಮೇಯುವ ಕೋಣಗಳನ್ನು ಬುಟ್ಟಿಯ ಒಳಗಡೆ ಇರುವ ದೇವತೆ, ದಿನಕ್ಕೊಂದರಂತೆ ಕೊಂದು ತಿನ್ನತೊಡಗಿತು. ಉಪ್ಪಾರರ ಕೋಣಗಳು ಕಾಣೆಯಾಗುತ್ತಿದ್ದುದನ್ನೂ ಕಂಡು ಹೆದರಿ ಕೊನೆಗೆ ಶಾಸ್ತ್ರ ಕೇಳಿಸಲಾಗಿ ಇದು ದೇವತೆಯ ಕಾಟವೆಂದೂ, ಅದನ್ನು ಗುಡಿಕಟ್ಟಿಸಿ ಜಾತ್ರೆ ಮಾಡಬೇಕೆಂದೂ, ಸೂಚನೆ ಇತ್ತರು. ಒಂದು ದಿನ ಆ ಊರಿನ ಉಪ್ಪಾರರ ಯಜಮಾನ ಆ ಬಯಲಿನ ಕಡೆಯಿಂದ ಹಾದು ಬರುವಾಗ ' ನಾ ಬತ್ತೀನಿ' ಎಂದು ಕೂಗಿದಳಂತೆ. ಆಗ ಅವಳನ್ನು ಅಲ್ಲಿಯ ಗುಡಿಕಟ್ಟಿಸಿ ಪ್ರತಿದಿನ ಪೂಜೆ ಆರಂಭಿಸಿದರು. ದೇವಿಯ ವಿಶೇಷ ಪೂಜೆಯು ಮಂಗಳವಾರ ಮತ್ತು ಶುಕ್ರವಾರ ನಡೆಯುತ್ತದೆ. ನಾಮಕರಣದ ದಿನ ಗುಡಿಗೆ ಹೋಗಿ ದೇವಿಯ ತೀರ್ಥ ಪ್ರಸಾದ ತರುತ್ತಾರೆ. ಮದುವೆ ಸಂದರ್ಭದಲ್ಲಿಯೂ ದೇವತೆಗೆ ಮೀಸಲು ಕೊಟ್ಟು ಅವಳಿಂದ ಹರಿನೀರನ್ನು ಹಾಕಿಸಿಕೊಂಡು ಮುಂದೆ ಬರುವ ವಿಘ್ನಗಳನ್ನು ಪರಿಹರಿಸಿಕೊಳ್ಳುತ್ತಾರೆ. ಧಾರೆಗೆ ಮುಂಚೆ ದೇವಿಯ ಸನ್ನಿಧಾನಕ್ಕೆ ಒಂದು ವಿಶೇಷ ಪೂಜೆ ಸಲ್ಲಿಸಿ ಅನಂತರ ಧಾರೆಯನ್ನು ಮುಂದುವರಿಸುತ್ತಾರೆ. ಪ್ರತಿ ಅಮಾವಾಸ್ಯೆಗೊಮ್ಮೆ ಗುಡ್ಡೇಕಲ್ಲಿಗೆ ಬಲಿಕೊಟ್ಟು ಊರಿಗೆ ತೊಂದರೆ ಬರದಿರಲಿ ಎಂದು ಬೇಡಿಕೊಳ್ಳುತ್ತಾರೆ.

ದೀಪಾವಳಿ ಹಬ್ಬದಲ್ಲಿ ದೇವಿಗೆ ದೀಪಾಲಂಕಾರ ಮಾಡಿ ಎಡೆ ಮಾಡುತ್ತಾರೆ. ಪ್ರತಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಕೆಲವೆಡೆ ಮೂರು ವರ್ಷಕ್ಕೊಂದು ಬಾರಿ ಜಾತ್ರೆ ನಡೆಯುತ್ತದೆ. (ಆಷಾಢ ಮಾಸದಲ್ಲಿ) ಜಾತ್ರೆಯಲ್ಲಿ ಬೆಳಗಿನ ಜಾವ ಕೋಣವನ್ನು ಬಲಿಕೊಡುವ ಪದ್ಧತಿ ಇದೆ. ಕೋಣನ ಕಡಿದ ನಂತರ ಅದರ ಬಾಯಿಗೆ ಕಾಲನ್ನು ಅಡ್ಡವಾಗಿ ಸಿಕ್ಕಿಸಿ ತಲೆಯ ಮೇಲೆ ಅದರ ಕರುಳಿನ ಕೊಬ್ಬಿನಿಂದ ತುಂಬಿದ ಹಣತೆ ಇಟ್ಟು ದೀಪವನ್ನು ಉರಿಸುತ್ತಾರೆ. ಈ ವೇಳೆಯಲ್ಲಿ ಜನರು ಹಿಟ್ಟಿನಾರತಿ, ಬೇವಿನ ಸೀರೆ ಸೇವೆ, ಉರುಳುಸೇವೆ, ಇನ್ನೂ ಮುಂತಾದ ಹರಕೆಗಳನ್ನು ಭಕ್ತಿ ಗೌರವಗಳಿಂದ ಹರಕೆ ಸಲ್ಲಿಸುತ್ತಾರೆ. ಇದಾದ ನಂತರ ದೇವಿಗೆ ಕುರಿ, ಮೇಕೆ, ಕೋಳಿಗಳನ್ನು ಬಲಿ ಕೊಟ್ಟು ತಟ್ಟೆಗೆ ಒಳ್ಳೆಯದಾಗಲೆಂದು ದೇವಿಯನ್ನು ಬೇಡಿಕೊಳ್ಳುತ್ತಾರೆ. ಕೆಲವರು ಬಲಿಯ ಮಾಂಸವನ್ನು ಊರಿಗೆ ತರುತ್ತಾರೆ. ಮತ್ತೆ ಕೆಲವರು ಅಲ್ಲಿಯೇ ಎಡೆಮಾಡಿ ಹಂಚಿ ಪ್ರಸಾದ ಸ್ವೀಕರಿಸುತ್ತಾರೆ. ಸಂಜೆ ದೇವಿಯನ್ನು ಊರಿನ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿ ಮೂಲಗುಡಿಯನ್ನು ತುಂಬಿಸಿ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ.

**ನಂಬಿಕೆ**

೧. ಕೆರೆ ಏರಿ ಒಡೆಯದಿರಲಿ ಎಂದು ಬಲಿ ಕೊಡುತ್ತಾರೆ.

೨. ಬಾವಿಯಲ್ಲಿ ನೀರು ಬರದೇ ಇದ್ದಾಗ (ಹರಕೆ) ಹೊತ್ತರೆ ನೀರು ತುಂಬಿಕೊಳ್ಳುತ್ತದೆ.

೩. ಊರಿಗೆ ರೋಗ-ರುಜಿನೆಗಳು ಬರದಿರಲಿ ಎಂದೂ ಹರಕೆ ಹೊರುತ್ತಾರೆ. ಊರಿಗೆ ದೊಡ್ಡ ರೋಗಗಳು ಬಂದಾಗ ದೇವಿಯನ್ನು ಹೊಸೆ ಪೂಜೆಗೆ ಕರೆದೊಯ್ದರೆ ಎಲ್ಲವೂ ಶಾಂತಿಯಾಗುತ್ತದೆ ಎಂದು ನಂಬುತ್ತಾರೆ.

೪. -ಬೇವಿನ ಮರಗಳು ದೇವಿಯ ವಾಸಸ್ಥಾನಗಳೆಂದು ನಂಬುತ್ತಾರೆ.

೫. ಪಾತಪ್ಪ, ಪಾತಲಿಂಗೇಶ ಅಣ್ಣನೆಂದು ನಂಬುತ್ತಾರೆ.

### ಗೌರಸಮುದ್ರದ ಮಾರಮ್ಮ

ಚಿತ್ರದುರ್ಗ ಜಿಲ್ಲೆಯೂ ಚಳ್ಳಕೆರೆ ತಾಲೂಕಿನ ಗೌರಸಮುದ್ರದಲ್ಲಿ ಮಾರಮ್ಮ ನೆಲೆಸಿದ್ದಾಳೆ. ಸುತ್ತಮುತ್ತಲಿನ ಉಪ್ಪಾರರೇ ಅಲ್ಲದೇ ಇತರ ಜನಾಂಗದವರು ಈ ದೇವತೆಗೆ ನಡೆದುಕೊಳ್ಳುತ್ತಾರೆ. ಈ ದೇವತೆಯ ಅರ್ಚಕರು ಉಪ್ಪಾರರು. ದೇವತೆ ಗೌರಸಮುದ್ರದಲ್ಲಿ ನೆಲೆಯಾದ ಬಗ್ಗೆ ಕಥೆ ಈ ರೀತಿ ಇದೆ: ನಿಡುಗಲ್ಲು ರಾಜಮಾರ್ಗದಲ್ಲಿ ಮಾರಮ್ಮ ಸುಂದರವಾದ ಹೆಣ್ಣಿನ ವೇಷ ಧರಿಸಿ ಸಂಚರಿಸುತ್ತಿರುವಾಗ ರಾಜನು ಅವಳನ್ನು ಕಾಮುಕ ದೃಷ್ಟಿಯಿಂದ ಹಿಂಬಾಲಿಸುತ್ತಾನೆ. ಈ ವಿಷಯ ದೇವಿಗೆ ತಿಳಿಯುತ್ತದೆ. ಅವಳು ತನ್ನ ಮಾಯಾಶಕ್ತಿಯಿಂದ ರಾಜನಿಗೆ ಹತ್ತಿರದಲ್ಲಿ ಕಂಡು, ಮತ್ತೊಮ್ಮೆ ದೂರವಾಗಿಯೂ ಕಾಣುತ್ತಾ ರಾಜನನ್ನು ಗೌರಸಮುದ್ರದ ಉಪ್ಪು ತಯಾರಿಸುವ ಮಾಳೆಯ ವರೆಗೂ ಕರೆತರುತ್ತಾಳೆ. ಅಲ್ಲಿಯೇ ಉಪ್ಪು ತಯಾರಿಸುತ್ತಿದ್ದ ಉಪ್ಪಾರರ ಯಜಮಾನನ ಹತ್ತಿರ ತನಗೊದಗಿದ್ದ ಕಷ್ಟವನ್ನು ಹೇಳಿಕೊಂಡು ತನ್ನನ್ನು ಕಷ್ಟದಿಂದ ಪಾರು ಮಾಡಬೇಕೆಂದು ಕೇಳಿಕೊಳ್ಳುತ್ತಾಳೆ. ಅದರಂತೆ, ಯಜಮಾನನು ಉಪ್ಪನ್ನು ತುಂಬಲು ಮಾಡಿರುವ ಕುಣಿಯೊಳಗೆ (ಗುಂಡಿಯೊಳಗೆ) ಅವಳನ್ನು ಕೂರುವಂತೆ ಹೇಳಿ ಅದರ ಮೇಲೆ ಕಡ್ಡಿ ಸಲಾಕೆಗಳಿಂದ ಜೋಡಿಸಿ ಪುಟ್ಟಿಗಳನ್ನಿಟ್ಟು ಗೋಣೀ ಚೀಲದಿಂದ ಮುಚ್ಚುತ್ತಾನೆ. ಇಷ್ಟೊತ್ತಿಗಾಗಲೇ ರಾಜನು ಅವಳನ್ನು ಹುಡುಕುತ್ತ ಯಜಮಾನನ ಬಳಿ ಬಂದು, 'ಇಲ್ಲೊಬ್ಬಳು ಸ್ತ್ರೀ ಬಂದಳೇ' ಎಂದು ಕೇಳುತ್ತಾನೆ. ಅವನು 'ನನಗೆ ಗೊತ್ತಿಲ್ಲ' ಎಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತಾನೆ. ರಾಜ ಅಲ್ಲಿಂದ ಮುಂದೆ ಹೋಗುತ್ತಾನೆ, ಅನಂತರ ಯಜಮಾನ ಮುಚ್ಚಿಕೆಗಳೆಲ್ಲವನ್ನೂ ತೆಗೆದು ಗುಂಡಿಯನ್ನು ಪರೀಕ್ಷಿಸಲಾಗಿ, ಅಲ್ಲಿ ಹೆಣ್ಣು ಮಾಯವಾಗಿ ಆ ಸ್ಥಳದಲ್ಲಿ ಅಮೂಲ್ಯವಾದ ಸಾಲಿಗ್ರಾಮ, ಗಾರೆಕಲ್ಲು, ಉಪ್ಪು ತಯಾರಿಸುವ ಸಾಮಾನುಗಳು ಇರುವುದನ್ನು ನೋಡಿ ಅವುಗಳನ್ನು ಜೋಪಾನವಾಗಿ ಬಟ್ಟೆಯಲ್ಲಿ ಕಟ್ಟಿ ಮನೆ ತರುತ್ತಾನೆ. ಆ ರಾತ್ರಿ ಹಸುಗೂಸಿನ ಮೇಲೆ ಮಾರಿ ಬಂದು ತಾನು ಅಡಗಿ ಕುಳಿತಲ್ಲಿ ಗುಡಿಕಟ್ಟಿಸಿ, ನೀವೇ ಪೂಜೆ ಮಾಡಿ ಮತ್ತು ಮಧ್ಯಾಹ್ನವೇ ನನ್ನ ದರ್ಶನ ನಿಮಗಾಗಿದ್ದರಿಂದ, ಆ ವೇಳೆಯಲ್ಲಿಯೇ ಪ್ರತೀವರ್ಷ ಜಾತ್ರೆ ನಡೆಸಿರಿ ಹೀಗೆ ಮಾಡುವುದರಿಂದ ನಿಮ್ಮ ವಂಶವನ್ನು ಮತ್ತು ಕುಲವನ್ನು ಉದ್ಧರಿಸುತ್ತೇನೆ ಎಂದು ಹೇಳುತ್ತಾಳೆ.

ಗುಡಿಯೊಳಗಿರುವ ಹುತ್ತವನ್ನೇ ದೇವಿಯೆಂದು ಪೂಜಿಸುತ್ತಾರೆ. ಯಾವುದೇ ಮೂರ್ತಿಗಳು ಇಲ್ಲಿಲ್ಲ. ಅವಳು

ಉಪ್ಪು ತುಂಬುವ ಗುಂಡಿಯಲ್ಲಿ ಮಾಯವಾದ್ದರಿಂದಲ್ಲೇ ಅಲ್ಲಿ ಹುತ್ತ ಬೆಳೆದಿದೆ ಎಂದು ನಂಬುತ್ತಾರೆ. ಆ ಪ್ರದೇಶವನ್ನು 'ತುಂಬಲು' ಎಂದು ಕರೆಯುತ್ತಾರೆ. ಆ ತುಂಬಲು ಪ್ರದೇಶದಲ್ಲಿ ಸಿಕ್ಕಿ ದೇವಿಯ ಅಮೂಲ್ಯ ವಸ್ತುಗಳನ್ನು ಬೆತ್ತದ ಬುಟ್ಟಿಯಲ್ಲಿ ಇರಿಸಿ ಎಲ್ಲ ಹಬ್ಬಗಳಲ್ಲೂ ಪೂಜಿಸುತ್ತಾರೆ. ಮಹಾನವಮಿ ಮತ್ತು ಗುಗ್ಗರಿ ಹಬ್ಬಗಳಲ್ಲಿ ಪುಟ್ಟಿಯಲ್ಲಿರುವ ಸಾಮಾನುಗಳನ್ನು ಪೂಜಾರರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತೊಳೆದು ಸ್ವಚ್ಛಗೊಳಿಸುತ್ತಾರೆ. ಹಾಗೆ ಮಾಡದೇ ಇದ್ದರೆ ಅವರು ಕಣ್ಣುಗಳನ್ನು ಕಳೆದುಕೊಳ್ಳುತ್ತಾರೆಂಬ ನಂಬಿಕೆಯಿದೆ. ಈಗಲೂ ಈ ಆಚರಣೆ ನಡೆಯುತ್ತದೆ. ಉದ್ಧಟತನದಿಂದ ಅನೇಕ ಜನ ಕಣ್ಣು ಕಳೆದು ಕೊಂಡಿದ್ದಾರೆ ಎನ್ನುವುದಕ್ಕೆ ಅನೇಕ ಕಥೆಗಳಿವೆ.

**ಜಾತ್ರೆ;** ದೇವಿಯ ಜಾತ್ರೆಯು ಪ್ರತೀವರ್ಷ ಶ್ರಾವಣ ಮಾಸದ ಕೊನೆಯ ಗೌರೀ ಹುಣ್ಣಿಮೆಯ ದಿವಸ ಮಧ್ಯಾಹ್ನ ಜಾತ್ರೆ ನಡೆಯುತ್ತದೆ. ಈ ಜಾತ್ರೆಯು ಸಾಂಪ್ರದಾಯಿಕವಾಗಿ ನಡೆಯುತ್ತದೆ. ಸುತ್ತ ಮುತ್ತಲಿನ ಹಳ್ಳಿಯ ಜನರು ಭಕ್ತಿಯಿಂದ ಅವರ ಊರಿಗಳಲ್ಲಿಯೇ ಹರಕೆಯನ್ನೊಪ್ಪಿಸುತ್ತಾರೆ. ಮನೆಗೊಬ್ಬರಾದರೂ ಗೌರಸಮುದ್ರದ ಜಾತ್ರೆಗೆ ಬಂದೇತೀರುತ್ತಾರೆ. ಕರ್ನಾಟಕದ ಜನತೆಯಲ್ಲಿ ಆಂದ್ರದ ಭಕ್ತಾದಿಗಳು ಈ ಜಾತ್ರೆಗೆ ಬರುತ್ತಾರೆ. ಈ ಜಾತ್ರೆಗೆ ಬಂದ ಭಕ್ತಾದಿಗಳು ತಮ್ಮ ಹರಕೆಯನ್ನು ಸಲ್ಲಿಸಿ ಅದೇ ದಿನ ಹೊರಟು ಹೋಗುತ್ತಾರೆ. ಯಾವುದೇ ಕಾರಣಕ್ಕೂ ಜಾತ್ರೆ ನಡೆದ ಪ್ರದೇಶದಲ್ಲಿ ತಂಗುವುದಿಲ್ಲ. ರಾತ್ರಿಯ ವೇಳೆ ದೇವಿಯು ದುರ್ಗಿಯ ಅವತಾರವನ್ನು ತಾಳಿ ತನ್ನ ಅಧಿದೇವತೆಗಳೊಂದಿಗೆ ಲೀಲಾಮಾತ್ರಳಾಗಿ ನಿಜರೂಪದಿಂದ ವಿಹರಿಸುತ್ತಾಳೆ ಎಂದು ಜನ ನಂಬುತ್ತಾರೆ. ಇದನ್ನು ಮೀರಿದ ಬಳೆಗಾರ ಮತ್ತು ಅನೇಕರು ಸತ್ತು ಹೋಗಿರುವ ಕಥೆಗಳನ್ನು ಹೇಳುತ್ತಾರೆ.

**ಘಟಪೂಜೆ:** ಹೊಸ ಗಡಿಗೆಯೊಂದರಲ್ಲಿ ಹಾಲನ್ನು ತುಂಬಿ ಮಾರಿಗುಡಿಯ ಎದುರು ಪೂಜೆಯನ್ನು ಮಾಡುತ್ತಾರೆ. ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಂಡದ ಗಡಿಗೆಯನ್ನು ಪೂಜಿಸುವ ಪದ್ಧತಿ ಉಂಟು ಇದಕ್ಕೆ ಘಟ ಎಂದು ಕರೆಯುತ್ತಾರೆ.

**ಗಂಗೆ ಪೂಜೆ:** ಗುಡಿಯಿಂದ ಉತ್ಸವ ಮೂರ್ತಿಯನ್ನು ಮೆರವಣಿಗೆಯ ಮೂಲಕ ಊರಿನ ಪ್ರಮುಖ ಬೀದಿಯ ಸಮೀಪದ ಹಳ್ಳ ಅಥವಾ ನದಿಗೆ ತೆಗೆದುಕೊಂಡು ಹೋಗುತ್ತಾರೆ. ತಾವು ತಂದ ಪೂಜೆ ಸಾಮಾನುಗಳನ್ನು ಮರಳಿನ ಮೇಲೆ ಹಾಸಿದ ಕರಿ ಕಂಬಳಿಯ ಮೇಲೆ ಇಡುತ್ತಾರೆ. ಮೂರ್ತಿಯ ಎದುರು ಬಂದು ಹೊಂಡ ತೆಗೆಯುತ್ತಾರೆ. ಇದರಲ್ಲಿ ಬಂದ ನೀರಿನಿಂದ ಸಾಲಿಗ್ರಾಮವನ್ನು ಪೂಜಾರಿ ಕಂಬಳಿಯನ್ನು ಹೊದ್ದುಕೊಂಡು ಕಣ್ಣು ಕಟ್ಟಿಕೊಂಡು ತೊಳೆಯುತ್ತಾನೆ. ಈ ವೇಳೆಯಲ್ಲಿ ಯಜಮಾನನು ಕಾಣಿಕೆ ಹಣ ಇಡುತ್ತಾನೆ. ಇದನ್ನು ಸತ್ಯವ್ರತ ಎಂದು ಕರೆಯುತ್ತಾರೆ.

**ಮಣೇವು**: ಗಂಗೆಯ ಪೂಜೆಯ ಅನಂತರ ಮಣೇವು ಎಂಬ ಆಚರಣೆ ನಡೆಯುತ್ತದೆ. ಇದನ್ನು ಉಪ್ಪಾರರೇ ಅಲ್ಲದೆ ನಾಯಕರು, ಗೊರವರು, ಗೊಲ್ಲರು ಮತ್ತು ವೆಂಕಟರಮಣನ ಭಕ್ತರು ಮಾಡುತ್ತಾರೆ. ಕೆಲವು ಜನ ಸಮುದಾಯದಲ್ಲಿ ಇದನ್ನು ಇದೇ ರಾತ್ರಿ ಈ ಆಚರಣೆ ನಡೆಯುತ್ತದೆ. ಇನ್ನೂ ಕೆಲವು ಕಡೆ ಹಗಲಿನಲ್ಲಿ ನಡೆಯುತ್ತದೆ. ಗೊರವ ಮತ್ತು ಗೊಲ್ಲರಲ್ಲಿ ಯಾತ್ರೆಗೆ ಹೋಗುವ ಮುನ್ನ ಆಚರಿಸುತ್ತಾರೆ. ಅಗಸನು ಮಡಿ ಮಾಡಿದ ಬಟ್ಟೆ ಅಥವ ಕರಿಯ ಕಂಬಳಿಯೊಂದನ್ನು ಹಾಸಿರುತ್ತಾನೆ. ದರ್ಶನಕ್ಕೆ ಹೋಗುವ ಮುನ್ನ ಇದನ್ನು ಹಣ್ಣಿನ ರಸಾಯನವನ್ನು ಕಂಬಳಿಯ ಮೇಲೆ ಐದು ಗುಪ್ಪೆಗಳನ್ನಾಗಿ ವಿಂಗಡಿಸಿಡುತ್ತಾರೆ. ಇದರ ಸುತ್ತ ದಾಸಯ್ಯಗಳು ಕುಣಿಯುತ್ತಾರೆ. ಇವರ ಜೊತೆಗೆ ದೇವರ ದರ್ಶನಕ್ಕೆ ಹೋಗುವವರು ಕುಣಿಯುತ್ತಿರುತ್ತಾರೆ. ಇದನ್ನೇ 'ಮಣೇವು' ಎನ್ನುತ್ತಾರೆ. ಹೀಗೆ ಕುಣಿಯುವಾಗ ಮಣೇವನ್ನೇ ತಿನ್ನುವ ಹಾಗೆ ಮಾಡುವ ಹಾಗೂ ನೋಡುವ ರೀತಿ ನಡಿಸಿ ನಂತರ ಅದನ್ನು ಬಾಯಿಯಿಂದ ನಾಯಿಗಳು ತಿನ್ನುವ ಹಾಗೆ ತಿನ್ನುತ್ತಾರೆ. ದೇವರ ದರ್ಶನಕ್ಕೆ ಹೋಗುವವನ್ನು ತಿನ್ನುವುದಿಲ್ಲ. ನಗಾರಿ, ತಾಳ, ತಮಟೆಯ ಗತ್ತಿಗೆ ಹೆಜ್ಜೆ ಹಾಕುವ ಕುಣಿಯುತ್ತಿರುತ್ತಾರೆ. ಇನ್ನೊಂದು ಕಡೆ ಅಗಸನು ಹಾಸಿದ ಬಟ್ಟೆಯ ಮೇಲೆ ಬೆಲ್ಲ ಕೊಬ್ಬರಿಗಳನ್ನು ಇಟ್ಟ ಕೆಲವರು ಅದರ ಸುತ್ತಲೂ ಕುಣಿಯುತ್ತಿರುತ್ತಾರೆ. ದಾಸಯ್ಯ ಶಂಖ ಜಾಗಟೆ ಬಡಿಯುತ್ತಾನೆ. ಇವನು ಗೋವಿಂದನ ನಾಮಸ್ಮರಣೆಯನ್ನು ಮಾಡುತ್ತಿರುತ್ತಾನೆ.

**ವಾಸೆ ಕೊಯ್ಯೋದು**: ಬೆಳಗಿನ ಜಾವ ಹೊಳೆಯ ಪಕ್ಕದಲ್ಲಿ ದೇವಿಯ ಎದುರು ಕಪ್ಪು ಬಣ್ಣದ ಹೋತವನ್ನು ಬಲಿ ಕೊಡುವ ಪದ್ಧತಿಗೆ 'ವಾಸೆ' ಎಂದು ಕರೆಯುತ್ತಾರೆ. ಈ ಬಲಿಯ ಹೋತವನ್ನು ಪೋತರಾಜ ಎಂದು ಕರೆಯುತ್ತಾರೆ. ವಾಸೆ ಕೊಯ್ಯುವ ಹಕ್ಕನ್ನು ಪಡೆದ ಮನೆಯ ಹಿರಿಯ ಸಹೋದರನು ಹೋತವನ್ನು ಅಂಗಾತ ಮಲಗಿಸಿ ಕುಂಕುಮ ಹಚ್ಚಿ ಪೂಜೆ ಮಾಡಿ ಹರಿತವಾದ ಕತ್ತಿಯಿಂದ ಒಂದೇ ಏಟಿಗೆ ಕೊಯುತ್ತಾನೆ. ಇದರ ಮಾಂಸವನ್ನು ಅವನು ಅವನ ಸಹೋದರ ಜೊತೆಗೊಂಡು ತಿಂದು ಅದರ ಮೂಳೆ ಮತ್ತು ಚರ್ಮವನ್ನು ಮಣ್ಣಿನಲ್ಲಿ ಹೋತು ಹಾಕಿ ಬಿಡುತ್ತಾರೆ. ಈ ಮಾಂಸವನ್ನು ಬೇರೆ ಯಾರು ಸೇವಿಸಬಾರದು ಎಂಬ ನಂಬಿಕೆ ಇವರಲ್ಲಿದೆ. " ಮಾಂಸದ ಅಡಿಗೆಯನ್ನು ಅಣ್ಣ ತಮ್ಮಂದಿರುಗಳೇ ಉಪಯೋಗಿಸತಕ್ಕದು. ಬೇರೆ ಯಾರೂ ಅದನ್ನು ಉಪಯೋಗಿಸುವಂತಿಲ್ಲ. ಈ ಮಾಂಸದ ತುಂಡನ್ನು ಅತ್ಯಂತ ಗೌರವದಿಂದ ಉಪಯೋಗಿಸುತ್ತದೆ. (ಕರಿಶೆಟ್ಟಿ ರುದ್ರಪ್ಪ 1995:91). ಈ ಜಾತ್ರೆಯ ಬೇರೆ ಬೇರೆ ಜಾತಿಯ ಜನರು ಸೇರಿಕೊಳ್ಳುತ್ತಾರೆ. ಪ್ರತಿ ವರ್ಷ ನಡೆಯುವ ಈ ಜಾತ್ರೆಯಲ್ಲಿ ಒತ್ತಲ ಬಸವಂತುಲು ಎಂಬ ಒಂದು ಆಚರಣೆ ನಡೆಯುತ್ತದೆ. ಇದನ್ನು ಮ್ಯಾಸನಾಯಕ ಜನರಲ್ಲಿ ನಡೆಯುತ್ತದೆ. ಒಂದು ಗುಂಪಿನ ಜನ ಇನ್ನೊಂದು ಗುಂಪಿನವರ ಮೇಲೆ ಕುಂಕುಮ ಭಂಡಾರ ಎರಚಿಕೊಳ್ಳುತ್ತಾ ಕುಣಿಯುತ್ತಿರುತ್ತಾರೆ.

ಗೌರ ಸಂದ್ರದ ದೇವಿ ಪೂಜಾರಿಯ ಹೆಂಡತಿಯಾದ ಕೆಂಚಮ್ಮನ ಭಕ್ತಿಗೆ ಮೆಚ್ಚಿ ಕೆಲವು ದಿನಗಳ ವರೆಗೂ ಇವಳೊಂದಿಗೆ ಇದ್ದಳೆಂದು ಜನ ಹೇಳುತ್ತಾರೆ. ಈಗಲೂ ಕೆಂಚಮ್ಮ ಗದ್ದುಗೆಗೆ ಜಾತ್ರೆಯ ದಿನದಂದು ದೇವಿ ಭೇಟಿ ನೀಡುತ್ತಾಳೆ. ಈ ದೇವತೆಯು ಪರ್ವತ ರಾಜನ ಮಗಳಾದ ಪಾರ್ವತೀದೇವಿ. ಚೋಳದ ವಂಶದಲ್ಲಿ ಜನಿಸಿದ ಮದುರೆಯ ಮೀನಾಕ್ಷಿಯಾಗಿಯೂ ಅಂತರಘಟ್ಟೆಯ ಅಂತರ ಘಟ್ಟಮ್ಮನಾಗಿ, ಸವದತ್ತಿಯ ರೇಣುಕಾದೇವಿಯಾಗಿ, ಅವತರಿಸಿ ಗೌರಸಮುದ್ರದಲ್ಲಿ ಮಾರಮ್ಮಳಾಗಿದ್ದಾಳೆ. ಈ ಕಾರಣದಿಂದಲೇ ಅನೇಕ ಗ್ರಾಮದೇವತೆಗಳಿಗೆ ಉಪ್ಪಾರರೇ ಪೂಜಾರರಾಗಿರುವುದು ಎಂದು ಉಪ್ಪಾರ ಪೂಜಾರಿಗಳು ಈಗಲೂ ಹೇಳಿಕೊಳ್ಳುತ್ತಾರೆ.

**ತಿಪ್ಪೇರುದ್ರಸ್ವಾಮಿ:**

ನಾಯಕನ ಹಟ್ಟಿ ತಿಪ್ಪೇರುದ್ರಸ್ವಾಮಿ ಚಿತ್ರದುರ್ಗಜಿಲ್ಲೆಯ ಚಳ್ಳಕೆರೆ ತಾಲೂಕಿನ ನಾಯಕನ ಹಟ್ಟಿ ಗ್ರಾಮದಲ್ಲಿರುವ ಒಂದು ಪುಣ್ಯಕ್ಷೇತ್ರ, ಈ ದೇವತೆಯ ಪೂಜಾರರು ಬೇಡ ಜನಾಂಗದವರು. ತಿಪ್ಪೇಸ್ವಾಮಿ ಸುಮಾರು ಇನ್ನೂರ ಐವತ್ತು ವರ್ಷಗಳ ಹಿಂದೆ ಇಲ್ಲಿಗೆ ಬಂದನೆಂದು ಹೇಳುತ್ತಾರೆ. ಹೀಗೆ ಬಂದ ಸ್ವಾಮಿ ಅನೇಕ ಪವಾಡಗಳಿಂದ ಭಕ್ತರನ್ನು ಪಡೆಯುತ್ತಾನೆ. ತನ್ನ ಭಕ್ತರಿಂದ ಫಣಿಯಪ್ಪ ಆತನ ಮಡದಿ ಮಾಳಮ್ಮ ಇಬ್ಬರಿಗೂ ಗೃಹಸ್ಥ ನೀತಿಗಳನ್ನು ಬೋಧಿಸುತ್ತಾನೆ. ಚಿಕ್ಕಮಗು ಒಳ್ಳೆಯದನ್ನು ಹೇಳಿದರೂ ಅದನ್ನು ದೇವವಾಣಿಯೆಂದು ಗೌರವಿಸಿ, ಆಳುವವರನ್ನು ಅತಿಥಿಗಳನ್ನು ಗುರು ಹಿರಿಯರನ್ನು ಗೌರವದಿಂದ ಕಾಣಬೇಕು ತಮ್ಮ ಬದುಕು ಕ್ಷಣಿಕವೆಂದು ತಿಳಿಯಬೇಕು ಮುಂತಾಗಿ ಹೇಳುತ್ತಾನೆ.

ಮಾಳಮ್ಮನ ದುರಾಸೆಯ ಫಲದಿಂದ ಕಡಿಮೆಯಾದ ಧಾನ್ಯಗಳು ತಿಪ್ಪೇಸ್ವಾಮಿಯು ಹೆಚ್ಚಿಸುತ್ತಾನೆ. ಫಣಿಯಪ್ಪನ ಕೃಷಿ ಕೆಲಸದಲ್ಲಿ ನೆಂಟಾಗುತ್ತಾನೆ. ಫಣಿಯಪ್ಪ ಕಪಿಲೆಯ ಚಾ ಹರಿದಿದ್ದನ್ನು ಸರಿಪಡಿಸಿಕೊಂಡು ಬರಲು ಚಮ್ಮಾರ ಮನೆಗೆ ಹೋದಾಗ ಅಲ್ಲಿ ತಿಪ್ಪೇಸ್ವಾಮಿ ಊಟ ಮಾಡುತ್ತಿರುತ್ತಾನೆ. ಇದರಿಂದ ಬೇಸರಗೊಂಡ ಫಣಿಯಪ್ಪ ಹೆಂಡತಿಯ ಬಳಿ ಹೇಳಬೇಕೆನ್ನುವಷ್ಟರಲ್ಲಿ ತಿಪ್ಪೇಸ್ವಾಮಿ ಊಟ ಮಾಡುತ್ತಿರುವುದು ಕಾಣುತ್ತದೆ. ತನ್ನ ತಪ್ಪಿಗೆ ತಾನೆ ಕ್ಷಮೆ ಯಾಚಿಸಿ ದೊಡ್ಡವರ ಬಗೆಗೆ ಹೀಗೆಲ್ಲ ಹೀನವಾಗಿ ತಿಳಿದುಕೊಳ್ಳಬಾರದೆಂದು ಅಂದುಕೊಳ್ಳುತ್ತಾನೆ.

ಒಮ್ಮೆ ಮಾಳಮ್ಮ ಬಡಿಸುತ್ತಿದ್ದಾಗ ಸ್ವಾಮಿಯು ಹಾಲು ಬೇಕೆಂದು ಕೇಳಿದಾಗ, ಹಾಲು ಕರೆದಿಲ್ಲ ಎಮ್ಮೆ ಸಾಯುವ ಸ್ಥಿತಿಯಿದೆ ಎಂದಾಗ ತಕ್ಷಣ ಎಮ್ಮೆ ಒದ್ದಾಡಿ ಸಾಯುತ್ತದೆ. ತನ್ನ ಮಾತಿನಿಂದಲೇ ಎಮ್ಮೆ ಸಾಯಲು ಕಾರಣವಾಯಿತೆಂದು ತನ್ನ ಉದ್ಧಟತನ ಬೇಸರ ಪಟ್ಟುಕೊಂಡು ಸ್ವಾಮಿಯನ್ನು ಬೇಡಿಕೊಳ್ಳಲಾಗಿ ಎಮ್ಮೆ ಬದುಕುತ್ತದೆ.

ಹಟ್ಟಿ ಮಲ್ಲಪ್ಪ ನಾಯಕನ ಬೇಡಿದಂತೆ ತಿಪ್ಪೇಸ್ವಾಮಿಯು ಹಿರೇಕೆರೆ, ಚಿಕ್ಕಕೆರೆ, ರಾಯನಕೆರೆ, ಭೀಮನಕೆರೆ, ಹೊಸಕೆರೆ, ನೇರಲಕೆರೆ ಮತ್ತು ಕರಿಕೆರೆಗಳನ್ನು, ಗೌರಿಪುರ, ಮಹಾದೇವ ಪುರ, ಕಾಶೀಪುರ, ಖುದಾಪುರ, ಗಿಡ್ಡಪುರ ಮತ್ತು ಗಂಗ್ಲಾಪುರ ಗ್ರಾಮಗಳನ್ನು ನಿರ್ಮಿಸುತ್ತಾನೆ. ಈ ಕಾರ್ಯಗಳೆಲ್ಲ ಮಾಡಿದ ಜನರಿಗೆ ಮರಳಿನ ರಾಶಿಯಲ್ಲಿ ಹಣ ದೊರಕುವಂತೆ ಪವಾಡ ಮಾಡುತ್ತಾನೆ. ಹೀಗೆ ಜನಹಿತ ಕಾರ್ಯಗಳನ್ನು ಮಾಡುತ್ತಾ ಕೈಯಲ್ಲೊಂದು ಡೊಂಕುಕೋಲು, ಹೆಗಲ ಮೇಲೆ ತೆಂಗಿನ ಪರಟೆಗಳು, ಹರಿದಕಂಬಳಿ ಹೊದ್ದು ತಿರುಗುತ್ತಾ, ಸಿಕ್ಕ ಬಾಲಕರ ಗುಂಪಿನಲ್ಲಿ ಕುಣಿಯುತ್ತಿದ್ದ , ಕೆಲವೊಮ್ಮೆ ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುತ್ತಿದ್ದ. ಹೀಗೆ ಕಾಲ ಕಳೆಯುತ್ತಿದ್ದನೆಂದು ಜನರು ಹೇಳುತ್ತಾರೆ. ಕಾಲಾನಂತರದಲ್ಲಿ ಹನುಮನ ಹಟ್ಟಿ ಬಳಿಯಿರುವ ಏಕಾಂತ ಮಠದಲ್ಲಿ ತಪೋನಿರತನಾಗುತ್ತಾನೆ.

ಪವಾಡ ಮತ್ತು ಕೆಲಸಗಳಿಗೆ ಮಾರು ಹೋದ ಪಾಳೆಯಗಾರನು ತನ್ನ ಛತ್ರ, ಚಾಮರ ಮುಂತಾದ ಎಪ್ಪತ್ತೇಳು ಬಿರುದಾವಳಿಗಳನ್ನು ತಿಪ್ಪೇಸ್ವಾಮಿಗೆ ಅರ್ಪಿಸಿ ತಾನು ಮರಣ ಹೊಂದುತ್ತಾನೆ. ಕೆಲಕಾಲದ ನಂತರ ಫಣಿಯಪ್ಪನಿಗೆ ಒಂದು ಲಿಂಗವನ್ನು ಪೂಜಿಸುವಂತೆ ಹೇಳುತ್ತಾನೆ. ಅಂದಿನಿಂದ 'ಮಹಾಂತೇಶ್ವರ' ಎಂದು ಹೆಸರಿಡುತ್ತಾನೆ. ಮುಂದುವರಿದ ತಿಪ್ಪೇಸ್ವಾಮಿ ಮಾರಿಗುಡಿಗೆ ಬಂದು ತನ್ನ ಚಿತ್ತಜೋಳಿಗೆಯನ್ನಿಡಲು ಸ್ಥಳ ಕೇಳುತ್ತಾನೆ. ಇದರಿಂದ ಮಾರಿಗುಡಿಯನ್ನು ಬಿಟ್ಟು ತನ್ನ ನೆನಪಿಗಾಗಿ 'ಸಿಡಿ' ಆಡಬೇಕೆಂದು ಆಜ್ಞಾಪಿಸಿ ಹೋಗುತ್ತಾಳೆ. ಅಂದಿನಿಂದ ತಿಪ್ಪೇರುದ್ರನ ಗುಡಿಯಾಗಿ ಬದಲಾವಣೆಯಾಗುತ್ತದೆ. ಪಣಿಯಪ್ಪನಿಂದ ಚಿಕ್ಕಕೆರೆಯ ಹಿಂಭಾಗದ ದಟ್ಟವಾದ ಕಾಡಿನಲ್ಲಿ ಸಮಾಧಿ ಮಾಡಿಸಿಕೊಂಡು, ಅಲ್ಲಿ ಐಕ್ಯವಾಗುತ್ತಾನೆ. ಐಕ್ಯವಾಗುವ ಮುನ್ನ ಪಣಿಯಪ್ಪನಿಗೆ ನಿತ್ಯ ಪೂಜೆ ಮಾಡು ಎಂದು ಹೇಳಿರುತ್ತಾನೆ. ಆದರೆ ಕಾರಣಾಂತರಗಳಿಂದ ಪೂಜೆಯಲ್ಲಿ ವ್ಯತ್ಯಯವಾಗುತ್ತದೆ. ಇದೇ ಸಂದರ್ಭದಲ್ಲಿ ಬೇಡರ ಹುಡುಗನೊಬ್ಬ ಪೂಜಿಸುತ್ತಿರುತ್ತಾನೆ. ಇದಕ್ಕೆ ಮೆಚ್ಚಿದ ತಿಪ್ಪೇಸ್ವಾಮಿ ಇಂದಿನಿಂದ ನೀನೇ ಪೂಜಾಯನ್ನು ಮಾಡು ಎಂದು ಹೇಳಿ ಮಾಯವಾಗುತ್ತಾನೆ. ಇಲ್ಲಿ 'ಹೊರಮಠ' ದೇವಸ್ಥಾನವಿದೆ.

**ಜಾತ್ರೆ:** ವರ್ಷಕ್ಕೆ ಒಂದು ಬಾರಿ ನಡೆಯುವ ಜಾತ್ರೆಯು ಪಾಲ್ಗುಣ ಮಾಸದ ಚಿತ್ತಾನಕ್ಷತ್ರದಲ್ಲಿ ಜರಗುತ್ತದೆ. ಜಾತ್ರೆಗೆ ಐದು ದಿನ ಮುಂಚಿತವಾಗಿ ರಥಕ್ಕೆ ಕಳಸವಿಡುತ್ತಾರೆ. ರಥವು ಗುಡಿಯಿಂದ ಸುಮಾರು ಒಂದು ಕಿ.ಮಿ. ದೂರದಲ್ಲಿದೆ. ಗುಡಿಯಿಂದ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇರಿಸಿ ಡೊಳ್ಳು, ನಗಾರಿ, ಕರಡಿ ವಾದ್ಯ ಓಲಗ ತ್ರಿ ಚಾಮರಗಳಿಂದೊಡಗೂಡಿದ ಸಕಲ ವೈಭವಗಳೊಂದಿಗೆ ಬರುತ್ತಾರೆ.

ಊರಿನ ಗೊಂಚಗೇರರ ಮನೆಯಿಂದ ಅನ್ನ ಮತ್ತು ಜೋಗೇರ ಹಬ್ಬಯ ಗೊಲ್ಲರ ಮನೆಯಿಂದ ಮೊಸರು ಬಂದ ಮೇಲೆ ರಥ ಚಕ್ರಗಳಿಗೆ ಅರ್ಪಿಸಿಸುತ್ತಾರೆ. ಇದನ್ನು ತಳವಾರ, ಹೊಲೆಯರು, ಮಡಿವಾಳರು,

ಬಡಿಗೇರರು ತೆಗೆದುಕೊಳ್ಳುತ್ತಾರೆ. ಎದುರಿಗಿರುವ ಆಂಜನೇಯನಿಗೂ ಎಡೆಯನ್ನು ಸಲ್ಲಿಸುತ್ತಾರೆ. ರಥದ ಕೆಳಗಿನ ಮಠದ ಭಾಗ ಸುಮಾರು ಹದಿನೆಂಟು ಅಡಿ ಎತ್ತರವಿದ್ದು ಇದರ ಮೇಲೆ ಅರುವತ್ತೈದು ಅಡಿ ಎತ್ತರದ ವರೆಗೆ ಮೇಲ್ಭಾವನ್ನು ಕಟ್ಟಿ ಮಾಡಿರುತ್ತಾರೆ. ಇದು ಒಟ್ಟು ಒಂಭತ್ತು ಅಂತಸ್ತುಗಳಿಂದ ಕೂಡಿದೆ. ರಥದ ಮೇಲ್ಭಾಗದಲ್ಲಿ ಕಳಸವಿರುತ್ತದೆ. ಎರಡನೇ ಅಂತಸ್ತಿನಲ್ಲಿ ಲೋಹದಿಂದ ಮಾಡಿದ ಅಷ್ಟ ದಿಕ್ಪಾಲಕರ ಮೂರ್ತಿಗಳಿವೆ. ಉಳಿದಂತೆ ಎಲ್ಲಾ ಅಂತಸ್ತುಗಳಲ್ಲಿ ಬಣ್ಣ ಬಣ್ಣದ ಬಾವುಟಗಳಿಂದ ಸಿಂಗರಿಸಿರುತ್ತಾರೆ. ತೇರಿನ ಒಳಗೆ ತಿಪ್ಪೇಸ್ವಾಮಿಯ ಉತ್ಸವಮೂರ್ತಿಯನ್ನು ಕೂರಿಸಿದ ಅನಂತರ ಮುಂಭಾಗದಲ್ಲಿರುವ ಆಂಜನೇಯನಿಗೆ ಹೀಗೆ ಹೇಳುತ್ತಾರೆ. "ರಥ ಹೊರಟು ನಿಂತಿದೆ ನಡೆಸಿಕೊಡು ಮಹಾಸ್ವಾಮಿ" ನಂತರ ಮೆರವಣಿಗೆ ಮೂಲಕ ರಥ ಮುಂದೆ ಹರಿಯುತ್ತದೆ. ಸುಮಾರು ಇಪ್ಪತ್ತು ಅಡಿ ಎತ್ತರದ ಪಂಜನ್ನು ಉರಿಸುವುದು ಇಲ್ಲಿಯ ವಿಶೇಷ. ಈ ಬೆಳಕಿನಲ್ಲಿ ಉತ್ಸವಮೂರ್ತಿ ಝುಗಝುಗಿಸುತ್ತದೆ.

**ಓಕಳಿ**: ರಥತೋತ್ಸವದ ಮಾರನೆಯದಿನ ಸಂಜೆ ಈ ಆಚರಣೆ ನಡೆಯುತ್ತದೆ. ಮಣ್ಣಿನ ಗಡಿಗೆಗಳಲ್ಲಿ ಓಕಳಿ ನೀರನ್ನು ತುಂಬಿಸಿ ದೇವಸ್ಥಾನದ ಮುಂದೆ ಇಟ್ಟಿರುತ್ತಾರೆ. ಕುಂಕುಮ, ಅರಿಶಿಣ, ಬಣ್ಣ, ಬಕೆಟ್ಟು ಇನ್ನೂ ಮುಂತಾದವುಗಳ ಮಿಶ್ರಣವನ್ನು ಗಡಗಿಗಳ ನೀರಿನಲ್ಲಿ ಸೇರಿಸುತ್ತಾರೆ. ಉತ್ಸವಮೂರ್ತಿಯನ್ನು ಪಾದಗಟ್ಟೆ ಮೇಲಿಡುತ್ತಾರೆ. ಅನಂತರ ಒಬ್ಬರಿಗೊಬ್ಬರು ಬಣ್ಣದ ನೀರನ್ನು ಎರಚಿಕೊಳ್ಳುತ್ತಾರೆ. ಹೀಗೆ ಓಕಳಿ ಮುಗಿದ ನಂತರ ಉತ್ಸವ ಮೂರ್ತಿ ಮಾರನೆ ಬೆಳಿಗ್ಗೆ ಹೊರಮಠಕ್ಕೆ ಹೋಗಿ, ಒಂದು ಒಳಮಠವನ್ನು ಸೇರಿಸುತ್ತಾರೆ. ಇದನ್ನು 'ಗುಡಿತುಂಬುವ' ಕಾರ್ಯ ಎಂದು ಕರೆಯುತ್ತಾರೆ. ಇದು ಮುಗಿದ ನಂತರ ಬರುವ ಸೋಮವಾರ 'ಮರುಪರುಸೆ' ಜರುಗುತ್ತದೆ. ದಿನದಿಂದ ಐದು ದಿನ ಉತ್ಸವ ಮೂರ್ತಿಯು ಪ್ರತಿ ದಿನ ಲೋಹದ ನವಿಲು, ಸರ್ಪ, ಕುದುರೆ, ಆನೆ, ಸಿಂಹವಾಹನಗಳ ಮೇಲೆ ಕುಳಿತು ಪಾದಗಟ್ಟೆಗೆ ಒಂದು ಪೂಜೆಯನ್ನು ಸ್ವೀಕರಿಸಿ ಹೋಗುತ್ತದೆ.

ಜಾತ್ರೆಯದಿನ ಹರಕೆ ಹೊತ್ತ ಭಕ್ತರು ತಲೆಯನ್ನು ಬೋಳಿಸಿಕೊಂಡು ದೇವಸ್ಥಾನದ ಎದುರು ಬರುತ್ತಾರೆ. ತಾವು ತಂದಿದ್ದ ಕೊಬ್ಬರಿಯನ್ನು ರಾಶಿ ಹಾಕಿ ಬೆಂಕಿ ಹಚ್ಚಿ ಅದರಿಂದ ಬರುವ ಕರಿಯನ್ನು ವಿಭೂತಿಯನ್ನು ಇಟ್ಟುಕೊಳ್ಳುತ್ತಾರೆ. ಈ ತರಹದ ಆಚರಣೆಗಳು ಇವರಲ್ಲಿವೆ. ಇತರೆ ಜನಾಂಗದವರು ಕೂಡ ಮಾಡುತ್ತಾರೆ. ಈ ಜಾತ್ರೆಗೆ ಲಕ್ಷಗಟ್ಟಲೆ ಭಕ್ತರು ಸೇರುತ್ತಾರೆ. ಪ್ರತಿವರ್ಷ ನಡೆಯುವ ಈ ಜಾತ್ರೆಯಲ್ಲಿ ಎಲ್ಲ ತೆರನ ಅಂಗಡಿ ಮುಗ್ಗಟ್ಟುಗಳು, ಜನಪದ ಕಲಾವಿದರು, ಮತ್ತು ಇತರ ಮನರಂಜನೆಗಳು ಇರುತ್ತವೆ. ಹೀಗೆ ಸ್ವಾಮಿಯ ರಥೋತ್ಸವ ಅದ್ದೂರಿಯಾಗಿ ನಡೆಯುತ್ತದೆ.

**ವಾರೋತ್ಸವ:** ಒಳಮಠ ಮತ್ತು ಹೊರಮಠ ಎರಡರಲ್ಲೂ ಪ್ರತಿ ಸೋಮವಾರ ನಡೆಯುವ ವಿಶೇಷ ಪೂಜೆಗೆ 'ವಾರೋತ್ಸವ' ಎಂದು ಕರೆಯುತ್ತಾರೆ. ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯ ಮೇಲೆ ಹೊತ್ತು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಡುತ್ತದೆ. ಹೀಗೆ ಹೋಗುವಾಗ ಪೂರ್ವದಲ್ಲಿ ವಾದ್ಯ ವೈಭವಗಳಿರಲಿಲ್ಲ. ಕಥೆಯಲ್ಲಿ ಬರುವ ಮಲ್ಲಪ್ಪ ನಾಯಕನು ಸ್ವಾಮಿಗೆ ಅರ್ಪಿಸಿದ ಬಿರುದಾವಳಿಗಳಿಂದ ನಂತರ ಕಾಲದಲ್ಲಿ ಛತ್ರಿ, ಚಾಮರ, ನಗಾರಿ, ಸಕಲ ವಾದ್ಯಗಳು ದೀವಟಿಗೆಗಳು ಉತ್ಸವಕ್ಕೆ ಲಭ್ಯವಾದವು. ಬೀದಿಯುದ್ದಕ್ಕೂ ನೆರೆದ ಭಕ್ತವೃಂದ ದೇವನಿಗೆ ತಾವು ಬೆಳೆದ ಕಾಯಿಪಲ್ಯಗಳನ್ನು ನೈವೇದ್ಯ ಅರ್ಪಿಸುತ್ತಾರೆ. ಉತ್ಸವದಲ್ಲಿ ಬಂದ ಪಲ್ಲಕ್ಕಿಯು ಹೊರಮಠವನ್ನು ಪ್ರವೇಶಿಸುತ್ತದೆ. ಮಠವನ್ನು ಪ್ರದಕ್ಷಿಣೆ ಹಾಕಿದ ನಂತರ ಒಳಮಠದ ಪೂಜಾರಿಯ ಹೊರಮಠದ ಮೂರ್ತಿಯನ್ನು ಪೂಜಿಸುತ್ತಾನೆ. ನೈವೇದ್ಯವಾಗಿ ಹಸಿ ಕಡಲೆ, ಕೊಬ್ಬರಿ, ಸಕ್ಕರೆ ಮಿಶ್ರಣವನ್ನು ಅರ್ಪಿಸುತ್ತಾರೆ. ಇದನ್ನು ಪ್ರಸಾದವಾಗಿ ಅಲ್ಲಿ ನೆರೆದ ಭಕ್ತರಿಗೆ ಹಂಚುತ್ತಾರೆ. ಪಲ್ಲಕ್ಕಿ ಹಿಂದಿರುಗಿ ಹೋಗುವಾಗ ಹರಕೆ ಹೊತ್ತ ಭಕ್ತರೆಲ್ಲ ದಾರಿಯಲ್ಲಿ ಸಾಲಾಗಿ ಮಲಗಿಕೊಳ್ಳುತ್ತಾರೆ. ಇವರನ್ನು ಹಾಯ್ದು ಉತ್ಸವ ಮೂರ್ತಿಯ ಪಲ್ಲಕ್ಕಿ ಮುಂದೆ ಸಾಗುತ್ತದೆ. ಹೀಗೆ ಮಾಡುವುದರಿಂದ ತಮ್ಮ ಇಷ್ಟಾರ್ಥಗಳು ನೆರವೇರುತ್ತವೆ ಎಂದು, ರೋಗ ರುಜಿನಗಳು ಹೋಗುತ್ತವೆ ಎಂದು ನಂಬುತ್ತಾರೆ. ಕೊನೆಗೆ ಉತ್ಸವ ಮೂರ್ತಿಯು ಒಳಮಠಕ್ಕೆ ಬಂದು ಗದ್ದುಗೆಗೊಳ್ಳುತ್ತದೆ. ಚಿತ್ರದುರ್ಗ, ಶಿವಮೊಗ್ಗ ಬಳ್ಳಾರಿ ಜಿಲ್ಲೆಗಳಲ್ಲಿ ನೆಲೆಸಿರುವ ಉಪ್ಪಾರರು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಇವರಲ್ಲದೆ, ತಿಪ್ಪೇರುದ್ರ ಸ್ವಾಮಿಯನ್ನು ಇತರ ಜನಾಂಗದವರು ಪೂಜಿಸುತ್ತಾರೆ.

ಮೈಸೂರು, ಹಾಸನ, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿನ ಉಪ್ಪಾರರು ಮಲೆಯ ಮಾದೇಶ್ವರನ ಭಕ್ತರಾಗಿದ್ದು ಒಕ್ಕಲಾಗಿದ್ದಾರೆ. ಈ ಭಾಗದಲ್ಲಿ ಇವರಲ್ಲಿ ಮಂಟೇಸ್ವಾಮಿ ಒಕ್ಕಲು, ದಾಸ ಒಕ್ಕಲು, ರಂಗ ಸ್ವಾಮಿ ಒಕ್ಕಲು ಮತ್ತು ಮಾರಿ ಮಸಣಿ ಒಕ್ಕಲಿನವರು ಇದ್ದಾರೆ. ಪ್ರತಿ ವರ್ಷ ಫೆಬ್ರವರಿಯ ಎರಡನೆಯ ವಾರದಲ್ಲಿ ಶಿವರಾತ್ರಿ ಜಾತ್ರೆಯು, ಮಾರ್ಚಿನ ಎರಡನೆಯ ವಾರದಲ್ಲಿ ಯುಗಾದಿಯ ಜಾತ್ರೆಯೂ, ದೀಪಾವಳಿಯಲ್ಲಿ ದೊಡ್ಡ ಜಾತ್ರೆ ನಡೆಯುತ್ತವೆ. ಪೂರ್ವದಲ್ಲಿ ಎರಡೇ ಜಾತ್ರೆಗೆ ಪರುಸೆ ಹೋಗುವ ಪದ್ಧತಿ ಇತ್ತು. ಈ ಜಾತ್ರೆಗಳ ಸಂದರ್ಭಗಳಲ್ಲಿ ಮೊದಲು ಮಾದೇಶ್ವರನಿಗೆ ಎಣ್ಣೆ ಮಜ್ಜನದ ಉತ್ಸವವು ಮೇಲು ಸಕ್ಕರೆ ಉಪ್ಪಾರರಿಂದ ನೆರವೇರುತ್ತದೆ. ಇದಾದ ನಂತರವೇ ಬೇರೆ ಕಾರ್ಯಕ್ರಮಗಳು ಪದ್ಧತಿಯಂತೆ ನಡೆಯುತ್ತವೆ.

ಮಾದೇಶ್ವರನ ಒಕ್ಕಲಿನವರು ಮಲೆಯ ಮಾದೇಶ್ವರನನ್ನೂ, ಮಂಟೇಸ್ವಾಮಿ ಒಕ್ಕಲಿನವರು, ಮಂಟೇಸ್ವಾಮಿಯನ್ನೂ, ದಾಸಒಕ್ಕಲಿನವರು ತಿರುಪತಿ ವೆಂಕಟರಮಣ ಸ್ವಾಮಿಯನ್ನೂ, ರಂಗಸ್ವಾಮಿ ಒಕ್ಕಲಿಗನವರು ಬಿಳಿಗಿರಿ ರಂಗಸ್ವಾಮಿಯನ್ನೂ ಮತ್ತು ಮಾರಿ ಮಸಣಿಯರ ಒಕ್ಕಲಿನವರು

ಮಾರಿಮಸಣಿಯರನ್ನೂ ವಿಶೇಷವಾಗಿ ಆರಾಧಿಸುತ್ತಾರೆ. ಮಾದೇಶ್ವರ ಮತ್ತು ಮಂಟೇಸ್ವಾಮಿಗೆ ಇವರು ಗುಡ್ಡರನ್ನು ಬಿಡುತ್ತಾರೆ. ದೀಕ್ಷೆಯನ್ನು ಪಡೆದು ಭಕ್ತರಿಗೆ 'ದೇವರ ಗುಡ್ಡರು' ಎಂದು ಕರೆಯುತ್ತಾರೆ.

**ದೀಕ್ಷಾ ವಿಧಾನ:** ಇತರ ಜನಾಂಗದವರಲ್ಲಿರುವಂತೆ ಇವರಲ್ಲಿಯೂ 'ಪುರುಸೇಕಾರಿ' ಎಂಬ ದೀಕ್ಷಾ ಗುರುವಿರುತ್ತಾನೆ. ಈತನು ಮದುವೆಯಾಗಿರಬಹುದು. ಆದರೆ, ಮಧ್ಯಮಾಂಸ ತೆಗೆದುಕೊಳ್ಳಬಾರದೆಂದು ನಿಯಮವಿಲ್ಲ. ಮನೆತನದವರೆಲ್ಲ ಗುಡ್ಡರಾಗಬೇಕು. ಶಿವರಾತ್ರಿಯಲ್ಲಿ ಜಾಗರಣೆ ಉಪವಾಸ ಮಾಡುತ್ತಾನೆ. ಸಾಮಾನ್ಯವಾಗಿ ಬಿಳಿ ಬಟ್ಟೆ ಪಂಚೆಯ ಉಡುಗೆಯಲ್ಲಿರುತ್ತಾನೆ. ಸಾಲೂರು ಮಠಕ್ಕೆ ಗುಡ್ಡದಿಂದ ಕಾಣಿಕೆಯನ್ನು ವಸೂಲು ಮಾಡಿ, ದೀಪಾವಳಿ, ಯುಗಾದಿ, ನವರಾತ್ರಿ ಹಬ್ಬಗಳಲ್ಲಿ ಒಪ್ಪಿಸುತ್ತಾನೆ. ಪುರುಸೇಕಾರಿ ಗುಡ್ಡರಿಗೆ ದೀಕ್ಷೆಯನ್ನು ಕೊಡುವ ಕಾರ್ಯವನ್ನು ನಿರ್ವಹಿಸುತ್ತಾನೆ. ಪ್ರತಿದಿನ ಮಹದೇಶ್ವರ ಬೆಟ್ಟದಲ್ಲಿ ಮೂರರಿಂದ ನಾಲ್ಕು ಜನ ಗುಡ್ಡರನ್ನು ಬಿಡುವ ಕಾರ್ಯ ನಡೆಯುತ್ತದೆ. ಇವರು ಊರುಗಳಲ್ಲೂ ದೀಕ್ಷೆಯನ್ನು ಪಡೆದು ಕೊಳ್ಳಬಹುದು. ಆಷಾಢ ಮಾಸವನ್ನು ಬಿಟ್ಟು ಶಿವರಾತ್ರಿ, ದೀಪಾವಳಿ, ಯುಗಾದಿ, ಕಾರ್ತೀಕ ಮಾಸದಲ್ಲಿ ಜಾತ್ರೆ ಗುಡ್ಡರನ್ನು ಬಿಡುತ್ತಾರೆ. ಒಕ್ಕಲಿನವರು ತಮ್ಮ ಹಿರಿಯ ಮಗನನ್ನು ಗುಡ್ಡನನ್ನಾಗಿ ಮಾಡಲೇ ಬೇಕು. ಸೋಮವಾರ, ಶುಕ್ರವಾರ ಮುಹೂರ್ತಕ್ಕೆ ದಿನವನ್ನು ನಿಶ್ಚಯಿಸಿಕೊಳ್ಳುತ್ತಾರೆ. ಗುಡ್ಡವನ್ನು ಬಿಡುವವರು ಮಂಟೇಸ್ವಾಮಿ ಪಾರ್ವಿ ಮಾದೇಶ್ವರರ ಗುಡ್ಡರು, ಜೋಗಿಗಳು, ದಾಸರು ಈ ಐದು ಜನರ ದರ್ಶನ ಮಾಡುತ್ತಾರೆ. ನಂತರ ಬಾವಿಯ ಅಥವ ನದಿಯ ಹತ್ತಿರ ಸೇರುತ್ತಾರೆ. ದೀಕ್ಷೆ ಹೆಚ್ಚಾಗಿ ಮಹಾದೇಶ್ವರ ದೇವಸ್ಥಾನದಲ್ಲಿ ನಡೆಯುತ್ತದೆ. ದೀಕ್ಷೆ ತೆಗೆದುಕೊಳ್ಳುವವರಿಗೆ ಮೊದಲು ತಲೆ ಬೋಳಿಸಿ, ಉಗುರು ಕತ್ತರಿಸಿ, ತೊಟ್ಟ ಉಡುದಾರವನ್ನು ತೆಗೆದು ಹಾಕುತ್ತಾರೆ. ಆತನನ್ನು ಗಂಗೆಗೆ ಕರೆತಂದು ಗುಡ್ಡರ ಕೈಯಲ್ಲಿ ನೀರು ಹಾಕಿಸಿ ಹೊಸ ಉಡಿದಾರ, ಕಚ್ಚೆ ಪಾವುಡ ಕಟ್ಟಿಸಿ, ಭಸ್ಮವನ್ನು ಧರಿಸಿ ಗುಡ್ಡರು ಕಂಸಾಳೆ ಬಡಿಯುತ್ತಾ ಹಾಡನ್ನು ಹೇಳುತ್ತಾ ಸಾಲೂರು ಮಠಕ್ಕೆ ಕರೆತರುತ್ತಾರೆ. ಅಲ್ಲಿ 'ಪುರಸೇಕಾರಿಗೆ' ಹುಡುಗನನ್ನು ಈ ರೀತಿ ಒಪ್ಪಿಸುತ್ತಾರೆ. "ಈತ ನಮ್ಮ ಮಗನಲ್ಲ. ಮಾದೇಶ್ವರನ ಮಗ" ಎನ್ನುತ್ತಾರೆ. ಅವರು ಮಾದೇವಾ ನಿನ್ನೊಕ್ಕಲಾಯ್ತುರೋ ಕಂದನು ಉದ್ಧಾರ ಮಾಡಪ್ಪಾ ಎಂದು ಕೈ ಮುಗಿದು ನಿಂತುಕೊಳ್ಳುತ್ತಾರೆ. ಪುರಸೇಕಾರಿ ಶಿಷ್ಯನ ಕಣ್ಣುರೆಪ್ಪೆ, ಕಿವಿ, ತಲೆ, ಹಣೆ, ತೋಳು, ಎದೆ, ಬೆನ್ನು ಕೈಕಾಲುಗಳಿಗೆ ಬ್ರಹ್ಮ ವಿಷ್ಣು ಮಹೇಶ್ವರ ಅಂತ ತ್ರಿಮೂರ್ತಿ ಹೆಸರನ್ನು ಹೇಳಿ, ವಿಭೂತಿ ಧರಿಸಿ, ಆತನನ್ನು ಕರಿ ಕಂಬಳಿಯ ಗದ್ದುಗೆಯ ಮೇಲೆ ಕುಳ್ಳಿರಿಸುತ್ತಾನೆ. ಪಂಚ ಕಳಸವನ್ನು ಇಟ್ಟು ಗದ್ದುಗೆಯ ಮೇಲೆ ಕುಳ್ಳಿರಿಸಿ, ಎಲ್ಲಾ ಕಳಸಗಳಿಗೂ ದಾರವನ್ನು ಸುತ್ತಿ ಒಂದು ಎಳೆ ಈತನ ಕುತ್ತಿಗೆಗೂ ಸುತ್ತುತ್ತಾರೆ. ಹೊಸದಾರದಲ್ಲಿ ಅಡ್ಡಲಾಗಿ ಜೋಡಿಸಿದ ರುದ್ರಾಕ್ಷಿ ಮಣಿಯನ್ನು ಕೊರಳಿಗೆ ಕಟ್ಟುತ್ತಾರೆ. ಮಂಟೇಸ್ವಾಮಿ, ಸಿದ್ಧಾಪ್ಪಾಜಿ ಗುಡ್ಡರಿಗೆ

ರುದ್ರಾಕ್ಷಿಯ ತೂತು ಮೇಲ್ಮುಖವಾಗಿ ಬರುವಂತೆ ಕಟ್ಟುತ್ತಾರೆ. ಅರಿಸಿಣದ ಕೊನೆ ಮತ್ತು ಕಬ್ಬಿಣದ ಉಂಗುರವನ್ನು ಅರಿಸಿಣದ ಬಟ್ಟೆಯಲ್ಲಿ ಇಟ್ಟು ಕರಿದಾರದಿಂದ ಕಟ್ಟಿ, ಕರ್ಪೂರ ಹಚ್ಚಿ ಪೂಜಿಸಿ ರುದ್ರಾಕ್ಷಿ ಮತ್ತು ಕಂಕಣ ಪೂಜಿಸುವರು. ಎಲ್ಲರಿಂದಲೂ ಶರಣ ಮಾಡಿಸಿದ ನಂತರ ಕಳಸಗಳ ಮುಂದೆ ಮದುವೆಯಲ್ಲಿ ಮಾಡುವಂತೆ ಹಾಲು ಎರೆಯುತ್ತಾರೆ. ಪುರಸೇಕಾರಿಯು ಗುಡ್ಡದ ಕೈಗೆ ಅಕ್ಕಿ ಎಲೆ, ಅಡಿಕೆ, ಬೆಲ್ಲ ಕಾಯಿಗಳನ್ನು ಕೊಟ್ಟು, ಕಂಕಣವನ್ನು ಕಟ್ಟಿ, ನಮಸ್ಕರಿಸುವಂತೆ ಹೇಳುತ್ತಾನೆ. "ಅಪ್ಪಾ ಮಗನೇ ಇಲ್ಲಿಯ ವರೆಗೆ ತಂದೆ-ತಾಯಿಯರ ಮಗನಾಗಿದ್ದೆ ಇಲ್ಲಿಂದೀಚೆಗೆ ಮಾದಪ್ಪನ ಮಗನಾದೆ" ಎಂದು ಹೇಳಿ ನೆರೆದಿರುವವರನ್ನುದ್ದೇಶಿಸಿ ಹೀಗೆ "ರುದ್ರಾಕ್ಷಿಧಾರಣೆ ಆಗಬಹುದಾ"? ಎಂದು ಕೇಳುತ್ತಾನೆ. 'ಆಗಲಿ' ಎಂದು ಎಲ್ಲರೂ ಸಮ್ಮತಿಯನ್ನು ಸೂಚಿಸಿದ ಮೇಲೆ ಅದನ್ನು ಎಲ್ಲರ ಕೈಯಿಂದಲೂ ಮುಟ್ಟಿಸಿ, "ಅಕ್ಷಯವಾಗಲಪ್ಪಾ" ಎಂದು ಕೊರಳಿಗೆ ಕಟ್ಟಿ, ಅಕ್ಷತೆ ಎರಚುತ್ತಾನೆ. ಹೀಗೆ ನೇರವೇರಿಸಿದ 'ಪುರಾಸೇಕಾರಿ' ಗೆ ಐದು ಪಾವು ಅಕ್ಕಿ ಎರಡಚ್ಚು ಬೆಲ್ಲ, ಎಲೆ, ಅಡಿಕೆ, ಎರಡು ತೆಂಗಿಕಾಯಿ, ಆರು ಬಾಳೆಹಣ್ಣು ಕಡ್ಡಿ ಕರ್ಪೂರ, ಒಂದು ಕೊನೆ ಅರಿಸಿನ, ಕಂಕಣಕ್ಕೆ ಬಟ್ಟೆ ಕಬ್ಬಿಣದ ಉಂಗುರ, ಗೋತೀರ್ಥ, ಗೋರಂಜನ, ಕಸ್ತೂರಿ, ಸಾಲೂರು ಮಠದ ಸ್ವಾಮಿಗಳಿಗೆ 15 1/2 ರೂಪಾಯಿಗಳ ಕಾಣಿಕೆ ಎಲ್ಲವನ್ನೂ ಇಟ್ಟು ಕೊಡುತ್ತಾರೆ. ಪೂರ್ವದಲ್ಲಿ ಐದು ಪಾವಲಿ ಕೊಡುತ್ತಿದ್ದರು. ಶ್ರೀಮಂತರು ಬಟ್ಟೆಯನ್ನು ಕೊಡುತ್ತಾರೆ. ರುದ್ರಾಕ್ಷಿ ಸಂಬಂಧದಲ್ಲಿ ಅಲ್ಲಿದ್ದ ಎಲ್ಲರೂ 'ಶರಣಾರ್ತಿ' ಎಂದು ಹೇಳಿ ಕಂಸಾಳೆ ಬಡಿದು ಗುಡ್ಡನಿಗೆ ಅಕ್ಷತೆ ಎರಚುತ್ತಾರೆ. ಪುರಸೇಕಾರನು "ನೀನ್ಯಾರಮಗನಪ್ಪ" ಎಂದಿದ್ದಕ್ಕೆ "ಗುಡ್ಡನು ನಾನು ಮಾದೇವನ ಮಗ ಸ್ವಾಮಿ" ಎಂದು ಹೇಳುತ್ತಾನೆ ಹೀಗೆ ಹೇಳಿಸಿ "ಅಂಗದ್ ಮ್ಯಾಲೆ ತಕ್ಕಳಪ್ಪಾ ಮಾದೇವನ ಜೋಳಿಗೇನ ಮುಂಗೈಗೆ ಬೆತ್ತಾನ" ಕೊಟ್ಟು ಇದನ್ನು ಎನ್ ಮಾಡುತ್ತೀ "ಎಂದಾಗ ಏನು ಮಾಡ್ಲಿ ಗುರುಗಳೇ"?. ಎನ್ನುತ್ತಾನೆ.

ಊರಿನ ಮುಖ್ಯಸ್ಥರ ಮನೇಲಿ ಕ್ವಾರಣ್ಯ ಸಾರಬೇಕು, ಸೋಮವಾರ ಶುಕ್ರವಾರ ಪೂಜೆಮಾಡುತ್ತೀಯಾ? ಎಂದು ಗುರು ಕೇಳಿದ್ದಾಕೆ ಗುಡ್ಡಯ " ಆಗಲಿ ಮಾಡುತ್ತೇನೆ" ಎಂದು ಹೇಳುತ್ತಾನೆ. ತಂದೆ ತಾಯಿಗಳು ಗಂಡನ ಪಾದ ಪೂಜೆ ಮಾಡಿ ಆತನು ಹಾಕಿಕೊಂಡ ಜೋಳಿಗೆಗೆ ಐದು ಸೇರು ಅಕ್ಕಿ ಒಂದು ಅಚ್ಚು ಬೆಲ್ಲ, ಒಂದು ತೆಂಗಿನಕಾಯಿ, ಎಲೆ ಅಡಿಕೆ, ಹಣ್ಣುಗಳನ್ನು ಭಿಕ್ಷೆ ಹಾಕಿ ಕ್ವಾರಣ್ಯಕ್ಕೆ ಕಳುಹಿಸುತ್ತಾರೆ. ನಾಲ್ಕಾರು ಮನೆಗಳಲ್ಲಿ ಭಿಕ್ಷೆ ತೆಗೆದುಕೊಂಡು ಬಂದ ಮೇಲೆ ಆತನಿಗೆ ರತನೀರು ತೆಗೆದು ಪಾದ ತೊಳೆದು ಮನೆಗೆ ತುಂಬಿಸಿಕೊಳ್ಳುತ್ತಾರೆ. ಇದಾದಮೇಲೆ ಹೊಂಬಾಳೆ ಗೊನೆಯನ್ನು ಮನೆಯ ಮಾಡಿಗೆ ಕಟ್ಟಿ ದೂಪ ಹಾಕಿಕೊಂಡು ಕೈಮುಗಿದ ಕೊಳ್ಳುತ್ತಾರೆ.

ಗುಡ್ಡವನ್ನು ಪುರುಸೇಕಾಲ ಗುರು ಹಿರಿಯರ ಪಾದ ಮುಟ್ಟಿ ನಮಸ್ಕರಿಸುವಂತೆ ತಿಳಿಸುತ್ತಾನೆ. ಹಿರಿಯರು ಹೇಳಿದ ಹಂಗೆ ನಡೆದುಕೊಳ್ಳಬೇಕೆಂದು ಹೇಳಿದಾಗ "ನಿಮ್ಮ ಪಾದ ಸಾಕ್ಷಿಯಾಗಿ ನಡ್ಕೊಂತೀನಿ" ಎಂದು ಹೇಳುತ್ತಾನೆ.

"ಗುರುಗಳ ಕಂಡರೆ ಶರಣು ಅನ್ತೀಯ"
"ಗುರುಗಳ ಕಂಡರೆ ಶರಣು ಅನ್ತೀಯ"
"ಜೋಗಿ ಕಂಡ್ರೆ ಆದೇಸಿ ಅನ್ತೀನಿ"
"ತಂದೆ ತಾಯಿಗೆ ಅನ್ನ ಹಾಕೀಯಾ?"
"ತಂದೆ ತಾಯಿಗೆ ಅನ್ನ ಹಾಕ್ತೀನಿ"

ಸೋಮವಾರ ಮತ್ತು ಶುಕ್ರವಾರದಂದು ಅತಿಥಿಗಳನ್ನು ಸತ್ಕರಿಸುವಂತೆಯೂ ವರ್ಷಕ್ಕೆ ಒಂದು ಸಾರಿ ಗುರುಮಠಕ್ಕೆ ಒಂದೂ ಕಾಲು ರೂಪಾಯಿ ಕೊಡುವಂತೆಯೂ ಹೇಳಿ ಒಪ್ಪಿಸುತ್ತಾನೆ. ಇದೆಲ್ಲ ನಡೆದ ಮೇಲೆ ಗುರು ಗುಡ್ಡನ ಕಿವಿಯಲ್ಲಿ " ಪಂಚಾಕ್ಷರಿ" ಮಂತ್ರ ಉಪದೇಶಿಸುತ್ತಾನೆ.

ಅಂದಿನಿಂದ ಗುಡ್ಡನಾದವನು ಮನೆಯಲ್ಲಿ ಹಾಗೂ ಹೊರಗೆ ವಿಶೇಷವಾಗಿ ಗೌರವಿಸಲಾಗುವುದು. ಮನೆಯಲ್ಲಿ ನಡೆಯುವ ಎಲ್ಲ ಧಾರ್ಮಿಕ ಕಾರ್ಯಗಳನ್ನು ಇವನ ಸಮ್ಮುಖದಲ್ಲಿಯೇ ನಡೆಸುತ್ತಾರೆ. ಊಟ ತಿಂಡಿಯಲ್ಲಿ ಇನ್ನೊಬ್ಬರ ಎಂಜಲನ್ನು ತಿನ್ನುವ ಹಾಗಿಲ್ಲ. ಈ ಕಾರಣದಿಂದ ಪ್ರತ್ಯೇಕವಾದ ತಟ್ಟೆ, ಲೋಟ, ತಂಬಿಗೆ ನೀಡುತ್ತಾರೆ ಅವುಗಳನ್ನೂ ಮನೆಯ ಬೇರೆ ಸದಸ್ಯರು ಬಳಸುವುದಿಲ್ಲ. ಪೂರ್ವದಲ್ಲಿ ಕುಂಬಾರನು ಶುದ್ಧವಾಗಿದ್ದು ಮಾಡಿದ ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದನು. ಈಗಲೂ ಲೋಹದ ಕಂಚಿನ ಪಾತ್ರೆಯನ್ನು ಮಾತ್ರ ಬಳಸುವುದಿಲ್ಲ. ಕಂಸಾಳೆ ಎನ್ನುವ ಕಾರಣದಿಂದ ಉಪಯೋಗಿಸುವುದಿಲ್ಲ. ಗುಡ್ಡರಿಗೆ ತಾವು ತಯಾರಿಸಿದ ಕಡಬು, ಕಜ್ಜಾಯ, ಅನ್ನ, ಸಾರು ಎಲ್ಲವನ್ನೂ ಹಾಕಿ, ಗುಡ್ಡನ ಕೈಯಲ್ಲಿ ಒಂದು ಮುತ್ತುಗದ ಎಲೆಯನ್ನು ಕೊಡುತ್ತಾರೆ. ಆತ ಅದನ್ನು ಹಿಡಿದುಕೊಂಡು "ಕಂತೆ ಭಿಕ್ಷೆನೀಡಿ ಸ್ವಾಮಿ" ಎಂದಾಗ ಗುಡ್ಡರೆಲ್ಲಾ ಒಂದೊಂದು ಹಿಡಿ ಅನ್ನ ಹಾಕುತ್ತಾರೆ. ಅದನ್ನು ತೆಗೆದುಕೊಂಡು ಪಂಕ್ತಿಯಲ್ಲಿ ಕುಳಿತು ಊಟ ಮಾಡುತ್ತಾನೆ. ಅಂದಿನಿಂದ ಆತ ಗುಡ್ಡದ ಗುಂಪಿಗೆ ಸೇರಿದವ ಎಂದಂತಾಗುತ್ತದೆ. ಇದಕ್ಕೆ 'ಗುಡ್ಡನ ಬಿಟ್ರು' ಅಂತ ಹೇಳುತ್ತಾರೆ.

ಸೋಮವಾರ ಮತ್ತು ಶುಕ್ರವಾರ ಸ್ನಾನ ಮಾಡಿ ಪೂಜೆ ಮಾಡಿ ಭಿಕ್ಷೆ ಮಾಡಬೇಕು, ತ್ರಿಕಾಲದಲ್ಲಿ ಕೈ-ಕಾಲು ತೊಳೆದು ಭಸ್ಮಧರಿಸಿ, ಪಂಚಾಕ್ಷರಿ ಮಂತ್ರ ಜಪಿಸಬೇಕು. ಅಲ್ಲಿ ನೆರೆದ ಗುಡ್ಡರಿಗೆಲ್ಲಾ ಊಟ ಮಾಡಿದ ಮೇಲೆ ಅಕ್ಕಿ ಹಾಗೂ ಐದು ಪಾವಲಿಗಳನ್ನು ಕೊಡಬೇಕು. ಭಿಕ್ಷೆ ತೆಗೆದುಕೊಂಡವರು "ಅಕ್ಷಯವಾಗಲಿ" ಎಂದು ಹರಸಿ ಹೊರಟು ಹೋಗುತ್ತಾರೆ. ಹೀಗೆ ಆರಂಭವಾದ ಗುಡ್ಡನ ಜೀವನ, ಇದು ವರೆಗೂ ತಂದೆ ತಾಯಿಯರ ಮಗನಾಗಿದ್ದವನು ಗುಡ್ಡನಾದ ಮೇಲೆ ಗುರುಗಳ ಮಗನಾಗಿ ಪರಿವರ್ತಿತನಾಗುತ್ತಾನೆ. ಗುಡ್ಡನು ಸೋಮವಾರ

ಮತ್ತು ಶುಕ್ರವಾರಗಳಂದು ದೀಕ್ಷೆಯಲ್ಲಿ ಒಪ್ಪಿಕೊಂಡ ನಿಯಮವನ್ನು ಎಲ್ಲಿದ್ದರೂ ಪಾಲಿಸಲೇಬೇಕು. ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ, ಮಂಟೇಸ್ವಾಮಿ ನೀಲಗಾರರು, ಗೊರವರು, ಎಲ್ಲಮ್ಮನ ಗುಡ್ಡರನ್ನು ಮಾಡುವಲ್ಲಿ ಮಾದೇಶ್ವರ ಗುಡ್ಡರ ದೀಕ್ಷಾಪದ್ಧತಿಯಂತೆ ಇದೂ ನಡೆಯುತ್ತದೆ.

ಗುಡ್ಡನ ದೀಕ್ಷಾಗುರು ಮಾದೇಶ್ವರರ ಹಾಡನ್ನು ಕಲಿಸಿಕೊಡುತ್ತಾನೆ. ಗುಡ್ಡರು ಕಲಿತು ಕ್ವಾರಣ್ಯ ಕಾಲದಲ್ಲಿ ಹಾಡುತ್ತಾ ಭಿಕ್ಷೆ ಬೇಡುತ್ತಾರೆ. ಹೀಗೆ ಮಾಡಿದರೆ, ಆತನ ಜೀವನ ಸಾರ್ಥಕ ವಾದಂತೆ ಎಂದು ನಂಬಿಕೆ ಇಟ್ಟಿದ್ದಾರೆ. ನಿಯಮವನ್ನು ಪಾಲಿಸುತ್ತಾ ಅವರು ಶ್ರೇಷ್ಠರಾಗುತ್ತಾರೆ. ಜನರು ಗೌರವ ಕೊಡುತ್ತಾರೆ. ಕೆಲವು ವೇಳೆ ಮಾದೇಶ್ವರನಿಗೆ ಹರಕೆ ಹೊತ್ತ ಭಕ್ತರು, ಸೋಮವಾರ, ದೀಪಾವಳಿ, ಶಿವರಾತ್ರಿ ಮೊದಲಾದ ಹಬ್ಬಗಳಲ್ಲಿ ಐದು ಜನ ಗುಡ್ಡರನ್ನು ಕರೆಯಿಸಿ, ಕಜ್ಜಾಯ ತುಪ್ಪ ಬಡಿಸಿ ಸಂತೋಷಪಡಿಸುತ್ತಾರೆ. ಗುಡ್ಡರು ಸ್ನಾನಮಾಡಿ ಮಡಿಯುಟ್ಟು, ವಿಭೂತಿಗಟ್ಟಿ, ರುದ್ರಾಕ್ಷಿಸರಗಳನ್ನು ಗದ್ದುಗೆ ಊಡಿ "ನೆನೆವಾರ್ತೆ" ಮಾಡುತ್ತಾರೆ.

ಹರಹರ ಹರಲಿಂಗ ಗುರುಲಿಂಗ
ಗುರು ಶಾಂತಲಿಂಗ ನಂಜುಂಡ ಲಿಂಗ
ನಡುಮಲೆಯ ಲಿಂಗ, ನಡುಲಿಂಗ
ನುಡಿಲಿಂಗ ಸಾಕ್ಷಾತ್ ಲಿಂಗ,
ಆನೆ ಮಲೆಗರಿವಾಗಿ, ಜೇನು ಮಲೆ ಗರಿವಾಗಿ
ವಜ್ರ ಮಲೆ, ಗುಂಜ ಮಲೆ
ಗುಲಗಂಜಿ ಮಲೆ ಎಪ್ಪತ್ತೇಳು ಮಲೆ ಕೈಲಾಸಕರಿವಾಗಿ

## ಅಧ್ಯಾಯ:೫

೫. ಸಾಹಿತ್ಯ

೫:೧. ಜೀವನಾವರ್ತನ ಆಚರಣೆಗಳಲ್ಲಿಯ ಹಾಡುಗಳು

೫:೨. ವಾರ್ಷಿಕಾವರ್ತನ ಆಚರಣೆಗಳಲ್ಲಿಯ ಹಾಡುಗಳು

೫:೩. ಪುರಾಣ

೫:೪. ಕಥೆ

೫:೫. ಗಾದೆ

೫:೬. ಒಗಟು

**೫. ಸಾಹಿತ್ಯ**

ಜಾನಪದದಲ್ಲಿ ಉತ್ಕೃಷ್ಟವಾದ ಭಾಗ 'ಜನಪದ ಸಾಹಿತ್ಯ' ಇದು ಒಂದು ಪ್ರಮುಖ ಅಂಗ. ಒಂದು ರೀತಿಯಲ್ಲಿ ಜಾನಪದದ ಅಧ್ಯಯನವೆಂದರೆ ಜನಪದ ಸಾಹಿತ್ಯದ ಅಧ್ಯಯನವೇ ಆಗಿದೆ. ಇದು ಅನೇಕ ಸಿದ್ಧಾಂತ, ಅಧ್ಯಯನಗಳಿಗೆ ಅವಕಾಶಮಾಡಿಕೊಟ್ಟಿದ್ದಲ್ಲದೇ ತನ್ನಲ್ಲಿ ಅಡಗಿಸಿಕೊಂಡಿರುವ ಸಾಹಿತ್ಯಿಕ, ಸಾಂಸ್ಕೃತಿಕ, ಐತಿಹಾಸಿಕ, ಭಾಷಿಕ ಹಾಗೂ ಮನಶ್ಶಾಸ್ತ್ರೀಯ ಮೌಲ್ಯದಿಂದ ಅನೇಕ ವಿದ್ವಾಂಸರ ಗಮನವನ್ನು ತನ್ನಡೆಗೆ ಸೆಳೆದುಕೊಂಡಿದೆ. (ಪರಮಶಿವಯ್ಯ 1979:275). ಸಾಹಿತ್ಯವು ಜೀವನದ ಗತಿಬಿಂಬ. ಅದು ಶಿಷ್ಟವಾಗಿರಬಹುದು; ಅಥವ ಪರಿಶಿಷ್ಟವಾಗಿರಬಹುದು. ಜನಾಂಗದ ಜೀವನಾನುಭವದ ಮಡು ಅಲ್ಲಿ ಕಾಣುತ್ತದೆ. ಅವರ ಗುಂಪಿನ ಆಚರಣೆ, ಜೀವನ ವಿಧಾನ, ನಂಬಿಕೆಗಳ ಪರಿಚಯವಾಗಬೇಕಾದರೆ ಆ ಗುಂಪಿನ ಹಾಡುಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ, ವರ್ಗೀಕರಿಸಿ ನೋಡಿದರೆ ಮಾತ್ರ ಸಾಧ್ಯವಾಗುತ್ತದೆ. (ಹಾ.ಮಾ.ನಾ. 1971:27) ನಿತ್ಯಜೀವನ ಕರ್ಮಗಳ ಜೊತೆ ಜೊತೆಗೆ ನಿರಂತರ ಬೆಸೆದುಕೊಂಡಿರುವುದರಿಂದ ಇವು ಚಿರಪರಿಚಿತ. ಇವುಗಳು ಲಾವಣಿ, ಗೀತೆ, ಕೆಲಸದ ಹಾಡು, ಸಾಂಪ್ರದಾಯಿಕ ಹಾಡು ಮುಂತಾದವುಗಳಾಗಿ ಮೂಡಿಬರುತ್ತವೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವ ಈ ಹಾಡುಗಳು ಅಮರ ಗೀತೆಗಳಾಗಿವೆ. ಇವು ಯಾವಾಗ ಸೃಷ್ಟಿಯಾದವು ಎಂದು ಗುರುತಿಸಲು ಸಾಧ್ಯವಿಲ್ಲ. ಹೇಗೆ ಅಕ್ಷರಸ್ಥ ಸಮಾಜದ ಸಾಹಿತ್ಯ ಸೃಷ್ಟಿ ವೈಯಕ್ತಿಕವೊ ಹಾಗೆ ಜನಪದ ಗೀತೆಗಳ ನಿರ್ಮಾಣದಲ್ಲಿ ತನ್ನ ಆರಂಭದಲ್ಲಿ ಸಾಮೂಹಿಕವಾಗಿದೆ. ಇವುಗಳ ನಿರ್ಮಾಣದಲ್ಲಿ ಯಾರು ಯಾವಾಗ ಹೇಗೆ ಭಾಗವಹಿಸಿದರು ಎಂದು ಹೇಳಲು ಬರುವುದಿಲ್ಲ . ಈ ಅಮರ ಗೀತೆಗಳು ಅಜ್ಞಾತ ಕವಿಗಳ ಸೃಷ್ಟಿಯಾಗಿವೆ. ಬಳಕೆಯಲ್ಲಿ ಮಾತ್ರ ವ್ಯಕ್ತಿಗತವಾಗುವುದು ಈ ಗೀತೆಗಳ ಮತ್ತೊಂದು ಮಹತ್ವದ ಅಂಶ. ಶ್ರಮಜೀವಿಗಳೂ ಪ್ರಕೃತಿ ಪ್ರೇಮಿಗಳು ಆದ ಜನ ತಾವು ಹುಟ್ಟಿ ಬೆಳೆದ ನೆಲ-ಜಲದ ಬಗೆಗೆ ಭಕ್ತಿ ಗೌರವವುಳ್ಳವರು. ನಾಗರಿಕ ಪ್ರಭಾವ ಆಗಿದ್ದಾಗ ಪರಂಪರಾನುಗತ ಸಂಪ್ರದಾಯ ನಂಬಿಕೆಗಳನ್ನು ನಿಷ್ಠೆ ಯಿಂದಾಚರಿಸುವ ಪ್ರವೃತ್ತಿಯನ್ನು ಉಳಿಸಿಕೊಂಡವರು. ಇವರ ಸಾಂಸ್ಕೃತಿಕ ಬದುಕನ್ನು ಚೆನ್ನಾಗಿ ನೋಡಲು ಗಾದೆ, ಒಗಟು, ಕತೆ, ಹಾಗೂ ಗೀತೆಗಳು ಸಹಕಾರಿಯಾಗಿವೆ. ಇವೆಲ್ಲಕ್ಕಿಂತ ಗೀತೆಯೇ ಜಾನಪದ ಸಂಸ್ಕೃತಿಯನ್ನು ತೆರೆದು ತೋರುತ್ತದೆ. (ಸ್ಟಾಂಡರ್ಡ್ ಡಿಕ್ಸ್ ನರಿ) ಈ ಕಾರಣದಿಂದ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆ-ಪರಂಪರೆಯನ್ನು ಹೊಂದಿರುವ ದಕ್ಷಿಣಕರ್ನಾಟಕದ ಉಪ್ಪಾರರ ಸಮಾಜದ ಸಾಹಿತ್ಯದ ಅಧ್ಯಯನವೂ ತುಂಬ ಸೂಕ್ತವಾದುದಾಗಿದೆ.

ಉಪ್ಪಾರರಲ್ಲಿ ಸಮೃದ್ಧವಾದ ಜನಪದ ಭಂಡಾರವಿದೆ. ಆದರೆ, ತಮ್ಮ ಪಾರಂಪರಿಕ ಪ್ರತಿಭೆ ಅವರ ಜೀವನದ ದುಸ್ತರತೆಯಿಂದಾಗಿ ಕಡಿಮೆಯಾಗಿದೆ. ಇವರ ಜಾನಪದದ ಸಮಗ್ರ ಅಧ್ಯಯನ ಸಾಧ್ಯವಾಗುವುದು ಇವರ ಜನಪದ ಸಾಹಿತ್ಯವನ್ನು ಇಡಿಯಾಗಿ ಪರಿಶೀಲಿಸಿದಾಗಲೇ. ಈ ಬಗೆಗೆ ಸಂಗ್ರಹ ಮತ್ತು ಅಧ್ಯಯನ ಈವರೆಗೂ ನಡೆದೇ ಇಲ್ಲ.

ಆ ಕಾಲದಲ್ಲಿ ಉಪ್ಪಾರರು ಉಪ್ಪನ್ನು ತಯಾರಿಸಿ ಹಳ್ಳಿ ಹಳ್ಳಿಗಳಿಗೆ ಹೋಗಿ ಮಾರುವುದು, ಅದರಿಂದ ಬಂದ ಹಣದಲ್ಲಿ ಜೀವನ ನಡೆಸುತ್ತಿದ್ದ ಕಾಲವಿತ್ತು ಅದು ಈಗ ಇಲ್ಲವೇ ಇಲ್ಲ.

ಉಪ್ಪಾರರ ಬಹುಮಟ್ಟಿನ ಸಾಹಿತ್ಯ ಅವರ ದೈನಂದಿನ ಬದುಕಿನೊಂದಿಗೆ ಬೆಸೆದುಕೊಂಡು, ಜೀವನ ಕ್ರಮದ ದಿಕ್ಕನ್ನೂ ಸೂಚಿಸುತ್ತದೆ. ಇವರ ಸಾಹಿತ್ಯವು ಶುಭಕಾರ್ಯಗಳಲ್ಲಿ, ಕೆಲಸ ನಿರ್ವಹಿಸುವ ಮತ್ತು ವಿಶೇಷ ಆಚರಣೆಯ ಸಂದರ್ಭಗಳಲ್ಲಿ ಜೀವ ಪಡೆದುಕೊಳ್ಳುತ್ತದೆ. ಇಂಥ ಕೆಲವು ಹಾಡುಗಳನ್ನು ವಿಶ್ಲೇಷಣೆಗೆ ಗುರಿ ಮಾಡಲಾಗಿದೆ. ಮೊದಲ ಹಂತದಲ್ಲಿ ಜೀವನದ ನಾಲ್ಕು ಸೋಪಾನಗಳಾದ ಹುಟ್ಟು, ಮದುವೆ, ಪ್ರೌಢಾವಸ್ಥೆ ಮತ್ತು ಮರಣದ ಸಂದರ್ಭದಲ್ಲಿ ಹಾಡುವಂಥವು. ಎರಡನೇ ಹಂತದಲ್ಲಿ ದೈವಾರಾಧನೆ ಸಂದರ್ಭದಲ್ಲಿ ಹಾಡುವಂಥವಾಗಿವೆ. ಇಲ್ಲಿ ಹೆಚ್ಚಾಗಿ ಪುನರುಕ್ತಿ ಮತ್ತು ದೇವರ ವರ್ಣನೆ ಹೆಚ್ಚಾಗಿರುತ್ತದೆ.ವಿಸ್ತೃತವಾಗಿ ಮದುವೆಗೆ ಸಂಬಂಧಿಸಿದ ಹಾಗೂ ದೇವತೆಗಳಿಗೆ ಸಂಬಂಧಿಸಿದ ಹಾಡುಗಳು ಸ್ಥಾನ ಪಡೆದರೆ; ಉಳಿದ ಹಾಡುಗಳು ಬೇಸರ ನೀಗಿಕೊಳಲು, ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಮತ್ತು ದುಃಖವನ್ನು ಕಡಿಮೆಮಾಡಿಕೊಳ್ಳಲು, (ಸಾವಿನ ಹಾಡು) ಹಾಡುವಂಥವು. ಈಗ ಹಾಡುವವರ ಸಂಖ್ಯೆ ಕಡಿಮೆಯಾಗಿದೆ. ಇದರಿಂದಾಗಿ ಉಪ್ಪಾರರಲ್ಲಿ ಸಿಗುವ ಜನಪದ ಗೀತೆಗಳನ್ನು ಈ ಕೆಳಗಿನ ವಿಭಾಗಕ್ರಮದಲ್ಲಿ ಅಧ್ಯಯನಕ್ಕೆ ಅಳವಡಿಸಬಹುದು.

1. ಜೀವನಾವರ್ತನದ ಆಚರಣೆಗಳಲ್ಲಿಯ ಹಾಡುಗಳು
   ಅ) ಋತುಮತಿಯಾದಾಗ
   ಆ) ಮದುವೆ ಹಾಡುಗಳು
   ಇ) ಒಸಗೆ ಹಾಡುಗಳು
   ಈ) ಸಾವಿನಲ್ಲಿ ಹಾಡುವ ಹಾಡುಗಳು

2. ವಾರ್ಷಿಕಾವರ್ತನದ ಆಚರಣೆಗಳಲ್ಲಿಯ ಹಾಡುಗಳು
   ಅ) ಹಬ್ಬಗಳಲ್ಲಿ ಹಾಡುವ ಹಾಡುಗಳು
   ಆ) ಜಾತ್ರೆಗಳಲ್ಲಿ ಹಾಡುವ ಹಾಡುಗಳು

**ಜೀವನಾವರ್ತನದ ಆಚರಣೆಗಳಲ್ಲಿನ ಹಾಡುಗಳು :**

ಉಪ್ಪಾರರಲ್ಲಿ ಹುಟ್ಟಿನಿಂದ ಸಾವಿನ ವರೆಗೆ ಅನೇಕ ಆಚರಣೆಗಳು, ಸಂಪ್ರದಾಯಗಳು ನಡೆಯುತ್ತವೆ. ಇವು ಇವರ ವಾರ್ಷಿಕ ಆವರ್ತನದಲ್ಲಿ ಬರುತ್ತವೆ. ಮದುವೆ ಮತ್ತು ಮೈನೆರೆದಾಗ ಹಾಡುವ ಹಾಡುಗಳನ್ನು 'ಸೋಬಾನೆ ಪದಗಳು' ಎಂದು ಕರೆಯುತ್ತಾರೆ. ಶುಭವನ್ನು ಸೂಚಿಸುವುದೇ ಸೋಬಾನೆ ಪದಗಳ ವಿಶೇಷ. ಈ

ಕಾರಣಕ್ಕಾಗಿಯೇ ಇವುಗಳನ್ನು ಶುಭ ಸಂದರ್ಭದಲ್ಲಿ ಹಾಡುತ್ತಾರೆ. ಇವುಗಳನ್ನು ಸಾಮಾನ್ಯವಾಗಿ ಹೆಂಗಸರೆ ಹಾಡುತ್ತಾರೆ. ವಿವಾಹದ ವಿವಿಧ ಆಚರಣೆಗಳಿಗೆ ಸಂಬಂಧಿಸಿದಂತೆ ಹಾಡುವ ಹಾಡುಗಳಲ್ಲಿ ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಹಾಡುಗಳೂ ಸೇರಿಕೊಳ್ಳುತ್ತವೆ. ಈ ಕಾರಣದಿಂದ ನಿತ್ಯಜೀವನದಲ್ಲಿ ಕಾಣದ ಅನೇಕ ವಸ್ತುಗಳು ಹಾಡುಗಳಲ್ಲಿ ವೈಭವೀಕರಣಗೊಳ್ಳುತ್ತವೆ. ಮದುವೆಯ ಸಂದರ್ಭದಲ್ಲಿ ಅನೇಕ ಆಚರಣೆ ಗಳಿರುವುದರಿಂದ ಎಲ್ಲಕ್ಕೂ ಸೋಬಾನೆ ಪದಗಳು ಹಾಡಲ್ಪಡುತ್ತವೆ. ಇವುಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

೧. ಹಸೆ ಶಾಸ್ತ್ರದ ಹಾಡು
೨. ಗಂಗೆ ಶಾಸ್ತ್ರದ ಹಾಡು
೩. ಧಾರೆ ಶಾಸ್ತ್ರದ ಹಾಡು
೪. ಕಳಸದ ಹಾಡು
೫. ಅರಿಶಿನೆಣ್ಣೆ ಶಾಸ್ತ್ರದ ಹಾಡು
೬. ವೀಳ್ಯೆ ಶಾಸ್ತ್ರದ ಹಾಡು
೭. ಒಳಗೆ ಶಾಸ್ತ್ರದ ಹಾಡು

೧. **ಹಸೆ ಶಾಸ್ತ್ರದ ಹಾಡು** : ಮದುವೆಗೆ ಮುನ್ನ ಗಂಡು ಮತ್ತು ಹೆಣ್ಣಿನ ಮನೆಗಳಲ್ಲಿ ಹಸೆಯ ಮೇಲೆ ಮಣೆಯನ್ನು ಹಾಕಿ ಕೂರಿಸಿ ಆರತಿಮಾಡುವ ಸಂಪ್ರದಾಯವಿದೆ. ಇದರಲ್ಲಿ ೫ ಜನ ಮುತ್ತೈದೆಯರು ಇರುತ್ತಾರೆ. ಇವರೆಲ್ಲ ಸೇರಿ ಆರತಿ ಮಾಡುತ್ತಾರೆ. ಈ ಕಾರಣದಿಂದ ಮದುಮಗ ಗೋಪಾಲನಾಗಬೇಕು. ಆತ ಕುಳಿತಿರುವ ಮಣೆ ಚಿನ್ನದಾಗಿರಬೇಕು ಎಂದು ಶುಭಕೋರುತ್ತಾರೆ.

ಇಂದೀಗೇS ತೆಗೆಯೂದೂS
ಬಂದೋರಿಗೇ, ಕಾಣೋದೂS
ಗೋಪಾಲನ ಸೋಬಾನಕೋ ತೆಗೆಯೋದರೇSS
ಯಾವರೇನೇ ತೆಗಿಯೋದೂS
ಬಂದವರಿಗೇS ಕಾಣೋದುS ಸೋಬಾನಾSS
ವರ ಸುಕ್ರದೇವರ, ಪಡಿವರ ಮಾಡಿವಾS
ಕಣಸಾ ಪುತ್ರನಾS ಸೋಬಾನವೆ ತಗಿಯೋದೇS

ಹಸೆಯ ಶುಭ ಸಂದರ್ಭದಲ್ಲಿ ಸಂಬಂಧಿಕರು ಮಾತ್ರವಲ್ಲ;ಪ್ರಾಣಿ ಪಕ್ಷಿಗಳೂ, ಗಿಡ ಮರಗಳೂ ಇರಬೇಕು ಎಂದು ಅಪೇಕ್ಷಿಸುತ್ತಾರೆ. ಮನೆಯಲ್ಲಿ ಏನೆಲ್ಲ ಇದೆ ಎನ್ನುವ ವರ್ಣನೆಯು ಬರುತ್ತದೆ.

ಬಾಳೆಹಣ್ಣುಗಳೇ ಬನ್ನಿ
ಬಾಳೆಕಾಯಿಗಳೇ ಬನ್ನಿ
ಬಯಲಾಳೆ ಆಡೋಕೇನೇ ಬನ್ನಿ
ಬಯಲಾಗೆ ಆಡೋ ಗಿಣಿಗಳೇ ಬನ್ನಿ
ಕಲ್ಯಾಣ ಇವ್ವರಾ ಮನೀಯಾಗ್ಯSS
ಕಲ್ಯಾಣದ ಮನೀಯಾಗಾ
ಧೂಳಿಲ್ಲSS ಧುಮ್ಮಿಲ್ಲSS
ಜಳಡಿಗೆ ತುಪ್ಪಾ ಮೊದಲಿಲ್ಲ

ಮದುವೆ ನಡೆದ ಮನೆಯ ಸೊಸೆಯರ ಬಗೆಗೆ ಹೇಳುತ್ತಾ ಇವರು ಸಾಮಾನ್ಯ ಸೊಸೆಯರಲ್ಲ ಘಾಟಿ ಹೆಂಗಸರು. ಈ ಕಾರಣದಿಂದ ಯಾರು ಮನೆಗೆ ಬರದೇ ಹೋಗುತ್ತಾರೆ.

ಈ ಮನೆಯ ಸೊಸೆಯಾರೂ ಇನ್ನೆಂಥಾ ಶರಣೇರೊಽ
ಈ ಮನೆಯ ಕಾಪಾಡರೆಂಬ ಗಿಳಿ ಬರದು
ಅಕ್ಕ ಬಾರೆಂಬ ಗಿಳಿಬರದು.

ಎಲ್ಲಿ ಪ್ರೀತಿ ವಾತ್ಸಲ್ಯ ತುಂಬಿ ತುಳುಕುವುದೋ ಅಲ್ಲಿ ಸಮೃದ್ಧಿ ಇರುತ್ತದೆ,

ಇಂಥ ವಾತಾವರಣದಲ್ಲಿ ಏನೆಲ್ಲ ಇರುತ್ತವೆ ಎನ್ನುವುದನ್ನು ಜನಪದರು ಬಹಳ ಚೆನ್ನಾಗಿ ಗೀತೆಗಳಲ್ಲಿ ಕಟ್ಟಿಕೊಡುತ್ತಾರೆ.

ಕಲ್ಯಾಣದ ಮನೆಗೆಲ್ಲರೂ ಹೋಗೋಣ ಬನ್ನಿ
ಮಲ್ಲೆ ಗಂಗಮ್ಮಾ ಗೌವುರಮ್ಮಾ
ಮಲ್ಲೆ ಗಂಗಮ್ಮಾ ಗೌವುರಮ್ಮಾ ಶಿವ-ಶರಣೇಯರೂ
ಕಲ್ಯಾಣದ ಮನೀಗೆ ನಡೆದರೂ
ಹೊತ್ತಾ ತರಿತರದಾಽ ಮುತ್ತೀನಾ ತಲಬಾಗಲು
ಇಂಬಾಽ ಬಾಳೀಮರ ಅರಮನೆಯ
ಇಂಬಾಽ ಬಾಳೀಮರ ಅರಮನೆಯ ಮಕ್ಕಳು
ಹಿಂಗೇ ಹಿಂಗೇ ಏರಂಬ ಕೇಳಿ ಗಿಣಿ ಬರದು

ಆರಂಗಳಾನಾ ಮನೀಯಽ ಹವಳದಾಽ ತಲಬಾಗಿಲು
ಸುತ್ತಾಽ ಪರಿವಾರ ಅರಮನೆಽ
ಸುತ್ತಾಽ ಪರಿವಾರಽ ಅರಮನೆಯಾ ಮಕ್ಕಳಾಽ
ಅಕ್ಕಾ ಏರಂಬ ಕೇಳಿಽ ಗಿಣಿ ಬರದು.

ಉಪ್ಪಾರರ ಮೇಲೆ ಬಸವಣ್ಣನ ಪ್ರಭಾವವಿರುವುದು ಈ ಕೆಳಗಿನ ಹಾಡುಗಳಿಂದ ತಿಳಿದುಬರುತ್ತದೆ. ಬಸವಣ್ಣ ಇವರಿಗೆ ನೆಲಕ್ಕಿಂತ ಮನೆಯವರಿಗಿಂತ ಹೆಚ್ಚಿನವನಾಗಿ ಕಂಡು, ಇದೇ ಮದುವೆಯನ್ನು ಯಾವುದೇ ವಿಘ್ನವಿಲ್ಲದೇ ನಡೆಸಿಕೊಡುತ್ತಾನೆ ಎನ್ನುತ್ತಾರೆ.

ಭೂಮೀಗೆ ಹಿರಿಯರಾ ಬಸವಣ್ಣಾಽಽ
ಮನೀಗೇ ಹಿರಿಯಾಽ ಬಸವಣ್ಣಾಽಽ
ಮಾಡೇನಲ್ಲೇಽಽ ಮಲ್ಲೀಕಾರ್ಜುನನಾ ಮದುವೇಯಾಽಽ

**ಗಂಗೆ ಶಾಸ್ತ್ರದ ಹಾಡು:** ಜನಪದರ ಬದುಕಿನಲ್ಲಿ ನೀರಿಗೆ ಪವಿತ್ರವಾದ ಸ್ಥಾನವಿದೆ. ಈ ಕಾರಣಕ್ಕಾಗಿ ಗಂಗೆ ಅವರ ಬದುಕಿನ ಎಲ್ಲಾ ಆಚರಣೆಗಳಲ್ಲೂ ಪ್ರತೀಕವಾಗಿ ಪೂಜೆಗೊಳ್ಳುತ್ತಾಳೆ. ನೀರು ಮಂಗಳದ ಸಂಕೇತ. ಶುಭ ದಿನಗಳಲ್ಲಿ ಮಳೆಹನಿಗಳು ಭೂಮಿಗೆ ಉದುರಿದರೆ ಅದು ಮಂಗಳಕರವಾಗಿರುತ್ತದೆ ಎಂದು ನಂಬುತ್ತಾರೆ. ಮಲಿನತೆಯನ್ನು ತೊಳೆದು ಶುದ್ಧಮಾಡುವ ಗಂಗೆಯನ್ನು ಕುರಿತು ಭಕ್ತಿ ಗೌರವಗಳಿಂದ ಹಾಡುತ್ತಾರೆ. ಗಂಗೆಯನ್ನು ಪೂಜಿಸಲು ಹೆಂಗಸರೇ ಹೋಗುತ್ತಾರೆ. ಹೀಗೆ ಹೋಗುವಾಗ ಶೃಂಗರಿಸಿಕೊಂಡು ಹೋಗುವುದು ವಾಡಿಕೆ ಅವರ ಉಡುಗೆ ತೊಡುಗೆಗಳ ಬಗೆಗೂ ಹಾಡಿನಲ್ಲಿ ಸ್ಥಾನವಿದೆ.

ನಿಂಬಿ ಹಣ್ಣಿನಂಗೆ
ನಂಬಿ ಕಟ್ಟೀದಾ ಕುರುಬ
ಅಂದುಲ ಕೆರೆಯವರ ಅರಮನೆ ||ಪ||
ಅಂದು ಕೆರೆಯಾರನೇ ಮಕ್ಕಾಳೂ

ಗಂದಲ ಬಟ್ಟಿಳುದೇ ಬರುದಲ್ಲಾ
ಎಲಿಕೈನಂಗೆ ನಂಬಿ ಕಟ್ಟೇದ ತುರುಬು
ಅಂದುಲ ಕೆರೆಯವರ ಅರಮನೆ ||ಪ||

ಗಂಗೆಯನ್ನು ಪೂಜಿಸಿ ತರಲು ಐದು ಜನ ಮುತ್ತೈದೆಯರು ಹೋಗುತ್ತಾರೆ. ಇದು ಗಂಡಿನ ದಿಬ್ಬಣ ಬರುವುದಕ್ಕಿಂತ ಮುಂಚೆ ಅಂದರೆ ಧಾರೆಯ ದಿನ ಬೆಳಿಗ್ಗೆ ಈ ಶಾಸ್ತ್ರ ನಡೆಯುತ್ತದೆ. ಗಂಗೆಯನ್ನು ನಾನಾ ರೀತಿಯಲ್ಲಿ ಹೊಗಳಿ ಹಾಡುವುದರ ಜೊತೆಗೆ ಅವಳ ಮನವನ್ನು ಒಲಿಸುವಂತೆ ಮಾಡುತ್ತಾರೆ.

ಗಂಗೆಯ ದಡಕೆ ಹೋದರು ಮುತ್ತೈದೆಯರು
ಸಿಂಬಿಯಾ ತರುಗ ಗುಡಿಸಿ ಗುದ್ದೇ ಮಾಡಿ
ಬಾವಿಸಿ ಗಂಗಮ್ಮನಾ ಕರೆದರು
ಅತ್ತಾ ಹರಿಯೇ ಗಂಗೆ ಇತ್ತಾ ಹರಿಯೇ ಗಂಗೆ
ಹಿಂಗೆ ಬಾರಮ್ಮಾ ದಡಕ್ಕಾಗೀ
ತಾವು ತಂದಿರಾಯ ಬಂದೀಯಾ
ಬಂಗಾರ ದರಿಸೇವು
ಒಂದೇಲೇ, ಒಂದಡಿಕ್ಕೆ, ಒಂದೇ ತಂಬಿಟ್ಟುಂಡೇ
ಬುದುವೇ ಗಂಗಮ್ಮಾ ನಿಮಚಾಜ.

### 3. ಧಾರೆ ಶಾಸ್ತ್ರದ ಹಾಡು

ಸಾಮಾನ್ಯ ವ್ಯಕ್ತಿಯನ್ನು ಸಮೂಹದಿಂದ ಬೇರೆಯಾಗಿಸಿ, ಗೌರವಿಸಿ ಆ ದಿನ ಆತನನ್ನು ರಾಜನನ್ನಾಗಿ ಮಾಡುತ್ತಾರೆ. ಕೈಗೊಬ್ಬರಂತೆ ಸಹಾಯ ಮಾಡಲು ಸಹಕರಿಸುತ್ತಾರೆ. ಆತ ಆ ದಿನದ ಪೂಜ್ಯನೀಯ ವ್ಯಕ್ತಿಯಾಗಿ ಗೌರವಕ್ಕೆ ಪಾತ್ರನಾಗಿರುತ್ತಾನೆ. ಆತ ಚಂದ್ರನಾಗಿ ತನ್ನ ಬಳಗವನ್ನೊಳಗೊಂಡು ಜೊಡು ಕುದುರೆ ಏರಿಕೊಂಡು ಹೆಣ್ಣಿನ ಮನೆಗೆ ಬರುತ್ತಾನೆ. ಅವಳು ಸಾಮಾನ್ಯ ಹೆಣ್ಣಲ್ಲ. ರಂಭೆ ಅವಳ ಮನೆ ಮುಂದೆಲ್ಲ ಚಪ್ಪರವಿದೆ. ಅದು ಸಾಮಾನ್ಯ ಚಪ್ಪರವಲ್ಲ, ಅರುವತ್ತು ಗಾವುದ. ಅದಕ್ಕೆಲ್ಲ ಹೊಂಬಾಳೆಯಿಂದ ಶೃಂಗರಿಸಿದ್ದಾರೆ. ಅಲ್ಲಿ ಬಂದು ನಿಂತ ಮದುಮಗ ಬೆವರಿದ್ದಾನೆ.

ಹಸುಳೇ ಕಂದಾ ಚಂದ್ರನ ಕರಕೊಂಡು
ಸುತ್ತೇಳು ಬಳಗಾವ ಕರಕೊಂಡು
ಸುತ್ತೇಳು ಬಳಗಾವ ಕರಕೊಂಡು ಕುಮಾರಯ್ಯ
ಹೆಣ್ಣಿದ್ದ ಬಳಿಗೆ ನಡುದಾನೇ ||ಪ||
ಹೂವಾ ಸೊಡಿಕೊಂಡು ಬಳಗಾ ಕೂಡಿಸಿಕೊಂಡು
ಜೋಡುಲ ಕುದುರೇ ಕರಕೊಂಡು
ಜೋಡುಲ ಕುದುರೇ ಕರಕೊಂಡು ಕಂದಯ್ಯ
ರಂಬಿದ್ದಾ ಬಳಿಗೇ ನಡುದಾನೇ
ಅಡರೇಯಾ ಚಪ್ಪರ ಅರವತ್ತು ಗಾವುದಾ
ತೊಡರೇದಾ ಹೊಂಬಾಳು ಬಿದುದಂಗೇ
ಅಡಿಕೆ ಚಪ್ಪರಡಿಯೊ ಬಂದೂ ಎಷ್ಟೋತ್ತಾಯ್ತಾ
ಕಂದಯ್ಯ ಬಾಡೀ ಮುಖಬಾಡಿ

ಅವರಿಗೆ ಮದುವೆಯ ಹೆಣ್ಣು ರಂಭೆಯಾಗಿ, ಸುಂದರಿಯಾಗಿ, ಚೆಲುವೆಯಾಗಿ, ಎಲ್ಲರ ಪ್ರೀತಿಯ ಪಾತ್ರಳಾಗಿ ಕಂಡುಬರುತ್ತಾಳೆ. ಎಂಥವಳೆಂದರೆ ಬಾಳೆ ಹಣ್ಣಿನ ಹಾಗೆ ಮೃದುವಾಗಿಯೂ ಯಾವತ್ತು ತನ್ನ ಅಕ್ಕ ತಂಗಿಯರನ್ನು ಬಿಟ್ಟು ಅರೆಗಳಿಗೆ ಇರಲೊಲ್ಲಳು. ಈ ಕಾರಣದಿಂದಲೇ ಚಪ್ಪರಕ್ಕೆ ಅವಳು ಬರುವುದು ತಡವಾಗಿದೆ. ಇದಕ್ಕೂ ಹೆಚ್ಚಾಗಿ ತನ್ನ ಹೆತ್ತ ತಾಯಿ ತಂದೆಯನ್ನು ಅಗಲಲು ದುಃಖಿಸುತ್ತಾಳೆ.

ಒಳಗಿರುವಾ ಬಾಲೆಯಾ ತಂದಿಕ್ಕೊ ಕೈಗೂಡೀ
ನಿಂಬಿ ಹಣ್ಣಿನಂಗೀ ರೆಂಬೆ ಎದ್ದು ಬರುವಾಗ
ಇಂಬಾ ಬಿಡಿರಯ್ಯ ಜನರೆಲ್ಲಾ
ಈ ಮನೀಯ ಅಕ್ಕತಂಗ್ಯಾರ ಅಗಲಿ ಬರುತಾಳು
ಬಾಳೀ ಹಣ್ಣೀನಂಗೀ ಬಾಬೆದ್ದು ಬರುವಾಗ
ಬಾಜಾ ಬಿಡಿರಯ್ಯ ಎಡ ಬಲಕೆ
ಈ ಮನೀಯಾ ತಾಯ್ತಂದೆ ಅಗಲೀ ಬರುತಾಳೋ

ಇಂಥಾ ದುಃಖಿಸುವ ರಂಭೆ, ಚಲುವೆ, ಅಪ್ರತಿಮ ಸುಂದರಿಯನ್ನು ಅಷ್ಟೇ ಪ್ರೀತಿಯಿಂದ ಚಂದ್ರನಂಥ ನಮ್ಮ ಗಂಡು ಗೆಲ್ಲುವವರಿಯನ್ನು ಸೊಬಾನೆಯ ಹಾಡನ್ನು ಹೇಳುವ ಉಪ್ಪಾರರ ಹೆಂಗಸರು, ಬಾಳೆಹಣ್ಣೇನು ಅದರ ಗೊನೆಯನ್ನೇ ಗೆಲ್ಲುವ ಸಾಮರ್ಥ್ಯವನ್ನು ಹೊಂದಿದ್ದಾನೆ.

ಬಾಳೆ ಹಣ್ಣಾ ಗೆದ್ದಾ ಬಾಳೀ ಕಾಯಿಗೆದ್ದಾ
ಬಾಳೆ ಗೊನೆ ಗೆದ್ದಾ ಕಂದಯ್ಯ

ಹೆಣ್ಣನ್ನು ಗೆದ್ದು ಹೊರಡುವ ಗಂಡು ಸೊಬಾನೆ ಹೆಂಗಸರಿಗೆ ದೊರೆಯ ಮಗನಾಗಿ ಕಂಡು ಬರುತ್ತಾನೆ.

ಬಾಲೆಯ್ಯಾ ಗೆದ್ದು ಹೊರಟಾನೀ
ನಿಂಬೆ ಹಣ್ಣ ಗೆದ್ದಾ ನಿಂಬೆಕಾಯಿ ಗೆದ್ದಾ
ರಂಬೀಯಾ ಗೆದ್ದಾ ದೊರೀಮಗಾ

**ಕಳಸ ಮಾಡುವಾಗ:**

ಎಲ್ಲಾ ಕಾರ್ಯಗಳಲ್ಲೂ ಕಳಸ ಬಹಳ ಮಹತ್ವವನ್ನು ಪಡೆದುಕೊಂಡಿದೆ. ತಟ್ಟೆಯಲ್ಲಿ ಕಂಚಿನ ಚೊಂಬು ಇಟ್ಟು ಅದಕ್ಕೆ ನೀರನ್ನು ಹಾಕಿ, ಕಂಠಸುತ್ತಾ ವೀಳೆದೆಲೆ ಇಟ್ಟು, ಅದರ ಮೇಲೆ ತೆಂಗಿನಕಾಯಿ ಇಡುವ ಪದ್ಧತಿ ಇದೆ (ಕೆಲವು ಕಡೆ ಅಡಿಕೆ ಹೂ (ಹಿಂಗಾರ) ಹಾಲು ತುಪ್ಪ ವೀಳೆದೆಲೆ ಹಾಕಿ ತೆಂಗಿನಕಾಯಿಡುವ ಪದ್ಧತಿ ಇದೆ) ದಿಬ್ಬಣ ಹೊರಡುವಾಗ ಐದುಗಿತ್ತಿಯರಲ್ಲಿ ಒಬ್ಬಳು ಹಿಡಿದು ನಡೆಯುತ್ತಾಳೆ. ಕಳಸ ಹಿಡಿದವರು ಮುಂದೆ ಮುಂದೆ ಸಾಗಿದಂತೆ ಅವಳನ್ನು ದಿಬ್ಬಣದ ಜನ ಹಿಂಬಾಲಿಸುತ್ತಾರೆ. ಇಂಥಾ ಒಂದು ಮಹತ್ವದ ಕಳಸವನ್ನು ಮಾಡುವಾಗ ಅವರು ಪ್ರಕೃತಿಯಲ್ಲಿ ತಮ್ಮ ಇಷ್ಟ ದೇವರನ್ನು ಕಾಣುತ್ತಾರೆ.

ಅಂದಾಗಿರಿ ಚಂದಾಗಿರಿ
ಚಂದಾಕಾ ಮೂಡಲಗಿರಿ
ಮೂಡಲ ಗಿರಿ ತೇರಾ ಹಬ್ಬಕ್ಕೂ
ತಿಮ್ಮಯ್ಯನಾ ಗಿರಿ ತಿರುಪತೀ
ತಿಮ್ಮಯ್ಯನಾ ಗಿರಿ ತಿರುಪತಿ
ಒಳಗಿರುವ ತಟ್ಟೀ ಬಾನ ಮಕ್ಕಳ ಕಣಸಾ
ಅಂದಾಗಿರಿ ಚಂದಾಗಿರಿ
ಒಳಗಿರುವ ಏದ್ ಕಡಿ ಬಾನ್ ಮಕ್ಕಳಾ ಕಳಸು
ಮೂಡಲವೇ ಗಿರಿ ತಿರುಪತಿ ಒಳಗಿರುವ
ಇಂದೀ ಬಾನಮ್ಮಾ ಕಳಸಕ್ಕೆ

ಕಳಸಕ್ಕೆ ಉಪಯೋಗಿಸುವ ವಸ್ತುಗಳು ಅವರು ಪ್ರೀತಿಸುವ ಮಣ್ಣಿನಿಂದಲೇ ಉದಯಿಸಿರುವಂಥದು. ಹೀಗೆ ಮಣ್ಣಿನಲ್ಲಿ ಉದಯಿಸಿದ್ದರು ಅದರಲ್ಲಿ ಒಂದು ಸೊಗಸನ್ನು ಕಾಣುತ್ತಾರೆ.

ಕೆಸರಾಗೀ ಹುಟ್ಟೋದೀ ಕೆಸರಾಗೆ ಬೆಳೆಯೋದೆ
ಹಸನುಳ್ಳೆ ಮರಕ್ಕೆ ತೊಡಕ್ಕ
ಹಸನುಳ್ಳೆ ಮರಕ್ಕಾ ತೊಡದೆದಾ ಹೊಂಬಾಳೆ
ನಾರೇರೂ ತಂದಿರುಡೀ ಕಣನೀ
ಅಂದಾಗಿರಿ ಚಂದಾಗಿರಿ

**ಅರಿಶಿಣೆಣ್ಣೆ ಶಾಸ್ತ್ರ**

ಗಂಡು ಹೆಣ್ಣುಗಳಿಗೆ ಸ್ನಾನಕ್ಕಿಂತ ಮೊದಲು ಅರಿಶಿಣೆಣ್ಣೆಯನ್ನು ಭುಜ, ಕೈ, ಮುಖ, ಕಾಲುಗಳಿಗೆಲ್ಲ ಸವರಿ ಆನಂತರ ಸ್ನಾನಮಾಡಿಸುತ್ತಾರೆ. ಹೀಗೆ ಮಾಡುವ ಸ್ಥಳವನ್ನು ಪವಿತ್ರಗೊಳಿಸಿಕೊಂಡಿರುತ್ತಾರೆ. ಐದು ನೀರು ತುಂಬಿದ ಬಿಂದಿಗೆಗಳನ್ನು ಚೌಕಾಕಾರದಲ್ಲಿ ಇಟ್ಟು;ಅವುಗಳ ಕಂಠಕ್ಕೆ ದಾರವನ್ನು ಸುತ್ತಿರುತ್ತಾರೆ. ಈ ಐದು ಬಿಂದಿಗೆಗಳ ಮಧ್ಯೆ ಅರಿಶಿಣೆಣ್ಣೆ ಶಾಸ್ತ್ರ ನಡೆಯುತ್ತದೆ. ಇದು ಮದುವೆಯ ದಿನವೇ ನಡೆಯುತ್ತದೆ.

ಗಂಧವನು ಹಚ್ಚಿದರು ದೊರೆಮಗನಿಗೆ
ಸಿರಿಗಂಧ ಚಂದದ ಕೂಡಿಸಿದ ಗಂಧ
ಚಂದಾದಿಂದ ತಂದಿರಿಸಿದ ಗಂಧ
ಅರುಸುಣ ಕುಂಕುಮ ಸೇರಿದ ಗಂಧ

ಶ್ರೀ ಗಂಧವನ್ನು ಹಚ್ಚುವುದರಿಂದ ಮತ್ತು ಅರಿಶಿಣ, ಕುಂಕುಮ ಹಚ್ಚುವುದರಿಂದ ವಧೂವರರು ಸುಂದರವಾಗಿ ಕಾಣುತ್ತಾರೆ ಎಂಬುದು ವೈಜ್ಞಾನಿಕ ಸತ್ಯದಿಂದ ಕೂಡಿಕೊಂಡಿದೆ. ಶ್ರೀ ಗಂಧ, ಅರಿಶಿಣಗಳು ಚರ್ಮವನ್ನು ಹೊಳಪು ಗೊಳಿಸುವುದು ಮಾತ್ರವಲ್ಲದೆ; ಆ ದಿನ ಅತ್ಯಂತ ಸುಂದರವಾಗಿ ಕಾಣಬೇಕು ಎನ್ನುವ ಹಂಬಲ ಬೇರೆ ಇದೆ. ಈ ಕಾರಣದಿಂದ ಶಾಸ್ತ್ರ ಸಮ್ಮತವಾಗಿ ಕಂಡು ಬರುತ್ತದೆ. ಮದುಮಗನ ಸ್ನಾನಕ್ಕೆ ಅಂಬಾರ (ಆಕಾಶಗಳೇ) ಒಂದಾಗಿ ಬಂಗಾರ ಸಿದ್ಧವಾಗಿದೆ.

ಅಂಬಾರಾ ಅಂಬಾರವೆ ಬಂಗಾರದ ಚಂಬೆರಡು ಬಂದ್ಯಾಗೆವೆ
ನಿಂಬೇಯ ಮರದಡಿ ಚಂದಾಕ ಬಲಿಹೂಡಿ
ನಿಂಬೀಯ ಜಳಕಕೆ ದಡ ಹೊರೆ
ಅಂಬಾರಾ ಅಂಬಾರವೆ ||ಪ||
ದೊಡ್ಡೋರನಾ ಮಗನ ಜಳಕ್ಕಕ್ಕಾ ಮಾಡಿಕೊಂಡು
ತನ್ನೂರಿಗೂ ಗಂಗೀ ತೆರುಳ್ಯಾಳೀ
ಅಂಬಾರಾ ಅಂಬಾರತಿ ||ಪ||
ಹವಳಾದ ಕಿರಿ ಜಗಲೀ, ಹವಳಾದ ಒಲಿ ಜಗಲಿ
ಹವಳ ಕೆತ್ತಿಸಿದಾ ಒಲಿಯಾ ಜಗಲೀ
ಅಂಬಾರ ಅಂಬಾರವೇ ||ಪ||

ಸ್ನಾನಮಾಡಿ ಹರಿದ ನೀರು ಉಪಯೋಗಕ್ಕೆ ಬರುವಂತೆ ಮಾಡಿಕೊಳ್ಳುತ್ತಾರೆ. ಹೇಗೆ ನೀರು ಹರಿಯುತ್ತಿದೆ ಆ ಕೆಲಸವನ್ನು ಯಾರು ಮಾಡುತ್ತಿದ್ದಾರೆ ಎನ್ನುವ ಎಲ್ಲಾ ವರ್ಣನೆಗಳು ಈ ಹಾಡಿನಲ್ಲಿ ಜೀವ ಪಡೆಯುತ್ತವೆ.

ಬಾಗಲಾಗೀ ಒಯ್ದು ನೀರೂ ಬಾಗಿಲಿಗೇ ಹರಿದಾಲೇ
ಬಾಗಲಾಗೀ ಅವರಾ ಹಿರಿಯಣ್ಣಾ
ಅಂಬಾರ ಅಂಬಾರವೇ ||ಪ||
ಬಾಗಿಲ್ಲವೇ ಅವರಕ್ಕ ಹಿರಿಯಣ್ಣ-ಕಿರಿಯಣ್ಣ
ಬಾಳಿಗೂ ತಿರುಗಿಸ್ಯಾನೇ ಹರಿನೀರಾ
ಅಂಬಾರ ಅಂಬಾರವೇ ||ಪ||
ರತ್ನಾದ ಕಿರಿಜಗಲೀ ರತ್ನಾದ ಒಲಿ ಜಗಲಿ
ರತ್ನಾ ಕೆತ್ತಿಸಿದಾ ಒಲಿ ಜಗಲಿ
ಅಂಬಾರ ಅಂಬಾರವೇ ||ಪ||

ಹರಿಯುವ ನೀರನ್ನು ಗೌರವಿಸಿ ಅವಳ ಪೂಜೆಯನ್ನು ಮಾಡಿ ಕಳುಹಿಸಿಕೊಟ್ಟ ಗಂಗೆಯ ಅನೇಕ ಕಷ್ಟಗಳಿಗೆ ಗುರಿಯಾಗಬೇಕಾಗಿದೆ. ಅವಳಿಗೂ ನಮ್ಮ ಹಾಗೆ ಕೇಳುವವರಿದ್ದಾರೆ.

ದೊಡ್ಡೋರ ಮಗನ ಜಳಕ ಮಾಡಿಕೊಂಡು
ತನ್ನೂರಿಗೂ ಗಂಗೇ ತೆರುಳ್ಯಾಳೀ
ಅಂಬಾರ ಅಂಬಾರವೇ ||ಪ||
ಬಾಗೂರಿನ ದಾರೀಲಿ ತಡಿದು ಕೇಳ್ಯಾವಲ್ಲೇ
ಯಾವಲ್ಲೋಗಿದ್ದೇ ಶಿವಗಂಗೆ
ಅಂಬಾರ ಅಂಬಾರವೇ ||ಪ||
ದೊಡ್ಡೋರನೇ ಮಗನಾ ಜಳಕಾ ಮಾಡಿಕೊಂಡು
ತನ್ನೂರಿಗೂ ಗಂಗೆ ತೆರುಳ್ಯಾಳೇ
ಅಂಬಾರ ಅಂಬಾರವೇ ||ಪ||

**ವೀಳೆದ ಶಾಸ್ತ್ರ**

ಉಪ್ಪಾರರ ಮದುವೆಯಲ್ಲಿ ವೀಳೆಶಾಸ್ತ್ರ ಪ್ರಮುಖವಾದುದು. ಇದು ಒಪ್ಪಂದಕ್ಕೆ ಮಾಡುವಂಥ ಒಂದು ಶಾಸ್ತ್ರ. ವೀಳೆಯನ್ನು ಒಪ್ಪಿಸಿ ಸೀರೆ ಮುಂತಾದ ಉಡುಗೊರೆಗಳನ್ನು ನೀಡಿ ಸಂಬಂಧವನ್ನು ಮಾಡಿಕೊಳ್ಳುವುದೇ ಮುಖ್ಯವಾಗಿದೆ ವೀಳೆದೆಲೆಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನವುಂಟು. ವೀಳೆಶಾಸ್ತ್ರ ನಡೆಯುವ ಸಮಯದಲ್ಲಿ ಸೋಬಾನೆ ಹಾಡುಗಾರ್ತಿಯರು ಹೀಗೆ ಹಾಡುತ್ತಾರೆ.

ಚಿಮ್ಮದ ವಳದ ಕೀಲು
ಚಿನ್ನದ ಉಂಗುರದ ಬೆರಳಿನಾ ಕೋಲು
ಕರೆದೆ ಬಾರಯ್ಯ ಗೌವುಡರ
ಪುತ್ರನ ಇಳ್ಳೆವಕ್ಕಾ ಮಲ್ಯಾರು ಬರಬೇಕು
ದೂಳಗುಳನೇ ಆಯಾ ಹಿಡಿದಾರೆ
ದೂಳಗುಳನೇ ಆಯಾ ಹಿಡಿದಂತಾ ಮಾನ್ನವುರೇ
ಅವರೇಯಾ ಮೊದಲೀಗಾ ಬರಬೇಕು

ವೀಳೆಕೆ ಬಂದವರು ಸಾಮಾನ್ಯರಲ್ಲ ಅವರು ವಜ್ರ ವೈಡೂರರ್ಯಗಳನ್ನು ತಂದಿದ್ದಾರೆ. ಹೇಗೆ ಬರುತ್ತಾರೆ ಅಂದರೆ;

ಒಂದು ಕರಿಯ ಕಂಬಳಿ ಒಂದು ಬಿಳಿಯ ಕಂಬಳಿ
ಒಂದೂರ ಕೊಂಡು ರತುನಾವಾ
ಒಂದೂರ ಕೊಂಡಾ ರತುನಾವ ಕಂಬಳಿಯ ಮೇಲೆ
ಬಂದು ಕುಂತಾರೆ ಗೌವುಡರು
ಎರಯಾ ಪಿರಿಯಾ ಅಂಗೈಕರಿಯವೇ
ವಾವಾಕ್ಕೆ ಪಡಿಯಾ ಹಿಡಿಕೊಂಡು
ಮಾನದವರಾ ಪುತ್ರಯ್ಯ ಅಡಿಕೆ ಅಳೆದಾನೇ

ಬಂದ ಸಮೂಹವನ್ನು ಹವಳಗಳಿಗೆ ಹೋಲಿಸುವುದು ಅದ್ಭುತವಾಗಿದೆ.

ಹವಳಾದ ಗುಲಾಬಿ ಕೆಂಪನ್ನಾ ಗುಲಾಬಿ
ಕೆಂಪುಗುಲಾಬಿ ಚೆರತಂಗೆ ಮಾನ್ನವ್ವರಾ
ಬಿರುದೇಯ್ಯ ಬೀದ್ಯಾಗ್ಯ ನೆಡೆದಾಲೇ
ಹೆಗಲ ಮೇಲಿನೊಲ್ಲಿ ಮಲ್ಲಿಗೊವಿನಂಗೇ
ಚಂದಾಕೆ ಪಡಿಯಾ ಹಿಡಕೊಂಡು
ಮನ್ನ ಪುತ್ರಯ್ಯ ಎರಿಯಾ ತಿರುವ್ಯಾನೆ

ಮದುವೆಯ ಸಂದರ್ಭದಲ್ಲಿ ಇನ್ನೂ ಅನೇಕ ತರದ ಹಾಡುಗಳನ್ನು ಹೇಳುತ್ತಾರೆ. ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು ಜರಿಯುವ ಹಾಡುಗಳು ಇಲ್ಲಿ ವಿಶೇಷ ಪ್ರಾಶಸ್ತ್ಯ ಪಡೆದುಕೊಂಡಿವೆ.

ಹನ್ನೆರಡು ವರಸಾದ ಹುಡುಗಾ
ಕೆನ್ನೇಗೆ ಬಂದಾವೆ ಮುದಿಸೀರೆ
ಮೂಲಂಗಿ ಹಣ್ಣಿನಂಗಟ್ನೆ ಹುಡುಗಾ

ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಜರಿಯುವ ರೀತಿ ಇದಾಗಿದೆ.

ಚಿನ್ನಾದಂತ ಹುಡುಗನಿಗೆ
ಇಂತಾ ನಾರಿ ತರಬೌದೆ
ಕಾಗೆ ರೂಪ ಗೂಗೆ ರೂಪ

ಈ ರೀತಿಯಲ್ಲಿ ಒಬ್ಬರು ಇನ್ನೊಬ್ಬರನ್ನು ಜರಿದುಕೊಂಡು ಮದುವೆಗೆ ಬಂದವರನ್ನೆಲ್ಲ ನಕ್ಕು ನಗಿಸುತ್ತಾರೆ. ನವುರಾದ ಹಾಸ್ಯದಿಂದ ಕೂಡಿದ ಈ ಹಾಡುಗಳು ಮದುವೆಯ ಹಾಡುಗಳಲ್ಲಿ ವಿಶೇಷವಾಗಿ ಗಮನಿಸಬೇಕಾದವು. ನಾನು ಮೇಲು ನೀನು ಮೆಲು ಎಂದು ಅವಕಾಶವಿರುವ ಈ ಜರಿಯುವಿಕೆಯಲ್ಲಿ ಅಷ್ಟೊಂದು ಅರ್ಥಸಾಂದ್ರತೆ ಇರದಿದ್ದರೂ ಅಲ್ಲಿಯ ಪದಗಳ ಮೇಳ, ರಸಿಕತೆಯ ಮೆರಗು ಇವೆಲ್ಲಕ್ಕೂ ಹೆಣ್ಣು ಮಕ್ಕಳ ಪಾಂಡಿತ್ಯವನ್ನೂ, ಚಾಕ ಚಕ್ಯತೆಯನ್ನು ಗಮನಿಸಬಹುದಾಗಿದೆ.

**ಒಸಗೆ ಶಾಸ್ತ್ರದ ಹಾಡುಗಳು:**

ಹೆಣ್ಣಿನ ಜೀವನದಲ್ಲಿ ಬಹು ಪ್ರಮುಖ ಎಂದರೆ ಆಕೆ ದೊಡ್ಡವಳಾಗುವುದು. ಹೀಗೆ ಹೆಣ್ಣೊಬ್ಬಳು ದೊಡ್ಡವಳಾದಾಗ ಹಾಡುವ ಹಾಡುಗಳಿಗೆ 'ಒಸಗೆಯ ಹಾಡು'ಗಳು ಎಂದು ಕರೆಯುತ್ತಾರೆ. ಈ ಒಸಗೆಯ ಕಾರ್ಯವು ಮಂಗಳಕರವಾದದ್ದೇ. ಆದ್ದರಿಂದ ಈ ಹಾಡುಗಳನ್ನು ಸೋಬಾನೆಯ ಪದಗಳೆಂದೇ ಕರೆಯಲಾಗಿದೆ. ಫಲ ಕೊಡುವ ಮರದ ಬುಡದಲ್ಲಿ ತಮ್ಮ ಮಗಳು ಮೈನೆರೆದ ಸುದ್ದಿಯನ್ನು ಕೇಳಿದ ಹೆತ್ತವರಿಗೆ, ಒಡಹುಟ್ಟಿದವರಿಗೆ ಹಿರಿಯರೆಲ್ಲರಿಗೂ ಅದೊಂದು ರೋಮಾಂಚನದ ಘಳಿಗೆಯಾಗಿರುತ್ತದೆ. ಅವರು ಹೂ ಕಾಯಿಗಳನ್ನು ಹಿಡಿದು ಆ ಹೆಣ್ಣಿಗೆ ನೀರೆರೆಯುತ್ತಾರೆ.

ಅಗಳಿ ಮನೆಯವುರಾ ಬುದ್ಧಿವಂತರ ಮಗಳು
ವಜ್ರ ಮಾಣಿಕದ ಮಲಕೇನಾ
ವಜ್ರ ಮಾಣಿಕುದನೇ ಮುತ್ತಿನಾ ಚಂಡೇ
ಗುದ್ದಾಡುತಾ ಬಾರೇ ಜಳಕಕೇ
ಸುಕ್ರು ಮಾಡುವಾಗ ಹಿಪ್ಪೆಗೋಗುದಾಗ
ಮುಕ್ಕಣ್ಣೇಶ್ವರ ಶಿವಪೂಜೆ
ಮುಕ್ಕಣ್ಣೇಶ್ವರ ಶಿವಪೂಜೆಗೋಗುವಾಗ
ನಿಸ್ತ್ರೇಯರು ಗಣಿಯಾ ಎರೆದಾರೊ
ಪುತ್ತುಗಾ ಹೊಯ್ಯದಾ ನೀರೂ ಹಬ್ಯಾಗ ಹರಿದಾವ್ಯಾ
ಹಟ್ಯಾಗಾ ಅವರಾ ಹಿರಿಯಣ್ಣಾ
ನಿಂತಗಾ ಕಂಡೂ ಬಾಳೆಗೂ ತಿರಿವ್ಯಾನೇ ಹರಿನೀರಾ
ಬಾಳೆಗೂ ತಿರುವ್ಯಾನೇ ಹರಿನೀರಾ-ಕಿರಿನೀರಾ
ಸುಕ್ರು ಮಾಡುವಾಗ ಹಿಪ್ಪೆಗೋಗುವಾಗ
ನಂದೀಶ್ವರುನಾ ಶಿವಪೂಜೆ
ನಂದೀಶ್ವರುನಾ ಪೂಜೆಗೆ ಹೋಗುವಾಗ
ರಂಚೀಗೆ ಗಣಿಯಾ ಎರೆದಾರೆSS
ಹಂಡೇದೂ ನೀರಾ ತುಂತುಂಬಿ ಹೊಯ್ಯುವಾಗ
ನಿಸ್ತ್ರೇಯಾ ಮುಂಗುರುಳೇ ನೆಸಿವಲ್ಲು
ಅಣ್ಣಯ್ಯ ಬೇಗನೆ ಶಿವಗಂಗೆ ಕರೆಸಯ್ಯ
ಕೂಟ್ಯೋರಾ ಗಂಗೇಯಾ ತಪ್ಪಾನಾ ಪರಿ ಕೇಳಿ

ದೊಡ್ಡೋರಾ ಮಾಗಳೇ ಜಳಕಾಕೇ
ದೊಡ್ಡೋರಾ ಮಗಳ ಜಳಕಾ ಮಜ್ಜನಾ ಮಾಡಿ
ಕಟ್ಟೂರಿಗೊ ಗಂಗೆ ನಡೆದಾಳೇ

ಅಂದು ಹೆಣ್ಣಿಗೆ ಆದ ಮೈಲಿಗೆಯನ್ನು ಕಳೆಯಲು ಗಂಗೆಯ ಪಾತ್ರ ಬಹುಮುಖ್ಯವಾದುದು. ಹೆಣ್ಣು ಫಲ ಕೊಡುವ ಮರದ ಬುಡದಲ್ಲಿ ಮೈನೆರೆಯುವುದು, ಹಣ್ಣು ಕಾಯಿಗಳನ್ನು ಕೊಟ್ಟು ಅವಳಿಗೆ ನೀರೆರೆಯುವುದು, ಅವಳಿಗೆ ಸ್ನಾನ ಮಾಡಿಸುವಾಗ ಆ ನೀರು ಧಾರಾಕಾರವಾಗಿ ಹರಿಯುವಾಗ ಅವಳ ಅಣ್ಣ ಆ ನೀರನ್ನು ಬಾಳೆಯ ತೋಟಕ್ಕೆ ತಿರುಗಿಸುತ್ತಾನೆ. ಹೊಸ ಸೀರೆ ಕುಬುಸಗಳ ಜೊತೆಯಲ್ಲಿ ಬಗೆ ಬಗೆಯ ಹೂ, ಹಣ್ಣು ಕಾಯಿಗಳನ್ನಿಟ್ಟು ಉತ್ತುತ್ತೆ, ದ್ರಾಕ್ಷಿ, ಬೆಲ್ಲದಚ್ಚು ಕೊಬ್ಬರಿಬಟ್ಟಲು ತೆಂಗಿನಕಾಯಿ ಮುಂತಾದ ಪದಾರ್ಥಗಳನ್ನು ಸೇರಿಸಿ ಮಡಿಲು ದುಂಬಿ ಹೆಣ್ಣಿಗೆ ಶುಭಕೋರುವ ದೃಶ್ಯ ರಮಣೀಯವಾಗಿರುತ್ತದೆ. ಪುಷ್ಪವತಿಯಾದ ಹೆಣ್ಣಿಗೆ ಮಡಿಲು ತುಂಬುವುದು ಮುಂದೆ ಫಲವತಿಯಾಗಲೆಂಬ ಆಶಯದಿಂದ. ಮಡಿಲು ದುಂಬಲು ಬಳಸುವ ಪರಿಕರಗಳು ಫಲ ಸಮೃದ್ಧಿಯ ಸಂಕೇತಗಳೇ ಆಗಿವೆ.

ಈ ಹಾಡುಗಳಲ್ಲಿ ನೀರೆರೆಯುವ ಕಾರ್ಯದಲ್ಲಿ ನೆರೆಹೊರೆಯ ಸುಮಂಗಲೆಯರು ಸಂಭ್ರಮ ಸಡಗರಗಳಿಂದ ಪಾಲ್ಗೊಳ್ಳುವುದು, ಫಲ ಬರುವ ಮರಗಳನ್ನು ಮುಟ್ಟಿ ಬರುವುದು, ಹೆಣ್ಣಿಗೆ ಹುಗ್ಗಿಅನ್ನ ಮಾಡಿ ಬಡಿಸುವುದು, ಮಡಿಲುದುಂಬುವುದು, ಹೊಸ್ತಿಲು ಪೂಜಾಕಾರ್ಯ ನಿರ್ವಹಿಸುವುದು ಸೋದರ ಮಾವಂದಿರು ಮತ್ತು ಬಂಧು ಬಳಗದವರು ಪೈಪೋಟಿಯಿಂದ ಉಡುಗೊರೆ ನೀಡುವುದು, ಹೆಣ್ಣು ಸೋದರ ಮಾವನ ಮನೆಗೆ ಹೋಗುವುದು ಈ ಎಲ್ಲ ಕ್ರಿಯೆಗಳಲ್ಲೂ ಉಪ್ಪಾರರ ಸಂಸ್ಕೃತಿ ಪ್ರತಿಬಿಂಬಿತವಾಗಿದೆ. ಒಸಗೆಯ ಪದಗಳು ಸುಂದರ ವರ್ಣನಾತ್ಮಕ ಗೀತೆಗಳಾಗಿವೆ.ಒಸಗೆಯ ಸಂಪ್ರದಾಯವನ್ನು ಅವು ಸವಿವರವಾಗಿ ವರ್ಣಿಸುವುದರ ಜೊತೆಗೆ ಅದರ ಸಂಭ್ರಮ ಸಡಗರಗಳನ್ನೂ ಚಿತ್ರಿಸುತ್ತವೆ..... ಸಾಮಾಜಿಕ ನಡಾವಳಿಗಳ ರೀತಿನೀತಿಗಳನ್ನು ಇವು ಸಮರ್ಪಕವಾಗಿ ಪರಿಚಯಿಸುತ್ತವೆ. (ಪರಮ ಶಿವಯ್ಯ ಜೀ.ಶಂ.:1978:51) ಉಪ್ಪಾರರ ಸಂಸ್ಕೃತಿಯ ಒಳ ತಿರುಳನ್ನು ತಿಳಿಯಲು ಈ ಹಾಡುಗಳು ಸಹಾಯಕವಾಗುತ್ತವೆ.

**೫.೨: ವಾರ್ಷಿಕಾವರ್ತನದ ಆಚರಣೆಗಳಲ್ಲಿಯ ಹಾಡುಗಳು:**

ಹಬ್ಬ, ಜಾತ್ರೆಗಳಲ್ಲಿ ಇವರು ಹಾಡುವ ಹಾಡುಗಳನ್ನು ಈ ವಿಭಾಗಕ್ಕೆ ಸೇರಿಸಲಾಗಿದೆ. ತಾವು ನಂಬಿದ ದೇವರನ್ನು ಭಕ್ತಿಯಿಂದ ಹಾಡುವುದರ ಜೊತೆಗೆ ಕುಣಿದು ಹರಕೆಯನ್ನು ಸಲ್ಲಿಸುವುದನ್ನು ಇಲ್ಲಿ ಕಾಣಬಹುದು. ತಾವು ನಂಬಿಕೊಂಡು ಬಂದ ವ್ರತಗಳಲ್ಲಿ ಯಾವುದೇ ತೊಂದರೆ ಆಗದಿರಲಿ ಎನ್ನುವ ಬೇಡಿಕೆಯನ್ನು

ಮುಂದಿಡುತ್ತಾರೆ. ಮೈಸೂರು, ಮಂಡ್ಯ ಮತ್ತು ಹಾಸನ ಉಪ್ಪಾರರು ಮಲೆಯ ಪ್ರದೇಶಗಳ ಮಾದೇಶ್ವರನ ಜಾತ್ರೆಗೆ ಹೋಗುವಾಗ ತಮ್ಮ ಕುಲಸ್ಥಾನದ ಮೂಗಪ್ಪ ಮತ್ತು ರಾಮದೈಯನ್ನು ಕುರಿತು ಹಾಡುತ್ತಾರೆ. ಊರಿನಲ್ಲಿ ಕೊಂಡ ಇರುವಾಗಲೂ ಮತ್ತು ಗುಡ್ಡರಿಂದ ಸ್ವಾಮಿಯ ಕಥೆಯನ್ನು ಮಾಡಿಸಿದಾಗಲೂ ಇವರು ಮಹದೇಶ್ವರನ ಕಾವ್ಯವನ್ನು ಹಾಡುತ್ತಾರೆ.

"ಮಾದಯ್ಯ ಮಲ್ಲೀಗೆ ಸರಗೂರಯ್ಯ ಸಂಪಿಗೆ
ಅವರಿಬ್ಬ ರೈಗೋಳು ವನಗೂಡೀ ಬರುವಾಗ
ನಾನೊಬ್ಬಳೆ ಹೋಗಿ ಶರಣೆಂದೇ॥
ಆನೆ ಮೇಲೆ ಮಲ್ಲಯ್ಯ ಹುಲಿಮೇಲೆ ಮಾದೇವ
ಸರ್ಪನ ಮೇಲೆ ಸರಗೂರಯ್ಯ ಬರುವಾಗ
ನಾ ಒಬ್ಬಾನೆ ಹೋಗಿ ಶರಣೆಂದೆ॥
ಸೆಟ್ಟಿ ಸರಗೂರಯನ್ನು ಸತ್ಯ ನೋಡೋರು ಬನ್ನಿ
ನತ್ತೇಲಿ ಕಾಯ ಒಡೆಯೂರು। ಸರಗೂರಯ್ಯ
ಸತ್ಯಾ ಒಳ್ಳೋರು ಶರಣಾರು॥
ಕಾಳಿಂಗ ಸರ್ಪಾನ ಕೆರೆಗೆ ಕರೆದೂ ತಾಯಿ
ಸೆಡೆಮೇಲೆ ಸೀರೆ ಒಗೆಯೋಳು। ರಾಮವ್ವೆ
ನಿನ್ನ ಶರಣತ್ಯ ನಮೂನೆ ತಿಳಿಯದು.

ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳ ಉಪ್ಪಾರರು ಪಾತೇಲಿಂಗನ ತಿಪ್ಪೇರುದ್ರ ಸ್ವಾಮಿಯ ಮತ್ತು ಇವರೇ ಪೂಜಿಸುವ ಗ್ರಾಮದೇವತೆಗಳಿಗೆ ಸಂಬಂಧಿಸಿದ ಹಾಡುಗಳನ್ನು ಆಯಾಯಾ ಜಾತ್ರೆ, ಹಬ್ಬಗಳಲ್ಲಿ ಹಾಡುತ್ತಾರೆ.

ಉಪ್ಪಾರ ಚಿಕ್ಕಣ್ಣನ ನೆತ್ತಿಯ ಮೇಲೆ ಬಂದಯ್ಯ
ಸತ್ಯುಳ್ಳವನೇ ಸಮರಂತ ಪಾತೇಲಿಂಗ
ಉಪ್ಪಾರ ಚಿಕ್ಕಣ್ಣಗೆ ಒಲಿದಾನು'
ಹೊತ್ತಲುಂಟೆ ಎದ್ದು ಸ್ವಾಮಿಯು ಹೊತ್ತುಕೊಂಡು
ಮೂಡಲ ಮುಖವಾಗಿ ಹೊರಟಾನು, ಚಿಕ್ಕಣ್ಣ
ಚಿಕ್ಕ ತೇಕಲವಟ್ಟಿ ಎಂಬ ಬಯಲಿಗೆ,

ಈ ಹಾಡಿನಲ್ಲಿ ಗೊಲ್ಲರ ದೇವರಾದ ಪಾತೇಲಿಂಗನು ಚಿಕ್ಕಣ್ಣನಿಗೆ ಒಲಿದ ಬಗೆಯನ್ನು ಕಾಣಬಹುದು.

**೫.೩. ಪುರಾಣ:**

ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟುಕತೆಗಳೇ ಐತಿಹ್ಯಗಳಾಗುತ್ತವೆ. ಆ ಘಟನೆಗಳನ್ನು ಸಂಪೂರ್ಣವಾಗಿ ಮರೆಸಿ, ದೈವಿಕಾಂಶಗಳು ಕೂಡಿಕೊಂಡು, ಅದ್ಭುತವಾಗಿ ಬೆಳೆದು ಅವೆಲ್ಲ ಎಂದೋ ಒಂದು ಕಾಲದಲ್ಲಿ ನಡೆದುವೆಂಬಂತೆ ಭ್ರಮೆ ಹುಟ್ಟಿಸುವ ಕಥೆಗಳೇ ಪುರಾಣಗಳು. (ದೇಜಗೌ. 1976:159) ಐತಿಹ್ಯಗಳಂತೆ ಪುರಾಣಗಳೂ ಮೊದಲಿಗೆ ಕತೆಗಳೇ ಆಗಿದ್ದವು. ಐತಿಹ್ಯಕ್ಕೆ ಆಧಾರ ಇತಿಹಾಸ ಘಟನೆಗಳಾದರೆ;ಪುರಾಣಕ್ಕೆ ಐತಿಹ್ಯವೇ ಮೂಲ. ಐತಿಹ್ಯಗಳಲ್ಲಿಯಂತೆ ಇಲ್ಲಿಯೂ ಚಿಂತನೆಯೇ ಪ್ರಧಾನ. ಜಗತ್ತಿನ ಸೃಷ್ಟಿಗೆ ಸಂಬಂಧಿಸಿದ ಕಲ್ಪನೆಗಳು ಮತ್ತು ನಂಬಿಕೆಗಳು, ಧಾರ್ಮಿಕ

ಹಾಗೂ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕತೆಗಳು, ದೇವರಿಗೆ ಸಂಬಂಧಿಸಿದ ವಿಷಯಗಳೂ ಪುರಾಣಗಳ ಚೌಕಟ್ಟಿನಲ್ಲಿ ಬರುತ್ತವೆ. ಅನೇಕ ಸಂದರ್ಭಗಳಲ್ಲಿ ಐತಿಹ್ಯಗಳಿಗೆ ವ್ಯತ್ಯಾಸವನ್ನು ಗುರುತಿಸುವುದು ಕಷ್ಟ (Standard Dictionary of Folklore Mythology and begerd. P. 640). ಪುರಾಣಗಳು ರಚನೆಯ ದೃಷ್ಟಿಯಿಂದ ಐತಿಹ್ಯಗಳಿಗಿಂತಲೂ ಪ್ರಾಚೀನವಾದವೆಂದು ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಅವು ಯಾರೂ ಕಂಡರಿಯದ ಸಂಗತಿಗಳನ್ನೊಳಗೊಂಡಿರುತ್ತವೆ. ಹಿಂದಿನ ಯುಗದಲ್ಲಿ ವಾಸ್ತವವಾಗಿ ನಡೆದದ್ದೆಂದು ಹೇಳುವ, ಸೃಷ್ಟಿ ಪ್ರಳಯಗಳನ್ನು, ಜನರ, ಅವರ ನಾಯಕರ ಮತ್ತು ದೇವತೆಗಳ ಉಗಮ ವಿಕಾಸ ಮಹಿಮೆಗಳನ್ನು ಜೊತೆಗೆ ಅವರ ಸಾಂಸ್ಕೃತಿಕ ಮತ್ತು ಮತೀಯ ವಿಚಾರಗಳನ್ನು ವಿವರಿಸುವ ಕತೆಯೇ ಪುರಾಣ (Ibid., P. 778) ಸುತ್ತಮುತ್ತ ನಡೆಯುವ ಘಟನೆಗಳಿಗೆ, ಆಚರಿಸುವ ಉಪಾಸನೆಗಳಿಗೆ, ಸಮಾಜದಲ್ಲಿ ಬೇರು ಬಿಟ್ಟಿರುವ ನಂಬಿಕೆಗಳಿಗೆ ಕಾರಣಗಳನ್ನು ಸೃಷ್ಟಿಸುವಲ್ಲಿ ಪುರಾಣಗಳು ಹುಟ್ಟುತ್ತವೆ. ಎಲ್ಲ ಆಖ್ಯಾನಗಳೂ ಪುರಾಣಗಳಾಗುವುದಿಲ್ಲ. ಅವುಗಳಿಗೆ ಮತೀಯ ಹಿನ್ನೆಲೆಯೇ ಬೇಕು;ಮುಖ್ಯ ಪಾತ್ರಗಳು ದೇವತೆಗಳಾಗಿರಬೇಕು. (ದೇಜಗೌ, 1976:174).

ಪ್ರತಿಯೊಂದು ಧರ್ಮವೂ ಜನಪದ ವರ್ಗವೂ ತನಗೇ ಸಂಬಂಧಿಸಿದ ಪುರಾಣಗಳನ್ನು ಅಪಾರ ಸಂಖ್ಯೆಯಲ್ಲಿ ಹೊಂದಿವೆ. ಉಪ್ಪಾರರಲ್ಲೂ ಕೆಲವು ಪುರಾಣಗಳು ಉಳಿದು ಬಂದಿವೆ. ವೃದ್ಧಿಯಲ್ಲಿ ಅವರ ಸೃಷ್ಟಿಯ ಬಗ್ಗೆತಾಳಿದ ಆಸಕ್ತಿ ಕುತೂಹಲಗಳೆಂಥವೆಂಬುದನ್ನು ಹೇಳುವ ಒಂದು ಪುರಾಣ ಹೀಗಿದೆಃ ಒಮ್ಮೆ ಶಿವ ಪಾರ್ವತಿಯರು ಊಟಕ್ಕೆ ಕುಳಿತಿದ್ದರಂತೆ. ಪಾರ್ವತಿಗೆ ಊಟ ರುಚಿಸಲಿಲ್ಲವಂತೆ. ಅದನ್ನು ಗಂಡನಿಗೆ ದೂರಿತ್ತಳು. ಗಂಡನು ಊಟದಲ್ಲಿ ಏನು ಕಡಿಮೆಯಾಗಿದೆ ಎಂದು ಕಂಡು ಹಿಡಿಯಲು ಆಳುಗಳನ್ನು ಬಿಟ್ಟನು. ಆಳುಗಳು ಉಪ್ಪಿನ ಅಂಶ ಕಡಿಮೆಯಾಗಿದೆ ಎಂದು ವರದಿ ಇತ್ತರು. ಆಗ ಶಿವ ಕೂಡಲೇ ಒಬ್ಬನನ್ನು ಸೃಷ್ಟಿಸಿ, ಈ ಕೂಡಲೇ ಉಪ್ಪನ್ನು ತಯಾರಿಸು ಎಂದನಂತೆ ಅದರಂತೆ ಆ ವ್ಯಕ್ತಿ ಉಪ್ಪು ಮಾಡಿ ಕೊಟ್ಟನಂತೆ. ಸ್ವಾಮಿಯು ಭಕ್ತಿಗೆ ಮೆಚ್ಚಿ ವರವನ್ನು ಕೇಳಿಕೊ ಎಂದನಂತೆ. ಆಗ ಆ ವ್ಯಕ್ತಿ ಏನನ್ನೂ ಕೇಳದೆ, ನಿಮ್ಮ ಭಕ್ತನಾಗುತ್ತೇನೆ ಎಂದನಂತೆ. ಅಂದಿನಿಂದ ಅವನ ವಂಶದವರೆಲ್ಲ ಉಪ್ಪಾರರಾದರಂತೆ. ಇನ್ನೊಂದು ಪುರಾಣದ ಪ್ರಕಾರ ಸಗರನ ಅರವತ್ತೆಂಟು ಸಾವಿರ ಮಕ್ಕಳು ಯಜ್ಞವನ್ನು ಹುಡುಕಲು ಹೋಗಿ, ಭೂಮಿಯನ್ನು ಅಗೆದರು. ಅದು ಪಾತಾಳಕ್ಕೆ ಹೋಯಿತು. ಯಜ್ಞಾಶ್ವವು ಕಪಿಲ ಮಹಾಋಷಿಯ ಆಶ್ರಮದ ಆವರಣ ಕ್ಕೆ ಹೋಯಿತು. ಇದನ್ನು ಕಪಿಲನೇ ಅಪಹರಿಸಿದನೆಂದು ಅವನನ್ನು ಕೆಣಕಲು, ಕೋಪಗೊಂಡ ಋಷಿ ಇವರನ್ನು ಸುಟ್ಟು ಬೂದಿ ಮಾಡಿದನು. ಕಾಲಾನಂತರದಲ್ಲಿ ಇವರ ವಂಶದ ಭಗಿರಥ ಮಹಾರಾಜನು ಕಪಿನ ಆದೇಶದಂತೆ ತಪಸ್ಸು ಮಾಡಿ ತನ್ನ ತಾತಂದಿರ ಬೂದಿಯ ಮೇಲೆ ದೇವ

ಗಂಗೆಯನ್ನು ಹರಿಸಿದಾಗ, ಗಂಗೆಯ ಜೊತೆ ಬೂದಿಯು ಸಾಗರವನ್ನು ಸೇರಿ ನೀರೆಲ್ಲ ಉಪ್ಪಾಯಿತು. ಅಂದಿನಿಂದ ಈ ವಂಶದವರು ಉಪ್ಪು ತೆಗೆಯುವ ಕೆಲಸವನ್ನು ಕಾಶಿಯಲ್ಲಿ ಆರಂಭಿಸಿದರು. ಅನಂತರ ಕಾಶಿಯ ಕಡೆಯಿಂದ ದಕ್ಷಿಣ ಭಾರತದ ಕಡೆ ವಲಸೆ ಬಂದರೆಂದು ಈಕತೆ ತಿಳಿಸುತ್ತದೆ. ಈ ರೀತಿ ಇವರ ಕಲ್ಪನೆ ಅರಳಿರುತ್ತದೆ. ಜೀವಿಗಳ ಸೃಷ್ಟಿ ಹೇಗಾಯಿತೆಂದು ಹೇಳುವ ಕತೆಗಳೂ ಇವರಲ್ಲಿವೆ.

ನಾಗನ ಬಗೆಗೆ ಇವರು ಹೇಳುವ ಪುರಾಣವು ಸ್ವಾರಸ್ಯಕರವಾಗಿದೆ. ನಾಗನು ಶಿವನ ಸೃಷ್ಟಿ. ಜನರು ನಾಗನನ್ನು ಪೂಜಿಸಲೆಂದು ಶಿವನು ನಾಗನನ್ನು ಸೃಷ್ಟಿಸಿದನು. ನಾಗನನ್ನು ಪೂಜಿಸಿದರೆ ಜನರಿಗೆ ಮುಕ್ತಿ ಸಿಗುತ್ತದೆ. ಇಲ್ಲದಿದ್ದರೆ ನಾಗಪ್ಪ ಮುನಿಯುತ್ತಾನೆ. ಆಗ ಸಾವು ನಿಶ್ಚಿತ. ಈ ಪುರಾಣವು ಈ ಜನರು ದ್ರಾವಿಡ ಪರಂಪರೆಯವರೆಂಬುದನ್ನು ಸ್ಥಾಪಿಸುತ್ತದೆ.

ಆಕಾಶ, ನಕ್ಷತ್ರ, ಸೂರ್ಯ, ಚಂದ್ರ, ರಾಹುಕೇತುಗಳು ಇನ್ನು ಮುಂತಾದವುಗಳ ಸುತ್ತ ಹೆಣೆದಿರುವ ಅನೇಕ ಪುರಾಣಗಳು ಇವರಲ್ಲಿವೆ. ಈ ಪುರಾಣದ ಅದ್ಭುತ ಕಲ್ಪನೆಗಳು ಇತಿಹಾಸ ಪೂರ್ವಕಾಲದ ಮಾನವನ ಸಂಸ್ಕೃತಿಯ ಸ್ವರೂಪವನ್ನು ತಿಳಿಯಲು ಸಹಾಯಕವಾಗಿವೆ. ಆದಿಮಾನವನ ಮನಸ್ಸಿನ ಪರಿಚಯವೂ ಇವುಗಳಿಂದಾಗುತ್ತದೆ.

**೫.೪. ಕತೆ:**

ಮಾನವನ ಪುರಾತನ ಸಂಸ್ಕೃತಿಯ ಹಾಗೂ ಸಂಪ್ರದಾಯದ ಮೇಲೆ ಹೆಚ್ಚು ಬೆಳಕನ್ನು ಬೀರಬಲ್ಲ ಜಾನಪದ ಪ್ರಕಾರಗಳಲ್ಲಿ ಕಥೆಗಳು ಮಹತ್ವದ ಪಾತ್ರವನ್ನುವಹಿಸುತ್ತವೆ. ಅವು ಮಾನವನ, ಹಾಗೂ ಸಮಾಜ ಮತ್ತು ಸಂಸ್ಕೃತಿ ನಾಗರಿಕತೆಗಳ ಬಗ್ಗೆ ಹೆಚ್ಚು ಪುರಾವೆಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿವೆ. ಅದ್ಭುತ ರಂಜಕತೆಯೇ ಅವುಗಳು ವಿಶಿಷ್ಟ ಗುಣವಾಗಿವೆ. ಆದರೆ, ಅವುಗಳ ಇನ್ನೊಂದು ಮುಖ, ಸಾಮಾಜಿಕ, ಭಾಷಿಕ, ಚಾರಿತ್ರಿಕ ಮನಶಾಸ್ತ್ರೀಯ ಹಾಗೂ ಮಾನವಶಾಸ್ತ್ರೀಯ ದೃಷ್ಟಿಕೋನಗಳ ಮೂಲಕ ಮನುಷ್ಯವರ್ಗದ ಇತ್ಯೋಪತಿಶಯಗಳನ್ನು ಗುರುತಿಸಲು ಕಾರಣವಾಗುವಂಥದು.

ಉಪ್ಪಾರರಲ್ಲಿ ಕಥೆಗಳು 'ಅಜ್ಜಿಕಥೆಗಳು' ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಅಲ್ಲಿ ಅಜ್ಜಿಯರು ಕಥಾಭಂಡಾರಗಳಿದ್ದ ಹಾಗೆ. ಕಥೆಗಾಗಿ ಅವರನ್ನು ಪೀಡಿಸದ ಎಳೆಯರಿಲ್ಲ (ಪರಮಶಿವಯ್ಯ ಜೀ.ಶಂ. 1976 :VIII) ಹೀಗೆವ ಕಥೆಗಳ ಮೇಲೆ ಅಜ್ಜಿ ಪ್ರಭುತ್ವವನ್ನು ಸ್ಥಾಪಿಸಲು ಕಾರಣ ಅವಳಿಗಿರುವ ಬಿಡುವು ಮತ್ತು ಮನೆಮಕ್ಕಳನ್ನು ಸಂಸ್ಕೃತಿಯ ಸರದಾರರನ್ನಾಗಿ ಮಾಡುವ ಸಾಮಾಜಿಕ ಹೊಣೆ ಹಾಗಾಗಿ ಕಥೆಗಳ

ಮೂಲಕ ಅಜ್ಜಿಯು ಮಕ್ಕಳಿಗೆ ಸಾಹಸ ಧೈರ್ಯಗಳನ್ನು ತುಂಬುತ್ತಾಳೆ; ಶಿಕ್ಷಣವನ್ನು ನೀಡುತ್ತಾಳೆ. ಹೀಗೆ ಕಥೆ ಸಾಹಸಕಾರ್ಯಗಳ ಪ್ರಚೋದಕವೂ ಜ್ಞಾನ ಸಂಪಾದನೆಯ ಸಂಕೇತವೂ ಆಗಿದೆ. ಇದರಿಂದ ದೊರಕುವ ಮತ್ತೊಂದು ಪ್ರಯೋಜನವೆಂದರೆ ಬೇಸರ ತರುವಂಥ ಏಕತಾನತೆಯಿಂದ ಬಿಡುಗಡೆ ಒಂದು ರೀತಿಯ ದೈಹಿಕ ಹಾಗೂ ಮಾನಸಿಕ ಸುಖ ವಿಶ್ರಾಂತಿ ..... ಆನಂದವೇ ಪರಮೋಚ್ಚ ಗುರಿ( ಪರಮಶಿವಯ್ಯ ಜೀ.ಶಂ.1976).

ಉಪ್ಪಾರರಲ್ಲಿ ಇರುವ ಜನಪದ ಕಥೆಗಳ ಸಂಗ್ರಹ ಇನ್ನೂ ಆಗಿಲ್ಲ. ಇವರಿಗೆ ಪ್ರತ್ಯೇಕವಾದ ಕತೆಗಳೇನು ಇಲ್ಲ. ಎಲ್ಲಾ ಜನಾಂಗದ ಕಥೆಗಳಲ್ಲಿ ಕಂಡು ಬರುವ ರಮ್ಯ ಅತಿಮಾನುಷ, ಮಾಂತ್ರಿಕ, ಬುದ್ಧಿವಂತಿಕೆ, ವಿನೋದ, ಪ್ರಾಣಿ ವಾಸ್ತವಿಕ ಹಾಗೂ ಒಗಟು ಕಥೆಗಳು ಇಲ್ಲಿ ಕಂಡು ಬರುತ್ತವೆ. ಉಪ್ಪಾರರ ಕತೆಗಳು ಸಾಂಸ್ಕೃತಿಕ ಪರಿಸರದ ದೃಷ್ಟಿಯಿಂದ, ಭಾಷಾ ವೈವಿಧ್ಯದ ದೃಷ್ಟಿಯಿಂದ, ವಿಶಿಷ್ಟಪಾದರಿಗಳ ದೃಷ್ಟಿಯಿಂದ, ಗಮನಾರ್ಹ ವಾದುವುಗಳಾಗಿವೆ. ಭಿನ್ನ ಸಾಂಸ್ಕೃತಿಕ ಸ್ತರಗಳಲ್ಲಿ ಮಾನವನ ನಡುವಳಿಕೆ ಭಿನ್ನವಾಗಿರುವ ದೃಷ್ಟಿಯಿಂದಲೂ ಈ ಕಥೆಗಳು ಅಭ್ಯಾಸಯೋಗ್ಯವಾಗಿವೆ. ಮಲೆನಾಡ ಜನತೆಯ ಸಾಮಾಜಿಕ ಜೀವನದ ಮೂಲಾಂಶವಾಗಿರುವ ಕಥೆಗಳು ಉಪ್ಪಾರರ ಸೃಜನಶೀಲ ಶಕ್ತಿಯನ್ನೂ ಸಂಸ್ಕೃತಿ ಸಂಪನ್ನತೆಯನ್ನೂ ತೆರೆದು ತೋರಿಸುತ್ತವೆ. ಅವರ ಕಥೆಗಳಲ್ಲಿ ಅತಿಥಿ ಸತ್ಕಾರ ವಿಶೇಷತೆಯನ್ನು ಪರಿಚಯಿಸುವ ವಿವರಗಳಿವೆ. ಕಥೆಗಳು, ಹೇಳುವವನ ಭಾಷೆ, ಅನುಭವ, ಅಭಿವ್ಯಕ್ತಿ ರೂಪ, ಸ್ವಭಾವ ವರ್ತನೆಗಳ ಮಾದರಿಯನ್ನೂ ಬಿಂಬಿಸುತ್ತವೆ.

**೫.೫. ಗಾದೆ :**

ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಗಾದೆಯು ಹೆಚ್ಚು ಜನಪ್ರಿಯವಾದುದು. ಜನಸಾಮಾನ್ಯರ ಬದುಕು ಭಾಷೆಗಳಲ್ಲಿ ಗಾದೆಗಳಿರುವಷ್ಟು ಹಾಸುಹೊಕ್ಕಾಗಿರುವ ವಿಷಯ ಮತ್ತೊಂದಿಲ್ಲ. ಊಟಕ್ಕೆ ನಂಬಿಕೆಯು, ಪದಾರ್ಥಗಳು ಹೇಗೆ ಅಗತ್ಯವೂ ಹಾಗೇಯೇ ಮಾತಿಗೆ ಗಾದೆ ಆವಶ್ಯಕ. ಗಾದೆಯು, ಮಾತಿನ ಮಹತ್ವವನ್ನು ಒಂದು ಮಾಡಿ ಅದಕ್ಕೆ ಶಕ್ತಿಯನ್ನೂ ಸಂಪನ್ನತೆಯನ್ನೂ ತಂದುಕೊಡುತ್ತದೆ. ಕೆಲವೇ ಕೆಲವು ಅರ್ಥಗರ್ಭಿತವಾದ ಮಾತುಗಳುಳ್ಳ ಚಿಕ್ಕ ಚೊಕ್ಕ ವಾಕ್ಯವೇ ಗಾದೆ. ಇದು ಅನುಭವದಿಂದ ಸಿದ್ಧವಾಗುವಂಥದು. ನೂರು ಭಾವದ, ನೂರು ವಿಷಯ, ನೂರು ಅಭಿವ್ಯಕ್ತಿ ಭಾವಾರ್ಥಗಳ ಸ್ಫುಟತ್ವಕ್ಕೆ ಶೀಘ್ರ ಬೋಧೆಗೆ ಪರಿಣಾಮ ಸಾಧನೆಗೆ ಅವುಗಳಿಂದ ತುಂಬ ಲಾಭವೊದಗುತ್ತದೆ.(ದೇಜಗೌ, 1976:213) ಜ್ಞಾನದ ಆಗರವೂ ಅನುಭವದ ಸಾಗರವೂ ಆಗಿರುವ ಗಾದೆಗಳು ಕಾಲದಿಂದ ಕಾಲಕ್ಕೆ ಸಂಸ್ಕೃತಿಯನ್ನು ಸರಿಯಾದ ರೀತಿಯಲ್ಲಿ ಪ್ರವಹಿಸುವ ಸಾಧನಗಳಾಗಿವೆ. ಗಾದೆಗಳು ಒಂದು ರಾಷ್ಟ್ರದ ಸಾಮಾಜಿಕ ಸಾಂಸ್ಕೃತಿಕ ಜೀವನ ಚಿತ್ರವನ್ನೊಳಗೊಂಡ ಅಲಿಖಿತ ಇತಿಹಾಸ, ರಾಷ್ಟ್ರದ ಅಂತರಂಗವನ್ನು ಪ್ರತಿಬಿಂಬಿಸುವ ಕನ್ನಡಿ (ಸುಧಾಕರ, 1973:XI) ಶತಶತಮಾನದ ಸಾಮಾಜಿಕ ಚರಿತ್ರೆ ಅವುಗಳಲ್ಲಿ

ತೆರೆದುಕೊಳ್ಳುತ್ತದೆ. ಅವು ಜನಜೀವನವನ್ನು ರೂಪಿಸುವ ನಿರೂಪಿಸುವ ಮಹತ್ಸಾಧನಗಳು; ಅವರ ಭಾವನೆಗಳ ವಿಧಾನಗಳ ಸಂಸ್ಕೃತಿ ನಾಗರಿಕತೆಗಳ ಪ್ರತಿಫಲಗಳು (ರಾಗೌ, 1978:86). ಉಪ್ಪಾರರ ಪ್ರತಿಯೊಂದು ಗಾದೆಯಲ್ಲೂ ಅವರು ಬದುಕುತ್ತಿರುವ ಪರಿಸರದ ಪ್ರಭಾವ, ಸನ್ನಿವೇಶಗಳ ಬೆಳಕನ್ನು ಗುರುತಿಸಬಹುದು. ಅವು ಅಲ್ಲಿಯ ಭಾಷಾ ಕಸುವು ಸಂಪ್ರದಾಯಾದಿ ವಿಶೇಷಗಳನ್ನು ಮೈಗೂಡಿಸಿಕೊಂಡಿದ್ದು; ದಕ್ಷಿಣ ಕರ್ನಾಟಕದ ವೈಶಿಷ್ಟ್ಯವನ್ನು ಎತ್ತಿ ಹೇಳುವಂಥವಾಗಿವೆ. ಅಲ್ಲದೆ, ಅಲ್ಲಿಯ ಬಹುಮಟ್ಟಿನ ಗಾದೆಗಳು ಬೇರೆ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಗಾದೆಗಳೊಂದಿಗೆ ಸಾಮ್ಯವನ್ನು ಸ್ಥಾಪಿಸುತ್ತವೆ. ಜೊತೆಗೆ ವೈಷಮ್ಯವನ್ನು ಸ್ಥಾಪಿಸುವ ಗಾದೆಗಳೂ ಇವೆ. ಉಪ್ಪಾರರು ತಮ್ಮ ಮೂಲ ಕಸುಬು ಬಿಟ್ಟನಂತರ ಜೀವನಕ್ಕಾಗಿ ನಾನಾ ವೃತ್ತಿಯನ್ನು ಅವಲಂಬಿಸಿದ್ದರೂ, ಮುಖ್ಯಕಸುಬನ್ನಾಗಿ ಕೃಷಿಯನ್ನೇ ಹಿಡಿದರು. ಹೀಗೆ ನಾನಾ ಕಾರಣಗಳಿಂದ ಅವರು ರೂಢಿಸಿಕೊಂಡಿರುವ ಗಾದೆಗಳು ಜನರನ್ನೂ ಚಿತ್ರಿಸುತ್ತವೆ. ಹವಾಮಾನ, ಮಳೆ ಸಂಬಂಧಿಸಿವೆ ಗಾದೆಗಳು ಕುಟುಂಬದ ಜೀವನಕ್ಕೆ ಸಂಬಂಧಿಸಿವೆ, ವೈದ್ಯಕ್ಕೆ ಸಂಬಂಧಿಸಿದ ಗಾದೆಗಳು, ನಂಬಿಕೆ, ಆಚರಣೆ, ಪದ್ಧತಿ ಸಂಪ್ರದಾಯದಿಂದ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದ ಗಾದೆಗಳನ್ನು ನೋಡಬಹುದು. "ಉಪ್ಪಾರನ ಮಗನಾದರೆ ಉಪ್ಪಿಲ್ಲದೇ ಉಂಡ್ಯಾನೇ" ವೃತ್ತಿಯ ಮೇಲೆ ಒಮ್ಮೊಮ್ಮೆ ಜನರನ್ನು ಗುರುತಿಸುತ್ತಾರೆ. ಉಪ್ಪನ್ನು ಮಾಡುವವನ ಮಗನಾದರೆ ಊಟದಲ್ಲಿ ಉಪ್ಪನ್ನು ಉಪಯೋಗಿಸೇ ತೀರುತ್ತಾನೆ. ಇದರಿಂದ ಸುಲಭವಾಗಿ ಅವನ ಜಾತಿಯನ್ನು ತಿಳಿಯಲು ಸಾಧ್ಯ

'ಹಸ್ತೆ ಮಳೆ ಹಾರುಸ್ತು; ಚಿತ್ತ ಮಳೆ ಬಾರುಸ್ತು' ಈ ಗಾದೆಯು ಹವಾಮಾನಕ್ಕೆ ಸಂಬಂಧಿಸಿದ್ದು. ಹಸ್ತದ ಮಳೆಯಲ್ಲಿ ಇದರ ನಂತರ ಬರುವ ಮಳೆ ಗಾಳಿಯಿಲ್ಲದ ಸಂಪೂರ್ಣ ನೀರಿನಿಂದ ಹಾರುಸ್ತ; ಬಾರುಸ್ತು -ಪ್ರಯೋಗಗಳೇ ಆ ಎರಡೂ ಮಳೆಗಳ ಸ್ವರೂಪವನ್ನು ಧ್ವನಿಪೂರ್ಣವಾಗಿ ಚಿತ್ರಿಸುತ್ತವೆ.

ಇವರು ವ್ಯವಸಾಯಕ್ಕೆ ಕೋಣಗಳನ್ನು ಬಳಸಿಕೊಳ್ಳುವುದರಿಂದ ಅವುಗಳಿಗೆ ಸಂಬಂಧಿಸಿದ ಗಾದೆಗಳು ಹುಟ್ಟಿಕೊಂಡುವು. 'ಕೀಲು ಸುಳಿ ಕೋಣ ತಂದೆ ಕೂಲಿಸಿ ಹೋಗ್ತದೆ' ಇದು ಒಂದು ನಂಬಿಕೆಯೂ ಹೌದು. ಸಾಮಾನ್ಯವಾಗಿ ಕೋಣಗಳನ್ನು ಕೊಂಡು ತರುವಾಗ ಅವುಗಳ ಸುಳಿ ನೋಡುವುದು ವಾಡಿಕೆ. ಸುಳಿಗಳಲ್ಲಿ ಹೀನಸುಳಿ, ವಕ್ರಸುಳಿ, ಕೀಲುಸುಳಿ ಮುಂತಾಗಿವೆ ಅದರಲ್ಲಿ ಕೀಲುಸುಳಿ ಅಂತ್ಯಂತ ಅನಿಷ್ಟವಾದುದೆಂದು ಅಭಿಪ್ರಾಯವಿದೆ. ಇಂತಹ ಅನಿಷ್ಟವಿರುವ ಕೋಣಗಳನ್ನು ಮನೆಗೆ ತಂದರೆ ಆ ಮನೆ ಏಳಿಗೆಯಾಗುವುದಿವೆಂಬ. ಎಂಬ ನಂಬಿಕೆಯಿದೆ.

ಅಂಕೆಲಿದ್ದ ಹೆಣ್ಣು ಕೇಡಲ್ಲ; ಮಜ್ಜಿಗೆಲಿದ್ದ ಬೆಣ್ಣೆ ಕೇಡಲ್ಲ. ಈ ಗಾದೆಯು ಕುಟುಂಬ ಜೀವನಕ್ಕೆ ಸಂಬಂಧಿಸಿದೆ. ಒಂದು ಕುಟುಂಬವು ವ್ಯವಸ್ಥೆಗೆ ಒಳಪಟ್ಟರೆ ಮುಂದೆ ನಡೆಯುವ ಅನಾಹುತಗಳು ಸಂಭವಿಸುವುದಿಲ್ಲ ಎನ್ನುವುದನ್ನು ಹೇಳುತ್ತಾರೆ. ಕೆಡಲಿರುವ ಹೆಣ್ಣಿಗೆ ಬೆಣ್ಣೆಯನ್ನು ಉದಾಹರಿಸಿರುವುದು ತುಂಬಾ ಮಹತ್ವದ್ದಾಗಿದೆ. ಈ ಸಮಾಜದಲ್ಲಿ ಕಾಲುಜಾರಿದ ಹೆಣ್ಣಿಗೆ ಬೆಲೆ ಇಲ್ಲ. ಅಂತಹ ಹೆಣ್ಣು ಒಂದು ವ್ಯವಸ್ಥೆಯಲ್ಲಿ ಬದುಕಿದರೆ ಗೌರವದಿಂದ ಕಾಣುತ್ತಾರೆ ಯಾರು ಬಳಸುವುದಿಲ್ಲ.

ಆರೋಗ್ಯವೇ ಭಾಗ್ಯ ಈ ಕಾರಣದಿಂದಲೇ ಅನುಭವದ ಮೇಲೆ ರೂಪಿತವಾದ ಜನಪದ ವೈದ್ಯರ ಅತ್ಯಂತ ಹಳೆಯ ಚಿಕಿತ್ಸಾ ವಿಧಾನಗಳನ್ನು, ಸಾಂಪ್ರದಾಯಿಕ ಕ್ರಮಗಳನ್ನು ಇವು ಪರಿಚಯಿಸುತ್ತೇವೆ. 'ಮುಸ್ಸಂಜೇಲಿ ಅಕ್ಕಿ ತಿನ್ನಬಾರದು; ಹಾಳು ಹೊಟ್ಟೆಗೆ ನೀರು ಕುಡಿಬಾರದು' ಇದೊಂದು ಜನಪದ ವೈದ್ಯಕೀಯ ನಿಯಮವನ್ನು ಹೇಳುವ ಗಾದೆ. ಸಂಜೆಯ ಹೊತ್ತಿನಲ್ಲಿ ಅಕ್ಕಿ ತಿಂದರೆ ಊಟ ಸೇರುವುದಿಲ್ಲ. ಈ ಕಾರಣದಿಂದಲೇ ಹೀಗೆ ಹೇಳಿರಬಹುದು. ಗಾದೆಯ ಎರಡನೇ ಭಾಗದಲ್ಲಿ ಹೇಳಿದ 'ನೀರು ಕುಡಿಬಾರದು' ಇದು ಅಷ್ಟು ವೈದ್ಯಕೀಯ ನೆಲೆಯಲ್ಲಿ ಸರಿಕಾಣುವುದಿಲ್ಲ.

ಸಾಂಸ್ಕೃತಿಕ ಮೌಲ್ಯವನ್ನು ಪ್ರತಿಪಾದಿಸುವ ಗಾದೆಗಳು, ಒಂದು ಗುಂಪಿನ ಸಾಂಸ್ಕೃತಿಕ ಇತಿಹಾಸದ ಪುನಾರಚನೆಗೆ ಬಹಳ ಪ್ರಯೋಜನಕಾರಿಯಾಗಿವೆ. ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಗಾದೆಗಳು ಅವು ಉಪಯೋಗಗೊಳ್ಳುವ ಸಂದರ್ಭವನ್ನು ಚಿತ್ರಿಸುವಂತೆಯೇ ಅವು ಅಭಿವ್ಯಕ್ತಿಸುವ ಸಾಂಸ್ಕೃತಿಕ ವಿಷಯಗಳನ್ನು ಹೇಳುತ್ತವೆ. ಉಪ್ಪಾರರ ವಿವಾಹ ಪದ್ಧತಿಗೆ ಸಂಬಂಧಿಸುವಂತೆ ಅನೇಕ ಗಾದೆಗಳು ದೊರೆಯುತ್ತವೆ. 'ಹೆಣ್ಣು ನೋಡ್ಕೊಂಡು ಬಾ ಅಂದ್ರೆ ಮದುವೆ ಆಕಿಂಡು ಬಂದಿದ್ನಂತೆ' ಈ ಗಾದೆ ತರುಣರ ಆತುರ, ಅವಸರದ ನಿರ್ಧಾರಕ್ಕೆ ಹೆಚ್ಚು ಒತ್ತುಕೊಡುತ್ತದೆ. ಆದರೆ, ಮದುವೆಗೆ ಮೊದಲು ಗಂಡು, ಹೆಣ್ಣನ್ನು ನೋಡಿ ಬರುವ ಪದ್ಧತಿ ಪ್ರಚಾರದಲ್ಲಿದ್ದುದನ್ನು ಹೇಳುತ್ತದೆ. ಆಯ್ಕೆ ಹಾಗೂ ನಂಟಸ್ತಿಕೆಯ ವಿಷಯದಲ್ಲಿ ಮನೆಯ ಯಜಮಾನನೇ ಅಂತಿಮ ತೀರ್ಮಾನವಾಗಿರುತ್ತಿದ್ದರೂ ಗಂಡಿಗೆ ಹೆಣ್ಣನ್ನು ಮದುವೆಗೆ ಮೊದಲೇ ನೋಡಬರುವ ಅವಕಾಶ ಇತ್ತೆಂಬುದು ಗಮನಾರ್ಹ.

ಜೀವನದ ಬೇರೆ ಬೇರೆ ಘಟ್ಟಗಳಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಕುರಿತಾದ ಗಾದೆಗಳು ದಕ್ಷಿಣ ಕರ್ನಾಟಕದ ಉಪ್ಪಾರರಲ್ಲಿ ಹೇರಳ ಸಂಖ್ಯೆಯಲ್ಲಿ ಪ್ರಚುರವಾಗಿವೆ. ಇಂದಿಗೂ ಹಲವಾರು ಮೂಢ ನಂಬಿಕೆಗಳು, ಪರಂಪರಾಗತ ಪದ್ಧತಿ, ಸಂಪ್ರದಾಯಗಳು ಈ ಜನರನ್ನು ಆಳುತ್ತಿದ್ದೂ ಆ ಎಲ್ಲ ಸಂಗತಿಗಳು ಗಾದೆಗಳಲ್ಲಿ ಮೈದಾಳಿವೆ. ಈ ಜನರ ಜೀವನಗತಿಯ ವಿಧಾನವನ್ನರಿಯಲು, ಸಂಸ್ಕೃತಿಯನ್ನು ತಿಳಿಯಲು

ಈ ಬಗೆಯ ಗಾದೆಗಳು ತಕ್ಕಮಟ್ಟಿಗೆ ನೆರವಾಗುತ್ತವೆ. ಅಷ್ಟೆ ಅಲ್ಲ ಇವು ಸಾಮಾಜಿಕ ಪರಿಸ್ಥಿತಿ, ಆಸೆ, ಆಕಾಂಕ್ಷೆ , ರುಚಿ-ಅರುಚಿಗಳನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆ.

ಭಾಷಾ ವಿಜ್ಞಾನಿಗಳಿಗೆ ದಕ್ಷಿಣ ಕರ್ನಾಟಕದ ಉಪ್ಪಾರರ ಗಾದೆಗಳು ನಿಧಿಯಾಗಿವೆ. ನಾಗರಿಕ ಭಾಷಾ ಜಗತ್ತಿನಲ್ಲಿ ಕಾಣದ ಹಾಗೂ ಬಳಸದ ಎಷ್ಟೋ ಜೀವಂತವೂ ಸಶಕ್ತವೂ ಆದ ಪದಗಳು ಈ ಗಾದೆಗಳಲ್ಲಿ ಇನ್ನೂ ಜೀವಂತವಾಗಿರುವುದನ್ನು ಕಾಣುತ್ತೇವೆ. ಮಹಾವೈಯ್ಯಾಕರಣೆಗಳಿಗೆ ಅಲಭ್ಯವಾಗಿದ್ದ ಎಷ್ಟೋ ಶಬ್ದರೂಪಗಳು ಇಲ್ಲಿವೆ. ಉದಾಃ ಅವಮಟ, ದಗ, ಇಸ, ಏಲ್ಲೆ, ಕೆದಿಕಿ, ರವಾನಿ, ಕಬರ, ಹೋತು, ಬಾದಿ, ಜಾ, ಘಟಾಘಟಿ, ನಿಗರು, ಹಂತಿ, ನಾರಾದು ಇತ್ಯಾದಿ ಶಬ್ದ ರೂಪಗಳು ಸಿಗುತ್ತವೆ. ಈ ಒಂದೊಂದು ಶಬ್ದರೂಪವೂ ದಕ್ಷಿಣ ಕರ್ನಾಟಕದ ಉಪ್ಪಾರರ ಭಾಷಾ ಕಸುಬನ್ನು ಪರಿಚಯಿಸುತ್ತವೆ. ಗಾದೆ ಮಾತುಗಳು ಉಪ್ಪಾರರ ಭಾಷೆಗೆ ಶಕ್ತಿಯನ್ನು ಒದಗಿಸಿವೆ; ಜೀವ ತುಂಬಿವೆ.

**ಒಗಟು:**

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಗಟು ಒಂದಾಗಿದೆ 'ಸಾದೃಶ್ಯ ವೈದೃಶ್ಯಗಳಿಂದ ಕೂಡಿದ ಗೂಡಾರ್ಥ ನಿಬದ್ಧವಾದ, ಸುಂದರ ಚತುರೋಕ್ತಿಯೇ ಒಗಟು" (ದೇಜಗೌ 1976:256) ಇದು 'ಸಾಮಾನ್ಯವಾಗಿ ಮನರಂಜನೆಗಾಗಿ ಪದಗಳ ಮೇಲೆ ನಿರ್ಮಿತವಾದ ಒಂದು ಸಮಸ್ಯೆ ಎಂಬ ಅಭಿಪ್ರಾಯವೂ ಇದೆ' (ಹಾಮಾನಾ 1971:38) Riddles are questions that are framed with the purpose of confusing or testing the of these who donot know the answer Richard M. Dorson Ed.P. 130).ಇವು ಸಾಮಾನ್ಯವಾಗಿ ವಾಹನೆಯ ಮೇಲೆ ಪರಿಹಾರ ಹುಡುಕುವ ಎದುರಾಳಿಯ ಲೋಕಾನುಭವವನ್ನು ಒರೆಕಟ್ಟುವ ಅರ್ಥಾಪೇಕ್ಷಿಯಾದ ಪದಚಾತೂರ್ಯವೂ ಬುದ್ಧಿ ಕೌಶಲವನ್ನು ಒರೆಗೆ ಹಚ್ಚಿ ನೋಡುವ ಇವುಗಳ ಸೃಷ್ಟಿಯ ಹಿನ್ನೆಲೆಯಲ್ಲಿ ವಿಶೇಷ ವಾದ ಕವಿಮನೋಧರ್ಮದ ಮಿಡಿತವನ್ನು ಕಾಣಬಹುದು. ಒಂದು ಅರ್ಥದಲ್ಲಿ ಒಂದೊಂದು ಒಗಟೂ ಒಂದೊಂದು ಪುಟ್ಟ ಭಾವಗೀತೆ.(ಪರಮಶಿವಯ್ಯ ಜಿಶಂ 1967:5) ಒಗಟುಗಳು ಪ್ರಧಾನವಾಗಿ ರೂಪಕ ಮೂಲದವು. "ಪ್ರತಿಯೊಂದರಲ್ಲೂ ಸಮಸ್ಯೆಯೊಂದಿದ್ದು ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಸಂಯೋಜಿತವಾಗಿರುತ್ತವೆ. (ರಾಗೌ, 1978:105) ಒಗಟು ಮತ್ತು ಗಾದೆಗಳು ಒಂದು ನಾಣ್ಯದ ಎರಡು

ಮುಖಗಳಿದ್ದಂತೆ. ಗಾದೆಗಳಂತೆ ಎಲ್ಲರಿಗೂ ಈ ಒಗಟುಗಳು ನಿಲುಕುವುದಿಲ್ಲ. ಗಾದೆಗಳಿಗಿಂತ ಹೆಚ್ಚು ಪರಿಮಿತವಾದ ಮತ್ತು ನಿರ್ದಿಷ್ಟವಾದ ಕಾರ್ಯವನ್ನು ಹೊಂದಿರುವ ಒಗಟುಗಳು ಜನತೆಯ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅಖಂಡ ಭಾಗವಾಗಿಯೇ ಇವೆ. ಮನರಂಜನೆಯನ್ನೊದಗಿಸುವುದೇ ಪ್ರಧಾನ ಉದ್ದೇಶವಾಗಿಸಿಕೊಂಡಿರುವ ಇವು ಸಾಮಾಜಿಕ, ಧಾರ್ಮಿಕ ವಿಷಯಗಳನ್ನೊಳಗೊಂಡ ಸಾಂಸ್ಕೃತಿಕ ಅಧ್ಯಯನಕ್ಕೆ ಸಾಕಷ್ಟು ಸಾಮಗ್ರಿಯೊದಗಿಸುತ್ತವೆ. ಬುದ್ಧಿಯನ್ನು ದೀಪ್ತಗೊಳಿಸುವ ಇವು ಬೌದ್ಧಿಕ ಮತ್ತು ಸಾಮಾಜಿಕ ಜೀವನದಲ್ಲಿ ಮುಖ್ಯಪಾತ್ರವಾಗಿವೆ.

ಉಪ್ಪಾರರಲ್ಲಿ ಗಾದೆಗಳಿವೆ;ಒಗಟುಗಳು ತುಂಬಾ ಜನಪ್ರಿಯವಾಗಿವೆ. ಅವು ಅವರ ಸಂಸ್ಕೃತಿ ಮತ್ತು ಸಾಮಾಜಿಕ ಸಂಪ್ರದಾಯಗಳನ್ನು ಪ್ರತಿನಿಧಿಸುವ ಅಭಿವ್ಯಕ್ತಿಗಳೆನಿಸಿ. ಉಪ್ಪಾರರು ಕೆಲಸ ಮಾಡುವಾಗ, ವಿರಾಮಕಾಲದಲ್ಲಿ ಮತ್ತು ಹಬ್ಬ ಹರಿದಿನಗಳಲ್ಲಿ ಒಗಟುಗಳನ್ನು ಬಳಸುತ್ತಾರೆ. ಈ ಒಗಟುಗಳು ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಅವು ರಂಜನೆಯನ್ನು ನೀಡುತ್ತವೆ. 'ಹಿಡಿದರೆ ಹಿಡಿತುಂಬ ಬಿಟ್ಟರೆ ಮನೆತುಂಬಾ' ದೀಪದ ಬೆಳಕನ್ನು ಹೇಳುವ ಈ ಒಗಟು ಬೆಳಕಿನ ಅವನತಿಯನ್ನು ವಿವರಿಸುತ್ತದೆ. ಹೀಗೆಯ ಆಕಾಶದ ಅನಂತತೆಯನ್ನು ನಕ್ಷತ್ರಗಳ ಅಸಂಖ್ಯಾತತೆಯನ್ನು ಬಣ್ಣಿಸುವ ಒಗಟುಗಳು ಸಾಕಷ್ಟು ಇವೆ. 'ಅಮ್ಮನ್ ಹಾಸಿಗೆ ಸುತ್ತಾಕಾಗಲ್ಲ; ಅಪ್ಪನ ದುಡ್ಡು ಎಣಿಸೋಕಾಗಲ್ಲ, ' ಅಮ್ಮನ ಹಾಸಿಗೆ, ಅಪ್ಪನ ದುಡ್ಡು ಎಂದು ಸಂಬೋಧಿಸಿರುವುದು ಆತ್ಮೀಯತೆಯ ಸಂಕೇತ. ಈ ಪ್ರಯೋಗಗಳು ಆಕಾಶ ಮತ್ತು ನಕ್ಷತ್ರಗಳ ಕಲ್ಪನೆಯನ್ನು ಮೂಡಿಸಲು ಸಶಕ್ತವಾಗಿವೆ. ಸೂರ್ಯ ಮುಳುಗಿದ ರೀತಿಯನ್ನು ಅಸ್ವಾಭಾವಿಕ ರೀತಿಯಲ್ಲಿ ಈ ಜನರು ಚಿತ್ರಿಸುತ್ತಾರೆ.

ದೊಡ್ಡಾಲದ ಮರ ದೊಪ್ಪನೆ ಬಿತ್ತು
ಸಂತೇ ಜನ ಎಲ್ಲ ಚಲ್ಲಾಪಿಲ್ಲಿ.

ಸೂರ್ಯಾಸ್ತಮಯ ಕ್ರಿಯೆಗೆ ಪ್ರಕ್ರಿಯೆಯಾಗಿ ನಿಲ್ಲುವ ಈ ಒಗಟಿನಲ್ಲಿ 'ದೊಡ್ಡಾಲದ ಮರ' ಸೂರ್ಯನಿಗೆ ಸಂಕೇತವಾಗಿ ಬಂದಿದೆ. ಪ್ರಾಚೀನತೆಯನ್ನು ಪ್ರತಿನಿಧಿಸುವ, ಪರಂಪರೆಯನ್ನು ಸೂಚಿಸುವ ಆಲದ ಮರವು ಪಕ್ಷಿಕೋಟೆಗೆ ಆಶ್ರಯ ಸ್ಥಾನ. ಅಂತಹ ಆಲದಮರವನ್ನು ಲೋಕದ ಸಮಸ್ತ ಜೀವಿಗಳಿಗೂ ಜೀವ ಧಾತುವೆನಿಸಿರುವ ಸೂರ್ಯನಿಗೂ ಹೋಲಿಸಿರುವುದು ಸಮುಚಿತವಾಗಿದೆ. ದೊಡ್ಡಾಲದ ಮರ ದೊಪ್ಪನೆ ಬೀಳುವ ಕ್ರಿಯೆಯನ್ನು ಅಭಿವ್ಯಕ್ತಿಸುವುದರ ಮೂಲಕ ಅದರ ರಕ್ಷಣೆ ತಪ್ಪಿ ಕತ್ತಲಾವರಿಸುತ್ತಿರುವ ಸೂಚನೆಯನ್ನು ಸಮರ್ಥವಾ... ಟಿಸಿದೆ. ಎರಡನೆಯ ಪಾದದ 'ಸಂತೇಜನ' ಎಂಬ ಪ್ರಯೋಗ ವ್ಯಕ್ತಿ ವ್ಯಾಪಾರವನ್ನು ಸಂಕೇತಿಸುವುದರೊಂದಿಗೆ ಲೋಕ ವ್ಯಾಪಾರವನ್ನೂ ಹೇಳುತ್ತದೆ. ದೊಡ್ಡಾಲಾದ ಮರ ಬಿದ್ದದರಿಂದ ಆಶ್ರಯ ಇಲ್ಲವಾಗಿ ಪಕ್ಷಿಗಳೆಲ್ಲಾ ಚೆಲ್ಲಾಪಿಲ್ಲಿಯಾಗುವಂತೆ ಸೂರ್ಯಸ್ತಮಯವಾದ್ದರಿಂದ ನಾನಾ ಕಾರ್ಯಗಳಲ್ಲಿ

ತಲ್ಲೀನರಾಗಿದ್ದ ಜನ ಕತ್ತಲನ್ನು ಆಶ್ರಯಿಸಲು ಮನೆಯ ಕಡೆ ಚದುರಿದರು ಎಂಬುದು ಇಲ್ಲಿ ಹೊರಡುವ ಅರ್ಥ. 'ದೊಡ್ಡಾಲ' 'ಧೆಪ್ಪನೆ' ಎಂಬ ಶಬ್ದಗಳು ಪ್ರಾಸಕ್ಕಾಗಿ ಮಾತ್ರ ಬಂದಿರದೆ;ಸೂರ್ಯನ ಗಾತ್ರವನ್ನು ಸೂರ್ಯಾಸ್ತಮಯ ಕ್ರಿಯೆಯ ವೇಗವನ್ನು ತೀವ್ರತೆಯನ್ನು ಸಮರ್ಪಕವಾಗಿ ಸಂಕೇತಿಸುತ್ತವೆ. ಒಟ್ಟಿನಲ್ಲಿ ಸೂರ್ಯಾಸ್ತಮಯದ ಒಂದು ಸುಂದರ ಭಾವಪೂರ್ವ ಚಿತ್ರಣ ಇಲ್ಲಿದೆ.

ಉಪ್ಪಾರರಲ್ಲಿ ಪ್ರಚಲಿತವಿರುವ ಒಗಟುಗಳು ಭಾಷಿಕವಾಗಿ, ಅದರ ಗಾದೆಗಳಂತೆ ಮಹತ್ವ ಪಡೆದುಕೊಂಡಿವೆ. ಇಲ್ಲಿಯ ಬಹುತೇಕ ಒಗಟುಗಳು ಉಪ್ಪಾರರ ಆಡುನುಡಿಯ ಸತ್ವ, ಕಸುಬನ್ನು, ಆ ಭಾಷೆಯ ಖನಿಯನ್ನು ಒಗರನ್ನೂ ಪಡೆದಿವೆ. ಇಲ್ಲಿಯ ಒಗಟುಗಳಲ್ಲಿ ಬಳಕೆಯಾಗಿರುವ ಎಷ್ಟೋ ಪದಗಳು ಕನ್ನಡ ಭಾಷೆಯ ಶಬ್ದಸಂಪತ್ತಿಗೆ ಹೊಸ ಜೋಡಣೆಗಳಾಗಿವೆ. ಉದಾಃ ಚಕ್ರಮುಂಡಾಸು, ತಗರಿಬಿಗರಿ, ನರಗಿ, ಕೆದುರು, ಸೊಡ್ಡೂ ಹೆಂಚಿ, ಇಂಬ-ಹೀಗೆ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು.

ದಕ್ಷಿಣ ಕರ್ನಾಟಕದ ಜನಪದ ಭಾಷೆಯಲ್ಲಿ ನಿರೂಪಿತವಾಗಿರುವ ಈ ಒಗಟುಗಳು ಸಹಜವಾಗಿ ಆಲಂಕಾರಿಕವೂ ಸಾಂಕೇತಿಕವೂ ಪ್ರತಿಮಾತ್ಮಕವೂ ಆಗಿರುವುದರಿಂದ ಕೇಳುಗರನ್ನು ಬಹುಬೇಗ ಆಕರ್ಷಿಸುತ್ತವೆ. ಇಲ್ಲಿ ಪ್ರಸ್ತಾಪಿಸಿರುವ ಅನೇಕ ಒಗಟುಗಳು ಬೇರೆ ಬೇರೆ ಪ್ರದೇಶಗಳಲ್ಲೂ ಕಂಡು ಬರುತ್ತವೆ. ಜಗತ್ತಿನ ಎಲ್ಲ ಭಾಷೆಗಳಲ್ಲೂ ಕಾಣಬರುವ ಈ ಸಮಾನತೆಯು ಒಗಟುಗಳ ಸಾರ್ವತ್ರಿಕತೆಯನ್ನು ಹೇಳುತ್ತಯು. ಮನುಷ್ಯ ಸ್ವಭಾವ ಎಲ್ಲಿದ್ದರೂ ಒಂದೇ ಎಂಬುದನ್ನು ಇವು ದೃಢಪಡಿಸುತ್ತವೆ.

ಅಧ್ಯಾಯ - ೬

೬: ವೃತ್ತಿ

೬:೧. ಸಾಂಪ್ರದಾಯಿಕ

೬:೨. ಅವಲಂಬಿತ

## ೬ : ವೃತ್ತಿ

ಪ್ರಾಣಿ , ಪಕ್ಷಿ, ಕ್ರಿಮಿ, ಕೀಟ, ಜಂತುಗಳು ಪ್ರಕೃತಿಯಿಂದ ಪಾಠಕಲಿತಂತೆ ಮಾನವನು ತನ್ನ ವಿಕಾಸದ ಹಂತದಲ್ಲಿ ಇತರ ಪ್ರಾಣಿಗಳಿಗಿಂತ ಭಿನ್ನರೀತಿಯಲ್ಲಿ ಬುದ್ಧಿವಂತನೂ, ಚತುರನೂ ಆಗಿ ಬದುಕಲು ಆರಂಭ ಮಾಡಿದ ಕಾಲದಲ್ಲಿ ಅವನು ಇದು ವರೆಗೂ ಆಹಾರ ಪದಾರ್ಥಗಳನ್ನು ಹಸಿ ಹಸಿಯಾಗಿ ತಿನ್ನುತ್ತಿದ್ದ ಅವನು ಕ್ರಮೇಣ ಬೆಂಕಿಯನ್ನು ಕಂಡುಕೊಂಡ. ಆಮೇಲೆ ಅವನು ಬೇಯಿಸಿ ತಿನ್ನಲು ಆರಂಭಿಸಿದ. ದಿನದಿಂದ ದಿನಕ್ಕೆ ಹೀಗೆ ಬದಲಾದ ಮಾನವನು ಅನೇಕ ವರ್ಷಗಳ ತರುವಾಯ ಆಹಾರದ ಜೊತೆ ಉಪ್ಪನ್ನು ಸೇರಿಸುವುದರಿಂದ ಬಹು ರುಚಿಕರವಾಗಿರುತ್ತದೆ ಎನ್ನುವುದನ್ನು ಅರಿತುಕೊಂಡಿರಬೇಕು. ಅತ್ಯಂತ ರುಚಿಕರವಾದ ಉಪ್ಪು ಷಡ್‌ರಸಗಳಲ್ಲಿ ಒಂದಾಗಿದ್ದು ರಸಗಳ ರಾಜನ ಸ್ಥಾನದಲ್ಲಿದೆ. ಉಪ್ಪಿನ ರುಚಿಯನ್ನು ಉಳಿದ ಯಾವ ರಸಗಳಿಗೂ ಹೋಲಿಸಲು ಆಗದೆಂದು ಜನಪದರು ಹೇಳುತ್ತಾರೆ. ಈ ಕಾರಣದಿಂದ "ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂಧುವಿಲ್ಲ" "ಉಪ್ಪು ತಿಂದ ಮನೆಗೆ ಎರಡು ಬಗೆಯ ಬೇಡ" ಎನ್ನುವ ಗಾದೆಗಳು ಹುಟ್ಟಿಕೊಂಡಿವೆ. ಈ ಗಾದೆಗಳು ಉಪ್ಪಿನ ರುಚಿ ಮತ್ತು ಅದರ ಶ್ರೇಷ್ಠತೆಯನ್ನು ಹೇಳುತ್ತವೆ. ಉಪ್ಪು ಷಡ್‌ರಸಗಳಲ್ಲಿಯೇ ಶ್ರೇಷ್ಠ ಮಟ್ಟದಲ್ಲಿರುವುದರಿಂದ ಇದನ್ನು ಮೇಲುಸಕ್ಕರೆ ಎಂದು ಕರೆಯುತ್ತಾರೆ.

ಕಾಲ ಕ್ರಮೇಣ ಉಪ್ಪನ್ನು ತಯಾರಿಸುವ ಮತ್ತು ಅದನ್ನು ತಮ್ಮ ಸುತ್ತಲಿನ ಜನರಿಗೆ ಹಂಚುವ ಕೆಲಸದಲ್ಲಿ ಕೆಲ ಜನರು ತೊಡಗಿರಬೇಕು. ಮುಂದೆ ಈ ವೃತ್ತಿಸೂಚಕವು ಪರಜಾತಿ ಸೂಚಕವಾಗಿ ಮಾರ್ಪಟ್ಟಿತು."The occupation of the caste derived from Uppu Salt"(Enthoven 2 E:1990:394) ಉಪ್ಪನ್ನು ತಯಾರಿಸಲು ಉಪಯೋಗಿಸುವ ಸಲಕರಣೆಗಳನ್ನು ಸ್ವತಃ ದೇವಿಯೇ ಕರುಣಿಸಿದಳೆಂದು ಅವರು ಹೇಳುತ್ತಾರೆ. ಅವರು ಪ್ರತಿಯೊಂದು ಸಲಕರಣೆಗಳನ್ನು ತೊಳೆದು, ಪೂಜಿಸುವ ಕ್ರಮವಿದೆ. ಕೆಲವರು ದೀಪಾವಳಿಯನ್ನು ಮತ್ತೆ ಕೆಲವರು ದಸರದಲ್ಲಿ ಕಂಡ ಈ ಕಾರಣದಿಂದಲೇ ಅನೇಕ ಹೆಣ್ಣು ದೇವತೆಗಳ ಪೂಜಾರಿಗಳು ಇವರಾಗಿರಬಹುದು ಎಂದು ಊಹಿಸಬಹುದು."Their traditional occupation is as the name implies manufacturing earth salt. They profess to be saivites and vaishnavites, but practically worship village duties" (Thurston-K.RanagaChari :1987:229) ಉಪ್ಪನ್ನು ತಯಾರಿಸುವ ವಿಧಾನ ಸರಳವಾದುದು ಇದಕ್ಕೆ ಅವರದೇ ಆದ ಒಂದು ವಿಧಾನದಿಂದ ಉಪ್ಪನ್ನು ತಯಾರಿಸುತ್ತಾರೆ.

### ೬.೧: ಸಾಂಪ್ರದಾಯಿಕ ವೃತ್ತಿ:

ಮೊದಲಿಗೆ ಇಳಿಜಾರಾದ ಜಾಗವನ್ನು ಆಯ್ದುಕೊಂಡು, ಚೌಕಾಕಾರದ ಪಾತಿಗಳನ್ನು ಮಾಡಿಕೊಳ್ಳುತ್ತಾರೆ. ಪಾತಿಗಳು ಒಂದರ ಕೆಳಗೆ ಒಂದು ಬರುವಂತೆಯೂ, ಒಂದೇ ಸರಳ ರೇಖೆಯಲ್ಲಿ ಇರುವಂತೆಯೂ

ಮಾಡಿಕೊಳ್ಳುತ್ತಾರೆ. ಈ ಸ್ಥಳದಲ್ಲಿ ಮೇಲಿನ ಪಾತಿಯೂ, ಅದರ ಕೆಳಗೆ ಸ್ವಲ್ಪ ದೂರದಲ್ಲಿ ಇನ್ನೊಂದು ಪಾತಿಯೂ, ಇದರಿಂದ ಕೆಳಗೆ ಮತ್ತೊಂದು ಪಾತಿಯೂ ಹೀಗೆ ನಾಲ್ಕು ಮತ್ತು ಐದನೇ ಪಾತಿಗಳನ್ನು ಮಾಡಿಕೊಳ್ಳುತ್ತಾರೆ. ಈ ಪಾತಿಗಳು ೧೫ ಅಡಿ ಸುತ್ತಳತೆ ಹೊಂದಿದ್ದು ೪ ಅಡಿ ಆಳವಾಗಿರುತ್ತವೆ. ಇದರ ಒಳಭಾಗದ ಗೋಡೆಗಳಿಗೆ ಸುಣ್ಣವನ್ನು ಲೇಪಿಸಿ ಗಟ್ಟಿಗೊಳಿಸಿಕೊಂಡಿರುತ್ತಾರೆ. ಇದರಂತೆ ಒಂದು ಪಾತಿಯಿಂದ ಇನ್ನೊಂದು ಪಾತಿಗೆ ಹೇರಿ, ಹರಿದು ಬರಲು ಮಾಡಿರುವ ಕಾಲುವೆಗಳಿಗೂ ಸುಣ್ಣದ ಗಾರೆ ಗಚ್ಚಿನಿಂದ ಬಳಿದು ಭದ್ರಪಡಿಸಿರುತ್ತಾರೆ. ಹೀಗೆ ಮಾಡುವುದರಿಂದ ಪಾತಿಯಲ್ಲಿಯ ನೀರು ಇಂಗಿ ಹೋಗದಂತೆಯೂ ಬಸಿದ ನೀರಿಗೆ ಮಣ್ಣು ಸೇರದಂತೆಯೂ ತಡೆಯುತ್ತಾರೆ. ಒಂದು ಪಾತಿಯವರು ಇನ್ನೊಬ್ಬರ ಪಾತಿಗೆ ಉಪ್ಪಿನ ನೀರು ಸರಾಗವಾಗಿ ಹರಿಯಲು ಸಹಾಯಕವಾಗುತ್ತದೆ."The Crater or cup at the top is made about five feet is diameter and two feet is depth and its sides and bottom are roughly plastered with line. A number of these mounds are connected by open channels with a reservoir lower down, which is also made with chuman Plastered sides and bottom. In the dry season, saline earth is collected ..." (ಅದೇ. Vol IV-654). ಪಾತಿಗಳು ನಿರ್ಮಾಣವಾದ ಅನಂತರ, ಮೊದಲ ನಾಲ್ಕು ಪಾತಿಗಳಿಗೆ ಆವಿಗೆ ಸೊಪ್ಪನ್ನು ಕಾಲು ಭಾಗದಷ್ಟು ಪಾತಿಗಳಿಗೆ ತುಂಬುತ್ತಾರೆ. ಒಂದನೇ ಪಾತಿಯಲ್ಲಿರುವ ಆವಿಗೆ ಸೊಪ್ಪಿನ ಮೇಲೆ ಚೌಳುಮಣ್ಣನ್ನು ತುಂಬಿ ಅದರ ಮೇಲೆ ನೀರನ್ನು ಹಾಯಿಸುತ್ತಾರೆ. ಹೀಗೆ ಹಾಯಿಸಿದ ನೀರು, ಚೌಳು ಮಣ್ಣಿನ ಮೇಲೆ ೫ ರಿಂದ ೬ ಗಂಟೆಗಳ ವರೆಗೆ ನಿಂತು ಆವಿಗೆ ಸೊಪ್ಪಿನಿಂದ ಕೆಳಗೆ ಬಸಿದು ಕಾಲುವೆ ಮೂಲಕ ಎರಡನೇ ಪಾತಿಗೆ ಹರಿದು ಅಲ್ಲಿಯು ಸೊಪ್ಪಿನ ಮೇಲಿನಿಂದ ಬಸಿದು ಕಾಲುವೆ ಮೂಲಕ ಮೂರನೇ ಪಾತಿಗೆ ಹರಿಯುತ್ತದೆ. ಹೀಗೆ ಬಸಿದ ಉಪ್ಪಿನ ನೀರು, ನಾಲ್ಕನೆಯ ಪಾತಿಯಲ್ಲಿ ಚೆನ್ನಾಗಿ ಸೋಸಿಕೊಂಡು ಪರಿಶುದ್ಧವಾಗಿ ಐದನೇ ಪಾತಿಯಲ್ಲಿ ಶೇಖರವಾಗುತ್ತದೆ."In the dry season, saline earth is collected wherever it is found, and carried to the mounds on buttaloes" (ಅದೇ IV :654) ಐದನೆಯ ಪಾತಿಯಲ್ಲಿ ಶೇಖರವಾದ ಉಪ್ಪಿನ ನೀರು ಚೆನ್ನಾಗಿ ಸೂರ್ಯನ ಬಿಸಿಲಿನಲ್ಲಿ ಒಣಗಿ ಗಟ್ಟಿಯಾಗುತ್ತದೆ. ಹೀಗೆ ಗಟ್ಟಿಯಾದ ಉಪ್ಪನ್ನು ಒಂದು ಕಡೆ ರಾಶಿ ಹಾಕುತ್ತಾರೆ. ಇದನ್ನು ಉಪ್ಪಿನ 'ಮಾಳೆ' ಗಳೆಂದು ಕರೆಯುತ್ತಾರೆ. ಉಪ್ಪು ತಯಾರಿಸುವ ಸ್ಥಳವೆಂದೂ, ಉಪ್ಪಾರರು ಬದುಕುವ ಊರುಗಳಿಗೂ ಮಾಳೆಗಳೆಂದೂ ಕರೆಯುತ್ತಾರೆ.

ಜೌಗು ಪ್ರದೇಶದಿಂದ ಉಪ್ಪಿನಾಂಶ ಇರುವ ಮಣ್ಣನ್ನು ಗುರುತಿಸಿ, ಆ ಮಣ್ಣನ್ನು ಕೋಣಗಳ ಮೂಲಕ ಪಾತಿಗಳಿಗೆ ತಂದು ಸುರಿಯುತ್ತಾರೆ. ಒಂದು ಕೋಣ ೫೦ ಕೆ.ಜಿ. ಮಣ್ಣನ್ನು ನಿರಾಯಾಸವಾಗಿ ಹೋರುತ್ತದೆ.

ಕೋಣದ ಬೆನ್ನಿನ ಮೇಲೆ 'ಸಬ್ರು' ಎಂಬ ಹೆಸರಿನಿಂದ ಕರೆಯುವ ಚೀಲವನ್ನು ಹಾಕಿ, ಆಚೆ ಈಚೆ ೨೫ ಕೆ.ಜಿ. ಮಣ್ಣನ್ನು ತುಂಬಿಸುತ್ತಾರೆ. ಉಪ್ಪು ತಯಾರಿಸುವ ಪ್ರತಿಯೊಬ್ಬನೂ ಕೋಣಗಳನ್ನು ಹೊಂದಿರುತ್ತಾನೆ. ಉಪ್ಪನ್ನು ಕೋಣಗಳ ಮೇಲೆ ಹೇರಿಕೊಂಡು ಹಳ್ಳಿಹಳ್ಳಿಗೆ ಹೋಗಿ ವ್ಯಾಪಾರ ಮಾಡುತ್ತಾನೆ."The salt manufactured by them is called 'Atupa' It is bitter to the taste and generally used by the poorer classes. In the lot season they make slat-petre" (Syed Siraj Ul Hassan 1989:622) ಧೂಳು ಮತ್ತು ಮಣ್ಣಿನಿಂದ ಕೂಡಿದ ಉಪ್ಪು ರುಚಿಯಲ್ಲಿ ಒಗರಾಗಿದ್ದು ಸಮುದ್ರದ ಉಪ್ಪಿಗಿಂತ ಅಶುದ್ಧವಾಗಿರುತ್ತಿತ್ತು. ಇದು ಅಗ್ಗದ ಉಪ್ಪಾಗಿದುದರಿಂದ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಬಡ ಜನರು ಉಪಯೋಗಿಸುವುದಕ್ಕಾಗಿ ಕೊಳ್ಳುತ್ತಿದ್ದರು."The salt left, which is of a dirty yellow colour in small grains, is then scraped off and carried on pack-buffaloes for sale. The article thus made is somewhat bitter in tastes, and has more impurities than the sea salt, and an account of the comparative cheapnest or the latter, it is not appreciated except by the poorest in out-of-the-way villages." (The Mysore Tribes and Castes Vol.IV: 655) ಈ ಉಪ್ಪು ಅಶುದ್ಧವಾಗಿದ್ದರೂ ಅತ್ಯಂತ ರುಚಿಯಾಗಿದ್ದರಿಂದ ಸಮುದ್ರದ ಉಪ್ಪನ್ನು ಯಾರೂ ಕೊಳ್ಳುತ್ತಿರಲಿಲ್ಲ.

ಅನಾದಿಕಾಲದಿಂದಲೂ ಉಪ್ಪನ್ನು ತಯಾರಿಸುತ್ತ ಬಂದ ಜನರಿಗೆ ಬ್ರಿಟಿಷ್ ಸರ್ಕಾರ ಉಪ್ಪಿನ ಮೇಲೆ ತೆರಿಗೆಯನ್ನು ಹೇರಿತು. ೧೮೬೬-೬೯ ರಲ್ಲಿ "ಸರ್ಕಾರಕ್ಕೆ ಬಂದ ಆದಾಯ ರೂ ೧೨, ೩೫೩ ಹಿಂದಿನ ವರ್ಷಕ್ಕಿಂತ ರೂ ೬೫೪ ರಷ್ಟು ಕಡಿಮೆ. ನಗರ ಆಡಳಿತ ವಿಭಾಗದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಉಪ್ಪಿನ ಕ್ಷೇತ್ರಗಳಿದ್ದವು." (ರಾಜಪ್ಪ ಡಿ.ಸಿ.1995:28) ಹೀಗೆ ಉಪ್ಪಿನ ಆದಾಯವು ಕಡಿಮೆಯಾಗುತ್ತ ಹೋಯಿತು. ಉಪ್ಪು ಉತ್ಪಾದಿಸುವ ಭೂಮಿಗಳು ಕಂದಾಯದ ಭೂಮಿಯಾಗಿ ಬದಲಾವಣೆ ಹೊಂದಿದ್ದೆ ಇದಕ್ಕೆ ಕಾರಣವಾಯಿತು. 1872-73 ರಲ್ಲಿ ಉಪ್ಪನ್ನು ತಯಾರಿಸುವ ಉಪ್ಪಿನ ಮಾಳೆಗಳು ರಾಜ್ಯದಲ್ಲಿ ಇದ್ದ ಸಂಖ್ಯೆ 3032. ಅದರ ಹಿಂದಿನ ವರ್ಷ ಇದ್ದ ಸಂಖ್ಯೆ 2611. ಹೆಚ್ಚಳವಾದುದ್ದು ಚಿತ್ರದುರ್ಗ ಜಿಲ್ಲೆಯಲ್ಲಿ. ಉಪ್ಪಿನಿಂದ ಸರ್ಕಾರಕ್ಕೆ ಆ ವರ್ಷ ಬಂದ ತೆರಿಗೆ ಹಣ ರೂ 4, 244 ತೆರಿಗೆ ದರ 1 ಆಣೆ 10 ಪೈಸೆಯಿಂದ 90 ರೂ ವರೆಗಿತ್ತು" (ರಾಜಪ್ಪ ಡಿ.ಸಿ. 1995:28).

ಬ್ರಿಟಿಷ್ ಸರ್ಕಾರವೂ ಗುತ್ತಿಗೆ ಮೂಲಕ ಉಪ್ಪನ್ನು ತಯಾರಿಸುವ ಸ್ಥಳಗಳನ್ನು ಕೊಡುತ್ತಿದ್ದರು. ಈ ಥರದ ಗುತ್ತಿಗೆಯಿಂದ ಸರ್ಕಾರಕ್ಕೆ ನಷ್ಟವೇ ಉಂಟಾಯಿತು. 1880 ರಲ್ಲಿ "In British India, the manufacture of earth-salt was absoutely prohibited in 1880; and here it is all but extinct". (The Mysore Tribes and Castes Vol IV:655) ಬ್ರಿಟಿಷ್ ಪ್ರಾಂತ್ಯಗಳ ಗಡಿಯಿಂದಾಚೆಗೆ ›ಐದು

ಮೈಲಿಗಳ ದೂರದಲ್ಲಿದ್ದ ಭೂಮಿಯಿಂದ ಉಪ್ಪನ್ನು ತಯಾರಿಸಬಾರದೆಂದು ನಿಷೇಧವಿದ್ದರಿಂದ ಉಪ್ಪಿನ ಉತ್ಪಾದನೆ ಕಡಿಮೆಯಾಯಿತು.

ಆಗಿನ ಮದ್ರಾಸ್ ಪ್ರಾಂತ್ಯದಲ್ಲಿನ ಬಳ್ಳಾರಿ ಜಿಲ್ಲೆಯ ಉಪ್ಪಾರರು ಅತಿ ಬಡತನದಲ್ಲಿದುದ್ದರಿಂದ ಅವರು ಕಂಪನಿ ಸರ್ಕಾರದ ಪರವಾನಿಗೆ ಇಲ್ಲದೆ ಉಪ್ಪನ್ನು ತೆಗೆಯುತ್ತಿದ್ದರು. ಇದರಿಂದ ಸರ್ಕಾರಕ್ಕೆ ವರ್ಷಕ್ಕೆ ಎಂಟ ರಿಂದ ಹತ್ತು ಲಕ್ಷ ರೂಗಳ ಆದಾಯ ದಕ್ಕದೆ ಇದ್ದುದರಿಂದ ಬಳಮಣ್ಣಿನ ಉಪ್ಪಿನ ತಯಾರಿಕೆಯನ್ನು ನಿಲ್ಲಿಸಿತು. "For similar reasons, and also because all the Upparas were very poor, a license -tax was out of the question. At the same time he calculated that the loss to Government due to the system was from eight to ten lakhs annually, ...." (Thurston K.Rangachari: 1987:235) ಕಾಲಕ್ರಮೇಣ ವೃತ್ತಿಯನ್ನು ಅನಿವಾರ್ಯವಾಗಿ ಕೈಬಿಟ್ಟು ಬೇರೆ ಬೇರೆ ವೃತ್ತಿಯನ್ನು ಅವಲಂಭಿಸಿದರು. "When salt making become a Government monopoly, they took to masonry work, stone-cutting, and making shell-lino" (Enthoven R.E. 1990-396).

"ಅ"

ಉಪ್ಪಿನ ಕ್ಷೇತ್ರಗಳ ಜಿಲ್ಲಾವಾರು ಆದಾಯ ತೋರಿಸುವ ಪಟ್ಟಿ

| ಕ.ಸಂ. | ಜಿಲ್ಲೆಗಳು | 1871-72 | | | 1872-73 | | | ಹೆಚ್ಚಳ | | | ಕಡಿತ |
|---|---|---|---|---|---|---|---|---|---|---|---|
| 1. | ಬೆಂಗಳೂರು | 279 | 15 | 6 | 405 | 5 | 10 | 125 | 6 | 4 | ----- |
| 2. | ಕೋಲಾರ | 1741 | 13 | 11 | 1885 | 3 | 5 | 143 | 5 | 6 | ----- |
| 3. | ತುಮುಕೂರು | 2700 | 14 | 1 | 3173 | 4 | 1 | 466 | 6 | 0 | ----- |
| | ಒಟ್ಟು | 4728 | 11 | 6 | 5463 | 13 | 4 | 735 | 1 | 10 | ----- |

"ಆ"

ಉಪ್ಪು ತಯಾರಿಕಾ ಪಟ್ಟಿ

| ವರ್ಷ | ಉಪ್ಪಿನ ಕ್ಷೇತ್ರಗಳ ಸಂಖ್ಯೆ | ಉತ್ಪಾದಕರ ಸಂಖ್ಯೆ | ಪ್ರತಿ ವ್ಯಕ್ತಿಗೆ ತೆರಿಗೆ ದರ | ಒಟ್ಟು ಆದಾಯ |
|---|---|---|---|---|
| 1873-74 | 3141 | 3699 | 1 ಆಣೆಯಿಂದ 65ರೂ ವರೆಗೆ | 18491 ರೂ 12ಆಣೆ 9ಕಾಸು |
| 1874-75 | 2202 | 2832 | 1 ಆಣೆಯಿಂದ 60ರೂ8ವರೆಗೆ | 16539ರೂ 0ಆಣೆ 2ಕಾಸು |
| ಇಳಿತ | 939 | 867 | - | 1952ರೂ 12ಆಣೆ 7ಕಾಸು |

"ಇ"

ಉಪ್ಪು ತಯಾರಿಕಾ ಪಟ್ಟಿ 1877-78

| ವರ್ಷ | ಉಪ್ಪಿನಕ್ಷೇತ್ರಗಳ ಸಂಖ್ಯೆ | ಉತ್ಪಾದಕರ ಸಂಖ್ಯೆ | ಪ್ರತಿ ವ್ಯಕ್ತಿಗೆ ತೆರಿಗೆದರ | ಒಟ್ಟು ಆದಾಯ |
|---|---|---|---|---|
| 1876-77 | 1656 | 1786 | 1 ಆಣೆ 1 ಕಾಸಿನಿಂದ 26 ರೂವರೆಗೆ | 5287 |
| 1877-78 | 1840 | 2449 | 1 ಆಣೆ 0 ಕಾಸಿನಿಂದ 16 ರೂ ವರೆಗೆ | 6114 |

ಕೋಲಾರ ಜಿಲ್ಲೆಯಲ್ಲಿ ಉಪ್ಪಿನ ಉತ್ಪಾದನೆಯು ಹೆಚ್ಚಾಗಿತ್ತು. (ಉದ್ಧೃತ ರಾಜಪ್ಪ. ಡಿ.ಸಿ. 1995:29).

ಕೋಣಗಳು ಉಪ್ಪಾರರ ಬದುಕಿನಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಇವು ಅವರ ಬದುಕಿನ ಅವಿಭಾಜ್ಯ ಅಂಗವಾಗಿ, ಮಹತ್ವ ಪಡೆದಿವೆ. ಉಪ್ಪನ್ನು ತಯಾರಿಸುವ ಪ್ರದೇಶಗಳು ಕೊರಕಲು ಮತ್ತು ಇಳಿಜಾರು ಪ್ರದೇಶಗಳಗಿದ್ದರಿಂದ ಇಲ್ಲಿಗೆ ಗಾಡಿಗಳು ಬರುವಂತಿರಲಿಲ್ಲ. ರಸ್ತೆಗಳಿಲ್ಲದ ಕೊರಕಲು ಜಾಗದಲ್ಲಿ ಇವರ ಕಾಯಕ ನಡೆಯುತ್ತಿರುವುದರಿಂದ, ಈ ಸ್ಥಳಗಳಿಗೆ ಮಣ್ಣನ್ನು ಹೊತ್ತು ಸಾಗಿಸಲು ಮತ್ತು ಇಲ್ಲಿ ತಯಾರಾದ ಉಪ್ಪನ್ನು ಹಳ್ಳಿಗಳಿಗೆ ಮಾರಾಟಕ್ಕೆ ಸಾಗಿಸಲು ಕೋಣಗಳೇ ಬೇಕು. ಈ ಕಾರಣದಿಂದ ಕೋಣಗಳು ಉಪ್ಪಾರರ ಹಡಗುಗಳು ಎನ್ನಬಹುದು. ಮರಳು ಗಾಡಿನಲ್ಲಿಯ ಒಂಟೆ ಇದ್ದಂತೆ. ಈಗಲೂ ಚಿತ್ರದುರ್ಗದ ಸುತ್ತ ಮುತ್ತಲ ಪ್ರದೇಶಗಳಲ್ಲಿ ಕೋಣಗಳನ್ನು ತೋಟಕ್ಕೆ ಮಣ್ಣು ಸಾಗಿಸಲು ಉಪಯೋಗಿಸುವುದನ್ನು ನೋಡಬಹುದು.

ಗಾಡಿ, ವಾಹನಗಳು ಹೋಗದ ಹೊಲ ಗದ್ದೆ ತೋಟಗಳಿಗೆ ಫಲವತ್ತಾದ ಮಣ್ಣನ್ನು ಹೊತ್ತು ಸಾಗಿಸಲು ಕೋಣಗಳನ್ನು ಈಚಿನ ದಿನಗಳಲ್ಲಿ ಬಳಸುತ್ತಾರೆ. ಕೋಣಗಳು ಭಾರವನ್ನು ಹೊತ್ತು ಸಾರಾಗವಾಗಿ ಸಾಗುವುದರಿಂದಲೂ, ಏರು ತಗ್ಗುಗಳನ್ನು ನಿರಾಯಿಸುವಾಗ ಹತ್ತಿ ಇಳಿಯುವುದರಿಂದಲೂ ಕೋಣಗಳ ಉಪಯೋಗ ಈಗಲೂ ಬಳಕೆಯಲ್ಲಿದೆ. ಎಲ್ಲಾ ಉಪ್ಪಾರರ ಮನೆಗಳಲ್ಲೂ ಕೋಣಗಳಿಲ್ಲ. ಕೆಲ ಕುಟುಂಬದವರು 25 ರಿಂದ 30 ಕೋಣಗಳನ್ನು ಸಾಕಿಕೊಂಡು ಅವುಗಳಿಂದಲೇ ಬದುಕುತ್ತಿದ್ದಾರೆ. ಇವರು ರೈತರ ಹೊಲ ಗದ್ದೆಗಳಿಗೆ ಫಲವತ್ತಾದ ಹೊಸಮಣ್ಣನ್ನು ತಂದು ಹಾಕುವ ಗುತ್ತಿಗೆ ಕೆಲಸವನ್ನುವಹಿಸಿಕೊಳ್ಳುತ್ತಾರೆ.

ಉಪ್ಪು ತಯಾರಿಸಲು ಮಣ್ಣನ್ನು ಕೆರೆಯ ಪಕ್ಕದ ಅಥವಾ ಚೌಗು ಪ್ರದೇಶಗಳಿಂದ ಚೌಳುಮಣ್ಣನ್ನು ತೆಗೆದುಕೊಳ್ಳುತ್ತಿದ್ದರು ಇದಲ್ಲದೆ ವ್ಯವಸಾಯ ಯೋಗ್ಯವಲ್ಲದ ಹೊಲಗಳಿಂದ ಮಣ್ಣನ್ನು ತೆಗೆದುಕೊಂಡು ಹೋಗುವುದರಿಂದ ಹೊಲ, ವ್ಯವಸಾಯ ಯೋಗ್ಯವಾಗುತ್ತಿತ್ತು. ಒಳನಾಡಿನ ಮಣ್ಣಿನಿಂದ ಉಪ್ಪನ್ನು ತಯಾರಿಸಿ ಸುತ್ತಲು ಜನರಿಗೆ ಒದಗಿಸುವುದರ ಜೊತೆಗೆ ಹೊಲದ ಮಣ್ಣಿನಿಂದ ಉಪ್ಪಿನ ಅಂಶವನ್ನು ತೆಗೆದುದರಿಂದ, ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗುತ್ತಿತ್ತು.

**೬.೩. ಅವಲಂಬಿತವೃತ್ತಿಗಳು :**

1880 ರಲ್ಲಿ ಬ್ರಿಟಿಷ್ ಸರ್ಕಾರದ ಕಾಯಿದೆಯು ಉಪ್ಪಾರರ ಆರ್ಥಿಕ ಜೀವನದ ಮೇಲೆ ಋಣಾತ್ಮಕ ಪ್ರಭಾವ ಬೀರಿತು. ಅಸ್ತವ್ಯಸ್ತತೆಗೆ ಕಾರಣವಾಯಿತು. ಇದರಿಂದ ಜೀವನವೇ ಚಿಂತಾಜನಕವಾಗಿ ಸರ್ಕಾರದ ಕಣ್ಣು ತಪ್ಪಿಸಿ ಉಪ್ಪನ್ನು ತಯಾರಿಸಲು ಸಾಧ್ಯವಾಗದೇ ತಮ್ಮ ಜೀವನೋಪಾಯಕ್ಕೆ ಮರಗೆಲಸ, ಗಾರೆ, ಮಣ್ಣಿನ ಕೆಲಸ, ಕಲ್ಲು ಕೆಲಸ, ಮನೆಗಳ ನಿರ್ಮಾಣ ಮತ್ತು ವ್ಯವಸಾಯ ಮುಂತಾದ ಕೆಲಸಗಳಲ್ಲಿ ತೊಡಗಿದರು.

ತಮ್ಮ ಮೂಲ ವೃತ್ತಿಯನ್ನು ಬಿಟ್ಟು ಜೀವನೋಪಾಯಕ್ಕೆ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿ ಒಗ್ಗಿಕೊಳ್ಳಲು ಸಾಧ್ಯವಾಗದೇ ಇದ್ದುದರಿಂದ ಇವರ ಆರ್ಥಿಕ ಸ್ಥಿತಿ ಹದಗೆಟ್ಟಿತು. ಈ ಕಾರಣದಿಂದಲೇ ಕರ್ನಾಟಕದ ಅನೇಕ ಭಾಗಗಳಲ್ಲಿ ಇವರು ತುಂಬ ಹಿಂದುಳಿದಿದ್ದಾರೆ. ಈಚೀನ ದಿನಗಳಲ್ಲಿ ಹೆಚ್ಚಾಗಿ ಪ್ರಧಾನ ಕಸುಬನ್ನಾಗಿಸಿಕೊಂಡ ಕುಟುಂಬಗಳು ಕಂಡುಬರುತ್ತವೆ. ವ್ಯವಸಾಯದ ಮೇಲೆ ಆಯಾಯಾ ಪ್ರದೇಶದ ಕೃಷಿಕರ ಪ್ರಭಾವ ಮೇಲಾಗಿದೆ. ಒಕ್ಕಲಿಗರು ವೀರಶೈವ ಮತ್ತು ಇತರ ಕೃಷಿಪ್ರಧಾನ ವೃತ್ತಿಯ ಸಮುದಾಯದ ವ್ಯವಸಾಯದ ರೀತಿಯನ್ನು ಅನುಸರಿಸುತ್ತಾರೆ.

ಮೂಲ ವೃತ್ತಿಗಳನ್ನು ಅನಿವಾರ್ಯ ಕಾರಣಗಳಿಂದ ಬಿಟ್ಟಾಗ, ಜೀವನೋಪಾಯಕ್ಕಾಗಿ ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾದಾಗ ಅನೇಕ ವೃತ್ತಿಗಳು ಕೈಗೆಟುಕದಾದಾಗ ತಮಗೆ ಎಟುಕುವ ವೃತ್ತಿಗಳಲ್ಲಿ ತೊಡಗಿಕೊಂಡರು. ಮೂಲವೃತ್ತಿಯಾದ ಉಪ್ಪು ಮಾಡುವ ಕೆಲಸಕ್ಕೂ ಜೀವನೋಪಾಯಕ್ಕೆ ಆರಿಸಿಕೊಂಡ ವೃತ್ತಿಗೂ ಯಾವುದೇ ಸಂಬಂಧವಿರಲಿಲ್ಲ. ಈ ಕಾರಣದಿಂದಾಗಿ ಬಡತನದಲ್ಲಿಯೇ ಇವರು ಉಳಿಯಬೇಕಾಯಿತು. ಆ ಕಾಲದಲ್ಲಿ ತಮಗೆ ಲಭ್ಯವಿದ್ದ ಅಲ್ಪಸ್ವಲ್ಪ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಜೊತೆಗೆ "... they took to masonry work, stone-cutting, and making shell line.." (Enthoven R.E. 1990: 396) ಮರಗೆಲಸ, ಗಾರೆ ಕೆಲಸ, ಇಟ್ಟಿಗೆ ಮಾಡುವ ಕೆಲಸ, ಕಲ್ಲು ಕಡಿಯುವ ಕೆಲಸ, ಸುಣ್ಣ ಮಾಡುವ ಕೆಲಸ ಇನ್ನು ಮುಂತಾದ ಕೆಲಸಗಳನ್ನು ಇಂದಿಗೂ ಮಾಡುತ್ತಿದ್ದಾರೆ.

**ಕೃಷಿ:** ಮಾಳಿಗಳಿಂದ ಊರುಗಳಿಗೆ ಬಂದಾಗ ಹೆಚ್ಚು ಜನರು ವ್ಯವಸಾಯ ಮಾಡಲು ಮುಂದಾದರು. ತಮಗೆ ಸುಲಭದಲ್ಲಿ ಸಿಗುವ ಭೂಮಿಯನ್ನೂ ಖರೀದಿಸಿ ಆನಂತರ ಕಾಲದಲ್ಲಿ ಭೂಮಿಯ ಸುತ್ತ ಮುತ್ತಲಿನ ಸ್ಥಳಗಳನ್ನು ವ್ಯವಸಾಯಕ್ಕೆ ಯೋಗ್ಯವಾದ ಸ್ಥಳಗಳನ್ನಾಗಿ ಮಾಡಿಕೊಂಡರು. ಆ ವೇಳೆಯಲ್ಲಿ ಇವರು ಒಕ್ಕಲಿಗರಿಂದ ಪ್ರಭಾವಿತರಾದರು. ತೆಂಗು, ಭತ್ತ, ರಾಗಿ, ಜೋಳ, ಮುಂತಾದವುಗಳನ್ನು ಬೆಳೆದು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಒದಗಿಸಿಕೊಳ್ಳುತ್ತಾ ಬಂದರು. ಆದರೆ ಮೂಲ ವೃತ್ತಿಯಿಂದ ತಕ್ಷಣ ಈ ವ್ಯವಸಾಯಕ್ಕೆ ಹೊಂದಿಕೊಳ್ಳಲು ಕಷ್ಟವಾದುದರಿಂದ ಮೊದಮೊದಲು ನಷ್ಟವನ್ನು ಅನುಭವಿಸಿದರು. ವ್ಯವಸಾಯಕ್ಕೆ ಸಂಬಂಧಿಸಿದ ಆಚರಣೆಗಳೆಲ್ಲ ಅವರು ವಾಸಿಸುವ ಪ್ರದೇಶದ ಬಹು ಸಂ ಖ್ಯಾ ಸಮುದಾಯವನ್ನು ಅವಲಂಬಿಸಿರುತ್ತವೆ.

**ಮರಗೆಲಸ:** ಇದು ಕಲಿತವೃತ್ತಿಯಾದುದರಿಂದ ಈ ಕೆಲಸದಲ್ಲಿ ಹೆಚ್ಚು ನಾಜೂಕನ್ನು ಗುರುತಿಸಲು ಸಾಧ್ಯವಿಲ್ಲ. ಮನೆಗಳ ಬಾಗಿಲು, ಕಿಟಕಿ, ಗಾಡಿ ಮತ್ತು ಪೀಠೋಪಕರಣಗಳನ್ನು ಮಾಡುವುದೇ ಮುಖ್ಯವಾಗಿದೆ. ಇದರ ಜೊತೆ ಜೊತೆಗೆ ವ್ಯವಸಾಯ ಉಪಕರಣಗಳನ್ನು ಮಾಡುತ್ತಾರೆ.

**ಸುಣ್ಣ ತಯಾರಿಕೆ:** "ಉಪ್ಪು ಮಾಡುವ ಕೆಲಸ ತಪ್ಪಿದ ಬಳಿಕ ಮೇಲಿನ ಉಪ್ಪಾರರಂತೆ ಮನೆ ಕಟ್ಟುವ, ಕಲ್ಲು ಹೊಡೆಯುವ ಹೋರೆಗಳನ್ನೇ ಮಾಡುತ್ತಿದ್ದರು. ಅದರಲ್ಲಿ ಹೊಟ್ಟೆ ತುಂಬದಾದಾಗ ಬಳಿಕ ಶಿಂಪು ಸುಟ್ಟು ಸುಣ್ಣ ಮಾಡುವ ಹೋರೆಯನ್ನು ಕೈಕೊಂಡಿದ್ದಾರೆ" (ಗ್ಯಾಝೆಟೀಯರು ಮುಂಬಾಯಿ : 1893: 151). ಶಿಂಪು ಸುಣ್ಣ ಮಾಡುವ ಕಲೆಯನ್ನು ಇವರು ಕರಗತ ಮಾಡಿಕೊಂಡಿದ್ದಾರೆ. ಶಿಂಪನ್ನೂ ಸುಟ್ಟು ಸುಣ್ಣವನ್ನು ತಯಾರಿಸಿ, ಅದರಿಂದ ಬಂದ ಹಣದಿಂದ ಜೀವನ ಸಾಗಿಸುವ ಅನೇಕ ಕುಟುಂಬಗಳಿವೆ. ಇವರು ಸುಣ್ಣವನ್ನು ತಯಾರಿಸುತ್ತಿದ್ದರಿಂದ ಸುಣ್ಣ ಉಪ್ಪಾರರೆಂಬ ಹೆಸರು ಬಂದಿದೆ.

ಊರಿನಿಂದ ಹೊರಗೆ ಸುಣ್ಣವನ್ನು ತಯಾರು ಮಾಡುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಆವಿಗೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಈ ಆವಿಗೆಗಳು ಸುಮಾರು ನಾಲ್ಕು ಫೂಟ್ ವ್ಯಾಸವುಳ್ಳ ವರ್ತುಳಾಕಾರವಾದ ನೆಲದ ಸುತ್ತ ಮುತ್ತ ಜಿಗುಟಾದ ಕೆಂಪು ಅರ್ಲಿನ ಗೋಡೆಯನ್ನು ನಾಲ್ಕು ಫೂಟ್ ಎತ್ತರವಾಗಿ ಕಟ್ಟಿ ಸಿದ್ಧಪಡಿಸಿಕೊಳ್ಳುತ್ತಿದ್ದರು. ಆವಿಗೆಗಳಿಗೆ ನಾಲ್ಕು ದಿಕ್ಕುಗಳಲ್ಲೂ ತಳಭಾಗದಲ್ಲಿ ಕಿಂಡಿಗಳನ್ನು ಬಿಡುತ್ತಾರೆ. ಆವಿಗೆ ಒಳಗೆ ಮೊದಲು ಕಟ್ಟಿಗೆಗಳನ್ನು ತುಂಬಿ, ಆ ಮೇಲೆ ಶಿಂಪುಗಳನ್ನು ತುಂಬಿಸಿ, ತಳಭಾಗದ ಕಿಂಡಿಗಳಿಂದ ಬೆಂಕಿಯನ್ನೂ ಹೊತ್ತಿಸುತ್ತಾರೆ. ಕಟ್ಟಿಗೆಗೆ ತಗುಲಿದ ಬೆಂಕಿಯು ಶಿಂಪುವನ್ನು ಚೆನ್ನಾಗಿ ಸುಡುತ್ತದೆ.

ಇದೇ ರೀತಿ ಇಟ್ಟಿಗೆ ತಯಾರಿಸುವ, ಕಲ್ಲು ಕಡಿಯುವ ಮತ್ತು ಗಾರೆಕೆಲಸಗಳಲ್ಲಿ ತೊಡಗಿದ್ದಾರೆ. "....they are engaged as masons and in lewing stones, building walls and houses and sinking wells and tanks" (Syed Siraj Ul Hassan :1989:623).

ಉಪ್ಪಾರರು ತಮ್ಮ ಮೂಲವೃತ್ತಿಯನ್ನು ಬಿಟ್ಟು ಬೇರೆ ಬೇರೆ ಕೆಲಸಗಳನ್ನು ತಕ್ಷಣದಲ್ಲಿ ಹೇಗೆ ಕರಗತಮಾಡಿಕೊಂಡರು ಎನ್ನುವ ಪ್ರಶ್ನೆ ಎದುರಾಗುತ್ತದೆ. ಪೂರ್ವದಲ್ಲಿ ಈ ಜನಾಂಗದವರು ಉಪ್ಪನ್ನು ತಯಾರಿಸುವ ಜೊತೆಗೇನೆ ಬೇರೆ ಬೇರೆ ಕುಶಲ ಕೆಲಸಗಳು ತಿಳಿದಿದ್ದರು ಎನ್ನುವ ದಾಖಲೆಗಳಿವೆ. ವಿಜಯನಗರದ ಅರಸರಕಾಲದಲ್ಲಿ ಉಪ್ಪಾರರು "ಕಲ್ಲು ಕೆಲಸದಲ್ಲಿ ನಿಪುಣರಾಗಿದ್ದರು, ಪಾಳೆಯಗಾರರ ಕಾಲದಲ್ಲಿ ಚಿತ್ರದುರ್ಗದ ಕೋಟೆಯ ಕಲ್ಲು ಕಂಭಗಳೂ, ಉಯ್ಯಾಲೆ ಕಂಭಗಳೂ, ದೇಗುಲಗಳೂ, ಶಿಲಾವಿಗ್ರಹಗಳೂ ಉಪ್ಪಾರರಿಂದಲೇ ನಿರ್ಮಿತವಾದುವುಗಳಾಗಿವೆ. ಈಗಲೂ ಬಳ್ಳಾರಿ, ಅನಂತಪುರ ಜಿಲ್ಲೆಗಳಲ್ಲಿ ಕಲ್ಲುಕೆಲಸದಲ್ಲಿ ನಿಪುಣರಾದ ಉಪ್ಪಾರರ ಮನೆತನಗಳೂ ಅನೇಕವಿರುವುದು " (ಲಕ್ಷಣ್ ತೆಲಗಾವಿ ಎಂ.ವಿ. ಶ್ರೀನಿವಾಸ್ 1995:411) ಇದಲ್ಲದೇ ಈ ಜನವರ್ಗ ಅಂತರ್ ಜಿಲ್ಲಾ ವ್ಯಾಪಾರದಲ್ಲಿಯೂ ನಿಪುಣರಾಗಿದ್ದರು. ರಾಯದುರ್ಗದ ಸೀಮೆಯಲ್ಲಿ ಕ್ರಿ.ಶ. ೧೬ ನೆಯ ಶತಮಾನದಲ್ಲಿ ಅನೇಕ ಉಪ್ಪಾರರು ನೆಲೆಸಿದ್ದರು. ಇವರು ರಾಯದುರ್ಗದಿಂದ ಚಿತ್ರದುರ್ಗದ ಮಾರ್ಗವಾಗಿ ಮಲೆನಾಡಿಗೆ ಹೋಗಿ ಅಲ್ಲಿ ಹೋಳು ಅಡಿಕೆಯನ್ನು ಕೊಂಡು ಕೋಣಗಳ ಮೇಲೆ ಹೇರಿಕೊಂಡು ಬಳ್ಳಾರಿ ಮುಂತಾದೆಡೆಗೆ ತಂದು ಮಾರಿ ವಿಶೇಷವಾಗಿ ಲಾಭ ಸಂಪಾದನೆ ಮಾಡುತ್ತಿದ್ದರು. (ಅದೇ 1995:441) ಹೀಗೆ ಪೂರ್ವದಿಂದಲೇ ಇವರಿಗೆ, ಈಗ ಮಾಡುವ ಕೆಲಸಗಳು ತಿಳಿದಿದ್ದವು ಎನ್ನುವುದು ಸ್ಪಷ್ಟವಾಗುತ್ತವೆ. ಈ ಕಾರಣದಿಂದಲೇ ಒಂದು ಮೂಲವೃತ್ತಿಯಿಂದ ಬೇರೆ ಬೇರೆ ವೃತ್ತಿಗೆ ಕೈಹಾಕಿದಾಗಲೂ ಸಮರ್ಥವಾಗಿ ಮಾಡಲು ಅವರ ಆನುವಂಶೀಯತೆ ಸಹಾಯ ಮಾಡುತ್ತಿದ್ದಿರಬೇಕು. "As a consequence, most of the Upparas have changed their original occupation, and have taken to agriculture, those that are living in large towns are bricklayers and contractors, " (The Mysore Tribes and Castes Vol. IV -655).

# ಅಧ್ಯಾಯ-೭

## ಉಪಸಂಹಾರ

# ಉಪಸಂಹಾರ

ಇದುವರೆಗೂ ದಕ್ಷಿಣಕರ್ನಾಟಕದ ಉಪ್ಪಾರರ ಜೀವನ ವಿಧಾನ, ಅವರ ಸಂಸ್ಕೃತಿಯ ಸ್ವರೂಪ ಏನೆಂಬುದನ್ನು ವಿವೇಚಿಸುತ್ತ ಅವರ ಜಾನಪದದ ಮಹತ್ವವನ್ನು ಗುರುತಿಸಲಾಯಿತು. ದಕ್ಷಿಣ ಕರ್ನಾಟಕದ ಉಪ್ಪಾರರು ಅತ್ಯಂತ ಸರಳ ಜೀವನ ವಿಧಾನವನ್ನು ರೂಢಿಸಿಕೊಂಡು ಬಂದಿರುವ ಜನಪದ ವರ್ಗ(Flok Group). ಹಳೆಯವು ಎನ್ನಬಹುದಾದ ಅನೇಕ ಸಾಂಸ್ಕೃತಿಕ ಅಂಶಗಳನ್ನು ಇವರ ಜಾನಪದದಲ್ಲಿ ನೋಡಿದ್ದೇವೆ. ಕರ್ನಾಟಕದ ಇತರ ಜನಪದ ವರ್ಗಗಳಿಗೆ ಹೋಲಿಸಿದರೆ ಈ ಜನ ಹಳೆಯ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಒಂದು ವಿಶಿಷ್ಟ ಜನಪದವರ್ಗ ಎಂದು ದೃಢವಾಗಿ ಹೇಳಬಹುದು. ಇವರಿಗೆ ತಮ್ಮೊಡನೆ ಸಹಜೀವನ ನಡೆಸುವ ಹೊಲೆಯರು ಮುಂತಾದ ವರ್ಗಗಳ ಜೀವನದ ಪ್ರಭಾವವೂ ತಕ್ಕ ಮಟ್ಟಿಗೆ ಆಗಿದೆ ಎಂಬುದು ಈ ಅಧ್ಯಯನದಿಂದ ತಿಳಿದು ಬಂದಿದೆ. ಮುಖ್ಯವಾಗಿ ಇವರ ಬದುಕಿನಲ್ಲಿ ವಿಶೇಷ ಸ್ಥಾನ ಪಡೆದಿರುವ ಬ್ರಾಹ್ಮಣ, ಒಕ್ಕಲಿಗ ಮತ್ತು ಲಿಂಗಾಯತರ ಪ್ರಭಾವ ಇವರ ಜೀವನ ಮತ್ತು ಸಂಸ್ಕೃತಿಯ ಮೇಲೆ ಅಗಾಧವಾಗಿ ಆಗಿರುವುದು ಕಂಡು ಬರುತ್ತದೆ.

ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನದ ದಿಂದ ಈ ಕೆಳಗಿನ ಅಂಶಗಳನ್ನು ಕಂಡು ಕೊಳ್ಳಲಾಗಿದೆ.

೧. ಹಿಂದೂ ಧರ್ಮ ರೂಪುಗೊಳ್ಳುವುದಕ್ಕೂ ಮೊದಲೇ ಉನ್ನತ ಸಂಸ್ಕೃತಿಯಾಗಿ ರೂಪುಗೊಂಡಿದ್ದ ದ್ರಾವಿಡ ಸಂಸ್ಕೃತಿಯ ಹಲವು ಅಂಶಗಳು ಇಂದಿಗೂ ಇವರಲ್ಲಿ ಕಾಣಸಿಗುತ್ತವೆ. ಈ ಜನಪದ ವರ್ಗದ ವೈಶಿಷ್ಟ್ಯತೆಗೆ ಕಾರಣವಾಗಿರುವ ಅಂಶವೂ ಇದೇ. ದ್ರಾವಿಡ ಧರ್ಮದಲ್ಲಿದ್ದ ದುರ್ಗಾದಿ ಶಕ್ತಿದೇವತಾರಾಧನೆ, ಪ್ರಾಣಿಬಲಿಕೊಡುವುದು, ನಾಗ, ಬಸವ, ಗಿಡ-ಮರಗಳ ಆರಾಧನೆ, ಹುತ್ತಪೂಜೆ, ಪ್ರಕೃತಿ ಸಂಕೇತ ರೂಪವಾದ ಶಿವ ಮತ್ತು ಲಿಂಗದ ಆರಾಧನೆ, ಪ್ರೌಢವಿವಾಹ ಆಚರಣೆಯಲ್ಲಿರುವುದು, ವಿಧವಾವಿವಾಹ, ಬಹುಪತ್ನಿವಿವಾಹ, ದಾಂಪತ್ಯ ವಿಚ್ಛೇದನಗಳಿಗೆ ಅವಕಾಶವಿರುವುದು, ಸತ್ತವರನ್ನು ಹೂಳುವುದು, ಗಿಡ-ಪ್ರಾಣಿ, ವಸ್ತುಗಳ ಹೆಸರಿನಲ್ಲಿ ಕುಲಗಳನ್ನು ಗುರುತಿಸುವುದು ಇವೇ ಮುಂತಾದ ದ್ರಾವಿಡ ಪರಂಪರೆಯ ಅಂಶಗಳನ್ನು ಇವರಲ್ಲಿ ಕಾಣುತ್ತೇವೆ.

ಇಲ್ಲಿ ಉಪ್ಪಾರ ಸಂಸ್ಕೃತಿಗೇ ವಿಶಿಷ್ಟವಾಗಿರುವ ದ್ರಾವಿಡ ಸಂಸ್ಕೃತಿಯ ಕೆಲ ಅಂಶಗಳನ್ನು ಪಟ್ಟಿ ಮಾಡಬಹುದು.

೧:೧. ಪ್ರಾಣಿಗಳಿಗೆ ದೈವತ್ವವನ್ನು ಆರೋಪಿಸಿ ಆರಾಧಿಸುವ ಪದ್ಧತಿ ವಿಶೇಷ ಉಲ್ಲೇಖಾರ್ಹವಾದುದು. ಹೀಗೆ ದೈವತ್ವಕ್ಕೇರಿದ ಪ್ರಾಣಿಗಳಲ್ಲಿ ಅತ್ಯಂತ ಮುಖ್ಯವಾದುದು ನಾಗರಹಾವು ಮತ್ತು ಹಸು-ಎತ್ತುಗಳು. ಸುಬ್ರಹ್ಮಣ್ಯನನ್ನು ಮನೆದೇವರಾಗಿ ಸ್ವೀಕರಿಸಿರುವ ಕೆಲವು ಕುಟುಂಬಗಳಲ್ಲಿ ಈ ಆರಾಧನೆ ಪ್ರಮುಖವಾಗಿದೆ. ಬಸವಣ್ಣನ ಅನುಯಾಯಿಗಳಿಗೆ ಎತ್ತುಗಳು ಪ್ರಮುಖವಾಗಿ ಕಂಡುಬರುತ್ತದೆ.

ನಾಗಾರಾಧನೆಯ ಪದ್ಧತಿ ಇವರಲ್ಲಿ ಪ್ರಚಲಿತವಿರುವುದರಿಂದ ಇವರು ದ್ರಾವಿಡ ಮೂಲದವರೆಂಬುದು ಸ್ಪಷ್ಟವಾಗುತ್ತದೆ. ಇಂದಿಗೂ ಮದುವೆಯ ಹಿಂದಿನ ದಿನ ಹುತ್ತದ ಮಣ್ಣನ್ನು ತಂದು ಅದರಿಂದ ವೇದಿಕೆ ನಿರ್ಮಿಸಿ ಅಲ್ಲಿಯೇ ತಾಳಿಕಟ್ಟಿಸುವುದು ಕಂಡುಬರುತ್ತದೆ. ನಾಗರ ಪಂಚಮಿಯ ದಿನ ನಾಗರ ಹುತ್ತಕ್ಕೆ ಹಾಲು ಎರೆದು ವಿವಿಧ ರೀತಿಯ ಸಿಹಿ ಉಂಡೆ ನೈವೇದ್ಯ ಇಡುವ ಸಂಪ್ರದಾಯವಿದೆ. ನವಜೋಡಿಗಳನ್ನು ಹಿರಿಯರು ಆರ್ಶೀವ ದಿಸುವ ಆಚರಣೆಯೂ ಇದೆ.

೧೩. ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಆರಾಧನೆ ಇವರಲ್ಲಿ ಹೆಚ್ಚು ಪ್ರಚಲಿತವಿದೆ. ದ್ರಾವಿಡರಲ್ಲಿ ಪ್ರಚಲಿತವಿದ್ದ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಈ ಶಕ್ತಿದೇವತಾರಾಧನೆ ಪ್ರಾಮುಖ್ಯತೆಗೆ ಕಾರಣವಾಗಿದೆ ಎಂದು ಈಗಾಗಲೇ ಮಾನವಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ಶಕ್ತಿದೇವತೆಯು ಅಮ್ಮ ಮಾರಮ್ಮ ಮಸಿಯಮ್ಮ ಕರಿಯಮ್ಮ ದುರ್ಗಮ್ಮ ಮತ್ತು ಅಂತರಘಟ್ಟಮ್ಮ ಇತ್ಯಾದಿ ಹೆಸರುಗಳಲ್ಲಿ ಆರಾಧನೆಗೊಳ್ಳುವುದನ್ನು ಕಾಣುತ್ತೇವೆ. ಈ ಜನವರ್ಗವು ತಮ್ಮ ಬದುಕಿನ ಅವಧಿಯಲ್ಲಿ ಘಟಿಸುವ ಯಾವುದೇ ಅನಾಹುತ, ಅನರ್ಥ ತೊಂದರೆಗಳಿಗೂ ಈ ದೇವತೆಗಳ ಕೋಪವೇ ಕಾರಣ ಎಂದು ಭಾವಿಸುತ್ತಾರೆ. ಈ ಶಕ್ತಿದೇವತಾರಾಧನೆ ದ್ರಾವಿಡ ಸಂಸ್ಕೃತಿಯ ಪ್ರಧಾನ ಅಂಶವಾಗಿದೆ.

೧೪. ದ್ರಾವಿಡರಲ್ಲಿದ್ದ ಕುಟುಂಬ ವ್ಯವಸ್ಥೆಯು ಕುಲಪದ್ಧತಿಯನ್ನಾಧರಿಸಿದುದು. ಯಾವುದಾದರೂ ಸಸ್ಯ ಪ್ರಾಣಿ, ಅಥವಾ ವಸ್ತುವನ್ನು ತಮ್ಮ ಕುಲದ ಪೂರ್ವಜ ಎಂದು ಭಾವಿಸಿ ಅದನ್ನು ಪೂಜಿಸುವ ಮತ್ತು ಅದಕ್ಕೆ ಸಂಬಂಧಿಸಿದಂತೆ ಕೆಲವು ನಿಷೇಧಗಳನ್ನು ಪಾಲಿಸುವ ಕುಲದೇವತಾರಾಧನಾ ಪದ್ಧತಿ ಇವರಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ.

'ಗಣಬರುವುದು' ಇವರಲ್ಲಿ ಕಂಡು ಬರುವ ಮತ್ತೊಂದು ವಿಶೇಷ ಇದನ್ನು ದೆವ್ವ ಮೈಮೇಲೆ ಬಂದದ್ದೆಂದು ಈ ರೀತಿ ಆವಾಹನೆಗೊಳ್ಳುವುದನ್ನು 'ಗಣ' ಬರುವುದು ಎನ್ನುತ್ತಾರೆ. ತುಂಬುವನ ನಡೆಸದೆ ದುರ್ಮರಣಕ್ಕೀಡಾಗಿ ಸತ್ತವ್ಯಕ್ತಿಗಳ ಆತ್ಮವು ದೆವ್ವ-ಭೂತಗಳಾಗಿ ಬದುಕಿದ್ದಾಗ ತಮ್ಮ ಪ್ರೀತಿಗೆ ಪಾತ್ರರಾಗಿದ್ದವರ ಮೇಲೆ ಬರುತ್ತವೆ ಎಂದು ನಂಬುತ್ತಾರೆ. ಹಾಗೆ ಮೈಮೇಲೆ ಆವಾಹನೆಗೊಂಡ ದೆವ್ವಕ್ಕೆ ಅತಿಮಾನುಷವಾದ ಶಕ್ತಿ ಇರುತ್ತದೆ ಎಂದು ಅವರು ತಿಳಿಯುತ್ತಾರೆ. ಅವುಗಳ ಅನುಗ್ರಹವನ್ನು ಪಡೆದುಕೊಳ್ಳಲು ಕಾಲಕಾಲಕ್ಕೆ ಹರಕೆ, ಬಲಿ, ಪರಿಸೆ ನಡೆಸುವುದು ಸಾಮಾನ್ಯ ಪ್ರೇತಗಳ ಕಲ್ಪನೆ ಹಾಗೂ ಅವುಗಳನ್ನು ಮಾಟದಿಂದ ಹತೋಟಿಗೆ ತರಬಹುದೆನ್ನುವ ನಂಬಿಕೆ ಪ್ರಬಲವಾಗಿ ಇವರಲ್ಲಿದೆ. ಈ ಕೆಲಸಕ್ಕೆ ಬೇರೆ ಸಮಾಜಗಳಿಂದಲೂ ಪರಿಣತ ಮಾಟಗಾರರನ್ನು ಕರೆಯಿಸುತ್ತಾರೆ.

- ಮೂಲತ: ದ್ರಾವಿಡದವು ಎಂದು ಹೇಳಲಾದ ಸತ್ತವರಿಗೆ ಮೋಕ್ಷ ದೊರೆಯುತ್ತದೆ ಎಂಬ ತಿಳುವಳಿಕೆ, ಪಾಪಕರ್ಮಿಗಳಿಗೆ ಪುನರ್ಜನ್ಮವಿದೆ ಎಂಬ ಕಲ್ಪನೆಗಳು ಇವರಲ್ಲಿ ಇಂದಿಗೂ ಇವೆ.

೨. ವೈದಿಕ ಸಂಸ್ಕೃತಿಯ ಪ್ರಭಾವ ಇವರ ಮೇಲೆ ಆಗಿದೆ. ನಂಬಿದ ದೈವಗಳಿಗೆ ಕಾಲಕಾಲಕ್ಕೆ ತಪ್ಪದೆ ಹರಕೆ, ಪ್ರಾರ್ಥನೆ ಸಲ್ಲಿಸುವುದು, ಕೆಲವು ಗ್ರಾಮ ದೇವತೆಗಳಿಗೆ ಪ್ರಾಣಿಬಲಿ ನಿಷೇಧಿಸಿರುವುದು, ಹೆಣ ಸುಡುವ ಪದ್ಧತಿ, ಸತ್ತವರ ದೇಹದ ಬೂದಿ ಮತ್ತು ಮೂಳೆಯನ್ನು ಗಂಗೆಯಲ್ಲಿ ತೇಲಿಬಿಡುವುದು, ಸತ್ತವರಿಗೆ ತಿಲತರ್ಪಣ ನೀಡುವುದು, ತೊಟ್ಟಿಲು ವಿವಾಹ ಕೈ ಬಿಟ್ಟಿರುವುದು, ವಿಧವಾ ವಿವಾಹ ಕಡಿಮೆ ಆಗಿರುವುದು, ದಾಂಪತ್ಯ ವಿಚ್ಛೇಧನ ಇಲ್ಲದಿರುವುದು, ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಜಾರಿಗೆ ಬಂದುದು, ಹಬ್ಬ ಹುಣ್ಣಿಮೆಗಳಲ್ಲಿ ಉಪವಾಸ ಆಚರಿಸುವುದು, ಜುಟ್ಟು ಬಿಟ್ಟುಕೊಳ್ಳುವ ಪದ್ಧತಿ ಇವೇ ಮುಂತಾದವುಗಳಲ್ಲಿ ಬ್ರಾಹ್ಮಣರ ಪ್ರಭಾವ ಕಂಡುಬರುತ್ತವೆ.

ಬ್ರಾಹ್ಮಣ ಮತ್ತು ವೈಶ್ಯರಲ್ಲಿ ಪ್ರಚಲಿತವಿರುವ ಕೆಲವು ಸಂಪ್ರದಾಯಗಳು ಇಲ್ಲಿ ಕಂಡು ಬರುತ್ತವೆ. ಗಂಡು ಮಕ್ಕಳಿಗೆ ಕಿವಿಚುಚ್ಚುವುದು, ಕಲಶಗಳಿಗೆ ತಾಳಿಕಟ್ಟುವುದು, ಮದುವೆಯ ದಿನ ಸ್ಮಾರ್ತಬ್ರಾಹ್ಮಣರಲ್ಲಿಇರುವಂತೆ ಕೊರಳಿಗೆ ಬಂದೀಸರ ಧರಿಸುವುದು, ಮೂರನೆಯ ಮದುವೆ ಮಾಡಿಕೊಳ್ಳುವಾಗ ಬ್ರಾಹ್ಮಣರಲ್ಲಿರುವಂತೆ ಹಾಲು ಬರುವ ಮರಕ್ಕೆ ತಾಳಿಕಟ್ಟಿ ಮದುವೆ ಆಚರಿಸುವ ಪದ್ಧತಿಗಳೂ ರೂಢಿಯಲ್ಲಿವೆ.

೩. ಇದೊಂದು ಸಮ್ಮಿಶ್ರಸಂಸ್ಕೃತಿ.ಶೈವ-ವೈಷ್ಣವ ಎರಡೂ ಮತ ಸಂಪ್ರದಾಯಗಳ ಸಮನ್ವಯವನ್ನು ಇವರಲ್ಲಿ ಕಾಣುತ್ತೇವೆ. ಶಿವ-ವಿಷ್ಣು ಇಬ್ಬರನ್ನು ಪೂಜಿಸುತ್ತಾರೆ. ವೈಷ್ಣವ ಪರಂಪರೆಗೇ ಹೆಚ್ಚು ಅಂಟಿಕೊಂಡಂತೆ ಕಂಡರೂ ಶೈವ ಸಂಪ್ರದಾಯದ ಅವಶೇಷಗಳಿರುವುದು ಕಾಣಬರುತ್ತದೆ ಇವರು ಒಂದು ಕಾಲದಲ್ಲಿ ಶೈವಮೂಲಕ್ಕೆ ಸೇರಿರಬೇಕು. ಶೈವ ಸಂಪ್ರದಾಯದ ಕಡೆಗೆ ಇವರು ವಾಲಿರಬೇಕು. ಅಲ್ಲದೆ ಹರಿಹರರಿಗೆ ನಡೆದುಕೊಳ್ಳುವಂತೆ ಮಾರಿಮಸಣಿಯರಿಗೂ ಇವರು ನಡೆದುಕೊಳ್ಳುತ್ತಾರೆ.

೪. ಇವರ ಸಾಹಿತ್ಯ ಸತ್ವಪೂರ್ಣವಾಗಿದೆ. ಬದುಕಿನ ಎಲ್ಲಾ ಘಟ್ಟಗಳ ಸಮಗ್ರ ಪರಿಚಯ ಇಲ್ಲಿ ಆಗುತ್ತದೆ.

೫. ಪ್ರಧಾನವಾಗಿ ಕೃಷಿಕರಾದ್ದರಿಂದ ವ್ಯವಸಾಯ ಮತ್ತು ಬೇಟೆಯಲ್ಲಿ ಪ್ರದರ್ಶಿಸುವ ತಾಂತ್ರಿಕ ಜ್ಞಾನ ಇವರಿಗೆ ಅಸಾಮಾನ್ಯವಾದುದು. ಇವರು ಬಳಸುವ ವಸ್ತುಗಳ ಹೆಸರುಗಳು ವಿಶಿಷ್ಟವಾಗಿವೆ. ನೇಗಿಲು, ಸಲಿಕೆ, ಹಾರೆ, ಹುಲುಚಿ, ಕೊಡ್ಲಿ, ದೊಡ್ಡತ್ತಿ , ಕೊಳಗ, ಸೇರು ಬಲೆ, ಮಾರಿ ಬಲೆ, ಇತ್ಯಾದಿಗಳು ತಮ್ಮ ಮೂಲ ಸ್ವರೂಪದಲ್ಲೇ ಉಳಿದು ಬಂದಿರುವುದು ಇವರ ಯಂತ್ರ ಕೌಶಲ್ಯಕ್ಕೂ ಅವುಗಳ ಉಪಯುಕ್ತತೆಗೂ ಸಾಕ್ಷಿಯಾಗಿವೆ.

೬. ಆಹಾರ ಪಾನೀಯಗಳು ಅಲ್ಲಿಯ ಭೌಗೋಳಿಕ ವ್ಯತ್ಯಾಸದಿಂದಾಗಿ ಕರ್ನಾಟಕದ ಇತರ ಜನಪದ ವರ್ಗಗಳ ಆಹಾರ ಪದ್ಧತಿಗಿಂತ ಭಿನ್ನವಾಗಿವೆ ಇವರು ನಿಸರ್ಗದತ್ತವಾದ ಆಹಾರ ಪದಾರ್ಥಗಳಲ್ಲದೆ ತಾವೇ ಸ್ವತಃ ಬೆಳೆಯುವ ಪದಾರ್ಥಗಳನ್ನು ಸೇವಿಸುತ್ತಾರೆ.

೭. ಮೂಲ ವೃತ್ತಿಯಿಂದ ಕೃಷಿ ಕೆಲಸವನ್ನು ಅವಲಂಬಿಸಿದ್ದರಿಂದ ಇವರ ವೇಷಭೂಷಣಗಳೂ ವಿಶಿಷ್ಟವಾಗಿವೆ. ಮಳೆಗಾಲ ಮತ್ತು ಚಳಿಗಾಲಗಳಲ್ಲಿ ಕಂಬಳಿ ಕೋಟು ಧರಿಸುವ ಅಥವಾ ಕಂಬಳಿ ಹೊದೆಯುವ ಅಭ್ಯಾಸ ಉಂಟು. ತಮ್ಮ ಕೆಲಸಗಳನ್ನು ಸುಗಮವಾಗಿ ನಿರ್ವಹಿಸುವ ದೃಷ್ಟಿಯಿಂದ ಗಂಡಸರು ಕೌಪಿನ ಹೆಚ್ಚೆಂದರೆ ನಡುಪಟ್ಟಿ ಧರಿಸುತ್ತಾರೆ. ಹೆಂಗಸರು ಉಡುಗೆಯಲ್ಲಿ ಇತರ ಸಮುದಾಯದವರಿಗಿಂತ ಭಿನ್ನವಾಗಿಲ್ಲ.

ಇವರಲ್ಲಿ ಇನ್ನೂ ಜುಟ್ಟು ಬಿಟ್ಟುಕೊಳ್ಳುವುದು, ಕಿವಿಗೆ ಒಂಟಿ ಧರಿಸುವುದು, ಕಾಸೆ ಹಾಕುವುದು, ಹಣೆಗೆ ನಯದ ಗೆರೆ ಎಳೆದುಕೊಳ್ಳುವ ಪದ್ಧತಿಗಳು ಸಂಪೂರ್ಣವಾಗಿ ಮಾಯವಾಗಿಲ್ಲ. ಇವುಗಳು ಇವರ ವೈಷ್ಣವ ಪರಂಪರೆಯನ್ನು ಅನುಸರಿಸಿದವರೆಂಬುದನ್ನು ಈಗಲೂ ಸಾರುತ್ತವೆ. ನಾಗರಿಕತೆಯ ನಾಗಲೋಟದ ಈ ದುಬಾರಿ ದಿನಗಳಲ್ಲೂ ಇವರಲ್ಲಿ ಮುರ, ಕಡಕು, ಗುಜ್ಜಡ್ಡಿಕೆ, ಒಂಟಿ, ಕಡಗ, ಮೂಗುತಿ, ದೊಡ್ಡಗುಂಡು, ಕೆನ್ನೆಸರ, ಪಿಲ್ಲಿ, ಉಂಗುರ ಮುಂತಾದ ಆಭರಣಗಳು ಉಳಿದು ಬಂದಿವೆ. ಇವು ಈ ಜನರ ಸಂಪ್ರದಾಯ ಶೀಲತೆಯನ್ನು ಸೂಚಿಸುತ್ತವೆ.

೮. ಮಾನವ ಮತ್ತು ಪಶುವೈದ್ಯ ಎರಡರಲ್ಲೂ ಇವರಿಗೆ ವಿಶೇಷ ಪರಿಣತಿ ಉಂಟು. ಸೀಮೆವೈದ್ಯಕ್ಕೆ ಜಗ್ಗದ ಎಷ್ಟೋ ರೋಗಗಳು ಇವರ ವೈದ್ಯಪದ್ಧತಿಯಿಂದ ಗುಣವಾಗಿವೆ.

೯. ಇತರ ಜಾತಿಯವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದಾರೆ. ಕೈವಾಡದವರ ಸೇವೆ ಇವರಿಗೆ ಲಭ್ಯವಿದೆ.

೧೦. ಮೇಲ್ಜಾತಿಯವರಿಂದ ಪ್ರಭಾವಿತರಾಗಿರುವಂತೆ ಇತರ ಜಾತಿಯವರ ಮೇಲೂ ತಮ್ಮ ಪ್ರಭಾವ ಬೀರಿದ್ದಾರೆ . ಉದಾ-ತಮ್ಮಸುತ್ತಲಿನ ಕೆಳವರ್ಗದ ಜನರ ಮೇಲೆ.

೧೧. ಇತರ ಜಾತಿಗಳ ಜನರಂತೆ, ಇವರೂ ಹರಿಜನರನ್ನು ಅಸ್ಪೃಶ್ಯರೆಂದು ಪರಿಗಣಿಸುತ್ತಾರೆ. ಅವರಿಗೆ ತಮ್ಮ ಬದುಕಿನ ಎಲ್ಲ ಘಟ್ಟಗಳಲ್ಲೂ ವಿಶೇಷ ಆದ್ಯತೆ ನೀಡಿದ್ದಾರೆ.

೧೨. ಸಾಮಾಜಿಕ ಶ್ರೇಣಿಯಲ್ಲಿ ಇವರು ಮಧ್ಯಮ ಸ್ಥಾನವನ್ನು ಹೊಂದಿದ್ದಾರೆ. ಆದರೆ, ಇವರು ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಇನ್ನೂ ಹಿಂದುಳಿದಿದ್ದಾರೆ.

ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನದಿಂದ ನಾಗರಿಕತೆಯ ಗಂಧವಿಲ್ಲದೆ ಪುರಾತನರಂತೆ ಜೀವಿಸುವ ಉಪ್ಪಾರರ ಸ್ಥಿತಿಗತಿಯ ಸ್ಪಷ್ಟ ಅರಿವು ಮೂಡುತ್ತದೆ. ಅಜ್ಞಾನ, ಅಂಧಕಾರ, ಮೌಢ್ಯ ಪ್ರಪಂಚದಲ್ಲೇ ವಿಹರಿಸುತ್ತಿರುವ ಇವರ ಅಭಿವೃದ್ಧಿಯಾಗಬೇಕಾದರೆ ತಮ್ಮಲ್ಲಿರುವ ಕೀಳರಿಮೆಯನ್ನು

ಬಿಟ್ಟು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯದಲ್ಲಿ ಪ್ರಗತಿ ಸಾಧಿಸಬೇಕು.

ಶೇಕಡಾ ೮೫ ರಷ್ಟು ಜನ ಬಡತನದ ರೇಖೆಗಿಂತಲೂ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ. ಉಳಿದ ಶೇಕಡಾ 10% ಜನ ವ್ಯವಸ್ಥಿತ ರೀತಿಯಲ್ಲಿ ಮೇಲ್ಮಟ್ಟದ ಜೀವನ ಸಾಗಿಸುತ್ತಿದ್ದಾರೆ. ಇವರು ಅವಲಂಬಿಸಿದ ಕೃಷಿಯೇ ಪ್ರಧಾನ ವೃತ್ತಿಯಾಗಿದೆ. ಇರುವ ಭೂಮಿಯು ಕೃಷಿಗೆ ಯೋಗ್ಯವಲ್ಲದ, ನೀರಾವರಿ ಸೌಕರ್ಯವಿಲ್ಲದ ಬಂಜರು ಭೂಮಿ ಇದ್ದು ಇದನ್ನು ಸಾಗುವಳಿ ಮಾಡುವುದರಿಂದ ಯಾವ ಲಾಭವೂ ಇಲ್ಲವಾಗಿದೆ.

ಇಂಥ ಬಡತನದ ಜೊತೆಗೆ ಅನಾದಿಕಾಲದಿಂದ ನಡೆದುಕೊಂಡು ಬಂದ ಮೂಢ ನಂಬಿಕೆಗಳು ಇವರನ್ನು ಸಂಪೂರ್ಣವಾಗಿ ಆಳುತ್ತಿವೆ. ಈ ಮೌಢ್ಯದಿಂದ ಮೇಲಕ್ಕೆತ್ತುವ ಪ್ರಾಮಾಣಿಕ ಪ್ರಯತ್ನಗಳು ನಡೆಯಬೇಕಾಗಿವೆ.
ಅವುಗಳಲ್ಲಿ ಕೆಲವನ್ನು ಪಟ್ಟಿಮಾಬಹುದು.

೧. ಕಡ್ಡಾಯವಾಗಿ ಶಿಕ್ಷಣ
೨. ಉದ್ಯೋಗದಲ್ಲಿ ಹೆಚ್ಚಿನ ಮೀಸಲಾತಿ (ಸ್ಥಳೀಯ ಸಂಘಸಂಸ್ಥೆಗಳಲ್ಲಿ ಉದ್ಯೋಗ ಅವಕಾಶ ಒದಗಿಸುವುದು)
೩. ರಾಜಕೀಯದಲ್ಲಿ ಮೀಸಲಾತಿ
೪. ಉಚಿತ ಆರೋಗ್ಯವ್ಯವಸ್ಥೆ
೫. ಉಚಿತ ನಿವೇಶನ ಮತ್ತು ಮನೆ
೬. ಸ್ವಯಂ ಉದ್ಯೋಗಕ್ಕೆ ಬ್ಯಾಂಕ್‌ಗಳಿಂದ ನೆರವು
೭. ರಿಯಾಯಿತಿದರದಲ್ಲಿ ವ್ಯವಸಾಯ ಉಪಕರಣ ಮತ್ತು ಗೊಬ್ಬರಗಳನ್ನು ಒದಗಿಸುವುದು.
೮. ಬಂಜರು ಭೂಮಿಗೆ ನೀರುಣಿಸಲು ಪಂಪುಗಳ ವ್ಯವಸ್ಥೆ.
೯. ಹಳ್ಳಿಗಳಿಗೆ ಸಾರಿಗೆ ವ್ಯವಸ್ಥೆ.

ಉಪ್ಪಾರರು ಆಧುನಿಕ ಕಾಲದಲ್ಲಿ ನಮ್ಮ ನಡುವೆ ಬದುಕಿದ್ದಾರೆ. ಅವರೂ ಕೂಡ ಇತರರಂತೆ ನಾಗರೀಕರಾಗಿ ಬಾಳುವುದರ ಅಗತ್ಯವಿದೆ. ಸಮುದಾಯ-ಸಮುದಾಯಗಳ ಬೆಳಕಿನಲ್ಲಿ ಉಪ್ಪಾರರ ಸಂಸ್ಕೃತಿ ಈಗ ಬೆಳಗಬೇಕಿದೆ.

# ಅನುಬಂಧ - ೧

ಕತೆಗಳು

ಹಾಡುಗಳು

## ಕತೆಗಳು

### 1. ಸಂಪಿಗೆರಾಯ ಮತ್ತು ಮಲ್ಲಿಗೆರಾಯ

ಒಂದು ಊರಿನಲ್ಲಿ ಅಣ್ಣ ತಮ್ಮ ಇಬ್ಬರಿದ್ದರು. ಅವರಲ್ಲಿ ಅಣ್ಣನ ಹೆಸರು ಸಂಪಿಗೆರಾಯ ತಮ್ಮನ ಹೆಸರು ಮಲ್ಲಿಗೆರಾಯ. ಅಣ್ಣನ ಹೆಂಡತಿಯ ಹೆಸರು ಹೊನ್ನಮ್ಮ. ತಮ್ಮನ ಹೆಂಡತಿ ಕುಸುಮಾಲೆ. ಅವರು ನಾಲ್ವರು ಸಂತೋಷದಿಂದ ಇರುವಾಗ ಸಾವಿರಾರು ಗೋವುಗಳನ್ನೂ ಮಲ್ಲಿಗೆರಾಯ ಕಾಯುತ್ತಿದ್ದನು. ಮಲ್ಲಿಗೆರಾಯನ ಹೆಂಡತಿಯನ್ನು ತವರು ಮನೆಗೆ ಕಳುಹಿಸಿಕೊಟ್ಟರು. ಸಂಪಿಗೆರಾಯನಿಗೆ ದಂಡಿನ ಕಾಗದ ಬಂದಿತು. "ದಂಡು ಆಡಿದ ಮನೆತನವಯ್ಯ ನೀನು ದಂಡಾಡಲು ಬಾ" ಎಂದು ಕಾಗದದಲ್ಲಿತ್ತು. ಕಾಗದ ನೋಡಿದವನಿಗೆ ದುಃಖ ಹೆಚ್ಚಿತು. ತಮ್ಮನನ್ನು ಹೇಗೆ ಬಿಟ್ಟು ಹೋಗಲೆಂದು "ಹೊನ್ನಿ ಇವನು ನನ್ನ ತಮ್ಮನಲ್ಲ ನಿನ್ನ ತಮ್ಮನೆಂದು ಚೆನ್ನಾಗಿ ನೋಡಿಕೊಂಡು ಬಾ" ಎಂದನು. ಆಯಿತು "ನಿಮಗೇಕೆ ಹೆದರಿಕೆ ನಾನು ನೋಡುತ್ತೇನೆ." ಅಷ್ಟು ಹೊತ್ತಿಗೆ ತಮ್ಮ ಗೋವುಗಳನ್ನು ಹೊಡೆದುಕೊಂಡು ಮನೆಗೆ ಬಂದ. "ತಮ್ಮ ನನಗೆ ದಂಡಿನ ಕಾಗದ ಬಂದಿದೆ ಹೋಗ್ತಿದೀನಿಯಪ್ಪ" ಎಂದ. ತಮ್ಮನು ಬಿಕ್ಕಿ ಬಿಕ್ಕೆ ಅಳುತ್ತಾನೆ. "ನನ್ನನ್ನು ಬಿಟ್ಟು ಹೋಗುತ್ತೀಯ " ಎಂದು. "ನಿನ್ನ ಅತ್ತಿಗೆ ನಿನ್ನನ್ನು ಚೆನ್ನಾಗಿ ಸಾಕುತ್ತಾಳಪ್ಪ" ಎಂದ. "ಹೊನ್ನಿ ಇವತ್ತು ಒಂದು ಕೊಪ್ಪರಿಗೆ ನೀರು ಕಾಯಿಸು ನಾನು ಸ್ನಾನ ಮಾಡಬೇಕು" ಎನ್ನುತ್ತಾನೆ. "ಒಳ್ಳೆಯ ಅಡಿಗೆ ಮಾಡು". ತಮ್ಮ ಅಣ್ಣ ಸೇರಿ ಮೈಗೆ ಎಣ್ಣೆ ಹಚ್ಚಿ ಅಭ್ಯಂಜನ ಸ್ನಾನವಾಯಿತು. ಅಣ್ಣ ತಮ್ಮರು ಸೇರಿ ಊಟ ಮಾಡಿದರು. ಅಣ್ಣನ ಬಾಯಿಗೆ ತಮ್ಮ ತುತ್ತು ಹಾಕಿದ, ತಮ್ಮನ ಬಾಯಿಗೆ ಅಣ್ಣ ತುತ್ತು ಹಾಕಿದರು. ನಂತರ ದೇವರ ದ್ಯಾನ ಮಾಡಿದರು. ಹಾಲು ಒಂದು ಲೋಟದಲ್ಲಿ ಎರಡು ಪಾಲು ಮಾಡಿ ಇಬ್ಬರೂ ಕುಡಿದರು. ಹೊರಗೆ ಬಂದು ದಂಡಿನ ಆಯುಧವನ್ನು ತೆಗೆದು, ತಂದು ಕುದುರೆಗೆ ಮುಖವಾಡ ಹಾಕಿ, ಚಲ್ಲಣ ಕಟ್ಟಿ, ಆಯುಧವನ್ನು ಕುದುರೆಯ ಬೆನ್ನಿಗೆ ಬಿಗಿದರು. ಉದ್ದವಾದ ಕತ್ತಿ ಮಸೆದು ಕುದುರೆಯ ಮೈಗೆ ಕಟ್ಟಿದರು. "ತಮ್ಮ ಬೆಳಗಾಯಿತು ದಂಡಿಗೆ ಹೋಗುತ್ತೇನೆ" ಎಂದು ಅಣ್ಣ - ತಮ್ಮನನ್ನು ಅಪ್ಪಿಕೊಂಡು ಅಳುತ್ತಿದ್ದಾನೆ. ದುಃಖವನ್ನು ಮಾಡಿದರೆ ಆಗುವುದಿಲ್ಲವೆಂದು ಹೊನ್ನಿಯನ್ನು ಕರೆದು, "ಚೆನ್ನಾಗಿ ಮಲ್ಲಿಗೆ ರಾಯನನ್ನು ನೋಡಿಕೊ ನಾನು ಹೋಗಿಬರುವೆನೆಂದು" ಕುದುರೆ ಏರಿ ಹೋಗುವಾಗ ಬೆಕ್ಕು ಅಡ್ಡ ಬಂತು. "ಹೊನ್ನಿ ಬೆಕ್ಕು ಅಡ್ಡ ಬಂತಲ್ಲ" ಎಂದ. "ನಾವು ಸಾಕಿದ ಬೆಕ್ಕು ಅಡ್ಡ ಬರದೆ ಇರುವುದೇ ಹೋಗ" ಎಂದಳು. "ಕಾಗೆ ಅಡ್ಡಬಂದಿತು" ಎಂದನು. ಅದಕ್ಕೆ "ತಿರುಗಾಡುವ ಕಾಗೆ ಅಡ್ಡ ಬಂದರೆ ಒಳ್ಳೆಯದು ಹೋಗಿ, " ಎಂದಳು. ನಂತರ ಇವನ ದಂಡಿಗೆ ಹೋಗಿ ಆಫೀಸಿಗೆ ಹೋದ.

ಇಲ್ಲಿ ಮಲ್ಲಿಗೆ ರಾಯ ಬೆಳಿಗ್ಗೆ ಎದ್ದು ಮುಖ ತೊಳೆದು ಊಟ ಮುಗಿಸಿ ಕರಿಯ ಕಂಬಳಿಯನ್ನು ಹೆಗಲಿಗೆ ಇಟ್ಟ, ಬಣ್ಣದ ಕೊಳಲು ಕೈಯಲ್ಲಿ ಚಿನ್ನದ ಕೊಳಲನ್ನು ಬಾಯಲ್ಲಿ ಹಿಡಿದ. ಗೋವುಗಳನ್ನು ಬಿಟ್ಟುಕೊಂಡು 'ಮಹಗುಡ್ಡ' , 'ಮರಿಗುಡ್ಡ'ವನ್ನು ದಾಟಿ ಗೋವುಗಳನ್ನು ಹೊಡೆದುಕೊಂಡು ಹೋದ. ಬಣ್ಣದ ಕೊಳಲು ಊದಿದರೆ ದನ ಒಂದು ಮೈಲಿ ಮೇಯಲು ಹೋದವು. ಚಿನ್ನದ ಕೊಳಲು ಊದಲು ದನಗಳು ಸಂಜೆಯಾದ ಕೂಡಲೆ ಬಂದು ಸೇರುವವವು. ಸಾವಿರಾರು ದನಗಳಲ್ಲಿ 'ಮೋಕ್ಷ' ವೆಂಬ ದನ. ಆ ದನ ಮುಂದೆ ಹೊರಟರೆ ಮತ್ತೆ ಉಳಿದ ದನಗಳು ಅದನ್ನು ಅನುಸರಿಸುವವು. ಇವು ಊರನ್ನು ಸೇರಿದವು. ಮಲ್ಲಿಗೆರಾಯ ದನವನ್ನು ಕಟ್ಟಿದ. ಮನೆಗೆ ಹೋದ ಅತ್ತಿಗೆ ಸಂತೋಷದಿಂದ ಊಟಕ್ಕೆ ನೀಡಿದಳು. ಹಾಲನ್ನು ಕುಡಿಯಲು ಕೊಟ್ಟಲು. ಹೀಗೆ ಸಂತೋಷದಲ್ಲಿ ಎಷ್ಟೋ ದಿನ ಕಳೆಯಿತು.

ಒಂದು ದಿನ ಮಲ್ಲಿಗೆರಾಯ ಗೋವುಗಳನ್ನು ಕಾದುಕೊಂಡು ಮನೆಗೆ ಬರುವಾಗ ಮನೆಗೆ ಬಂದ ಕೂಡಲೆ ಊಟ ಬಡಿಸಿದಳು. ಊಟ ಮಾಡಿ ಹೊರಗೆ ಬಂದ. "ಅತ್ತಿಗೆ ನನ್ನ ಹಾಸಿಗೆ ಯಾರು ತೆಗೆದುಕೊಂಡು ಹೋದರು". "ನಿನ್ನ ಹಾಸಿಗೆ ನಾನು ಮಲಗುವ ರೂಂನಲ್ಲಿ ಹಾಸಿದ್ದೇನಪ್ಪ". ರೂಂ ನಲ್ಲಿ ಹೋಗಿ ನೋಡುವಾಗ ಅಣ್ಣನ ಹಾಸಿಗೆ ಇವನ ಹಾಸಿಗೆ ಒಟ್ಟಿಗೆ ಬಚ್ಚಿಟ್ಟಿದ್ದಾಳೆ. ನೋಡಿಕೊಂಡು ಹೊರ ಹೊರಡಲು ಸಿದ್ದನಾದ. "ನೋಡಿಕೊಂಡು ಏಕೆ ಹೊರ ಹೊರಟೆ ನಾನು ನೀನು ಸೇರಿ ಹಿತವಾಗಿ ಸೇರಿಕೊಂಡು ಇರುವ", ಎಂದಳು. "ನಿನ್ನ ಮೇಲೆ ಬಹಳ ಆಸೆ ಆಗುತ್ತಿದೆ". " ನಾನು ನೀನು ಒಟ್ಟು ಸೇರುವ" ಅಂ....ತ

ಎಂ....ದಳು. "ಅತ್ತಿಗೆಯು ತಾಯಿಯ ಸಮ ನಾನು ನಿನ್ನ ಮೈಯನ್ನು ಮುಟ್ಟುವುದಿಲ್ಲ, ಅಣ್ಣನ ಪಾದದಾಣೆಗೂ" ಎಂದನು. ಆಗ ಇವಳು ರೆಟ್ಟೆಯನ್ನು ಹಿಡಿಯಲು ಓಡಿ ಬಂದಳು. ಓಡಿ ಹೋಗಿ ಕವಲು ದನದ ತವ ಅಡಗಿ ಕುಳಿತ. ಬೆಳಗ್ಗೆ ಎದ್ದು ನೋಡುವಾಗ ನೀರು ಕಾಯಿಸಿಲ್ಲ, ತಣ್ಣೀರು ಸ್ನಾನ ಮಾಡಿದ. ತಣ್ಣೀರು ಸ್ನಾನ ಮಾಡಿ ದೇವರ ಸ್ತೋತ್ರ ಮಾಡಿದ. ಊಟಕ್ಕೆ ಹೋದನು ಒಳಗೆ. ತಂಗಳನ್ನ, ನಿನ್ನೆಯ ಗಂಜಿ ಹಾಕಿ ಎಡ ಕಾಲಿನಿಂದ ಬಟ್ಟಲನ್ನು ದೂಡಿದಳು. ಊಟ ಮಾಡುವಾಗ ಅದು ಹಳಸಲು ಅನ್ನ, ಹಳಸಲು ಗಂಜಿಯು ವಾಸನೆ ಬರಹತ್ತಿದಾಗ ಅಲ್ಲೇ ಬಿಟ್ಟು ಕೈತೊಳೆದು ಎದ್ದ. ಇಂದಿನ ಮೂರು ದಿನದಲ್ಲಿ ನನ್ನ ಅಣ್ಣಂದಿರು ಆರು ಜನರಿರುವರು, "ನಿನ್ನ ರುಂಡ ಹೊಡೆದು ನನ್ನ ತಲೆಯ ದಿಂಬಿನಲ್ಲಿಟ್ಟು ರಕ್ತ ಬೊಟ್ಟನ್ನು ಹಣೆಗೆ ಇಡುತ್ತೇನೆ". "ಆಗಲಿ" ಎಂದು ದೇವರಲ್ಲಿ ಪ್ರಾರ್ಥಿಸಿ ಗೋವುಗಳನ್ನು ಬಿಟ್ಟುಕೊಂಡು ಹೊರಟ. "ಗೋವುಗಳಿರಾ ನನ್ನ ಅತ್ತಿಗೆ ರುಂಡ ಹಾರಿಸುವೆ ನೆಂದು ಶಪಥ ಹಾಕಿದ್ದಾಳೆ, ಏನು ಮಾಡುವುದು" ಎಂದು ಗೋವುಗಳನ್ನು ಕೇಳಿದ. ಸಂಜೆಯಾಯಿತು, ಗೋವುಗಳನ್ನು ಹೊಡೆದುಕೊಂಡು ಕಟ್ಟಿದ. ಮನೆಗೆ ಬಂದ ಊಟ ನೀಡಲಿಲ್ಲ, ಹಾಗೆಯೇ ಮಲಗಿಕೊಂಡ. ಬೆಳಿಗ್ಗೆ ಎದ್ದು ಮುಖ ತೊಳೆದ. ಬೆಳಿಗ್ಗೆ ಊಟವಿಲ್ಲ. ಇವಳು ಸಿಟ್ಟಿನಲ್ಲಿ ಕುಣಿಯುತ್ತಿದ್ದಾಳೆ. ಕಣ್ಣೀರು ಸುರಿಸುತ್ತಾ ಗೋವುಗಳನ್ನು ಬಿಟ್ಟುಕೊಂಡು ಹೊರಟ. ಕವಲು ದನ ಬಂದು ಇವನ ಬಾಯಿಗೆ ಹಾಲು ಸುರಿಸಿತು. ಕವಲು ದನದ ಹಾಲು ಕುಡಿದು ಒಂದು ದಿನ ದೂಡಿದ. ಇವಳು ರಾತ್ರಿ ಸೀರೆಯಲ್ಲ ಹರಿದು, ಕುಪ್ಪಸ ಹರಿದು, ಹಣೆಯಲ್ಲಿರುವ ಕುಂಕುಮ ಅಳಿಸಿ, ಬಳೆಯನ್ನೆಲ್ಲ ಒಡೆದುಕೊಂಡು ರಾತ್ರಿಯೇ ತವರು ಮನೆಗೆ ಹೋದಳು. "ಏನಾಯಿತು ತಂಗಿ ಹೇಳು"? " ಸಂಪಿಗೆರಾಯ ಹೋಗಲು ಮಲ್ಲಿಗೆರಾಯ ನನ್ನನ್ನು ಬಲತ್ಕಾರ ಮಾಡಿದ, ನಾನು ಒಪ್ಪಲಿಲ್ಲಣ್ಣ, ಹಿಡಿದು ಎಳೆದು ಈ ರೀತಿ ಮಾಡಿದ್ದಾನೆ". ಅಣ್ಣನಿಗೆ ಬಹಳ ಕೋಪ ಬಂತು. "ಇದಕ್ಕೆ ಬಗೆ ಏನು ತಂಗಿ". " ಇವತ್ತು ಹೋಗಿ ಅವನ ರುಂಡ ಕತ್ತರಿಸಿ ತಂದು ನನ್ನ ಕೈಯಲ್ಲಿ ಕೊಡು, ಅದರಲ್ಲಿರುವ ರಕ್ತದ ಬೊಟ್ಟನ್ನು ನಾನು ಹಣೆಗೆ ಇಡುತ್ತೇನೆ. ಇಲ್ಲವಾದರೆ ನಾನು ಊಟ ಮಾಡುವುದಿಲ್ಲ". ಕತ್ತಿಯನ್ನು ಮಸೆಯುತ್ತಾ ಮಾತನಾಡುತ್ತಾರೆ ಅಣ್ಣಂದಿರು. ಕಿರಿಯ ಅಣ್ಣ ಹೇಳುತ್ತಾನೆ. "ಮಲ್ಲಿಗೆರಾಯ ಒಳ್ಳೆಯ ಮನುಷ್ಯ ಅವನು ಇಂತಹ ಕೆಲಸ ಮಾಡಲಿಕ್ಕಿಲ್ಲ, ಅವನನ್ನು ಕಡೆಯುವುದು ಬೇಡ. " ನಮಗೆ ಇಷ್ಟು ಜನಕ್ಕೆ ಒಬ್ಬಳೇ ತಂಗಿ ನಾವು ತಿಸ್ಕರಿಸುವಂತಿಲ್ಲ, ನಾನು ಕಡಿದೇ ಬರುತ್ತೇನೆಂದನು; ಮತ್ತೊಬ್ಬ ಅಣ್ಣ. ಕಿರಿಯ ಅಣ್ಣ ದುಃಖದಿಂದ "ನಾನ ಬರುವುದಿಲ್ಲ; ನೀವೆ ಕೊಲೆ ಮಾಡಿ ಬನ್ನಿ" ಎಂದು ಅವನು ಹೋಗುವುದಿಲ್ಲ.

5 ಜನ ಅಣ್ಣನವರು ಕವಡೆ ತೆಗೆದು, ಕತ್ತಿ ಹಿಡಿದು ಹೊರಟರು. ಅಲ್ಲಿ ಮಲ್ಲಿಗೆರಾಯನನ್ನು ಹುಡುಕತ್ತಾ ಹೊರಟರು. ಅಲ್ಲಿ ಗೋವುಗಳ ನಡುವೆ ಮಲ್ಲಿಗೆರಾಯ ಕುಳಿತಿದ್ದ. "ಏನು ಬಾವನವರೆ, ನನ್ನನ್ನು ಹುಡುಕುತ್ತಾ ಬಂದಂತಿದೆ". "ಬಹಳ ಪ್ರೀತಿಯಿಂದ ನಾವು ಬಂದಿದ್ದೇವೆ. ಪಗಡೆಯಾಟವಾಡುವ, ಚೆಂಡಾಟವಾಡುವ ಬಾ" ಎಂದು ಮಲ್ಲಿಗೆರಾಯನನ್ನು ಕರೆದರು. "ನನಗೆ ಪಗಡೆಯಾಟ ಗೊತ್ತಿಲ್ಲ, ಚೆಂಡಾಟ ಆಡುವ" ಎಂದು ಚೆಂಡು ಆಡಲು ಶುರು ಮಾಡಿದರು. ಮಲ್ಲಿಗೆರಾಯನಿಗೆ ನನ್ನನ್ನು ಕಡಿಯಲು ಬಂದಿದ್ದಾರೆಂದು ತಿಳಿದು ನಾನು ಈಗ ಬರುವೆನೆಂದು ಹೊರಗೆ ಹೊರಟು ಹೋದ. ಕವಲು ದನ ಅವನ ಹಿಂದೆಯೇ ಹೊರಟು ಹೋಯಿತು. "ನಾನು ನಿನ್ನನ್ನು ಏನು ಮಾಡಲಿ? ಅಣ್ಣನಿಗೆ ವರ್ತಮಾವಿಲ್ಲವಲ್ಲ", ಒಂದು ಸಳ್ಳೆ ಎಲೆಯಲ್ಲಿ ಬರೆದ. 'ನನ್ನ ಅತ್ತಿಗೆ ಹೊನ್ನಮ್ಮ ವಿಶ್ವಾಸಕ್ಕೆ ಕರೆದಳು. ನಾನು ಸಿಟ್ಟು ಮಾಡಿ ಹೊರಟು ಬಂದೆ. ಇಂದಿಗೆ ಮೂರು ದಿನದೊಳಗೆ ನನ್ನ ಅಣ್ಣಂದಿರು ಬಂದು ನಿನ್ನ ತಲೆ ಕಡಿದು ನನ್ನ ತಲೆ ದಿಂಬಿನಲ್ಲಿ ಇಟ್ಟು ರಕ್ತವನ್ನು ಹಣೆಗೆ ಇಡುವನೆಂದು ಶಪಥ ಮಾಡಿದಳು. ಅದರಂತೆ ಈಗ ಅಣ್ಣಂದಿರು ಬಂದಿದ್ದಾರೆ. ನನ್ನನ್ನು ಕತ್ತಿ ತೆಗೆದು ಕಡಿಯುತ್ತಾರೆ. ನೀನು ಕಾಗದ ಕಂಡ ಕೂಡಲೇ ಬಾ" ಎಂದ. ಕವಲು ದನದ ಬಾಯಿಗೆ ಸಳ್ಳೆ ಎಲೆಯನ್ನು ಇಡುತ್ತಾನೆ. "ಈ ಕಾಗದ ತೆಗೆದುಕೊಂಡು ಹೋಗಿ ಅಣ್ಣನ ಪಾದಕ್ಕೆ ಒಪ್ಪಿಸು" ಎಂದನು. ದಂಡಿನ ದಾರಿ ಹಿಡಿದು ದನ ಓಡಿತು. ಮೂರು ದಿನ ನಡೆಯುವ ದಾರಿಯನ್ನು ಎರಡೇ ದಿನದಲ್ಲಿ ನಡೆಯಿತು. ಸಂಪಿಗೆರಾಯನ ಆಫೀಸಿಗೆ ಹೋಗಿ ಅಂಬಾ ಎಂದು ಕೂಗಿತು. ಅಲ್ಲಿದ್ದವರೆಲ್ಲ ಬೆರಗಾಗಿ ನೋಡಿದರು. ಇಂತಹ ಕವಲು ದನವನ್ನು ಯಾರು ನೋಡಿರಲಿಲ್ಲ. ಸಂಪಿಗೆರಾಯನು ಬಂದು ದನವನ್ನು ಕೇಳಿದ "ಏನು ಬಂದೆ", ದನವನ್ನು ಅಪ್ಪಿ ಹಿಡಿದನು. ಆಗ ದನ ಬಾಯಿ ಕಳೆಯಿತು, ಸಳ್ಳೆ ಎಲೆಯ ಮಡಿಕೆ ಕಂಡಿತು. ಅದನ್ನು ಓದಿ ಸಂಪಿಗೆರಾಯ ಇಂದಿಗೆ 15 ದಿನದಲ್ಲಿ ನಾನು ದಂಡಿಗೆ ಬರುವೆನೆಂದು ಅಫೀಸಿಗೆ ರಜಾ ಹಾಕಿ ಕುದುರೆ ಏರಿ ಮಲ್ಲಿಗೆರಾಯನ ಹತ್ತಿರ ಬಂದ.

ಇಲ್ಲಿ ಚೆಂಡು ಆಟವಾಡುವ ಸಮಯದಲಿ ಲಗ್ಗೆ ಹೂಡಪ್ಪ, ಬಗಗಿ ಮಣೆ ನಿಲ್ಲಿಸುವ ಹೊತ್ತಿನಲ್ಲಿ ಕತ್ತಿಯಿಂದ ಮಂಡೆಯನ್ನು ಕಡಿದರು. ರುಂಡ ಹೊಡೆದ ತಕ್ಷಣ ದನಗಳೆಲ್ಲ ಬೆರಸಿಕೊಂಡು ಬಂದವು. ಇವರು ಹೆದರಿ ರುಂಡವನ್ನು ಎತ್ತಿಕೊಂಡು ಹೋದರು. ತಂದು ತಂಗಿಗೆ ಕೊಟ್ಟರು. ತಂಗಿ ರಕ್ತದ

ತೆಗೆದು ಹಿಡಿದು ಅಪ್ಪಿಕೊಂಡು ಅಳುತ್ತಾನೆ. ಮಲ್ಲಿಗೆರಾಯನ ಹೆಂಡತಿಗೆ ಕರೆ ಕಳುಹಿಸಿದ. "ಕೂಡಲೇ ಬರಲಿ" ಎಂದು. ಅವಳು ಕರೆ ಸಿಕ್ಕಿದ ಕೂಡಲೆ ಬಂದಳು. "ಭಾವ ಏಕೆ ಬಿಕ್ಕಿ ಬಿಕ್ಕಿ ಅಳುತ್ತೀರಿ; ಅಳುವುದು ಬೇಡ" ಒಂದು ನೆಲಮಾಳಿಗೆ ತೆಗೆದು, ನೆಲ ಮಾಳಿಗೆಯೊಳಗೆ ಹೆಣವನ್ನು ಮಲಿಸಿ ರುಂಡ ಮತ್ತು ದೇಹವನ್ನು ಸೇರಿಸಿಟ್ಟು ಒಂದು ಡಬ್ಬ ಎಣ್ಣೆ ಒಂದು ಕೊಡಪಾನ ನೀರು ನೆಲಮಾಳಿಗೆಯೊಳಗೆ ಇಡಿಸಿದಳು. "ಇವತ್ತಿಗೆ 9 ದಿನಗಳ ತನಕ ತಪಸ್ಸು ಮಾಡುತ್ತೇನೆ, ನಿಮ್ಮ ತಮ್ಮ ಜೀವ ಪಡೆಯುತ್ತಾನೆ. ಹೆದರಬೇಡಿ ಭಾವ" ಎಂದು ನೆಲಮಾಳಿಗೆಯಲ್ಲಿ ಎಲ್ಲಾ ಅನುಕೂಲಮಾಡಿ ನೆಲಮಾಳಿಗೆಯೊಳಗೆ ತಪಸ್ಸಿಗೆ ಕುಳಿತಳು. ಶಿವನ ತಪಸ್ಸು ಮಾಡುತ್ತಾ ದೀಪ ಹಚ್ಚಿಕೊಂಡು ಕುಳಿತಳು. ಸಂಪಿಗೆರಾಯ ಮನೆಗೆ ಬಂದು ಹೊನ್ನಮ್ಮಳನ್ನು ಕಡಿದನು. ಮೂರು ಭಾಗ ಮಾಡಿ ಬಾಗಿಲಿಗೆ ಕಟ್ಟಿದ. ಹೆಂಡ್ತಿಯ ಮನಗೆ ದಂಡಿನ ಕತ್ತಿ ಹಿಡಿದು ಓಡಿ ಹೋದ. ಕಿರಿಯ ಭಾವ, "ನಾನು ಅಣ್ಣನಿಗೆ ಹೇಳಿದೆ, ಅವರು ಪಾಪದ್ರೋಹ ಮಾಡಿದ್ದಾರೆ; ಹೇಗೆ ನಿನ್ನ ನೋಡಲಿ" ಎಂದು ಕೂಗಿ ಮೂರ್ಛೆ ತಪ್ಪಿ ಬಿದ್ದನು. ದಂಡಿನ ಕತ್ತಿಯಲ್ಲಿ 5 ಜನ ಭಾವರನ್ನು ಕಡಿದನು. 5 ಜನ ಹೆಂಡತಿಯರನ್ನು ಕಡಿದನು. ಕಿರಿಯ ಭಾವನಿಗೆ ನೀನೇ ರಾಜನಾಗಿ ಈ ಮನೆಗೆ ನಿನ್ನ ಹೆಂಡ್ತಿಯು ರಾಣಿಯಾಗಿ ಬಾಳಿರೆಂದು ಆಶೀರ್ವದಿಸಿ, ಸಂಪಿಗೆರಾಯ ಮನೆಗೆ ಬಂದನು. ದಂಡಿನ ಕತ್ತಿ ತೆಗೆದು ಹೊದ್ದಿಸಿಟ್ಟು ಆಯುಧವನ್ನು ತೆಗೆದು ತಮ್ಮನ ಹಾಸಿಗೆ ಹಾಸಿ ಕೋಣೆಯಲ್ಲಿ ಮಲಗಿದ. ದನವು ಗೋಳಾಡುತ್ತಾ ಒಳಗೆ ನುಗ್ಗಿತು. ಸಂಪಿಗೆರಾಯನ ಬಾಯಿಗೆ ಮಲೆಯ ಹಾಲನ್ನು ಸುರಿಸುತ್ತದೆ. ಹಾಲನ್ನು ಕುಡಿದ.

ಇಲ್ಲಿ ನೆಲ ಮಾಳಿಗೆಯಲ್ಲಿ ದೀಪ ಹಚ್ಚಿ ಶಿವನ ಜಪ ಮಾಡುತ್ತಾಳೆ ಕುಸುಮಾಲೆ. ಆ ಜಪದ ಶಾಖ ದೀಪದ ಶಾಖ ಪಾರ್ವತಿ ತಿರುಗಾಡುವಾಗ ಅವಳ ಮುಖಕ್ಕೆ ಹೊಡೆಯುತ್ತದೆ. ಶಿವನ ಹತ್ತಿರ ಪಾರ್ವತಿ "ಸ್ವಲ್ಪ ನಿಲ್ಲಿ ನೋಡಿ ಇಲ್ಲಿ ಶಾಖ ಹೊಡೆಯುತ್ತಾ ಇದೆ; ಇಲ್ಲಿ ಯಾರು ತಪಸ್ಸು ಮಾಡುತ್ತಿದ್ದಾರೆ, ಶಿವ, ಶಿವ ಎಂದು ಧ್ಯಾನ ಮಾಡುತ್ತಿದ್ದಾರೆ" ಎಂದಳು. "ನಿಮ್ಮ ಹೆಂಗಸರಿಗೆ ಎಲ್ಲಿಲ್ಲದ ನೆನಪು ಹೋಗೋಣ ಬಾ" ಎಂದನ ಶಿವ. "ನೀವು ಹೋಗಿ; ನಾನು ಹೋಗಿ ನೋಡದೆ ಬರುವುದಿಲ್ಲವೆಂದು ನೆಲಮಾಳಿಗೆಯ ಸುರಂಗದಲ್ಲಿ ತಮ್ಮ ವೇಷ ಬದಲಿಸಿ ಹೋದರು. ಅವಳು ಘೋರ ತಪಸ್ಸಿನಲ್ಲಿ ಇವರನ್ನು ಕಣ್ಣುಬಿಟ್ಟು ನೋಡುವುದಿಲ್ಲ. "ಏನಮ್ಮ ನೀನು ಯಾರು?" ನಿನ್ನ ಹೆಸರೇನು? ಯಾಕಾಗಿ ತಪಸ್ಸು ಮಾಡುತ್ತಿರುವೆ." ಎಂದು ಪಾರ್ವತಿಯು ಕೇಳುತ್ತಾಳೆ. ಇವಳು ಕಣ್ಣು ತೆರೆದು ನೋಡುತ್ತಾಳೆ. ಇಬ್ಬರು ನಿಂತಿದ್ದಾರೆ. "ಯಾರು ಇಲ್ಲಿಗೆ ಬರುವುದಿಲ್ಲ; ನೀವೇ ನನಗೆ ದೇವರೆಂದು ಪಾದಹಿಡಿದು ಅತ್ತಳು. "ನನ್ನ ಪತಿದೇವರ ಜೀವ ಮತ್ತೆ ಬರಬೇಕು" ಎಂದು ದುಃಖಿಸುತ್ತಾ ತನ್ನ ಪರಿಚಯ ಹೇಳುತ್ತಾಳೆ. "ನಿನ್ನ ಗಂಡನಿಗೆ ಏನಾಯಿತು" ಎಂದು ಪಾರ್ವತಿ ಕೇಳುತ್ತಾಳೆ. ಅವಳು ಪಾರ್ವತಿಗೆ ಹೇಳುತ್ತಾಳೆ. ಪತಿದೇವರ ರುಂಡವನ್ನು ಸೇರಿಸಿ ಮರಳಿ ಜೀವ ಬರಲೆಂದು ಬೇಡುವೆ ಎಂದಳು. "ಹಿಡಿ ಈ ಮಂತ್ರಾಕ್ಷತೆಯನ್ನು ಕೈಯಲ್ಲಿಡಿದು ಹಿಂದೆ ತಿರುಗಿ ನಿಂತು ದೇವರ ಧ್ಯಾನ ಮಾಡಿ ಮುಂದಕ್ಕೆ ತಿರುಗಿ ಮಂತ್ರಾಕ್ಷತೆಯನ್ನು ಹಾಕು ನಿನನ ಗಂಡನ ಜೀವ ಬರುವುದು". ತಿರುಗಿ ನೋಡಿ ಮಂತ್ರಾಕ್ಷತೆ ಹಿಡಿದು ಈಚೆ ತಿರುಗಿ ನೋಡುವಾಗ ಇಬ್ಬರು ಇರುವುದಿಲ್ಲ. ಇವರು ನಿಜವಾಗಿಯು ಶಿವ ಪಾರ್ವತಿಯೆಂದು ಮಂತ್ರಾಕ್ಷತೆಯನ್ನು ಗಂಡನಿಗೆ ಹಾಕಿದಳು. ಮಲ್ಲಿಗೆರಾಯ ನಿದ್ರೆಯಿಂದ ಎದ್ದವನಂತೆ ಎದ್ದು ಕುಳಿತನು. ಗಂಡನ ಕಾಲು ಹಿಡಿದು ನಮಸ್ಕಾರ ಮಾಡಿ ಅಪ್ಪಿಕೊಂಡಳು. "ತಡಮಾಡದೆ ಮನೆಗೆ ಹೋಗುವ" ಎಂದು ಭಾವ ದುಃಖದಲ್ಲಿ ಇದ್ದಾರೆಂದು ಹೊರಟರು. ಹೊರಗೆ ಬರುವಾಗ ಕವಲು ದನ ಹೊರಗಡೆ ನಿಂತಿದೆ. ಕವಲು ದನ ಮಲ್ಲಿಗೆರಾಯ, ಕುಸುಮಾಲೆ ಮನೆಗೆ ಬಂದರು. ಇಲ್ಲಿ ಸಂಪಿಗೆರಾಯನ ಜೀವ ಅಸ್ಮನಗೊಳ್ಳುತ್ತಿದೆ". ಅಣ್ಣಾ ನಾನು ಮಲ್ಲಿಗೆರಾಯ ಬಂದೆ, ಎಂದ". ಭಾವ ನಿಮ್ಮ ತಮ್ಮ ಜೀವ ಪಡೆದು ಬಂದ ಎಚ್ಚರವಾಗಿ" ಎಂದಳು. 'ಹಾ' ಎಂದು ಎದ್ದು ಕುಳಿತ. ತಮ್ಮನನ್ನು ಅಪ್ಪಿಕೊಂಡು ಸಂತೋಷದಿಂದ ಕಣ್ಣೀರು ಸುರಿಸಿದ. ಮರುದಿನ ಬೆಳಿಗ್ಗೆ ಎದ್ದು ದಂಡಿಗೆ ಹೊರಟು ಹೋದ. ನಾನು ಆರು ತಿಂಗಳಿಗೆ ಬರುವೆ ಎಂದು ಹೊರಟ.

## 2.ನಾಗರಾಜನ ಸಂಬಂಧ

ಒಂದು ಊರಿನಲ್ಲಿ ರಾಜ-ರಾಣಿಯರಿದ್ದರು. ಅವರಿಗೆ ಮೂರು ಜನ ಮಕ್ಕಳಿದ್ದರು. ಅವರಲ್ಲಿ ಕಿರಿಯ ಮಗನೇ ಬಹಳ ಅದೃಷ್ಟವಂತನಾಗಿದ್ದ. ಅವನು ಕೆಮ್ಮಿದರೆ 'ಮುತ್ತು' ಬೀಳುತ್ತಿತ್ತು. ನಕ್ಕರೆ 'ಮುತ್ತು' ಬೀಳುತ್ತಿತ್ತು. ಹೀಗಿರುವಾಗ ಮೊದಲ ಎರಡು ಗಂಡು ಮಕ್ಕಳಿಗೆ ದೊಡ್ಡ ರಾಜನ ಮನೆಯ ಹುಡುಗಿಯರನ್ನು ತಂದು ಮದುವೆ ಮಾಡಿದರು. ಕಿರಿಯ ಮಗನಿಗೆ ಮದುವೆ ಮಾಡುವುದು ಹೇಗೆ? ಅವನು ಕಿಲ ಕಿಲ ನಕ್ಕರೇ

ದುಡ್ಡು ಬೀಳುತ್ತದೆ. ಇದನ್ನು ತಿಳಿದರೆ ಹೆಣ್ಣಿನ ಮನೆಯವರು ಅವನನ್ನು ಇಲ್ಲಿಗೆ ಬರಲು ಬಿಡುವುದಿಲ್ಲ. ಆಗ ನಾವು ಬಡವರಾಗುತ್ತೇವೆ. ಇಷ್ಟುದಿನ ಅವನ ಮುತ್ತು ಮುತ್ತು ದುಡ್ಡಿನಿಂದ ರಾಜ್ಯಬಾರ ಮಾಡಿದೆವು ಎಂದು ತಿಳಿದು ಅವನಿಗೆ ಯಾರು ದಿಕ್ಕಿಲ್ಲದ, ತಂದೆ, ತಾಯಿಯಿಲ್ಲದ, ಬಂಧುಬಳಗವಿಲ್ಲದ, ನೋಡಲು ಚೆಂದವಿಲ್ಲದ, ತಲೆಯ ತುಂಬ ಹೇನು, ಸೀರು ತುಂಬಿದ ಹೆಣ್ಣನ್ನು ಹುಡುಕಿ ಮದುವೆ ಮಾಡಿದರು. ಇದನ್ನು ಅವರ ಕಿರಿಯ ಮಗ ಅವಳ ಮುಖವನ್ನು ಕೂಡ ನೋಡುವುದಿಲ್ಲ. ಅವಳ ಹೆಸರು ಚಂದ್ರಮುಖಿ ಎಂದು. ಕಿರಿಯ ಮಗನ ಹೆಸರು ಅದೃಷ್ಟವಂತ ಎಂದು ಹೆಸರಾಯಿತು. ಚಂದ್ರಮುಖಿ ಮದುವೆಯಾದ ದಿನದಿಂದ ತನ್ನ ಗಂಡ ಯಾರು ಎಂದು ತಿಳಿಯದಂತಿದ್ದಳು. ಇವಳು ಅಕ್ಕ-ಭಾವನವರ ಬಟ್ಟೆ ಒಗೆಯುವುದು, ಮಾವ ಅತ್ತೆಯರಿಗೆ ಸ್ನಾನ ಮಾಡಿಸುವುದು ಸಗಣಿ ತೆಗೆಯುವುದು. ಇವಳು ದಿನೇ ದಿನೇ ಒಣಗುತ್ತಾ ಹೋದಳು. ಒಂದು ದಿನ ನೀರಿಗೆಂದು ಬಾವಿಗೆ ಹೋದಳು ಅಲ್ಲಿ ಒಂದು ಅಜ್ಜಿ ಕುಳಿತಿತ್ತು. ಅಜ್ಜಿಯು "ಏಕೆ ದಿನೇ ದಿನೇ ಒಣಗಿ ಹೋಗುತ್ತಿರುವೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲವೇ" ಎಂದಳು. "ನೋಡಿಕೊಳ್ಳುತ್ತಾರೆ ಅಜ್ಜಿ" ಎಂದಳು. ಅದೃಷ್ಟವಂತ ಪೇಟೆಯಿಂದ ಮನೆಗೆ ಬಹಳ ಬೇಸರದಿಂದ ಬರುತ್ತಿರುವುದನ್ನು ಅಜ್ಜಿಯು ನೋಡಿದಳು. ಅಜ್ಜಿಯು "ಅದೃಷ್ಟವಂತ ಬಾ ಮಗನೇ ನೀನು ಸೋತು ಸೊರಗಿ ಹೋಗಿರುವೆ, ಏನಾಯಿತು ಹೇಳು" ಎಂದಳು. "ಏನಾಯಿತು ಎನ್ನಲಿ ಅಜ್ಜಿ ನನಗೆ ಮನೆಯಲಿ ಇರಲು ಆಗುವುದಿಲ್ಲ, ಪಾಪಾ ನನ್ನ ಹೆಂಡ್ತಿಯೊಬ್ಬಳೆ ಎಲ್ಲಾ ಕೆಲಸ ಮಾಡಬೇಕು. ಅಪ್ಪ ಅವರಿಗೆಲ್ಲ ರಾಜನ ಮಕ್ಕಳನ್ನೇ ತಂದರು. ಈಗ ನನಗೆ ಯಾರೂ ಗತಿ ಇಲ್ಲದವಳನ್ನು ತಂದು ಕೆಲಸಕ್ಕೆ ಇಟ್ಟಿದ್ದಾರೆ. ನನಗೂ ಬೇಸರವಾಗಿದೆ ಅಜ್ಜಿ ನಾನು ನಾಳೆ 11 ಘಂಟೆಗೆ ಮನೆಬಿಟ್ಟು ದೂರ ಹೊರಟು ಹೋಗುವೆ" ಎಂದು ಮನೆಗೆ ಹೋದ. ಅಜ್ಜಿಯು ಚಂದ್ರಮುಖಿಯನ್ನು ಕರೆದು "ನಾಳೆ 11 ಘಂಟೆಗೆ ನಿನ್ನ ಗಂಡ ಮನೆಬಿಟ್ಟು ಹೊರಟು ಹೋಗುತ್ತಾನೆ. ನೀನ ಅವನ ಹಿಂದೆಯೇ ಹೋಗು. ಅವನ ಜೊತೆಯೇ ಇರು" ಎಂದಳು.

ಮರುದಿನ 11 ಘಂಟೆಗೆ ಸರಿಯಾಗಿ ಅದೃಷ್ಟವಂತ ಮನೆಬಿಟ್ಟು ಹೊರಟ. ಚಂದ್ರಮುಖಿ ಸಗಣಿ ತೆಗೆಯುತ್ತಿದ್ದಳು. ಇವನು ಹೊರಟಿದ್ದನ್ನು ನೋಡಿ ತಲೆಗೆ ಹಾಕುವ ಸಿಂಬೆಯನ್ನು ಹೆಗಲ ಮೇಲೆ ಹಾಕಿಕೊಂಡು ಕೈಕಾಲು ತೊಳೆಯದೆ, ಅವನ ಹಿಂದೆ ಅವನಿಗೆ ತಿಳಿಯದೇ ಹೊರಟು ಹೋದಳು. ಹೋಗುತ್ತಾ ಅದೃಷ್ಟವಂತ ತಿರುಗಿ ನೋಡಲೇ ಇಲ್ಲ. ಇವಳು ಅವನ ಹಿಂದೆಯೇ ಹೊದಳು. ಸ್ವಲ್ಪ ದೂರದಲ್ಲಿ ಹಿಂತಿರುಗಿ ಅದೃಷ್ಟವಂತ ನೋಡುತ್ತಾನೆ. ಇವಳು ಹಿಂದೆಯೇ ಬರುತ್ತಿದ್ದಾಳೆ. ಅವಳನ್ನು ಕರೆದು "ನೋಡು ನಾನು ನಿನಗೆ ಸಿಗುವುದಿಲ್ಲ. ನಾನು ಮನೆಗೆ ಬರುವುದಿಲ್ಲ ನೀನು ನಮ್ಮಮ್ಮನ ಮನೆಯಲ್ಲಿ ಕೆಲಸ ಮಾಡುತ್ತಾ ಸುಖವಾಗಿರೆಂದು" ಬಹಳ ಬುದ್ದಿವಾದ ಹೇಳುತ್ತಾನೆ. ಇವಳು ಕೇಳಿದರೂ ಕೇಳದಂತೆ ಬಿಕ್ಕಿ ಬಿಕ್ಕಿ ಅಳುತ್ತಾ ಕುಳಿತುಕೊಳ್ಳುತ್ತಾಳೆ. ಇವನು ಪುನಃ ನಡೆಯಲಾರಂಭಿಸಿದ. ಇವಳು ಅವನ ಹಿಂದೆಯೇ ಹೊರಟಳು. ಇವನು ಒಂದು ಅಂಗಡಿಗೆ ಹೋಗಿ ಒಂದು ಸೀರೆ ರವಿಕೆಯನ್ನು ತೆಗೆದು ಅಂಗಡಿಯವನಿಗೆ ದುಡ್ಡು ಕೊಟ್ಟು " ಈ ಸೀರೆಯನ್ನು ಅಲ್ಲಿ ಒಬ್ಬ ಹುಡುಗಿ ಬರುತ್ತಿದ್ದಾಳೆ ಅವಳಿಗೇ ಕೊಡು" ಎಂದು ಹೇಳಿ ಹೊರಟ. ಇವಳು ಬರುವುದನ್ನು ಅಂಗಡಿಯವ ನೋಡಿ "ನಿಮ್ಮ ಕಡೆಯವರು ಸೀರೆ ಕೊಟ್ಟಿದ್ದಾರೆ ತೆಗೆದುಕೊಳ್ಳಿ" ಎಂದು ಅವಳಿಗೆ ಕೊಟ್ಟರು. ಅವಳು ಅದನ್ನು ಬೇಗ ತೆಗೆದುಕೊಂಡು ಪಕ್ಕದಲ್ಲಿ ಇಟ್ಟುಕೊಂಡು ಹೋಗುತ್ತಾಳೆ. ಇವನು ಮತ್ತೇ ಅಂಗಡಿಗೆ ಹೋಗಿ ಅವಳ ಡ್ರಸ್ ಅಂದರೆ ಬಾಚಣಿಗೆ, ಪೌಡರ್ , ಕುಂಕುಮವೆಲ್ಲ ತೆಗೆಯಿಸಿ ದುಡ್ಡು ಕೊಟ್ಟು ಅದನ್ನೂ ಅಂಗಡಿಯವನ ಹತ್ತಿರ "ಇದು ಅಲ್ಲಿ ಬರುವವಳಿಗೆ ಕೊಡಿ" ಎಂದು ಹೊರಟು ಹೋದ. ಅಂಗಡಿಯವ ಅವಳನ್ನು ಕರೆದುಕೊಡುತ್ತಾನೆ. ಅದನ್ನು ಇನ್ನೊಂದು ಪಕ್ಕದಲ್ಲಿ ಇಟ್ಟುಕೊಂಡು ಹೊರಟು ಹೋಗುತ್ತಾಳೆ. ಇವನು ನೋಡಿದ ಇವಳು ಏನು ಮಾಡಿದರು ಹೋಗುವುದಿಲ್ಲವೆಂದು ಒಂದು ಹೊಳೆಯಲ್ಲಿ ಇಬ್ಬರು ಅಗಸರ ಹೆಂಡತಿಯರು ಬಟ್ಟೆ ಒಗೆಯುತ್ತಿರುತ್ತಾರೆ. ಅವರನ್ನು ಕರೆದು ನೀವು ಅಲ್ಲಿ ಒಬ್ಬ ಹೆಂಗಸು ಬರುತ್ತಿದ್ದಾಳೆ. ಅವಳ ಹತ್ತಿರ ಅವಳಿಗೆ ಏನು ಬೇಕು ಎಲ್ಲಾ ಇದೆ. ಅದನ್ನು ಉಪಯೋಗಿಸಿ ಅವಳಿಗೆ ಸ್ವಲ್ಪ ಚೆನ್ನಾಗಿ ಮಾಡಿ. ನಾನು ನಿಮ್ಮ ಸಹಾಯಕ್ಕಾಗಿ ಹಣವನ್ನು ಕೊಡುತ್ತೇನೆಂದು ಸ್ವಲ್ಪ ಹಣಕೊಟ್ಟು "ಅವಳಿಗೆ ಡ್ರೆಸ್ ಮಾಡಿ ಅಲ್ಲಿ ಮರದ ಕೆಳಗೆ ಕುಳಿತಿರುತ್ತೇನೆ. ಅಲ್ಲಿಗೆ ಕಳಿಸಿ" ಎಂದು ಹೇಳಿ ಹೊರಟ. ಚಂದ್ರಮುಖಿಯನ್ನು ಕರೆದು ಅವಳ ಹತ್ತಿರ ಇರುವ ಸೀರೆ, ಕುಪ್ಪಸವನ್ನು ತೆಗೆದು, ತಲೆ ಬಾಚಿ, ಸ್ನಾನ ಮಾಡಿಸಿ, ಅವಳ ತಲೆ ಹೇನು, ಸೀರು ತೆಗೆದು ಸ್ವಚ್ಛ ಮಾಡಿದರು. ಅವಳ ತಲೆಗೆ ಹೂ ಮುಡಿಸಿ ದೊಡ್ಡ ರಾಜಕುಮಾರಿಯಂತೆ ಮಾಡಿದರು. ಇವಳನ್ನು ಅಲ್ಲಿ ಮರದ ಕೆಳಗೆ ಕುಳಿತ ಅದೃಷ್ಟವಂತನ ಹತ್ತಿರ ಹೋಗು ಎಂದು ಹೇಳುತ್ತಾರೆ. ಇವಳು ಆ ಮರದ ಹತ್ತಿರ ಹೋಗಬೇಕಾದರೆ ಅವನು ಎದ್ದು ನಡೆಯಲಾರಂಭಿಸಿದ. ಸ್ವಲ್ಪ ದೂರ ಹೋಗಿ ದೊಡ್ಡ ಬಂಗಲೆ ಕಟ್ಟಿಸಿ, ಆಳು, ಕಾಳುಗಳನ್ನು ಸಜ್ಜುಗೊಳಿಸಿ ಇಲ್ಲೇ ಇರು ಎಂದು ಹೇಳಿ ನಾನು ಬರುತ್ತೇನೆ ಈಗ ಎಂದು ಹೊರಟು ಹೋಗುತ್ತಾನೆ. ಇವಳು ಅಲ್ಲಿ ಇರುತ್ತಾಳೆ. ಹೀಗೆ ಇವರು ಒಬ್ಬರನ್ನೊಬ್ಬರು ನೋಡದೆ ಮಾತನಾಡದೆ ಇರುತ್ತಾರೆ. ಇವನು ಮಧ್ಯಾಹ್ನದ ಊಟಕ್ಕೆ ಮಾತ್ರ ಬಂದು ಹೋಗುತ್ತಿದ್ದ ಉಳಿದದ್ದು ಏನು

ಗೊತ್ತಾಗುತ್ತಿರಲಿಲ್ಲ. ಎಲ್ಲಿಗಾದರೂ ಹೋಗಲಿಯೆಂದು ಸುಮ್ಮನಿದ್ದಳು. ಇವಳಿಗೆ ಬಹಳ ಬೇಸರವಾಗುತ್ತಿತ್ತು. ಮದುವೆಯಾದರೂ ಒಂದು ದಿನ ಮಾತು, ನಗೆ ಏನು ಇಲ್ಲ. ಒಂದು ದಿನವು ನನ್ನ ಜೊತೆ ಸೇರಿಲ್ಲ ಎಂದು ದುಃಖಿಸುತ್ತಿದ್ದಳು. ಇವಳು ಹೇಗೆ ಅಡಿಗೆ ಮಾಡಿದರು ಏನು ಹೇಳುತ್ತಿರಲಿಲ್ಲ. ತುಟಿಯನ್ನು ಅಲ್ಲಾಡಿಸುತ್ತಿರಲಿಲ್ಲ. ಸುಮ್ಮನೆ ತಿಂದು ಹೊರಗೆ ಹೋಗುತ್ತಿದ್ದನು. ಒಂದು ಅಜ್ಜಿಯು "ಮಗಳೇ ನಿನಗೆ ಗಂಡ ಮಾತನಾಡಿಸುವುದಿಲ್ಲ, ಹಾಂ ಹುಂ ಎಂದು ಹೇಳುವುದಿಲ್ಲ. ನಿನ್ನ ಗಂಡ ಮಾತನಾಡಿಸಬೇಕಾದರೆ ಅವನು ತಿನ್ನುವ ಅನ್ನಕ್ಕೆ 1/4 ಭಾಗ ಅಕ್ಕಿ ಹಾಕಿ 1/2 ಭಾಗ ಕಲ್ಲು ಹಾಕಿ ಊಟಕ್ಕೆ ಬಡಿಸು. ಅವಾಗ ಏನಾದರೂ ಮಾತನಾಡುವನೋ ಎಂದು ನೋಡು" ಎಂದಳು. ಅದರಂತೆ ಇವನು ಊಟಕ್ಕೆ ಬಂದನು ಊಟಕ್ಕೆ ಕುಳಿತ ಕಲ್ಲು ಮಿಶ್ರಿತ ಅನ್ನ ಹಾಕಿದಳು. ಅದೃಷ್ಟವಂತ ಕೈಯಾಡಿಸಿ ನೋಡಿ ಅನ್ನ ತಿನ್ನುವಂತಿರಲಿಲ್ಲ. ಹಾಗೆಯೇ ಮಾತನಾಡದೆ ಬಿಟ್ಟು ಎದ್ದು ಹೊರಟ. ಇವಳಿಗೆ ತುಂಬಾ ದುಃಖವಾಯಿತು. ಸುಮ್ಮನೆ ಅನ್ನವಾದರೂ ತಿನ್ನುತ್ತಿದ್ದರು. ಈ ಅಜ್ಜಿಯಿಂದ ಉಪವಸ ಹೋದರು ಎಂದು ದುಃಖಿಸುತ್ತಿದ್ದಳು. ಹೀಗೆ ಇರುವಾಗ ಅಜ್ಜಿಯು ಕೇಳಿದಳು ಏನಾಯಿತೆಂದು. ಇವಳು ಅಜ್ಜಿಯು ಮನೆಗೆ ಹೋಗುತ್ತಾಳೆ. "ಅಜ್ಜಿ ಅವತ್ತು ಊಟವೇ ಮಾಡಿಲ್ಲ. ಪಾಪ ನನ್ನಿಂದ ಊಟವೇ ಇಲ್ಲದಂತಾಯಿತು" ಎಂದಳು. "ಹಾಗಾದರೆ ನಾನು ಒಂದು ಜಾತಿಯ ಸೊಪ್ಪು ಕೊಡುತ್ತೇನೆ ನೀನು ಅವನು ಊಟ ಮಾಡುವಾಗ ಅವನ ತಲೆಗೆ ಹಾಕು. ಅವನು ತನ್ನಷ್ಟಕ್ಕೆ ತಿನ್ನುತ್ತ ತಿರುಗುತ್ತಾನೆ. ಅವನು ಸೂಳೆಯ ಮನೆಗೆ ಹೋಗುತ್ತಿದ್ದಾನೆ. ಈಗ ಬರುತ್ತಾನೆ "ಎಂದಳು. "ಹುಂ" ಎಂದು ಅವನ್ನು ತೆಗೆದುಕೊಂಡು ಬರುತ್ತಿರುವಾಗ " ಅಯ್ಯ ಇದನ್ನು ಹಾಕಿದರೆ ನನ್ನ ಗಂಡನ ತಲೆ ಕೆಡುತ್ತದೆಯೇನೊ" ಎಂದು ಬಯಸಿ ಆ ಸೊಪ್ಪನ್ನು ಒಂದು ಹುತ್ತದ ಮೇಲೆ ಬಿಸಾಡಿ ಹೋಗುತ್ತಾಳೆ. ಅದು ಒಂದು ಹಾವಿನ ತಲೆಯ ಮೇಲೆ ಬೀಳುತ್ತದೆ. ಆ ಹಾವು ತಲೆ ಎತ್ತಿ ಚಂದ್ರಮುಖಿಯನ್ನು ನೋಡಿ ಸುಮ್ಮನೆ ಇರುತ್ತದೆ. ಗಂಡ ಬಂದು ಊಟ ಮುಗಿಸಿ ಹೋಗುತ್ತಾನೆ. ಸಂಜೆಯಾಯಿತು ಇವಳು ಊಟ ಮಾಡಿ ಹಾಸಿಗೆಯಲ್ಲಿ ಮಲಗುತ್ತಾಳೆ. ಆ ಹಾವು ಸೀದಾ ಇವಳ ಮನೆಗೆ ಬಂದು ಹೊಸ್ತಿಲಲ್ಲಿ ನಿಂತು ಇವಳ ಗಂಡನ ರೂಪ ಧರಿಸಿ ಇವಳು ಮಲಗಿದ ಕೋಣೆಗೆ ಬರುತ್ತದೆ. ಬಂದು ಇವಳನ್ನು ದಿಟ್ಟಿಸಿ " ಚಂದ್ರಾ ನಾನು ನಿನ್ನನ್ನೂ ಸಂಪೂರ್ಣ ಮರೆತೆ ಎಂದು ತಿಳಿದೆಯಾ, ನಾನು ನಿನ್ನನ್ನು ಪರೀಕ್ಷೆ ಮಾಡಲು ಈ ರೀತಿಯಾಗಿ ನಡೆದುಕೊಂಡೆ ನನಗೆ ನಿನ್ನ ಮೇಲೆ ಬಹಳ ಪ್ರೀತಿ". ನಾನು ನಿನ್ನನ್ನು ಪ್ರೀತಿಸುತ್ತಿರುವೆನೆಂದು ಅವಳನ್ನು ಅಪ್ಪುತ್ತದೆ. ಚಂದ್ರಮುಖಿ ತನ್ನ ಗಂಡನೆಂದು ಇವಳು ಸಹ ಅದರ ಅಪ್ಪುಗೆಯಲ್ಲಿ ಮೈಮರೆಯುತ್ತಾಳೆ. ಇವಳಿಗೆ ತುಂಬಾ ಖುಷಿಯಾಗುತ್ತದೆ. ನನ್ನ ಗಂಡ ಹಗಲೆಲ್ಲ ಮಾತನಾಡದಿದ್ದರೂ, ರಾತ್ರಿ ಮಾತಾಡುತ್ತಾರೆ ಎಂದು ಅವಳಿಗೆ ಬೇಕಾದವುಗಳನ್ನೆಲ್ಲಾ ರಾತ್ರಿ ಹೇಳುವುದು, ಮತ್ತೊಂದು ದಿನದ ರಾತ್ರಿ ಅವಳಿಗೆ ಬೇಕಾದವುಗಳನ್ನು ತೆಗೆದುಕೊಂಡು ಬರುವುದು ಹೀಗೆ ಮಾಡುತ್ತಿತ್ತು ಆ ನಾಗರಹಾವು. ಹೀಗೆ ಇರುವಾಗ ಒಂದು ಮಗುವಿಗೆ ಜನ್ಮವಿತ್ತಳು. ಅದಕ್ಕೆ ಮಧ್ಯಾಹ್ನ ಬರುವ ಗಂಡ ಏನು ಕೇಳುವುದಿಲ್ಲ. ಸುಮ್ಮನೆ ಊಟ ಮಾಡಿ ಪ್ರತಿದಿನದಂತೆ ಸೂಳೆ ಮನೆಗೆ ಹೋಗುವುದು. ಇವಳಿಗೆ ಒಂದು ನೆಕ್ಲೆಸ್ ಬೇಕಾಗಿರುತ್ತದೆ. ಅದನ್ನು ರಾತ್ರಿಯೇ ತಂದು ಕೊಡುತ್ತದೆ. ಒಂದು ದಿನ ಒಂದು "ಹೊಲತಿ" ಬಂದು ಅಮ್ಮ ನಾನು ನಶಳದ ಮನೆಗೆ ಹೋಗುತ್ತೇನೆ. ನಿಮ್ಮದು ನೆಕ್ಲೆಸ್ ನಂಗೆ ಒಂದು ದಿವಸ ಕೊಡಿ ಎಂದು ಬೇಡಿದಳು. ಆಯಿತು ಆದರೆ ನನ್ನ ಗಂಡನ ಕೇಳುತ್ತೇನೆ ರಾತ್ರಿ ಕೇಳಿ ಬೆಳಿಗ್ಗೆ ಹೇಳುತ್ತೇನೆ ಮಧ್ಯಾಹ್ನ ಅವರು ಮಾತನಾಡುವುದಿಲ್ಲ ಎಂದಳು. ಆಯಿತು ಎಂದು ಹೊಲತಿ ಹೋಗುತ್ತಾಳೆ. ರಾತ್ರಿ ಹಾವು ಗಂಡನ ವೇಷ ಧರಿಸಿ ಬರುತ್ತದೆ. ಇವಳು ಕೇಳುತ್ತಾಳೆ. "ಹೊಲತಿ ಬಂದು ನೆಕ್ಲೆಸ್ ಬೇಡಿದ್ದಾಳೆ ಕೊಡಲೇ" ಎಂದಳು, ಅದಕ್ಕೆ "ಹುಂ ಕೊಟ್ಟರೇ ಕೊಡು, ಆದರೆ ಕೊಡುವಾಗ ಎಲ್ಲಿಯಾದರು ಒಂದು ಪಟನ್ ಜಾರಿದರೆ ಅವಳು ನಮ್ಮ ಮನೆಯ ಕೆಲಸಕ್ಕೆ ಇರಬೇಕೆಂದು ಹೇಳು" ಎಂದಿತು. "ಆಯಿತು" ಎಂದಳು ಚಂದ್ರಮುಖಿ. ಬೆಳಿಗ್ಗೆಯಾಯಿತು. ಹೊಲತಿ ಬಂದು ಕೇಳಿದಳು. "ಕೇಳಿದೆಯಾ", ರಾತ್ರಿ ಹೇಳಿದ ಮಾತನ್ನೆ ಹೇಳಿದಳು. ಹೊಲತಿ ಆಯಿತಮ್ಮ ಎಂದಳು. ಇವಳು ತನ್ನ ಕೊರಳಲ್ಲಿ ಹೊಳೆಯುವ ನೆಕ್ಲೆಸ್ ತೆಗೆದು ಅವಳ ಕೈಗೆ ಕೊಡುವಾಗ ಒಂದು ಪವನ್ ಜಾರಿಬಿತ್ತು. ಹೊಲತಿ ಅವಳ ಮನೆಯ ಕೆಲಸಕ್ಕೆ ಇದ್ದಳು. ಇದನ್ನೂ ಅದೃಷ್ಟವಂತ ಹೊಲತಿ ಕೆಲಸಕ್ಕೆ ಇದ್ದುದನ್ನು ಕೇಳುವುದಿಲ್ಲ. ಅವಳ ಕೊರಳ ನೆಕ್ಲೆಸ್ ಹೊಳೆ ಹೊಳೆಯುತ್ತಿದ್ದುದ್ದು ಕೂಡ ಕೇಳುವುದಿಲ್ಲ. ಹೀಗೆ ಇರುವಾಗ ಇನ್ನೊಂದು ಹೆಣ್ಣು ಮಗು ಜನಿಸಿತು. ಅದು ಚೆನ್ನಾಗಿತ್ತು. ಇದನ್ನೂ ಸಹ ಅದೃಷ್ಟವಂತ ಕೇಳುವುದಿಲ್ಲ.

ಒಂದು ದಿನ ಸೂಳೆ ಮತ್ತು ಅದೃಷ್ಟವಂತ ಪಗಡೆ ಯಾಡುವಾಗ ಒಂದು ಬಂಗಾರದ ಬಳೆಯನ್ನು ಪಂಥಪಿಡುತ್ತಾರೆ. ಆ ಪಗಡೆಯಾಟದಲ್ಲಿ ಅದೃಷ್ಟವಂತ ಗೆಲ್ಲುತ್ತಾನೆ. ಆ ಸೂಳೆಗೆ ಬಹಳ ಸಿಟ್ಟು ಬರುವುದು. ಬಾಯಿಗೆ ಬಂದ ಹಾಗೆ ಬೈಯುತ್ತಾಳೆ. "ನಾನು ಚಂದ್ರಮುಖಿಯ ಹಾಸಿಗೆಯಲ್ಲಿ ಮಲಗುವುದಿಲ್ಲ, ಅವಳ ಹತ್ತಿರ ಮಾತನಾಡುವುದಿಲ್ಲ ಎಂದು ಹೇಳಿದೆಯಲ್ಲಾ ಅವಳಿಗೆ ಹೇಗೆ ಎರಡು ಮಕ್ಕಳು ಜನಿಸಿದವು. ನಿನ್ನ ಹೆಂಡತಿ ನನ್ನ ಹಾಗೆ ಸೂಳೆಗಾರಿಕೆ ಮಾಡುತ್ತಾಳೆಯೋ ಏನೋ"? ಎಂದು ಸಂಶಯದಿಂದ ಅವನನ್ನು ನೋಡುತ್ತಾಳೆ. ಈ ಮಾತು ಅವನಿಗೆ ಹೊಸದಾದುದು. ಇವನಿಗೆ ಆಗ ಜ್ಞಾನೋದಯವಾಯಿತು. ಅವನು ಮಧ್ಯಾಹ್ನ ಬಂದು

ಊಟಮುಗಿಸಿ ಎಂದಿನಂತೆ ಸೂಳೆ ಮನೆಗೆ ಹೊರಡುತ್ತಾನೆ. ಇವಳು ರಾತ್ರಿಯಾಯಿತು ಮಲಗುತ್ತಾಳೆ. ಅದೃಷ್ಟವಂತ ಸೂಳೆಯ ಮನೆಗೆ ಹೋಗದೆ ಒಂದು ದೊಡ್ಡ ಖಡ್ಗವನ್ನು ಮಸೆದು ಯಾರು ಬರುತ್ತಾರೆಂದು ನೋಡುವ ಎಂದು ಬಾಗಿಲಲ್ಲಿ ಖಡ್ಗವನ್ನು ಹಿಡಿದುನಿಂತ. ಹಾವು ಎಂದಿನಂತೆ ಗಂಡನ ವೇಷಧರಿಸಿ ಒಳಗೆ ಬಂದಿತು. ಇದನ್ನು ಗಂಡ ನೋಡಿ ಬೆರಗಾಗಿ ನಿಂತ. ಇವಳು ಸ್ನಾನ ಮಾಡಿ ಕೂದಲು ಒಣಗಲಿಯೆಂದು ಮಲಗಿದ ಮಂಚದಿಂದ ಉದ್ದವಾಗ ಕೂದಲನ್ನು ಕೆಳಗೆ ಇಳಿಬಿಟ್ಟು ಮಲಗಿದ್ದಳು. ಹಾವು ವೇಷಧರಿಸಿ ಒಳಗೆ ಪ್ರವೇಶಮಾಡಿತು. ಅದು ಅದೃಷ್ಟವಂತ ನಿಂತಿದುದು ನೋಡಲಿಲ್ಲ. ಅದು ಹಾಸಿಗೆಯಲ್ಲಿ ಮಲಗಲು ಕಾಲು ಎತ್ತುವಾಗ ಇವನು ನಿಂತಿದ್ದನು ನೋಡಿತು. ಅದು ಏನು ಮಾಡಲು ತೋಚದೆ ತನ್ನ ನಿಜರೂಪ ಧರಿಸಿತು. ಅದೃಷ್ಟವಂತ ಖಡ್ಗ ಎತ್ತಿದವನು ಕಲ್ಲಾಗಿ ನಿಂತಂತೆ ನಿಂತಿದ್ದಾನೆ. ಹಾವು ನೋಡಿತು. ಅದೃಷ್ಟವಂತನನ್ನು ಕಚ್ಚಿ ಸಾಯಿಸಿದರೆ ಚಂದ್ರಮುಖಿ ವಿಧವೆಯಾಗುತ್ತಾಳೆ. ಚಂದ್ರಮುಖಿಯನ್ನು ಸಾಯಿಸಿದರೆ ನನ್ನ ಮುದ್ದಿನ ಮಕ್ಕಳು ತಬ್ಬಲಿಯಾಗುತ್ತಾವೆಂದು ತಾನು ಕಣ್ಣಿನಲ್ಲಿ ನೀರು ಸುರಿಸುತ್ತಾ ಮೂಕ ವೇದನೆಯಿಂದ ಮಂಚದ ಕಾಲಿಗೆ ಇಳಿಬಿದ್ದ ಚಂದ್ರಮುಖಿಯ ಕೂದಲಿಗೆ ತನ್ನನ್ನು ಸುತ್ತಿಕೊಂಡು ತನ್ನ ಪ್ರಾಣವನ್ನು ಮಂಚದ ಕಾಲಿಗೆ ಜಪ್ಪಿ ಸತ್ತಿತು. ಕೂದಲಲ್ಲಿ ಸೆಳೆತದಿಂದ ನೋವಾದ ಚಂದ್ರಮುಖಿಗೆ ಎದ್ದು ನೋಡುತ್ತಾಳೆ ಹಾವು ಸತ್ತು ಬಿದ್ದಿದೆ ಗಂಡ ಖಡ್ಗ ಹಿಡಿದು ಕಲ್ಲಾಗಿ ನಿಂತಿರುವಂತೆ ಇದ್ದನು ಇವಳು ಹೆದರಿ ಗಂಡನನ್ನು ಬಾಚಿ ತಬ್ಬಿದಳು. ಇವಳಿಗೆ ಇದರ ಯಾವುದು ತಿಳಿದಿರಲಿಲ್ಲ. ಇವೆಲ್ಲ ಅವಳ ಗಂಡನಿಗೆ ತಿಳಿದಿತು ನನ್ನ ವೇಷಧರಿಸಿ ಇವಳಿಗೆ ಮೋಸ ಮಾಡಿ ಎರಡು ಮಕ್ಕಳಾದವು ಎಂದು ತಿಳಿದು ತನ್ನ ತಪ್ಪನ್ನು ತಿಳಿದು ದುಃಖಿಸುತ್ತಾ ಇದ್ದನು. ಅಷ್ಟು ಹೊತ್ತಿಗೆ ಅಜ್ಜಿಯು ಬಂದು "ನಾನು ಕೊಟ್ಟ ಔಷಧಿಯನ್ನು ನೀನು ಹುತ್ತಕ್ಕೆ ಹಾಕಿದೆ. ಅದು ಹಾವಿನ ತಲೆಯ ಮೇಲೆ ಬಿತ್ತು. ಅದರ ತಲೆ ಕೆಟ್ಟಿತು. ಈ ರೀತಿ ಮಾಡಿ ನಿಮ್ಮನ್ನು ಸೇರಿಸಿ ಅನ್ಯಾಯವಾಗಿ ಪ್ರಾಣಬಿಟ್ಟಿತು. " ಎಂದಿತು ಅಜ್ಜಿ. ಇದನ್ನು ತಿಳಿದ ಮೇಲೆ ಅದೃಷ್ಟವಂತನಿಗೆ ಮತ್ತೂ ದುಃಖವಾಯಿತು. ತನ್ನ ಹೆಂಡತಿಯನ್ನು ಚೆನ್ನಾಗಿ ನೋಡಿಕೊಂಡನು. ತನ್ನ ಮಕ್ಕಳನ್ನು ಏನು ಮಾಡುವುದೆಂದು ತಿಳಿದು ಆ ಎರಡು ಹಾವಿನ ಮಕ್ಕಳನ್ನು ಬೇರೆ ರೂಂನಲ್ಲಿ ಸಾಕಿ ಅವರನ್ನು ಪೂಜೆ ಮಾಡಿದರು. ಅವರಿಬ್ಬರಿಗೆ ಮದುವೆ ಮಾಡಿ ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಬ್ರಾಹ್ಮಣರಾದರು. ಎಂಥ ಪೌರಾಣಿಕವಿರಬಹುದು. ಇವನು ದೊಡ್ಡ ಅರಮನೆ ಕಟ್ಟಿಸಿ ರಾಜನಾದ. ಮತ್ತೆ ಮೂರು ದಿನ ಅನ್ನ ಸಂತರ್ಪಣೆ ಮಾಡಿಸಿದ. ತನ್ನ ತಂದೆ-ತಾಯರನ್ನು , ಅಣ್ಣ-ಅತ್ತಿಗೆಯರನ್ನು ಬರುವಂತೆ ಓಲೆ ಕಳುಹಿಸಿದ. ಇಲ್ಲಿ ಕಡು ಬಡತನದಿಂದ ರೋಗ ರುಜಿನದಿಂದ, ಹೊಟ್ಟೆಗೆ ಅನ್ನವಿಲ್ಲದೆ ಒಣಗುತ್ತಿದ್ದರು. ಅನ್ನ ಸಂತರ್ಪಣೆ ಎಂದ ತಕ್ಷಣ ಇವರು ಎಲ್ಲರನ್ನೂ ಕರೆದುಕೊಂಡು ರಾಜನ ಮನೆಯ ಅನ್ನ ಸಂತರ್ಪಣೆಗೆ ಬಂದರು. ಊಟವಾಯಿತು. ಇನ್ನು ಹೊರಡುವ ಸಮಯದಲ್ಲಿ ರಾಜನಾದ ಅದೃಷ್ಟವಂತ ಬಂದು ತಾಯಿ -ತಂದೆಯರ ಕಾಲಿಗೆ ಬಿದ್ದು ಅಮ್ಮ ಅಪ್ಪ ನಾನು ನಿಮ್ಮ ಮಗ ನಿಮಗೆ ಹೇಳದೆ ಹೊರಟು ಬಂದು ತಪ್ಪಾಯಿತು ಎಂದ. ಚಂದ್ರಮುಖಿಯು ಮಾವ ಅತ್ತೆಯ ಕಾಲಿಗೆ ಬಿದ್ದಳು. ಇವರೆಲ್ಲ ಬಿಟ್ಟ ಕಣ್ಣು ಮುಚ್ಚದೆ ನೋಡುತ್ತಲೇ ಇದ್ದರು. ನಂತರ ಇವರು ಯಾವ ತೊಂದರೆ ಇಲ್ಲದೇ ಎಲ್ಲರೂ ಒಟ್ಟಿಗೆ ಸುಖವಾಗಿದ್ದರು.

## 3.ಮೂರು ಮೆಟ್ಟಿನ ಹೊಡೆತ ಮತ್ತು ಮೂರು ಚಾಟಿ ಹೊಡೆತ

ಒಂದು ಊರಿನಲ್ಲಿ ಇಬ್ಬರು ಹುಡುಗರು, ಶಾಲೆಗೆ (ಗುರುಕುಲಕ್ಕೆ) ಹೋಗುತ್ತಿದ್ದರು. ಒಂದು ಹುಡುಗಿ ಸಂಕದಹೊಳೆಯವಳು. ಹುಡುಗ ಸೊಣಬುರಿನವನು. ಇಬ್ಬರು ಒಂದೇ ಬೆಂಚಿನಲ್ಲೇ ಕುಳಿತು ಓದುತ್ತಿದ್ದರು. ಹುಡುಗ ಬಹಳ ದಡ್ಡ ಹುಡುಗಿ ಬಹಳ ಚುರುಕು. ಹುಡುಗ ದಿನಂಪ್ರತಿ ಹುಡುಗಿಯ ಹತ್ತಿರ ಕೇಳಿ ಕೇಳಿ ಬರೆಯುತ್ತಿದ್ದ. ಒಂದು ದಿನ ಇವಳು ಹೇಳುವುದನ್ನು ನಿಲ್ಲಿಸಿದಳು. ಇವನಿಗೆ ಬಹಳ ಸಿಟ್ಟು ಬಂದಿತು. ಎಷ್ಟು ಕೇಳಿದರೂ ಇವಳು ಹೇಳಿಕೊಡಲೇ ಇಲ್ಲವಲ್ಲ ನನ್ನ ಮರ್ಯಾದೆ ತೆಗೆದಳೆಂದು, ಅವಳಿಗೆ ಹೇಳಿದ "ನಾನು ನಿನ್ನನ್ನೆ ಮದುವೆಯಾಗುವುದು, ಮದುವೆಯಾಗಿ ಮೂರು ಚಾಟಿ ಹೊಡೆತ ಮತ್ತು ಮೂರು ಮೆಟ್ಟಿನ ಹೊಡೆತ ಹೊಡೆಯುವೆ. ತೋರಿಸು ಎಂದರೆ ಆಗುವುದಿಲ್ಲ ಎನ್ನುವೆ" ಎಂದು ಸಿಟ್ಟಿನಿಂದ ಹೇಳಿ ಗುರುಕುಲ ಬಿಟ್ಟು ಹೊರಟು ಹೋಗುತ್ತಾನೆ. ಇವಳು ಎಲ್ಲದನ್ನು ಓದಿ ಮುಗಿಸಿಯಾದ ನಂತರ ತನ್ನ ಮನೆಗೆ ಹಿಂದಿರುಗುತ್ತಾಳೆ. ಸ್ವಲ್ಪದಿವಸದ ನಂತರ ಅಪ್ಪ ಅಮ್ಮ ಇವಳಿಗೆ ಮದುವೆ ಮಾಡಬೇಕು ಎನ್ನುತ್ತಾರೆ.

ಇಲ್ಲಿ ಈ ಹುಡುಗನ ತಂದೆ-ತಾಯಿಯು ರಾಜ - ರಾಣಿಯರು. ಇವನನ್ನು ಮದುವೆ ಮಾಡಲು ಅವನಿಗೆ ಹುಡಿಗಿಯನ್ನು ಹುಡಿಕಿದರು. ಇವನು ಎಲ್ಲಿಯೂ ಒಪ್ಪಲಿಲ್ಲ. ನಂತರ ಹೇಳಿದ "ನಾನು ನನ್ನ ಹೆಂಡತಿಗೆ ಮೂರು ಮೆಟ್ಟಿನ ಹೊಡೆತ ಮತ್ತು ಮೂರು ಚಾಟಿ ಹೊಡೆತ ಕೊಡುವೆ. ಆ ಹೊಡೆತ ಯಾರು ತಿನ್ನುತ್ತಾರೋ ಅವಳನ್ನು ಮದುವೆಯಾಗುತ್ತೇನೆ" ಎಂದನು. ರಾಜನಿಗೆ ಬಹಳ ಚಿಂತೆಯಾಯಿತು. ಹೊಡೆತ ತಿನ್ನಲು

ಯಾರಾದರೂ ಮದುವೆಯಾಗುತ್ತಾರೊ ಎಲ್ಲಿ ಯಾವ ಹುಡಿಗಿ ಸಿಗುತ್ತಾಳೆ, ತಿಳಿಯದು ಎಂದು ಒಂದು ಊರಿನಲ್ಲಿ ಒಬ್ಬ ಪ್ರಸಿದ್ಧ ರಾಜ ಅಂದರೆ ಸಂಕದ ಹೊಳೆಯಲ್ಲಿ ಆಳುತ್ತಿದ್ದ ಅವನಿಗೆ ಒಬ್ಬ ಮಗಳಿದ್ದಾಳೆ ಎಂದು ತಿಳಿದು ಅಲ್ಲಿಗೆ ಹೆಣ್ಣು ಕೇಳಲು ಹೋದರು. "ಮೂರು ಮೆಟ್ಟಿನ ಹೊಡೆತ ಮೂರು ಚಾಟಿ ಏಟು ತಿನ್ನಬೇಕು" ಎಂದರು. ರಾಜನು "ಆಗುವುದಿಲ್ಲ ಇಂತಹ ರಾಜಕುಮಾರಿಯನ್ನು ಹೊಡೆತ ತಿನ್ನಲು ಕಳುಹಿಸುವುದಿಲ್ಲ" ಎಂದನು. ರಾಜಕುಮಾರಿ ಒಳಗಡೆಯಿಂದ ಬಂದು "ಅಪ್ಪ ನಾನು ಅವರನ್ನು ಮದುವೆಯಾಗುತ್ತೇನೆ" ಎಂದಳು. ಬೇಡ ಬೇಡವೆಂದೂ ಎಷ್ಟು ಹೇಳಿದರು ಕೇಳಲಿಲ್ಲ. ಅಂತೂ ವಿಜೃಂಭಣೆಯಿಂದ ಮದುವೆಯಾಯಿತು. ಮದುವೆಯೇನೋ ಅಡಂಬರವಾಗಿ ನಡೆಯಿತು. ಬೆಳಗಾಯಿತು ರಾಜಕುಮಾರ ತನ್ನ ತಾಯಿಯ ಹತ್ತಿರ ಹೇಳಿದ "ಅವಳನ್ನು ಬರಲಿಕ್ಕೆ ಹೇಳಿ, ನಾನು ಅವಳಿಗೆ ಹೊಡಿಬೇಕು" ಎಂದನು. ದಾಸಿಯ ಹತ್ತಿರ "ಒಂದು ಮೆಟ್ಟು ಮತ್ತು ಒಂದು ಚಾಟಿ ತಾ " ಎಂದನು. ದಾಸಿಯು ತಂದಿಟ್ಟಳು. ಅವಳು ಬಂದಳು. ಇನ್ನು ಹೊಡೆಯಬೇಕು ಎನ್ನುವಷ್ಟರಲ್ಲಿ ಅವಳು ಹೇಳುತ್ತಾಳೆ. "ನೀನು ನನಗ ಹೊಡೆಯಬೇಕಾದರೆ ನೀನು ಹೊರಗಿನ ವ್ಯವಹಾರ ತಿಳಿಯಿರಿ. ಹೊರ ಸಂಚಾರ ಮಾಡಿ ನೀವು ಹಣ, ವಜ್ರ, ವೈಡೂರ್ಯ ತನ್ನಿ ಆಗ ನೀವು ನನಗೆ ಹೊಡೆಯಲು ಯೋಗ್ಯರು" ಎಂದಳು. ಅದಕ್ಕೆ ಇವನು 'ಆಗಲಿ' ಎಂದು ಕುದುರೆಯನ್ನು ಹೊಡೆದುಕೊಂಡು ಹೋಗಿ ಜೀನಬಿಗಿದು, ಚಲ್ಲಣ ಸುತ್ತಿ, ಇವನಿಗೆ ಬೇಕಾದ ವಜ್ರ, ವೈಡೂರ್ಯ ತಂದು ಕುದುರೆಯ ಬೆನ್ನಿಗೆ ಹೇರಿ ಕುಳಿತು, ತಂದೆ-ತಾಯಿಗೆ ನಮಸ್ಕಾರ ಮಾಡಿ ಜಂಭದಿಂದ ಕುದುರೆ ಏರಿ ಹೊರಟ. ಹೋಗುತ್ತಾ ಹೋಗುತ್ತಾ ಕತ್ತಲಾಯಿತು. ಒಂದು ಸೂಳೆಯ ಮನೆಗೆ ಹೋದ. ಅಲ್ಲಿ ಒಂದು ಮೋಸ ನಡೆಯುತ್ತಿತ್ತು. ಬಂದ ಯಾವ ರಾಜಕುಮಾರರೇ ಆಗಲಿ ಅವಳ ಮನೆಗೆ ಬಂದು ತಾಂಬೂಲ ತಿಂದು ಹೋಗಬೇಕು. ಮತ್ತು ಅವಳು ಕರೆದುಕೊಂಡು ಹೋದಲ್ಲಿ ಹೋಗುತ್ತಾನೆ. ಅವಳು ಎಲ್ಲಾ ಕಡೆ ಕರೆದುಕೊಂಡು ಹೋಗಿ ಬಂದು ಮತ್ತೆ ತಾಂಬೂಲ ತಿನ್ನಲು ಬೆಳ್ಳಿಯ ಹರವಾಣ ಹುಡುಕುತ್ತಾಳೆ. ಎಲ್ಲಿ ಹುಡಿಕಿದರು ಇರುವುದಿಲ್ಲ. ಅದಕ್ಕೆ ಸೂಳೆಯು "ನೀನು ಈಗತಾನೆ ಬಂದವನು ನೀನೇವ ಕದ್ದಿರುವೆ. ಇಲ್ಲಿ ಯಾರು ಕದಿಯುವುದಿಲ್ಲ." ಎನ್ನುತ್ತಾನೆ. "ಹಾಗಾದರೆ ನನ್ನ ಮನೆಯನ್ನು ನೀನು ಹುಡುಕು ನಿನ್ನ ಮೂಟೆಯನ್ನು ಬಿಚ್ಚಿ ನಾನು ನೋಡುತ್ತೇನೆ. ನಿನ್ನ ಮೂಟೆಯಲ್ಲಿ ಸಿಕ್ಕರೆ ನೀನು ನನ್ನ ಮನೆಯಲ್ಲಿ 365 ದಿನ ದುಡಿಯಬೇಕು" ಎಂದಳು. ಇಬ್ಬರೂ ಹುಡುಕುತ್ತಾರೆ ಹುಡುಕುವಾಗ ಇವನ ಮೂಟೆಯಲ್ಲಿ ಹರಿವಾಣವಿರುವುದು. ತನ್ನ ಮೂಟೆಯನ್ನೆಲ್ಲಾ ಕೊಟ್ಟು ಅವಳ ಮನೆಯ ಕೆಲಸಕ್ಕೆ ಇರುತ್ತಾರೆ. ಇವಳು ಬಂದವರನ್ನೆಲ್ಲ ಇದೇ ರೀತಿಯ ಮೋಸ ಮಾಡಿ ಅನೇಕ ರಾಜರು-ರಾಜಕುಮಾರರನ್ನು ಕೆಲಸಕ್ಕೆ ಹಚ್ಚಿದ್ದಳು. ಗಂದದೆಣ್ಣೆ ತೆಗೆಯುವುದು, ಸಗಣಿ ತೆಗೆಯುವುದು, ಬಟ್ಟೆ ಒಗೆಯುವುದು, ತೆಂಗಿನ ಕಾಯಿ ಸುಲಿಯುವುದು, ಕಡಿಯುವುದು, ಬಂದವರನ್ನ ಉಪಚರಿಸುವುದು. ಇದೆ ಇವನಿಗೆ ಗಾದದಿ ಗಾಣದಲ್ಲಿ ದುಡಿಯುವುದು. ಇವನಿಗೆ ದುಡಿಯಲಾರದೆ ಸೋತು ಸೊರಗಿ ಹೋಗಿದ್ದ ಉದ್ದುದ್ದ ಗಡ್ಡ ಮೀಸೆ, ತಲೆಯ ಕೂದಲು ತನ್ನ ಭುಜಕ್ಕೆ ಹೊಡೆಯುತ್ತಿದ್ದವು. ಕುರೂಪಿಯಾಗಿದ್ದ ನೋಡಲು. ಇವನು ಸುರಂಗ ಮಾರ್ಗದ ಮೂಲಕ ಪತ್ರವನ್ನು ತಂದೆ ತಾಯಿಗೆ ಕಳುಹಿಸಿದ. ತಂದೆ-ತಾಯಿಯರು ಮಗ ಬರುವ ದಾರಿ ನೋಡುತ್ತಿರುತ್ತಾರೆ. ಇವಳು ಅತ್ತೆ ಮಾವನಿಗೆ ಸ್ನಾನ, ಬಟ್ಟೆ ಒಗೆಯುವುದು ಇತ್ಯಾದಿ. ಯಾರು ಬರುತ್ತಾರೆ ಎಂದು ದಾರಿ ನೋಡುವುದು. ಪೋಸ್ಟ್ ಮ್ಯಾನ್ ಬಂದು ತಂದೆ ತಾಯಿಗೆ ಪತ್ರ ಕೊಡಬೇಕು ಎನ್ನುವಷ್ಟರಲ್ಲಿ ಇವಳು ಅತ್ತೆ-ಮಾವನಿಗೆ ತಿಳಿದರೆ ಚಿಂತೆ ಮಾಡುತ್ತಾರೆಂದು ಅವನ ಹತ್ತಿರ ಯಾರಿಗೂ ತಿಳಿಯದಂತೆ ಪತ್ರ ತೆಗೆದು ಓದುತ್ತಾಳೆ. ಅದರಲ್ಲಿ "ನಾನು ಇನ್ನು 15 ದಿನ ಮಾತ್ರ ಬದುಕುವುದು. ನಿಮಗೆ ನಾನು ಬೇಕಾದರೆ ಏನಾದರೂ ಮಾಡಿ ಅವಳಿಗೆ ತೃಪ್ತಿಯಾಗುವಷ್ಟು ಹಣಕೊಟ್ಟು, ಇಲ್ಲವಾದರೆ ಯಾವುದೇ ಉಪಾಯದಿಂದ ನನ್ನ ಕರೆದುಕೊಂಡು ಹೋಗಿ, ನನ್ನ ಹೆಂಡತಿಗೆ ಮಾತ್ರ ತಿಳಿಸಬೇಡಿ" ಎಂದಿತ್ತು.

ಇವಳು ಅತ್ತೆ ಮಾವನಿಗೆ ಹೇಳುತ್ತಾಳೆ. " ನಾನು ಒಂದು 15 ದಿನ ಬರುವುದಿಲ್ಲ. ಮನೆಯ ಹತ್ತಿರ ಜೋಕೆ. ನನಗೆ ಮನೆಯಲ್ಲಿದ್ದು ಬೇಸರವಾಗಿದೆ " ಎಂದು ಮಾವನ ರಾಜನ ಡ್ರೆಸ, ಕಿರೀಟ ಧರಿಸಿ ಗಂಡಸಿನ ಡ್ರೆಸ್ ಮಾಡಿಸಿಕೊಂಡು ಕುದುರೆ ಏರಿ ಸೊಳೆ ಮನೆಗೆ ಸಮೀಪವಿರುವ ಒಂದು ಅಜ್ಜಿಯ ಮನೆಗೆ ಹೋಗುತ್ತಾಳೆ. ಅವತ್ತು ಅಜ್ಜಿಯ ಮನೆಯಲ್ಲಿಯೇ ಉಳಿದು ತನ್ನ ಕುದುರೆ ಮೇಲಿನ ಸಾಮಾನು ತೆಗೆದು ಊಟ ಮುಗಿಸಿ ಅಜ್ಜಿಯ ಹತ್ತಿರ ಕೇಳುತ್ತಾಳೆ. "ಅಜ್ಜಿ ಈ ಊರಿನಲ್ಲಿ ಒಬ್ಬ ಸೂಳೆಯ ಮನೆಯಿದೆಯಂತೆ, ಅಲ್ಲಿನ ಸಮಾಚಾರವೇನು " ಎಂದಳು. ಅದಕ್ಕೆ ಅಜ್ಜಿಯು ಹೆದರುತ್ತಾ " ಮಗನೇ ಅಲ್ಲಿಯ ಸಮಾಚಾರ ಯಾರಿಗೂ ಹೇಳಬೇಡ. ಅಲ್ಲಿಗೆ ಬಂದ ರಾಜಕುಮಾರರನ್ನು ತಿರುಗಲು ಕರೆದುಕೊಂಡು ಹೋಗುತ್ತಾಳೆ. ಅವಳು ಹೋಗಿ ಬರುವುದರೊಳಗೆ ಎಲೆ ಅಡಿಕೆ ಹಾಕುವ ಹರಿವಾಣವನ್ನು ಮುಚ್ಚಿಡಬೇಕು. ಅದು ಅವನ ಮೂಟೆಯಲ್ಲಿ. ಅವನು ನಾನು ಕದ್ದಿಲ್ಲ ಎಂಬುವುದು ತಿಳಿದು ತನ್ನ ಸಾಮಾನುಗಳು, ಅವನನ್ನೂ ಸೇರಿ ಶಪಥ ಮಾಡುತ್ತಾರೆ. ಅವರು 365 ದಿನಗಳ ಕಾಲ ಆಳಾಗಿ ದುಡಿಯಬೇಕು " ಎನ್ನುತ್ತಾಳೆ. ಅದಕ್ಕೆ ಇವಳು " ಅಜ್ಜಿ ಹಾಗಾದರೆ ನೀನು ಅವರ ಮನೆಗೆ

ಹೋಗುತ್ತೀಯಾ. ಹೌದು ನಾನು ಅವಳ ಮನೆಯ ಕೆಲಸಕ್ಕೆ ಹೋಗುವುದು. ನನಗೆ ಹರಿವಾಣ ಮುಚ್ಚಿಡಲು ಹೇಳುತ್ತಾಳೆ ನಾನು ಮುಚ್ಚಿಡುತ್ತೇನೆ ಮಗನೇ " ಎಂದಳು ಅಜ್ಜಿ " ಹಾಗಾದರೆ ನನಗೆ ಒಂದು ಉಪಕಾರ ಮಾಡು ನಾನು ನಿನಗೆ ಎಷ್ಟು ಹಣವನ್ನಾದರೂ ಕೊಡವೆ, ನೀನು ಆ ಹರಿವಾಣವನ್ನು ನಾಳೆ ನಾನು ಆ ಸೂಳೆ ಜೊತೆ ತಿರುಗಲು ಹೋದಾಗ ತೆಗೆದು ಅವಳ ಮನೆಯ ಆಭರಣದ ರಾಶಿಯಲ್ಲಿ ಹಾಕು. ಮುಂದಿನದು ನನಗೆ ಬಿಡು " ಎಂದಳು.

ಇವಳು ಬೆಳಿಗ್ಗೆ ಅಜ್ಜಿಯ ಮನೆಯಿಂದ ಎದ್ದು ಮುಖತೊಳೆದು ಸೂಳೆಯ ಮನೆಗೆ ಕುದರೆ ಏರಿ ಹೊರಟಳು.( ರಾಜನ ಡ್ರೆಸ್ ಧರಿಸಿ) ಅವಳಮನೆಗೆ ಹೋಗಿ ತಾಂಬೂಲ ತಿಂದು ಹರಿವಾಣ ಅಲ್ಲೆ ಇಟ್ಟು ಸ್ಥಳವನ್ನು ನೊಡಲು ಹೊರಟಳು. ಎಲ್ಲವನ್ನು ಸೂಳೆ ತೋರಿಸುತ್ತಾಳೆ. ಇವರು ನಮ್ಮ ಮನೆಯ ಕೆಲಸದಾಳು, ಇಲ್ಲಿ ತೆಂಗಿನ ಕಾಯಿ ಸುಲಿಯುವುದು , ಸಗಣ ತೆಗೆಯುವುದು, ಬಟ್ಟೆ ಒಗೆಯುವುದು ಹೀಗೆ ನೋಡುತ್ತಾ ಗಂಧದೆಣ್ಣೆ ತೆಗೆಯುವ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಗಂಡನನ್ನು ಗುರುತು ಹಿಡಿಯುವುದು ಬಹಳ ಕಷ್ಟವಾಯಿತು. ಹೇಗೇಗೋ ಮಾಡಿ ಗುರುತು ಹಿಡಿದಳು. ಅವನು ಹೇಳಿದಂತೆ ಇನ್ನು 8 ದಿನಿದಲ್ಲಿ ಸಾಯುವಂತಿದ್ದ. ಗಂಧದೆಣ್ಣೆಯನ್ನು ತೆಗೆಯುತ್ತಿದ್ದ ಇವನನ್ನು ನೋಡಿಕೊಂಡು, ತೂಗು ಉಯ್ಯಾಲೆಯನ್ನು ಆಡಿ ವಿವಿಧ ರೀತಿ ಹೂಗಳನ್ನು ನೋಡಿ ಹಣ್ಣುಗಳನ್ನು ತಿಂದು ಪುನಃ ಬಂಗಲೆಗೆ ಬಂದರು. ಬಂದು ನೋಡಿದಳು ಎಂದಿನಂತೆ ಹರಿವಾಣವಿರುವುದಿಲ್ಲ. " ನೀನೇ ಕಳ್ಳ ಈಗತಾನೆ ಬಂದಿರುವೆ, ಕಳ್ಳ " ಎಂದು ಗದರಿಸುತ್ತಾಳೆ. " ಹಾಗಾದರೆ ನನ್ನ ಮೂಟೆಯನ್ನು ಜಪ್ತಿ ಮಾಡಿ ಅದರಲ್ಲಿ ಸಿಕ್ಕರೆ ನಾನು ನನ್ನ ಮೂಟೆ ಸಮೇತ ಕೆಲಸದಾಳಾಗುತ್ತೇನೆ " ಎಂದಳು. " ಇಲ್ಲವಾದರೆ ನೀನು ನಿನ್ನ ಪರಿವಾರ ಸಮೇತ ನನ್ನ ಮನೆಗೆ ಬಂದು ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರ್ಬೇಕು " ಎಂದಳು. "ಆಯಿತು " ಎಂದು ಸೂಳೆ ಹುಡುಕುತ್ತಾಳೆ ಹುಡುಕುವಾಗ ಮೂಟೆಯಲ್ಲಿ ಹರಿವಾಣವಿರುವುದಿಲ್ಲ. ಇವಳ ಮನೆಯ ಉತ್ತರಣೆಯಲ್ಲಿ ಇರುತ್ತದೆ. ಇನ್ನೇನು ಮಾಡುವುದು ಅವಳು ಕೆಲಸಕ್ಕೆ ಸಿದ್ದಳಾದಳು. ಅದಕ್ಕೆ ಇವಳು ಹೇಳುತ್ತಾಳೆ " ನೀನು ರಾಜರನ್ನೆಲ್ಲಾ ಕೆಲಸಕ್ಕೆ ಹಾಕಿ ಅವರನ್ನು ಪಜಿತಿಗೊಳಿಸಿರುವೆ. ಇನ್ನು ಮುಂದೆ ಹಾಗೆ ಮಾಡದೆಇರು. ನೀನು ನಾನು ಹೇಳಿದ ಹಾಗೆ ಇಲ್ಲಾ ರಾಜಕುಮಾರರನ್ನು ಬಿಡುಗಡೆ ಮಡು " ಎಂದಳು. " ಅದರೆ ಗಂಧದೆಣ್ಣೆಯನ್ನು ತೆಗೆಯುವವರನ್ನು ನಾನು ಹೇಳುವ ತನಕ ಬಿಡಬೇಡ ನಾನು ಅವರನ್ನು ನೋಡಬೇಕು " ಎಂದಳು. " ಹಂ ಅಗಲಿ " ಎಂದು ಸೂಳೆಯು ಎಲ್ಲಾ ರಾಜ ಕುಮಾರರನ್ನು ಬಿಟ್ಟಳು ಅವರೆಲ್ಲಬಂದು ಇವಳ ಕಾಲಿಗೆ ಬಿದ್ದು ನಮಸ್ಕರಿಸಿ ವಂದನೆ ಹೇಳಿ ಹೊರಟು ಹೋದರು. ನಂತರ ಇವಳು ಗಂದದೆಣ್ಣೆತೆಗೆಯಲು ಹೋಗಿ ಅವಳಿಗೆ ಬೇಕಾದಷ್ಟು ವಜ್ರ ವೈಡೂರ್ಯಗಳನ್ನು ಕೊಟ್ಟಳು. ಇವಳು ಮಾತ್ರ ತನ್ನ ಎರಡು ಕುದುರೆಗೆ ಆಗುವಷ್ಟು ವಜ್ರ, ವೈಡರ್ಯವನ್ನು ತೆಗೆದುಕೊಂಡು ಇನ್ನೊಂದು ಕುದುರೆ ಏರಲು ಬಂದು ಅಳು ಗೊತ್ತು ಮಡಲು ಗಂಧದೆಣ್ಣೆ ತೆಗೆಯುವಲ್ಲಿ ಬರುತ್ತಾಳೆ. ಅಗ ಇವನು ಅಂದರೆ ಅವಳ ಗಂಡ ನಾನು ನಿಮ್ಮ ಆಳಾಗಿ ಬರುತ್ತೇನೆ ಎಂದನು. ಅಗಲಿಯೆಂದು ಅವನನ್ನು ಕರೆದುಕೊಂಡು ಬಂದನು. ಇಬ್ಬರು ಕುದುರೆ ಏರಿ ಸೂಳೆಗೆ ವಂದನೆ ಮಾಡಿ ಕುದುರೆ ಏರಿ ಹೊರಟರು. ಇವನಿಗೆ ಈ ರಾಜಕುಮಾರ ಯಾರು ಎಷ್ಟು ಚೆಂದ ಇದ್ದಾನೆ ಇವನಿಗೆ ನಾನು ರಾಜಕುಮಾರನೆಂದು ತಿಳಿದಿದೆಯೋ ಇಲ್ಲವೊ ಇರಲಿ ಎಂದು ಸುಮ್ಮನಾದ. ಇಬ್ಬರು ಇನ್ನು ಮನೆಗೆ 5 ಕೀ.ಮಿ ಇದೆ ಎನ್ನುವಾದ ಇವನು(ಇವಳು) ಕುದುರೆಯಿಂದ ಇಳಿದು ಅವನ ತಲೆಯ ಕೂದಲು ಚೌರದವನಹತ್ತಿರ ತೆಗೆವಂತೆ ಗಡ್ಡಬೋಳಿಸಿ ಮೀಸೆ ಗಂಡಸರಿಗೆ ಇರುವಷ್ಟು ಇಟ್ಟು ಮೊದಲಿನ ರೂಪ ತಾಳುವಂತೆ ಮಾಡಿದಳು. ನಂತರ ಕುದರೆಯ ಹತ್ತಿರ ಬಂದು ಇಲ್ಲಿರುವ ವಜ್ರವೈಡೂರ್ಯವೆಲ್ಲ ಈ ಆಲದಮರದ ಕೆಳಗೆ ಸುರಿದು ಒಂದು ಕುದುರೆಯ ಬಾಲಮಾಡಿ ಇವನನ್ನು ಇನ್ನೊಂದು ಕುದರೆಯನ್ನು ಅಲದ ಮರದ ಕೆಳಗೆ ಬಿಟ್ಟು ಟವಲಿನಲ್ಲಿ ಸುತ್ತಿದ್ದ ಕೂದಲನ್ನು ಹಿಡಿದು, ಅವನ ಹತ್ತಿರ ಬಂದು ಉಂಗುರ ತೆಗೆದು ತನ್ನ ಬೆರಳಿಗೆ ಹಾಕಿಕೊಂಡು ಅವನಿಗೆ ಹೇಳುತ್ತಾಳೆ. " ನನ್ನ ರಾಜ್ಯಕ್ಕೆ ಯಾರು ಕಳ್ಳರು ಬಂದಿದ್ದಾರೆ. ನಾನು ಯುದ್ದಕ್ಕೆ ಹೋಗುತ್ತೇನೆ. ನಾನು ಬರುವವರೆಗೆ ನೀನು ಕಾಯಿ. ನಾನು ಸಂಜೆ ಬರುತ್ತೇನೆ. ಇಲ್ಲವಾದರೆ ನೀನು ಸೂಳೆಯ ಮನೆಗೆ ಹೋಗು " ಎಂದು ಹೇಳಿ ಕುದರೆ ಏರಿ ಯುದ್ದಕ್ಕೆ ಹೋದವರಂತೆ ನಟಿಸಿ ಸೀದಾ ತನ್ನ ಮಾವನ ಮನೆಗೆ ಬಂದು ತನ್ನ ಎಲ್ಲಾ ಜರತಾರಿಯನ್ನು ಬಿಟ್ಟು ಸೀರೆಯನ್ನು ತೊಟ್ಟು ದೀಪವನ್ನು ಹಚ್ಚಿ ಗಂಡನ ಬರುವಿಗೆ ಕಾಯುತ್ತಾಳೆ. ಇಲ್ಲಿ ಸಂಜೆಯಾಯಿತು ಇವನು ಯುದ್ದದಲ್ಲಿ ಸತ್ತನೆಂದು ತಿಳಿದು ತನ್ನ ಹೆಂಡತಿಗೆ ನಾನು ಎರಡು ಕುದರೆ ವಜ್ರ ಆಭರಣ ತಂದೆನೆಂದು ತಿಳಿಸಿ ಈಗ ಅವಳಿಗೆ ಹೊಡೆಯಬಹುದು ಎಂದು ಅಹಂಕಾರದಿಂದ ಕುದುರೆ ಏರಿ ಒಂದೇ ಕುದುರೆಗೆ ಮೂಟೆಗಳನ್ನು ತುಂಬಿ ಹತ್ತಿ ಕುಳಿತ. ಕುದುರೆಯು ಬಲು ಪ್ರಯಾಸದಿಂದ ಮೂಟೆಯನ್ನು ಎಳೆದುಕೊಂಡು ಮನೆಯಲ್ಲಿ ಸೇರಿತು. ಅಪ್ಪ, ಅಮ್ಮ , ಎಲ್ಲರೂ ಬಂದರು ಮಗ ಬಂದನೆಂದು. ಇವಳು ಹೋಗಿ ಕಾಲಿಗೆ ಬಿದ್ದು ನಮಸ್ಕಾರ ಮಾಡಿ ಕೈಕಾಲು ತೊಳೆಸಿ ಸರಕುಗಳನ್ನು ಒಳಗೆ ಹಾಕಿಸಿ ಒಳಗೆ ಹೋದಳು. ಇವನು ಜಂಬದಿಂದ ಹೆಂಡ್ತಿಯನ್ನು ಕರೆದು "ನೋಡು ಹೊರ ಸಂಚಾರಮಾಡಿ ಬಸ್ಸಿ ನಿಮ್ಮ ಯೋಗ್ಯತೆ ನೋಡಿ ತಿಳಿದು ಹೊರಟೆನು ತಿನ್ನುವೆನೆಂದು

ಹೇಳಿದ್ದೆ ಬಾ ಈಗ ಹೊಡೆಯುತ್ತೇನೆ" ಎಂದ ಬಹಳ ಗರ್ವದಿಂದ. ಇದನ್ನು ಕೇಳಿದ ಇವಳು" ಆಗಲಿ ಹೊಡೆಯವಿರಂತೆ ಆದರೆ ಮಾವ-ಅತ್ತೆ ಮತ್ತು ಊರಿನ ಪ್ರಮುಖರ ಎದುರಿಗೆ ನಾನು ಹೊಡೆತ ತಿನ್ನುತ್ತೇನೆ. ಅವರನ್ನು ಕರೆಯಿರಿ" ಎನ್ನುತ್ತಾಳೆ. ಇವನಿಗೆ ಎಲ್ಲಿಲ್ಲದ ಸಂತೋಷ ಅವರ ಮುಂದೆ ತಿನ್ನುತ್ತಾಳೆ ಎಂದು. ಅವರೆಲ್ಲ ಬಂದರು. ಇವನು ಹೊಡೆಯಲು ಕೈಯುತ್ತಿದ್ದ ಇವಳು ಎದ್ದು "ನಿಲ್ಲಿ ಹೊಡೆಯಬೇಡಿ ನನ್ನದು ಸ್ವಲ್ಪ ಮ್ಯಾಜಿಕ್ ಇದೆ ಅದನ್ನು ನೋಡಿ ಹೊಡೆಯುವಿರಂತೆ" ಎಂದು ತನ್ನ ಟವಲನ್ನು ಗಂಟು ಕಟ್ಟಿ ತಿಂದಿರುವ ಕೂದಲನ್ನು ಬಿಚ್ಚಿ ಎಲ್ಲರಿಗೂ ತೋರಿಸುತ್ತಾಳೆ". "ಇದು ನಿಮಗೆ ಬಂದಿರುವ ತಲೆಯ ಕೂದಲು, ಗಡ್ಡ ಮೀಸೆ, ನೀನು ಯಾರ ಹತ್ತಿರ ಯುದ್ಧ ಮಾಡಿ ಗಳಿಸಿ ತಂದ ಸಂಪತ್ತಿದು. ಅಲ್ಲಿ ಸೂಳೆಯ ಮನೆಯಲ್ಲಿ ಗಂಧದೆಣ್ಣೆ ತೆಗೆಯುತ್ತಿದ್ದಾಗ ಯಾವನೊಬ್ಬ ರಾಜಕುಮಾರ ಬಂದು ನಿಮ್ಮನ್ನು ಇತರರನ್ನು ಬಿಡಿಸಿದವನು ಯಾರು. ನಾನು ಬರುತ್ತೇನೆ ನಿಮ್ಮ ಆಳಾಗಿ ಎಂದು ನನ್ನ ಜೊತೆ ಕುದುರೆ ಹೊಡೆಯುವ ಆಳಾಗಿ ಬಂದವರು ಯಾರು. ನಾನು ಯುದ್ಧಕ್ಕೆ ಹೋಗುತ್ತೇನೆ ಎಂಬ ಸುಳ್ಳುನೆಪ ಹೇಳಿ ಮನೆಗೆ ಬಂದೆನು ನಿಮ್ಮ ಬೆರಳ ಉಂಗುರ ನನ್ನ ಕೈಗೆ ಹೇಗೆ ಬಂತು" ಎಂದು ವಿವಿಧ ರೀತಿಯ ಪ್ರಶ್ನೆಯನ್ನು ಹಾಕುತ್ತಾಳೆ. ಇವನು ಬಾಯಿದ್ದು ಮೂಕರಂತೆ ತನ್ನ ತಪ್ಪನ್ನೆಲ್ಲ ಒಪ್ಪಿಕೊಳ್ಳುತ್ತಾನೆ. ಹೆಂಡತಿಯ ಶೌರ್ಯವನ್ನು ಕೊಂಡಾಡುತ್ತಾನೆ. ನಾನು ಪಾಪಿ ಅಂದು ಮಾಡಿದ ತಪ್ಪಿಗೆ ಇಂದು ನಾನೇ ಶಿಕ್ಷೆ ಅನುಭವಿಸಬೇಕೆಂದು ಅವನೆ ಮೂರು ಚಾಟಿ ಏಟು ಮತ್ತು ಮೂರು ಮೆಟ್ಟಿನ ಏಟು ತಿನ್ನಲು ಹೋಗುತ್ತಾನೆ. ಆದಕ್ಕೆ ಇವಳು "ಬೇಡ ಆಗಿದ್ದೆಲ್ಲಾ ಆಯಿತು. ಮುಂದಾದರು ಸಂತೋಷದಿಂದ ಇರುವ" ಎಂದು ಅತ್ತೆ ಮಾವನ ಆಶೀರ್ವಾದದಿಂದ ಸುಖವಾಗಿದ್ದರು.

## 4.ಸನ್ಯಾಸಿಯ ಶಪಥ

ಒಂದು ಊರಿನಲ್ಲಿ ಎರಡು ಹುಲಿಗಳಿದ್ದವು. ಒಂದು ಹೆಣ್ಣು ಗಂಡು, ಅವೆರಡು ಹುಲಿಗಳು ಗಂಡ ಹೆಂಡತಿ. ಹೀಗೆ ಇರುವಾಗ ಹೆಣ್ಣು ಹುಲಿ ಬಸರಿಯಾಯಿತು. 9 ತುಂಬಿ 10 ತಿಂಗಳಿಗೆ ಬಿದ್ದರೂ ಮಗುವಿಗೆ ಜನ್ಮವೆತ್ತಲಿಲ್ಲ. ಗಂಡು ಹುಲಿಯು ಕೇಳಿತು "ನಿನಗೆ ಏನು ಬಯಕೆಯಾಗಿದೆ ಹೇಳು ಎಲ್ಲಿದ್ದರು ನಾನು ತೆಗೆದುಕೊಂಡು ಬರುತ್ತೀನಿ" ಎಂದಿತು. "ಹಾಗಾದರೆ ಕೇಳಿ ಇಲ್ಲಿಂದ ಮುಂದೆ ಬಂದರೆ ಒಂದು ಕಾಡು, ಆ ಕಾಡು ದಾಟಿ ಮುಂದೆ ಹೋಗಿ ಇನ್ನೊಂದು ಕಾಡು ಆ ಕಾಡಿನ ಮಧ್ಯದಲ್ಲಿ ಒಂದು ಕಲ್ಲಿನ ಚಾವಣಿ, ಚಾವಣಿಯಿಂದ ಕೆಳಗೆ ಇಳಿದು ಮುಂದೆ ಹೋಗಬೇಕು ಅಲ್ಲಿ ದಟ್ಟವಾದ, ನಿಶ್ಯಬ್ಧವಾದ ಅರಣ್ಯದಲ್ಲಿ ಒಂದು ಋಷಿಯ ಮನೆ. ಅಲ್ಲಿ ಋಷಿಯು ತಪಸ್ಸು ಮಾಡುತ್ತಿರುತ್ತಾನೆ. ಅವನು 6 ತಿಂಗಳಿಗೊಮ್ಮೆ ಕಣ್ಣು ಬಿಟ್ಟು ಅವನು ಬೆಳಸಿದ ಒಂದು ಹೂವಿನ ಗಿಡದಲ್ಲಿ 6 ತಿಂಗಳಿಗೆ ಒಂದು ಹೂವು ಕೊಡೆಯಷ್ಟು ಅಗಲವಾಗಿರುತ್ತದೆ. ಅದನ್ನು ತಿಂದು ಪುನಃ ತಪಸ್ಸು ಮಾಡುತ್ತಾನೆ. ಆ ಹೂವನ್ನು ನಾನು ತಿನ್ನಬೇಕೆಂದು ಇಷ್ಟವಾಗಿದೆ" ಎಂದಿತು. "ಹಾಗಾದರೆ ಬಾ ಇಬ್ಬರು ಹೋಗಿ ತರುವ" ಎಂದು ಎರಡು ಹುಲಿಗಳು ಹೊರಟು ಕಲ್ಲಿ ಚಾವಣಿ ಒಳಗೆ ಹೋದವು. ಅಲ್ಲಿ ಋಷಿಯು ತಪಸ್ಸು ಮಾಡುತ್ತಿದ್ದ. ಇವು ತಂತಿ ಬೇಲಿಯನ್ನು ಹಾರಿ ಹೂವನ್ನು ಕಿತ್ತು ತಂದವು. ಅಲ್ಲೇ ಕುಳಿತು ಹೂವನ್ನು ತಿನ್ನಲಾರಂಭಿಸಿತು. ಋಷಿಗೆ 6 ತಿಂಗಳು ತುಂಬಿತು. ಹೂವು ತಿನ್ನಲು ನೋಡಿದ ಹೂವು ಇರಲಿಲ್ಲ. ಇವನಿಗೆ ಕೋಪ ತಡೆಯಲಾರದೆ" ಈ ಹೂವನ್ನು ಯಾರು ತಿಂದರೋ ಅವರಿಗೆ ಹೆಣ್ಣು ಮಗು ಜನಿಸಲಿ" ಎಂದು ಶಾಪವಿತ್ತನು. ಇಲ್ಲಿ ಹುಲಿಗಳು ಹೂವನ್ನು ತಿನ್ನಬೇಕಾದರೆ ಮಾನವ ಹೆಣ್ಣು ಮಗುವಿಗೆ ಜನ್ಮವಿತ್ತವು. ಆಗ ಇದಕ್ಕೆ ಸಾಕಲು ಆಗುವುದಿಲ್ಲವೆಂದು ಆ ಸನ್ಯಾಸಿಯ ಹೂವಿನ ತೋಟದಲ್ಲಿ ಬಿಟ್ಟು ಓಡಿ ಹೋದವು. ಮಗು ಜೋರಾಗಿ ಅಳಲು ಪ್ರಾರಂಭಿಸಿತು. ಸನ್ಯಾಸಿಯು ಯಾರದೋ ಮಗುವಿನ ಕೂಗು ಎಂದು ಕಣ್ತೆರೆದು ಬಂದು ನೋಡುವಾಗ ಈಗತಾನೆ ಹುಟ್ಟಿದ ಮಗು ಇವನಿಗೆ ತಾನು ಕೊಟ್ಟ ಶಾಪ ನೆನಪಿಗೆ ಬಂದು " ಈ ಮಗು ಯಾರದು ತೆಗೆದುಕೊಂಡು ಹೋಗಿ. ನಾನು ಏನು ಮಾಡುವುದಿಲ್ಲ" ಎಂದು ಸಾರಿ ಸಾರಿ ಹೇಳುತ್ತಾನೆ. ಆದರೆ ಹುಲಿಗಳು ಬಂದು ತೆಗೆದುಕೊಂಡು ಹೋಗುವುದಿಲ್ಲ. ಈ ಹೊಳೆಯುವ ಕಣ್ಣುಗಳಿಂದ ನೀರು ಬರಲಾರಂಭಿಸಿತು. ಅದನ್ನು ನೋಡಲಾರದೆ ಆ ಮಗುವನ್ನು ಆಶ್ರಮಕ್ಕೆ ತೆಗೆದುಕೊಂಡು ಹೋಗಿ ಚೆನ್ನಾಗಿ ಸಾಕಿದ. ಆ ಮಗು ಸೌಂಧರ್ಯದಿಂದ ತುಂಬಿ ತುಳುಕುತ್ತಿತ್ತು. ಆ ಮಗುವಿಗೆ 5 ವರ್ಷವಾಯಿತು. ತನ್ನ ತಂದೆಗೆ ಪೂಜೆಗೆ ಹೂ, ನೀರು ಇತ್ಯಾದಿಗಳನ್ನು ತಂದುಕೊಡುವುದು, ಇವೆಲ್ಲ ಕೆಲಸವನ್ನು ಒಂದೇ ಸಾರಿ ಮಾಡಿ ಮುಗಿಸುತ್ತಿದ್ದಳು. ದಿನಕ್ಕೆ ಒಂದೇ ಒಂದು ಸಾರಿ ಹೊರಗೆ ಬಂದು ಹೊಗುವುದು ಅಷ್ಟೇ, ಆಮೇಲೆ ಬಾಗಿಲಿನಿಂದ ಹೊರಕ್ಕೆ ಬರುತ್ತಿರಲಿಲ್ಲ. ಸನ್ಯಾಸಿಗೆ ಮುದ್ದಿನ ಮಗುವಾಗಿ ಬೆಳೆದು ದೊಡ್ಡವಳಾದಳು. ಯಾರಾದರೂ ಸಿಕ್ಕರೆ ಮದುವೆ ಮಾಡಬಹುದಿತ್ತು ಎಂದು ಯೋಚಿಸಿ ಕೊನೆಗೆ ಬೇಡ ನನ್ನ ಮಗಳನ್ನು ಇನ್ನೊಬ್ಬನಿಗೆ ಕೊಡುವುದೇ ಎಂದು ಯೋಚಿಸಿ ಸುಮ್ಮನಿದ್ದನು. ಹೀಗೆ ಕಾಲಗಳು ಉರುಳುತ್ತಿದ್ದವು.

ಒಂದು ದಿನ ಬೇರೆ ದೇಶದ ರಾಜ ಈ ಅರಣ್ಯದಲ್ಲಿ ಬೇಟೆಯಾಡಲು ರಾಜ ಮತ್ತು ಪ್ರಧಾನಿ, ಸೈನಿಕರು ಒಂದು ಕಡೆ, ರಾಜ ಮತ್ತು ಪ್ರಧಾನಿ ಒಂದು ಕಡೆಯಾಗುತ್ತಾರೆ. ಆಗ ಸುಸ್ತಾರಿಸಿಕೊಳ್ಳಲು ಒಂದು ಮರದ ಕೆಳಗೆ ಬಂದು ಕುಳಿತರು. ಇವರು ಬಂದು ಕುಳಿತ ಜಾಗವೆ ಸನ್ಯಾಸಿಯ ಆಶ್ರಮದ ಬೇಲಿಯಾಗಿತ್ತು. ಇವರಿಗೆ ನೀರು ಬೇಕಾಗಿತ್ತು. ಇವಳು ಎಂದಿನಂತೆ ಒಂದು ಸಾರಿ ಹೊರಗೆ ಹೊರಟು ಎಲ್ಲಾ ಕೆಲಸವನ್ನು ಪೂರೈಸಿ ಒಳಗೆ ಹೋಗುವಾಗ ರಾಜರು ಅವಳನ್ನು ನೋಡುತ್ತಾರೆ. ಅವಳ ನಡಿಗೆ, ಅವಳ ಸೌಂದರ್ಯ ನೋಡುತ್ತಿದ್ದಂತೆ ಗುಣಗಳು ಹೇಗೆ ಇವೆ ಎಂದು ಯೋಚಿಸುತ್ತಾ ಕುಳಿತನು ರಾಜ. ರಾಜ ನನ್ನೆ ನೋಡುತ್ತಾ ಕುಳಿತ ಪ್ರಧಾನಿಯು "ಏನು ರಾಜರೇ ಏನು ನೋಡುತ್ತೀರಿ" ಎಂದ. " ಅಲ್ಲಿ ಋಷಿಯ ಆಶ್ರಮದಲ್ಲಿ ಒಂದು ಸುಂದರ ಬೆಡಗಿ, ಚೆಲುವೆ ಇದ್ದಾಳೆ ಅವಳು ಇನ್ನೊಮ್ಮೆ ಬರುವಳೇನು ಎಂದು ನೋಡಿದೆ" ಎಂದ. ಇಬ್ಬರು ಅವಳು ಹೊರಗೆ ಬರುವುದನ್ನೆ ನೋಡುತ್ತಾ ಕುಳಿತರು. ಆದರೆ ಅವಳು ಹೊರಗೆ ಬರಲೇ ಇಲ್ಲ. ಇವರಿಗೆ ಅವಳನ್ನು ನೋಟಿ ಮಾತನಾಡಿಸಿ ಮದುವೆಯಾಗುವ ಬಯಕೆಯಾಗಿದೆ. ನೋಟ, ನೋಟ, ಕಣ್ಣುಗಳು ಮುಚ್ಚುತ್ತಿದ್ದವು. ಕೊನೆಗೆ ಇಬ್ಬರು ನೀರು ಕುಡಿಯಲು ಎಂದು ನೆಪ ಮಾಡಿ ಆ ಸನ್ಯಾಸಿಯ ಮನೆಗೆ ಹೋದರು. ಸನ್ಯಾಸಿಯು ಪ್ರೀತಿ, ಸ್ವಾಗತದಿಂದ ಬರಮಾಡಿಕೊಂಡನು, ಮತ್ತು ಹಣ್ಣು ಹಂಪಲುಗಳನ್ನಿಟ್ಟನು. ಇವರು ನೀರನ್ನು ಕುಡಿಯಲು ಕೇಳಿದರು. ಋಷಿಯು ನೀರನ್ನು ಕೊಡಲು ಮಗಳಿಗೆ ಹೇಳಿದರು. ಮಗಳು ನೀರು ಕೊಡಲು ಇವನು (ರಾಜ) ಅವಳನ್ನೆ ನೋಡುತ್ತಾ ನೀರನ್ನು ತಂದರೂ ಲೆಕ್ಕಿಸದೆ ನೋಡುತ್ತಾ ಕುಳಿತ. ಪ್ರಧಾನಿಯು ತಕ್ಷಣ ಎಚ್ಚರಿಸಿ "ನೀರು" ಎಂದ. ಅವನು ನಿದ್ರೆಯಿಂದ ಎಚ್ಚತ್ತವನಂತೆ ಎದ್ದು ನೀರನ್ನು ತೆಗೆದು ಕುಡಿದು ಋಷಿಯನ್ನು "ಹುಡುಗಿ ಯಾರು. ಅದು ನಿಮ್ಮ ಮನೆಯಲ್ಲಿ ......" ಎಂದ ಹೇಳುವಾಗ ಋಷಿಯು "ಹೌದು ಇವಳು ನನ್ನ ಮಗಳು. ಹೇಗೆ ಎಂದರೆ" ಅಂತ ಋಷಿ ಎಲ್ಲ ಕಥೆಯನ್ನು ರಾಜನಿಗೆ ತಿಳಿಸಿದ.

ಆಗ ರಾಜನು "ನಾನು ಇವಳನ್ನು ಮದುವೆಯಾಗುತ್ತೇನೆ. ನನಗೆ ದಾರೆಯೆರೆದು ಕೊಡಿ" ಎಂದು ಪ್ರಾರ್ಥಿಸಿಕೊಳ್ಳುತ್ತೇನೆ ಎಂದನು . ರಾಜನ ಮಾತಿನಂತೆ" ಆಗಲಿ ಮದುವೆ ಮಾಡಿಕೊಡುವೆ ಆದರೆ ನನ್ನ ಮಗಳಿಗೆ ಈವರೆಗೂ ಕಣ್ಣಿನಲ್ಲಿ ನೀರಿನ ಹನಿ ತರಿಸಿಲ್ಲ, ನೀನು ಎಲ್ಲಾದರೂ ಇವಳಿಗೆ ಕಣ್ಣೀರು ಬರಸಿ ಇವಳ ಕಣ್ಣಿನ ನೀರು ಭೂಮಿಗೆ ಬಿದ್ದರೆ ನಿನ್ನ ತಲೆ ಹೊಡೆದು ಚೂರಾಗುವುದು, ಎಚ್ಚರವಿರಲಿ" ಎಂದು ಮಗಳನ್ನು ದಾರೆ ಎರೆದು ಕೊಟ್ಟರು.

ರಾಜ ಮತ್ತು ಪ್ರಧಾನಿ ಮತ್ತೆ ರಾಣಿ ಮೂವರು ಹೋಗುತ್ತಿರುವಾಗ ರಾಜನು ಪ್ರಧಾನಿಗೆ" ಇಲ್ಲೇ ಎಲ್ಲಿಯಾದರು ಒಂದು ದೊಡ್ಡ ಅರಮನೆಕಟ್ಟಿಸು" ಎಂದು ಹೇಳಿ ರಾಣಿಯನ್ನು ಕರೆದುಕೊಂಡು ಸ್ವಲ್ಪ ದೂರಕ್ಕೆ ಹೋಗಿ" ರಾಣಿ ನೋಡು ನನಗೆ ಒಂದು ಮದುವೆಯಾಗಿದೆ. ಅವಳು ಪಟ್ಟದರಾಣಿ ಅವಳಿಗೆ ನಿನ್ನ ಮದುವೆಯಾದುದು ತಿಳಿದರೆ ಹೊಟ್ಟೆಕಿಚ್ಚು ಪಡುತ್ತಾಳೆ. ನೀನು ಇಲ್ಲಿಯ ಅರಮನೆಯಲ್ಲಿರು ನಾನು ರಾತ್ರಿ 12 ಗಂಟೆಗೆ ಬಂದು ಹೋಗುತ್ತೇನೆ. ನಿನಗೆ ಬೇಕಾದವುಗಳನ್ನು ನನ್ನ ಹತ್ತಿರ ಹೇಳು, ಮತ್ತೆ ಯಾರು ಕರೆದರು ನೀನು ಬಾಗಿಲು ತೆಗೆಯಬೇಡ. ನಾನು ಬಂದರೆ ಸರಿಯಾಗಿ 11 ಗಂಟೆಗೆ ಬರುತ್ತೇನೆ ಆವಾಗ ಮಾತ್ರ ತೆಗೆ ಮತ್ತೆ ಯಾವಾಗಲೂ ತೆಗೆಯಬೇಡ" ಎಚ್ಚರವೆಂದು ಹೇಳಿ ರಾಜ ಪ್ರಧಾನಿ ಅಂತಃಪುರಕ್ಕೆ ಹೋದರು. ಹೀಗೆ ಬಹಳ ಕಾಲವಾಯಿತು. ದಿನಂಪ್ರತಿ ರಾಜ 11 ಗಂಟೆಗೆ ಬಂದು ಹೋಗುತ್ತಿದ್ದ. ಒಂದು ದಿನ ಪಟ್ಟದರಾಣಿಯ ಕಡೆಯ ದಾಸಿ ಮಲಗುವುದು ತಡವಾಯಿತು. ರಾಜನಿಗೆ ಅವಳು ಮಲಗದೆ ಇರುವುದು ತಿಳಿಯಲಿಲ್ಲ. 10.30 ಗಂಟೆಗೆ ಎದ್ದು ಕೋಟು ಧರಿಸಿ, ರಾಜ ಭೂಷಣವಾದ ಆಭರಣ ಧರಿಸಿ ಯಾರಿಗೂ ತಿಳಿಯದಂತೆ ಹೊರಟು ಹೋದ. ನಮ್ಮ ರಾಜರು ದಿನ ರಾತ್ರಿ ಇಷ್ಟು ಹೊತ್ತಿಗೆ ಎಲ್ಲಿಗೆ ಹೋಗುತ್ತಾರೆ ಎಂದು ರಾಜನನ್ನು ದಾಸಿ ಹಿಂಬಾಲಿಸುತ್ತಾಳೆ. ಇವನು ಹೋಗಿ ರಾಣಿಯನ್ನು ಕರೆದು ಬಾಗಿಲು ತೆಗೆಯಿಸಿ ಒಳಗೆ ಹೋದ ಇವಳಿಗೆ ರಾಜರು ಇನ್ನೊಂದು ಮದುವೆಯಾಗಿದ್ದಾರೆ ಎಂದು ತಿಳಿದು ಸೀದಾ ಪಟ್ಟದರಾಣಿಯ ಅಂತಃಪುರಕ್ಕೆ ಹೋಗಿ ರಾಣಿಯ ಹತ್ತಿರ" ನಿಮ್ಮ ಗಂಡ ಇನ್ನೊಂದು ಮದುವೆಯಾಗಿದ್ದಾರೆ, ಹೆಣ್ಣು ತುಂಬ ಚೆನ್ನಾಗಿದ್ದಾಳೆ. ದಿನ ಹೋಗುತ್ತಾರೆ" ಎನ್ನುತ್ತಾಳೆ "ಆ! ನನ್ನ ಗಂಡ ಇನ್ನೊಂದು ಮದುವೆಯಾಗಿರುವರೇ ಸತ್ಯವಾಗಿಯು ಹೌದ"? ಎಂದಳು. "ಹೌದು ಅಮ್ಮವರೇ" ಎಂದಳು. ಪಟ್ಟದರಾಣಿಗೆ ರಾಣಿಯನ್ನು ತೆಗೆಯುವ ಸೇಡು ಹೂಡುತ್ತಾಳೆ.

ರಾಜನಿಗೆ ಒಂದು ಕಾಗದ ಬರೆದಳು. ರಾಜ ಬಂದೊಡನೆ "ನಿಮಗೆ ದಂಡಿನ ಕಾಗದ ಬಂದಿದೆ. ಈಗಲೇ ದಂಡಾಳಲು ಬರಬೇಕಂತೆ" ಎಂದಳು. ಏನು ಮಾಡಲು ತೋಚದೆ "ಆಗಲಿ"ದ ಎಂದು ಹೊರಟನು. ಹೊರಡುವಾಗ ಪ್ರಧಾನಿಯನ್ನು ಕರೆದು "ನನ್ನ ರಾಣಿಯ ಮನೆಗೆ ಹೋಗಿ ರಾತ್ರಿ ಸುಖವಾಗಿದ್ದಾಳೋ ಇಲ್ಲವೋ ಎಂದು ಮನೆಗೆ ಸುತ್ತು ಹಾಕಿ ಬರಬೇಕು ನಾನು ಇನ್ನೂ 15 ದಿನದಲ್ಲಿ ಬರುತ್ತೇನೆ. ಅವಳಿಗೆ ಯಾವ

ಅಪಾಯವಾಗದಂತೆ ನೋಡಿಕೊಳ್ಳುವುದು ನಿನಗೆ ಸಂಬಂಧಿಸಿದ್ದು "ಎಂದು ಹೇಳಿ ಹೊರಟನು. ಪ್ರಧಾನಿಯು ರಾಣಿಯ ಹತ್ತಿರ ಹೋಗಿ ಎಲ್ಲಾ ವಿಷಯವನ್ನು ತಿಳಿಸಿದ. ಇವಳಿಗೆ ಬಹಳ ದುಃಖವಾಯಿತು. ಆದರೆ ಕಣ್ಣೀರು ನೆಲಕ್ಕೆ ಬಿದ್ದರೆ ಗಂಡನ ತಲೆ ಒಡೆದು ಹೋಗುತ್ತದೆ ಎಂದು ಸುಮ್ಮನಾದಳು. ಪಟ್ಟದರಾಣಿ ದಾಸಿಯನ್ನು ಕರೆದು "ರಾತ್ರಿ 11 ಗಂಟೆಗೆ ಸರಿಯಾಗಿ ನೀನು ನನ್ನ ಒಡವೆ, ವಸ್ತ್ರವನ್ನು ತೆಗೆದುಕೊಂಡು ಹೋಗಿ ಅವಳಿಗೆ ಬಾಗಿಲು ತೆಗೆಯಲು ಹೇಳಿ ಅವಳನ್ನು ಕರೆದುಕೊಂಡು ಬಾ. ಪಟ್ಟದರಾಣಿಯ ಹುಟ್ಟು ಹಬ್ಬವೆಂದು, ರಾಜರು ಕರೆದುಕೊಂಡು ಬನ್ನಿ ಎಂದು ಹೇಳಿ ಹೋಗಿದ್ದಾರೆ ಎಂದು ಹೇಳಿ ಕರೆದುಕೊಂಡು ಬಾ" ಎಂದು ಆಜ್ಞಾಪಿಸುತ್ತಾಳೆ. ದಾಸಿಯು ಹಾಗೆಯೇ ಹೋಗಿ ರಾಣಿಯನ್ನು ಬಾಗಿಲು ತೆಗೆಯಲು ಹೇಳುತ್ತಾಳೆ. ಆದರೆ ರಾಣಿಯು ಬಾಗಿಲು ತೆಗೆಯುವುದಿಲ್ಲ. ಆದರೆ ಇವಳು "ಅಮ್ಮ ಪಟ್ಟದರಾಣಿಯ ಹುಟ್ಟು ಹಬ್ಬ. ಅವರದೇ ಸೀರೆ, ಆಭರಣ ಕೊಟ್ಟಿದ್ದಾರೆ. ಅಷ್ಟು ಪ್ರೀತಿಯಿಂದ ಬರ ಹೇಳಿದ್ದಾರೆ ನೀವು ಬಾಗಿಲೇ ತೆರೆಯುತ್ತಿಲ್ಲ. ರಾಜರೇ ಹೇಳಿದ್ದಾರೆ ನಿಮ್ಮನ್ನು ಕರೆದೊಯ್ಯಲು ಬೇಕಾದರೆ ಅವರ ಆಭರಣ ನೋಡಿ" ಎಂದಳು. ರಾಣಿ ನಂಬಿ ಹೊರಡುತ್ತಾಳೆ. ಪಟ್ಟದರಾಣಿಯು ಇವಳಿಗೆ ಸ್ವಾಗತಿಸುತ್ತಾಳೆ. ಅಲ್ಲದೇ ಪಟ್ಟದರಾಣಿಗೆ ಒಂದು ಗಂಡು ಮಗುವಿರುತ್ತದೆ. ಇವಳಿಗೆ ಆ ಮಗುವನ್ನಾಡಿಸಲು ಬಿಟ್ಟು, ಇವಳು ಎಲ್ಲಾಗಾದರೂ ಹೋಗುತ್ತಿದ್ದಾಳೆ. ಒಂದು ರಾತ್ರಿ ಪಟ್ಟದರಾಣಿಯು ಎದ್ದು ಕತ್ತಿ ಮಸೆದು ಒಳ್ಳೆಯ ಆನೆಯನ್ನು ಕಡಿದು ಬಂದು ಮಲಗಿ ಬೆಳಿಗ್ಗೆ ಎದ್ದು ಪ್ರಧಾನಿಯನ್ನು ಕರೆದು, "ಪ್ರಧಾನಿ ನಮ್ಮ ಆನೆಯನ್ನು ಯಾರೋ ಕಡಿದು ಹಾಕಿದ್ದಾರೆ. ಆ ರಾಣಿಗೆ ಎಷ್ಟು ಹೊಟ್ಟೆಕ್ಕಿಚ್ಚು, ಆನೆಯನ್ನು ಕಡಿದು ಹಾಕಿದ್ದಾಳೆ. ಹೀಗೆ ಬಿಟ್ಟರೆ ಆಗುವುದಿಲ್ಲ. ಅವಳಿಗೆ ತಕ್ಕ ಶಿಕ್ಷೆ ಕೊಡಿಸು" ಎಂದಳು. ಅದಕ್ಕೆ ಪ್ರಧಾನಿಯು" ಯಾವುದಕ್ಕು ರಾಜರು ಬರಲಿ" ಎಂದನು. ಇವಳು ಮತ್ತೆ ಮರುದಿನ ರಾತ್ರಿ ಕತ್ತಿ ಮಸೆದು ಕುದುರೆಯನ್ನು ಕಡಿದು ಪುನಃ ಪ್ರಧಾನಿಗೆ ಹೇಳುತ್ತಾಳೆ. "ಆಗಲಿ ಯಾವುದಕ್ಕು ರಾಜರು ಬರಲಿ" ಎಂದನು. "ಎಲಾ! ಇವನ ಯಾವುದಕ್ಕು ರಾಜರು ಬರಲಿ" ಎನ್ನುತ್ತಾನೆ. ಹಾಗಾದರೆ ಇವತ್ತು ಒಂದು ಉಪಾಯ ಮಾಡುವೆ ಎಂದು ರಾತ್ರಿ ಕತ್ತಿ ಮಸೆದು ತೊಟ್ಟಿಲಲ್ಲಿ ಮಲಗಿದ್ದ ತನ್ನ ಮಗುವನ್ನೆ ಕಡಿದು ಮಲಗಿ ಬೆಳಿಗ್ಗೆ ಎದ್ದು ಪ್ರಧಾನಿಗೆ ತೋರಿಸಿ ಗೋಳಾಡುತ್ತಾ ಅಳುತ್ತಾಳೆ. "ಈ ಸಾರಿ ನೀನು ಹೀಗೆ ಬಿಟ್ಟರೇ ಆಗದು. ನೀನು ಆ ರಾಣಿಯನ್ನು ಮೂರು ದಾರಿ ಕೂಡುವಲ್ಲಿ ಕಡಿದು ತೋರಣ ಹಾಕಿ ರಕ್ತವನ್ನು ತೆಗೆದು ತಾ" ಎಂದಳು. "ಬೇಡ ಬೇಡ ಅಮ್ಮವರೇ ಅದಕ್ಕೆ ರಾಜರೇ ಬರಲಿ." ಅವರು ಹಾಗೆ ಮಾಡಲಾರರು. ಅವರು (ರಾಣಿ) ಅಂತವರಲ್ಲ", ಎಂದು ಬುದ್ಧಿವಾದ ಹೇಳಿದ. "ನಿನ್ನ ಬುದ್ಧಿವಾದ ನಿಲ್ಲಿಸಿ ನಾನು ಆಜ್ಞೆ ಹೇಳಿದಂತೆ ಮಾಡು" ಎಂದಳು. ರಾಣಿಯು ಬಟ್ಟೆಯಲ್ಲಿ ಕಣ್ಣೀರು ಒರೆಸುತ್ತಾ" ನಾನು ಅಂತಹ ನೀಚ ಕಾರ್ಯ ಮಾಡಿಲ್ಲ ಅಕ್ಕ ನನ್ನನ್ನು ಹಿಂಸೆ ಮಾಡಬೇಡಿ" ಎಂದು ನೆಲಕ್ಕೆ ಕಣ್ಣೀರು ಬೀಳದಂತೆ ಹೇಳುತ್ತಾಳೆ. "ಇದು ನನಗೆ ಬೇಕಾಗಿಲ್ಲ. ನೀನಲ್ಲದೆ ಇನ್ಯಾರು ನನ್ನ ಮಗುವನ್ನು ಕೊಂದರು" ಎಂದಳು. ಪ್ರಧಾನಿಯು ಇವಳನ್ನು ಕರೆದು ಕೊಂಡು ಹೋಗಿ ಮೂರು ದಾರಿ ಕೂಡುವಲ್ಲಿ ಕಡಿಯಲು ಕೈಬಾರದೆ ನಡುಗುತ್ತಿರುತ್ತಾನೆ. ಆಗ ರಾಣಿಯು ಪ್ರಧಾನಿ "ಹೆದರದೆ ನನ್ನನ್ನು ಕಡಿ ಆದರೆ ನನ್ನದೊಂದು ಆಸೆಯಿದೆ. ಏನೆಂದರೆ ನನ್ನನ್ನು ಕಡಿದು ನನ್ನ ಕಾಲುಗಳನ್ನು ಎರಡು ಕಡೆ ಒಂದೊಂದು ಇಟ್ಟು ಮಧ್ಯೆ ದೇಹವನ್ನಿಟ್ಟು, ಎರಡು ಕಣ್ಣನು ಕಾಲಿನ ಮೇಲೆ ಇಟ್ಟು ಕೈಗಳನ್ನು ದೇಹದ ಮೇಲೆ ಇಟ್ಟು, ನನ್ನ ಎರಡು ಮಲೆಗಳನ್ನು ಒಂದೊಂದು ಕಡೆ ಇಟ್ಟು ಹೋಗು" ಎಂದಳು. "ಆಗಲಿ" ಎಂದು ಪ್ರಧಾನಿಯು ಕಡಿದು ಅದೇ ರೀತಿ ಮಾಡಿ ಇಟ್ಟು ಹೋದನು.

ನಂತರ ದಂಡಾಡಿ ರಾಜನು ಮನೆ ಕಡೆಗೆ ಹೊರಟ. ಇಲ್ಲಿ ಪ್ರಧಾನಿ ಮಾಡಿದ ಹಾಗೆ ದೇಹವು ಈ ರೀತಿಯಾಗಿತ್ತು. ಎರಡು ಕಾಲು ಮರಗಳಾದವು. ದೇಹವು ಹಲಗೆಯಾಯಿತು. ಎರಡು ಕೈ ಸರಪಳಿಯಾಗಿ ಹಲಗೆಯನ್ನು ಅವಲಂಭಿಸಿತು. ಎರಡು ಕಣ್ಣು ಗಿಣಿಗಳಾಗಿ ಮರದ ಮೇಲೆ ಕುಳಿತಿತು. ಎರಡು ಸ್ತನಗಳು ಒಂದು ಹಾಲಿನ ಬಾವಿ ಇನ್ನೊಂದು ನೀರಿನವಾಬಿಯಾದವು. ರಾಜ ಸುಸ್ತಾಗಿ ಬರುತ್ತಾನೆ. ಕಾಡಿನ ಮಧ್ಯೆ ತೂಗುಯ್ಯಾಲೆ ಅವನಿಗೆ ಬಹಳ ಖುಷಿಯಾಗಿ ತೂಗುಯ್ಯಾಲೆಯಲ್ಲಿ ಕುಳಿತು ಆಟವಾಡುತ್ತ ಕುಳಿತ. ಹಾಗೆ ನಿದ್ರೆ ಬರುವ ಹಾಗೆ ಬೇಸರದಿಂದ ಕುಳಿತ. ಆಗ ಗಿಣಿಗಳು ಒಂದು ಗಿಣಿ "ಅಣ್ಣ ಅಣ್ಣ ಒಂದು ಕತೆ ಹೇಳು". ಅದಕ್ಕೆ " ಹಿಂದಾಗಿದ್ದು ಹೇಳಲೇ ಮುಂದಾಗಿದ್ದು ಹೇಳಲೆ" ಎಂದಿತು. " ಮುಂದಾಗಿದ್ದು ಅಷ್ಟು ಚೆನ್ನಾಗಿ ನಿನಗೆ ಗೊತ್ತಿರುವುದಿಲ್ಲವಲ್ಲ, ಹಾಗಾಗಿ ಹಿಂದಾಗಿದ್ದೆ ಹೇಳು" ಎಂದಿತು ಆಗ ಹಿಂದಾಗಿದ್ದನು ಹೇಳಿತು, ಹಿಂದೆ ರಾಜ ರಾಣಿಯನ್ನು ಮದುವೆಯಾದದ್ದು, ಪಟ್ಟದರಾಣಿಯ ಒಳಸಂಚು, ರಾಜನಿಗೆ ದಂಡಾಡಲು ಕಳಿಸಿದ್ದು ಇಲ್ಲಿಯ ಘಟನೆಯನ್ನು ವಿವರಿಸಿ ರಾಜನ ಕತೆಯೇ ಹೇಳಿ, ರಾಣಿಯು ಪ್ರಧಾನಿ ಮಾಡಿದ ಹಾಗೆ ಆಗಿದ್ದು ಎಲ್ಲವನ್ನೂ ವಿವರಿಸಿತು ಆಗ ಗಿಣಿಯು" ಅಣ್ಣ ಇನ್ನು ರಾಣಿಯನ್ನು ಪಡೆಯಲು ಏನು ಮಾಡಬೇಕು", ಎಂದಿತು. ಅದಕ್ಕೆ "ತಮ್ಮ ಕೇಳು ಹೇಳುವೆ ಈ ಎರಡು ಮರಗಳಿಗೆ ನೋವಾಗದಂತೆ, ಅಂದರೆ ಬೇರುಗಳಿಗೂ ನೋವಾಗದಂತೆ ಕಿತ್ತು, ಹೆಗಲ ಮೇಲೆ ಹೊತ್ತುಕೊಂಡು ಹಾಲಿನ ಬಾವಿಗೆ ಹಾರಿ, ನಂತರ ನೀರಿನ ಬಾವಿಗೆ ಹಾರಿ ಮೇಲೆ ಬಂದರೆ ರಾಜನ ರಾಣಿ ಸಿಗುತ್ತಾಳೆ. ನಾನು ಹೇಳಿದ ಹಾಗೆಯೇ ತಪ್ಪ ಮಾಡಿದರೆ

ಚೂರು ಪೆಟ್ಟಾದರೆ ರಾಣಿಗೆ ಪೆಟ್ಟಾದಂತೆ ಆದುದರಿಂದ ನೋವಾಗದಂತೆ ಹೊರಗೆ ತೆಗೆದರೆ ರಾಣಿ ಸಿಗುತ್ತಾಳೆ" ಎಂದು ಸುಮ್ಮನಾದವು.

ಇದನ್ನು ಕೇಳುತ್ತಿದ್ದ ರಾಜನಿಗೆ ಬಹಳ ದುಃಖವಾಯಿತು. ನಂತರ ರಾಜಧಾನಿಗೆ ಹೋಗಿ ಸೈನಿಕರನ್ನು ಆಯುಧ ಸಮೇತರಾಗಿ ಕರೆಯಿಸಿ " ಈ ಮರಗಳಿಗೆ ಸ್ವಲ್ಪವು ನೋವಾಗದಂತೆ ಕೀಳಿ" ಎಂದನು. ಅವರು ಸಕಲ ಪ್ರಯತ್ನದಿಂದ ಮರಕ್ಕೆ ನೋವಾಗದಂತೆ ಕಿತ್ತರು. ರಾಜನು ಅದನ್ನು ಹೊತ್ತು ಹಾಲಿನ ಬಾವಿಯೊಳಗೆ ಮುಳುಗಿ, ನೀರಿನ ಬಾವಿಯೊಳಗೆ ಮುಳುಗಿ ಏಳಬೇಕಾದರೆ ರಾಣಿಯು ಪ್ರತ್ಯಕ್ಷಳಾದಳು. ರಾಣಿಯನ್ನು ಬಾಚಿ ತಬ್ಬಿಕೊಂಡು "ನಿನ್ನನ್ನು ಗೋಳಾಡಿಸಿದಳು ನನ್ನ ಪಟ್ಟದ ರಾಣಿ". ಎಂದು ರಾಜಧಾನಿಗೆ ಕರೆದುಕೊಂಡು ಹೋಗಿ ಪ್ರಧಾನಿಗೆ ಹೇಳಿದ ಪಟ್ಟದರಾಣಿಯನ್ನು" ಇಲ್ಲೇ ಸಿಗಿದು ಮೂರು ತೋರಣ ಮಾಡಿ ನನ್ನ ರಾಜಧಾನಿಗೆ ನೇತು ಹಾಕು" ಎಂದನು. ಅದರಂತೆ ಪ್ರಧಾನಿಯು ಸಿಗಿದು ನೇತುಹಾಕಿದ. ಇವರಿಬ್ಬರು ಸುಖವಾಗಿದ್ದರು.

# 5. ಕತ್ತಲ ರಾಜ

ಒಂದು ಊರಿನಲ್ಲಿ ಕತ್ತಲರಾಜನೆಂಬುವನು ಇರುತ್ತಾನೆ. ಅವನಿಗೆ ಒಬ್ಬನೇ ಮಗ ಪುತ್ರ ಕಾಳಿಂಗ. ಅವನು ಚೆನ್ನಾಗಿ ಓದಿ, ಬರೆದು, ಸುಂದರನಾಗಿದ್ದಾನೆ. ಯಾವಾಗಲೂ ಕತ್ತಲರಾಜನಿಗೆ ಮೃಗಬೇಟೆಯೆಂದರೆ ಬಹಳ ಖುಷಿ "ಅಪ್ಪಯ್ಯ ನಾನು ಬರುತ್ತೀನಿ ಮೃಗಬೇಟೆಗೆ" ಬೇಡ ಮಗನೆ ನನಗೆ 11 ವರ್ಷ ಚಿಕ್ಕವ ಬೇಡ". ತಂದೆ ಏನೇ ಹೇಳಿದರೂ ಕೇಳದೆ ಅಮ್ಮನಲ್ಲಿ ವರ ಪಡೆಯುತ್ತಾನೆ. "ಅಮ್ಮ -ನಾನು ಅಪ್ಪನ ಜೊತೆಗೆ ಮೃಗ ಬೇಟೆಗೆ ಹೋಗುತ್ತೇನೆ" ಎಂದ. "ಒಂದು ಕೆನ್ನೆಯಲ್ಲಿ ರಕ್ತವಿದೆ, ಇನ್ನೊಂದು ಕೆನ್ನೆಯಲ್ಲಿ ಹಾಲಿದೆ ಏಕೆ ಹೋಗುತ್ತಿಯೋ?" ಏನೇ ಹೇಳಿದರು ಕೇಳಲೇ ಇಲ್ಲ. ಕಾಡಿನಲ್ಲಿ ಮೃಗಬೇಟೆಯಾಡುವಾಗ ದುರ್‌ದುಂಬೆ ಹುಳ ಬಂದು ಮಗನಿಗೆ ಹೊಡೆಯಿತು. ಮಗನು ಕಿರುಚಿ ಅಲ್ಲೆ ಬಿದ್ದು ಸತ್ತು ಹೋದ. ಆಗ ತಂದೆ "ಮಗನೇ" ಎಂದು ಬಾಚಿ ತಬ್ಬಿದ. ಎದ್ದು ನೋಡಬೇಕಾದರೆ ಮಗನ ಪ್ರಾಣ ಹಾರಿ ಹೋಗಿತ್ತು. ದುಃಖದಿಂದ ಮಗನ ಮೈಮೇಲೆ ಬಿದ್ದು ಹೊರಳಾಡುತ್ತಿದ್ದಾನೆ. ಇನ್ನು ದುಃಖಿಸಿ ಫಲವಿಲ್ಲವೆಂದು ತನ್ನ ವಸ್ತ್ರವನ್ನು ತೆಗೆದು ಹಣದ ಮೈಮೇಲೆ ಮುಚ್ಚುತ್ತಾನೆ. "ದೇವಿ ನಾನು ಮನೆಗೆ ಹೋಗಿ ಬರುವವರೆಗೆ ಏನು ಮುಟ್ಟಬಾರದು" ಎಂದು ಮನೆದೇವತೆಯಲ್ಲಿ ಪ್ರಾರ್ಥನೆ ಮಾಡುತ್ತಾನೆ. ಕತ್ತಲರಾಜ ಮನೆಗೆ ಬಂದ "ಮಗ ಎಲ್ಲಿ ಹೋದ ಏಕೆ ಬರಲಿಲ್ಲ"ವೆಂದು ಹೆಂಡ್ತಿ ಕೇಳುತ್ತಾಳೆ. "ನಿನ್ನ ಮಗ ಶಿಕಾರಿಗೆ ಹೋದಲ್ಲಿ ಸತ್ತು ಹೋದ " ನೆಂದು ಇಬ್ಬರೂ ಗೊಳೋ ಎಂದು ಅಳುತ್ತಾರೆ. "ಸತ್ತರೂ ಮದುವೆ, ಇದ್ದರೂ ಮದುವೆ, ನನ್ನ ಮಗನಿಗೆ ಮದುವೆ ಮಾಡಬೇಕಲ್ಲ". "ಏನು ಹುಚ್ಚು ಮಾತನಾಡುವೆ ಹೋಗಿ ದಾನ ಮಾಡಿ ಬರುವ" ಎಂದನು. "ಹಣ ಎಂದರೆ ಹೆಣವು ಬಾಯಿ ತೆರೆಯಿತು. 10 ಸಾವಿರ ದುಡ್ಡು ಕಟ್ಟಿ ಮಂತ್ರಿ ಸತ್ತ ಹೆಣಕ್ಕೆ ಹೆಣ್ಣು ಗೊತ್ತುಮಾಡಿಕೊಂಡು ಬಾರಯ್ಯ". ಮಂತ್ರಿ 10 ಸಾವಿರ ದುಡ್ಡು ತೆಗೆದುಕೊಂಡು ಸಾರುತ್ತಾ ಹೊರಟನು. "ಕತ್ತಲೆರಾಜನ ಮಗನಿಗೆ ಹೆಣ್ಣು ಕೊಡುತ್ತೀರಾ" ಅಂತ. "ನಾವು ಕೊಡುತ್ತೀವಿ", "ನಾವು ಕೊಡುತ್ತೀವಿ" ಎನ್ನುವರು. ಸತ್ತ ಹೆಣಕ್ಕೆ ಹೆಣ್ಣು ಕೊಡುವಿರೆಂದರೆ 10 ಸಾವಿರ ರೂ ಕೊಡುತ್ತೇವೆ. "ನಾವು ಕೊಡುವುದಿಲ್ಲಪ್ಪ ಮುಂದೋಗಯ್ಯ" ಎನ್ನುತ್ತಾರೆ. ತಿರುತಿರುಗಿ ಮಂತ್ರಿ ಸುಸ್ತಾದ.

ಒಂದು ಊರಿನಲ್ಲಿ ಚೆನ್ನವ್ವ ಎಂಬ ಹುಡುಗಿ ಇದ್ದಳು. ತಂದೆ-ತಾಯಿ ಬಹಳ ಬಡವರು. ಅಲ್ಲಿ ಹೋಗಿ ಕೂಗಿದ. 10 ಸಾವಿರ ಇಸಕೊಂಡನು ತಂದೆ. ಆದರೆ ತಾಯಿ" ಇಲ್ಲ ನಾನು ಕೊಡುವುದಿಲ್ಲ" ಎಂದಳು. "ನಿನ್ನ ದುಡ್ಡು ನನಗೆ ಬೇಡ ನನ್ನ ಮಗಳು ಸುಂದರಿ, ಕೂದಲು ಒಂದು ಮಾರು ಉದ್ದ, ಹಾಗೆಯೇ ಸಾಕಿದ್ದೇನೆ", ಚೆನ್ನವ್ವನ ತಂದೆ ತಾಯಿಯನ್ನು ಬೆರಸಿಕೊಂಡು ಹೋಗಿ ಮೂರು ಸುತ್ತವರಿಸಿ ಹೆಂಡತಿಯ ಜುಟ್ಟು ಹಿಡಿದ. ಆಗ ಮಗಳು ಚೆನ್ನವ್ವ ಓಡಿದಳು. ಆ ತೋಟ ಈ ತೋಟ ಏಕೆ ಹೊರಟ. "ಪಾಪಿ! ನಾನು ಹುಟ್ಟಿ ಫಲವೇನು ತಂದೆ ಬಿಡು, ಪಾಪಿ ಅಮ್ಮನ ತಲೆಯ, ನಿನ್ನ ಮಗಳ ಯಾರಿಗಾದರೂ ಕೊಡು ಬಿಡು" ಎಂದು ಚೆನ್ನವ್ವನ ತಾಯಿ ಹೇಳಿದಳು. ಅಪ್ಪ 10 ಸಾವಿರ ದುಡಡು ಒಳಗಿಟ್ಟು , ತಲೆಯನ್ನು ಬಾಚಿ ಜಡೆಯನ್ನು ಹೆಣೆದು ತಾಯಿ ಮಗಳನ್ನು ತಬ್ಬಿಕೊಂಡು ಗೋಳಿಟ್ಟು ಅಳುತ್ತಾಳೆ. "ಅಳಬೇಡ ತಾಯಿ" ಎಂದು ತಾಯಿಗೆ ನಮಸ್ಕಾರ ಮಾಡಿ, ತಂದೆಗೆ ನಮಸ್ಕಾರ ಮಾಡಿ ಹೊರಟಳು. ಮಂತ್ರಿ ಚೆನ್ನವ್ವನನ್ನು ರಾಜನ ಮನೆಗೆ ಕರಕೊಂಡು ಬಂದ. ರಾಜ -ರಾಣಿ ಕುಳಿತುಕೊಂಡು ಆ ಚೆನ್ನವ್ವನ ನೋಡಿ ಕಣ್ಣೀರು ಸುರಿಸುತ್ತಾರೆ. ಇನ್ನು ದುಃಖಿಸಿ ಫಲವಿಲ್ಲವೆಂದು, ಲಗ್ನಕ್ಕೆ ಸಿದ್ಧತೆ ಮಾಡಿಕೊಂಡು ಚೆನ್ನವ್ವನಿಗೆ ಬಂಗಾರವಿಟ್ಟು, ಪಿತಾಂಬರವನ್ನುಡಿಸಿ, ಸಿಂಗರಿಸಿ, ಎಲ್ಲರಿಗೂ ಊಟ, ತಿಂಡಿ ತಿನಿಸು, ಪಾಲಗ, ಬಾಸಿಂಗವಿಟ್ಟು ಪಲ್ಲಕ್ಕಿಯ ಮೇಲೆ ಸೊಸೆಯನ್ನು ಕೂರಿಸಿಕೊಂಡು ಕರೆದುಕೊಂಡು ಹೋದರು. ಅಲ್ಲಿ ಊಟ ತಿಂಡಿಗೆ ಅನುಕೂಲ ಮಾಡಿದರು. ಸತ್ತ ಹೆಣದ ಹತ್ತಿರ ಹೋಗಿ ನೋಡಿದರೆ ಏನು ಆಗಲಿಲ್ಲ, ವಸ್ತ್ರವನ್ನು ತೆಗೆದು ಹೆಣಕ್ಕೆ ಸ್ನಾನ ಮಾಡಿಸಿ, ಅರಸಿನ ಹಚ್ಚಿದರು, ಅವನಿಗೆ ಲಗ್ನದ ಆಭರಣವನ್ನು ಹಾಕಿ, ಬಾಸಿಂಗ ಸೂಡಿದರು. ಕಾಲುಂಗರವನ್ನು ಹಾಕಿ ಇವಳಿಗೆ ಮಾಡಿಲುದುಂಬಿದರು. ಆಗವ ಚೆನ್ನವ್ವ "ಸತ್ತರೂ ಮದುವೆ, ಇದ್ದರೂ ಮದುವೆ, ಸತ್ತ ಹೆಣಕ್ಕೆ ನನ್ನನ್ನು ಮದುವೆ ಮಾಡುತ್ತೀರಿ" ಎಂದು ಮರುಗಿದಳು. ಅಪ್ಪ ಮಾತು ಕೇಳಿ ಆರತಿಯನ್ನು ಮಾಡಿದರು. ಆರತಿ ಆದ ಕೂಡಲೆ ಚೆನ್ನವ್ವ ಮೂರ್ಚೆ ತಪ್ಪಿ ಬಿದ್ದಳು. ಎಲ್ಲರೂ ಆಕೆ ಮೂರ್ಚೆ ತಪ್ಪಿ ಬಿದ್ದಾಗ ಅವಳನ್ನು ಅರಣ್ಯದಲ್ಲೆ ಬಿಟ್ಟು ಬಂದರು. ಆಗವ ಅವಳ ಕನಸಿನಲ್ಲಿ "11 ದಿನ ವ್ರತ ಮಾಡಮ್ಮ" ಎಂದು ಹೇಳಿದಂತಾಗುವುದು. ಕಣ್ತೆರೆದು ನೋಡುವಾಗ ಯಾರು ಇರುವುದಿಲ್ಲ. ಎಲ್ಲಾ ಸೌಕರ್ಯ ತಂದಿದ್ದನ್ನು ಬಿಟ್ಟು ಹೋಗಿದ್ದನ್ನು ಸರಿಮಾಡಿ 11 ದಿನಕ್ಕೆ ಗಂಡನ ಕಾಲಿನ ಬುಡದಲ್ಲಿ ಕುಳಿತು ವ್ರತ ಮಾಡಿದಳು. " ಕೊರಣ್ಯ ಬಿಕೆ" ಎಂದು ಸನ್ಯಾಸಿ ಬಂದ. "ಬಿಕ್ಷೆ ನಾನು ತಾಯಿ" ಎನ್ನುತ್ತಾನೆ. "ನಾನು ವ್ರತ ಮಾಡುತ್ತಿದ್ದೇನೆ. ಭಿಕ್ಷೆ ಇಲ್ಲೆ ಇದೆ ತೆಗೆದುಕೊಂಡು ಹೋಗು" ಎನ್ನುತ್ತಾಳೆ. "ಸತ್ತ ಹೆಣವನ್ನಿಟ್ಟುಕೊಂಡು ಏನು ವ್ರತ ಮಾಡುತ್ತಿಯಮ್ಮ"

ಎಂದ. "ಸ್ವಾಮಿಗಳೇ ನನ್ನ ಕನಸಿನಲ್ಲಿ ದೇವರು ಬಂದು ಹೇಳಿದಂತಾಯಿತು. ಸಾಮಿಗಳೇ ನನ್ನ ಪತಿದೇವರ ಜೀವ ಬರಬಹುದೋ" ಎಂದು ಕೇಳಿದಳು. "ಬರುತ್ತದೆ ಮಗುವೆ ಆದರೆ ಕೊಡಮಸೆಯ ದಿನ ತಪ್ಪದೇ ನೀನು ನಿನ್ನ ಗಂಡ ವ್ರತ ಮಾಡಬೇಕು". " ಕೋಡಮಾಸೆಯ ವ್ರತ ಮಾಡಿದರೆ ಏನು ಫಲ ಸಿಗುವುದು" ಎಂದಳು. "ಗಂಡನ ಜೀವ ಹೋದರೆ ಜೀವ ಪಡೆಯಬಹುದು. ಮಕ್ಕಳಿಲ್ಲದವರಿಗೆ ಪುತ್ರಸಂತಾನವಾಗುವುದು." "ತಾವುಗಳು ಇಷ್ಟು ಹೇಳಿದ ಮೇಲೆ ನೀವು ಸಾಕ್ಷತ್ ಶಿವನೆ ಇರಬೇಕ" ಎಂದು ಪಾದಕ್ಕೆರಗಿದಳು. "ಚೆನ್ನವ ಏಳು ನಾನು ಸಾದುವೇ ಹೌದು. ನೀನು ನಂಬಿದಂತೆ ಆಗಲಿ ಮೂರು ಕಲ್ಲು ಕೊಡುತ್ತೇನೆ ಮಗುವೇ ತೆಗೆದು ಗಂಟೆಗೆ ಒಂದರಂತೆ ಮೂರು ಗಂಟೆಗೆ ಒಂದೊಂದು ಕಲ್ಲನ್ನು ಹಣೆ "ಎಂದು" ಯೋಚನೆ ಮಾಡಬೇಡ ಹಿಂತಿರುಗಿ ನೋಡು ಶಿವ ನಿಂತಿದ್ವಾನಲ್ಲ". ಅಷ್ಟು ಮಾತು ಕೇಳಿ ಚೆನ್ನವ್ವ ತಿರುಗಿ ನಿಂತಳು. ಸಾದುಗಳು ಮಾಯವಾದರು. ಸಾದುವನ್ನು ನೋಡಲು ಮತ್ತೆ ನೋಡಿದರು ಆದರೆ ಶಿವನೆಂದು ಹೇಳಿ ಮಾಯವಾಗಿದ್ದರು. ಒಂದು ಕಲ್ಲನ್ನು ಹೆಣದ ಮೇಲೆ ಬಿಸಾಡಿದಳು. ಮೈಯ ರೂಪ ಬಂದಿತು, ಇನ್ನೊಂದು ಕಲ್ಲು ಹಾಕಿದಳು ಮುಚ್ಚಿದ ಕಣ್ಣು ಬಿಟ್ಟನು. ಮತ್ತೊಂದು ಕಲ್ಲು ಒಗೆದಳು"ಶಿವ" ಎಂದು ಪುತ್ರಕಾಳಿಂಗ ಎದ್ದು ಕುಳಿತನು ಅರಣ್ಯದಲ್ಲೆ ವಾಸ ಮಾಡುತ್ತಾ ಅಲ್ಲೇ ಇದ್ದರು.

ಒಂದು ದಿನ ಕತ್ತಲರಾಜ ಪುನಃ ಮೃಗಬೇಟೆಯಾಡಿ ಸೊಸೆ ಮಗ ಏನಾದರೆಂದು ನೋಡಿಬರುವೆನೆಂದು ಹೊರಟ. "ನನ್ನ ದಾನವ ಮಾಡುವ ಮಗನ ನಾನೇ ದಾನ ಮಾಡಿ ಬರುವೆ. ನಾನು ಪಾಪಿ, ನಮ್ಮ ಗಂಡ-ಹೆಂಡ್ತಿಯ ಉತ್ತರಕ್ರಿಯೆ ಮಾಡುವ ಮಗನ ಉತ್ತರಕ್ರಿಯೆಯನ್ನು ನಾನು ಮಾಡುತ್ತೇನೆ" ಎಂದು ಅರಣ್ಯಕ್ಕೆ ಸೈನಿಕರನ್ನು ಸೇರಿಸಿಕೊಂಡು ಹೊರಟನು. ಸತ್ತ ಹೆಣವಿದ್ದಲ್ಲಿ ಶಿಕಾರಿಗೆ ಹೋದರು, "ರಾಜರೇ ಏಕೆ ಸುಸ್ತಾಗಿದ್ದೀರಿ ಬನ್ನಿ ಮುಂದು ಹೋಗುವ, ಕಾಡಿನಲ್ಲಿ ಯಾರೋ ಮಾತನಾಡುತ್ತಿರುವ ಹಾಗೆ ಇದೆಯಲ್ಲಿ", ಕತ್ತಲೆ ರಾಜನು ಓಡಿ ಹೋಗಿ ನೋಡಿದಾಗ ಮಗ ಸೊಸೆ. ಮಗನನ್ನು "ಓಡಿ ಹೋಗಿ ಬಾಚಿ ತಬ್ಬಿದ", ಚೆನ್ನವ್ವ ನೀನು ಸತ್ಯವಂತೆ, ನಾನು ನಿನ್ನನ್ನು ದೇವತೆ ಎಂದು ನಂಬುತ್ತೇನೆ; ಮನೆಗೆ ಹೋಗಿ ಸೈನಿಕರೆ ಪಲ್ಲಕಿ ತೆಗೆದುಕೊಂಡು ಬನ್ನಿ" ಎಂದು ಸೈನಿಕರನ್ನು ಮನೆಗೆ ಕಳುಹಿಸಿದನು. ಪಲ್ಲಕ್ಕಿ ತೆಗೆದು " ಏನಪ್ಪ ಒಬ್ಬರೆ ಬಂದಿರಲ್ಲ ರಾಜರು ಎಲ್ಲಿ ಹೋದರ" ಎಂದು ರಾಜನ ಹೆಂಡ್ತಿ ಗೋಳಿಟ್ಟು ಅಳುತ್ತಾಳೆ. "ಅಳಬೇಡಮ್ಮ ನಿನ್ನ ಸೊಸೆ ಮಗ ಜೀವಂತವಾಗಿದ್ದಾರೆ" ಎನ್ನುವುದರೊಳಗೆ "ಅಯ್ಯೋ ಎಂದು ನನ್ನ ದುಃಖದ ಮೇಲೆ ಏಕೆ ದುಃಖ ಕೆರಳಿಸುತ್ತೀರಿಯಪ್ಪ, ನಮ್ಮ ರಾಜರೆಲ್ಲಿ" ಎಂದಳು. "ಇಲ್ಲಮ್ಮ ನಿಮ್ಮ ಪಾದದಾಣೆಗೂ ಹೌದು. ಪಲ್ಲಕ್ಕಿ ಮೇಲೆ ತೆಗೆದುಕೊಂಡು ಹೋಗೋಣವೆಂದು ಪಲ್ಲಕ್ಕಿ ತರಲು ಹೇಳಿದ್ದಾರೆ". ಬಹಳ ಸಂತೋಷದಿಂದ ಸೌಕರ್ಯವನ್ನು ತೆಗೆದುಕೊಂಡು ರಾಣಿಯು ಹೊರಟಳು. ಅರಣ್ಯಕ್ಕೆ ಹೋದಳು. ಅರಣ್ಯದಲ್ಲಿ ಮಗ, ಸೊಸೆ, ಗಂಡ ಇದ್ದರು. ಆಗ ಪಲ್ಲಕ್ಕಿ ಮೇಲೆ ಕೂರಿಸಿಕೊಂಡು ಮನೆಗೆ ಬಂದರು. ಪುತ್ರಕಾಳಿಂಗಗೆ ಲಗ್ನವೆಂದು ಪತ್ರಿಕೆಯನ್ನು ಮಾಡಿಸಿ ಪತ್ರಿಕೆಯನ್ನು ಹಂಚಿದರು. ಲಗ್ನವಾಯಿತು. ವಿಜೃಂಭಣೆಯಿಂದ ರಾಜದಾನಿಯೇ ಮದುವೆ ಹರ್ಷದ ಮಳೆಗೆರೆಯಿತು. ಮಗ, ಸೊಸೆ, ಅತ್ತೆ, ಮಾವ ಎಲ್ಲರೂ ಸುಖವಾರಿರುವಾಗ ಇಲ್ಲಿ ಚೆನ್ನವ್ವ ಹೊರಟಾಗಿಂದ ಬಹಳ ಬಡತನ ಬಂದಿತು. ತಂದೆ-ತಾಯಿ ಭಿಕ್ಷೆಗೆ ಹೊರಟರು, ತಂದೆ "ಭಿಕ್ಷೆ ನೀಡಮ್ಮ" ಎಂದು ಭಿಕ್ಷೆಗೆ ಬಂದನು. "10 ಸಾವಿರ ರೂ ಸಾಲದ ಭಿಕ್ಷೆಯೂ ಬೇಕಾ ಭಿಕ್ಷೆ ಹಿಡಿಯಪ್ಪ" ಎಂದಳು ಚೆನ್ನವ್ವ ತಂದಗೆ ದುಃಖ ತಡೆಯದಾಯಿತು ಭಿಕ್ಷೆ ತೆಗೆದು ಹೊರಟು ಹೋದ. ತಾಯಿ ಭಿಕ್ಷೆಗೆ ಬಂದಳು" ಭಿಕ್ಷೆ ನೀಡು ತಾಯಿ" ಹೋಗಿ ತಬ್ಬಿಕೊಂಡಳು ಚೆನ್ನವ್ವ . "ಅಮ್ಮ ಭಿಕ್ಷೆ ಬೇಡ ಬೇಡ ನಾನು ನಿನ್ನ ಮಗಳು ಚೆನ್ನಮ್ಮ ಬಾ ಒಳಗೆ" ಎಂದು "ಸುಖವಾಗಿ ಅತ್ತೆಯ ಜೊತೆಗೆ ಕಾಲಹರಣ ಮಾಡಮ್ಮ" ಎಂದಳು. ನಂತರ ಅತ್ತೆ-ಮಾವ, ಗಂಡ-ಹೆಂಡ್ತಿ , ತಾಯಿ ಸುಖವಾಗಿದ್ದರು.

## 6. ಉಪಕತೆ

ಒಂದು ಊರಿನಲ್ಲಿ ಬಸಪ್ಪ ಎಂಬ ಹುಡುಗ ಇದ್ದ. ಅವನಿಗೊಂದು ಹೆಂಡ್ತಿ. ಅವನ ಮನೆಯಲ್ಲಿ ಒಂದು ಎಮ್ಮೆಯಿತ್ತು. ಹಗಲು, ಬೆಣ್ಣೆ ತುಪ್ಪಕ್ಕೆ ಕೊರತೆಯಿರಲಿಲ್ಲ. ಕೇವಲ(ಬಹಳ) ಬಡವ. ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ಕೆಲಸಕ್ಕೆ ಹೋಗುತ್ತಾನೆ. ದಿವಸಕ್ಕೆ ಒಂದು 'ಸೇರಲಿ' ಅಕ್ಕಿ ತರುತ್ತಾನೆ. ಬೆಳಿಗ್ಗೆ 1 ಪಾವೂ ಗಂಜಿ ಮಾಡುತ್ತಾಳೆ ಮಧ್ಯಾಹ್ನ 3 ಪಾವೂ ಅಕ್ಕಿ ಹಾಕಿ ಅನ್ನ ಮಾಡುತ್ತಾಳೆ. ಗಂಡ ಕೆಲಸ ಬಿಟ್ಟು ಬರುವುದು 3

ಗಂಟೆ. ಅಡಿಗೆಯಾದ ಕೂಡಲೆ ಗಂಡನಿಗೆ ತಿಳಿಯದೆ 1/2 ಅನ್ನ ತೆಗೆದು ಮಸುರು ಹಾಕಿ ದಿನ ಊಟ ಮಾಡುವುದು. ಗಂಡ ಬಂದ ಮೇಲೆ, ಗಂಡ -ಹೆಂಡತಿ ಊಟಮಾಡುವುದು. ಅದರಲ್ಲಿ ಎರಡು ಭಾಗ ಮಾಡಿ ಗಂಡ-ಹೆಂಡ್ತಿ ಊಟ ಮಾಡುತ್ತಾರೆ. ಅವನಿಗೆ ಅನ್ನ ಸಾಲದೆ ಕೆಲಸಕ್ಕೆ ಕೂಡದೆ ಸುಸ್ತಾಗಬಿಟ್ಟ. ಒಂದು ಅಜ್ಜಿಯು ಇವಳ ಗುಟ್ಟನ್ನು ನೋಡುತ್ತಿದ್ದಳು. ಅವತ್ತು ಒಂದು ದಿನ ಬಸಪ್ಪ ಸುಸ್ತಾಗಿ ಕೆಲಸಕ್ಕೆ ಹೋಗುತ್ತಿದ್ದ. "ಏನ್ ತಮ್ಮ ಬಹಳ ಸೋತು ಹೋಗಿರುವೆ ಬಾ ಇಲ್ಲಿ" ಎಂದು ಕರೆಯಿತು ಅಜ್ಜಿ. " "ಏನು ಕೂಡದು ಅಜ್ಜಿ ಬಹಳ ಸುಸ್ತಾಗಿದೆ ತುಂಟು ಕರವು ಇವೇ ಏಕೇ ಸುಸ್ತಾದೆ", ಎಂದಳು. "ಸೇರಕ್ಕಿ ತರುತ್ತೀನಿ ಒಂದೊಂದು ಮುಷ್ಟಿ ಬರಲ್ಲಜ್ಜಿ" ಎಂದ. " ಹಾಗಾದರೆ ಇಂದು ಕೆಲಸಕ್ಕೆ ಹೋಗಬೇಡ ಮಗನೇ". "ಹೋಗದಿದ್ದರೆ ಊಟಕ್ಕಿಲ್ಲ ಅಜ್ಜಿ" . "ಸಾಯಂಕಾಲ ಬರುವಾಗ ಇಲ್ಲಿಯೇ ಬಾ ನಾನು ನಿನಗೆ ಹೇಳುತ್ತೇನೆ" ಎಂದಳು. ಇವನು ಕೆಲಸ ಮಾಡಿ ಸಾಯಂಕಾಲ ಅಜ್ಜಿಯ ಮನೆಯ ಹತ್ತಿರ ಬಂದ " ಯಾಕೆ ಅಜ್ಜಿ ಬಾ ಅಂದಿದ್ದೆಯಲ್ಲ ಬಂದಿದ್ದೇನೆ". "ಮಗನೇ ಮೂರು ಗೊಂಬೆ ಕೊಡುತ್ತೇನೆ ನಿನ್ನ ಹೆಂಡ್ತಿಗೆ ಹೇಳದೆ ಒಂದೊಂದು ಒಂದು ಮೂಲೆಯಲ್ಲಿ ಇಡು. ಇಟ್ಟು ನೀನು ಗಂಜಿ ಊಟ ಮಾಡಿ ಕೆಲಸಕ್ಕೆ ಹೋಗು ಮಗನೆ" ಎಂದಳು ಅಜ್ಜಿ. ಇವನು ಗೊಂಬೆ ಹಿಡಿದುಕೊಂಡು ಹೋಗಿ ಮೂಲೆಯಲ್ಲಿಟ್ಟು ಕೆಲಸಕ್ಕೆ ಹೋದ. ಇವಳು ಬೇಗ ಬೇಗ ಎದ್ದು ಮಧ್ಯಾಹ್ನದ ಅಡಿಗೆ ಮಾಡಿ ಎಂದಿನಂತೆ ಬಟ್ಟಲು ತೊಳೆಯುತ್ತಾಳೆ. ಆಗ ಒಂದು ಗೊಂಬೆ"ಬಟ್ಟಲು ಯಾತಕೆ ಎಂದಿತು?" ಇನ್ನೊಂದು ಗೊಂಬೆ" ಬಟ್ಟಲು ಊಟಕೆ?" ಎಂದಿತು. ಇನ್ನೊಂದು ಗೊಂಬೆ "ಗಂಡ ಬಾರದೆ ಉಂಬುವುದು ಹೇಗೆ" ಎಂದಿತು. ಇವಳು ಬಟ್ಟಲು ಅಲ್ಲೆ ಬಿಟ್ಟು ಓಡಿದಳು. ಗಡಗಡ ನಡುಗುತ್ತಾ ಮುಂದುಗಡೆ ಜಗುಲಿಯಲ್ಲಿ ಬಂದು ಇವೆ ಎಂದು ಅಲ್ಲಿಂದಲೆ ಓಡಿ ಅಜ್ಜಿಯ ಮನೆಗೆ ಹೋದಳು. "ಅಜ್ಜಿ ಅಜ್ಜಿ" ಎಂದು ಕೂಗುತ್ತಾ ಹೋದಳು. "ಏನಾಯಿತು ಮಗುವೆ ಬಾ" ಎಂದು ಕರೆಯಿತು. ಇವಳು ಎಲ್ಲಾ ವಿಚಾರ ಹೇಳಿದಳು. "ಹೆದರಬೇಡ ಇಲ್ಲಿಯೇ ಇರು. ಅದು ದೆವ್ವನೋ ಭೂತನೋ ಗಂಡನ ಜೊತೆ ಹೋಗುವೆ ಅದು ಬ್ರಹ್ಮರಾಕ್ಷಸ. ನೀನು ಉಳಿದದ್ದೇ ದೊಡ್ಡದು ನಿನ್ನನ್ನೆ ತಿಂದು ಬಿಡುತ್ತಿದ್ದವು". "ಅಜ್ಜಿ ಬಾಗಿಲು ಹಾಕಲಿಲ್ಲ ಅಜ್ಜಿ ನೀನು ಹೋಗಬೇಡ ನಾನೇ ಹೋಗಿ ಬಾಗಿಲು ಹಾಕಿಕೊಂಡು ಬರುತ್ತೇನೆ" ಎಂದು ಬಾಗಿಲು ಹಾಕಿಕೊಂಡು ಮಾತನಾಡುತ್ತ ಕುಳಿತರು. ಗಂಡ (ಬಸಪ್ಪ) ಬಂದ. "ಬಸಪ್ಪ ಇಲ್ಲಿ ಬಾರಪ್ಪ. ಈಗಿನ ಕಾಲದ ಮಕ್ಕಳಿಗೆ ಏನು ಗೊತ್ತಿಲ್ಲ. ಎಲ್ಲಾದರೂ ಕೇಳಿಸಿ ಕಾಯಿ ಕಟ್ಟಿಕೊಳ್ಳಲು ಆಗಲಿಲ್ಲ ನಿಮ್ಮ ಮನೆಯಲ್ಲಿ ದೆವ್ವ ಹೆದರಿಸಿ ಇಲ್ಲಿ ಬಂದು ಕುಳಿತಿದ್ದಾಳೆ" ಎಂದಳು ಅಜ್ಜಿ. "ಹೌದಾ!" ಎಂದು ಹೆಂಡತಿಯನ್ನು ಕರೆದುಕೊಂಡು ಮನೆಗೆ ಬಂದನು. ಊಟಕ್ಕೆ ಕುಳಿತರು. ಇಬ್ಬರಿಗೂ ಹೆಚ್ಚಾಯಿತು ಅನ್ನ "ಇದೇನು ಇವತ್ತು ಅನ್ನ ಹೊಟ್ಟೆ ತುಂಬಿ ಹೆಚ್ಚಾಗಿದೆ. ಕಳ್ಳಿ ಬಾ ನಾಳೆಯಿಂದ ಕೆಲಸಕ್ಕೆ ಇಬ್ಬರೂ ಹೋಗಿ ಕೆಲಸಮಾಡಿ ಬರುವ. ಇಲ್ಲಿ ದೆವ್ವಗಳಿದ್ದಾವೆ ಒಬ್ಬಳೆ ಇರುವುದು ಬೇಡ" ಎಂದು ಹೆಂಡ್ತಿಯನ್ನು ಕೆಲಸಕ್ಕೆ ಕರೆದುಕೊಂಡು ಬಸಪ್ಪ ಹೋದ. ಗೊಂಬೆಯನ್ನು ಅಜ್ಜಿಗೆ ಕೊಟ್ಟು ಅಜ್ಜಿಗೆ ಧನ್ಯವಾದವನ್ನು ಹೇಳಿದ. ನಂತರ ಗಂಡ -ಹೆಂಡ್ತಿ ಸುಖವಾಗಿದ್ದರು.

## 7. ಉಪಕತೆ

ಒಂದು ಸಾವುಕಾರನಿದ್ದ. ಸಾವುಕಾರನ ಮನೆಗೆ ಆಫೀಸಿನವನು ಸಾವುಕಾರನ ನೋಡಲು ಬಂದ. ಸಾವುಕಾರ ತನ್ನ ಆಳಿಗೆ ಕೆಲಸವನ್ನು ನಿಯಮಿಸಿ ಒಂದು ಹಳೆ ಟೋಪಿಯನ್ನು ಹಾಕಿ, ಹರಕಲು ಪಂಚೆಯನ್ನುಟ್ಟು ಬಾಗಿಲಿನಲ್ಲಿ ನಿಂತಿದ್ದ. ಆವಗ ಆಫೀಸಿನವ ಬಂದು "ಸಾವುಕಾರ್ರು ಇದರ" ಎಂದು ಬಾಗಿಲಲ್ಲಿ ನಿಂತವನನ್ನು ಕೇಳಿದ. "ಸಾವುಕಾರ್ರು ಒಳಗಡೆ ಇದ್ದಾರೆ" ಎಂದು ಹೇಳಿದ. ಆಫೀಸಿನವನು " ಹೋಗಿ ಹೇಳಿ ಯಾರೋ ಬಂದಿದ್ದಾರೆ" ಎಂದು" ಒಳಗೆ ಹೋಗಿ ಹಳೆ ಟೋಪಿಯನ್ನು ತಗೆದು, ಪಂಚೆಯನ್ನು ಬಿಚ್ಚಿ, ಹೊಸ ಪಂಚೆಯನ್ನು ಉಟ್ಟು, ರುಮಾಲನ್ನು ಸುತ್ತಿಕೊಂಡು ಹೊರಗೆ ಬಂದನು. ಆಗ ಆಫೀಸಿನವನು" ಬನ್ನಿ ಸಾವುಕಾರ್ರೆ ನಿಮ್ಮನ್ನೆ ನೋಡಲು ಬಂದೆ" ಎಂದನು. ಮತ್ತೆ ಏನೋ ಆದವನಂತೆ ಒಳಗೆ ಬಂದು ಸಾವುಕಾರನ ಹತ್ತಿರ ಬಂದು ತಲೆತಗ್ಗಿಸಿ ನಿಂತ. "ನಾನು ತಪ್ಪು ಮಾಡಿದೆ. ನೀವೇ ಸಾವುಕಾರರೆಂದು ನಾನು ತಿಳಿಯಲಿಲ್ಲ. ನಾನು ಆಡಿದ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇನೆ. ನನ್ನ ತಪ್ಪನ್ನು ಮನ್ನಿಸಿ" ಎಂದ. "ಆಗಲಿ" ಎಂದು ಈಗ ಏನಾಯಿತು ಸಾವುಕಾರನೆಂದು ಹೆಮ್ಮೆ ತೋರಿಸಬಾರದೆಂದು ತಿಳಿ ಹೇಳಿದನು.

## ತವರು ಮನೆ ಬಗ್ಗೆ

ತಮ್ಮಾಗಿರಿರಾಜ ಬರುವ ಹಾದಿಯ್ಯಾSS ನೋಡೀ
ಬಾಲೀS ಮಂಚದಲೀ ಮನಿಗ್ಯಾಳೇ ಸೋಬಾನಾವೇ
ಕಡಗೋಲ ಕಟ್ಟೀಮ್ಯಾಲೇ ಕಡಲೀ ಕಾಳಿನಂಗೇSS
ತಮ್ಮಾS ಗಿರಿರಾಜ ಬಂದೂ ಕುಂತಾನ ಸೋಬಾನವೇSS
ಆಡುಂಡಾS ಬೇನವೆಣ್ಣೀS ಓತುಂಡಾ ಬೆನೆವೆಣ್ಣೀSS
ಯಾಕೇ ಗೌರಮ್ಮಾ ಮಲಗಿದಿಯ್ಯಾS ಸೋಬಾನವೇ
ಕಡಲಗೋಲು ಕಟ್ಟಿಮ್ಯಾಲಿ ಕಡಲಿಕಾಳಿನಂಗೇSS
ತಮ್ಮಾ ಗಿರಿರಾಜ ಬಂದೂ ಕುಂತಾನೇ ಸೋಬಾನವೇSS
ಅಂಗಂದಾS ಮಾತಿಗೇ ದಡಬಡನೇ ಎದ್ದುಳೂ ಗೌರಮ್ಮSS
ಚಿನ್ನದಾS ಗಿಂಡಾSಗಾ ನೀರಾ ಕೊಟ್ಲೂ ಸೋಬನಾವೇ
ಚಿನ್ನಾದಾS ಗಿಂಡಾSಗಾ ನೀರಾ ಕೊಟ್ಲೂ ತಮ್ಮಾಗೇ ಸೋಬಾನವೇSS
ಕುಂಡ್ರಾಕಾS ಹಾಕ್ಯಾಳೇ ಮಣಿಗಳಾ ಸೋಬಾನವೇ
ಕುಂಡ್ರಾಕಾS ಹಾಕ್ಯಾಳೇ ಮಣಿಗಳಾ ತಮ್ಮಾಗಾ
ಬೇಗಾನಾS ಹೊರಡಕ್ಕಾ ತವರೀಗೇ ಸೋಬಾನಾವೇ
ಬೇಗಾನಾ ಹೊರಡಾಕಾS ನಾ ಬಲ್ಲೇ ತಮ್ಮಾSS
ಮನೀಯ್ಯಾಗ ಐದಾರೇ ಶಿವರಾಯS ಸೋಬಾನಾವೇ
ಮನೀಯ್ಯಾಗ ಐದಾರೇ ಶಿವರಾಯSS ನನ ತಮ್ಮಾS ಕೇಳೂ
ಹೋಗಪ್ಪಾ ಹೋಗೂS ಹೊನ ಸೋಬಾನವೇ
ಹಾಲೂ-ಅನಾS ಉಣ್ಣೂನ್ಸ, ಸಾಲಿಸೀರೆ ಉಡಿಸ್ಯಾಳೆ
ಬಾಲಿ ಮಂಚದಲೀ ಸಾಕಾ ನಿದ್ರೆ ಸೋಬಾನವೇ
ನಿಮ್ಮಪ್ಪೋರು ಬಾಳಾ ಬಡವರೂ ಎಲೇ ಗೌರಿSS
ಮತ್ತೀ ಮನೆಯಾಕೆ ಸೇರಿಸಿರಿ ಗೌರೀ ಸೋಬಾನವೇSS
ತುಪ್ಪಾ ಅನ್ನಾS ಉಣ್ಣೀSS ಒಪ್ಪಿದು ಸೀರೇ, ಉಡೇ
ಪಟ್ಟೀ ಮಂಚದಲಿ ಸಾಕಾ ನಿದ್ರೇ ಸೋಬಾನವೇSS
ನಿಮ್ಮಪೂರೋನೇ ಬಾಳಾ ಬಡವರು ಎಲೇ ಗೌರಿ
ಜಾಗದ ಎಲೆ ಹಿಡಿದ್ರೂ ತಿರಿದ್ದುಣ್ಣೋ ಸೋಬಾನವೇ
ಜಾಗದ ಎಲೆ ಹಿಡಿದು ತಿರಿದುಣ್ಣೋ ಜಂಗಮರೂS ಮತ್ತೇ
ಪಸಿಯ್ಯಾಗೇ ಗೌರೀ ಸಿರಿಗೌರೀ ಸೋಬಾನವೇ
ನಿಮ್ಮಪ್ಪರೋನೇ ಬಾಳ ಬಡವರೂS ಗೊತ್ತು ಸ್ವಾಮೀSS
ಒಂದೂ ದಿವಸಿದ್ದೂ ಬರುತೀನೀ ಸೋಬಾನವೇ
ಅಂಬಲೀ ಉಣ್ಣೋರುS ಕಂಬಳೀ ಹೊದಿಯೋರೂS
ಕಂಬದು ಸಾಲಾಗಾS ಮಲಗೋರೂS ಸೋಬಾನವೇ
ಕಂಬಾದಾS ಸಾಲಾಗಾS ಮಲಗೋರೂ ಎಲೇ ಗೌರೀS
ಮತ್ತೇSS ಹಸಿಯಾದೆ ಸಿರಿ ಗೌರೀ ಸೋಬಾವೇ
ನಮ್ಮಪ್ಪರೂನೇ ಬಾಳ ಬಡವರೂ ಗೊತ್ತೂ ಸ್ವಾಮೀ
ನೀರಂಬಲೀ ಕುಡಿದೂ ಬರುತ್ತೇನೇ ಸೋಬಾನವೇ
ಎಷ್ಟೂ ಹೇಳಿದರೂS ಕೇಳಲಿಲ್ಲ ಗೌರಮ್ಮಾSS
ನಿಮ್ಮಪ್ಪೋರೂ ಬಾಳಾS ಬಡವರೂ ಸೋಬಾನವೇ
ಇಟ್ಟೀರುವ ಒಡಿವೆಯಾS ಕಸಿಯೇSS ತೊಟ್ಟಿರೂ ಕುಬಸಾ
ಕಸಿಯೇSS
ಮಾರೀ ತಿಂದರೂ ಒಡವೀಯಾS ಸೋಬಾನವೇSS

ಮಾರೀನೇ ತಿಂದುರೋ ಒಡವೀಯ್ಯಾS ಶಿವುರಾಯಾS
ಶಿವುರಾಯ ಹೊರಟಾನೇ ಕೈಯಿಲಸಕೇ ಸೋಬಾನವೇSS
ಹಾಲೂ ಅನ್ನಾ ಕಲಸೀS ತಟ್ಟೀಗೇ ಇಟ್ಟಿದ್ದಿSS
ಎಲ್ಲೀಗೋಗಿದ್ದೋSS ಗಣಿರಾಜS ಸೋಬಾನಾವೇ
ಗಂಗೇ ತಂದಾS ಸುದ್ದಿ ಗೌರಿಗ್ಯಾರೇ ಹೇಳಿದರೂS
ಕಂಡುಂಡಾSಗಾದ ಬೆನವೆಣ್ಣೇS ಸೋಬಾನವೇ
ಕಂಡುಂಡನೇ ಬೆನವೆಣ್ಣೀನೇ ಹೆಂಡರೋSS
ಕಾಣದೇ ತಿರುಗ್ಯಾರೇ ಸೋಬಾನಾವೇ॥
ಜೋಡೀಲೀ ಚಪ್ಪರನಾರೇS ಜೋಡೆರಡಾS ಮಣೀನಿಟ್ಟೂSS
ಚಪ್ಪರನಾಕ್ಯಾಳೇ ಗೌರಮ್ಮಾ ಸೋಬಾನಾವೇ
ಅಕ್ಕಿಯಾ ರಿಣಕೋಗಿ ಆರೇಳು ದಿನವಾಯ್ತು
ಮೈತೊಳೆಯಿರೋ ಬನ್ನಿ ಶ್ರೀ ಹರಿಯೇ ಸೋಬಾನಾವೇ
ನೆತ್ತೀಯದೂ ಗೌರಿ ಉಗುರೆಣ್ಣೆ ಮಾಡೀದ
ನೆತ್ತೀಯದೂ ಗೌರಿ ಉಗುರಣ್ಣೆ ಮಾಡಸಿಗೆ
ಸೊಂಟದೂ ಬಾವಕ್ಕೆ ಇಳಸ್ಯಾಳೇ ಸೋಬಾನಾವೇ
ಸೊಂಟದೂ ಬಾವಕ್ಕೆ ಇಳಿಸ್ಯಾನೇ ಸೋಬಾನಾವೇ॥
ಸೊಂಟದೂ ಬಾವಕೂ ಗೌರಿ ಉಗುರೆಣ್ಣೆ ಮಾಡಿಸಿದನೇ
ನಿಂಬೆಹಣ್ಣೂ ಮಾಡೀ ಉಂಡ್ಲೀ ಬಿಟ್ಟಾS ಸೋಬಾನವೇ
ಯಾವನೇ ದೇಶದಿಂದಾ ತಂದ್ದೀದ್ರಿS ಗಜಸಿಂಬೇS
ಕೊಯ್ದು ಸರಬತ್ತಾS ಮಾಡುತೀನೀ ಸೋಬಾನಾವೇ
ಗೌರಮ್ಮಾ ಕುಡಗೋಲುಳೇ ತಂದೂ ನಿಂತಾಳಲ್ಲೇ ಸೋಬಾನಾವೇ
ನಿಂಬೇ ಹಣ್ಣೀನಾಗೇ ಇರೂವಳಲ್ಲೇS ಸಿರಿಗೌರೀSS
ಬಾಗೀ ನಿಮ್ಮಕ್ಕಾಗೇ ಶರಣೆನ್ನೇನೇ ಸೋಬಾನವೇ
ಮನೆಗೆನ್ನಾ ಬಂದಾಳೋS ಕದಗಾಳಾ ತಗಿದಾಳೇSS
ಇವಳಾರೆಳೆರೆಂದೂ ಕೇಳ್ಯೆಳಲ್ಲೇ ಸೋಬಾನವೇ
ಹಟರೂ ಮೂಗಿನವೇ ಬಟ್ಟಲು ಗಣ್ಣಿನವೇಳೇ
ತಟವಾಣೀ ನನ್ನಾ ಹಿರೀಗೌರೀ ಸೋಬಾನಾವೇ
ಸಣ್ಣಾ ಕಣ್ಣೀನೊಳೊS ಎಣ್ಣೇ ಕಣ್ಣೀನಳೂSS
ಅಂಜೀ ನಡೆಯೋಳೋ ಸಿರಿಗಂಗೇ ಸೋಬಾನವೇ
ಹಟ್ಟೀದಳೂ ಮಿಟ್ಟಿಗೊಂಡೂS ಶಿವುರಾಯಾ ಎಳೆದಾನೇ
ದಬ್ಬುಬ್ಯಾಡಾ ಗಂಗೇX ಗೌವರಿಗೇ ಸೋಬಾನಾವೇ
ಅಂಗಂದು ಹೇಳ್ಯಾನೇ, ಶಿವುರಾಯ ಹೊರುಟಾನೇSS
ಕೈಲಾಸಕೂ ಶಿವಾ ಹೊರುಟಾನೇSS ಸೋಬಾನಾವೇ
ಹೇ ಈರಣ್ಣಾ ಬಾರೋS ಮೂಲೆಲಿರುವ ಬಣಿಕೆತಾರೋSS
ಸೊಂಟುಮುರಿಹಂಗೇS ಗಂಗೇ ಹೊಡೀ ಬಾರೋ ಸೋಬಾನಾವೆ
ಸೊಂಟುಮುರಿಹಂಗೇS ಗಂಗೇ ಹೊಡೀ ಬಾರೇ ಶಿವುರಾಯS
ಗಂಗೇ ಇಳೀದಾಳೇ ಗಗನಕ್ಕೆ ಸೋಬಾನವೇSS
ಗಂಗೋದ ಮೂರದಿನಕ್ಕೆ ಅಕ್ಕಾ ಸೊತಕವಾದಳೂ
ಎಲ್ಲೂ ತಿರುಗಿದರೂ ನಿರೇ ಇಲ್ಲಾ ಸೋಬಾನವೇ
ತುಪ್ಪನಾ ಎರೆದಾಳೂS ಸೊತಕಾ ತೀರಲಿಲ್ಲS
ನಿಮ್ಮಪ್ಪೋನ ಗಿಂಡ್ಯಾಗ ನೋಡೀ ಬಾರೋ ಸೋಬಾನಾವೇ॥
ಅಪ್ಪನಾ ಗಿಂಡ್ಯಾಗಾ ನೋಡಿದರೂ ನೀರೇಲ್ಲಾ,
ಹೊರೆಟಾರೇ ಹರಿಯ ಜಲದೀಗೇS ಸೋಬಾನಾವೇ
ಗಂಗಮ್ಮನಾ ಮಾಡ್ಯಾರೇS ಕೈಯಾS ಮುಗಿದಾರೇS ಸೋಬಾನವೇ
ಉಕ್ಕಿ ಬಾರೇ ಗಂಗೇ ಕೈಯಾ ಮುಗಿವೇ ಸೋಬಾನವೇ
ಮುಡದಾ ಗಂಡನ ಕೊಡುವೇS ಹಡದಾ ಮಗನಾ ಕೊಡುವೇSS

ಉಕ್ಕೆ ಬಾರೇ ಗಂಗೇ ಕೈಯಾ ಮುಗಿವೇ ಸೋಬಾನವೇ
ಉಕ್ಕೀ ಬಂದಳು ಗಂಗೇS ಸ್ನಾನಾ ಮಾಡಿದಳೂ ಗೌರೀSS
ಅಕ್ಕಾ-ತಂಗ್ಯಾರೂ ಬರುತಾರೇ ಸೋಬಾನಾವೇ॥

* * *

ಗಂಗೇ-ಗೌರಿ ಜಗಳ ಕೊನೆಗೆ ಗಂಗೇನೇ ಹೆಚ್ಚು ಆದಳು

## ಹನುಮಂತನ ಮೇಲೆ ಹಾಡಿರುವ ಹಾಡು

ತಿಂಕೇಯ ಪಟ್ಟಣ ಕೇS ಹೋದನೂ ಹನುಮಂತಾ
ಬೇಗದುಲೀ ಸೀತೆಯಾ ಕರೆತಂದನೂ
ಎಳೆದು ಶ್ರೀರಾಮನೋ ಸೀತಿಯ ಹಾಕಿ
ಸೀತೆಯಾ ಸತ್ಯವಾ ಮಾಡೆಂದರೂ
ಜಯಮಂಗಲವಾS ನಿತ್ಯಶುಭಮಂಗಳಾ
ಬೇದವಿಲ್ಲದೂ ಸೀತೇ ಸತ್ಯವಾ ಮಾಡಿದರೇS
ಮುತ್ತೀನುಂಗರನಾಗಿ ನುಲಿದಾಡೆವೂSS
ಜಯಮಂಗಲವಾS ನಿತ್ಯಾ ಶುಭಮಂಗಳಾ
ಅರಮನೇಂಟ್ಯೇ ಮುಂದೇSS ಕರಿಯಾS ಕಾಳಿಂಗನಾಮಾಡಾ
ಬೇಗದಲಿ ಹೋಗಿ ದುಮುಕೆಂದರೂ
ಬೇದವಿಲ್ಲದೂ ಸೀತೆ ಮಡುವನು ದುಮುಕಿದರೇ
ಜಯಮಂಗಲ
ರಾಮ-ಬೀಮರೂ ಬಾಣಾ ನುಲಿದಾಡೆವೋSS
ಜಯಮಂಗಲ
ಕೊಪ್ಪರಿಗೆ ತರಿಸ್ಯಾರೋS ಉಣ್ಣೇಯಾ ಕಾಯ್ಯಸ್ಸಾರೇSS
ಎಣ್ಣೇಗೆ ಕೈಯಾ ಎದ್ದೆಂದರೂ
ಬೇದವಿಲ್ಲದೂ ಸೀತೆ ಎಣ್ಣೇಗೆ ಕೈಯಾ ಎದ್ದಿದರೇ
ರಾಮಾಬೀಮರೂ ಬಾಣಾ ನುಲಿದಾಡೆವೋSS
ಜಯಮಂಗಲ
ದಶರಥಾ ಮಾಮಾರೂ ಸತ್ತೂಹನ್ನೇರುಡೊರುಷSS
ಕಲ್ಲೂ ಗುಡ್ಡವಾ ಹತ್ತೀSS ದಶರಥಮಾವೆಂದೂ ಕೂಗೆಂದರೂ
ಜಯಮಂಗಲ
ಬೇದವಿಲ್ಲದೂ ಸೀತೇ ಕಲ್ಲೂ ಗುಡ್ಡವಾ ಹತ್ತೀSS
ದಶರಥ ಮಾವೆಂದೂ ಕೂಗಿದಳೂ
ದಶರಥಮಾವ ಮರದಡಿ ತೋರಿದ್ದರೂSS
ಜಯಮಂಗಲ
ಎಲ್ಲಾ ಮಾತನೂ ಗೆದ್ದೇS ಬಲ್ಲಂಥ ಸೀತಮ್ಮಾSS
ತನ್ನಾX ಗಂಡಗೇ ನೀರಾ ಕೊಡೆಂದರೂ
ಜಯಮಂಗಲವ
ಸಣ್ಣನೇ ಮುಸಗೊದ್ದೂS ಹುಸಿನಗೆಯಾ ನಗುತಾ
ತನ್ನಾ ಗಂಡಗೇ ನೀರ ಕೊಡುತ್ತಿದ್ದಳೂ
ಜಯಮಂಗಲವ

ನೋಡಿರೀS ಶ್ರೀಶೈಲವಾ ಮಾಡಿರೀಮಜನೂ ತಂದರುಷಣವಾ
ಪಾತಾಳ ಗಂಗಮ್ಮಗೆ ಹೋಗಿರುವರು
ಪ್ರೀತಿಲೊಂದಭಿಷೇಕ ಮಾಡಿರುವರೂ
ನೋಡಿರೀ ಶ್ರೀಶೈಲವಾ ಮಾಡಿರೀ ಮಜನೂ ತಂದರುಷಣವಾ
ಹಂಪೀ ಕಾಳಸ್ತ್ರೀಗೆ ಹೋಗಿರುವರೂS
ಮತ್ತಲ್ಲಿಂದಾ ದಾರೀ ನಡೆಯುವರೂ
ನೋಡಿರೀ ಶ್ರೀ ಶೈಲವಾ
ಕಂಚೀ ಕಾಳಸ್ತಿಗೇ ಹೋಗಿರುವರೂ
ಹರಿಯದೇ ದಾರಿಯಾ ನಡೆಯುವರೂ
ನೋಡಿರೀ ಶ್ರೀ ಶೈಲವಾ.

* * *

## ಮಂಗಳಾರತಿ ಹಾಡು

ಒಂದೇ ಮೊಗ್ಗಿಲ್ಲೀ ನಾರೀS ನಿಂಬೆಯ ಮುಡಿದಳವಳೋSS
ಯಾರಾನಂದಿತೋ, ಅವಳ ಮನಸನಂದಿತೋ
ಓಂಶಿವ, ಓಂಶಿವಾಗಾರಲೀಯಾS ಹರಹರ ಪಾರ್ವತೀ ಆದಿಶಕ್ತಿಗೇ
ಎರಡೇ ಮೊಗ್ಗೀಲೀ ನಾರಿ ಸುರವೀ ಮುಡಿದವಳೋ
ಯಾರನಂದಿತೋ, ಅವಳ ಮನಪನಂದಿತೋ
ಓಂಶಿವ ಓಂಶಿವ
ಎರಡೇ ಮೊಗ್ಗೀಲೀ ನಾರೀ ನಿಂಬೆ ಮುಡಿದವಳೋ
ಓಂಶಿವ ಓಂಶಿವ

* * *

## ಆರತಿ

ಆರತೀ ಮಾಡೋಣಾ ಬಾರೇ ರಾಧಾಕೃಷ್ಣಗೇSS
ಸಖೀಯೇ ಪಾಂಡುನಾಥಗೆ
ಬಾಳೆಯೊ ಕಿತ್ತೂS ಬಯಲಿಗೇ ಹಾಕೀS
ಸುತ್ತಲೂ ನಿಂತರೂ ಜನರೆಲ್ಲಾSS
ಆರತೀ ಮಾಡೋಣಾ
ಕಂಚೀನಾ ಪಾವುಡ, ಸುತ್ತಲೂ ಹನುಮಂತಾS
ಕಣ್ಣನೂ ಬಿಟ್ಟನೂ ಜನರೀಗೇSS
ಆರತೀ ಮಾಡೋಣಾ
ಗೋಗಳೂ ಬಂದವೂS ಬಯಲಿಗೇ ನಿಂದವೂ
ಕೃಷ್ಣನು ಬಂದೂ ಕೊಳಲಿಡಿದೊS
ಆರತಿ ಮಾಡೋಣಾ

* * *

## ಋತುಮತಿಗೆ ಸ್ನಾನಮಾಡಿಸುವಾಗ

ಅಂಬಾರಾ, ರಂಬಾರವೇ ಬಂಗರದ ಚಂಬೆರಡು ಬಂದ್ಯಾಗೆವೇ॥
ನಿಂಬೇಯ ಮರದಡಿಯೇ ಚಂದಾಕ ಒಲಿಹೊಡೀಽ
ನಿಂಬೇಯಜಕ್ಕೇ ದಡ ಹೊಡೀ
ಅಂಬಾರ ಅಂಬಾರವೇ
ದೊಡ್ಡೋರನಾ ಮಗನಾ ಜಳಕಕಾಽ ಮಾಡಿಕೊಂಡು
ತನ್ನೂರಿಗೂ ಗಂಗೇ ತೆರುಳ್ಯಾಳೇ
ಅಂಬಾರ ಅಂಬಾರವೇ॥
ಹವಳಾದಽ ಕಿರಿ ಜಗಲೀ, ಹವಳಾದ ಒಲಿ ಜಗಲಿ
ಹವಳಾ ಕೆತ್ತಿಸಿದಾಽ ಒಲಿಯಾ ಜಗಲೀ
ಅಂಬಾರ ರಂಬಾರವೇ॥
ಮುತ್ತೀನಾ ಜಗುಲೀ ಮ್ಯಾಲೇ ಮುತ್ತಾ ಕೇರ್‍ಯಾಡೋಽಽ
ಮುತ್ತೈದೇ ನಮಗೇ ಕೊಡೀರಣ್ಣಾಽಽ
ಅಂಬಾರ ರಂಬಾರವೇ॥
ಬಾಗಲ್ದಾಗೇ ಒಯ್ದು ನೀರೂ ಬಾಗಿಲಿಗೇ ಹರಿದಾವೇಽಽ
ಬಾಗಲ್ದಾಗೇ ಅವರಾಽ ಹಿರಿಯಣ್ಣಾಽಽ
ಅಂವಾರರಂಬಾರವೇ ॥
ಬಾಗಿಲ್ಲವೇ ಅವರ್‍ಯಾ ಹಿರಿಯಣ್ಣಾ- ಕಿರಿಯಣ್ಣಾ
ಬಾಳೆಗೂ ತಿರುಗಿಸ್ಯಾನೇ ಹರಿನೀರಾಽ
ಅಂಬಾರರಂಬಾರವೇ॥
ರತ್ನಾದ ಕಿರಿ ಜಗಲೀ, ರತ್ನಾದಾ ಒಲಿ ಜಗಲೀ
ರತ್ನಾ ಕೆತ್ತಿಸಿದಾ ಒಲೀ ಜಗಲೀ
ಅಂಬಾರರಂಬಾರವೇ ॥
ದೊಡ್ಡೋರ ಮಗನಾ ಜಳಕ ಮಾಡಿಕೊಂಡು
ತನ್ನೂರಿಗೂ ಗಂಗೇಽ ತೆರುಳ್ಯಾಳೇಽಽ
ಅಂಬಾರರಂಬಾರವೇ ॥
ಬಾಗೊರಿನ ದಾರೀಲಿ ತಡಿದು ಕೇಳ್ಯಾನಲ್ಲೇಽಽ
ಯಾವಲ್ಲೋಗಿದ್ದೇ ಶಿವಗಂಗೇಽಽ
ಅಂಬಾರರಂಬಾರವೇ॥
ದೊಡ್ಡೋರನೇ ಮಗನಾ ಜಳಕಾ ಮಾಡಿಕೊಂಡೂಽ
ತನ್ನೂರಿಗೂ ಗಂಗೆ ತೆರುಳ್ಯಾಳೇ

## ಬಸವಣ್ಣನ ಮೇಲೆ ಹಾಡುವ ಹಾಡು

ಎತ್ತೀರೀ ಆರತೀಯಾಽ
ರತ್ನ ಮಾಣಿಕ್ಯದಾ ಮುತ್ತಿನಾರತೀಯಾಽಽ
ಬಸವ ಏರೀದವನೇಽಽ ಹಸುಳೇಗೇ ಒಲಿದವನೇ
ಕೈಯಲಿ ತ್ರಿಶೂಲಾ ಹಿಡಿದವ ತಂಗೀಽಽ
ರತ್ನ ಮಾಣಿಕ್ಯ ಮುತ್ತಿನಾರತೀಯಾಽಽ
ಎತ್ತೀರೀ ಬಸವಗೊಂದಾರತೀಯಾ
ಕುದುರೇರಿ ಬರುವನೇ, ಚದುರೇರಿಗೇ ಬಲಿಯುದವನೇ

ಕೈಯಲಿ ತ್ರಿಶೂಲಾ ಹಿಡಿದವನೇ ತಂಗೀSS
ರತ್ನಮಾಣಿಕ್ಯಮುತ್ತಿನಾರತೀಯಾSS
ಕುದುರೇರಿ ಬರುವನೇ ಚದುರೇಲಗೆ ಬಲಿಯದವನೇ
ಕೊರಳಲಿ ಕರಡಿಗೆಯಾ ದರಿಸಿದವನೇ ತಂಗೀSS
ವಿತ್ತೀರಿ ಆರತೀಯಾS

## ಮಂಗಳಾರತಿ ಹಾಡು

ಮಂಗಳಮಾ ಜಯಮಂಗಳಮಾSಮಂಗಳಮಾ ಶುಭಮಂಗಳಮಾ
ಅಕ್ಕತಂಗ್ಯಾರೂ ಕೂಡೀS ಹವಳದಾರತಿ ಮಾಡೀ
ಹವಳದಾರತಿ ಶಿವನಿಗೆ ಮಾಡಿದರೆ
ಎತ್ತಿದೆವೊ ನಾವೂ ಮುದದಿಂದಲೀ
ಮಂಗಳಮಾ||ಪ||
ತಾಯಿ-ಮಕ್ಕಳೂ ಸೇರೀ ನೀಲದಾರತಿ ಮಾಡೀ
ನೀಲದಾರತೀ ಮಾಡೀ ಶಿವನಿಗೊಲಿದದೇS
ಮಂಗಳ ||ಪ||
ಅತ್ತಿಗೆನಾದಿನ್ಯಾರೂ ಕೂಡೀ ಹೂವೀನಾರತಿ ಮಾಡೀ
ಹೂವಿನಾರತಿ ಮಾಡೀ ಶಿವನಾಮಗೊಲಿದರೇS
ಎತ್ತುವೆವೂS ನಾವು ಮುದದಿಂದಲೀSS
ಮಂಗಳಮಾ||ಪ||
ಮುತ್ತೈದೆಯರೂ ಮುಂದೇS ಶಿವಮುಂದೇ
ಶಿವಭಕತ್ತರೂ ಮುತ್ತೀನಾರತೀಯಾ ಬೆಳಗಮ್ಮಾ
ಹವಳಾ ಹವಳಾ ಮುಂದೇ ಹವಳದಾ ರೇಲಮುಂದೇS
ಹರಿದೇಯರೇ ಮುಂದೇ ಶಿವಮುಂದೇ
ಹರದೇಯರೇS ಮುಂದೇ ಶಿವಮುಂದೇS
ಶಿವಭಕ್ತರೂ ಹರಿದೇಯರೇರೂ ಆರತೀಯಾ ಬೆಳಗಮ್ಮಾ
ವಜ್ರವಜ್ರಾಮುಂದೇ ವಜ್ರದ ರೇಲಾ ಮುಂದೇS
ಭದ್ರೇಯರೂ ಮುಂದೇ, ಶಿವಮುಂದೇSS
ಭದ್ರೇಯರೇ ಮುಂದೇ ಶಿವ ಮುಂದೇ
ಶಿವಭಕ್ತರೂ ಭದ್ರೇಯರೂ ಆರತೀಯಾ ಬೆಳಗಮ್ಮಾ
ಮಂಗಳಮಾ||ಪ||

* * *

## ಕಳಸ ಮಾಡುವಾಗ

ಅಂದಾಗಿರಿ ಚಂದಾಗಿರೀ
ಚಂದಾಕಾ ಮೂಡಲಗಿರೀSS
ಮೂಡಲಾ ಗಿರೀ ತೇರಾ ಹಬಕೇ
ತಿಮ್ಮಯ್ಯನಾ ಗಿರೀ ತಿರುಪಲೀSS
ತಿಮ್ಮಯ್ಯನಾ ಗಿರೀ ತಿರುಪತಿ
ಒಳಗಿರುವ ತಟ್ಟೀ ಬಾನಮಕ್ಕಳಾ ಕಣಸಾ
ಅಂದಾಗಿರೀS ಚಂದಾಗಿರೀSS
ಒಳಗಿರುವ ಏನ್ ಕತಿ ಬಾನ್ ಮಕ್ಕಳಾ ಕಳಸಾ

ಮೂಡಲವೇ ಗಿರಿ ತಿರಾಪತಿ ಒಳಗಿರುವ
ಇಂಡೀ ಬಾನಮ್ಮ ಕಳಸಕ್ಕೆ
ಕೆಸರಾಗೇ ಹುಟ್ಟೋದೇS ಕೆಸರಾಗೇ ಬೆಳೆಯೋದೇ
ಹಸನುಳ್ಳೇ ಮರಕ್ಕೆ ತೊಡಕ್ಕಾ
ಹಸನುಳ್ಳೇ ಮರಕ್ಕಾ ತೊಡಕಿದಾ ಹೊಂಬಾಳೇ
ನಾವೇದೂ ತಂದಿರುದೇ ಕಣನೇ
ಅಂದಾಗಿರೀ ಚಂದಾಗಿರೀ

* * *

## ಕರಿಯಮ್ಮದೇವಿ ಹಾಡು

ಪೂSಜಾರಿ ಚಲುವನಮ್ಮಾS ಚಿನ್ನದಾ ಮಾಲಿ ಒಳಗಿರುವನಮ್ಮಾSS
ಬಟ್ಟೀಯಾS ಹಿಂಡಾಕಾ ಹೋಗ್ಯಾಳಾS
ನೆಟ್ಟಂಗಾ ದೇವಾS ಮಾಡಿಸ್ಯಾಳಾSS ಪೂಜಾರಿ ಚಲುವನಮ್ಮಾSS
ಪೂಜಾರಿ ಚಲುವನಮ್ಮಾSS
ಕಟ್ಟೀಯನೇ ಹಿಂದೆ ಬೊಟ್ಟು ಬೇವಿನ ಮರS
ಹುಟ್ಟುತಲಿ ಕಾಯೀ ಚಿಗಿದಾವೇSS
ಪೂಜಾರಿ ಚಲುವನಮ್ಮಾSS
ಬೊಟ್ಟೊಂದುನೇ ದೇವಾS ಮುರಿಸಿ ಮಾತಿಯಾ ಕಟ್ಟೀ
ದೊಡ್ಡೋರೆಂಡಿರಿಗೆ ದೊರೆಸ್ಯಾನೇSS
ಪೂಜಾರಿ ಚಲುವನಮ್ಮಾSS
ಏರಿಯನೇS ಹಿಂದೆ ಜೋಡು ಬೇವಿನ ಮರS
ಬೆಳೆಯುತಲಿ ಕಾಯೀ ಚಿಗುದಾವ್ಯೇSS
ಪೂಜಾರಿ ಚಲುವನಮ್ಮಾSS
ಹುಟ್ಟುತಲಿನೇ ಕಾಯಿ ಚಿಬಿದಾವ್ಯೇ ಈ ಊರ
ಹುಟ್ಟಿದಾ ಮಕ್ಕಳಿಗೇS ಗವುಳಿಕೇ
ಪೂಜಾರಿ ಚಲುವನಮ್ಮಾSS ಚಿನ್ನದಮಾಲಿ ಒಳಗಿರುವನಮ್ಮಾSS
ಪೂಜಾರಿ ಚಲುವನಮ್ಮಾSS ಹೂವಿನ ಮಾಲಿ ಒಳಗಿರುವನಮ್ಮಾSS
ಏರಿಯನೇ ಹಿಂದೆS ಜೋಡು ತೆಂಗೀನ ಮರS
ಬೆಳೆಯುತಲೀ ಕಾಯಿ ಚಿಗಿದಾವ್ಯೇSS
ಪೂಜಾರಿ ಚಲುವನಮ್ಮಾSS
ಬೆಳೆಯುತಲೆನೇ ಕಾಯಿ ಚಿಗಿದಾವ್ಯೇS
ಮಳಲೀಯ ಹಪ್ತಪದಿ ಎನಗೆ ಒಡಿಗಾಯೀSS
ಪೂಜಾರಿ ಚಲುವನಮ್ಮಾSS
ಕಟ್ಟೀಯನೇ ಹಿಂದೆ, ಜೋಡು ತೆಂಗಿನಮರ
ಗೇಣುಗೇಣಿಗೇ ಗೆರಿಗಾಯೀS
ಪೂಜಾರಿ ಚಲುವನಮ್ಮಾSS
ಗೇಣುಗೇಣಿಗೇ ಗೆರಿಗಾಯೀ, ಎಳಿಗಾಯೀ ಸುಳಿಗಾಯಿS
ಅವು ನಮ ದೇವರಿಗೇ ಇಡಿಗಾಯಿSS
ಪೂಜಾರಿ ಚಲುವನಮ್ಮಾSS ಚಿನ್ನದಾ ಮಾಲಿ ಒಳಗಿರುವನಮ್ಮಾSS
ಪೂಜಾರಿ ಚಲುವನಮ್ಮಾSS ಹೂವಿನ ಮಾಲಿ ಒಳಗಿರುವನಮ್ಮಾSS

## ಕರಿಯಮ್ಮನ ಹಾಡು

ಕುಮಕುಮದ ಬರಣಿ ಕಾಣೇS
ಕರಿಯಮ್ಮಾS ಕುಂತೆರೆಡು ಮಾತನಾಡೇSS॥ಅ॥
ಆರುಮರುಸದ ಮಗನಾ, ಹಾಡೊಂದು ಸಿಡಿದ್ಯಾಳೇSS
ಹಾಡು ಬಾರಮ್ಮಾSS ಎದುರೇನೂS
ಕುಮಕುಮದ ಬರಣೀ ಕಾಣೇ ॥ಅ॥
ಆಡೋಣೇS ಬಾರಮ್ಮಾS ಎದುರೇನು ಬೇದುರೇನೂS
ವಾಲೀಲೀ ಬರುತೇನೇS ನಟೀ ಕಂದಾSS
ಕುಮಕುಮದ ॥ಅ॥
ಹತ್ತೂವರುಸದ ಮಗನಾ, ಹತ್ತೊಂದೂ ಸಿಡಿದಾಳ್ಯೆ
ಹತ್ತೋನು ಬಾರಮ್ಮಾ ಎದುರೇನೂS
ಕುಮಕುಮದ ॥ಅ॥
ಹತ್ತೂನೇ ಬಾರಮ್ಮಾ ಎದುರೇನೂ-ಬೆದುರೇನೂSS
ವಾರೀಲೀ ಬರುತೇನೆ ನಡೀ ಮಗನೇSS
ಕುಮಕುಮದ ॥ಅ॥
ಹತ್ತೀಯಾS ಒಳಗೇರಿ ಹರಿವಾಣದೊಳಗೇರಿSS
ತುಪ್ಪಸಕ್ಕರೇ ಹದಮಾಡೀSS
ಕುಮಕುಮದ ॥ಅ॥
ಬೀದೀಯಾ ಒಡಬೇರಿ ಹರಿವಾಣದೊಳಗೇರಿ
ಹಾಲು ಸಕ್ಕರೆS ಹದಮಾಡಿSS
ಕುಮಕುಮದ ॥ಅ॥
ಹಾಲುನೇ ಸಕ್ಕರೆ, ಹದಮಾಡಿ ಕರಿಯಮ್ಮನಾ
ಆಕುಷ್ಠಕ ಬರುವಾ ಸೋದರಿಗೇSS
ಕುಮಕುಮದ ॥ಅ॥
ಅಕ್ಕಾನಾ ಗುಡಿಯೊಳಗೆ ಗಾರೆ ಮಂಟಪವೇSS
ಚಿನದವೇಳು ಶಿವಗಂಟೆSS
ಕುಮಕುಮದ ॥ಅ॥
ಅಕ್ಕಾನೇS ಕರಿಯಮ್ಮಾS ಮತ್ತೆಲ್ಲಿಗೋಗಿದ್ದಿSS
ಪಟ್ಟೇ ಸೀರೆಲ್ಲಾS ಅರುಷುಣSS
ಕುಮಕುಮದ ॥ಅ॥
ಪಟ್ಟೆನೇ ಸೀರೆಲ್ಲಾ ಅರುಷಣ ಮಾಲೇಗಟ್ಟೀ
ಬಾರೇ ಕೊಡುವುವೇS ಮಾದುಮಗಳೇSS
ಕುಮಕುಮದ ॥ಪ॥
ತಾಯೀನೇ ಕರಿಯಮ್ಮಾSS ಹೀಗೇಲ್ಲಿಗೋಗಿದ್ದೀSS
ಕಾರಿಸೀರೆಲ್ಲಾ ಅರುಷುಣಾSS
ಕುಮಕುಮದ ॥ಪ॥
ಕಾರೀನೇ ಸೀರೆಲ್ಲಾ ಅರುಷಣ ಮಾರೀ ಬಟ್ಟೆS
ಬಾರೇ ಕೊಡವುವೇS ಮಾದುಮಗಳೇSS
ಕುಮಕುಮದ ॥ಪ॥
ಆಲದನೇ ಮರಕೆ ಹಾಯದೇವನೇಸರನೇ
ಹತ್ತೀ ನೋಡ್ಯಾಳೇS ಎಡಬಲಕೇSS
ಕುಮಕುಮದ ॥ಪ॥
ಸುತ್ತಾನೇ ನೋಡ್ಯಾಳೇ ಎಡಬಲಕೆ ಮಾರೀಬಟ್ಟೇS

ಹಾಲಿನ ಕೊಡವೇ ಬರಲಿಲ್ಲSS
ಕುಮಕುಮದ ||ಪ||
ಹಾಲಿನೇ ಕೊಡವೇS ಬರಲಿಲ್ಲಾS ಅವಳ ಮನೆಗೆಯ
ಆಡು ಮಕ್ಕಳಿಗೆ ಕಳಿಸ್ಯಾರೆSS
ಕುಮಕುಮದ ||ಪ||
ಅತ್ತೀಯನೇ ಮರಕೆ ಅತ್ತೋಗ ಸರಪನೇS
ನೆತ್ತೀಯಾ ಇಡಿದೇS ನೆಲಕೊಡದೇSS
ಕುಮಕುಮದ ||ಪ||
ನೆತ್ತೀಯನೇ ಹಿಡಿದು ನೆಲಕೊಡದುS , ಕರಿಯಮ್ಮಾSS
ತುಪ್ಪಕೋಗೆಂದೂ, ಕಳಿವ್ಯಾಳ್ಯೆSS
ಕುಮಕುಮದ ||ಪ||
ಆಲದನೇ ಮರಕೆ ಹಾರೋಗೋS ಸರಪನಾSS
ಬಾಲಾವ ಹಿಡಿದುS ನೆಲಕೊಡೆದೂSS
ಕುಮಕುಮದ ||ಪ||
ಬಾಲಾವಾ ಹಿಡಿದುS ನೆಲಕೊಡೆದುS ಕರಿಯಮ್ಮಾS
ಫ಼ಾಲಿಗೋಗೆಂದೂS ಕಳಿವ್ಯಾಳೇSS
ಕುಮಕುಮದ ||ಪ||
ತಾಯೀನೇ ಕರಿಯಮ್ಮಾS ಹೀಗೇಕೇ ಸ್ಥಾನಾವಾದೇ
ಹಾಲು ಮಾರೋರಾS ಹೊಳಿಯಾಗೇSS
ಕುಮಕುಮದ ||ಪ||
ಹಾಲೂನೇ ಮಾರೋರಾ ಹೊಳಿಯ್ಯಾನ ಸ್ಥಾನಮಾಡಿ,
ಬಲಿ ಇಟ್ವಾಳಾS ರಾವೀರವಿಗೇSS
ಕುಮಕುಮದ ||ಪ||
ಬಲಿನೇ ಇಟ್ವಾಳಾS ರಾವೀರವಿಗೇS ಪೂಜಾರಣ್ಣಾ
ಒಲಿಮ್ಯಾಲೇನೇ ಕೊನೇ ಮುಸುಗಾSS
ಕುಮಕುಮದ ||ಪ||
ತಾಯಿನೇ ಕರಿಯಮ್ಮಾS ಹೀಗೇ ಸ್ಥಾನವಾದೇ
ಎಣ್ಣೇ ಮಾರೋರಾS ಹೊಳಿಯ್ಯಾಗೇSS
ಕುಮಕುಮದ ||ಪ||
ಎಣ್ಣೇನೇ ಮಾರೋರಾS ಹೊಳೆಯ್ಯಾ ಸ್ಥಾನವಾಗಿ
ಬಂದಿಟ್ವಾಳೇ ರಾವೀರವೀಗೇSS
ಕುಮಕುಮದ ||ಪ||
ಒಲಿಯನೇS ಇಟ್ವಾಳಾ ರಾವೀರವೀಗೆS ಪೂಜಾರಣ್ಣಾS
ಬಟ್ಟೇ ಮ್ಯಾಲೇನೇ ಕೊನೆ ಸೆರೆಗಾSS
ಕುಮಕುಮದ ||ಪ||
ತಾಯಿನೇ ಕರಿಯಮ್ಮಾS ಹೀಗೇ ಸ್ಥಾನವಾದೇ
ತುಪ್ಪಾS ಮಾರೋರಾS ಹೊಳಿಯ್ಯಾಗಾSS
ಕುಮಕುಮದ ||ಪ||
ತುಪ್ಪಾನೇ ಮಾರೋರS ಹೊಳಿಯ್ಯಾಗಾ ಸ್ಥಾನವಾದೇ
ತುಪ್ಪವಿಟ್ಟರೇ ರಾವೀರವಿಗೇSS
ಕುಮಕುಮದ ||ಪ||
ಒಲೆಯ ಮಾಲ್ಯೆನೇ ಕೊನೆ ಸರಗೂS ಈ ಊರಾ
ತಾಯೀ ಕಲಯಮ್ಮಾನಾSS ಹತ್ತಿಸ್ಯಾಳೆSS
ಕುಮಕುಮದ ||ಪ||
ಅಕ್ಕಾನಾ ಗುಡಿಗೆS ಹೋಗೀ ನೋಡೋಣ ಬನ್ನಿSS
ಗಾಜೀನಾS ಕಂಬಾS ನಗುತಾವೇSS

ಕುಮಕುಮದ ||ಪ||
ಗಾಜೀನಾ ಕಂಬಾS ನಗುತಾS ಬಳೆಗಾರಣ್ಣಾSS
ಮಾಡುತಲೀS ಮುತ್ತಾS ಬಿಗಿಸ್ಯಾರೇSS
ಕುಮಕುಮದ ||ಪ||
ತಾಯಿನೇ ಗುಡಿಗೇS ಹೋಗೀ ನೋಡೋಣ ಬನ್ನಿSS
ಉಕ್ಕಿನಾ ಕಂಬಾS ನಗುತಾವೇSS
ಕುಮಕುಮದ ||ಪ||
ಕುದುರಾಸ ಕಡಬರಗಿ ಉತ್ತುತಣ್ಣಾ ಕೊಡುವೇS
ಮ್ಯಾಲೇ ಜೋಳೀಗೀ ವರ ಕೊಡುವೇSS
ಕುಮಕುಮದ ||ಪ||
ಬಾಗಿಲ ಕಡಿದವ್ವನೀಗೇ ಬಾಳೇಹಣ್ಣಾ ಕೊಡುವೇSS
ಮ್ಯಾಲೇ ಜೋಳಿಗೀ ವರ ಕೊಡುವೇSS
ಕುಮಕುಮದ ||ಪ||
ಮ್ಯಾಲೇನೇ ಜೋಳಿಗೇS ವರ ಕೊಡುವೆS
ಮುತ್ತೇ ಮುಡಿಗೆರೇ ಕೊಡುತೇವೇSS
ಕುಮಕುಮದ ||ಪ||
ಅಕ್ಕಾನಾ ಗುಡಿತಾಗ ಹೊಕ್ಕು ನೋಡೋಣು ಬಂದೂS
ಜೋಡಿ ಶಿಖರವನೇ ಮುಗಿದೇವಾSS
ಕುಮಕುಮದ ||ಪ||
ಜೋಡಿ ಶಿಖರವನೇS ಮುಗಿದೇವಾS ಕೇಳಿದವಲ್ಲೇSS
ಬೇಡಿದ ವರವಾ ದಯಾಮಾಡೀS
ಬೇಡಿದಾ ಮಗಳಾ ಕೊಡುವೇSS
ಕುಮಕುಮದ ||ಪ||

* * *

## ಕಾಳಮ್ಮ ಹಾಡಿರುವ ಹಾಡು

ಸರವೀನಾS ಸಗಣೀಯಾSS ಕಿರಿದೊಂದತಕ್ಕೊಂದೂSS
ಕಿರುಮಾಳಿಗೆಯಾS ಒಳಗೇS ನೆಲಬಳಿದೂSS
ಕಿರುಮಾಳಿಗೆಯಾS ಒಳಗೇS ನೆಲಬಳಿದೂSS
ಅಕ್ಕಾ ಹಸೆ ಹಿರಿಗೆS ನೀಲಲೊಂದೂSS
ಎತ್ತೀನಾ ಸಗಣೀಯಾS ಒಕ್ಕುತಿ ತಕ್ಕೊಂಡೂSS
ಉಪ್ಪುರುಗೇ ಒಳಗೇS ನೆಲಬಳಿದೂSS
ಉಪ್ಪುರುಗೇ ಒಳಗೇS ನೆಲಬಳಿದೂS ಅವರಂದ್ವಗೇSS
ಮುತ್ತೀನಾ ಸಸೆ ಇರಿಗೆ ನಿಲತಿಂದೂSS
ಕಸ ಹೊಡಿಯೇ ಕಾಳಮ್ಮಾSS
ನೆಲ ಬಳಿಯೇ ನೀಲಮ್ಮಾSS
ನುಲಿಯುತ್ತಿದ್ದಳ್ಯೋ ಕರಸಮ್ಮಾSS
ನುಲಿಯುತ್ತಿದ್ದೇಳೇ ನೋವನ್ನೇ ಕರಸಣ್ಣಾ
ಬಸವಣ್ಣನಾS ಮನೆಯಾS ಶರಣೇಯಾS
ಅಂದುಳ್ಳನೇ ಮುತ್ತಾ ಗಿದ್ದಾ ತುಂಬಿಕೊಂಡೂ
ಗೆಜ್ಜೆಯಾ ತಲಮಗನಾ ನೆಡೆಸುತಾSS
ಮಾಗಳಾS ಹಸಿಯಾ ಜಬದಳೂSS

ನೀಲಂಬರವಾ ಹಸಿಯಾಽಽ ನಿಂಗಮ್ಮಾ ಜರಿದಳೂಽಽ
ನಿಂಗಮ್ಮೊಽ ಜಾಣೇ ಜರಿದಾಳೋಽಽ
